ಕರ್ನಾಟಕ ವಿಧಾನಮಂಡಲ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಜನವರಿ, ಫೆಬ್ರವರಿ ಮತ್ತು ಮಾರ್ಚ್ –2023

ಸಂಪುಟ–V ಸಂಖ್ಯೆ – 1

ಪ್ರಕಟಣೆ:

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,
ಬೆಂಗಳೂರು – 560 233.

ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

ಸೂಚನೆ:– ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – Vರ ಮೊದಲನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2023ನೇ ಸಾಲಿನ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಎಂ.ಕೆ.ವಿಶಾಲಾಕ್ಷಿ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 20–06–2023

ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀಮತಿ ಜಿ. ಮಮತ : ಸಹಾಯಕ ನಿರ್ದೇಶಕರು

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಅಪರ ಕಾರ್ಯದರ್ಶಿ

ಕರ್ನಾಟಕ ಶಾಸಕಾಂಗ ಪತ್ರಿಕೆ
(ತ್ರೈಮಾಸಿಕ ಪತ್ರಿಕೆ)

ಜನವರಿ, ಫೆಬ್ರವರಿ ಮತ್ತು ಮಾರ್ಚ್ – 2023
ಸಂಪುಟ–V ಸಂಖ್ಯೆ– 1

ಪರಿವಿಡಿ

ಭಾಗ–1

ವಿಧಾನ ಮಂಡಲದ ಸುದ್ದಿಗಳು

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
1.	ಶಾಲಾ ಮೌಲ್ಯ ಶಿಕ್ಷಣಕ್ಕೆ ಧರ್ಮರಕ್ಷೆ	1
2.	ಪೀಠಾಸೀನಾಧಿಕಾರಿಗಳ ಸಮ್ಮೇಳನ ಸ್ಪೀಕರ್ ಭಾಗಿ	2
3.	ಸುಗಮ ಕಲಾಪ: ಅಧ್ಯಯನಕ್ಕೆ ನಿರ್ಧಾರ	4
4.	ಸಂಸದ, ಶಾಸಕರಿಗೆ ತರಬೇತಿ ಕಡ್ಡಾಯ	5
5.	ಸ್ಪೀಕರ್ ವಿಶ್ವೇಶ್ವರ, ನಮ್ಮ ಕಾಗೇರಿ ಭಾವ.	5
6.	ಸುಭದ್ರ ದೇಶ ಕಟ್ಟಲು ಕೈಜೋಡಿಸಿ	9
7.	ಬಾಲಬ್ರೂಯಿ ಪರಿವರ್ತಿಸಲು ಅಸ್ತ್ರ	10
8.	ಮತ ಮಾರಾಟಕ್ಕಿಲ್ಲ ಎಂಬ ತತ್ವಕ್ಕೆ ಬದ್ಧರಾಗಬೇಕು: ಸ್ಪೀಕರ್ ಕಾಗೇರಿ	11
9.	ಹೊರಟ್ಟಿಯವರಿಗೆ ಪರಿಮಳ ಪ್ರಶಸ್ತಿ	11
10.	ವಿಷ್ಣುಗುಪ್ತ ವಿವಿ ದೇಶ ಬೆಳಗುವ ಜ್ಞಾನಗೋಪುರ	12
11.	'ಮತ ಮಾರಾಟಕ್ಕಿಲ್ಲ' ಜನಾಂದೋಲನವಾಗಲಿ : ಕಾಗೇರಿ	13
12.	ರಾಜ್ಯ ಮುಂಗಡ ಪತ್ರ ಅಧಿವೇಶನಕ್ಕೆ ಭರದ ಸಿದ್ಧತೆ	13
13.	ಉಚಿತ ಯೋಜನೆ ರೈತ ವಿರೋಧಿ	14
14.	ರಾಜಕಾರಣಿ, ಮತದಾರರ ಮನಸ್ಥಿತಿ ಒಂದೇ ಆಗಿದೆ	15
15.	ಸೇವೆ ವಾಟ್ಸಾಪ್ ಸ್ಟೇಟಸ್‌ಗೆ ಸೀಮಿತವಾಗದಿರಲಿ	16
16.	ಪ್ರಶಸ್ತಿಗೆ ಮಾನದಂಡ, ಲೋಕಸಭಾ ಸ್ಪೀಕರ್‌ಗೆ ಕಾಗೇರಿ ಸಮಿತಿ ವರದಿ	17
17.	ಕರ್ನಾಟಕ ರೈಲ್ವೆ ಕಾರಿಡಾರ್ ನಿರ್ಮಿಸಿ	19

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
18.	ರಾಷ್ಟ್ರಪತಿ, ಪಿಎಂ ಭೇಟಿ ಮಾಡಿದ ಕಾಗೇರಿ	20
19.	ನಾಳೆಯಿಂದ ವಿಧಾನಮಂಡಲ ಅಧಿವೇಶನ: 17ಕ್ಕೆ ಬಜೆಟ್	22
20.	ಸಮಯ ಕಡಿಮೆ ಇದ್ದರೂ ಸರ್ವರಿಗೂ ಚರ್ಚೆಗೆ ಅವಕಾಶ	24
21.	ಶಾಸಕರೇ, ಸದನದ ಘನತೆ ಕಾಪಾಡಿ : ಹೊರಟ್ಟಿ	26
22.	ಕಡ್ಡಾಯವಾಗಿ ಸದನಕ್ಕೆ ಹಾಜರಾಗಿ: ಸ್ಪೀಕರ್	27
23.	ಪ್ರಸಕ್ತ ಸರ್ಕಾರದ ಕೊನೆಯ ಅಧಿವೇಶನ, ಶಾಸಕರ ನಿರಾಸಕ್ತಿ	28
24.	ಸರ್ಕಾರಕ್ಕೆ ಗವರ್ನರ್ ಪೂರ್ಣಾಂಕ	30
25.	ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ	34
26.	ಹುಟ್ಟೂರಿಗೆ ಕೈಲಾದ ಕೊಡುಗೆ ನೀಡಿ	35
27.	ತಾಳಗುಪ್ಪ–ಹುಬ್ಬಳ್ಳಿ ರೈಲು ಯೋಜನೆ ಆಶಾಭಾವನೆ	36
28.	ಸದನದಿಂದ ಹೊರನಡೆದ ಕಾಂಗ್ರೆಸ್ ಶಾಸಕರು	37
29.	ಅಧಿವೇಶನಕ್ಕೆ ಚುನಾವಣೆ ಗ್ರಹಣ ಸದಸ್ಯರಿಲ್ಲದೆ ಕಲಾಪ ಭಣಭಣ	38
30.	ಸದನ ಖಾಲಿ ಖಾಲಿ ಕೊನೇ ಕಲಾಪಕ್ಕೆ ಬರಲು ಸ್ಪೀಕರ್ ಮನವಿ	38
31.	ರಾಜ್ಯ ಬಜೆಟ್‌ಗೆ ಮುಹೂರ್ತ ನಿಗದಿ	39
32.	ಬ್ರಿಟಿಷ್ ಮನಸ್ಥಿಯ ಅಧಿಕಾರಿಗಳು	40
33.	ನೀರಾವರಿ ನಿಗಮಗಳ ಅಕ್ರಮದ ತನಿಖೆ	41
34.	ವಿಧಾನಮಂಡಲ ವಿಶ್ವದಾಖಲೆ ವೀರ ಬಸವರಾಜ ಹೊರಟ್ಟಿ	42
35.	ಸಚಿವರ ವಿರುದ್ಧ ಸಭಾಪತಿ ಗರಂ	44
36.	ಪತ್ರಕರ್ತರಿಗೆ ಗೌರವ ಸನ್ಮಾನ, ಡಿವಿಜಿ ನೆನಪು ಕಾರ್ಯಕ್ರಮ	45
37.	ಧರ್ಮ ರಕ್ಷಣೆಯಲ್ಲಿ ಆಗಮಿಕರ ಮಹತ್ವದ ಕಾರ್ಯ: ಕಾಗೇರಿ	47
38.	ಕಾಗೇರಿ–ಖಂಡ್ರೆ ಮಧ್ಯೆ ವಾಕ್ಸಮರ	48
39.	ನೀರಾವರಿಗೆ ಅನುದಾನದ ಝರಿ	49
40.	ಬೊಮ್ಮಾಯಿ ತೇರು: ಭರವಸೆ ಜೋರು	51
41.	ಸದನಕ್ಕೆ ಬರಲು ಮತ್ತೊಮ್ಮೆ ಮನವಿ	53
42.	ಜೂನ್ ಅಂತ್ಯಕ್ಕೆ ವಿವೇಕ ಕಟ್ಟಡಗಳು ಪೂರ್ಣ	54
43.	15ನೇ ವಿಧಾನಸಭೆ ಶಾಸಕರ ಫೋಟೋ ಸೆಷನ್	55
44.	3 ತಿಂಗಳಲ್ಲಿ ಎಲ್ಲರಿಗೂ ಆಯುಷ್ಮಾನ್ ಕಾರ್ಡ್	56

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
45.	ನಿಮ್ಮ ಕಳಂಕವನ್ನು ಮೊದಲು ತೊಳೆದುಕೊಳ್ಳಿ	57
46.	ಸಿಎಜಿಗೆ ಮಾಹಿತಿ ನೀಡದ ಸರ್ಕಾರ, ಪಿಎಸಿ ಆಕ್ಷೇಪ	61
47.	ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಮೇಲ್ಮನೆ ಅಸ್ತು	62
48.	ಚುನಾವಣೆ ಮೇಲೆ ಎಲ್ಲರ ಗಮನ: ನಿರಸ ಅಧಿವೇಶನ	63
49.	5 ವರ್ಷದಲ್ಲಿ 167 ದಿನ ಕಲಾಪ	64
50.	ಬಿಎಸ್‌ವೈ ಮೆಚ್ಚಿದ ಆರಂಭ	64
51.	15ನೇ ಅಸೆಂಬ್ಲೀಲಿ ಐತಿಹಾಸಿಕ ಜನಪರ ಕಾನೂನು	66
52.	ಇನ್ಮೇಲೆ ಬಿಎಸ್‌ವೈಗೆ ಕರುನಾಡೇ ಅಸೆಂಬ್ಲಿ	66
53.	ವಿಧಾನಸಭೆಯಲ್ಲಿ ಶಾಸಕರ ವಿದಾಯ ಭಾಷಣ	68
54.	ಬಿಎಸ್‌ವೈ ಭಾಷಣ ನನಗೆ ಸ್ಫೂರ್ತಿ: ಮೋದಿ ಮೆಚ್ಚುಗೆ	69
55.	ಬಾಬು ಕೃಷ್ಣಮೂರ್ತಿಗೆ ಪಂಪ ಪ್ರಶಸ್ತಿ ಪ್ರದಾನ	69
56.	ನೆಹರು ಓಲೇಕಾರ್‌ಗೆ ಹೈಕೋರ್ಟ್ 'ರಿಲೀಫ್'	70
57.	ಕಪ್ಪತ್ತಗುಡ್ಡಕ್ಕೆ ಮತ್ತೆ ಬೆಂಕಿ ತಡೆಗೆ ವಿಶೇಷ ಪಡೆ ರಚಿಸಿ	71
58.	ಕಲಾಪ ದಿನಗಳ ಸಂಖ್ಯೆ ಹೆಚ್ಚಳ	71
59.	ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿಯುವ ಕೆಲಸ: ಕಾಗೇರಿ	72
60.	ಪಕ್ಷಾಂತರ ನಿಷೇಧ ಕಾಯ್ದೆಗೆ ಬಲ ಅಗತ್ಯ	73
61.	ಮೇಲ್ಮನೆ ಸದಸ್ಯ ಸ್ಥಾನಕ್ಕೆ ಚಿಂಚನಸೂರ್ ರಾಜೀನಾಮೆ	74
62.	ಸದನ ಕಾರ್ಯಕಲಾಪಗಳ ಡಿಜಿಟಲೀಕರಣ	74
63.	ಶಾಸಕ ಸ್ಥಾನಕ್ಕೆ ವಾಸು ರಾಜೀನಾಮೆ	75
64.	ಸುವರ್ಣ ಸೌಧದಲ್ಲಿ ಅಂಬೇಡ್ಕರ್, ಚೆನ್ನಮ್ಮ, ರಾಯಣ್ಣ	76
65.	ತುಮಕೂರು ಗ್ರಾಮಾಂತರ ಶಾಸಕ ಗೌರಿಶಂಕರ್ ಆಯ್ಕೆ ಅನೂರ್ಜಿತ	78
66.	15ನೇ ವಿಧಾನಸಭೆ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ	80
67.	ಕರ್ನಾಟಕ ವಿಧಾನಸಭೆ 15ನೇ ವಿಧಾನಸಭೆಯ ದಿನಾಂಕ 10.02.2023 ರಿಂದ 24.02.2023ರ ವರೆಗೆ ನಡೆದ ಹದಿನೈದನೇ ಅಧಿವೇಶನದಲ್ಲಿ ಮಂಡಿಸಿದ/ಅಂಗೀಕರಿಸಿದ ಹಾಗೂ ಹಿಂಪಡೆಯಲಾದ ವಿಧೇಯಕಗಳ ಪಟ್ಟಿ	82
68.	ಕರ್ನಾಟಕ ವಿಧಾನಪರಿಷತ್ತು 149ನೇ ಅಧಿವೇಶನ (ದಿನಾಂಕ 10.02.2023 ರಿಂದ 24.02.2023ರ ವರೆಗೆ) ವಿಧಾನಸಭೆಯಲ್ಲಿ ಅಂದೀಕೃತಗೊಂಡ ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ವಿವರ.	86

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
69.	ವಿಧಾನ ಪರಿಷತ್ತಿನ 149ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವಿವರ.	87
	ಭಾಗ–2 **ಸಂಸತ್ ಸುದ್ದಿಗಳು**	
1.	ದೇಶದ ವಿರಾಸತ್, ವಿಕಾಸಕ್ಕೆ ಸರ್ಕಾರ ಶ್ರಮ	144
2.	ಸಂಸತ್ತಲ್ಲಿ ಅದಾನಿ ಪ್ರತಿಧ್ವನಿ	145
3.	ಅದಾನಿ: ಚರ್ಚೆಗೆ ಸಜ್ಜಾದ ವಿಪಕ್ಷ	146
4.	ಪಟ್ಟು ಸಡಿಲಿಸದ ಪ್ರತಿಪಕ್ಷಗಳು	147
5.	ಸಂಸತ್ತಲ್ಲಿ ಮೋದಿ ಗುಡುಗು	148
6.	ಖರ್ಗೆ–ಧನಕರ್ ಮಾತಿನ ಸಮರ	150
7.	ಮೋದಿ ನೇತೃತ್ವದಲ್ಲಿ ಪರಂಪರೆಯ ಪುನರುತ್ಥಾನ	152
8.	ನೆಹರೂ ಉಪನಾಮ ಏಕೆ ಬಳಸಲ್ಲ	152
9.	Inconvenient words and expunction in Parliament	155
10.	Rajya Sabha panel seeks explanation from 13 MPs	157
11.	ಸಂಸದರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಇಲ್ಲ : ಸ್ಪೀಕರ್	158
12.	ಸಮಿತಿಗಳಿಗೆ ಧನಕರ್ ಆಪ್ತ ಸಿಬ್ಬಂದಿ ನೇಮಕ: ಅಧಿಕ ಪ್ರಸಂಗದ ನಿರ್ಧಾರ	158
13.	ರಾಹುಲ್ ಕ್ಷಮೆಯಾಚನೆಗೆ ಪಟ್ಟು	159
14.	ಸದನದಲ್ಲಿ ಸಿನಿಮಾ ಸದ್ದು	161
15.	2ನೇ ದಿನವೂ ಕಲಾಪ ಹಾಳು	161
16.	Parliamentary panel urges review of NREGA app	163
17.	Cong. moves privilege motion against PM	165
18.	ಕೇವಲ 218 ನಿಮಿಷ ಕಲಾಪ	166
19.	Disruptions continue in Parliament ; Cong. hits out at mute telecast of LS proceedings	167
20.	ಸಂಸತ್ತಿನ ಮೂಲಕ ಸಂವಿಧಾನದ ವಿಕಸನ	168
21.	ಮುಗಿಯದ ಸದನ ಕದನ	169
22.	Amid ruckus, LS passes Union Budget without discussion	170

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
23.	ರಾಹುಲ್ ಅಪರಾಧಿ	171
24.	ಹೊಸ ತೆರಿಗೆ ಪದ್ಧತಿಯಲ್ಲಿ ವಿನಾಯಿತಿ	171
25.	ರಾಹುಲ್ ಗಾಂಧಿ ಅನರ್ಹ	172
26.	ಹಣಕಾಸು ಮಸೂದೆ ಅನುಮೋದನೆ	174
27.	ಸ್ಪೀಕರ್ ವಿರುದ್ಧ ಅವಿಶ್ವಾಸ	175
28.	ತಿದ್ದುಪಡಿ ಮಸೂದೆಗೆ ಒಪ್ಪಿಗೆ	176
29.	ಸಂಸತ್ತಿನಲ್ಲಿ ಗದ್ದಲ: ನಡೆಯದ ಕಲಾಪ	178
	ಭಾಗ–4	
	ರಾಜ್ಯ ಸರ್ಕಾರ ಸುದ್ದಿಗಳು	
1.	ಸಹಕಾರ ಚಳುವಳಿಗೆ ಹೊಸ ದಿಕ್ಸೂಚಿ	192
2.	ಭಯೋತ್ಪಾದನೆ, ಗಡಿ ಸವಾಲುಗಳಿಗೆ ಸಮಂಜಸ ಪರಿಹಾರ	192
3.	ಭಾಷಾ ವಿಧೇಯಕಕ್ಕೆ ಸುಗ್ರೀವಾಜ್ಞೆ	193
4.	ರಾಜ್ಯಕ್ಕೆ ಆರ್ಥಿಕ ಶುಭಾಶಯ	194
5.	ಜಲಾಶಯಗಳ ನೀರು ಹಂಚಿಕೆ ಆಡಿಟ್	197
6.	ರಾಜ್ಯದ 221 ಕ್ಷೇತ್ರದಲ್ಲಿ 5 ಕೋಟಿ ಮತದಾರರು	198
7.	ಸಮ್ಮೇಳನ ನಿರ್ಣಯ ಮುಖ್ಯಮಂತ್ರಿ ಸ್ಪಂದನೆ	200
8.	ಶಾಸ್ತ್ರೀಯ ಸ್ಥಾನಮಾನಕ್ಕೆ ಸಮಿತಿ	201
9.	ಜನರಿಗೆ ನೇರ ತಲುಪುವ ಯೋಜನೆಗಳ ಪರಾಮರ್ಶೆ	203
10.	ರೂ.3 ಲಕ್ಷ ಕೋಟಿ ಗಡಿ ದಾಟಲಿದೆ ರಾಜ್ಯ ಬಜೆಟ್	203
11.	ರನ್‌ವೇ ಸಿದ್ಧ, ಟೇಕಾಫ್‌ಗೆ ಯುವಜನತೆ ಸಿದ್ಧರಾಗಲಿ	205
12.	ಒಂದು ರಾಷ್ಟ್ರ ಒಂದು ಪೊಲೀಸ್ ಸಮವಸ್ತ್ರ	206
13.	21 ರಿಂದ ಉತ್ತರ ಕರ್ನಾಟಕ ಉತ್ಸವ	207
14.	ಸ್ಫೂರ್ತಿಗೆ ಸಂಪುಟ ಅಸ್ತು	208
15.	ಫೆಬ್ರವರಿ 10 ಅಧಿವೇಶನ, 17ಕ್ಕೆ ಬಜೆಟ್	209
16.	ಈ ಬಾರಿ ಚುನಾವಣೆಗೆ ಹೊಸ EVM	211
17.	ಗುಜರಿಗೆ 9 ಲಕ್ಷ ಸರ್ಕಾರಿ ಗಾಡಿ	211
18.	ರಾಜ್ಯದ ನಿರೀಕ್ಷೆಗೆ ಕೇಂದ್ರ ಸ್ಪಂದನೆ	213

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
19.	ಟ್ರಾಫಿಕ್ ಬಾಕಿ ದಂಡಕ್ಕೆ ಶೇ.50 ರಿಯಾಯಿತಿ	215
20.	6,796 ಸರ್ಕಾರಿ ಶಾಲೆಗಳ ವಿಲೀನ	216
21.	ಕೆಳಹಂತಕ್ಕೆ ಬಲ ನೀಡಿ	217
22.	ರಾಜ್ಯಕ್ಕೆ ರೈಲ್ವೆ ಬಂಪರ್	219
23.	ಚುನಾವಣೆಗೆ ರೂ.500 ಕೋಟಿ ವೆಚ್ಚ	222
24.	ರಕ್ಷಣಾ ಕ್ಷೇತ್ರದಲ್ಲೂ ಸ್ವಾವಲಂಬನೆ	224
25.	ಸುಳ್ಳು ಸೋಲಲೇಬೇಕು	225
26.	ಕೇಂದ್ರದ ಅಂಗಳಕ್ಕೆ ಮೀಸಲು	226
27.	ಕಲ್ಯಾಣ ನೇಮಕ ಆದೇಶದಲ್ಲಿ ಬದಲಾವಣೆ	227
28.	ನವೀಕರಿಸಬಹುದಾದ ಇಂಧನ ನೀತಿಗೆ ಅಸ್ತು	228
29.	ತಾಲ್ಲೂಕು ಕೇಂದ್ರದಲ್ಲಿ ವಿಸ್ತಾರ ಸೌಧ	229
30.	ರಾಜ್ಯ ವಿಧಾನಸಭಾ ಚುನಾವಣೆ ಪೂರ್ವ ತಯಾರಿ ಪರಿಶೀಲನೆ	231
31.	ಏರೋ ಇಂಡಿಯಾದಲ್ಲಿ ನವಭಾರತ ಅನಾವರಣ	232
32.	ಆಂದ್ರಕ್ಕೆ ಕನ್ನಡಿಗ ರಾಜ್ಯಪಾಲ	233
33.	ರಾಜ್ಯದಲ್ಲಿ 2 ಹಂತದಲ್ಲಿ ಚುನಾವಣೆ ನಡೆಸಲು ಗುಪ್ತ ವರದಿ	237
34.	ರಾಜಭವನದಲ್ಲಿ ಶ್ರೀಗಂಧ ಸಸಿ ನೆಟ್ಟ ಪ್ರಧಾನಿ ಮೋದಿ	238
35.	PM meets actors, cricketers, startup biggies over dinner	238
36.	1.1316 ಶಾಲೆಗಳ ಅನಧಿಕೃತ	239
37.	ರಕ್ಷಣಾ ವಲಯದಲ್ಲಿ ರಾಜ್ಯಕ್ಕೆ ಸಿಂಹಪಾಲು	241
38.	ಸುಸ್ಥಿರ ವಿತ್ತನೀತಿ ಸವಾಲು	242
39.	ನೇಕಾರರಿಗೆ ಆರ್ಥಿಕ ನೆರವಿಗೆ ಒಪ್ಪಿಗೆ	246
40.	ಜನಪ್ರತಿನಿಧಿಗಳ ನಡೆ ವಿರುದ್ಧ ಜನಾಂದೋಲನ	247
41.	ಹೊಸ, ಹಳೇ ಯೋಜನೆಗಳ ಸಮ್ಮಿಲನದ ಬಜೆಟ್	249
42.	ಆನ್‌ಲೈನ್‌ನಲ್ಲಿ ಶಾಲೆಗಳ ಮಾನ್ಯತೆ, ಎನ್‌ಒಸಿಗೆ ಕ್ರಮ	251

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
43.	ಹೆಚ್3 ಎನ್2 ಆತಂಕ ಬೇಡ	253
44.	ಬಳಕೆಯಲ್ಲಿ ಇಲ್ಲದ 65 ಕಾನೂನು ರದ್ದು	255
45.	80 ವರ್ಷ ಮೇಲ್ಪಟ್ಟವರಿಗೆ ಅಂಚೆ ಮತದಾನ ಅವಕಾಶ	255
46.	ನಾಳೆ ರಾಜ್ಯಕ್ಕೆ ಚುನಾವಣಾ ಆಯೋಗ ಭೇಟಿ	257
47.	ಗಣಿ ಪರಿಸರ ಕಾಯಕಲ್ಪಕ್ಕೆ 24 ಸಾವಿರ ಕೋಟಿ ವೆಚ್ಚ	257
48.	ಮಹಿಳಾ ಸಬಲೀಕರಣಕ್ಕೆ ರೂ. 500 ಕೋಟಿ ನೆರವು	259
49.	ಎಲೆಕ್ಷನ್ ತಯಾರಿ ಪರಿಶೀಲನೆ	260
50.	ಡಬಲ್ ಇಂಜಿನ್ ಸರ್ಕಾರದಿಂದ ಅಭಿವೃದ್ಧಿ	263
51.	ಮಂಡ್ಯ ಮಂದಿ ಮನಗೆದ್ದ ಮೋದಿ	264
52.	ಹುಟ್ಟು ಅನಾಥರಿಗೆ ಮೀಸಲು	267
53.	ಖರ್ಗೆಗೆ ಜೀವಮಾನ ಸಾಧನೆ ಗೌರವ	269
54.	ಮಾತೃಭಾಷೆಯಲ್ಲಿರಲಿ ಗುಣಮಟ್ಟದ ಶಿಕ್ಷಣ	269
55.	ಎಸ್ಎಂಕೆ, ಸುಧಾಮೂರ್ತಿ, ಭೈರಪ್ಪ ಸೇರಿ 8 ಮಂದಿಗೆ ಪದ್ಮ ಪ್ರಶಸ್ತಿ ಪ್ರದಾನ	271
56.	ನಗರ ಅನಿಲ ವಿತರಣಾ ಜಾಲ ಅಭಿವೃದ್ಧಿ	272
57.	ಶಕ್ತಿಸೌಧದೆದುರು ಬಸವಣ್ಣ, ಕೆಂಪೇಗೌಡ ಪ್ರತಿಮೆ	275
58.	ಮೇ 10ಕ್ಕೆ ಓಟು, 13ಕ್ಕೆ ರಿಸಲ್ಟ್	277
59.	ಹಣದ ಬಲ ತಡೆಯುವುದು ಸವಾಲು: ಆಯೋಗ	282
	ಭಾಗ – 5 **ರಾಜ್ಯ ನೆಲ, ಜಲ ಭಾಷೆ ಸುದ್ದಿಗಳು**	
1.	Union Minister Shripad Naik threatens to resign over Mahadayi issue	285
2.	ಕಳಸಾ ತಿರುವು: ಅರಣ್ಯ ಇಲಾಖೆ ಒಪ್ಪಿಗೆ	286
3.	ತಿಂಗಳಲ್ಲಿ ಮಹದಾಯಿಗೆ ಚಾಲನೆ	287
4.	ಭದ್ರಾ ಮೇಲ್ದಂಡೆಗೆ ರೂ. 5,300 ಕೋಟಿ	288
5.	Mahadayi: Supreme Court refuses to stay Karnataka's Project	289

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
6.	Polls nearing, Centre okays Kalasa-Banduri project	290
7.	'ಜಲಶಕ್ತಿ ಅಭಿಯಾನ'ದಲ್ಲಿ ರಾಜ್ಯಕ್ಕೆ 2ನೇ ಸ್ಥಾನ	291
	ಭಾಗ – 6 **ನ್ಯಾಯಾಲಯ ಸುದ್ದಿಗಳು**	
1.	ನೋಟು ಅಮಾನ್ಯ ತಪ್ಪಲ್ಲ: ಸುಪ್ರೀಂ ಮಹತ್ವದ ತೀರ್ಪು	293
2.	Right to free speech cannot be curtailed further, says SC	294
3.	ಶಾಸಕ, ಸಂಸದರ ಮಾತಿಗೆ ಹೆಚ್ಚುವರಿ ನಿರ್ಬಂಧ ಅಸಾಧ್ಯ	296
4.	Ex-MLC moves HC against spending on e-Vidhana system from State exchequer	298
5.	V-P says court can't dilute Parliament's sovereignty	299
6.	'Judiciary, legislature should respect boundaries set by the Constitution'	300
7.	ಸುಪ್ರೀಂ ಗುರಾಣಿ	301
8.	ತೀರ್ಪುಗಳ ತರ್ಜುಮೆ ಸಿಜೆಗೆ ಮೋದಿ ಶ್ಲಾಘನೆ	305
9.	21 Andaman islands named after Param Vir Chakra awardees	306
10.	Former SC judge among 6 new Governors appointed	307
11.	Presiding officer can conduct only the mayor's poll:SC	308
12.	How to deal with fallout of speakres' decision:SC	309
13.	Legislator facing disqualification can't attend floor test:SC	310
14.	ಚುನಾವಣಾ ಆಯುಕ್ತರ ನೇಮಕಕ್ಕೆ ಹೊಸ ವ್ಯವಸ್ಥೆ	311
15.	ಕಡ್ಡಾಯ ಮತದಾನದ ಹಕ್ಕು: ಪಿಐಎಲ್ ವಜಾಗೊಳಿಸಿದ ದೆಹಲಿ ಹೈಕೋರ್ಟ್	312
	ಭಾಗ – 7 **ಹೊರ ರಾಜ್ಯಗಳ ಸುದ್ದಿಗಳು**	
1.	ತಮಿಳ್ನಾಡಲ್ಲಿ ಸರ್ಕಾರ V/s ಗೌರ್ನರ್	313
2.	ರಾಜ್ಯಪಾಲ ರವಿ ವಿರುದ್ಧ ದೂರು	314
3.	Goa assembly passes unanimous resolution against Kalasa-Banduri	315

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
4.	Odisha Minister shot dead by former security officer	316
5.	ರಾಜ್ಯಪಾಲರಿಗೆ ಅಧಿವೇಶನ ವಿಳಂಬ ಮಾಡುವ ಅಧಿಕಾರವಿಲ್ಲ: ಸುಪ್ರೀಂ	317
6.	Telangana govt. moves SC as Governor delays nod to Bills	318
7.	ಲೆಫ್ಟಿನೆಂಟ್ ಗವರ್ನರ್ ಭಾಷಣಕ್ಕೆ ಅಡ್ಡಿ	319
	ಭಾಗ – 8 **ಶ್ರದ್ಧಾಂಜಲಿ**	
1.	ಸಿದ್ದೇಶ್ವರ ಶ್ರೀ, ಜ್ಞಾನಯೋಗಿ	321
2.	ತ್ರಿಪಾಠಿ ಕೇಸರಿನಾಥ, ಮಾಜಿ ರಾಜ್ಯಪಾಲ	321
3.	ಡಾ.ಎಚ್.ಚಂದ್ರಶೇಖರ ಸಾಹಿತಿ, ಹಿರಿಯ ಸಂಶೋಧಕ	321
4.	ನಾಡೋಜ ಸಾರಾ ಅಬೂಬಕ್ಕರ್, ಖ್ಯಾತ ಲೇಖಕಿ	321
5.	ಶರದ್ ಯಾದವ್, ಮಾಜಿ ಕೇಂದ್ರ ಸಚಿವರು	322
6.	ಎಚ್.ಡಿ.ಲಮಾಣಿ, ಮಾಜಿ ಸಚಿವರು	322
7.	ತಿಮ್ಮಪ್ಪ ಹೆಗಡೆ, ಮಾಜಿ ಶಾಸಕರು	322
8.	ಜಮುನಾ, ಬಹುಭಾಷಾ ನಟಿ	323
9.	ಕೆ.ವಿ.ತಿರುಮಲ್ಲೇಶ್, ಕವಿ	323
10.	ಕೆ.ವಿಶ್ವನಾಥ, ಕಲಾ ತಪಸ್ವಿ ನಿರ್ದೇಶಕ	323
11.	ಟಿ. ಜಾನ್, ಮಾಜಿ ಸಚಿವರು	324
12.	ಶಿವಾನಂದ ಅಂಬಡಗಟ್ಟಿ, ಮಾಜಿ ಶಾಸಕರು	324
13.	ಧ್ರುವನಾರಾಯಣ, ಕೆಪಿಸಿಸಿ ಕಾರ್ಯಾಧ್ಯಕ್ಷ	324
14.	ಶಂಕರಪ್ಪ, ಬಯಲಾಟ ಕಲಾವಿದ	324
15.	ಎಚ್.ಹೊನ್ನಪ್ಪ, ಮಾಜಿ ಎಂಎಲ್‌ಸಿ	325
16.	ಅಂಬಾತನಯ ಮುದ್ರಾಡಿ, ಹಿರಿಯ ಸಾಹಿತಿ	325

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
17.	ರತ್ನಮ್ಮ ಕುಸನೂರು, ಮಾಜಿ ಎಂಎಲ್‌ಸಿ	325
18.	ಮಲೆಯೂರು ಗುರುಸ್ವಾಮಿ, ಹಿರಿಯ ಸಾಹಿತಿ	325
19.	ಅಂಜನಮೂರ್ತಿ, ಮಾಜಿ ಸಚಿವರು	326
	ಭಾಗ–9 **ಪ್ರಮುಖ ಲೇಖನಗಳು**	
1.	ಮಾತೃಭಾಷಾ ಮಾಧ್ಯಮ: ಸಾಂವಿಧಾನಿಕ ರಕ್ಷಣೆಯೇ ಸೂಕ್ತ	327
2.	ತಾಳ್ಮೆತೋರಬೇಕು ಶಾಸಕಾಂಗ	328
3.	ವೋಟೆಂಬ ಪರಮ ಅಹಿಂಸಾ ಅಸ್ತ್ರ	330
4.	ಮತದಾನದ ಘನತೆ ಕಾಯುವುದು ಎಲ್ಲರ ಹೊಣೆಯಾಗಬೇಕಿದೆ	332
5.	ರಾಷ್ಟ್ರೀಯ ಮತದಾರರ ದಿನ –2023	333
6.	ಸಂವಿಧಾನ ರಚನೆಗೆ ಕನ್ನಡಿಗರ ಕಾಣ್ಕೆ	336
7.	ಘನತೆಯತ್ತ ಸಾಗುತ್ತಿದೆ ಭಾರತದ ಗಣತಂತ್ರ	338
8.	ರಾಜಕರಣಿಗಳ ಮೌಲ್ಯ ಮಾಪನದತ್ತ ಒಂದು ದಿಟ್ಟ ಹೆಜ್ಜೆ	340
9.	ಕರ್ನಾಟಕ ಕಣ, ಜಾತಿ ಲೆಕ್ಕ ಪ್ರಾಂಗಣ	342
10.	ಅವಳ, ನನ್ನ ಕತೆ, ಲಿಂಗ ಸಮಾನತೆಯ ದಿಕ್ಕು–ದೆಸೆ	344

ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

ಭಾಗ – 1

ವಿಧಾನಮಂಡಲದ ಸುದ್ದಿಗಳು

1. ಶಾಲಾ ಮೌಲ್ಯ ಶಿಕ್ಷಣಕ್ಕೆ ಧರ್ಮರಕ್ಷೆ

ರಾಜ್ಯದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಹಾಲಿ ಅಳವಡಿಸಿಕೊಂಡಿರುವ ಮೌಲ್ಯ ಶಿಕ್ಷಣವನ್ನು ಬರುವ ಶೈಕ್ಷಣಿಕ ವರ್ಷದಿಂದಲೇ ಎಲ್ಲ ಶಾಲೆಗಳಲ್ಲಿಯೂ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಹೇಳಿದರು.

'ಶಾಲಾ ಹಂತದಲ್ಲಿ ಮೌಲ್ಯ ಶಿಕ್ಷಣದ ಅನುಷ್ಠಾನ' ಕುರಿತು ಶಿಕ್ಷಣ ತಜ್ಞರು, ವಿವಿಧ ಧಾರ್ಮಿಕ ಗುರುಗಳು, ಚಿಂತಕರು, ಉನ್ನತ ಅಧಿಕಾರಿಗಳೊಂದಿಗೆ ವಿಧಾನಸೌಧದಲ್ಲಿ ದುಂಡು ಮೇಜಿನ ಸಮಲೋಚನಾ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

"ಮೌಲ್ಯ ಶಿಕ್ಷಣ ಅಳವಡಿಸುವುದು ತುರ್ತು ಅಗತ್ಯ ಎಂಬುದನ್ನು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲ ಗಣ್ಯರು ತಿಳಿಸಿದ್ದಾರೆ. ಲಿಖಿತ ರೂಪದಲ್ಲಿ ಇನ್ನಷ್ಟು ಅಭಿಪ್ರಾಯ, ಸಲಹೆ–ಸೂಚನೆಗಳನ್ನು ಪಡೆಯಲಾಗುತ್ತದೆ. ಅತ್ಯಂತ ಅರ್ಥಪೂರ್ಣವಾಗಿ ಸಭೆ ನಡೆದಿದೆ. ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಸಭೆಯಲ್ಲಿ ಭಾಗಿಯಾಗಿದ್ದ ಬಹುತೇಕ ಎಲ್ಲರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ. ಎಲ್ಲರೂ ಮೌಲ್ಯ ಶಿಕ್ಷಣ ಅನುಷ್ಠಾನಕ್ಕೆ ಒಪ್ಪಿಗೆ ಸೂಚಿಸಿರುವುದರಿಂದ ಇದರ ಅನುಷ್ಠಾನದ ವಿಧಾನಗಳನ್ನು ಅಂತಿಮಗೊಳಿಸಲಾಗುತ್ತದೆ," ಎಂದರು.

"ಕರ್ನಾಟಕ ಸೇರಿದಂತೆ ದೇಶದ ಅನೇಕ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಈಗಾಗಲೇ ಮೌಲ್ಯ ಶಿಕ್ಷಣವನ್ನು ಅಳವಡಿಸಿಕೊಂಡಿವೆ. ಇದನ್ನು ವ್ಯಾಪಕವಾಗಿ ಎಲ್ಲ ಶಾಲೆಗಳಲ್ಲೂ ಅಳವಡಿಸಬೇಕು ಎಂಬ ಅಭಿಪ್ರಾಯಗಳು ಸಭೆಯಲ್ಲಿ ಮೂಡಿಬಂದಿವೆ," ಎಂದರು.

ಸಭೆಯಲ್ಲಿ ಪ್ರಮುಖರು: ಆದಿಚುಂಚನಗಿರಿ ಮಠದ ನಿರ್ಮಾಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಡುಪಿ ಪೇಜಾವರ ಮಠದ ವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ, ಅದಮ್ಯ ಚೇತನ ಫೌಂಡೇಶನ್ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಶಿಕ್ಷಣ ಸುಧಾರಣೆ ಸಲಹೆಗಾರ ಪ್ರೊ.ಎಂ.ಆರ್.ದೊರೆಸ್ವಾಮಿ, ಶಿಕ್ಷಣ ತಜ್ಞ ಗುರುರಾಜ ಕರಜಗಿ, ಗೋಕುಲ ಎಜುಕೆಷನ್ ಫೌಂಡೇಷನ್ ಮುಖ್ಯಸ್ಥ ಜಯರಾಂ, ರಶೀದ್ ಮಸ್ಜಿದ್‌ನ ಮೌಲಾನಾ ಮಸೂದ್ ರಶೀದ್, ವಿಜಯನಗರ ಜಿಲ್ಲೆಯ ಸೇಂಟ್ ಆಂಥೋನಿ ಚರ್ಚ್ ಫಾದರ್ ಫ್ರಾನ್ಸಿಸ್ ಸೇರಿದಂತೆ ಧರ್ಮ ಗುರುಗಳು, ಚಿಂತಕರು ಸಭೆಯಲ್ಲಿ ಭಾಗವಹಿಸಿದ್ದರು.

- ದೇವರು, ಗುರಗಳು, ಹಿರಿಯರನ್ನು ಗೌರವಿಸುವುದನ್ನು ಕಲಿಸಬೇಕು.
- ನೈತಿಕ, ಮೌಲ್ಯಗಳು ದೈನಂದಿನ ಜೀವನದಲ್ಲಿ ಅಳವಡಿಕೆಯಾಗಬೇಕು.
- ರಾಜಕಾರಣಿಗಳು ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಮೇಲ್ಪಂಕ್ತಿ ಹಾಕಬೇಕು.
- ಶಿಕ್ಷಕರು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು.
- ಮಕ್ಕಳಿಗೆ ಸಾತ್ವಿಕ ಆಹಾರ ನೀಡಬೇಕು.
- ಮಕ್ಕಳ ಮೊಬೈಲ್ ಫೋನು ಗೀಳು ಬಿಡಿಸಬೇಕು, ಪಾಲಕರು ಸಹಕರಿಸಬೇಕು.

ನಾವೆಲ್ಲರೂ ಜೊತೆಯಾಗಿ ಹೆಜ್ಜೆ ಹಾಕಿದರೆ ಮಾತ್ರ ಯಶಸ್ಸು ಸಾಧ್ಯ. ಎಲ್ಲರ ಅಭಿಪ್ರಾಯಕ್ಕೆ ನಾನು ಬದ್ಧನಾಗಿದ್ದೇನೆ. ಯಾವುದನ್ನು ಕಲಿಸಬೇಕು, ಯಾವುದು ಬೇಡ ಎಂಬುದರ ಬಗ್ಗೆ ನೀವೇ ನಿರ್ಧಾರ ಮಾಡಿ ಎಂದು ವಿಧಾನಸಭಾಧ್ಯಕ್ಷರು ತಿಳಿಸಿದರು.

ವಿಶ್ವೇಶ್ವರ ಹೆಗಡೆ, ಕಾಗೇರಿ,

ಮಾನ್ಯ ಸಭಾಧ್ಯಕ್ಷರು, ವಿಧಾನಸಭೆ

ಆಧಾರ: ವಿಜಯ ಕರ್ನಾಟಕ, ದಿನಾಂಕ:10.01.2023.

2. ಪೀಠಾಸೀನಾಧಿಕಾರಿಗಳ ಸಮ್ಮೇಳನ ಸ್ಪೀಕರ್ ಭಾಗಿ

ರಾಜಸ್ಥಾನದ ಜೈಪುರದಲ್ಲಿ ಮೂರು ದಿನ ನಡೆಯುವ 83ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಪಾಲ್ಗೊಳ್ಳಲಿದ್ದಾರೆ.

ರಾಜಸ್ಥಾನಕ್ಕೆ ಪ್ರಯಾಣ ಬೆಳೆಸಲಿರುವ ಸ್ಪೀಕರ್ ಮೂರು ವಿಷಯಗಳ ಬಗ್ಗೆ ಅಭಿಪ್ರಾಯ ಮಂಡಿಸಲಿದ್ದಾರೆ. ಸಂಸತ್ತು ಮತ್ತು ಶಾಸಕಾಂಗಗಳನ್ನು ಹೆಚ್ಚು ಪರಿಣಾಮಕಾರಿ, ಹೊಣೆಗಾರಿಕೆ ಹಾಗೂ ಉತ್ಪಾಕವಾಗಿಸುವ ಅಗತ್ಯತೆ. ಡಿಜಿಟಲ್ ಸಂಸತ್ತಿನೊಂದಿಗೆ ರಾಜ್ಯ ಶಾಸಕಾಂಗಗಳ ಏಕೀಕರಣ. ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಾಮರಸ್ಯದ ಸಂಬಂಧ ಕಾಪಾಡಿಕೊಳ್ಳುವ ಅನಿವಾರ್ಯತೆ ವಿಷಯ ಕುರಿತು ವಿಚಾರ ಮಂಡಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಸಂಜೆ ಸೌಹಾರ್ದಯುತವಾಗಿ ಭೇಟಿಯಾಗಿದ್ದ ಸ್ಪೀಕರ್ ಕಾಗೇರಿ ಅವರು ಕೆಲಹೊತ್ತು ಮಾತುಕತೆ ನಡೆಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:10.01.2023.

ದಿನಾಂಕ: 10–01–2023 ರಂದು ರಾಜಸ್ಥಾನದ ಜೈಪುರದಲ್ಲಿ ನಡೆದ 83ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ವಿಧಾನ ಪರಿಷತ್ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರನ್ನು ಸ್ವಾಗತಿಸಿದ ಸಂದರ್ಭ.

ದಿನಾಂಕ: 10–01–2023 ರಂದು ರಾಜಸ್ಥಾನದ ಜೈಪುರದಲ್ಲಿ ನಡೆದ 83ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ವಿಧಾನಪರಿಷತ್ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು ಮಾತನಾಡಿ, ವಿಶೇಷವಾಗಿ ಶಾಸಕರು ಮತ್ತು ಸಂಸದರಿಗೆ ರಾಜಕೀಯ ತರಬೇತಿ ನೀಡುವ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಮಾನ್ಯ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ರವರು ಹಾಗೂ ದೇಶದ ಎಲ್ಲ ರಾಜ್ಯಗಳ ಪೀಠಾಸೀನ ಅಧಿಕಾರಿಗಳು ಭಾಗವಹಿಸಿದ್ದರು.

ದಿನಾಂಕ: 11.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ರಾಜಸ್ಥಾನದ ಜೈಪುರದಲ್ಲಿ ಎರಡು ದಿನಗಳ ಕಾಲ ನಡೆದ 83ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಮಾನ್ಯಶ್ರೀ ಜಗದೀಪ್ ಧನ್‌ಕರ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಸನ್ಮಾನ್ಯ ಲೋಕಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ರವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಸಭೆಯ ಉಪಾಧ್ಯಕ್ಷರಾದ ಶ್ರೀ ಹರಿವನ್ಶ್, ರಾಜಸ್ಥಾನದ ಮುಖ್ಯಮಂತ್ರಿಗಳಾದ ಶ್ರೀ ಅಶೋಕ್ ಗೆಹ್ಲೋಟ್, ರಾಜಸ್ಥಾನ ವಿಧಾನಸಭೆ ಅಧ್ಯಕ್ಷರಾದ ಡಾ: ಸಿ.ಪಿ. ಜೋಶಿ ಅವರು ಸೇರಿದಂತೆ ದೇಶದ ಎಲ್ಲಾ ವಿಧಾನಸಭೆ ಸಭಾಧ್ಯಕ್ಷರು, ಸಭಾಪತಿಗಳು ಉಪಸ್ಥಿತರಿದ್ದರು

ದಿನಾಂಕ: 12.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ರಾಜಸ್ಥಾನದ ಜೈಪುರದಲ್ಲಿ ನಡೆದ 83ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಾಮರಸ್ಯದ ಸಂಬಂಧವನ್ನು ಕಾಪಾಡಿಕೊಳ್ಳುವ ಅಗತ್ಯತೆ ಬಗ್ಗೆ ತಮ್ಮ ನಿಲುವನ್ನು ಮಂಡಿಸಿದರು. ಸಂಸತ್ತು ಮತ್ತು ಶಾಸಕಾಂಗಗಳನ್ನು ಹೆಚ್ಚು ಪರಿಣಾಮಕಾರಿ ಹೊಣೆಗಾರಿಕೆ ಮತ್ತು ಉತ್ಪಾದಕವಾಗಿಸುವ ಅಗತ್ಯವಿದೆ ಹಾಗೂ ಡಿಜಿಟಲ್ ಸಂಸತ್ತಿನೊಂದಿಗೆ ರಾಜ್ಯ ಶಾಸಕಾಂಗಗಳ ಏಕೀಕರಣದ ಅಗತ್ಯತೆಗಳ ಬಗ್ಗೆ ಪ್ರತಿಪಾದಿಸಿ ಮಾತನಾಡುತ್ತಿರುವ ಸಂದರ್ಭ.

3. ಸುಗಮ ಕಲಾಪ: ಅಧ್ಯಯನಕ್ಕೆ ನಿರ್ಧಾರ

ಸಂಸದೀಯ ವ್ಯವಸ್ಥೆಯ ಸುಧಾರಣೆಗಾಗಿ ಅಧಿವೇಶನಗಳ ಕಾರ್ಯಕಲಾಪಗಳಲ್ಲಿ ವ್ಯತ್ಯಯ ಉಂಟಾಗುತ್ತಿರುವುದನ್ನು ನಿಯಂತ್ರಿಸಲು ಪ್ರಾಜ್ಞರು ಹಾಗೂ ಸಂಸದೀಯ ಪಟುಗಳ ಅಭಿಪ್ರಾಯದೊಂದಿಗೆ ಕಲಾಪಗಳ ಸುಸೂತ್ರ ನಡೆಯುವಿಕೆ ಸಂಬಂಧ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಸಿದ್ಧತೆ ನಡೆಸಿದೆ.

ವಿಧಾನಸೌಧದಲ್ಲಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸಂಸ್ಥೆಯ ಕ್ಯಾಲೆಂಡರ್ ಬಿಡುಗಡೆಗೊಳಿಸಿದ ವೇಳೆ ಸಂಸ್ಥೆಯ ನಿರ್ದೇಶಕ ಕೆ.ದಿವಾಕರಬಾಬು ಅವರು ಈ ಮಾಹಿತಿ ನೀಡಿದರು.

" ಮಾಜಿ ಪ್ರಧಾನಿ ಎಚ್.ಡಿ.ದೇವೆಗೌಡ, ಮಾಜಿ ಸಿಎಂ ವೀರಪ್ಪ ಮೊಯಿಲಿ, ವಿಧಾನ ಪರಿಷತ್ ಸಭಾಪತಿ ಹೊರಟ್ಟಿ ಸೇರಿದಂತೆ ಇತರ ಪ್ರಮುಖರಿಂದ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ," ಎಂದರು.

ಸಂಸ್ಥೆಯು ಸಂಶೋಧನಾ ವಿಷಯಗಳಿಗಾಗಿ ಕಾನೂನು ಮತ್ತು ಸಂಸದೀಯ ವಿಷಯದಲ್ಲಿ ಕೆಲ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದೆ. ಮುಖ್ಯವಾಗಿ ಖಾಸಗಿತನದ ಹಕ್ಕು, ನ್ಯಾಯಾಂಗ ವ್ಯವಸ್ಥೆಯ ಅಧ್ಯಯನ, ಸಾಕ್ಷಿಗಳ/ಸಾಕ್ಷ್ಯದ ಸಂರಕ್ಷಣೆ, ಆನ್‌ಲೈನ್ ಗೇಮಿಂಗ್ ನಿಯಂತ್ರಣ ಇತರೆ ವಿಷಯಗಳ ಬಗ್ಗೆ ಅಧ್ಯಯನ ನಡೆಸಲಾಗುವುದು, ಎಂದರು. ಸದನದಲ್ಲಿ ಶಾಸಕರ ಕಡ್ಡಾಯ ಹಾಜರಾತಿ, ಪರಿಣಾಮಕಾರಿಯಾಗಿ ಭಾಗವಹಿಸುವಿಕೆ ಹಾಗೂ ಉತ್ತಮ ಶಾಸಕರ ಕರ್ತವ್ಯಗಳು, ಜವಾಬ್ದಾರಿ ವಿಷಯಗಳ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು, ಎಂದು ತಿಳಿಸಿದರು. ಸಚಿವ ಆರಗ ಜ್ಞಾನೇಂದ್ರ ಪಾಲ್ಗೊಂಡಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:11.01.2023.

4. ಸಂಸದ, ಶಾಸಕರಿಗೆ ತರಬೇತಿ ಕಡ್ಡಾಯ

ಸಂಸದರು ಮತ್ತು ಶಾಸಕರಿಗೆ ರಾಜಕೀಯ ತರಬೇತಿ ನೀಡುವುದು ಅವಶ್ಯಕವಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರತಿಪಾದಿಸಿದರು.

ಜೈಪುರದಲ್ಲಿ ನಡೆಯುತ್ತಿರುವ 83ನೇ ಅಖಿಲ ಭಾರತ ಪೀಠಸೀನಾಧಿಕಾರಿಗಳ ಸಮ್ಮೇಳನದಲ್ಲಿ ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು. ಶಾಸಕರುಗಳಿಗೆ ಮತ್ತು ಸಂಸದರಿಗೆ ರಾಜಕೀಯ ತರಬೇತಿ ನೀಡುವ ಕುರಿತು ಚರ್ಚಿಸಿ ಅದಕ್ಕೆ ಒತ್ತು ನೀಡುವಂತೆ ಆಗ್ರಹಿಸಿದರು.

ಹಾಗೆಯೇ ರಾಜ್ಯ ವಿಧಾನ ಮಂಡಲಗಳಿಗೆ ಹಣಕಾಸು ಸ್ವಾಯತ್ತತೆ ನೀಡುವ ಬಗ್ಗೆ ವಿಸ್ತೃತ ಚರ್ಚೆ ಮಾಡಲಾಯಿತು ಮತ್ತು ಸಂಸದರಿಗೆ ಹಾಗೂ ಶಾಸಕರುಗಳಿಗೆ ನಿಯಮಿತವಾಗಿ ತರಬೇತಿ ನೀಡುವ ಬಗ್ಗೆ ಚರ್ಚಿಸಲಾಯಿತು.

ಯಾವುದೇ ರಾಜ್ಯದ ಪೀಠಾಸೀನಾಧಿಕಾರಿಗಳು ದೆಹಲಿಗೆ ಬಂದ ಸಂದರ್ಭದಲ್ಲಿ ಸಂಸತ್ತಿನ ಗ್ರಂಥಾಲಯದಲ್ಲಿನ ಉಪಯೋಗವನ್ನು ಮಾಡಿಕೊಳ್ಳುವುದು ಮತ್ತು ಎಲ್ಲ ಪೀಠಾಸೀನಾಧಿಕಾರಿಗಳಿಗೆ ಶಿಷ್ಟಾಚಾರದ ಪ್ರಕಾರ ವಿಶೇಷ ಸೌಲಭ್ಯಗಳನ್ನು ಒದಗಿಸುವುದಾಗಿ ಲೋಕ ಸಭಾಧ್ಯಕ್ಷರು ತಿಳಿಸಿದರು.

ಸಭೆಯಲ್ಲಿ ರಾಜ್ಯಸಭೆಯ ಉಪಾಧ್ಯಕ್ಷರಾದ ಹರಿವಂಶ ಸಿಂಗ್, ರಾಜಸ್ಥಾನ ವಿಧಾನ ಸಭೆಯ ಅಧ್ಯಕ್ಷರಾದ ಸಿ.ಪಿ.ಜೋಶಿ ಸೇರಿದಂತೆ ದೇಶದ ಎಲ್ಲ ರಾಜ್ಯಗಳ ಪೀಠಾಸೀನಾಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಬಸವರಾಜ ಹೊರಟ್ಟಿ ಅನುಮೋದಿಸಿ ಸಹಮತ ವ್ಯಕ್ತಪಡಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:12.01.2023.

5. ಸ್ಪೀಕರ್ ವಿಶ್ವೇಶ್ವರ, ನಮ್ಮ ಕಾಗೇರಿ ಭಾವ..

ವಿಶ್ವೇಶ್ವರ ಹೆಗಡೆ, ಕಾಗೇರಿ ಸ್ಪೀಕರ್ ಆದ ಮೇಲೆ ಪೀಠ ವೈಬ್ರಂಟ್ ಆಗಿದೆ. ಹಾಂ. ಇದು ರಚನಾತ್ಮಕ ಸಕ್ರಿಯತೆ, ಸಂಸದೀಯ ನಡಾವಳಿಯ ಚೌಕಟ್ಟಿನ ಒಳಗೇ ಕಾಗೇರಿ ಮಾಡಿರುವ–ಮಾಡುತ್ತಿರುವ ಕೆಲಸಗಳು ಹಾಗೂ ಆಡುತ್ತಿರುವ ಮಾತುಗಳು ಪ್ರಸಕ್ತ ಕಾಲಘಟ್ಟದಲ್ಲಿ ಹೊಸ ತಲೆಮಾರಿನ ಜನರಿಗೆ ಅಪಾರವಾಗಿ ಕನೆಕ್ಟ್ ಆಗುತ್ತಿವೆ. ಆದ್ದರಿಂದಲೇ ಜನವರಿ 15ರಂದು ಶಿರಸಿಯಲ್ಲಿ ಅವರಿಗೆ ನಾಗರಿಕ ಸನ್ಮಾನ ಮಾಡುತ್ತಿರುವುದು ಅರ್ಥಪೂರ್ಣ.

ನಾವು ಸಂವಿಧಾನವನ್ನು ಗೌರವಿಸದಿದ್ದರೆ, ಚುನಾವಣೆಯ ಅಕ್ರಮಗಳನ್ನು ನಿಲ್ಲಿಸದಿದ್ದರೆ ಹಾಗೂ ಕಲಾಪದ ಸಮಯವನ್ನು ಅಭಿವೃದ್ಧಿ ವಿಷಯಕ್ಕೆ ಬಳಸಿಕೊಳ್ಳದಿದ್ದರೆ ಮುಂದಿನ ತಲೆಮಾರು ನಮ್ಮನ್ನು ಕ್ಷಮಿಸುವುದಿಲ್ಲ ಎಂದು ಅವರು ಅಂದು ವಿಧಾನಸಭೆಯಲ್ಲಿ ಹೇಳಿದಾಗ ಪ್ರತಿಯೊಬ್ಬ ಸದಸ್ಯರೂ ಸ್ತಬ್ಧರಾದರು. ಇಡೀ ಕನ್ನಡ ನಾಡು ವಾಹ್ ಎಂದಿತು.

ಇವರು ನಮ್ಮ ವಿಶ್ವೇಶ್ವರ ಹೆಗಡೆ, ಕಾಗೇರಿ! ಅಂದರೆ ಸ್ಪೀಕರ್ ಕಾಗೇರಿ!! ನೇರ, ಸರಳ, ಸಜ್ಜನಿಕೆ ಎನ್ನುವ ಪದಗಳಿಗೆ ವ್ಯಾಖ್ಯಾನ ಕಾಗೇರಿ ವ್ಯಕ್ತಿತ್ವ ಎಂದರೆ ಅತಿಶಯೋಕ್ತಿಯಲ್ಲ. ಪೀಠದಿಂದ ಅನವಶ್ಯಕ ಅನಿಸಿಕೆಗಳನ್ನು ಅವರೆಂದೂ ವ್ಯಕ್ತಪಡಿಸಿಲ್ಲ. ಕನ್ನಡಿಗರ, ಅದರಲ್ಲೂ ನವ ತಲೆಮಾರಿನ ಅಭ್ಯುದಯದ ಮಾತುಗಳಿಗಳಷ್ಟೇ ಅವರ ಒತ್ತು. ಆದ್ದರಿಂದಲೇ ಅವರ ಮಾತನ್ನು ಸದನದ ಒಳ–ಹೊರಗೆ ಗಂಭೀರವಾಗಿ ಪರಿಗಣಿಸಲಾಗುತ್ತದೆ.

ಇಂದಿಗೂ ತವರಿಗೆ ಬಂದಾಗ ಸ್ಪೀಕರ್ ಎಂಬ ಯಾವುದೇ ಗತ್ತು–ಗಮ್ಮತ್ತುಗಳಿಲ್ಲದೇ 'ಕೊನೆಗೌಡ'ನಾಗುವ (ಅಡಕೆ ಇಳಿಸುವವರು): ಮಕ್ಕಳನ್ನು ಶಿರಸಿಯ ಮಾರಿಕಾಂಬಾ ಸರ್ಕಾರಿ ಶಾಲೆಯಲ್ಲಿ

ಓದಿಸಿದ; ಚುನಾವಣೆ ಬಂದಾಗ ಜನರೊಂದಿಗೆ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸುವ ಹಾಗೂ ಹಣಕ್ಕಾಗಿ ಮತ ಮಾರಿಕೊಳ್ಳಬೇಡಿ ಎಂದು ಯುವ ಸಮೂಹಕ್ಕೆ ಒತ್ತು ಕೊಟ್ಟು ಹೇಳುತ್ತಿರುವ ಕಾಗೇರಿ ಎಂದರೆ ಎಲ್ಲರಿಗೂ ನಮ್ಮ ಕಾಗೇರಿ ಭಾವ...! ನಾಡಿನ ಈ ಭಾವಕ್ಕೆ ತಕ್ಕನಾದ ವ್ಯಕ್ತಿತ್ವ ಸ್ಪೀಕರ್ ಅವರದ್ದು.

ಸ್ಪೀಕರ್ ಆದ ನಂತರ ಕಾಗೇರಿ ಸಂಸದೀಯ ಪಟುಗಳಲ್ಲಿ ಶಾಶ್ವತವಾಗಿ ಉಳಿಯಲಿರುವ ಅಕ್ಷರಗಳನ್ನು ಬರೆದಿದ್ದಾರೆ. ರಾಜ್ಯ ವಿಧಾನಮಂಡಲ ಇತಿಹಾಸದಲ್ಲಿ ಮೊದಲ ಬಾರಿಗೆ ಸಂಸತ್ತಿನ ಸ್ಪೀಕರ್ ಓಂ ಬಿರ್ಲಾ ಅವರನ್ನು ಅಹ್ವಾನಿಸಿ ಶಾಸಕರಿಗೆ ಕಲಾಪ ನಡೆಯ ಕಿವಿಮಾತನ್ನು ಹೇಳಿಸಿದ್ದು ಐತಿಹಾಸಿಕ. ಸಂವಿಧಾನ ಮಹತ್ವ ಚುನಾವಣೆ ಸುಧಾರಣೆಗಳ ಕುರಿತು ಸದನದಲ್ಲಿ ಅವರು ಏರ್ಪಡಿಸಿದ ಚರ್ಚೆಗಳೂ ರಾಷ್ಟ್ರೀಯ ಗಮನ ಸೆಳೆದ ಸಂಗತಿಗಳು.

ಕಾಗೇರಿಯವರಿಗೆ ಯಾರೂ ವೈರಿಗಳಿಲ್ಲ. ರಾಜಕೀಯವಾಗಿ ಭಿನ್ನಾಭಿಪ್ರಾಯಗಳಿರಬಹುದಾದರೂ ಬೇರೆಯವರೂ ಕಾಗೇರಿಯವರನ್ನು ವೈರಿಯಾಗಿ ಪರಿಗಣಿಸುವುದಿಲ್ಲ. ನೈಜ ಅರ್ಥದಲ್ಲಿ ಅಜಾತಶತ್ರು ಅವರು. ಲಾಬಿಗಳನ್ನು ಹತ್ತಿರ ಬಿಟ್ಟುಕೊಂಡಿಲ್ಲ. ಲಾಬಿಗಳವರೂ ಇವರ ಬಳಿ ಬರುವ ಧೈರ್ಯ ಮಾಡಲ್ಲ. ಸಭಾಧ್ಯಕ್ಷರಾಗಿ ಶಾಸಕಾಂಗದ ನ್ಯಾಯದಾನ ವ್ಯವಸ್ಥೆಯನ್ನು ಎತ್ತಿ ಹಿಡಿದಿರುವ, ವ್ಯಕ್ತಿಯಾಗಿ "ನಮ್ಮ ಕಾಗೇರಿ"ಯಾಗಿರುವ ಅವರಿಗೆ ಜನವರಿ 15ರಂದು ತವರಿನಲ್ಲಿ (ಶಿರಸಿ) ನಾಗರಿಕ ಸನ್ಮಾನ ಏರ್ಪಾಡಾಗಿದೆ. ಸನ್ಮಾನ ಪದಕ್ಕೆ ಅರ್ಥ ತಂದಿದೆ.

'ಚಾಣಾಕ್ಷ ನಡೆಗೆ ನಿದರ್ಶನ': ಬಸವಣ್ಣ, ಡಾ:ಬಿ.ಆರ್.ಅಂಬೇಡ್ಕರ್, ಮಹಾತ್ಮ ಗಾಂಧೀಜಿ ಸೇರಿದಂತೆ ನಾಡಿನ ಗಣ್ಯರ ಭಾವಚಿತ್ರಗಳ ಜೊತೆಗೆ ಸಾವರ್‌ಕರ್ ಚಿತ್ರವನ್ನು ಸ್ಪೀಕರ್ ಕಾಗೇರಿ ಬೆಳಗಾವಿ ವಿಧಾನಸೌಧದಲ್ಲಿ ಅಳವಡಿಸಿದ್ದಾರೆ. ಮೊನ್ನೆಯ ಬೆಳಗಾವಿ ಅಧಿವೇಶನ ವೇಳೆ ಸ್ಪೀಕರ್ ಅವರಿಂದ ಕಂಡು ಬಂದ ಚಾಣಾಕ್ಷ ನಡೆಯಿದು. ಭಾವಚಿತ್ರ ಅನಾವರಣದ ಔಪಚಾರಿಕ ಕಾರ್ಯಕ್ರಮಕ್ಕೆ ಪ್ರತಿಪಕ್ಷ ಬಹಿಷ್ಕರಿಸಿತ್ತು ನಿಜ. ಆದರೆ ಇದರ ಬಗ್ಗೆ ಆ ನಂತರ ಕಲಾಪದಲ್ಲಿ ಒಂದೇ ಒಂದು ಮಾತನ್ನು ಆಡಲಿಲ್ಲ. ಈ ಕಾರಣದಿಂದಲೇ ಇದು ಚಾಣಾಕ್ಷ ನಡೆ ಎಂಬುದು ಸಾಬೀತಾಯಿತು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:15.01.2023



ದಿನಾಂಕ: 15.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಶಿರಸಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರೊಂದಿಗೆ 250 ಕೋಟಿ ರೂಪಾಯಿಗಳ ತಾಲೂಕಿನ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಉದ್ಘಾಟನೆ ನೆರವೇರಿಸಿ, ಶುಭ ಕೋರಿದರು ನಂತರ ಅಭಿಮಾನಿ ಬಳಗದವರು ಆಯೋಜಿಸಿದ್ದ "ನಮ್ಮ ಕಾಗೇರಿ ನಮ್ಮ ಹೆಮ್ಮೆ ಅಭಿನಂದನಾ ಸಮಾರಂಭ" ಕಾರ್ಯಕ್ರಮದಲ್ಲಿ ಭಾಗವಹಿಸಿ, ಸನ್ಮಾನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಗಳು, ಸಚಿವರುಗಳು, ಶಾಸಕರುಗಳು ಹಾಗೂ ಇತರೆ ಪ್ರಮುಖರು ಉಪಸ್ಥಿತರಿದ್ದರು;

ದಿನಾಂಕ: 15.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಶಿರಸಿಯಲ್ಲಿ ಅಭಿನಂದನಾ ಸಮಿತಿಯವರು ಆಯೋಜಿಸಿದ್ದ, "ನಮ್ಮ ಕಾಗೇರಿ ನಮ್ಮ ಹೆಮ್ಮೆ ಅಭಿನಂದನಾ ಸಮಾರಂಭ" ದಲ್ಲಿ ಭಾಗವಹಿಸಿ, ಸನ್ಮಾನ ಸ್ವೀಕರಿಸಿದರು. ಅಭಿಮಾನದಿಂದ, ಪ್ರೀತಿಯಿಂದ ಕಾರ್ಯಕ್ರಮ ಸಂಯೋಜಿಸಿದ ಅಭಿಮಾನಿ ಬಳಗದವರಿಗೂ ಹಾಗೂ ಆಗಮಿಸಿದ ಎಲ್ಲ ಸಹೃದಯಿ ಅಭಿಮಾನಿ ಬಂಧುಗಳಿಗೆ ತುಂಬು ಹೃದಯದ ಕೃತಜ್ಞತೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿರವರು, ಸಚಿವರಾದ ಶ್ರೀ ಸುನೀಲ್ ಕುಮಾರ್ ರವರು, ಶ್ರೀ ಹಿರೇಮಗಳೂರು ಕಣ್ಣನ್ ಅವರು, ಶಾಸಕರುಗಳು ಹಾಗೂ ಇತರೆ ಪ್ರಮುಖ ಗಣ್ಯರು ಉಪಸ್ಥಿತರಿದ್ದರು, ಕಾರ್ಯಕ್ರಮ ನಿಮಿತ್ತವಾಗಿ ಆಯೋಜಿಸಿದ್ದ ಖ್ಯಾತ ಸಂಗೀತ ಸಂಯೋಜಕರಾದ ಶ್ರೀ ಅರ್ಜುನ್ ಜನ್ಯ ಮತ್ತು ಗಾಯಕಿ ಶಮಿತಾ ಮಲ್ನಾಡ್ ಹಾಗೂ ತಂಡದವರ ಸಂಗೀತ ರಸಮಂಜರಿ ಕಾರ್ಯಕ್ರಮ ವೀಕ್ಷಿಸಿ, ಮೆಚ್ಚುಗೆ ಸೂಚಿಸಿದರು.

6. ಸುಭದ್ರ ದೇಶ ಕಟ್ಟಲು ಕೈಜೋಡಿಸಿ

ಜಾಗತಿಕ ಮಟ್ಟದಲ್ಲಿ ಆರ್ಥಿಕ ಪ್ರಗತಿಯ ದಿಸೆಯಲ್ಲಿ ಭಾರತ ಇಂದು 11 ರಿಂದ ಐದನೇ ಸ್ಥಾನಕ್ಕೆ ಏರಿದೆ. ದೇಶದಲ್ಲಿ ಪರಿವರ್ತನೆಯ ಈ ಸಂದರ್ಭದಲ್ಲಿ ರಾಜಕಾರಣಿಗಳ ಜೊತೆಗೆ ಎಲ್ಲರ ಹೊಣೆಗಾರಿಕೆ ಜಾಸ್ತಿಯಾಗಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಶಾಸಕರಾಗಿ 25 ವರ್ಷವಾದ ಹಿನ್ನೆಲೆಯಲ್ಲಿ ವಿಧಾನಸಭಾ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

"ಮುಂದಿನ ವರ್ಷಗಳಲ್ಲಿ ಆರ್ಥಿಕ ಪ್ರಗತಿಯಲ್ಲಿ ನಮ್ಮ ದೇಶ ಜಾಗತಿಕ ಮಟ್ಟದ ಮೂರು ದೇಶಗಳಲ್ಲಿ ಒಂದಾಗಲಿದೆ ಎಂಬ ವಿಶ್ವಾಸವಿದೆ. ಅದರೊಂದಿಗೆ ಆರೋಗ್ಯವಂತ ದೇಶ ಕಟ್ಟುವಲ್ಲಿ ಎಲ್ಲರೂ ಕೈಜೋಡಿಸಿ," ಎಂದರು.

ವಿಭಿನ್ನ ವ್ಯಕ್ತಿತ್ವ: "ಇಂದು ರಾಜಕಾರಣಿಗಳನ್ನು ನೋಡುವ ದೃಷ್ಟಿ ಬದಲಾಗಿದೆ. ಆದರೆ, ರಾಜಕಾರಣದ ಅಪಭ್ರಂಶಗಳಿಗೆ ಅವಕಾಶ ಮಾಡಿಕೊಡದ ವ್ಯಕ್ತಿತ್ವ ಕಾಗೇರಿ ಅವರದ್ದಾಗಿದೆ. ಅಧಿವೇಶನದಲ್ಲಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಿ, ಅಗತ್ಯವಿದ್ದಲ್ಲಿ ಸರ್ಕಾರವನ್ನು ಎಚ್ಚರಿಸಿದ್ದಾರೆ," ಎಂದು ಶ್ಲಾಘಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್ "ಸ್ಪೀಕರ್ ಕಾಗೇರಿ ನಿಷ್ಠುರವಾದಿ, ಸಾರ್ವಜನಿಕ ಹಾಗೂ ರಾಷ್ಟ್ರೀಯ ವಿಷಯಗಳ ಆಸಕ್ತಿ ವಹಿಸಿದವರು. ಕಿರಿಯ ಶಾಸಕರಿಗೆ ಮಾರ್ಗದರ್ಶಕರಾಗಿದ್ದಾರೆ," ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, "ವಿಧಾನಸಭಾಧ್ಯಕ್ಷ ಸ್ಥಾನದ ನಿರ್ವಹಣೆ ತಂತಿ ಮೇಲಿನ ನಡಿಗೆಯಂತೆ. ಅದನ್ನು ಕಾಗೇರಿ ಸಮರ್ಥವಾಗಿ ನಿಭಾಯಿಸಿದ್ದಾರೆ," ಎಂದರು.

ಮಾಜಿ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ "ಪಕ್ಷ ಸಿದ್ಧಾಂತ ಮೀರಿ ಮನುಷ್ಯ ಸಂಬಂಧ ಹೊಂದಿದವರು. ಮಂತ್ರಿ, ಸ್ಪೀಕರ್ ಸ್ಥಾನಕ್ಕೇರಿದರೂ ದೊಡ್ಡಸ್ಥಿಕೆ ತೋರದೇ ಸರಳ ವ್ಯಕ್ತಿತ್ವವನ್ನೇ ಮೈಗೂಡಿಸಿಕೊಂಡಿದ್ದಾರೆ. ರಾಜಕಾರಣದಲ್ಲಿ ಸೇವಾ ರಾಜಕಾರಣ ದೂರವಾಗುತ್ತಿದೆ. ಅದನ್ನು ಉಳಿಸಿಕೊಂಡಿದ್ದಾರೆ. ಮತದಾರರ ಗೌರವ ಹೆಚ್ಚಿಸಿದ್ದಾರೆ," ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಸಚಿವ ಆರ್.ವಿ.ದೇಶಪಾಂಡೆ ಮಾತನಾಡಿ "ಕಾಗೇರಿ ಅವರು ಸ್ಪೀಕರ್ ಆಗಿ ಅನೇಕ ಸುಧಾರಣಾ ಕ್ರಮ ಕೈಗೊಂಡಿದ್ದಾರೆ" ಎಂದರು.

ಶಾಸಕ ಹರತಾಳು ಹಾಲಪ್ಪ ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ಶಾಸಕಿ ರೂಪಾಲಿ ನಾಯ್ಕ ಮಾತನಾಡಿದರು. ಗಣಪತಿ ಉಳ್ವೇಕರ್, ಕೆಎಂಎಫ್ ಅಧ್ಯಕ್ಷ ಶಂಕರ ಮುಗದ, ಅಭಿನಂದನಾ ಸಮಿತಿ ಅಧ್ಯಕ್ಷ ಪ್ರೋಫೆಸರ್ ಕೆ.ಎನ್.ಹೊಸ್ಮನಿ ಹಾಜರಿದ್ದರು. ವೇದಿಕೆಯಲ್ಲಿ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರ ತಾಯಿ ಸರ್ವೇಶ್ವರಿ ಹೆಗಡೆ, ಪತ್ನಿ ಭಾರತಿ ಹೆಗಡೆ, ಅಣ್ಣ ಶಿವರಾಮ ಹೆಗಡೆ ಉಪಸ್ಥಿತರಿದ್ದರು.

18 ಕಾಮಗಾರಿಗೆ ಚಾಲನೆ: ಶಿರಸಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರೂ. 250 ಕೋಟಿ ಮೊತ್ತದ 18 ಕಾಮಗಾರಿಗಳಿಗೆ ಶಿಲನ್ಯಾಸ ಹಾಗೂ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿದರು.

ಆದರ್ಶ, ಮೌಲ್ಯ ಉಳಿಸೋಣ: "ಯುವಕರು ದೇಶದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಆದರ್ಶ, ಮೌಲ್ಯಗಳ ಕಾವಲುಗಾರರಾಗಬೇಕು. ಹಣತೆಯಾಗಿ ಮೇಲೆದ್ದು ಬಂದು ಕತ್ತಲನ್ನು ದೂರ ಮಾಡಬೇಕು. ಮುಂದಿನ ಪೀಳಿಗೆಗೆ ಈ ವ್ಯವಸ್ಥೆಯ ಲಾಭ ಸಿಗಬೇಕಾದರೆ ಈಗ ನಾವು ಆತ್ಮಾವಲೋಕನ

ಮಾಡಿಕೊಂಡು ಮುನ್ನಡೆಯಬೇಕು," ಎಂದು ಅಭಿನಂದನೆ ಸ್ವೀಕರಿಸಿ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಪ್ರಾಯಪಟ್ಟರು. "ಅಭಿವೃದ್ಧಿ ಕಾರ್ಯಕ್ಕೆ ಇತಿಮಿತಿಗಳಿವೆ. ಅದು ನಿರಂತರವಾಗಿ ಆಗುತ್ತಿರುವ ಕಾರ್ಯ. ಚುನಾವಣೆ ಎದುರಾದಾಗ ರಾಜಕೀಯ ಮಾಡುವುದು ಇದ್ದೇ ಇರುತ್ತದೆ. ಆದರೆ, ಅದರಿಂದ ಮನುಷ್ಯರ ಮಧ್ಯೆ ಸಂಬಂಧಕ್ಕೆ ಧಕ್ಕೆ ಆಗಬಾರದು. ಅದಕ್ಕಾಗಿ ಪ್ರೀತಿಯಿಂದ ಕರೆದರೆ ಬಂದೇ ಬರುತ್ತೇನೆ. ಜನರೊಂದಿಗೆ ಬಾಂಧವ್ಯ ಇಟ್ಟುಕೊಳ್ಳುವುದಕ್ಕೆ ಬದ್ಧನಾಗಿದ್ದೇನೆ," ಎಂದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:16.01.2023

7. ಬಾಲಬ್ರೂಯಿ ಪರಿವರ್ತಿಸಲು ಅಸ್ತು

ಎರಡು ಶತಮಾನಗಳಿಗೂ ಹಳೆಯ ಮರಗಳಿರುವ, ನಗರದ ಪಾರಂಪರಿಕ ಮರಗಳಿರುವ, ನಗರದ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಬಾಲಬ್ರೂಯಿ ಅತಿಥಿಗೃಹವನ್ನು 'ಕಾನ್‌ಸ್ಟಿಟ್ಯೂಷನಲ್ ಕ್ಲಬ್' ಆಗಿ ಪರಿವರ್ತಿಸಲು ಸರ್ಕಾರಕ್ಕೆ ಹೈಕೋರ್ಟ್ ಅನುಮತಿ ನೀಡಿದೆ. ಜೊತೆಗೆ ಕಟ್ಟಡದ ಹೊರ ವಿನ್ಯಾಸದಲ್ಲಿ ಯಾವುದೇ ರೀತಿಯ ಗೃಹದ ಆವರಣದಲ್ಲಿರುವ ಮರಗಳಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ನ್ಯಾಯಾಲಯ ತಾಕೀತು ಮಾಡಿದೆ.

ಬೆಂಗಳೂರಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮರಗಳನ್ನು ಕತ್ತರಿಸುವುದನ್ನು ಪ್ರಶ್ನಿಸಿ ದತ್ತಾತ್ರೆಯ ಟಿ.ದೇವರೆ ಹಾಗೂ ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ 2018ರಲ್ಲಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿದೆ. ಇದೇ ಅರ್ಜಿಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು, 'ಕಾನ್‌ಸ್ಟಿಟ್ಯೂಷನಲ್ ಕ್ಲಬ್' ನಿರ್ಮಾಣಕ್ಕಾಗಿ ಬಾಲಬ್ರೂಯಿ ಅಥಿತಿ ಗೃಹದ ಆವರಣದಲ್ಲಿರುವ ಮರಗಳನ್ನು ಕಡಿಯದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕೆಂದು ಕೋರಿದ್ದರು. ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಪೀಠ ವಿಚಾರಣೆ ನಡೆಸಿತು. ಸರ್ಕಾರದ ಪರ ವಕೀಲೆ ಪ್ರತಿಮಾ ಹೊನ್ನಾಪುರ ಹಾಜರಾಗಿ, ಅತಿಥಿ ಗೃಹದ ಕಟ್ಟಡದ ರಚನೆಯಲ್ಲಿ ಯಾವುದೇ ಮಾರ್ಪಾಡು ಮಾಡದೆ, ಕೇವಲ ಒಳಾಂಗಣ ವಿನ್ಯಾಸದ ಸೌಂದರ್ಯ ಹೆಚ್ಚಿಸಿ, ಕಾನ್‌ಸ್ಟಿಟ್ಯೂಷನಲ್ ಕ್ಲಬ್ ಆಗಿ ಪರಿವರ್ತಿಸುವ ಪ್ರಸ್ತಾವನೆಯಷ್ಟೇ ಇದೆ. ಈ ಉದ್ದೇಶಕ್ಕಾಗಿ ಬಾಲಬ್ರೂಯಿ ಆವರಣದಲ್ಲಿರುವ ಯಾವುದೇ ಮರವನ್ನು ಕತ್ತರಿಸುವುದಿಲ್ಲ ಅಥವಾ ಹಾನಿ ಮಾಡುವುದಿಲ್ಲ ಎಂದು ನ್ಯಾಯಪೀಠಕ್ಕೆ ಭರವಸೆ ನೀಡಿದರು.

ಸರ್ಕಾರದ ಭರವಸೆಯನ್ನು ದಾಖಲಿಸಿಕೊಂಡ ನ್ಯಾಯಪೀಠ, ಕೇವಲ ಅತಿಥಿ ಗೃಹದ ಒಳಾಂಗಣ ವಿನ್ಯಾಸದ ಸೌಂದರ್ಯ ವೃದ್ಧಿಸಿ, ನಿರ್ವಹಿಸಿರುವ ಕೆಲಸಗಳನ್ನಷ್ಟೇ ಮಾಡಬೇಕು. ಕಟ್ಟಡದ ರಚನೆಗೆ ಯಾವುದೇ ಮಾರ್ಪಾಡು ಮಾಡಬಾರದು. ಅದರ ಆವರಣದಲ್ಲಿರುವ ಮರಗಳಿಗೆ ಯಾವುದೇ ಹಾನಿ ಮಾಡಬಾರದು ಎಂದು ಸರ್ಕಾರಕ್ಕೆ ನಿರ್ದೇಶಿಸುವ ಮೂಲಕ ಅನುಮತಿ ನೀಡಿತು. ದೆಹಲಿಯ ಕಾನ್‌ಸ್ಟಿಟ್ಯೂಷನಲ್ ಕ್ಲಬ್‌ನಲ್ಲಿ ಒಳ್ಳೆಯ ಗ್ರಂಥಾಲಯವಿದೆ. ಅಲ್ಲಿ ಉತ್ತಮ ಕಾಫಿ ಸಿಗುತ್ತದೆ. ಬೆಂಗಳೂರಿನಲ್ಲಿಯೂ ಅದೇ ರೀತಿಯ ವಾತಾವರಣ ನಿರ್ಮಿಸಿದರೆ ಉತ್ತಮ ಎಂದು ಮುಖ್ಯ ನ್ಯಾಯಮೂರ್ತಿಗಳೂ ಮೌಖಿಕ ಸಲಹೆಯನ್ನೂ ನೀಡಿದರು.

ಅರ್ಜಿದಾರರ ಆಕ್ಷೇಪವೇನಾಗಿತ್ತು: ಐತಿಹಾಸಿಕ ಕಟ್ಟಡವಾಗಿರುವ ಬಾಲಬ್ರೂಯಿ ಅತಿಥಿಗೃಹವನ್ನು 1850ರಲ್ಲಿ ಮಾರ್ಕ್ ಕಬ್ಬನ್ ನಿರ್ಮಿಸಿದ್ದು, ಅತಿಥಿಗೃಹದ ಆವರಣದಲ್ಲಿ 200 ರಿಂದ 300 ವರ್ಷಗಳಷ್ಟು ಹಳೆಯದಾದ ಮರಗಳಿವೆ. ಇಲ್ಲಿರುವ ಶತಮಾನಗಳಷ್ಟು ಹಳೆಯ ಮರಗಳನ್ನು ತೆರವು ಮಾಡಿರುವುದರಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗಲಿದ್ದು, ಅಲ್ಲಿರುವ ಪಕ್ಷಿ ಸಂಕುಲಕ್ಕೂ ತೊಂದರೆಯಾಗಲಿದೆ. ಆದ್ದರಿಂದ ನ್ಯಾಯಾಲಯದ ಅನುಮತಿ ಇಲ್ಲದೆ, ಬಾಲಬ್ರೂಯಿ ಕಟ್ಟದ ಆವರಣದಲ್ಲಿರುವ ಯಾವುದೇ ಮರ ಕಡಿಯುವಾದಲೀ, ಸ್ಥಳಾಂತರಿಸುವುದಾಗಲೀ ಮಾಡದಂತೆ ಪ್ರತಿವಾದಿಗಳನ್ನು ನಿರ್ಬಂಧಿಸಬೇಕು ಎಂದು ಕೋರಿದ್ದರು.

ಯಥಾಸ್ಥಿತಿಗೆ ಆದೇಶ: ಅರ್ಜಿಯನ್ನು 2021ರ ಅಕ್ಟೋಬರ್ 7 ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠ, ಬಾಲಬ್ರೂಯಿ ಅತಿಥಿ ಗೃಹವನ್ನು ಕಾನ್‌ಸ್ಟಿಟ್ಯೂಷನಲ್ ಕ್ಲಬ್ ಆಗಿ ಪರಿವರ್ತಿಸುವ ನಿರ್ಧಾರ ಮತ್ತು ಅತಿಥಿ ಗೃಹದ ಆವರಣದಲ್ಲಿನ ಮರಗಳನ್ನು ಕಡಿಯುವುದರ ಸಂಬಂಧ ಅರ್ಜಿಯ ಮುಂದಿನ ವಿಚಾರಣೆವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಸರ್ಕಾರಕ್ಕೆ ಮಧ್ಯಂತರ ಆದೇಶ ನೀಡಿತ್ತು.

ಆಧಾರ: ವಿಜಯವಾಣಿ, ದಿನಾಂಕ:18.01.2023

8. ಮತ ಮಾರಾಟಕ್ಕಿಲ್ಲ ಎಂಬ ತತ್ವಕ್ಕೆ ಬದ್ಧರಾಗಬೇಕು: ಸ್ಪೀಕರ್ ಕಾಗೇರಿ

ಯುವಕರು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾವಲುಗಾರರಾಗಬೇಕು. ಪ್ರತಿಯೊಬ್ಬ ಮತದಾರರು ನನ್ನ ಮತ ಮಾರಾಟಕ್ಕೆ ಇಲ್ಲ ಎಂಬ ತತ್ವಕ್ಕೆ ಅನುಗುಣವಾಗಿ ಮತ ಚಲಾಯಿಸಬೇಕು. ಆಗ ಮಾತ್ರ ಚುನಾವಣೆ ವ್ಯವಸ್ಥೆ ಸುಧಾರಿಸಲು ಸಾಧ್ಯ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು.

ಇಲ್ಲಿನ ಕಲಾಮಂದಿರದಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ ಕುರಿತು ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಚುನಾವಣೆಗಳು ಇಂದು ಹಣ, ಹೆಂಡದ ಮೇಲೆ ನಡೆಯುತ್ತಿವೆ. ಕಾರ್ಯಾಂಗದಲ್ಲಿ ಇರುವ ಜಟಿಲತೆ ಹಾಗೂ ಅಧಿಕಾರಿಗಳ ಕಾರ್ಯವೈಖರಿಯಿಂದ ಜನರು ತತ್ತರಿಸುತ್ತಿದ್ದಾರೆ ಎಂದರು.

ಸರ್ಕಾರದ ಮೂರು ಅಂಗಗಳಲ್ಲಿಯೂ ಲೋಪಗಳು ಕಂಡುಬರುತ್ತಿವೆ. ಸಮಾಜದಲ್ಲಿ ಕಲಬೆರಕೆಯ ಆಹಾರಗಳು ಕಂಡುಬರುತ್ತಿವೆ. ಕೇವಲ ಹಣಗಳಿಕೆಯ ಏಕಮೇವ ಉದ್ದೇಶದಿಂದ ಸಮಾಜದ ವ್ಯವಸ್ಥೆಯನ್ನು ಹಾಳು ಮಾಡಿದ್ದೇವೆ. ರಾಜಕಾರಣಿಗಳ ಇಂದಿನ ಮನಸ್ಥಿತಿಗೆ ಮತದಾರರೇ ಕಾರಣ, ರಾಜಕಾರಣಿಗಳು ಮತ ಕೇಳಲು ಬಂದಾಗ ಮೂಲ ಸೌಕರ್ಯಗಳನ್ನು ಕೇಳುವ ಬದಲು, ಆಸೆ ಆಮಿಷಗಳಿಗೆ ಒಳಗಾಗುತ್ತೀರಿ. ನನ್ನ ಮತ ಮಾರಾಟಕ್ಕೆ ಇಲ್ಲ ಎಂಬ ತತ್ವಕ್ಕೆ ಪ್ರತಿಯೊಬ್ಬರೂ ಬದ್ಧವಾಗಿರಬೇಕು. ಇದು ಅಭಿಯಾನದ ರೀತಿ ಜಾರಿಯಾಗಬೇಕು ಎಂದರು.

ಆಧಾರ: ಉದಯವಾಣಿ, ದಿನಾಂಕ:20.01.2023

9. ಹೊರಟ್ಟಿಯವರಿಗೆ ಪರಿಮಳ ಪ್ರಶಸ್ತಿ

ಮಂತ್ರಾಲಯದಲ್ಲಿ ಸ್ಪೈಸ್ ಮೀಡಿಯಾ ಮತ್ತು ಸೈಕಲ್ ಅಗರಬತ್ತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬವರಾಜ ಹೊರಟ್ಟಿ ಅವರಿಗೆ ಉಭಯ ಸಂಸ್ಥೆಗಳ ವತಿಯಿಂದ ಪರಿಮಳ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾನ್ನಿಧ್ಯ ವಹಿಸಿದ್ದ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳು ಪರಿಮಳ ಪ್ರಶಸ್ತಿ ಪ್ರದಾನ ಮಾಡಿ ಆಶೀರ್ವಚನ ನೀಡಿ, ಹೋರಾಟಕ್ಕೆ ಪರ್ಯಾಯ ಹೆಸರೇ ಹೊರಟ್ಟಿ ಎನ್ನುವಂತಹ ನುಡಿ ಕನ್ನಡ ನಾಡಿನೆಲ್ಲಡೆ ಪ್ರಚಲಿತದಲ್ಲಿದೆ. ತಮ್ಮ ಅನೇಕ ಹೋರಾಟಗಳ ಮೂಲಕ ಸಭಾಪತಿ ಬಸವರಾಜ ಹೊರಟ್ಟಿಯವರು ಕನ್ನಡ ನಾಡಿನ ಎಲ್ಲಾ ಶಿಕ್ಷಕರ ಬಾಳನ್ನು ಬೆಳಗಿದ್ದಾರೆ. ಅದರಲ್ಲೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬಗ್ಗೆ ಅಲ್ಲಿನ ನೌಕರರ ಬಗ್ಗೆ ಹೊರಟ್ಟಿಯವರಿಗೆ ಇನ್ನಿಲ್ಲದ ಪ್ರೀತಿ ಎಂದರು.

ಹೊರಟ್ಟಿಯವರು ಶಿಕ್ಷಕರನ್ನು ಅದೆಷ್ಟು ಪ್ರೀತಿಸಿ, ಗೌರವಿಸುತ್ತಾರೋ ಅದಕ್ಕಿಂತಲೂ ಮಿಗಿಲಾಗಿ ಕನ್ನಡನಾಡಿನ ಶಿಕ್ಷಕ ಬಳಗವು ಅವರನ್ನು ಪ್ರೀತಿಸುತ್ತದೆ ಮತ್ತು ಗೌರವಿಸುತ್ತದೆ ಎಂದರು.

ಒಬ್ಬ ವ್ಯಕ್ತಿ ಸತತ ಎಂಟು ಬಾರಿ ವಿಧಾನ ಪರಿಷತ್ತನ್ನು ಪ್ರವೇಶಿಸುವುದು ಸಾಮಾನ್ಯದ ಮಾತಲ್ಲ. ತಮ್ಮ ಮತದಾರರನ್ನು ಅಷ್ಟು ಅವಧಿಗೆ ಹಿಡಿದಿಡುವುದು ಸುಲಭದ ಮಾತೂ ಅಲ್ಲ. ಸರಿಸುಮಾರು ಅರ್ಧ

ಶತಮಾನಗಳ ಕಾಲ ಹೊರಟ್ಟಿಯವರು ವಿಧಾನಪರಿಷತ್ತಿನಲ್ಲಿ ಇದ್ದಾರೆ ಎಂದರೆ ಅದಕ್ಕೆ ಕಾರಣ ಅವರ ಕೆಲಸದಲ್ಲಿ ಅವರಿಗಿರುವ ಶ್ರದ್ಧೆ ಮತ್ತು ಪ್ರಾಮಾಣಿಕತೆ ಎಂದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹೊರಟ್ಟಿಯವರು, ಮೊದಲಿನಿಂದಲೂ ನಾನು ಶ್ರೀ ಗುರುರಾಯರ ಭಕ್ತನಾಗಿದ್ದೇನೆ. ಶ್ರೀಸುಬುಧೇಂದ್ರತೀರ್ಥರು ಪ್ರದಾನ ಮಾಡಿದ ಈ ಪ್ರಶಸ್ತಿಯನ್ನು ಸ್ವೀಕರಿಸಿ ಪುನೀತನಾಗಿದ್ದೇನೆ ಎಂದರು. ಮಾಜಿ ಸಚಿವ ಆರ್.ವಿ.ದೇಶಪಾಂಡೆ, ಸಚಿವ ಶಂಕರಪಾಟೀಲ ಮುನೇನಕೊಪ್ಪ, ಅವ್ವ ಸೇವಾ ಟ್ರಸ್ಟಿನ ಸಂಚಾಲಕ ಡಾ:ಬಸವರಾಜ ಧಾರವಾಡ, ಕೊಪ್ಪಳದ ಪ್ರಾಣೇಶ ಸೇರಿದಂತೆ ಶ್ರೀಮಠದ ಭಕ್ತರಿದ್ದರು.

ಮಂತ್ರಾಲಯದಲ್ಲಿ ಸ್ಪೈಸ್ ಮೀಡಿಯಾ ಮತ್ತು ಸೈಕಲ್ ಅಗರಬತ್ತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಪರಿಮಳ ಪ್ರಶಸ್ತಿಯನ್ನು ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪ್ರದಾನ ಮಾಡಲಾಯಿತು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:28.01.2023

10. ವಿಷ್ಣುಗುಪ್ತ ವಿವಿ ದೇಶ ಬೆಳಗುವ ಜ್ಞಾನಗೋಪುರ

ಮರಳಿ ಮೂಲಕ್ಕೆ ಎನ್ನುವುದು ನಮ್ಮ ಸಂಸ್ಕೃತಿಯ ತಿರುಳು. ಜೀವನ ಸತ್ ವೃತ್ತ ಇದ್ದಂತೆ ಮತ್ತೆ ಮೂಲ ಬಿಂದುವನ್ನೇ ಮುಟ್ಟುತ್ತದೆ ಎಂದು ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಹೇಳಿದರು.

ಗೋಕರ್ಣದ ಅಶೋಕೆಯಲ್ಲಿ ಶ್ರೀಮಠದ ಕಾರ್ಯಕರ್ತರ ದೇಣಿಗೆಯಿಂದಲೇ ವಿಶಿಷ್ಟವಾಗಿ ನಿರ್ಮಿಸಿದ ಸೇವಾಸೌಧದ ಸಮರ್ಪಣಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

"ಮುಂದಿನ ಪೀಳಿಗೆಗಳು ನೆನೆಪಿಸಿಕೊಳ್ಳುವಂಥ ಘನ ರಾಷ್ಟ್ರ ಕಾರ್ಯವನ್ನು ಮಾಡುವ ಮೂಲಕ ಭಗವಂತನಿಗೆ ಹತ್ತಿರವಾಗೋಣ. ವಿವಿವಿ ಮುಂದಿನ ದಿನಗಳಲ್ಲಿ ರಾಷ್ಟ್ರದ ದೀಪಗೋಪುರ, ಜ್ಞಾನಗೋಪುರವಾಗಿ ತಲೆ ಎತ್ತಿ ನಿಲ್ಲಲಿದೆ. ಸೇವಾಸೌಧ ಶ್ರೀಗಳ ಸೌಧವಷ್ಟೇ ಅಲ್ಲದೇ, ವಿವಿ ಕುಲಪತಿಗಳ ನಿವಾಸವೂ ಆಗಿರುತ್ತದೆ. ಸತ್ ಶಿಕ್ಷಣ ನೀಡುವುದು ಮಠಗಳ ಕರ್ತವ್ಯ. ಮಠಗಳನ್ನು ವಿದ್ಯಾ ಕೇಂದ್ರಗಳೆಂದು ಕೋಶಗಳಲ್ಲಿ ವಿವರಿಸಲಾಗಿದೆ. ಅಂಥ ನಿಜ ಅರ್ಥದ ಮಠ ಇಲ್ಲಿ ಸ್ಥಾಪನೆಯಾಗುತ್ತಿದೆ" ಎಂದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ, "ಗೊಂದಲದ ಸನ್ನಿವೇಶದಲ್ಲಿ ದೇಶಕ್ಕೆ ಬೆಳಕಾದ ಶಂಕರಾಚಾರ್ಯರು ಮೂರು ಬಾರಿ ಪಾದಸ್ಪರ್ಶ ಮಾಡಿದ ಪುಣ್ಯ ಪ್ರದೇಶದಲ್ಲಿ ಹಿಂದೂ ಸಂಸ್ಕೃತಿ, ಸನಾತನ, ಪರಂಪರೆ ಮತ್ತೆ ಪುರುತ್ಥಾನವಾಗುತ್ತಿದೆ. ರಾಘವೇಶ್ವರ ಶ್ರೀಗಳ ನೇತೃತ್ವದಲ್ಲಿ ಮತ್ತೊಂದು ಸಾಮಾಜಿಕ ಕ್ರಾಂತಿ, ಜ್ಞಾನಕ್ರಾಂತಿ ಕುಡಿಯೊಡೆದಿದೆ," ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ, "ಶಿಷ್ಯರ ಕೊಡುಗೆಯಿಂದಲೇ ನಿರ್ಮಾಣವಾದ ಸೇವಾಸೌಧ ನಮ್ಮೆಲ್ಲರ ಸೇವೆಯ ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವ ಕರ್ತವ್ಯ ಸೌಧವಾಗಿ, ರಾಷ್ಟ್ರಸಂಸ್ಕಾರದ ಪ್ರೇರಣಾಕೇಂದ್ರವಾಗಿ ಬೆಳಗಲಿ" ಎಂದು ಆಶಿಸಿದರು.

ತಿರುವುನಂತಪುರ ಅನಂತ ದೇವಸ್ಥಾನದ ಪ್ರಧಾನ ಅರ್ಚಕ ಮಧ್ವರಾಜ್, ಶಾಸಕರಾದ ದಿನಕರ್ ಸುನೀಲ್ ನಾಯ್ಕ ರೂಪಾಲಿ, ಮಲೆನಾಡು ಅಭಿವೃದ್ಧಿ ಮಂಡಳಿ ಗುರುಮೂರ್ತಿ, ಗೋವಾ ಶಾಸಕ ಸಾಲ್ಕರ್, ಪಶ್ಚಿಮಘಟ್ಟ ಕಾರ್ಯದರ್ಶಿ ಗೋವಿಂದ ನಾಯ್ಕ ಉಪಸ್ಥಿತರಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:29.01.2023

11, 'ಮತ ಮಾರಾಟಕ್ಕಿಲ್ಲ' ಜನಾಂದೋಲನವಾಗಲಿ: ಕಾಗೇರಿ

ಚುನಾವಣೆಗಳಲ್ಲಿ ಹಣ, ಹೆಂಡ, ಇತರ ಆಮಿಷಗಳಿಗೆ ಮತ ಮಾರಿಕೊಳ್ಳುವುದಿಲ್ಲ ಎಂದು ಪ್ರತಿ ಪ್ರಜೆಯೂ ಅಭಿಯಾನ ಆರಂಭಿಸಿ, ಶ್ರೇಷ್ಠ ಪ್ರಜಾಸತ್ತಾತ್ಮಕ ಸಂಸದೀಯ ವ್ಯವಸ್ಥೆ ರಕ್ಷಿಸಬೇಕು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದರು.

ವಿಜಯನಗರ ಜಿಲ್ಲೆ ಜಿಬಿಆರ್ ಕಾಲೇಜು ಸುವರ್ಣ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು ಹಣದ ಆಮಿಷ, ಜಾತಿ, ಉಪ ಜಾತಿ, ತೋಳ್ಬಲಕ್ಕೆ ಮತಗಳು ಅಪಾಯದ ಸಂಕೇತ. ಅಂಬೇಡ್ಕರ್ ಅವರ ಕೊಡುಗೆಯಿಂದ ಜಗತ್ತಿಗೆ ಮಾದರಿಯಾದ ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆ ಹೊಂದಿದ್ದೇವೆ. ಆದರ್ಶ ಸಂಸದೀಯ ವ್ಯವಸ್ಥೆ ರಕ್ಷಿಸಿ, ಇನ್ನಷ್ಟು ಶಕ್ತಿಶಾಲಿಯಾಗಿ ಬೆಳಸಬೇಕಿದ್ದರೆ ಯುವ ಸಮೂಹ ಜವಾಬ್ದಾರಿ ಅರಿತು ಪ್ರಜಾಪ್ರಭುತ್ವದ ಕಾವಲುಗಾರರಾಗಿ ಕೆಲಸ ಮಾಡಬೇಕು ಎಂದರು.

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಸೇರಿದಂತೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಆದರ್ಶ ಮೌಲ್ಯಗಳು ಕುಸಿದಿವೆ. ಈ ವಿಷ ವರ್ತುಲದಿಂದ ಹೊರಬೇಕಾದರೆ ಈಗಿನ ವ್ಯವಸ್ಥೆಗೆ ಅಮೂಲಾಗ್ರ ಬದಲಾವಣೆ ತರುವುದು ಅವಶ್ಯವಿದೆ ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:31.01.2023

12. ರಾಜ್ಯ ಮುಂಗಡಪತ್ರ ಅಧಿವೇಶನಕ್ಕೆ ಭರದ ಸಿದ್ಧತೆ

ಇದೇ 10ರಂದು ಪ್ರಾರಂಭವಾಗಲಿರುವ ರಾಜ್ಯ ಬಜೆಟ್ ಅಧಿವೇಶನಕ್ಕೆ ಶಕ್ತಿಸೌಧದಲ್ಲಿ ಭರದ ಸಿದ್ಧತೆಗಳು ನಡೆಯುತ್ತಿವೆ. ವಿಧಾನಸಭೆ ಮತ್ತು ವಿಧಾನ ಪರಿಷತ್ ಕಾರ್ಯದರ್ಶಿಗಳು ಸಂಬಂಧಿಸಿದ ಸಿಬ್ಬಂದಿಗಳ ಸಭೆ ನಡೆಸಿದ್ದು, ಕೆಲ ಸೂಚನೆಗಳನ್ನು ನೀಡಿದ್ದಾರೆ.

ವಿಧಾನಸಭೆ ಅಧಿವೇಶನ ನಡೆಯುವ ಸಭಾಂಗಣ ಮತ್ತು ವಿಧಾನ ಪರಿಷತ್‌ನ ಸಭಾಂಗಣಗಳನ್ನು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಪಾಸಣೆ ಮಾಡಿದ್ದಾರೆ. ದುರಸ್ತಿ ಕೆಲಸಗಳಿದ್ದಲ್ಲಿ ಕೂಡಲೇ ಮಾಡಿ ಮುಗಿಸುವಂತೆ ತಾಕೀತು ಮಾಡಿದ್ದಾರೆ.

ಅಧಿವೇಶನ ನಡೆಯುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಗೂ ಪತ್ರವನ್ನು ಬರೆಯಲಾಗಿದೆ. ಸಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವಂತೆ ಮತ್ತು ಅದಕ್ಕಾಗಿ ತಂಡವನ್ನು ನಿಯೋಜಿಸುವಂತೆಯೂ ಸೂಚಿಸಲಾಗಿದೆ.

ತೋಟಗಾರಿಕಾ ಇಲಾಖೆಗೂ ಪತ್ರವನ್ನು ಬರೆಯಲಾಗಿದ್ದು, ವಿಧಾನಸೌಧದ ಒಳಗೆ ಮತ್ತು ಹೊರಗಡೆ ಪಾಟ್‌ಗಳನ್ನ ಇಡುವ ಮೂಲಕ ಆಕರ್ಷಕವಾಗಿ ಅಲಂಕಾರ ಮಾಡಬೇಕು ಎಂದು ತಿಳಿಸಲಾಗಿದೆ. ಶಾಸಕರಿಂದ ಬರುವ ಪ್ರಶ್ನೆಗಳನ್ನು ಪಡೆದು ಅದಕ್ಕೆ ಸಂಬಂಧಿಸಿದ ಇಲಾಖೆಯಿಂದ ಉತ್ತರ ತರಿಸುವ ಕೆಲಸವೂ ನಡೆಯುತ್ತಿದೆ.

ಆಧಾರ: ವಿಜಯವಾಣಿ, ದಿನಾಂಕ: 01.02.2023

13. ಉಚಿತ ಯೋಜನೆ ರೈತ ವಿರೋಧಿ

"ಜನಪ್ರಿಯತೆಗಾಗಿ ಸರಕಾರಗಳು ಘೋಷಿಸುತ್ತಿರುವ ಎಲ್ಲ ಉಚಿತ ಕೊಡುಗೆಗಳು ರೈತರಿಗೆ ವಿರೋಧವಾಗಿವೆ. ಇಂತಹ ಘೋಷಣೆಗಳ ಬದಲು ರೈತರ ಜೀವನ ನೆಮ್ಮದಿಯಾಗಿರುವಂಥ ಕಾನೂನು ರೂಪಿಸುವುದು ಅತ್ಯವಶ್ಯ," ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ವಿಜಯನಗರ ಪಟ್ಟಣದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ – ಅಮೃತ ಮಹೋತ್ಸವದ 4ನೇ ದಿನ 'ಕೃಷಿಕರ ಚಿಂತನ ಗೋಷ್ಠಿ' ಉದ್ಘಾಟಿಸಿ ಅವರು ಮಾತನಾಡಿದರು. "ಉಳುವವನೇ ಒಡೆಯ ಎಂಬ ಉತ್ತಮ ಕಾನೂನು ಜಾರಿಯಾಗಿದ್ದು ಬಹು ವಿಶೇಷವಾಗಿದೆ. ರೈತ ಪರವಾದ ಕಾನೂನು ಗಟ್ಟಿಯಾಗಿ ರೂಪುಗೊಳ್ಳದಿರುವುದರಿಂದ, ಭೂ ಸ್ವಾಧೀನದಿಂದ ಭೂಮಿ ಕಳೆದುಕೊಂಡ ರೈತರು ತಮ್ಮದೇ ಜಮೀನಿನಲ್ಲಿ ಸ್ಥಾಪನೆಯಾದ ಕೈಗಾಗರಿಕೆಗಳಲ್ಲಿ ಕೂಲಿ ಕೆಲಸಕ್ಕೆ ತೆರಳುತ್ತಿರುವುದು ದುರದೃಷ್ಟಕರ," ಎಂದರು.

ಶೇ.32ರಷ್ಟು ಕೃಷಿ ಭೂಮಿ ವಶ: "ದೇಶದಲ್ಲಿ 1967ರಿಂದ ಇಲ್ಲಿಯವರೆಗೆ ಶೇ.32ರಷ್ಟು ರೈತ ಭೂಮಿಯನ್ನು ವಿವಿಧ – ಕಾರಣಕ್ಕಾಗಿ ವಶಪಡಿಸಿ ಕೊಂಡಿದ್ದು, ರೈತರನ್ನು ಆತಂಕಕ್ಕೆ ತಳ್ಳಿದೆ. ರೈತರ ಭೂಮಿ ಕಬಳಿಸುವ ನೀತಿಗಳೇ ನಮ್ಮ ದೇಶದಲ್ಲಿ ರೂಪುಗೊಳ್ಳುತ್ತಿರುವುದನ್ನು ರೈತರನ್ನು ಕಂಗೆಡಿಸಿರುವ ಜೊತೆಗೆ ಕೃಷಿಯಿಂದ ವಿಮುಖರನ್ನಾಗಿಸುತ್ತಿವೆ," ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತರಳಬಾಳು ಶ್ರೀಗಳು ಸಂತರು: ಆಶೀರ್ವಚನ ನೀಡಿದ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರ ಸ್ವಾಮಿಗಳು, "ತರಳಬಾಳು ಗುರುಗಳು – ಒಬ್ಬ ಸಂತ. ಇವರ ಸೌಜನ್ಯ, ಭಾವುಕತೆ ಮತ್ತು ವಿದ್ವತ್ ಬೇರೆಲ್ಲೂ ಕಾಣಲು ಅಸಾಧ್ಯ," ಎಂದರು.

ಹುಣ್ಣಮೆ ಮಹೋತ್ಸವವೂ ಅಧಿವೇಶನ: ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, "ಸರಕಾರ ಏನು ಮಾಡಬೇಕು ಎಂಬುದನ್ನು ಚರ್ಚಿಸಿ ಅನುಷ್ಠಾನಗೊಳಿಸುವ ಮತ್ತೊಂದು ವಿಧಾನಮಂಡಲದ ಅಧಿವೇಶನವೇ ತರಳಬಾಳು ಹುಣ್ಣಿಮೆ ಸಮಾರಂಭ. ನೀರಾವರಿ ಯೋಜನೆಗಳನ್ನು ಪಟ್ಟು ಬಿಡದೇ ಹಿಡಿದು ಸಾಧಿಸಿ ತೋರುವ ಪರ್ಯಾಯ ಸರಕಾರವೇ ತರಳಬಾಳು ಜಗದ್ಗುರುಗಳು. ಇಂದು ಒಟ್ಟಾಗಿ ಇರದ ಪಂಚಪೀಠಗಳು ಮತ್ತು ಅಷ್ಟಮಠಗಳ ಸ್ವಾಮೀಜಿಗಳು ನಮಗೆ ಮಾರ್ಗದರ್ಶನ ಮಾಡುವುದು ಹೇಗೆ ಸಾಧ್ಯ?" ಎಂದು ಪ್ರಶ್ನಿಸಿದರು.

ಆಧಾರ: ವಿಜಯಕರ್ನಾಟಕ, ದಿನಾಂಕ: 01.02.2023

14. ರಾಜಕಾರಣ, ಮತದಾರರ ಮನಸ್ಥಿತಿ ಒಂದೇ ಆಗಿದೆ

'ಶಾಸಕಾಂಗ, ನ್ಯಾಯಾಂಗದಿಂದ ಹಿಡಿದು ಎಲ್ಲ ಕ್ಷೇತ್ರಗಳಲ್ಲೂ ಮೌಲ್ಯಗಳು ಕುಸಿಯುತ್ತಿದ್ದು, ಈ ವಿಷವರ್ತುಲದಲ್ಲಿ ನಾವೆಲ್ಲರೂ ಸಿಲುಕಿಕೊಂಡಿದ್ದೇವೆ. ಇದರಿಂದ ಹೊರಬಂದು ಪ್ರಜಾಪ್ರಭುತ್ವದ ಕಾವಲುಗಾರರಾಗಬೇಕು' ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು.

ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲಾಡಳಿತ ಹಮ್ಮಿಕೊಂಡಿದ್ದ. 'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ಕುರಿತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜಕಾರಣಿಗಳು ಮಾತ್ರವಲ್ಲ; ಶಾಸನಗಳನ್ನು ಅನುಷ್ಠಾನಗೊಳಿಸುವ ಕಾರ್ಯಾಂಗ, ನೊಂದವರಿಗೆ ನ್ಯಾಯ ಒದಗಿಸುವ ನ್ಯಾಯಾಂಗ, ಆರೋಗ್ಯ, ಶಿಕ್ಷಣ, ಮಾಧ್ಯಮ ಸೇರಿದಂತೆ ಎಲ್ಲ ರಂಗಗಳಲ್ಲೂ ಮೌಲ್ಯಗಳು ಒಂದಲ್ಲಾ ಒಂದು ರೀತಿಯಲ್ಲಿ ಅಧಃಪತನದತ್ತ ಸಾಗುತ್ತಿದೆ. ನಾವೆಲ್ಲ ಈ ವಿಷವರ್ತುಲದ ಭಾಗವಾಗಿದ್ದೇವೆ. ಇದರಿಂದ ಹೊರಬರಬೇಕಿದೆ. ಆ ಮೂಲಕ ಪ್ರಜಾಪ್ರಭು ತ್ವವನ್ನು ಉಳಿಸಬೇಕಿದೆ ಎಂದು ಪ್ರತಿಪಾದಿಸಿದರು.

ರಸ್ತೆ, ನೀರು, ಚರಂಡಿ, ಶಾಲೆ, ಕಾಲೇಜು ಸೇರಿದಂತೆ ಮೂಲಸೌಕರ್ಯಗಳ ಕೇಳುವುದು ಸರಿ. ಆದರೆ, ಚರ್ಚ್, ಮಸೀದಿ, ಮಂದಿರಗಳಲ್ಲೂ ಹಣ ಕೇಳುತ್ತಿದ್ದಾರೆ. ಜಾತಿ–ಉಪಜಾತಿ, ಹಣ, ಮದ್ಯಕ್ಕೆ ಮತ ಮಾರಾಟವಾಗುತ್ತಿದೆ. ಮತ ಪಡೆಯಲು ಹಣ ನೀಡಲು ರಾಜಕಾರಣಿಗಳು ಭ್ರಷ್ಟರಾಗಬೇಕಾಗುತ್ತದೆ. ಹಾಗಾಗಿ, ರಾಜಕಾರಣಿ ಮತ್ತು ಮತದಾರ ಇಬ್ಬರ ಮನಃಸ್ಥಿತಿ ಒಂದೇ ಆಗಿದ್ದು, ಇದು ಹೀಗೆ ಮುಂದುವರಿದರೆ ಯುವಕರು, ಮುಂದಿನ ಪೀಳಿಗೆ ಭ್ರಷ್ಟಾಚಾರದ ವರ್ತುಲದೊಳಗೆ ಸಿಲುಕಿ ಬಲಿಯಾಗಬೇಕಾಗುತ್ತದೆ. ಆದ್ದರಿಂದ ಮತದಾರರು – ರಾಜಕಾರಣಿಗಳು ಇಬ್ಬರಲ್ಲೂ ಸುಧಾರಣೆಯಾಗಬೇಕಿದೆ ಎಂದು ಹೇಳಿದರು.

ಚುನಾವಣೆಯಲ್ಲಿ ಗೆಲುವು ಮುಖ್ಯ. ಆದರೆ, ಅದೊಂದೇ ಮಾನದಂಡವಾಗಬಾರದು. ಪಕ್ಷದ ಸಿದ್ಧಾಂತಕ್ಕೊಳಪಟ್ಟು ಕೆಲಸ ಮಾಡುವ ಕಾರ್ಯಕರ್ತನನ್ನು ಗುರುತಿಸಿ ಟಿಕೆಟ್ ನೀಡಿದರೆ, ಆತ ಪಕ್ಷಕ್ಕಾಗಿ ಕೆಲಸ ಮಾಡುತ್ತಾನೆ. ಪಕ್ಷಾಂತರ ಮಾಡಿ ಬಂದವನಿಗೆ ಟಿಕೆಟ್ ನೀಡಿದರೆ, ಪಕ್ಷ ನೀಡಿದ ಭರವಸೆ ಕೆಲಸಗಳ ಬಗ್ಗೆ ಅರಿವಿರುವುದಿಲ್ಲ. ಹೀಗಾದಾಗ ಪ್ರಣಾಳಿಕೆ ಭರವಸೆ ಈಡೇರಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಸಚಿವ ಮುನಿರತ್ನ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಧಾನಸಭಾ ಕಾರ್ಯದರ್ಶಿ ವಿಶಾಲಾಕ್ಷಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

ಒಂದು ಸತ್ಯವನ್ನು ಹೇಳಿ, ಉಳಿದಿದ ಸತ್ಯಗಳನ್ನು ಮರೆಮಾಚುವುದು ಸಲ್ಲದು.

ಸ್ವಾತಂತ್ರ್ಯದ ಬಗ್ಗೆ ಬರೀ ಒಂದು ಸತ್ಯವನ್ನು ಹೇಳಿ, ಉಳಿದ ಸತ್ಯಗಳನ್ನು ಮರೆಮಾಚಲಾಗುತ್ತದೆ. ಇದು ಸರಿ ಅಲ್ಲ ಎಂದು ವಿಶ್ವೇಶ್ವರ ಹೆಗಡೆ, ಕಾಗೇರಿ ಬೇಸರ ವ್ಯಕ್ತಪಡಿಸಿದರು. ಭಾರತವನ್ನು ಬ್ರಿಟಿಷರು ಮಾತ್ರವಲ್ಲ; ಮೊಘಲರು, ಫ್ರೆಂಚರು, ಡಚ್ಚರು ಹೀಗೆ ಅನೇಕ ಪರಕೀಯರು ಆಳಿದ್ದಾರೆ. ಆ ಪರಕೀಯ ಮನಃಸ್ಥಿತಿಯಿಂದ ಈಗಲೂ ನಾವು ಹೊರಬರಲು ಒದ್ದಾಡುತ್ತಿದ್ದೇವೆ. ಮೊಘಲರ ಆಳ್ವಿಕೆಯಲ್ಲಿ ಕತ್ತಿ ಹಿಡಿದು ಮತಾಂತರಗೊಳಿಸಲಾಯಿತು. ಆಗಲೂ ಅನೇಕ ಮಹಾಪುರುಷರ ತ್ಯಾಗ–ಬಲಿದಾನ ಆಗಿದೆ. ಈ ಇತಿಹಾಸದ ಅರಿವೂ ನಮಗಿರಬೇಕು. ಬರೀ ಒಂದು ಸತ್ಯವನ್ನು ಹೇಳಿ, ಉಳಿದಿದ್ದನ್ನು ಮರೆಮಾಚಬಾರದು ಎಂದು ಖಾರವಾಗಿ ಹೇಳಿದರು.

ನೀವು ಹಣ ಕೊಡಬೇಡಿ; ನಾವು ಕೂಡ ತಗೊಳ್ಳಲ್ಲ

ನೀವು ಯಾಕೆ ದುಡ್ಡು ಕೊಡ್ತೀರಾ? ನೀವು ಕೊಡ್ಬೇಡಿ ನಾವೂ ತಗೊಳ್ಳಲ್ಲ...!

– ಸಂವಾದದಲ್ಲಿ ವಿದ್ಯಾರ್ಥಿಗಳ ಈ ಪ್ರಶ್ನೆ ವಿಧಾನ ಸಭಾಧ್ಯಕ್ಷರನ್ನು ಕ್ಷಣಕಾಲ ಚಕಿತಗೊಳಿಸಿತು.

ಎಲ್ಲ ರಂಗಗಳಲ್ಲೂ ಮೌಲ್ಯಗಳು ಕುಸಿಯುತ್ತಿವೆ. ರಾಜಕಾರಣಿಗಳು ಮಾತ್ರ ಭ್ರಷ್ಟರಾಗಿಲ್ಲ, ಸಂಘ–ಸಂಸ್ಥೆಗಳು, ಚರ್ಚ್, ಮಂದಿರಗಳಲ್ಲೂ ಹಣ ಕೇಳುತ್ತಾರೆ. ನೀವು ತೆಗೆದುಕೊಳ್ಳಬೇಡಿ' ಎಂದು ವಿಶ್ವೇಶ್ವರ ಹೆಗಡೆ, ಕಾಗೇರಿ ಸಲಹೆ ಮಾಡಲು ಮುಂದಾದರು. ಆಗ, ವೇದಿಕೆ ಮುಂಭಾಗದಲ್ಲಿ ಕುಳಿತಿದ್ದ ಕೆಲ ವಿದ್ಯಾರ್ಥಿಗಳು, 'ನೀವ್ಯಾಕೆ ಕೊಡ್ತೀರಾ? ನೀವು ಕೊಡಲಿಕ್ಕೇ ಹೋಗೋಡಿ, ನಾವೂ ತೆಗೆದುಕೊಳ್ಳುವುದಿಲ್ಲ ಎಂದರು.

ಆಧಾರ: ಉದಯವಾಣಿ, ದಿನಾಂಕ: 02.02.2023

15. ಸೇವೆ ವಾಟ್ಸಾಪ್ ಸ್ಟೇಟಸ್‌ಗೆ ಸೀಮಿತವಾಗದಿರಲಿ

ಪ್ರಮಾಣ ಪತ್ರ, ಅಂಕಪಟ್ಟಿ ನೀಡುವುದು ಶಿಕ್ಷಣದ ಧ್ಯೆಯೋದ್ದೇಶ ಅಲ್ಲ. ಹತ್ತಾರು ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಸಂಸ್ಕಾರ ತುಂಬಿ ಅವರು ಆದರ್ಶ ಜೀವನ ನಡೆಸಲು ಪ್ರೇರಣೆಯಾಗುವುದೇ ನಿಜವಾದ ಶಿಕ್ಷಣ ಎಂದು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಕೆ.ಎಂ.ನಂಜಪ್ಪನವರ 111ನೇ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ನಮ್ಮ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕು. ವೇಷಭೂಷಣದಲ್ಲಿ ಪಾಶ್ಚತ್ಯೇಕರಣ ಆಗಿರುವುದಕ್ಕಿಂದ ನಮ್ಮ ನಂಬಿಕೆಗಳ ಮೇಲೆ ಪಶ್ಚಿಮದ ಪ್ರಭಾವ ಗಾಢವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪರಂಪರೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಪ್ರಯತ್ನವನ್ನು ಶಿಕ್ಷಣ ಸಂಸ್ಥೆಗಳು ಕೈಗೊಳ್ಳಬೇಕು ಎಂದು ತಿಳಿಸಿದರು.

ಮುಂದೆ ಒಬ್ಬರಾದರೂ ನಮ್ಮನ್ನು ಸದಾ ನೆನಪಿಡುವಂತಹ ಕೆಲಸ ಮಾಡಬೇಕು. ಒಳ್ಳೆಯವನಾಗಿರು, ಒಳ್ಳೆಯದನ್ನು ಮಾಡು ಎಂಬ ವಿವೇಕಾನಂದರ ವಾಣಿಯಂತೆ ಬದುಕು ರೂಪಿಸಿಕೊಳ್ಳಬೇಕು. ಸೇವೆ ಎಂಬುದು ವಾಟ್ಸಪ್ ಸ್ಟೇಟಸ್‌ಗೆ ಸೀಮಿತ ತೋರಿಕೆಯಾಗದೇ ನಮ್ಮ ಜೀವನದ ಕ್ರಮವಾಗಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರೆಡ್ ಕ್ರಾಸ್ ಸಂಸ್ಥೆಯ ರಾಷ್ಟ್ರೀಯ ಕಾರಕಾರಿಣಿಯ ಮಾಜಿ ಸದಸ್ಯ ನಾಡೋಜ ಡಾ.ವೂಡೇ ಪಿ.ಕೃಷ್ಣ, ರೆಡ್ ಕ್ರಾಸ್‌ನ ರಕ್ತದಾನ ಕಾರ್ಯಕ್ರಮದ ರಕ್ತದಾನ ಸಂಯೋಜಕ ರಾಜು ಚಂದ್ರಶೇಖರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಉಪಸ್ಥಿತರಿದ್ದರು.

ಆಧಾರ: ಉದಯವಾಣಿ, ದಿನಾಂಕ: 02.02.2023

16. ಪ್ರಶಸ್ತಿಗೆ ಮಾನದಂಡ, ಲೋಕಸಭಾ ಸ್ಪೀಕರ್‌ಗೆ ಕಾಗೇರಿ ಸಮಿತಿ ವರದಿ

ಅತ್ಯುತ್ತಮ ವಿಧಾನಸಭೆ, ವಿಧಾನ ಪರಿಷತ್ ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸಲು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅಧ್ಯಕ್ಷತೆಯಲ್ಲಿ ರಚನೆಯಾದ ಪೀಠಾಸೀನಾಧಿಕಾರಿಗಳ ಸಮಿತಿಯು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ವರದಿ ಸಲ್ಲಿಸಿತು.

ಸಂಸತ್ ಭವನದ ವಿಸ್ತರಣಾ ಕಟ್ಟಡದಲ್ಲಿನ ಸಮಿತಿಯ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಸದಸ್ಯರಾದ ಅಸ್ಸಾಂ 'ವಿಧಾನ ಸಭಾಧ್ಯಕ್ಷ ಭಿಶ್ವಜಿತ್ ದೈಮರಿ, ಹೊಸದಿಲ್ಲಿ ವಿಧಾನ ಸಭಾಧ್ಯಕ್ಷ ರಾಮ್ ನಿವಾಸ್ ಗೋಯೆಲ್, ತಮಿಳುನಾಡಿನ ವಿಧಾನ ಸಭಾಧ್ಯಕ್ಷ ಎಂ.ಅಪ್ಪುವು ಸೇರಿದಂತೆ ವಿಧಾನ ಸಭೆಗಳ ಹಾಗೂ ಲೋಕಸಭೆಯ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು. ಚರ್ಚೆಯ ಬಳಿಕ ಲೋಕಸಭಾ ಸ್ಪೀಕರ್‌ಗೆ ವರದಿ ಸಲ್ಲಿಸಲು ತೀರ್ಮಾನವಾಯಿತು. ಅದರಂತೆ ಕಾಗೇರಿ ನೇತೃತ್ವದಲ್ಲಿ ಸಮಿತಿ ಸದಸ್ಯರು ಓಂ ಬಿರ್ಲಾ ಅವರನ್ನು ಭೇಟಿಯಾಗಿ ವರದಿ ಸಲ್ಲಿಸಲಾಯಿತು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 07.02.2023

ದಿನಾಂಕ: 06.02.2023ರಂದು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿತವಾದ ಅತ್ಯುತ್ತಮ ವಿಧಾನಸಭೆ/ವಿಧಾನ ಪರಿಷತ್ತು ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸುವ ಪೀಠಾಸೀನಾಧಿಕಾರಿಗಳ ಸಮಿತಿಯು ನವದೆಹಲಿಯ ಸಂಸತ್ ಭವನದ ಸಮಿತಿ ಕೊಠಡಿಯಲ್ಲಿ ಸಭೆ ಸೇರಿ ಸಮಿತಿಯ ವರದಿಯನ್ನು ಸನ್ಮಾನ್ಯ ಲೋಕಸಭಾ ಅಧ್ಯಕ್ಷರಾದ ಶ್ರೀ ಓಂ ಬಿರ್ಲಾರವರಿಗೆ ನೀಡಲು ತೀರ್ಮಾನಿಸಲಾಯಿತು ಈ ಸಭೆಯಲ್ಲಿ ಸಮಿತಿಯ ಸದಸ್ಯರಾದ ಆಸ್ಸಾಂ ವಿಧಾನಸಭಾಧ್ಯಕ್ಷರಾದ ಶ್ರೀ ಭಿಶ್ವಜಿತ್ ದೈಮರಿ ದೆಹಲಿ ವಿಧಾನಸಭಾಧ್ಯಕ್ಷರಾದ ಶ್ರೀ ರಾಮ್ ನಿವಾಸ ಗೋಯಲ್, ತಮಿಳುನಾಡು ವಿಧಾನ ಸಭಾಧ್ಯಕ್ಷರಾದ ಶ್ರೀ ಎಂ.ಅಪ್ಪಾವು ಅವರು ಹಾಗೂ ವಿಧಾನ ಸಭೆಗಳ ಹಿರಿಯ ಅಧಿಕಾರಿಗಳು ಲೋಕಸಭೆಯ ಅಧಿಕಾರಿಗಳು ಉಪಸ್ಥಿತರಿದ್ದರು, ಸಭೆಯ ನಂತರ ಲೋಕ ಸಭಾಧ್ಯಕ್ಷರನ್ನು ಭೇಟಿ ಮಾಡಿ ಸಮಿತಿಯ ವರದಿಯನ್ನು ಸಲ್ಲಿಸಿದರು;

17. ಕರ್ನಾಟಕ ರೈಲ್ವೆ ಕಾರಿಡಾರ್ ನಿರ್ಮಿಸಿ

ಬಜೆಟ್‌ನಲ್ಲಿ ಕರ್ನಾಟಕ ರೈಲ್ವೆ ಕಾರಿಡಾರ್ ನಿರ್ಮಿಸಲು ಅನುದಾನ ಕಲ್ಪಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸ್ಪೀಕರ್, ಶಿರಸಿ ಶಾಸಕ ವಿಶ್ವೇಶ್ವರ ಹೆಗಡೆ, ಕಾಗೇರಿ ಪತ್ರ ಬರೆದು ಒತ್ತಾಯಿಸಿದ್ದಾರೆ.

ಈ ಯೋಜನೆ ಜಾರಿಯಿಂದ ಕರ್ನಾಟಕ ರೈಲ್ವೆ ವಲಯದಲ್ಲಿ ಕರ್ನಾಟಕ ಹೊಸ ಮೈಲುಗಲ್ಲು ಕಾಣಲಿದೆ. ಒಂದು ಮಾರ್ಗ ಇಡೀ ಮಲೆನಾಡು ಕರ್ನಾಟಕ, ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕವನ್ನು ಸಮಗ್ರವಾಗಿ ಬೆಸೆಯಲಿದೆ. ಈಗಾಗಲೇ ದಾವಣಗೆರೆ ಹಾಗೂ ತುಮಕೂರು ನಡುವೆ ನೇರ ಮಾರ್ಗ ರಚನೆ ಅಂತಿಮ ಹಂತಕ್ಕೆ ಬಂದಿದೆ. ಇದರಿಂದ 15 ಜಿಲ್ಲೆಗಳ ಪ್ರವಾಸೋದ್ಯಮ, ಧಾರ್ಮಿಕ ಟೂರಿಸಂ ಹಾಗೂ ಸರಕು ಸಾಗಣೆಗೆ ಅನುಕೂಲವಾಗಲಿದೆ. ಇದಕ್ಕೆ ಕರ್ನಾಟಕ ರೈಲ್ವೆ ಕಾರಿಡಾರ್ ಎಂಬ ನಾಮಾಂಕದಿಂದ ರಾಜ್ಯದಲ್ಲಿ ಜನಪ್ರಿಯಗೊಳಿಸಲು ಸಹಕಾರಿಯಾಗಲಿದೆ.

ಈ ರೈಲು ಮಾರ್ಗ ಯೋಜನೆಯಿಂದ ಕರ್ನಾಟಕದ ಅರ್ಧಕರ್ಧ ಜಿಲ್ಲೆಗಳನ್ನು ಬೆಸೆಯಬಹುದಾಗಿದೆ. ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣಕ್ಕೆ ಸಂಚರಿಸಲು ಅನುಕೂಲ ಆಗಿದೆ. ಜನರಿಗೆ ಪ್ರಯಾಣದ ಆರ್ಥಿಕ ಹೊರೆ ಕಡಿಮೆಯಾಗಲಿದೆ. ತಾಳಗುಪ್ಪ–ಸಿದ್ದಾಪುರ–ಶಿರಸಿ–ಮುಂಡಗೋಡ–ಹುಬ್ಬಳ್ಳಿ ನಡುವಿನ 158 ಕಿ.ಮೀ. ಉದ್ದದ ರೈಲು ಮಾರ್ಗ ಯೋಜನೆಗೆ ಸರ್ವೆ ಮುಗಿದಿದ್ದು, ಉದ್ದೇಶಿತ ತಾಳಗುಪ್ಪ–ಹುಬ್ಬಳ್ಳಿ ಮಾರ್ಗದಿಂದ ಮಲೆನಾಡು, ಅರೆಮಲೆನಾಡು, ಬಯಲು ಸೀಮೆ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಭಾಗದ 15 ಜಿಲ್ಲೆಗಳಿಗೆ ಅನುಕೂಲವಾಗಲಿದೆ ಎಂದು ಪತ್ರದಲ್ಲಿ ಕಾಗೇರಿ ತಿಳಿಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ: 07.02.2023

18. ರಾಷ್ಟ್ರಪತಿ, ಪಿಎಂ ಭೇಟಿ ಮಾಡಿದ ಕಾಗೇರಿ

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಸೌಹಾರ್ದ ಮಾತುಕತೆ ನಡೆಸಿದರು. ವಿಧಾನಸಭೆ ಹಾಗೂ ವಿಧಾನ ಪರಿಷತ್ ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸುವ ಎಲ್ಲ ರಾಜ್ಯಗಳ ವಿಧಾನ ಸಭಾಧ್ಯಕ್ಷರ ಸಮಿತಿ ಅಧ್ಯಕ್ಷರಾಗಿರುವ ಕಾಗೇರಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ ವರದಿ ಸಲ್ಲಿಸಿದ್ದರು. ಆ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದರು. ನಂತರ ಪ್ರಧಾನಿ ನರೇಂದ್ರ ಮೋದಿಯವರನ್ನು ಕಾಗೇರಿ ಭೇಟಿ ಮಾಡಿ ಚರ್ಚೆ ನಡೆಸಿದರು.

ಆಧಾರ: ಉದಯವಾಣಿ, ದಿನಾಂಕ: 08.02.2023

ದಿನಾಂಕ: 07.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು ನವದೆಹೆಲಿಯ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿ ತದನಂತರ ಸಂಸತ್ ಭವನದಲ್ಲಿ ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿದ ಸಂದರ್ಭ

19. ನಾಳೆಯಿಂದ ವಿಧಾನಮಂಡಲ ಅಧಿವೇಶನ: 17ಕ್ಕೆ ಬಜೆಟ್

ಕ್ಯಾಲೆಂಡರ್ ವರ್ಷದ ಮೊದಲ ಮತ್ತು ಪ್ರಸ್ತುತ ಬಿಜೆಪಿ ಸರಕಾರದ ಅವಧಿಯ ಕೊನೆಯ ಅಧಿವೇಶನ ಫೆಬ್ರವರಿ 10ರಿಂದ ಆರಂಭವಾಗಲಿದ್ದು, ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅಧಿವೇಶನ ಸಾಕಷ್ಟು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಅಧಿವೇಶನದ ಮೊದಲ ದಿನ, ವಿಧಾನ ಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲಿದ್ದು, ಬಳಿಕ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆದು ಸರಕಾರ ಉತ್ತರ ನೀಡಲಿದೆ. ಇದಾದ ಬಳಿಕ ಫೆಬ್ರವರಿ 17 ರಂದು ಸರಕಾರ 2022–23ನೇ ಸಾಲಿನ ಬಜೆಟ್ ಮಂಡಿಸಲಿದೆ. ಆದರೆ, ಹಾಲಿ ಸರಕಾರಕ್ಕೆ ಬಜೆಟ್ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗದ ಕಾರಣ ಮೂರು ಅಥವಾ ನಾಲ್ಕು ತಿಂಗಳ ಲೇಖಾನುದಾನಕ್ಕೆ ಒಪ್ಪಿಗೆ ಪಡೆದು ಕಲಾಪವನ್ನು ಮುಂದೂಡಲಾಗುತ್ತದೆ.

ಎಲ್ಲ ಪಕ್ಷಗಳು ಮುಂಬರುವ ವಿಧಾನಸಭೆ ಚುನಾವಣಾ ಸಿದ್ಧತೆಯಲ್ಲಿರುವುದರಿಂದ ಯಾರಿಗೂ ಅಧಿವೇಶನದ ಬಗ್ಗೆ ಆಸಕ್ತಿ ಇಲ್ಲ.

ಹೀಗಾಗಿ ಎಷ್ಟು ದಿನ ಸದನ ನಡೆಸಬೇಕು ಎಂಬುದನ್ನು ಸಚಿವ ಸಂಪುಟದಲ್ಲಿ ಸರಕಾರ ನಿರ್ಧರಿಸಿಲ್ಲ. ಬದಲಾಗಿ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಎಷ್ಟು ದಿನ ಸದನ ನಡೆಸಬೇಕು ಎಂಬ ಬಗ್ಗೆ ತೀರ್ಮಾನಿಸಲಿದೆ. ಹೀಗಾಗಿ ಈ ಅಧಿವೇಶನ ಎಷ್ಟು ದಿನ ನಡೆಯಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮೂಲಗಳ ಪ್ರಕಾರ ಫೆಬ್ರವರಿ 24ರ ಶುಕ್ರವಾರ ಕಲಾಪಕ್ಕೆ ತೆರೆ ಬೀಳುವ ಸಾಧ್ಯತೆ ಇದೆ.

ರಾಜ್ಯಪಾಲರ ಭಾಷಣ ಮುಗಿದು ಒಂದೇ ವಾರಕ್ಕೆ ಸರಕಾರ ಬಜೆಟ್ ಮಂಡಿಸುವುದರಿಂದ ಅವರ ಭಾಷಣವನ್ನು ಸರಕಾರದ ಮೂರೂವರೆ ವರ್ಷದ ಸಾಧನೆಗಳನ್ನು ತಿಳಿಸಲು ಬಳಸಿಕೊಳ್ಳಬಹುದು. ಭಾಷಣವನ್ನು ರಾಜ್ಯಪಾಲರು ಓದುವುದಾದರೂ ಅದನ್ನು ಸಿದ್ಧಪಡಿಸುವುದು ಸರಕಾರವೇ ಆಗಿರುವುದರಿಂದ ಮುಂಬರುವ ಚುನಾವಣೆಗೆ ಸರಕಾರದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲು ಬಳಸಿಕೊಳ್ಳುವುದು ಖಚಿತ.

ಪ್ರತಿಪಕ್ಷಗಳ ನಡೆ ಏನು?

ಪ್ರಸಕ್ತ ಅಧಿವೇಶನದಲ್ಲಿ ಆಡಳಿತ ಪಕ್ಷದ ವಿರುದ್ಧ ಪ್ರತಿಪಕ್ಷಗಳ ನಡೆ ಏನು ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಸದನಕ್ಕಿಂತ ಹೊರಗಡೆ ಸರಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಸದನವನ್ನು ಗಂಭೀರವಾಗಿ ಪರಿಗಣಿಸುವ ಸಾಧ್ಯತೆಗಳು ಕಮ್ಮಿ. ಆದರೂ ಸಿಕ್ಕಿದ ಅವಕಾಶದಲ್ಲಿ ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಮುಂದಾಗಲಿದೆ. ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲೇ ಸದಸ್ಯರು ಸದನಕ್ಕೆ ಹಾಜರಾಗಿರಲಿಲ್ಲ. ಇದರಿಂದಾಗಿ ಮೊದಲ ದಿನದಿಂದಲೂ ಕಲಾಪ ಕಳೆಗುಂದಿತ್ತು. ಇದೀಗ ರಾಜಕೀಯ ಪಕ್ಷಗಳು ಪ್ರಚಾರದಲ್ಲಿ ತೊಡಗಿರುವುದರಿಂದ ಮತ್ತು ಶಾಸಕರು ಕ್ಷೇತ್ರಗಳತ್ತ ಗಮನಹರಿಸುತ್ತಿರುವುದರಿಂದ ಈ ಅಧಿವೇಶನದಲ್ಲಿ ಜಂಟಿ ಅಧಿವೇಶನ ಮತ್ತು ಬಜೆಟ್ ಮಂಡನೆ ಹೊರತುಪಡಿಸಿ ಉಳಿದ ದಿನಗಳಲ್ಲಿ ಸದಸ್ಯರ ಕೊರತೆ ಎದುರಾಗುವುದು ಖಚಿತ.

ಬಜೆಟ್ ಕುರಿತಷ್ಟೇ ಆಸಕ್ತಿ

ಈ ಮಧ್ಯೆ ಅಧಿವೇಶನವನ್ನು ಪರಿಣಾಕಾರಿಯಾಗಿ ನಡೆಸುವ ಬಗ್ಗೆ ಸರಕಾರಕ್ಕೂ ಆಸಕ್ತಿ ಇಲ್ಲ. ಆದರೆ, ಚುನಾವಣೆಗೆ ಮುನ್ನ ಮಂಡಿಸುತ್ತಿರುವ ಕೊನೆಯ ಬಜೆಟ್ ಆಗಿದ್ದರಿಂದ ಈ ವಿಚಾರದಲ್ಲಿ ಮಾತ್ರ ಸರಕಾರ ಹೆಚ್ಚು ಗಮನಹರಿಸಿದೆ. ಬಜೆಟ್ ಅನುಷ್ಠಾನಗೊಳಿಸಲು ಅವಕಾಶ ಇಲ್ಲದೇ ಇದ್ದರೂ ಅದರಲ್ಲಿ

ಜನಪ್ರಿಯ ಮತ್ತು ಜನಪರ ಘೋಷಣೆಗಳ ಮೂಲಕ ಜನರನ್ನು ಓಲೈಸುವ ಪ್ರಯತ್ನ ಮಾಡಲಿದೆ. ಪ್ರತಿಪಕ್ಷ ಕಾಂಗ್ರೆಸ್ ಗ್ಯಾರಂಟಿ ಹೆಸರಿನಲ್ಲಿ ಈಗಾಗಲೇ ಹಲವು ಉಚಿತ ಘೋಷಣೆಗಳನ್ನು ಮಾಡಿದೆ. ಮತ್ತೊಂದೆಡೆ ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಕೂಡ ಹಲವು ಕಾರ್ಯಕ್ರಮಗಳನ್ನು ಪ್ರಕಟಿಸುತ್ತಿದ್ದಾರೆ. ಇದಕ್ಕೆ ಬಜೆಟ್‌ನಲ್ಲಿ ಸೂಕ್ತ ತಿರುಗೇಟು ನೀಡಲು ಸರಕಾರ ಪ್ರಯತ್ನಿಸಲಿದೆ. ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಲವು ಜನಪ್ರಿಯ ಮತ್ತು ಜನಪರ ಕಾರ್ಯಕ್ರಮಗಳನ್ನು ಪ್ರಕಟಿಸುವ ಮುನ್ಸೂಚನೆ ನೀಡಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ: 09.02.2023

20. ಸಮಯ ಕಡಿಮೆ ಇದ್ದರೂ ಸರ್ವರಿಗೂ ಚರ್ಚೆಗೆ ಅವಕಾಶ

ವಿಶಿಷ್ಟ ಸಂದರ್ಭದ ಬಜೆಟ್ ಅಧಿವೇಶನದಲ್ಲಿ ಮೇಲ್ಮನೆ ಸ್ಪೀಕರ್ ಬಸವರಾಜ ಹೊರಟ್ಟಿಯವರು ಸದನ ಮಾತ್ರವಲ್ಲ, ಇಡೀ ಶಕ್ತಿಕೇಂದ್ರದ (ವಿಧಾನಸೌಧದ) ದಾಖಲೆಯ ಸಾಕ್ಷಿಭಾವ. ಈ ಬಾರಿ ಸಭಾಪತಿ ಎದುರು ಕಾಲಾವಕಾಶದ ಸವಾಲಿದೆ. ಇದನ್ನು ಹೇಗೆ ನಿರ್ವಹಿಸಲಾಗುವುದು? ಬಜೆಟ್ ಕಲಾಪ ನಡೆಯಬೇಕಾದ ರೀತಿಯ ಕುರಿತು ತಮ್ಮ ಅನಿಸಿಕೆಗಳೇನು ಎಂಬುದನ್ನು ಬಸವರಾಜ ಹೊರಟ್ಟಿ 'ಸಂಯುಕ್ತ ಕರ್ನಾಟಕ'ಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ವಿವರಿಸಿದ್ದಾರೆ.

ಚರ್ಚೆಗೆ ಸಮಯವೇ ಇಲ್ಲದ ಈ ಸ್ಥಿತಿಯಲ್ಲಿ ಹೇಗೆ ನಿಭಾಯಿಸುವಿರಿ?

ನನ್ನ ಅನುಭವವೇ ಇದಕ್ಕೆ ಸಹಕಾರಿಯಾಗಲಿದೆ. ಪ್ರಸಕ್ತ ವರ್ಷದ ಬಜೆಟ್ ಚರ್ಚೆಗೆ ಕಡಿಮೆ ಸಮಯ ದೊರೆಯಲಿದೆ. ಮಾತನಾಡಬೇಕೆಂಬ ಸದಸ್ಯರ ಸಂಖ್ಯೆ ಸಹಜವಾಗಿ ಹೆಚ್ಚಿರುತ್ತದೆ. ಆದ್ದರಿಂದ ಎಲ್ಲರಿಗೂ ಅವಕಾಶ ದೊರೆಯುವಂತೆ ಯೋಜನೆ ರೂಪಿಸಿದ್ದೇನೆ. ಬಜೆಟ್ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ, ಅಂಗೀಕಾರಕ್ಕೆ ಮುನ್ನ ಸರ್ಕಾರಕ್ಕೆ ಸಲಹೆ ನೀಡಲು ಪ್ರತಿಯೊಬ್ಬ ಸದಸ್ಯರಿಗೂ ಅವಕಾಶ ದೊರೆಯಲಿದೆ.

ನಿಮ್ಮ ಪ್ರಕಾರ ಬಜೆಟ್ ಚರ್ಚೆಗೆ ಕನಿಷ್ಠ ಎಷ್ಟು ದಿನ ಬೇಕು?

ಹದಿನೈದು ದಿನಗಳಾದರೂ ಪೂರ್ಣ ಪ್ರಮಾಣದಲ್ಲಿ ಮೇಲ್ಮನೆಗೆ ಲಭಿಸಬೇಕು. ಆದರೆ ಸರ್ಕಾರ ನಿಗದಿ ಮಾಡಿದಂತೆ ಲಭಿಸುವ ಸಮಯದಲ್ಲೇ ಹೊಂದಿಸಿಕೊಳ್ಳುವುದು ನಮ್ಮ ಜಾಣೆಯನ್ನು ಅವಲಂಭಿಸಿದೆ. ಈ ಬಾರಿ ಪ್ರತಿದಿನ ಬೆಳಿಗ್ಗೆ 10.30ಕ್ಕೇ ಸದನ ಆರಂಭಿಸಿ ರಾತ್ರಿಯವರೆಗೆ ನಡೆಸಿದರೆ ಈ ಹೊಂದಾಣಿಕೆ ಕಷ್ಟವೇನಲ್ಲ.

ಎಲ್ಲರಿಗೂ ಅವಕಾಶ ದೊರೆಯಬೇಕಾದರೆ ಕಾಲಾವಧಿ ಹೆಚ್ಚಬೇಕಲ್ಲವೇ?

ನಿಸ್ಸಂಶಯವಾಗಿ, ಬೆಳಿಗ್ಗೆಯಿಂದ ರಾತ್ರಿಯವರೆಗೆ ಚರ್ಚಿಸಲೂ ಅವಕಾಶ ನೀಡುವೆ. ಬಜೆಟ್ ಮಂಡನೆಯಾದ ನಂತರ ಸದನಕ್ಕೆ ಈ ಕೆಲಸ ಬಿಟ್ಟರೆ ಇನ್ಯಾವ ಮಹತ್ವದ ಕೆಲಸ ಇರುತ್ತದೆ ಹೇಳಿ. ಆದ್ದರಿಂದ ನಾಲ್ಕೂ ದಿನ ಎಷ್ಟೇ ಹೊತ್ತಾಗಲಿ ಎಲ್ಲರಿಗೂ ಚರ್ಚೆ ಹಾಗೂ ಸರ್ಕಾರಕ್ಕೂ ಅದು ಬಯಸುವಷ್ಟು ವೇಳೆ ಉತ್ತರ ಕೊಡುವುದಕ್ಕೆ ಅವಕಾಶ ದೊರೆಯಲಿದೆ. ಚುನಾವಣೆ ಸಮೀಪಿಸಿರುವುದು ಅಥವಾ ಇನ್ನಿತರ ರಾಜಕೀಯ ಅಂಶಗಳು ಬಜೆಟ್‌ಗೆ ಅಡ್ಡಿ ಪಡಿಸಲಾರವು. ಏಕೆಂದರೆ ರಾಜ್ಯದ ಬಜೆಟ್ ಎಂದರೆ ಮಾಸಿಕ ಕುಟುಂಬ ನಿರ್ವಹಣೆಗೆ ವೇತನವನ್ನು ಸರಿಯಾಗಿ ವಿಂಗಡಿಸುವುದು ಹಾಗೂ ಚರ್ಚಿಸಿ ಮನೆ ಖರ್ಚು ಮಾಡುವಂತೆ ಅಲ್ಲವೇ?

ಬಜೆಟ್ ಚರ್ಚೆಯ ಗುಣಮಟ್ಟಗಳು ಮೊದಲು ಹೇಗಿದ್ದವು?

ನನ್ನ ಅನುಭವದ ಪ್ರಕಾರ, ಇಪ್ಪತ್ತೊಂದನೇ ಶತಮಾನ ಕಾಲಿಡುವುದಕ್ಕೆ ಪೂರ್ವದಲ್ಲಿ ಬಜೆಟ್ ಚರ್ಚೆಗಳು ತುಂಬ ಗಹನವಾಗಿರುತ್ತಿದ್ದವು. ಸದನದಲ್ಲಿ ಕೂತಿರುತ್ತಿದ್ದ ನಾವು ನೈಸರ್ಗಿಕ ಕರೆಯಂತಹ ಅನಿವಾರ್ಯತೆಗೆ ಎದ್ದು ಹೋದರೂ ತರಾತುರಿಯಲ್ಲಿ ಒಳಬಂದು ಕೂರುತ್ತಿದ್ದೆವು. ಆಗ ಅಂತಹ ವಿಶ್ಲೇಷಕರಿದ್ದರು. ತಾವು ಎತ್ತಿಕೊಂಡ ಬಜೆಟ್‌ನ ಅಂಶಗಳಿಗೆ ಕೇಂದ್ರೀಕರಿಸಿ ಮಾತನಾಡುತ್ತಿದ್ದರು. ಓರ್ವ ಶಾಸಕ ಕೈಗೆತ್ತಿಕೊಂಡ ವಿಷಯವನ್ನು ಇನ್ನೋರ್ವ ಚರ್ಚೆಗೆ ಎತ್ತಿಕೊಳ್ಳುತ್ತಿರಲಿಲ್ಲ.

ಅಷ್ಟೇ ಏಕೆ? ಒಬ್ಬರು ಹೇಳಿಯಾಗಿದೆ ಎಂದರೆ ಇನ್ನೊಬ್ಬರು ಸಾಂದರ್ಭಿಕವಾಗಿಯೂ ಪುನರುಕ್ತಿ ಮಾಡುತ್ತಿರಲಿಲ್ಲ. ಇದರಿಂದ ಸದನದ ಸಮಯ ಉಳಿಯುತ್ತಿತ್ತು. ಅಷ್ಟೇ ಅಲ್ಲ, ಕಲಾಪದ ಘನತೆ ಮೇಲುಮಟ್ಟದಲ್ಲಿ ಉಳಿಯುತ್ತಿತ್ತು. ಬಜೆಟ್ ಮೇಲಿನ ಚರ್ಚೆಯ ವೇಳೆ, ಶಿಕ್ಷಣ, ಕಾರ್ಮಿಕ, ಕಲ್ಯಾಣ ಹಾಗೂ ಕೃಷಿಗೆ ಸಂಬಂಧಿಸಿದ ಚಿಂತನ ಮಂಥನಗಳಿಂದ ಪರಿಹಾರಗಳು ಹೊರಹೊಮ್ಮುತ್ತಿದ್ದವು. ಆರ್ಥಿಕವಾಗಿ ಎಷ್ಟು ಹಣ ದೊರಕಿದೆ ಎನ್ನುವುದರಷ್ಟೇ ಪರಿಹಾರವೂ ಮುಖ್ಯವಾಗುವುದರಿಂದ ಈ ಚರ್ಚೆಗಳಿಗೆ ಇನ್ನಿಲ್ಲದ ಆದ್ಯತೆ ಇರುತ್ತಿತ್ತು.

ಈಗ ಗುಣಮಟ್ಟ ಕುಸಿತವಾಗಿದೆಯೇ? ಆಗಿದ್ದರೆ ಕಾರಣವೇನು?

ಹಾಗೇನಿಲ್ಲ. ಈಗಲೂ ಸಾಕಷ್ಟು ಓದಿದವರು ಮತ್ತು ವಿಷಯ ತಿಳಿದುಕೊಂಡು ಮಾತನಾಡುವವರು ಇದ್ದಾರೆ. ಆದರೆ ಇಂಥವರ ಸಂಖ್ಯೆ ಕಡಿಮೆಯಾಗಿರುವುದು ನೋವಿನ ವಿಷಯ. ನವಶತಮಾನದಲ್ಲಿ ರಾಜಕೀಯ ಛಾಯೆಗೇ ಹೆಚ್ಚು ಒತ್ತು ದೊರೆಯುತ್ತಿರುವುದು ಇದಕ್ಕೆ ಕಾರಣ ಇರಬಹುದು ಎಂದುಕೊಂಡಿರುವೆ.

ಬಹುತೇಕರು ಇಡೀ ಬಜೆಟ್ ಪುಸ್ತಕದಲ್ಲಿ ಏನಿದೆ ಎಂಬುದನ್ನು ಅಷ್ಟಾಗಿ ಗಮನಿಸುತ್ತಿಲ್ಲ. ಬಜೆಟ್ ಕೆಳಮನೆಯಲ್ಲಿ ಓದಿ ಮುಗಿದಿರುವುದಿಲ್ಲ, ಅಷ್ಟರ ಒಳಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ಮುಗಿಬೀಳುವ ಪ್ರವೃತ್ತಿ ಹೆಚ್ಚುತ್ತಿದೆ. ಇದರ ಮುಂದುವರಿದ ಭಾಗ ಬಜೆಟ್ ಮೇಲಿನ ಚರ್ಚೆಯ ವೇಳೆಯೂ ಕಂಡು ಬರುವಂತಾಗಿದೆ. ಇದು ನಿಲ್ಲಲಿ ಎಂಬುದೇ ನನ್ನ ಕಳಕಳಿ, ಸಂಸದೀಯ ನಡವಳಿಕೆಗಳ ಬಗೆಗಿನ ಕಾಳಜಿ. ಮುಂಗಡಪತ್ರ ಅತೀ ಗಂಭೀರ ವಿಷಯ ಎನ್ನುವುದನ್ನು ಎಲ್ಲ ಶಾಸಕ ಸಹೋದ್ಯೋಗಿಗಳೂ ಅರ್ಥ ಮಾಡಿಕೊಳ್ಳಲಿ.

ಸರ್ಕಾರದಿಂದ ಮೇಲ್ಮನೆ ಚರ್ಚೆಗೆ ಗಂಭೀರ ಉತ್ತರ ಬರಬಹುದೇ?

ಖಂಡಿತ ಬರುತ್ತದೆ ಎಂಬುದು ನನ್ನ ಅನಿಸಿಕೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಚರ್ಚೆಗಳನ್ನು ಗಂಭೀರವಾಗಿ ಆಲಿಸಿ, ಸಮಾಧಾನಕರ ಉತ್ತರ ಕೊಡುತ್ತಾರೆ; ನಂತರ ಪರಿಷತ್ತು ಅಂಗೀಕಾರದ ಮುದ್ರೆ ನೀಡುತ್ತದೆ ಎಂಬುದು ನನ್ನ ಖಚಿತ ಭಾವನೆ.

ಸರ್ಕಾರ ಬದಲಾದಲ್ಲಿ ಆಯವ್ಯಯವನ್ನು ತಿರಸ್ಕರಿಸಿ ಹೊಸದನ್ನು ಮಂಡಿಸುವ ಅವಕಾಶ ಇದೆಯಲ್ಲವೇ? ಇದ್ದರೆ ಇದು ಸರಿಯೇ?

ಬಹುತೇಕರು ಈ ವಿಷಯವನ್ನು ತಪ್ಪಾಗಿ ಗ್ರಹಿಸಿದ್ದಾರೆ. ಯಾವುದೇ ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡನೆ ಮಾಡಿತೆಂದರೆ, ಅದನ್ನು ಪುನಃ ಒಂದು ವರ್ಷ ಬದಲಿಸಲು ನಿಯಮಾವಳಿಯಲ್ಲಿ ಅವಕಾಶ ಇಲ್ಲ. ಏಕೆಂದರೆ ಸದನ ಆಸ್ತಿ ಇದಾಗಿರುತ್ತದೆ. ಆದರೆ ಬಜೆಟ್‌ಗೆ ಹೆಚ್ಚುವರಿ ಅಂಶಗಳನ್ನು ಸೇರ್ಪಡೆ ಮಾಡಿಕೊಳ್ಳುವ ಅವಕಾಶಗಳು ಮುಕ್ತವಾಗಿರುತ್ತವೆ. ಈ ಅವಕಾಶದ ದುರ್ಲಾಭ ಆಗಬಾರದು ಅಷ್ಟೇ. ಹಾಗೆಯೇ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿಕೊಂಡು ಅಥವಾ ಬದಿಗಿರಿಸಿ ಒಂದು ಸರ್ಕಾರದ ಬಜೆಟ್‌ಅನ್ನು, ಚುನಾವಣೆ ನಂತರ ಬೇರೆ ಸರ್ಕಾರ ಬಂದಲ್ಲಿ ಬದಲಿಸುವುದೂ ಸರಿಯಾದ ನಡೆಯಲ್ಲ. ಏಕೆಂದರೆ ಬಜೆಟ್ ಅಂದ್ರೆ ಬಜೆಟ್ ಅಷ್ಟೇ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 10.02.2023

21. ಶಾಸಕರೇ, ಸದನದ ಘನತೆ ಕಾಪಾಡಿ : ಹೊರಟ್ಟಿ

ಶಾಸಕಾಂಗಕ್ಕೆ ಒಂದು ದೊಡ್ಡ ಘನತೆಯಿತ್ತು, ಆದರೀಗ ಮೊದಲಿನಂತೆ ಶಾಸಕಾಂಗಕ್ಕೆ ಗೌರವ ಉಳಿದಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಳವಳ ವ್ಯಕ್ತಪಡಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ವರ್ಷದಲ್ಲಿ ಕನಿಷ್ಠ 60 ದಿನ ಸದನ ನಡೆಯಬೇಕು ಎಂಬ ಮಾತಿದೆ. ಆದರೆ ಈಗ ಅದು ಸಾಧ್ಯವಾಗುತ್ತಿಲ್ಲ" ಎಂದು ಬೇಸರ ವ್ಯಕ್ತಪಡಿಸಿದರು.

ಅಭಿವೃದ್ಧಿ ಬಗ್ಗೆ ಚಿಂತನೆ ಇರುವವರನ್ನು ಆರಿಸಿ ಕಳುಹಿಸಿದರೆ ಶಾಸಕಾಂಗದ ಮೇಲಿನ ನಂಬಿಕೆ ಮತ್ತೆ ಹೆಚ್ಚಾಗಬಹುದು. ಆದರೆ ಅದು ಸಾಧ್ಯವಾಗುತ್ತದೆ ಎಂಬ ನಂಬಿಕೆ ಇಂದು ಕ್ಷೀಣವಾಗಿದೆ ಎಂದು ಹೇಳಿದರು.

"ಸದನದಲ್ಲಿ ಹಲವು ಮಂತ್ರಿಗಳಿಗೆ ಯಾವ ಉತ್ತರ ನೀಡಬೇಕು ಎಂಬುದೇ ತಿಳಿದಿರುವುದಿಲ್ಲ. ಇದು ತುಂಬ ನೋವಿನ ಸಂಗತಿಯಾಗಿದೆ. ಸದನ ಪ್ರಜಾಪ್ರಭುತ್ವದ ಬೇರಾಗಿದ್ದು, ನಿರಂತರ ಅಭಿವೃದ್ಧಿ ಚರ್ಚೆ ಅತ್ಯಗತ್ಯ. ಈ ಹಿಂದೆ ಚರ್ಚೆಯಲ್ಲಿ ವಾಗ್ವಾದ ನಡೆದರು ಹೊರಗಡೆ ಸ್ನೇಹಿತರಂತೆ ರಾಜಕಾರಣಿಗಳು ಇರುತ್ತಿದ್ದರು. ಆದರೀಗ ಬದ್ಧ ವೈರಿಗಳಂತೆ ನಡೆದುಕೊಳ್ಳುತ್ತಾರೆ. ಅಭಿವೃದ್ಧಿ ಹೊರತುಪಡಿಸಿ ಬೇರೆ ಎಲ್ಲ ಮಾತು ಆಡಲಾಗುತ್ತದೆ. ಸದ್ಯ ಮೂರು ಪಕ್ಷಗಳು ಚುನಾವಣೆ ಎಂದರೆ ಹಬ್ಬ ಎನ್ನುವಂತೆ ಆಚರಣೆ ಮಾಡುತ್ತಿವೆ" ಎಂದು ಹೇಳಿದರು.

ಮೇಲ್ಮನೆಯಲ್ಲೂ ಸದ್ದು ಗದ್ದಲ: ಈ ಬಾರಿ ಬಜೆಟ್ ಅಧಿವೇಶನ ಫೆ.10ರಿಂದ 24ವರೆಗೆ ನಡೆಯಲಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. "ಈಗಾಗಲೇ ಎಲ್ಲ ತಯಾರಿ ಮಾಡಿಕೊಳ್ಳಲಾಗಿದೆ. ಚಿಂತಕರ ಚಾವಡಿ ಎಂದು ಕರೆಸಿಕೊಳ್ಳುವ ಮೇಲ್ಮನೆಯಲ್ಲೂ ಸದ್ದು ಗದ್ದಲ ಹೆಚ್ಚಾಗುತ್ತಿದೆ. ಚರ್ಚೆಗಿಂತ ಘೋಷಣೆ, ಕೈಯಲ್ಲಿ ಪ್ಲೆಕಾರ್ಡ್ ಹಿಡಿದಿರುವುದು ಕಂಡು ಬರುತ್ತಿದೆ. ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಮುಖ್ಯ ಎಂಬುದು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 10.02.2023

22. ಕಡ್ಡಾಯವಾಗಿ ಸದನಕ್ಕೆ ಹಾಜರಾಗಿ : ಸ್ಪೀಕರ್

ವಿಧಾನ ಮಂಡಲ ಎಂದರೆ ಪ್ರಜಾಪ್ರಭುತ್ವದ ದೇಗುಲ, ಕೊನೆಯ ಅಧಿವೇಶನ ಎಂಬ ಕಾರಣಕ್ಕೆ ಉದಾಸೀನ ಮಾಡದೇ ಕಡ್ಡಾಯವಾಗಿ ಸದನಕ್ಕೆ ಹಾಜರಾಗುವಂತೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಶಾಸಕರಿಗೆ ಮನವಿ ಮಾಡಿದ್ದಾರೆ.

ವಿಧಾನಮಂಡಲದ ಜಂಟಿ ಹಾಗೂ ಬಜೆಟ್ ಅಧಿವೇಶನ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಿಂದ ಆಯ್ಕೆಯಾದ ನಮಗೆ ಸಾಕಷ್ಟು ಜವಾಬ್ದಾರಿಗಳಿವೆ. ಇದು ಚುನಾವಣಾ ವರ್ಷವಾದ್ದರಿಂದ ಕ್ಷೇತ್ರಗಳಲ್ಲಿ ಒತ್ತಡ ಇರುತ್ತದೆ ಎಂಬುದು ನಿಜವಾದರೂ ಕಲಾಪವನ್ನು ನಿರ್ಲಕ್ಷಿಸದೇ ಕಡ್ಡಾಯವಾಗಿ ಭಾಗಿಯಾಗಬೇಕು. ಮೊದಲೇ ಕಾರ್ಯಕ್ರಮ ಜೋಡಿಸಿಕೊಂಡಿದ್ದರೆ ಅದನ್ನು ರದ್ದುಪಡಿಸಿ ಸದನಕ್ಕೆ ಬರುವಂತೆ ಮನವಿ ಮಾಡಿದರು.

ಇದು 15ನೇ ವಿಧಾನಸಭೆಯ, 15ನೇ ಅಧಿವೇಶನ, ಶುಕ್ರವಾರ ಬೆಳಗ್ಗೆ 11 ಗಂಟೆಗೆ ರಾಜ್ಯಪಾಲರು ವಿಧಾನಸೌಧದ ಮೆಟ್ಟಿಲ ಮೂಲಕ ಆಗಮಿಸಿ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುತ್ತಾರೆ. ಆ ಬಳಿಕ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಲಾಗುತ್ತದೆ. ಸೋಮವಾರದಿಂದ ಗುರುವಾರದವರೆಗೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತದೆ. 17 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್ ಮಂಡಿಸಲಿದ್ದಾರೆ. ಫೆ 20 ರಿಂದ 24ರ ವರೆಗೂ ಬಜೆಟ್ ಮೇಲಿನ ಚರ್ಚೆ ಮತ್ತು ಅಂಗೀಕಾರ ನಡೆಯಲಿದೆ. ಸೋಮವಾರ ಕಲಾಪ ಸಲಹಾ ಸಮಿತಿ ಸಭೆ ಕರೆಯಲಾಗಿದೆ ಎಂದು ವಿವರಿಸಿದರು.

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ ಸೇರಿದಂತೆ ಆರು ಖಾಸಗಿ ವಿಶ್ವವಿದ್ಯಾಲಯ ವಿಧೇಯಕಗಳು ಮಂಡನೆಯಾಗಲಿದೆ. 9 ದಿನಗಳ ಕಾಲ ನಿಯಮದಂತೆ ಪ್ರಶ್ನೋತ್ತರ, ಶೂನ್ಯ ವೇಳೆ, ಚರ್ಚೆ ನಡೆಯಲಿದೆ. 1,300 ಪ್ರಶ್ನೆಗಳು ಬಂದಿವೆ. ಒಟ್ಟು 11 ದಿನ ಅಧಿವೇಶನ ನಡೆಯಲಿದೆ ಎಂದು ಹೇಳಿದರು.

ವರದಿ ಸಲ್ಲಿಸಲಾಗಿದೆ: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ನನ್ನ ಅಧ್ಯಕ್ಷತೆಯಲ್ಲಿ ಉತ್ತಮ ಸದನ ಪ್ರಶಸ್ತಿ ಆಯ್ಕೆಗೆ ಮಾನದಂಡ ರಚಿಸಲು ದೆಹಲಿ, ಅಸ್ಸಾಂ, ತಮಿಳುನಾಡು ಸ್ಪೀಕರ್ ಅವರನ್ನು ಒಳಗೊಂಡ ಸಮಿತಿ ರಚನೆ ಮಾಡಿದ್ದರು. ಸಾಕಷ್ಟು ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಿ ಫೆ.6ರಂದು ವರದಿ ಸಲ್ಲಿಸಿದ್ದೇವೆ. ಈ ವರ್ಷದಿಂದಲೇ ಜಾರಿಗೆ ಬರುವಂತೆ ಪ್ರಶಸ್ತಿ ಪ್ರದಾನ ಮಾಡುವಂತೆ ಮನವಿ ಮಾಡಿದ್ದೇವೆ ಎಂದರು.

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೌಹಾರ್ದ ಭೇಟಿ ಮಾಡಿ ಚರ್ಚಿಸಿದ್ದೇನೆ. ನಾನು ಸ್ಪೀಕರ್ ಆದ ಬಳಿಕ ಇದುವರೆಗಿನ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡಿ ಬಂದಿದ್ದೇನೆ ಎಂದು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ: 10.02.2023

23. ಪ್ರಸಕ್ತ ಸರ್ಕಾರದ ಕೊನೆಯ ಅಧಿವೇಶನ, ಶಾಸಕರ ನಿರಾಸಕ್ತಿ

ಹೊಸ ವರ್ಷ ಮೊದಲ ಹಾಗೂ ಬೊಮ್ಮಾಯಿ ಸರ್ಕಾರದ ಕೊನೆಯ ಅಧಿವೇಶನ ಶುಕ್ರವಾರ ಆರಂಭವಾಗಲಿದ್ದು, ಇದರ ಗಾಂಭೀರದ 'ನೈಜ' ಮುಖ ಸೋಮವಾರದಿಂದ (ಫೆ. 13) ಕಾಣಲಿದೆ.

ಎಷ್ಟರ ಮಟ್ಟಿಗೆ ಶಾಸಕರು ಗಂಭೀರವಾಗಿ ಭಾಗವಹಿಸುತ್ತಾರೆ; ಎಷ್ಟು ಜನ ಭಾಗವಹಿಸುತ್ತಾರೆ ಹಾಗೂ ಎಂತಹ ಸಮಸ್ಯೆಗಳು ಈ ಬಾರಿ ಪ್ರಸ್ತಾಪವಾಗಲಿವೆ ಎಂಬ ಯಕ್ಷ ಪ್ರಶ್ನೆಯೊಂದಿಗೆ ನಡೆಯುತ್ತಿರುವ

ಅಧಿವೇಶನವಿದು. ಏಕೆಂದರೆ ಚುನಾವಣೆ ಹೊಸ್ತಿಲಿನಲ್ಲಿರುವುದರಿಂದ ಸಾರ್ವಜನಿಕವಾಗಿ ಸಂಪೂರ್ಣ ನಿರಾಸಕ್ತಿ ಆವರಿಸಿದೆ. ಸಹಜವಾಗಿ ಕಲಾಪದ ಮೇಲೆ ಇದು ಪ್ರತಿಫಲಿಸಲಿದೆ.

ಇಂತಹ ನಿರಾಸಕ್ತಿಯ ನಡುವೆಯೂ ನಾಡಿನ ಜನತೆಗೆ ಪೂರ್ಣ ಪ್ರಮಾಣದ ಬಜೆಟ್ ಕೊಡುವುದಕ್ಕೆ ಸರ್ಕಾರ ಸಜ್ಜಾಗಿದೆ. ಈ ಹಿಂದೆಲ್ಲ ಕೊನೆಯ ಅಧಿವೇಶನಗಳಲ್ಲಿ ಲೇಖಾನುದಾನಕ್ಕೆ ಸೀಮಿತವಾಗಿ, ಮುಂಗಾರು ಅಧಿವೇಶನದಲ್ಲಿ ಬಜೆಟ್ ಮಂಡನೆ ಮಾಡುವುದು ಸಾಂಪ್ರದಾಯಿಕ ಕ್ರಮವಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯ ಬಜೆಟ್‌ಅನ್ನು ಕೊನೇ ಅಧಿವೇಶನದಲ್ಲಿ ಮಂಡಿಸುವ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಲಾಗಿದೆ. ಹೀಗಾಗಿ ಪೂರ್ಣ ಪ್ರಮಾಣದ ಬಜೆಟ್ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿರುವುದು ಯಾರಿಗೂ ಅಚ್ಚರಿಯನ್ನೇನೂ ತಂದಿಲ್ಲ.

ಚುನಾವಣಾ ಪ್ರಣಾಳಿಕೆಯ ಮುನ್ನುಡಿಯಂತೆ ಹಾಗೂ ಜನ "ಮಾರು" ಹೋಗುವಂತೆ ಮುಂಗಡಪತ್ರವನ್ನು ಸಂರಚನೆ ಮಾಡುವ ಅನಿವಾರ್ಯತೆ ಬೊಮ್ಮಾಯಿ ಅವರಿಗೆ ಎದುರಾಗಿದೆ.

ಚರ್ಚೆಗಳ ವಿಷಯಕ್ಕೆ ಬಂದರೆ, ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಮೇಲೆ ಗಂಭೀರ ಮಾತುಕತೆ ನಡೆಯುವ ಸಾಧ್ಯತೆ ವಿರಳ, ಹೆಚ್ಚೆಂದರೆ ಒಂದಿಷ್ಟು ವೈಯಕ್ತಿಕ ಟೀಕೆ ಟಿಪ್ಪಣಿಗಳು ಎರಡು ವಾರದ ಅಧಿವೇಶನದಲ್ಲಿ ಕಾಣಬಹುದು ಅಷ್ಟೇ.

ರಾಜಕೀಯವಾಗಿ ಜಗಳ ಕಾಯಲು ಮಾತ್ರ ವಿಪುಲ ಅವಕಾಶಗಳಿವೆ. ಕೇಂದ್ರ ಸಂಸದೀಯ ವ್ಯವಹಾರ ಸಚಿವ ಪ್ರಹ್ಲಾದ ಜೋಶಿ ಜಾತಿಯ ಬಗ್ಗೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆಡಿದ ಮಾತು; ಜೋಶಿ ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದಾಗಿ ಮೇಲ್ಮನೆ ಸದಸ್ಯ ಭೋಜೇಗೌಡ ಆಡಿದ ಮಾತುಗಳು ಒಂದಿಷ್ಟು ಗದ್ದಲ ಎಬ್ಬಿಸಬಹುದು. ಆದರೆ ಇದಕ್ಕೆ ಉತ್ತರಿಸಲು ಖುದ್ದು ಎಚ್.ಡಿ.ಕುಮಾರಸ್ವಾಮಿ ಸದನದಲ್ಲಿ ಇರುವ ಸಾಧ್ಯತೆ ತೀರ – ಕಡಿಮೆ. ಅವರು ಈಗಾಗಲೇ ಪಂಚರತ್ನ ಯಾತ್ರೆಯ ಮೂಲಕ ಚುನಾವಣೆ ಅಖಾಡದಲ್ಲಿ ಬ್ಯೂಸಿಯಾಗಿದ್ದಾರೆ.

ಇದೇ ಸ್ಥಿತಿ ಕಾಂಗ್ರೆಸ್‌ನದ್ದು ಕೂಡ. ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ 'ಪ್ರಜಾಧ್ವನಿ' ಯಾತ್ರೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಈ ಪಕ್ಷಕ್ಕೂ ಹೆಚ್ಚು ಮಾತನಾಡುವ ಹಾಗೆ ಇದ್ದಂತಿಲ್ಲ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 10.02.2023

24. ಸರಕಾರಕ್ಕೆ ಗೌರ್ನರ್ ಪೂರ್ಣಾಂಕ

ಪರಿಶಿಷ್ಟರ ಮೀಸಲು ಹೆಚ್ಚಳ, ಮಹಿಳಾ ಸಬಲೀಕರಣಕ್ಕೆ ಒತ್ತು, ಕನ್ನಡ, ಸಾಹಿತ್ಯ–ಸಂಸ್ಕೃತಿ ಹೆಚ್ಚಿಸಲು ಪ್ರೋತ್ಸಾಹ, ವಿದ್ಯಾರ್ಥಿಗಳಿಗೆ ನೆರವಿನ ಹಸ್ತ... ಒಟ್ಟಾರೆ ರಾಜ್ಯ ಸರಕಾರ ಸರ್ವಾಂಗೀಣ ಹಾಗೂ ಸರ್ವರ ಅಭಿವೃದ್ಧಿಗೆ ಒತ್ತು ನೀಡಿದೆ ಎನ್ನುವ ಮೂಲಕ ರಾಜ್ಯಪಾಲ ಥಾವರ್ ಚಂದ್ ಗೆಲ್ಲೋಥ್ ಅವರು ರಾಜ್ಯ ಸರಕಾರಕ್ಕೆ ಫುಲ್ ಮಾರ್ಕ್ಸ್ ನೀಡಿದ್ದಾರೆ.

ಚುನಾವಣಾ ಹೊಸ್ತಿಲಿನಲ್ಲಿ ಆರಂಭಗೊಂಡ ಪ್ರಸಕ್ತ ಸರಕಾರ ಅಂತಿಮ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲರು, ರಾಜ್ಯ ಸರಕಾರ ಕೃಷಿ ಕೈಗಾರಿಕೆ, ಶಿಕ್ಷಣ, ಮಹಿಳಾ ಸಬಲೀಕರಣ, ಮೂಲಸೌಕರ್ಯ ಹೆಚ್ಚಳ, ಕಾನೂನು ಸುವ್ಯವಸ್ಥೆ ಸೇರಿದಂತೆ ಹಲವು ವಿಷಯದಲ್ಲಿ ರಾಜ್ಯ ಸರಕಾರ ಉತ್ತಮ ಸಾಧನೆಗಳನ್ನು ಮಾಡಿದೆ. ಇದಿಷ್ಟೇ ಅಲ್ಲದೇ ಇಡೀ ದೇಶದಲ್ಲಿಯೇ ಮೊದಲ ಬಾರಿಗೆ 'ಪರಿಸರ ಬಜೆಟ್' ಮಂಡಿಸುವ ಮೂಲಕ, ಅಭಿವೃದ್ಧಿಯೊಂದಿಗೆ ಪರಿಸರದ ಅಭಿವೃದ್ಧಿಗೆ ಒತ್ತು ನೀಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಸುಮಾರು 34 ಪುಟಗಳ 82 ಅಂಶಗಳ ಭಾಷಣವನ್ನು 65 ನಿಮಿಷದ ಅವಧಿಯಲ್ಲಿ ಪೂರ್ಣಗೊಳಿಸಿದ ರಾಜ್ಯಪಾಲರು, ಆರಂಭದಲ್ಲಿ ಕನ್ನಡದಲ್ಲಿಯೇ ಎಲ್ಲರಿಗೂ ಶುಭಾಶಯ ಕೋರಿದರು. ಇಡೀ ದೇಶದಲ್ಲಿಯೇ ಕರ್ನಾಟಕ, ಇತರೆ ರಾಜ್ಯಗಳಿಗಿಂತ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಪ್ರಜಾಸ್ನೇಹಿ ಅಭಿವೃದ್ಧಿ ಸಾಧಿಸಿದ್ದು, ಪ್ರಜಾಸ್ನೇಹಿ ಕಾರ್ಯಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಜನಹಿತ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ ಎಂದು ಶಹಭಾಸ್‌ಗಿರಿ ನೀಡಿದರು.

ಪರಿಶಿಷ್ಟರ ಮೀಸಲು ಹೆಚ್ಚಳ: ಪರಿಶಿಷ್ಟ ಜಾತಿ, ಪಂಗಡದವರ ಅಭಿವೃದ್ಧಿ ರಾಜ್ಯ ಸರಕಾರ ಶೈಕ್ಷಣಿಕ ಹಾಗೂ ಉದ್ಯೋಗದಲ್ಲಿ ಮೀಸಲು ಹೆಚ್ಚಿಸುವ ಐತಿಹಾಸಿಕ ತೀರ್ಮಾನವನ್ನು ಕೈಗೊಂಡಿದೆ. ಇದರನ್ವಯ ಎಸ್ ಸಿಗಳಿಗೆ 15 ರಿಂದ 17 ಹಾಗೂ ಎಸ್‌ಟಿ ಸಮುದಾಯಕ್ಕೆ ಶೇ.3 ರಿಂದ ಏಳಕ್ಕೆ ಮೀಸಲನ್ನು ಹೆಚ್ಚಿಸಲಾಗಿದೆ. ಇದರೊಂದಿಗೆ ಎಸ್‌ಸಿ, ಎಸ್‌ಟಿ ಮಹಿಳೆಯ ಆರ್ಥಿಕ ಅಭಿವೃದ್ಧಿ ಕಾಮಗಾರಿಗಳಲ್ಲಿ ಶೇ.25ರಷ್ಟು ಮೀಸಲನ್ನು ಮಹಿಳೆಯರಿಗೆ ನೀಡಲಾಗಿದೆ ಎಂದು ಹೇಳಿದರು.

ಇನ್ನು ಕೈಗಾರಿಕೆಗಳಿಗೆ ಮೂಲಸೌಕರ್ಯ ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿ ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆ ಭರದಿಂದ ಸಾಗಿದ್ದು ಈಗಾಗಲೇ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಆರಂಭಗೊಳ್ಳಲಿದೆ. ಇನ್ನು ದಾವಣಗೆರ ಹಾಗೂ ಕೊಪ್ಪಳ ವಿಮಾನ ನಿಲ್ದಾಣ ಯೋಜನೆ ಮುಂದಿನ ಸಾಲಿನಲ್ಲಿ ಆರಂಭಿಸಲಾಗುವುದು, ಕೇಂದ್ರ ರೈಲ್ವೆ ಸಚಿವಾಲಯದೊಂದಿಗೆ ಶೇ. 50:50 ಪಾಲುದಾರಿಕೆಯೊಂದಿಗೆ 9 ಹೊಸ ರೈಲು ಮಾರ್ಗಗಳ ಯೋಜನೆ ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಹೇಳಿದರು.

ಅದ್ಧೂರಿ ಸ್ವಾಗತ: ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು ಆಗಮಿಸಿದ ರಾಜ್ಯಪಾಲರಿಗೆ ರತ್ನಗಂಬಳಿ ಸ್ವಾಗತ ನೀಡಲಾಯಿತು. ವಿಧಾನಸೌಧದ ಭವ್ಯ, ಮೆಟ್ಟಿಲುಗಳ ಮೂಲಕ ವಿಧಾಸಭೆ ಸಭಾಂಗಣಕ್ಕೆ ಆಗಮಿಸಿದ ರಾಜ್ಯಪಾಲರನ್ನು ಸಾಂಪ್ರದಾಯಿಕ ಪೊಲೀಸ್ ಬ್ಯಾಂಡ್ ಮೂಲಕ ಬರಮಾಡಿಕೊಳ್ಳಲಾಯಿತು, ರಾಜ್ಯಪಾಲರನ್ನು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹಾಗೂ ಉಭಯ ಸದನಗಳ ಕಾರ್ಯದರ್ಶಿ ಅವರು ಸಂಪ್ರದಾಯದಂತೆ ರಾಜ್ಯಪಾಲರನ್ನು ವಿಧಾನಸಭೆ ಸಭಾಂಗಣಕ್ಕೆ ಬರಮಾಡಿಕೊಂಡರು.

ಗೌರ್ನರ್ ಭಾಷಣದ ಹೈಲೈಟ್ಸ್

- ವಿದ್ಯಾಸಿರಿ ಯೋಜನೆಯಿಂದ 10.79 ಲಕ್ಷ ವಿದ್ಯಾರ್ಥಿಗಳಿಗೆ 484 ಕೋಟಿ ರೂ ನೇರ ವರ್ಗಾವಣೆ.
- ಸರಕಾರದಿಂದ ನೂರು ಗೋ ಶಾಲೆ ಆರಂಭ, ಇದಕ್ಕಾಗಿ ನೌಕರರಿಂದ 26 ಕೋಟಿ ದೇಣಿಗೆ.
- ಕರ್ನಾಟಕ ರಾಜ್ಯವನ್ನು ಅತ್ಯುತ್ತಮ ಕರಾವಳಿ ರಾಜ್ಯವೆಂದು ಗುರುತಿಸಿರುವುದು ಹೆಮ್ಮೆ.
- ಶೂನ್ಯ ಬಡ್ಡಿದರದಲ್ಲಿ 20.19 ಲಕ್ಷ ರೈತರಿಗೆ 15,066 ಕೋಟಿ ರೂ ಅಲ್ಪಾವಧಿ ಬೆಳೆ ಸಾಲ.
- ನರೇಗಾದಡಿ 27.85 ಲಕ್ಷ ಕುಟುಂಬದ 50 ಜನರಿಗೆ ಕೆಲಸ, ಇದಕ್ಕಾಗಿ 6038 ಕೋಟಿ ರೂ ವೆಚ್ಚ.
- ಉನ್ನತ ಶಿಕ್ಷಣಕ್ಕೆ ಒತ್ತು: ಏಳು ಹೊಸ ವಿವಿ, ಏಳು ಎಂಜಿನಿಯರಿಂಗ್ ಕಾಲೇಜು ಆರಂಭ.
- 11333 ಪೌರಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಿರುವುದು ಐತಿಹಾಸಿಕ ತೀರ್ಮಾನ.

ಆಧಾರ: ವಿಶ್ವವಾಣಿ, ದಿನಾಂಕ: 11.02.2023

ದಿನಾಂಕ: 08-02-23 ರಂದು ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ್ ಎಸ್ ಹೊರಟ್ಟಿ ರವರು ಹಾಗೂ ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರಾ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ರವರು ದಿನಾಂಕ: 10-02-2023 ರಂದು ಉಭಯ ಸದನಗಳ 149 ನೇ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರಿಗೆ ಆಹ್ವಾನ ನೀಡಿದರು.

ದಿನಾಂಕ: 10-02-23 ರಂದು ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್ ಮೂಲಕ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ವಿಧಾನಮಂಡಲಕ್ಕೆ ಆಗಮಿಸಿದ್ದು, ಈ ವೇಳೆ ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ್ ಎಸ್ ಹೊರಟ್ಟಿ, ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರ□ ನೆ ಹಾಗೂ ಸಣ್ಣ ನೀರಾವರಿ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿ ಸ್ವಾಗತಿಸಿದರು.

ದಿನಾಂಕ: 10-02-23 ರಂದು 15ನೇ ವಿಧಾನಮಂಡಲ ಅಧಿವೇಶನಕ್ಕೆ ಜಂಟಿ ಸದನವನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಭಾಷಣ ಮಾಡಿದರು. ಈ ವೇಳೆ ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ್ ಎಸ್ ಹೊರಟ್ಟಿ ಹಾಗೂ ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ರವರುಗಳು ಉಪಸ್ಥಿತರಿದ್ದರು.

25. ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ

ಜ್ಞಾನಯೋಗಾಶ್ರಮದ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿ, ಮಾಜಿ ಶಾಸಕರಾದ ಡಾ.ಹೆಗ್ಗಪ್ಪ ದೇಶಪ್ಪ ಲಮಾಣಿ, ಎಲ್.ಟಿ.ತಿಮ್ಮಪ್ಪ ಹೆಗಡೆ, ಗಾಯಕಿ ವಾಣಿ ಜಯರಾಂ ಸೇರಿದಂತೆ ಅಗಲಿದ ಗಣ್ಯರಿಗೆ ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಧಾನಸಭೆಯಲ್ಲಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಸಂತಾಪ ನಿರ್ಣಯ ಮಂಡಿಸಿ ಜ್ಞಾನಯೋಗಾಶ್ರಮದ ಜ್ಞಾನ ಯೋಗಿ ಸಿದ್ದೇಶ್ವರ ಸ್ವಾಮೀಜಿ, ಮಾಜಿ ಶಾಸಕರಾದ ಡಾ.ಹೆಗಪ್ಪ ದೇಶಪ್ಪ ಲಮಾಣಿ, ಎಲ್.ಟಿ.ತಿಮ್ಮಪ್ಪ ಹೆಗಡೆ, ಗಾಯಕಿ ವಾಣಿ ಜಯರಾಂ, ಶಿವಾನಂದ ಅಂಬಡಗಟ್ಟಿ, ಶಿಕ್ಷಣ ತಜ್ಞ ಡಾ.ಎಂ.ಕೆ.ಪಾಂಡುರಂಗಶೆಟ್ಟಿ, ಕಲಾವಿದ ಡಾ.ಬಿ.ಕೆ.ಎಸ್.ವರ್ಮಾ ಹಾಗೂ ಪತ್ರಕರ್ತ ಕೆ.ಸತ್ಯನಾರಾಯಣ ಅವರಿಗೆ ಸಂತಾಪ ಸಲ್ಲಿಸಿದರು. ಸಿಎಂ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಬಂಡೆಪ್ಪ ಕಾಶಂಪೂರ್, ಮಾಜಿ ಸಚಿವರಾದ ಕೆ.ಆರ್.ರಮೇಶ್ ಕುಮಾರ್, ಕೆ.ಪಾಟೀಲ್ ಮಾತನಾಡಿದರು.

ಸಿದ್ದೇಶ್ವರ ಶ್ರೀಗಳ ಕುರಿತು ಮಾತನಾಡಿದ ಸಿಎಂ ಬಸವರಾಜ ಬೊಮ್ಮಾಯಿ, 'ಸಿದ್ದೇಶ್ವರ ಶ್ರೀಗಳಿಗೆ ಸಂತಾಪ ಸೂಚಿಸುವ ಅಗತ್ಯವಿಲ್ಲ, ಏಕೆಂದರೆ ಅವರು ತಮ್ಮ ತತ್ವಾದರ್ಶಗಳ ಮೂಲಕ ಅಮರರಾಗಿದ್ದಾರೆ.

ತ್ಯಾಗದ ಶಕ್ತಿ ಏನೆಂಬುದನ್ನು ತೋರಿಸಿಕೊಟ್ಟ ನಿಜವಾದ ಸಂತ, ಸಮಾಜದಲ್ಲಿ ಅಪ್ರಿಯವಾದ ಸತ್ಯವನ್ನು ಹೇಳುವುದು ಕಷ್ಟ ಆದರೆ ಸಿದ್ದೇಶ್ವರ ಶ್ರೀಗಳು ಸತ್ಯವನ್ನು ಪ್ರಿಯವಾಗಿ ಮನದಟ್ಟು ಮಾಡುತ್ತಿದ್ದರು' ಎಂದು ಅಭಿಪ್ರಾಯಪಟ್ಟರು.

ಪಕ್ಷಾತೀತ ಪ್ರಶಂಸೆ: ವಿಧಾನ ಪರಿಷತ್ತಿನಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ನುಡಿ ನಮನ ಸಲ್ಲಿಸಲಾಯಿತು. ಅಧಿವೇಶನದ ಆರಂಭದ ದಿನ ಅಗಲಿದ ಗಣ್ಯರು ಮತ್ತು ಸಾಧಕರಿಗೆ ಸದನದಲ್ಲಿ ಸಂತಾಪ ಸೂಚಿಸುವುದು ಸಂಪ್ರಾದಾಯ. ಆದರೆ, ಸಿದ್ದೇಶ್ವರ ಸ್ವಾಮೀಜಿಯವರಿಗೆ ಶ್ರದ್ಧಾಂಜಲಿ ಬದಲಿಗೆ ನುಡಿನಮನ ಸಲ್ಲಿಸಿದ್ದು ಪಕ್ಷಾತೀತ ಪ್ರಶಂಸೆ ವ್ಯಕ್ತವಾಯಿತು. ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಿದ ಬಳಿಕ ಸಭಾಪತಿ ಬಸವರಾಜ ಹೊರಟ್ಟಿಯವರು ಸಿದ್ದೇಶ್ವರ ಸ್ವಾಮೀಜಿ ಯವರಿಗೆ ನುಡಿನಮನ ಪ್ರಸ್ತಾಪವನ್ನು ಸದನದ ಮುಂದೆ ಮಂಡಿಸಿದರು.

ಆಧಾರ: ಉದಯವಾಣಿ, ದಿನಾಂಕ: 11.02.2023

26. ಹುಟ್ಟೂರಿಗೆ ಕೈಲಾದ ಕೊಡುಗೆ ನೀಡಿ

ಹುಟ್ಟೂರನ್ನು ತೊರೆದು ನಗರ ಪ್ರದೇಶಗಳಿಗೆ ಬಂದವರು ತಮ್ಮ ಮೂಲ ಬೇರನ್ನು ಮರೆಯಬಾರದು. ತಮ್ಮ ಕೈಲಾದ ಕೊಡುಗೆಯನ್ನು ಹುಟ್ಟೂರಿಗೆ ನೀಡಬೇಕು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಗೊ.ರು.ಚ. ಗ್ರಾಮ ವಿಕಾಸ ಪ್ರತಿಷ್ಠಾನ ಗೊಂಡೇದಹಳ್ಳಿ ವತಿಯಿಂದ ಗುಬ್ಬಿ ತೋಟದಪ್ಪ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದ್ದ ಯುವಜನ ಸಮಾವೇಶದಲ್ಲಿ 'ನಾವು ನಡೆದ ಹಾದಿ' (ಸಂಪಾದಕ: ಗೊ.ರು. ಚನ್ನಬಸಪ್ಪ) ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಶಿಕ್ಷಣ, ಉದ್ಯೋಗ ಸೇರಿ ವಿವಿಧ ಕಾರಣಗಳಿಗೆ ಹುಟ್ಟೂರನ್ನು ತೊರೆದು ನಗರ ಪ್ರದೇಶಗಳಿಗೆ ಹೋಗುತ್ತಿದ್ದಾರೆ. ಬದಲಾದ ಸನ್ನಿವೇಶದಲ್ಲಿ ಬೆರಳಣಿಕೆಯಷ್ಟು ಜನ ಮಾತ್ರ ಹಳ್ಳಿಯತ್ತ ನೋಡುತ್ತಿದ್ದಾರೆ. ಬಹುತೇಕರು ತಾವು ಜನ್ಮ ಪಡೆದ ಹಳ್ಳಿಯನ್ನು ಮರೆಯುತ್ತಿರುವುದು ದುರದೃಷ್ಟಕರ ಎಂದರು.

ನಾನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವನಾಗಿದ್ದ ಅವಧಿಯಲ್ಲಿ ಹಳೇ ವಿದ್ಯಾರ್ಥಿಗಳನ್ನು ಶಾಲೆಗೆ ಕರೆತಂದು, ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ಸುತ್ತೋಲೆ ಹೊರಡಿಸಿದ್ದೆ. ಇದರಿಂದ ನನ್ನೂರಿನ ಸೇರಿ ಹಲವು ಶಾಲೆಗಳು ಅಭಿವೃದ್ಧಿಗೊಂಡವು. ಹಳ್ಳಿಗಳಲ್ಲಿನ ಸಮಸ್ಯೆ ನಿವಾರಣೆಗೆ ಪ್ರತಿಯೊಬ್ಬರೂ ಪ್ರತಿಜ್ಞೆ ಕೈಗೊಳ್ಳಬೇಕು ಎಂದರು.

ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, ಗ್ರಾಮಗಳು ವಿಕಾಸಗೊಳ್ಳಬೇಕಾದರೆ ಅಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ನಮಗೆ ಹುಟ್ಟಿನಿಂದ ಕಣ್ಣು–ಕಿವಿಗಳು– ಇವೆ. ಆದರೆ, ಅವು ತತ್ಕಾಲಕ್ಕೆ ಪ್ರತಿಕ್ರಿಯಿಸುವುದಿಲ್ಲ. ಎಷ್ಟೋ ಜನಕ್ಕೆ ಹುಟ್ಟಿದ ಊರು, ಬೆಳೆದ ಪರಿಸರ, ಅನುಭವಿಸಿದ ಬವಣೆ, ನೆರೆಹೊರೆಯವರ ಒಡನಾಟ ಮರೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಊರಿನ ಬಂಧುಗಳ ಆತ್ಮನಿವೇದನೆಯಿಂದ ಮೂಕವಿಸ್ಮಿತ

ನಮ್ಮ ಗ್ರಾಮದಲ್ಲಿ ಹುಟ್ಟಿ ಬೆಳೆದು, ಉದ್ಯೋಗ ಮತ್ತಿತರ ಕಾರಣಗಳಿಗೆ ನಗರಗಳಲ್ಲಿ ನೆಲೆಸಿರುವವರ ಜೀವನಾನುಭವವನ್ನು ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ನಮ್ಮ ಊರಿನ ಬಂಧುಗಳ ಆತ್ಮನಿವೇದನೆಯ ಬರಹಗಳನ್ನು ಓದಿ, ಮೂಕವಿಸ್ಮಿತನಾಗಿದ್ದೇನೆ. ನಗರಗಳಲ್ಲಿ ವಾಸಿಸುತ್ತಿರುವ ವೃತ್ತಿನಿರತರು ಮತ್ತು ನಿವೃತ್ತರು ತಮ್ಮ ಹಳ್ಳಿಗಳಿಗೆ ಯಾವುದಾದರೂ ರೂಪದಲ್ಲಿ ಕೈಲಾದಷ್ಟು ನೆರವು ನೀಡಬೇಕು ಎಂದು ಪ್ರತಿಷ್ಠಾನದ ಪೋಷಕ ಹಾಗೂ ಕೃತಿಯ ಸಂಪಾದಕ ಗೊ.ರು. ಚನ್ನಬಸಪ್ಪ ಮನವಿ ಮಾಡಿದರು.

ಆಧಾರ: ವಿಜಯವಾಣಿ, ದಿನಾಂಕ: 13.02.2023

27. ತಾಳಗುಪ್ಪ–ಹುಬ್ಬಳ್ಳಿ ರೈಲು ಯೋಜನೆ ಆಶಾಭಾವನೆ

ಕರಾವಳಿಯ ಬಂದರು ಸಂಪರ್ಕದ ಮಹತ್ವದ ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗಕ್ಕೆ ಒಂದೆಡೆ ಅಡ್ಡಿ ಆತಂಕ ಮುಂದುವರಿದಿದ್ದರೆ, ಇನ್ನೊಂದೆಡೆ ಮತ್ತೊಂದು ಮಹತ್ವದ ಯೋಜನೆಯಾದ ತಾಳಗುಪ್ಪ–ಹುಬ್ಬಳ್ಳಿ ರೈಲು ಮಾರ್ಗದ ಬಗ್ಗೆ ಆಶಾಭಾವನೆ ಹೆಚ್ಚತೊಡಗಿದೆ.

ಸೂಕ್ಷ್ಮ ಪರಿಸರ ಸಂಬಂಧಿ ಸಮಸ್ಯೆಗಳು ಹಾಗೂ ಸವಾಲುಗಳು ಇಲ್ಲದ ಈ ಯೋಜನೆಯ ಕುರಿತು ಸರ್ವೇ ಕಾರ್ಯ ಈಗಾಗಲೇ ಮುಕ್ತಾಯಗೊಂಡಿದೆ. ಆದ್ದರಿಂದ ಯೋಜನೆ ಜಾರಿಯ ಬಗ್ಗೆ ರಾಜ್ಯ ಸರ್ಕಾರ ಶೀಘ್ರ ಗಮನಹರಿಸಬೇಕೆಂಬ ಆಗ್ರಹಕ್ಕೆ ಪೂರಕವಾದ ಬೆಳವಣಿಗೆಗಳು ನಡೆಯುತ್ತಿವೆ.

ರಾಜ್ಯ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್ ಮಂಡನೆಯ ಈ ಸಂದರ್ಭದಲ್ಲಿ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಮೂಲಕ ಅನುದಾನ ಬಿಡುಗಡೆಗೆ ಅನುವು ಮಾಡಿಕೊಡುವಂತೆ ಮುಖ್ಯಮಂತ್ರಿಗೆ ಪತ್ರ ಬರೆದಿರುವುದು ಮಹತ್ವ ಪಡೆದುಕೊಂಡಿದೆ.

15 ಜಿಲ್ಲೆಗಳಿಗೆ ಅನುಕೂಲ: ಪ್ರಸ್ತಾಪಿತ ಯೋಜನೆಯು ಶಿವಮೊಗ್ಗ ಜಿಲ್ಲೆಯ ತಾಳೆಗುಪ್ಪದಿಂದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ–ಶಿರಸಿ–ಮುಂಡಗೋಡ ಮೂಲಕ ಹುಬ್ಬಳ್ಳಿ ಸಂಪರ್ಕದ 158 ಕಿ.ಮೀ.ಉದ್ದದ ರೈಲು ಮಾರ್ಗ ಯೋಜನೆಯಾಗಿದೆ. ಮಲೆನಾಡು, ಅರೆಮಲೆನಾಡು, ಬಯಲು ಸೀಮೆ ಪ್ರದೇಶದ ಸಂಪರ್ಕದ ದೃಷ್ಟಿಯಲ್ಲಿ ಪ್ರಾಮುಖ್ಯತೆ ಹೊಂದಿದೆ. ಈ ಯೋಜನೆ ಅನುಷ್ಠಾನದಿಂದ ರೈಲು ಸೌಲಭ್ಯ ವಂಚಿತ ಪ್ರದೇಶಕ್ಕೆ ನ್ಯಾಯ ಒದಗಿಸಿದಂತೆ ಆಗುತ್ತದೆ. ಅಲ್ಲದೆ ಇದರಿಂದ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ವ್ಯಾಪ್ತಿಯ 15 ಜಿಲ್ಲೆಗಳಿಗೆ ಅನುಕೂಲವಾಗಲಿದೆ ಎಂದು ಪ್ರತಿಪಾದಿಸಲಾಗುತ್ತಿದೆ.

ಕೇಂದ್ರ ಸಚಿವರ ಸ್ಪಂದನೆ: ಕಳೆದ ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಅಶ್ವಿನ್ ವೈಷ್ಣವ ಅವರಿಗೆ ತಾಳಗುಪ್ಪ–ಹುಬ್ಬಳ್ಳಿ ರೈಲು ಮಾರ್ಗದ ಯೋಜನೆ ಜಾರಿ ಕುರಿತು ರೈಲು ಹೋರಾಟ ಸಮಿತಿಯವರು ಮನವಿ ಮಾಡಿಕೊಂಡಿದ್ದಾರೆ. ಅಲ್ಲದೆ, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಗಳ ಆಗ್ರಹದ ಪತ್ರವನ್ನು ಕೇಂದ್ರ ಸಚಿವರಿಗೆ ನೀಡಲಾಗಿದೆ. ಈ ಸಂದರ್ಭದಲ್ಲಿ ಈ ರೈಲು ಮಾರ್ಗ ಯೋಜನೆ ಶೀಘ್ರ ಜಾರಿಯ ಬಗ್ಗೆ ಕೇಂದ್ರ ಸಚಿವರು ಸ್ಪಂದನೆ ನೀಡಿದ್ದಾರೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಆಧಾರ: ವಿಜಯಕರ್ನಾಟಕ, ದಿನಾಂಕ:13.02.2023

28. ಸದನದಿಂದ ಹೊರನಡೆದ ಕಾಂಗ್ರೆಸ್ ಶಾಸಕರು

ಬಿಜೆಪಿ ಶಾಸಕ ಪಿ.ರಾಜೀವ್ ಅವರು ವಿಧಾನಸಭೆಯಲ್ಲಿ ತುರ್ತುಪರಿಸ್ಥಿತಿ ಮತ್ತು ಇಂದಿರಾಗಾಂಧಿ ಬಗ್ಗೆ ಸುಧೀರ್ಘವಾಗಿ ಮಾತನಾಡಿದ್ದರಿಂದ ಬೇಸತ್ತ ಕೆಲ ಕಾಂಗ್ರೆಸ್ ಸದಸ್ಯರು ಕಲಾಪದಿಂದ ಅಸಮಾಧಾನಗೊಂಡು ಮೌನವಾಗಿ ಹೊರನಡೆದರು.

ರಾಜ್ಯಪಾಲರ ಭಾಷಣ ವಂದನಾ ನಿರ್ಣಯದ ಪ್ರಸ್ತಾವ ಅನುಮೋದಿಸಿ ಮಾತನಾಡಿದ 'ಬಿಜೆಪಿ ಸಂವಿಧಾನ ಬದಲಿಸಲು ಯತ್ನಿಸುತ್ತಿದೆ' ಎಂದು ಕಾಂಗ್ರೆಸ್ ನಾಯಕರು ಪದೇ ಪದೇ ಸುಳ್ಳು ಹೇಳುತ್ತಿದ್ದಾರೆ. ಇತಿಹಾಸದಲ್ಲಿ ತಮ್ಮ ಕುರ್ಚಿ ಉಳಿಸಿಕೊಳ್ಳಲು ಸಂವಿಧಾನ ಬದಲು ಮಾಡಿದ್ದು ಯಾರಾದರೂ ಇದ್ದರೆ ಅದು ಇಂದಿರಾಗಾಂದಿ, ಬಿಜೆಪಿಯವರು ಎಂದೂ ಆ ಕೆಲಸ ಮಾಡಿಲ್ಲ' ಎಂದು ರಾಜೀವ್ ಹೇಳಿದರು.

ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಎಂ.ಕೃಷ್ಣಪ್ಪ, ಎಷ್ಟು ಬಾರಿ ತುರ್ತುಪರಿಸ್ಥಿತಿ ಬಗ್ಗೆ ಮಾತನಾಡುತ್ತೀರಿ, ಅವೆಲ್ಲ ಎಲ್ಲರಿಗೂ ಗೊತ್ತು, ಪದೇ ಪದೇ ಮಾತನಾಡುವ ಅಗತ್ಯವಿದೆಯೇ' ಎಂದು ಪ್ರಶ್ನಿಸಿದರು. ಇದಕ್ಕೆ ಕಾಂಗ್ರೆಸ್‌ನ ಶ್ರೀನಿವಾಸಮಾನೆ ಅವರೂ ದ್ವನಿಗೂಡಿಸಿದರು.

'ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಹಕ್ಕು ಇದೆ. ಅದನ್ನು ಮೊಟಕುಗೊಳಿಸಲು ಯಾರಿಗೂ ಸಾಧ್ಯವಿಲ್ಲ' ಎಂದು ಹೇಳಿದ ರಾಜೀವ್ ಅವರು ತಮ್ಮ ಮಾತು ಮುಂದುವರಿಸಿರು. ಆಗ ಬೇಸತ್ತು ಕೃಷ್ಣಪ್ಪ ಮತ್ತು ಇನ್ನೂ ಕೆಲವರು ಗೊಣಗುತ್ತಾ ಸದನದಿಂದ ಹೊರನಡೆದರು.

'ರಾಜ್ಯದ ಚಿತ್ರಣ ಬದಲು': 'ಡಬಲ್ ಇಂಜಿನ್' ಸರ್ಕಾರದಿಂದಾಗಿ ರಾಜ್ಯದ ಚಿತ್ರಣವೇ ಸಂಪೂರ್ಣ ಬದಲಾಗಿದೆ ಎಂದು ಬಿಜೆಪಿಯ ಸಿ.ಟಿ.ರವಿ ತಿಳಿಸಿದರು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿ ಮಾತನಾಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯೂ ಸೇರಿ ಹಲವು ಯೋಜನೆಗಳು ರಾಜ್ಯ ಅಭಿವೃದ್ಧಿಯ ಪಥದಲ್ಲಿ ದಾಪುಗಾಲಿಟ್ಟಿದೆ. ರಾಜ್ಯಪಾಲರ ಭಾಷಣವೇ ನಮ್ಮ ರಿಪೋರ್ಟ್ ಕಾರ್ಡ್ ಎಂದು ಅವರು ತಿಳಿಸಿದರು.

ವಿಧಾನಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣಕ್ಕೆ ಬಿಜೆಪಿಯ ತೇಜಸ್ವಿನಿ ಗೌಡ ಮಾತನಾಡಿದರು. ಬಿಜೆಪಿಯ ಡಿ.ಎಸ್.ಅರುಣ್ ನಿರ್ಣಯ ಮಂಡನೆಯ ಪ್ರಸ್ತಾವವನ್ನು ಅನುಮೋದಿಸಿದರು.

'ನಮ್ಮದು ರಾಜ್ಯದ ಸರ್ವರಿಗಾಗಿ ಕೆಲಸ ಮಾಡುತ್ತಿರುವ ಸರ್ಕಾರ, ರೈತರು, ವಿದ್ಯಾರ್ಥಿಗಳು, ಅಲ್ಪಸಂಖ್ಯಾತರು, ಮಹಿಳೆಯರು ಎಲ್ಲರ ಅಭಿವೃದ್ಧಿಗಾಗಿ ಸರ್ಕಾರ ಶ್ರಮಿಸುತ್ತಿದೆ. ಅದನ್ನೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ' ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:14.02.2023

29. ಅಧಿವೇಶನಕ್ಕೆ ಚುನಾವಣೆ ಗ್ರಹಣ ಸದಸ್ಯರಿಲ್ಲದೆ ಕಲಾಪ ಭಣಭಣ

11 ದಿನಗಳ ಕಾಲ ನಿಗದಿಗೊಂಡಿರುವ ವಿಧಾನಮಂಡಲದ ಜಂಟಿ ಅಧಿವೇಶನಕ್ಕೆ ಇಂದಿಗೆ ಎರಡು ದಿನ. ವಿಧಾನಸಭೆಯ ಸದಸ್ಯ ಬಲ 224. ವಿಧಾನಪರಿಷತ್ ಸದಸ್ಯರ ಬಲ 75. ಆದರೆ ಸದನಕ್ಕೆ ಬಂದವರ ಸಂಖ್ಯೆ ಕೇವಲ 45. ಮೇಲ್ಮನೆ ಸಂಖ್ಯೆ ಆರಂಭವಾದಾಗ ಹಾಜರಿದ್ದವರು 34 ಮಂದಿ ಮಾತ್ರ.

ಅಧಿಕೃತ ಘೋಷಣೆಗೆ ಮುನ್ನವೇ ಇಡೀ ರಾಜ್ಯದಲ್ಲಿ ಚುನಾವಣೆ ಜ್ವರ ವ್ಯಾಪಿಸುತ್ತಿದೆ. ರಾಜಕೀಯ ಪಕ್ಷಗಳ ಯಾತ್ರೆಗಳು ಒಂದೆಡೆಯಾದರೆ ತಮ್ಮ ತಮ್ಮ ಕ್ಷೇತ್ರಗಳನ್ನು ಭದ್ರಪಡಿಸಿಕೊಳ್ಳುವ ನಿಟ್ಟಿನಲ್ಲಿ ಶಾಸಕರು ನಿರಂತರಾಗಿದ್ದಾರೆ. ಇದರ ಪರಿಣಾಮವೋ ಅಥವಾ ಜನಪ್ರತಿನಿಧಿಗಳ ನಿರ್ಲಕ್ಷವೋ, ಮಹತ್ವದ ಚರ್ಚೆ ನಡೆಸಬೇಕಾದ ಪ್ರಜಾಪ್ರಭುತ್ವದ ದೇಗುಲ ಬಿಕೋ ಎನ್ನುತ್ತಿದೆ. ಈ ಮೊದಲೇ ಊಹಿಸಿದಂತೆ ಶಾಸಕರ ಗೈರುಹಾಜರಿ ಪ್ರಮಾಣ ದೊಡ್ಡದಾಗಿದೆ. ಸಹಜವಾಗಿ ಇದು ಸಭಾಧ್ಯಕ್ಷರನ್ನು ಕೆರಳಿಸಿದೆ.

ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ್ದ ಭಾಷಣದ ಮೇಲೆ 4 ದಿನಗಳ ಉಭಯ ಸದನಗಳಲ್ಲಿ ಚರ್ಚೆ ನಡೆಯಬೇಕಿದೆ. ಆದರೆ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾದ ಜವಾಬ್ದಾರಿಯುತ ಸದಸ್ಯರೇ ಗೈರಾಗಿರುವುದು ಶಾಸನಸಭೆಗೆ ಶೋಭೆತರುವಂತದ್ದಲ್ಲ. ಕಲಾಪ ಆರಂಭದ ವೇಳೆ ವಿಧಾನಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ 45. ದಿನದ ಅಂತ್ಯಕ್ಕೆ ಸಚಿವರ ಸಹಿತ ಆಡಳಿತ, ವಿಪಕ್ಷಗಳ ಸೇರಿದಂತೆ ಇದ್ದ ಸದಸ್ಯರ ಸಂಖ್ಯೆ 21 ಮಾತ್ರ. ಪರಿಷತ್ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಆರಂಭದಲ್ಲಿ 34 ಸದಸ್ಯರಿದ್ದರೆ ದಿನದ ಅಂತ್ಯಕ್ಕೆ ಆ ಸಂಖ್ಯೆ 20ಕ್ಕೆ ಇಳಿದಿತ್ತು.

ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ, ಜೆಡಿಎಸ್ ಪಂಚರತ್ನ ಯಾತ್ರೆ ಕೈಗೊಂಡಿದ್ದರೆ ಬಿಜೆಪಿಯಿಂದ ಸಧ್ಯಕ್ಕೆ ಯಾವುದೇ ಯಾತ್ರೆ ಇಲ್ಲದಿದ್ದರೂ ಸದನದಲ್ಲಿ ಪಾಲ್ಗೊಂಡಿದ್ದ ಶಾಸಕರ ಸಂಖ್ಯೆ ಬೆರಳಣಿಕೆಯಷ್ಟು ಮಾತ್ರ. ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಮುಖ್ಯ ಸಚೇತಕರಿಗೆ ಎಲ್ಲಾ ಸದಸ್ಯರು ಕಡ್ಡಾಯವಾಗಿ ಕಲಾಪಕ್ಕೆ ಹಾಜರಾಗುವಂತೆ ಕ್ರಮ ಕೈಗೊಳ್ಳಿ ಎಂದು ಸ್ಪಷ್ಟ ಸೂಚನೆ ನೀಡಿದ್ದಾರೆ.

ವಿಧಾನಸಭೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರೇ ಕಳೆದೆರಡು ದಿನಗಳಿಂದ ಗೈರಾಗಿದ್ದಾರೆ. ಮಾಜಿ ಸಿ.ಎಂ.ಕುಮಾರಸ್ವಾಮಿ ಅವರ ಕಥೆಯೂ ಇದೇ ಆಗಿದೆ. ಇನ್ನೂ 3 ದಿನಗಳ ಕಾಲ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಬೇಕಿದೆ. ಫೆಬ್ರವರಿ 17 ರಂದು ಬಜೆಟ್ ಮಂಡನೆಯಾಗಲಿದ್ದು ಆ ಬಳಿಕವೆ 4 ದಿನಗಳ ಕಾಲ ಬಜೆಟ್ ಮೇಲೆ ಚರ್ಚೆ ಆಗಬೇಕಿದೆ. ಆದರೆ ಸದಸ್ಯರಲ್ಲಿನ ನಿರಾಸಕ್ತಿ ಸಭಾಧ್ಯಕ್ಷರ ಅಸಮಾಧಾನ ಗಮನಿಸಿದಲ್ಲಿ ಅಧಿವೇಶನ ಅವಧಿ ಮೊಟಕಾದರೂ ಅಚ್ಚರಿಪಡಬೇಕಿಲ್ಲ.

ಅಧೀವೇಶನಕ್ಕಿಂತ ಮಹತ್ವದ್ದೂ ಬೇರೇನೂ ಇರಲಾರದು. ಕ್ಷೇತ್ರದ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸುವುದಕ್ಕೆ ಶಾಸಕರಿಗೆ ಸಮಯವಿಲ್ಲ, ಅಂದರೆ ಇದಕ್ಕೆ ಏನು ಹೇಳುವುದು. ಶಾಸಕರ ಹೊಣೆಗಾರಿಗೆ ಬಗ್ಗೆ ನಾನೇ ನಾಡಿನ ಜನತೆಗೆ ಸಂದೇಶ ರವಾನಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಆ ಕೆಲಸ ಮಾಡುವೆ ಎಂದು ವಿಧಾನ ಸಭಾಧ್ಯಕ್ಷರು ತಿಳಿಸಿದರು.

ಆಧಾರ: ವಿಶ್ವವಾಣಿ, ದಿನಾಂಕ:14.02.2023

30. ಸದನ ಖಾಲಿ... ಖಾಲಿ... ಕೊನೇ ಕಲಾಪಕ್ಕೆ ಬರಲು ಸ್ಪೀಕರ್ ಮನವಿ

ಸದನ ಖಾಲಿ.. ಖಾಲಿ... ಕಲಾಪಕ್ಕೆ ಬನ್ನಿ ಎಂದು ಸ್ಪೀಕರ್ ಮನವಿ. ಅಧಿವೇಶನದ ಎರಡನೇ ದಿನವು ಸದನ ಖಾಲಿ ಖಾಲಿ ಆಗಿತ್ತು. ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ

ಚರ್ಚೆ ಸಂದರ್ಭದಲ್ಲಿ ಕಾಂಗ್ರೆಸ್‌ನ 4, ಜೆಡಿಎಸ್‌ನ 2 ಹಾಗೂ ಬಿಜೆಪಿಯ 16 ಸದಸ್ಯರು ಮಾತ್ರ ಹಾಜರಿದ್ದರು. ಭೋಜನಾ ವಿರಾಮದ ಗಮನ ಸೆಳೆಯುವ ಸೂಚನೆ ಪ್ರಸ್ತಾಪ ಕೊಟ್ಟಿದ್ದವರೂ ಗೈರು ಆಗಿದ್ದರು. ಬೆಳಗ್ಗೆ ಪ್ರಶ್ನೋತ್ತರ ಸಂದರ್ಭದಲ್ಲಿಯೂ ಸದಸ್ಯರು ಹಾಜರಿರಲಿಲ್ಲ. ಹೀಗಾಗಿ, ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಇದು ನಮ್ಮ ಅವಧಿಯ ಕೊನೆಯ ಅಧಿವೇಶನ. ಸಾಮಾಜಿಕವಾಗಿ, ರಾಜಕೀಯವಾಗಿಯೂ ನಮ್ಮನ್ನು ಬೆಳೆಸಿದ ಮನೆ. ಭಾವನಾತ್ಮಕವಾಗಿಯೂ ನಮಗೆ ಸದನ ಮಹತ್ವದ್ದು, ಫೆಬ್ರವರಿ 24ರವರೆಗೆ ಸದನ ನಡೆಯಲಿದ್ದು, ಎಲ್ಲರೂ ತಪ್ಪದೇ ಭಾಗವಹಿಸಿ ಎಂದು ಮನವಿ ಮಾಡಿದರು.

ಪರಿಷತ್‌ನಲ್ಲಿ ಸಚಿವರ ಗೈರು : ವಿಧಾನಪರಿಷತ್‌ನಲ್ಲಿ ಸದಸ್ಯರ ಹಾಜರಾತಿ ಇತ್ತಾದರೂ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಬೇಕಾದ ಸಚಿವರು ಗೈರು ಹಾಜರಾಗಿದ್ದರು. ಇದಕ್ಕೆ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾತನಾಡಿ ಸಚಿವರೂ ಸದನದಲ್ಲಿ ಇರಬೇಕು. ಜೊತೆಗೆ, ಪ್ರಶ್ನೆ ಕೇಳಿದ ಸದಸ್ಯರೂ ಇರಬೇಕು ಎಂದು ಹೇಳಿದರು.

ಆಧಾರ: ಉದಯವಾಣಿ, ದಿನಾಂಕ: 14.02.2023

31. ರಾಜ್ಯ ಬಜೆಟ್‌ಗೆ ಮುಹೂರ್ತ ನಿಗದಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಜೆಟ್ ಮಂಡನೆಗೆ ಸಮಯ ನಿಗದಿಯಾಗಿದ್ದು, ಫೆಬ್ರವರಿ 17ರಂದು ಬೆಳಗ್ಗೆ 10.15ಕ್ಕೆ ರಾಜ್ಯದ 2023–24ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ.

ಕಲಾಪ ಸಲಹಾ ಸಮಿತಿ ಸಭೆ ಬಳಿಕ ಸದನದಲ್ಲಿ ಈ ವಿಷಯ ಪ್ರಕಟಿಸಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ, ಫೆಬ್ರವರಿ 17ರಂದು ಬಜೆಟ್ ಮಂಡನೆಯಾಗಲಿದ್ದು, ಫೆಬ್ರವರಿ 23ರಂದು ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯವರು ಉತ್ತರ ನೀಡಲಿದ್ದಾರೆ. ಫೆಬ್ರವರಿ 24ರಂದು ಕಲಾಪಕ್ಕೆ ತೆರೆ ಬೀಳಲಿದೆ ಎಂದು ಹೇಳಿದರು. ಬುಧವಾರ (ಫೆಬ್ರವರಿ 15) ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಕ್ತಾಯವಾಗಲಿದ್ದು, ಗುರುವಾರ (ಫೆಬ್ರವರಿ 16) ಮುಖ್ಯಮಂತ್ರಿಯವರು ಚರ್ಚೆಗೆ ಉತ್ತರ ನೀಡಲಿದ್ದಾರೆ. ಇದರ ಜತೆಗೆ ಕೆಲವು ವಿಧೇಯಕಗಳನ್ನು ಮಂಡಿಸಲಾಗುತ್ತದೆ ಎಂದು ತಿಳಿಸಿದರು.

ಫೆಬ್ರವರಿ 17ರಂದು ಬಜೆಟ್ ಮಂಡನೆ ಬಳಿಕ 20 ರಿಂದ 22ರವರೆಗೆ ಬಜೆಟ್ ಮೇಲೆ ಚರ್ಚೆ ನಡೆಯಲಿದೆ. 23ರಂದು ಮುಖ್ಯಮಂತ್ರಿ ಉತ್ತರಿಸಲಿದ್ದಾರೆ. 24 ರಂದು ಕಲಾಪದ ಅಂತಿಮ ದಿನವಾಗಿದ್ದು, ಅಂದು ವಿಧೇಯಕಗಳ ಮೇಲೆ ಚರ್ಚೆಯಾಗಿ ಅಂಗೀಕಾರ ಪ್ರಕ್ರಿಯೆ ನಡೆಸಲಾಗುವುದು. ಪ್ರಸ್ತುತ ಏಳು

ವಿಧೇಯಕಗಳನ್ನು ಮಂಡಿಸುವುದಾಗಿ ಸರಕಾರ ಹೇಳಿದ್ದು, ಇನ್ನೂ ಒಂದೆರಡು ವಿಧೇಯಕಗಳು ಸೇರಿಕೊಳ್ಳಬಹುದು ಎಂದರು.

ಫೆಬ್ರವರಿ 20ಕ್ಕೆ ಫೋಟೋ ಸೆಷನ್

ಇದು 15ನೇ ವಿಧಾನಸಭೆಯ ಅಂತಿಮ ಕಲಾಪವಾಗಿದ್ದು, ಈ ಹಿನ್ನೆಲೆಯಲ್ಲಿ ಫೆ. 21ರಂದು ಬೆಳಗ್ಗೆ 10.30ಕ್ಕೆ ಪ್ರಸಕ್ತ ವಿಧನಸಭೆಯ ಶಾಸಕರ ಫೋಟೋ ಸೆಷನ್ ನಡೆಸಲು ತೀರ್ಮಾನಿಸಲಾಗಿದೆ ಎಂದು ಸ್ಪೀಕರ್ ಹೇಳಿದಾಗ, ಅಂದು ನಾನು ಇರುವುದಿಲ್ಲ. ಹೀಗಾಗಿ ಫೆಬ್ರವರಿ 20ರಂದೇ ಫೋಟೋ ಸೆಷನ್ ಇಟ್ಟುಕೊಳ್ಳಿ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸಲಹೆ ನೀಡಿದರು. ಇದಕ್ಕೆ ಸರಕಾರ ಒಪ್ಪಿದ್ದರಿಂದ ಫೆಬ್ರವರಿ 20ರಂದು ಸಂಜೆ 4.20ಕ್ಕೆ ಫೋಟೋ ಸೆಷನ್‌ಗೆ ಸಮಯ ನಿಗದಿಪಡಿಸಲಾಯಿತು. ಅಂದು ಎಲ್ಲಾ ಶಾಸಕರು ಹಾಜರಿರುವಂತೆ ಸ್ಪೀಕರ್ ಕಾಗೇರಿ ಮನವಿ ಮಾಡಿದರು.

ಆಧಾರ: ವಿಶ್ವವಾಣಿ, ದಿನಾಂಕ: 15.02.2023

32. ಬ್ರಿಟಿಷ್ ಮನಸ್ಥಿತಿಯ ಅಧಿಕಾರಿಗಳು

ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಮತ್ತೊಮ್ಮೆ ಸದನದಲ್ಲಿ ಇನ್ನಿಲ್ಲದಂತೆ ಕೆಂಡ ಕಾರಿದ ಘಟನೆ ನಡೆಯಿತು. ಕೆಲವು ಒಳ್ಳೆಯ ಅಧಿಕಾರಿಗಳಿದ್ದರೂ, ಇಲ್ಲಿನ ಅನೇಕ ಸಿಬ್ಬಂದಿ "ಬ್ರಿಟಿಷ್ ಸರ್ಕಾರ"ದಂತೆ ವರ್ತಿಸುತ್ತಿದ್ದಾರೆ ಎಂದು ಸಿಟ್ಟಿನಿಂದ ನುಡಿದರು.

ಸುತ್ತೋಲೆ, ಆದೇಶ ಇತ್ಯಾದಿಗಳ ಹೆಸರಿನಲ್ಲಿ ರಾಜ್ಯದ ಅಮಾಯಕ ಜನರಿಗೆ ತೊಂದರೆ ಮಾಡುತ್ತಿದ್ದಾರೆ. ಕುಡಿಯುವ ನೀರಿನ ತೊಟ್ಟಿ ನಿರ್ಮಾಣದಂತಹ ವಿಷಯದಲ್ಲೂ ಅರಣ್ಯ ಇಲಾಖೆಯವರು ಜಾಗ ಬಿಟ್ಟುಕೊಡದೇ ಸಮಸ್ಯೆ ಮಾಡುತ್ತಿದ್ದಾರೆ. ಇದು ಸರಿಯಲ್ಲ ಎಂದು ಗುಡುಗಿದರು.

ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ ತಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಟ್ಟಿ ನಿರ್ಮಾಣಕ್ಕೆ ಅರಣ್ಯ ಇಲಾಖೆಯವರು ಹೇಗೆ ಅಡ್ಡಗಾಲು ಹಾಕಿದ್ದಾರೆ ಎಂಬುದನ್ನು ಸದನದ ಗಮನಕ್ಕೆ ತಂದರು. ಆಗ ಸ್ಪೀಕರ್ ಮಧ್ಯಪ್ರವೇಶಿಸಿ, 'ನೀವು ಹೇಳುವುದು ಸರಿ ಇದೆ' ಎಂದರು. ಅರಣ್ಯ ಇಲಾಖೆಯ ಒಳ್ಳೆಯ ಅಧಿಕಾರಿಗಳನ್ನು ಹೊರತುಪಡಿಸಿ, ಉಳಿದವರು ಜನರಿಗೆ ತೊಂದರೆ ಕೊಡುವುದಕ್ಕೇ ಇದ್ದಾರೆ ಎಂದರು.

ಬ್ರಿಟಿಷ್ ಸರ್ಕಾರದ ಅಧಿಕಾರಿಗಳ ಬಗ್ಗೆ ಕೇಳಿದ್ದೆ. ಇವರನ್ನು ನೋಡಿದರೆ ಓಹೋ ಇದೇ ಬ್ರಿಟಿಷ್ ಆಡಳಿತ ಎನಿಸಿಬಿಟ್ಟಿದೆ. ಇವರು ಬ್ರಿಟಿಷ್ ಆಡಳಿತದ ಮನಸ್ಥಿತಿಯಲ್ಲೇ ಇದ್ದಾರೆ ಎಂದು ಸ್ಪೀಕರ್ ಆಕ್ರೋಶಭರಿತರಾಗಿ ಹೇಳಿದರು.

ಕಾಗೇರಿ ಮಾತಿಗೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ, "ಅರಣ್ಯವೂ ನಮ್ಮದು. ಇಲಾಖೆಯೂ ನಮ್ಮದೇ. ಆದರೂ ಏಕೆ ಅರಣ್ಯ ಇಲಾಖೆಯವರು ಜನಪರ ಕೆಲಸಗಳಿಗೆ ಹೀಗೆ ಅಡ್ಡಿ ಹಾಕುತ್ತಿದ್ದಾರೆ" ಎಂದು ಕೇಳಿದರು. ಇದು ಮಾನವೀಯತೆಯೇ ಹೇಳಿ ಎಂದು ದೇಶಪಾಂಡೆ ಕೇಳಿದ ಕಳಕಳಿಗೆ ಇಡೀ ವಿಧಾನಸಭೆ ಸ್ಪಂದಿಸಿತು. ಸರ್ಕಾರದ ಪರವಾಗಿ ಉತ್ತರಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸಂಬಂಧಿಸಿದವರನ್ನು ಕರೆದು ಈ ಬಗ್ಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ಹೇಳಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 15.02.2023

33. ನೀರಾವರಿ ನಿಗಮಗಳ ಅಕ್ರಮದ ತನಿಖೆ

ನೀರಾವರಿ ನಿಗಮಗಳ ಅನುದಾನವನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡು ಕಳಪೆ ಕಾಮಗಾರಿ ನಡೆಸಿರುವ ಆರೋಪ ಸಂಬಂಧ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಬಿಜೆಪಿಯ ಕುಮಾರ್ ಬಂಗಾರಪ್ಪ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಅವರು, "ಕಾಮಗಾರಿಗಳ ಕುರಿತು ಪರಿಶೀಲಿಸಿ ವರದಿ ಪಡೆಯಲಾಗುವುದು. ಕಳಪೆ ಕಾಮಗಾರಿ ನಡೆದಿರುವುದು ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ಪತ್ತೆಯಾದರೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು," ಎಂದು ಹೇಳಿದರು.

ಇದಕ್ಕೂ ಮೊದಲು ಮಾತನಾಡಿದ ಕುಮಾರ ಬಂಗಾರಪ್ಪ, ನೀರಾವರಿ ನಿಗಮಗಳಿಂದ ನಾನಾ ಕಾಮಗಾರಿಗಳಿಗೆ ಅನುದಾನ ಹಂಚಿಕೆಯಾಗಿತ್ತು. ಕೆಲ ಅಧಿಕಾರಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಪ್ಯಾಕೇಜ್ ಟೆಂಡರ್ ನಡೆಸಿ, ಗುತ್ತಿಗೆ ನೀಡಿದ್ದರು. ತರಾತುರಿಯಲ್ಲಿ ಕಳಪೆ ಕಾಮಗಾರಿಯನ್ನೂ ನಡೆಸಿದ್ದರು. ಇದೀಗ ಕೆಲವೆಡೆ ಕಾಂಕ್ರಿಟ್ ಒಡೆದು ಹಾಕಿ, ಹೊಸದಾಗಿ ಕಾಮಗಾರಿ ನಡೆಸಲಾಗುತ್ತಿದೆ," ಎಂದು ಗಂಭೀರ ಆರೋಪ ಮಾಡಿದರು.

ತಂಬಾಕು ಧಾರಣೆ ಕುಸಿತಕ್ಕೆ ಆತಂಕ: ಒಂದು ವಾರದ ಅಂತರದಲ್ಲಿ ಒಂದು ಕ್ವಿಂಟಾಲ್ ಹೊಗೆಸೊಪ್ಪಿನ ಧಾರಣೆ 45 ರೂ. ಕುಸಿತವಾಗಿದ್ದು, 220 ರೂ.ಗೆ ಕುಸಿದಿದೆ. ಹೊಗೆಸೊಪ್ಪು ಮಂಡಳಿಯು ಈಸ್ಟ್ ಇಂಡಿಯಾ ಕಂಪನಿಯಂತೆ ವರ್ತಿಸುತ್ತಿದೆ. ಹಾಗಾಗಿ 5 ತಾಲ್ಲೂಕಿನ ಹೊಗೆಸೊಪ್ಪು ಬೆಳೆಗಾರರು ಹೋರಾಟಕ್ಕೆ ಮುಂದಾಗಿದ್ದಾರೆ. ಸರಕಾರ ಕೂಡಲೇ ಮಧ್ಯಪ್ರವೇಶಿಸಿ ಅವರ ಮನವಿಗೆ ಸ್ಪಂದಿಸಬೇಕು ಎಂದು ಕಾಂಗ್ರೆಸ್‌ನ ಎಚ್.ಪಿ. ಮಂಜುನಾಥ್ ಮನವಿ ಮಾಡಿದರು.

ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವ ಜೆ.ಸಿ. ಮಾಧುಸ್ವಾಮಿ, "ಕೂಡಲೇ ಅಧಿಕಾರಿಗಳನ್ನು ಕಳುಹಿಸಿ ಧಾರಣೆ ಕುಸಿತಕ್ಕೆ ಕಾರಣಗಳ ಪತ್ತೆಗೆ ಸೂಚನೆ ನೀಡಲಾಗುವುದು. ಹಾಗೆಯೇ ತನಿಖಾ ವರದಿಯನ್ನೂ ಪಡೆಯಲಾಗುವುದು. ಹೊಗೆಸೊಪ್ಪು ಮಂಡಳಿ ಇದೆ ಎಂಬ ಕಾರಣಕ್ಕೆ ಕೈಕಟ್ಟಿ ಕೂರಲಾಗದು. ಬೆಳೆಗಾರರಿಗೆ ನ್ಯಾಯ ಒದಗಿಸಲಾಗುವುದು. ಕೂಡಲೇ ಬೆಳೆಗಾರರೊಂದಿಗೆ ಮಾತನಾಡುವಂತೆ ಮೈಸೂರು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗುವುದು," ಎಂದು ಹೇಳಿದರು.

ರೈತರಿಗೆ ಪರಿಹಾರದ ಭರವಸೆ ನೀಡಿದ ಸಿಎಂ

ಪಾಂಡವಪುರ ಕ್ಷೇತ್ರದ ಮಡಚಾಕನಹಳ್ಳಿಯಲ್ಲಿ ಕಬ್ಬಿನ ಬೆಂಕಿ ಅನಾಹುತ ಸಂಬಂಧ ಮೃತಪಟ್ಟ ಕುರಿಗಾಹಿ ರೈತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಸಿ.ಎಸ್. ಪುಟ್ಟರಾಜು ಪ್ರಸ್ತಾಪಿಸಿದ ವಿಚಾರಕ್ಕೆ ಉತ್ತರಿಸಿದ ಅವರು, "ಪುಟ್ಟರಾಜು ಅವರು ಹಿರಿಯ ಶಾಸಕರು ಹಾಗೂ ಆತ್ಮೀಯರು. ಏನೆಲ್ಲಾ ವಿಚಾರವಾಗಿ ಚರ್ಚಿಸುವ ಅವರು ಈ ವಿಷಯವನ್ನೂ ಹೇಳಿದ್ದರೆ ಕ್ರಮ ವಹಿಸಲಾಗುತ್ತಿತ್ತು. ಖಂಡಿತ ಪರಿಹಾರ ನೀಡಲಾಗುವುದು," ಎಂದು ನಗುತ್ತಾ ಹೇಳಿದರು. ಇದಕ್ಕೂ ಮೊದಲು ಮಾತನಾಡಿದ ಪುಟ್ಟರಾಜು, "ಮಡಚಾಕನಹಳ್ಳಿಯಲ್ಲಿ ಮೂರು ದಿನದ ಹಿಂದೆ 15–20 ಎಕರೆ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿತ್ತು. ಅದನ್ನು ನಂದಿಸಲು ಹೋದ ಕುರಿಗಾಹಿ ರೈತರೊಬ್ಬರು ಹೊಗೆಯಿಂದ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಕೂಡಲೇ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು," ಎಂದು ಮನವಿ ಮಾಡಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 15.02.2023

34. ವಿಧಾನಮಂಡಲ ವಿಶ್ವದಾಖಲೆ ವೀರ ಬಸವರಾಜ ಹೊರಟ್ಟಿ

ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ವಿಶ್ವದಾಖಲೆಯ ಜನಪ್ರತಿನಿಧಿ ಇದ್ದಾರೆ. ಸತತ 8 ಬಾರಿ ಗೆದ್ದು, ಹದಿನೇಳು ಮುಖ್ಯಮಂತ್ರಿಗಳನ್ನು ನೋಡಿ, 45 ಬಜೆಟ್‌ಗಳಿಗೆ (ಇದೂ ದಾಖಲೆ) ಸಾಕ್ಷಿಭಾವವಾದವರಿದ್ದಾರೆ. ಅತೀ ಕಡಿಮೆ ಸಮಯದಲ್ಲಿ ಬಜೆಟ್ ಅನುಮೋದಿಸಿ ಕೊಡುವ ಸವಾಲು ಹೊಂದಿದವರಿದ್ದಾರೆ. ಅವರೇ ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ.

2023ರದ್ದು ಹಿಂದಿನ ಬಜೆಟ್‌ನಂತಲ್ಲ. ಲೆಕ್ಕಪತ್ರಗಳ ಮುಖ ಬೇರೆ. ಆದರೆ ನಿರ್ವಹಣೆಯ ವಿಷಯಕ್ಕೆ ಬಂದಾಗ, ಈ ಬಾರಿ ಹಿಂದೆಂದಿಗಿಂತ ಮಹತ್ವವನ್ನು ಮುಂಗಡಪತ್ರ ಅಧಿವೇಶನ ಪಡೆದುಕೊಂಡಿದೆ. ಏಕೆಂದರೆ ಇದು ಚುನಾವಣಾ ಹೊಸ್ತಿಲಿನ ಅಧಿವೇಶನ.

ಕರ್ನಾಟಕದ ಸಂಸದೀಯ ವ್ಯವಸ್ಥೆಯಲ್ಲಿ ವಿಧಾನಸಭೆಯಲ್ಲಿ ಅನುಮೋದಿತವಾದ ನಂತರ, ಮೇಲ್ಮನೆಯಲ್ಲೂ ಬಜೆಟ್ ಅನುಮೋದನೆಗೊಂಡರೆ ಮಾತ್ರ ಏಪ್ರಿಲ್ ತಿಂಗಳಿಂದ ಸಂಬಳ–ಸಾರಿಗೆ

ಇಲ್ಲವಾದರೆ ಏನೂ ಇಲ್ಲ! ಬಜೆಟ್ ಒಮ್ಮೆಯೂ ಮೇಲ್ಮನೆಯಲ್ಲಿ ತಿರಸ್ಕೃತವಾಗಿ ಪುನಃ ಕೆಳಮನೆಯ ಪರಿಶೀಲನೆಗೆ ಬಂದಿಲ್ಲ. ಎಂಬುದು ಐತಿಹಾಸಿಕ ಸತ್ಯವಾದರೂ ಕಾನೂನುಬದ್ಧವಾಗಿ ಮೇಲ್ಮನೆಗೆ ಇನ್ನಿಲ್ಲದ ಬಿಗಿ ಇದ್ದೇ ಇದೆ.

ಆದ್ದರಿಂದಲೇ ಬಜೆಟ್ ಕುರಿತು ಎಷ್ಟು ಗಹನವಾದ ಚರ್ಚೆಗಳು ಕೆಳಮನೆಯಲ್ಲಿ ಆಗುತ್ತವೋ, ಅದಕ್ಕೂ ಮಿಗಿಲಾದ ಸಂವಾದ ವಿಧಾನ ಪರಿಷತ್ತಿನಲ್ಲಿ ನಡೆಯುತ್ತದೆ. ಎಷ್ಟೋ ಬಾರಿ ಕೆಳಮನೆಯ ಸದಸ್ಯರ ಸಲಹೆಗಳನ್ನು ಪರಿಶೀಲಿಸುವ ಮಾತು ಮಾತ್ರ ಕೇಳಿ ಬಂದಿದ್ದಿದೆ. ಆದರೆ ಸಲಹೆಗಳನ್ನು – ಮೇಲ್ಮನೆಯಲ್ಲಿ ಮಾಡಲಾದ ಅಳವಡಿಕೆ ಮಾಡಿಕೊಂಡ ನಂತರವೇ ಬಜೆಟ್ ಅನುಮೋದಿತವಾಗುತ್ತದೆ.

ವಿಷಯ ಹೀಗಿರುವಾಗ ಬಸವರಾಜ ಹೊರಟ್ಟಿ ಸ್ಪೀಕರ್ ಆಗಿ ಎರಡನೇ ಬಜೆಟ್ ಅಧಿವೇಶನ ನಡೆಸುತ್ತಿದ್ದಾರೆ. ನಾಲ್ಕು ದಶಕಗಳಿಂದ ಸದನದಲ್ಲಿ ಬಜೆಟ್‌ಗೆ ಸಾಕ್ಷಿಯಾಗುತ್ತಲೇ ಇರುವ ಹೊರಟ್ಟಿ 2022ರಲ್ಲಿ ಸ್ಪೀಕರ್ ಆಗಿದ್ದಾಗ ಅತೀ ದೊಡ್ಡ ಗಾತ್ರದ 2.65 ಲಕ್ಷ ಕೋಟಿ ರೂಪಾಯಿ ಬಜೆಟ್‌ಗೆ (ಅದುವರೆಗಿನ ದಾಖಲೆ) ಅನುಮೋದನೆ ದೊರಕಿತ್ತು. ಕಳೆದ ಬಾರಿ ಹೊರಟ್ಟಿಯವರಿಗೆ ಒಂದು ಇಡೀ ತಿಂಗಳು ಸದನ ನಿರ್ವಹಣೆಯ ಅವಕಾಶ ಸಿಕ್ಕಿತ್ತು. ಈ ಬಾರಿ ಅತೀ ಕಡಿಮೆ ಅವಧಿ ದೊರೆಯುವ ಸಂಭವವಿದೆ. ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡನೆ ಮಾಡಲಿರುವುದರಿಂದ ಅಲ್ಪ ಸಮಯದಲ್ಲಿ ಬಜೆಟ್‌ಗೆ ಮುದ್ರೆಯೊತ್ತಿ ಕೊಡುವುದು ಸವಾಲಿನ ಹೊಣೆಯಾಗಿದೆ. ವಿರೋಧ ಪಕ್ಷದ ನಾಯಕರಿಗೆ ಬಜೆಟ್ ಭಾಷಣದ ಮೇಲೆ ಮಾತನಾಡುವ ಸಮಯ ಮಿತಿ ಇರುವುದಿಲ್ಲ. ಉಳಿದವರಿಗೆ ವೇಳೆಯನ್ನು ನಿಗದಿ ಮಾಡಲಾಗುತ್ತದೆ. ಕೊನೆಯ ದಿನ ಸರ್ಕಾರ ಉತ್ತರ ಕೊಟ್ಟು ಬಜೆಟ್ ಅಂಗೀಕಾರ ಪಡೆಯಬೇಕಾಗಿದೆ. ಇವೆಲ್ಲ ಪ್ರಕ್ರಿಯೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು ಹರಸಾಹಸದ ಕೆಲಸ. ಕಾಲಾವಕಾಶದ ತಾಂತ್ರಿಕ ಸವಾಲನ್ನು ಹೊರಟ್ಟಿ ಗೆಲ್ಲುವುದು ಖಚಿತ ಎಂಬುದು ಸಮೀಪದಿಂದ ಬಲ್ಲವರೆಲ್ಲರ ಖಚಿತ ವಿಶ್ವಾಸ.

ಒಬ್ಬ ರಾಜಕೀಯ ನಾಯಕ ತನ್ನ ಜೀವನದ ಅರ್ಧಕ್ಕೂ ಹೆಚ್ಚ ಭಾಗ ಶಾಸನ ಸಭೆಯ ಅವಿಭಾಜ್ಯ ಅಂಗವಾಗುವುದು. ಹೇಗೆ ಅತ್ಯಪರೂಪವೋ, ಇಡೀ ವಿಧಾನಸೌಧದ ಎಲ್ಲ ಆಗುಹೋಗುಗಳೊಂದಿಗೆ ಮಿಳಿತಗೊಂಡಿರುವುದೂ ಅಷ್ಟೇ ಅಪರೂಪ. ಸಭಾಪತಿ ಬಸವರಾಜ ಹೊರಟ್ಟಿಯವರ ಮಟ್ಟಿಗೆ ಇವೆರಡೂ ಸಂಭವಿಸಿವೆ. ಹೀಗಾಗಿ ಪ್ರಸಕ್ತ ಅಧಿವೇಶನದ ಹೊರಟ್ಟಿ ನಡೆ ಸಂಸದೀಯ ನಡಾವಳಿಗಳ ದಾಖಲೆಯ ಪುಟಕ್ಕೆ ಸೇರಲಿದೆ. ಸ್ಪೀಕರ್ ಬಸವರಾಜ ಹೊರಟ್ಟಿ ಅವರತ್ತ ರಾಜ್ಯ ಕಣ್ಣಾಗಿರುವುದಕ್ಕೆ ಸಕಾರಣಗಳಿವೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 16.02.2023

35. ಸಚಿವರ ವಿರುದ್ಧ ಸಭಾಪತಿ ಗರಂ

ಪ್ರಶ್ನೋತ್ತರ ಕಲಾಪ ಆರಂಭವಾಗುತ್ತಿದ್ದಂತೆ ಮೊದಲ ಎರಡು ಪ್ರಶ್ನೆಗಳಿಗೆ ಉತ್ತರ ನೀಡಲು ಪಶುಸಂಗೋಪನೆ ಸಚಿವ ಪ್ರಭು ಚೌಹಾಣ್ ಕಾಲಾವಕಾಶ ಕೋರಿದ್ದರಿಂದ ಸಭಾಪತಿ ಬಸವರಾಜ್ ಹೊರಟ್ಟಿ ಗರಂ ಆದರು.

ಮೊದಲ ಪ್ರಶ್ನೆ ಕಾಂಗ್ರೆಸ್ ಸದಸ್ಯ ಕೆ. ಹರೀಶ್ ಕುಮಾರ್ ಅವರದ್ದಾಗಿತ್ತು. ಕರ್ನಾಟಕದ ಪ್ರತಿ ಜಿಲ್ಲೆಯಿಂದ ಗೋವಾಕ್ಕೆ ಪ್ರತಿ ದಿನ ರಫ್ತು ಮಾಡಲಾಗುವ ದನ ಮತ್ತು ಎಮ್ಮೆ ಮಾಂಸದ ಪ್ರಮಾಣವೆಷ್ಟು, ಜಿಲ್ಲಾವಾರು ವರದಿ ನೀಡುವುದು ಎಂದು ಕೇಳಿದ್ದರು. ಇದಕ್ಕೆ ಉತ್ತರಿಸಲು ಸಮಯ ಕೇಳಿದರು.

ಎರಡನೇ ಪ್ರಶ್ನೆ ಜೆಡಿಎಸ್ ಸದಸ್ಯ ತಿಪ್ಪೇಸ್ವಾಮಿ ಅವರದ್ದಾಗಿತ್ತು. ರಾಜ್ಯದಲ್ಲಿ ನಡೆಯುವ ಜಾನುವಾರು ಸಂತೆ ಮತ್ತು ಜಾತ್ರೆಗಳೆಷ್ಟು? ಕಳೆದ ಮೂರು ವರ್ಷಗಳಿಂದ ರಾಸುಗಳಿಗೆ ತಗುಲಿದ ಚರ್ಮಗಂಟು ರೋಗದ ಪರಿಣಾಮವೇನು? ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ. ರೈತನಿಗೆ ಯಾವ ರೀತಿ ಸಹಾಯ ಮಾಡಲಾಗಿದೆ ಎಂದು ಪ್ರಶ್ನಿಸಿದ್ದರು. ಇದಕ್ಕೂ ಸಚಿವರು ಕಾಲಾವಕಾಶ ಕೇಳಿದ್ದರು.

ಇದರಿಂದ ತಿಪ್ಪೇಸ್ವಾಮಿ ಕೆರಳಿದರು. ನಾನು ಕೇಳಿರುವುದು ಸಣ್ಣ ಪ್ರಶ್ನೆ ಅದಕ್ಕೂ ಉತ್ತರವಿಲ್ಲವೆಂದರೆ ಹೇಗೆ? ಎಂದರು. ಅವರಿಗೆ ಬೆಂಬಲವಾಗಿ ಜೆಡಿಎಸ್ ನಾಯಕ ಭೋಜೇಗೌಡ ಅವರು ಮಾತನಾಡಿ, ಈಗ ಎಲ್ಲವೂ ಬೆರಳ ತುದಿಯಲ್ಲೇ ಮಾಹಿತಿ ಸಿಗುತ್ತದೆ. ನಿಮ್ಮ ಅಧಿಕಾರಿಗಳಿಗೆ ಹೇಳಿ ತರಿಸಿ ಎಂದರು.

ಇದಕ್ಕೆ ಸಚಿವ ಪ್ರಭು ಚೌಹಾಣ್ ಉತ್ತರಿಸಿ ಅವರು ತಾಲ್ಲೂಕುವಾರು ಕೇಳಿದ್ದಾರೆ. ಕೆಲ ಮಾಹಿತಿಗಳನ್ನು ಕಂದಾಯ ಇಲಾಖೆಯಿಂದ ಪಡೆದು ಉತ್ತರಿಸಬೇಕಿದೆ. ಅದಕ್ಕಾಗಿ ಕಾಲಾವಕಾಶ ಬೇಕು ಎಂದು ಹೇಳಿದರು.

ಇದಕ್ಕೆ ವಿಪಕ್ಷ ಸದಸ್ಯರ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಅಧಿಕಾರಿಗಳು ಏನು ಮಾಡ್ತಿದ್ದಾರೆ. ನಾವು 10 ದಿನ ಮುಂಚಿತವಾಗಿಯೇ ಪ್ರಶ್ನೆ ಕೇಳಿದ್ದೇವೆ. ಈಗ ಬೇರೆ ಇಲಾಖೆಯಿಂದ ಮಾಹಿತಿ ಬೇಕು ಎಂದು ಸಬೂಬು ಹೇಳುತ್ತಿದ್ದಾರೆ. ಸಚಿವರ ಬೇಜವಾಬ್ದಾರಿ, ಉತ್ತರ ಕೊಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದರಿಂದ ಮುಜುಗರಗೊಂಡ ಸಚಿವ ಪ್ರಭು ಚವ್ಹಾಣ್, ಜೋರು ದನಿಯಲ್ಲಿ ಮಾತನಾಡಲಾರಂಭಿಸಿದರು.

ಜೆಡಿಎಸ್ ಎಲ್.ಎಸ್.ಭೋಜೆಗೌಡ, ನಿಮಗೆ ಕನ್ನಡ ಸರಿಯಾಗಿ ಬರೋದಿಲ್ಲ ಸುಮ್ಮನೆ ಏನೇನೊ ಮಾತಾಡ್ತೀರಾ. ಮೊದಲು ಕನ್ನಡ ಕಲಿಯಿರಿ ಎಂದು ತಿರುಗೇಟು ನೀಡಿದರು. ಇದರಿಂದ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಈ ವೇಳೆ ಮಧ್ಯ ಪ್ರವೇಶಿಸಿದ ಸಭಾಪತಿಯವರು, ಸದನಕ್ಕೆ ಉತ್ತರ ನೀಡುವುದು ಸಚಿವರ ಜವಾಬ್ದಾರಿ ಎಂದರು. ಇದಕ್ಕೆ ಸಚಿವರು, 21 ಜಿಲ್ಲೆಗಳಿಂದ ಉತ್ತರ ಪಡೆಯಬೇಕು. ಅಧಿಕಾರಿಗಳಿಗೆ ಸೂಚಿಸಲಾಗಿದೆ. 15 ದಿನ ಸಮಯಾವಕಾಶ ಕೊಡಿ ಎಂದಾಗ ಸಿಟ್ಟಾದ ಸಭಾಪತಿ ಅವರು, 15 ದಿನ ಸದನ ನಡೆಯುತ್ತಾ, ಸದನ ನಡೆಯುವುದರೊಳಗೆ ಉತ್ತರ ಕೊಡಬೇಕು. ಇಲ್ಲವಾದಲ್ಲಿ ನಾನು ನನ್ನ ನಿಲುವನ್ನು ತಿಳಿಸಬೇಕಾಗುತ್ತದೆ ನೋಡಿ ಎಂದು ಗರಂ ಆದರು.

ಈ ಸಂದರ್ಭದಲ್ಲಿ ಸಭಾನಾಯಕರ ಪರವಾಗಿ ವಸತಿ ಸಚಿವ ವಿ.ಸೋಮಣ್ಣ ಉತ್ತರಿಸಿ, ಸದಸ್ಯರ ಪ್ರಶ್ನೆಗೆ ಉತ್ತರಿಸುವುದು ಸಚಿವರ ಕರ್ತವ್ಯ. ಇನ್ನೆರಡು ದಿನದಲ್ಲಿ ಉತ್ತರ ಕೊಡಿಸುವ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು. ಮುಂದಿನ ವಾರ ಉತ್ತರ ಕೊಡಿ ಎಂದು ಸಭಾಪತಿ ಸೂಚನೆ ನೀಡುವ ಮೂಲಕ ವಿಷಯವನ್ನು ತಿಳಿಗೊಳಿಸಿ ಮುಂದಿನ ಪ್ರಶ್ನೆಗೆ ಹೋದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 16.02.2023

36. ಪತ್ರಕರ್ತರಿಗೆ ಗೌರವ ಸನ್ಮಾನ, ಡಿವಿಜಿ ನೆನಪು ಕಾರ್ಯಕ್ರಮ

ಪತ್ರಕರ್ತರು ವೃತ್ತಿಬದ್ಧತೆಯಿಂದ ಕೆಲಸ ಮಾಡಬೇಕು ಎನ್ನುವುದು ಸಮಾಜದ ನಿರೀಕ್ಷೆ. ಇತ್ತೀಚಿನ ಅವಸರದ ಪತ್ರಿಕೋದ್ಯಮದಲ್ಲಿ ಆ ವೃತ್ತಿಬದ್ಧತೆ ಕಡಿಮೆಯಾತ್ತಿರುವುದು ಕಳವಳಕಾರಿ ಸಂಗತಿ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಕರ್ನಾಟಕ ಕಾರ್ಯನಿರತರ ಪತ್ರಕರ್ತರ ಸಂಘ (ಕೆಯುಡಬ್ಲ್ಯೂ ಜೆ) ಹಮ್ಮಿಕೊಂಡಿದ್ದ ಡಿವಿಜಿ ನೆನಪು ಹಾಗೂ ಪತ್ರಕರ್ತರಿಗೆ ಗೌರವ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿ, ಗುಂಡಪ್ಪನವರು ಹುಟ್ಟು ಹಾಕಿದ ಪತ್ರಕರ್ತರ ಸಂಘಟನೆಗೆ 91 ವಸಂತಗಳು ತುಂಬಿರುವುದು ಸಂಭ್ರಮ ಸಡಗರದ ಸಂಗತಿ. ಹಳೆ ತಲೆಮಾರಿನ ಪತ್ರಕರ್ತರನ್ನು ಮತ್ತು ಅವರ ವೃತ್ತಿಪರತೆಯನ್ನು ಈಗಿನ ತಲೆಮಾರಿನವರಿಗೆ ನೆನಪಿಸುವ ಕೆಲಸ ಆಗಬೇಕಿದೆ ಎಂದರು.

ಆಕಸ್ಮಿಕವಾಗಿ ರಾಜಕಾರಣಕ್ಕೆ ಬಂದ ನಾನು ಇಷ್ಟು ಸುಧೀರ್ಘ ಅವಧಿಯ ಕಾಲ ರಾಜಕಾರಣದಲ್ಲಿ ಇರುತ್ತೇನೆ ಎಂದುಕೊಂಡಿರಲಿಲ್ಲ. ಪ್ರತಿಯೊಬ್ಬರ ಬದುಕಿನಲ್ಲೂ ಈ ರೀತಿಯ ಅನಿವಾರ್ಯ ತಿರುವುಗಳೇ

ಎತ್ತರಕ್ಕೆ ಕರೆದು ಕೊಂಡು ಹೋಗಿವೆ. ಅವಕಾಶಗಳನ್ನು ಸವಾಲಾಗಿ ಸ್ವೀಕರಿಸಿ ಬೆಳೆಯುವ ಮನಸ್ಥಿತಿಯನ್ನು ನಾವು ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಡಿವಿಜಿ ಅವರು 1932ರಲ್ಲಿ ಈ ಸಂಘವನ್ನು ಬೆರಳೆಣಿಕೆ ಸದಸ್ಯರೊಂದಿಗೆ ಆರಂಭಿಸಿದರು. ಇಂದು ಅದು 8 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದು ಬೃಹಾದಾಕಾರವಾಗಿ ಬೆಳೆದಿದೆ ರಾಜ್ಯದ ಎಲ್ಲೆಡೆಯ ಪ್ರಾತಿನಿಧ್ಯವನ್ನು ಹೊಂದಿದೆ ಎಂದು ಕೆಯುಡಬ್ಲ್ಯೂಜೆ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಕೆಯುಡಬ್ಲ್ಯೂಜೆಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಸೋಮಶೇಖರ ಗಾಂಧಿ, ಮು.ವೆಂಕಟೇಶ್ ಅವರನ್ನು ಅಭಿನಂದಿಸಲಾಯಿತು. ಕೆಯುಡಡಬ್ಲ್ಯೂಜೆ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಸ್ವಾಗತಿಸಿದರು, ಖಜಾಂಚಿ ವಾಸುದೇವ ಹೊಳ್ಳ ವಂದಿಸಿದರು.

ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ

ಹಿರಿಯ ಪತ್ರಕರ್ತರಾದ ಶೇಷಚಂದ್ರಿಕಾ ಹಾಗೂ ಈಶ್ವರ ದೈತೋಟ ಡಿವಿಜಿ ನೆನಪು ಹಂಚಿಕೊಂಡರು. ವಿಶ್ವವಾಣಿಯ ಕಾರ್ಯನಿರ್ವಾಹಕ ಸಂಪಾದಕ ರಾಧಾಕೃಷ್ಣ ಭಡ್ತಿ ಸೇರಿದಂತೆ ರುದ್ರಣ್ಣ ಹರ್ತಿಕೋಟೆ, ಪದ್ಮರಾಜ ದಂಡಾವತಿ, ವೈ.ಗ. ಜಗದೀಶ್, ಅಜಿತ್ ಹನುಮಕ್ಕನವರ್, ಕೆ.ಎಸ್. ಸೋಮಶೇಖರ್, ಡಿ.ಜಿ.ಮಮತಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪತ್ರಕರ್ತರಿಗೆ ನೀಡುವ ಪ್ರಶಸ್ತಿಗಳು ಪತ್ರಿಕೋದ್ಯಮದ ವೃತ್ತಿಪರತೆಯತ್ತ ತುಡಿಯಲು ಕಾರಣವಾಗುತ್ತವೆ. ವೃತ್ತಿಪರರಿಗೆ ಪ್ರಶಸ್ತಿಗಳನ್ನು ನೀಡಿ ಬೆನ್ನು ತಟ್ಟುವ ಕೆಲಸವನ್ನು ಕೆಯುಡಬ್ಲ್ಯೂಜೆ ಹಿಂದಿನಿಂದ ಮಾಡಿಕೊಂಡು ಬಂದಿದೆ. ಕನ್ನಡದ ಪತ್ರಕರ್ತರೊಬ್ಬರಾದ ರುದ್ರಣ್ಣ ಅವರಿಗೆ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಉತ್ಕೃಷ್ಟತಾ ಪ್ರಶಸ್ತಿ ಸಂದಿರುವುದು ಗೌರವದ ವಿಷಯ. ಕೇಂದ್ರ ಸಾಹಿತ್ಯ ಅಕಾಡೆಮಿ ಮನ್ನಣೆ ಪತ್ರಕರ್ತ ಸಾಹಿತಿಗಳಿಗೆ ಗರಿ ಮೂಡಿಸಿದೆ.

–ಬಸವರಾಜ ಹೊರಟ್ಟಿ ಸಭಾಪತಿ

ಆಧಾರ: ವಿಶ್ವವಾಣಿ, ದಿನಾಂಕ: 16.02.2023

37. ಧರ್ಮ ರಕ್ಷಣೆಯಲ್ಲಿ ಆಗಮಿಕರ ಮಹತ್ವದ ಕಾರ್ಯ : ಕಾಗೇರಿ

'ಧಾರ್ಮಿಕ ಆಧ್ಯಾತ್ಮಿಕ ಭಾವನೆಯನ್ನು ಸಮಾಜದಲ್ಲಿ ಸದಾ ಜಾಗೃತವಾಗಿಡಲು ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ ಶ್ರಮಿಸುತ್ತಿರುವುದು ಶ್ಲಾಘನೀಯ' ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದರು.

ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ ನಗರದಲ್ಲಿ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ಸಮಾರಂಭಲ್ಲಿ ಮಾತನಾಡಿದ ಅವರು, 'ನಮ್ಮ ಸಂಸ್ಕಾರ, ಸಂಸ್ಕೃತಿ ಹಿನ್ನೆಲೆಯಲ್ಲಿ ರಚನಾತ್ಮಕ ಭಾವನೆಯಿಂದ ಎಲ್ಲರನ್ನೂ ಒಗ್ಗೂಡಿಸಿ ಕೊಂಡು, ಸಮಸ್ಯೆಗಳಿಗೆ ಸರ್ಕಾರದಲ್ಲಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

'ಸಮಿತಿಯು ಮುಂದಿನ ಇನ್ನೂ 50–100 ವರ್ಷಗಳಿಗೆ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಲು ಸಂಕಲ್ಪ ಮಾಡಬೇಕು. ಧಾರ್ಮಿಕ ವಿಶೇಷತೆ, ವೈಶಿಷ್ಟ್ಯತೆ, ವಿದ್ಯೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಬಗ್ಗೆ ಜವಾಬ್ದಾರಿಯುತ ನಿರ್ಧಾರಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

'ಸಮಿತಿಯು 50 ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ್ದು, ಇದಕ್ಕಾಗಿ ಅನೇಕ ಹಿರಿಯರು ತಮ್ಮನ್ನು ತಾವು ಸಮರ್ಪಿಸಿಕೊಂಡು ಕೆಲಸ ನಿರ್ವಹಿಸುವ ಮೂಲಕ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಎಲ್ಲರನ್ನು ಸ್ಮರಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಉತ್ತಮವಾಗಿದೆ. ಇದು ಕೇವಲ ಸಿಂಹಾವಲೋಕನ ಆಗಬಾರದು' ಎಂದರು.

ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಡಾ. ಯದುಗಿರಿ ಯತಿರಾಜ ಜೀಯರ್ ಸ್ವಾಮೀಜಿ, ಸಮಿತಿ ಅಧ್ಯಕ್ಷ ಎಸ್.ಆರ್. ಶೇಷಾದ್ರಿ ಭಟ್ಟ, ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಇದ್ದರು.

ಇದೇ ವೇಳೆ 50 ಮಂದಿ ಹಿರಿಯ ಆಗಮ ವಿದ್ವಾಂಸರಿಗೆ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಆಧಾರ: ಪ್ರಜಾವಾಣಿ, ದಿನಾಂಕ: 16.02.2023

38. ಕಾಗೇರಿ–ಖಂಡ್ರೆ ಮಧ್ಯೆ ವಾಕ್ಸಮರ

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಮತ್ತು ಕಾಂಗ್ರೆಸ್‌ನ ಈಶ್ವರ ಖಂಡ್ರೆ ಮಧ್ಯೆ ವಿಧಾನಸಭೆಯಲ್ಲಿ ಕಾವೇರಿದ ವಾಕ್ಸಮರ ನಡೆಯಿತು.

'ನಿಮ್ಮನ್ನು ಹೊರಗೆ ಹಾಕಬೇಕಾಗುತ್ತದೆ' ಎಂದು ಖಂಡ್ರೆ ಅವರಿಗೆ ಕಾಗೇರಿ ಎಚ್ಚರಿಕೆ ನೀಡಿದಾಗ, ಅದನ್ನು ತೀವ್ರವಾಗಿ ಖಂಡಿಸಿದ ಕಾಂಗ್ರೆಸ್ ಸದಸ್ಯರು ಧರಣಿ ಆರಂಭಿಸಿದರು. ಅಗ ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕುರಿತು ತಾವು ಆಡಿದ ಮಾತುಗಳ ಬಗ್ಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸಮಜಾಯಿಷಿ ನೀಡಿ ವಿಷಾದ ವ್ಯಕ್ತಪಡಿಸಿದ ಬಳಿಕವೂ ಕಾಂಗ್ರೆಸ್ ಸದಸ್ಯರಾದ ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಕೃಷ್ಣಭೈರೇಗೌಡ ಮುಂತಾದವರು ಸಚಿವರ ವಿರುದ್ಧ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.

'ಎಲ್ಲರೂ ಕುಳಿತುಕೊಳ್ಳಬೇಕು, ಒಟ್ಟಿಗೆ ಮಾತನಾಡಬಾರದು' ಎಂದು ಕಾಗೇರಿ ಗದರಿದರು. ಅ. ವೇಳೆಯಲ್ಲಿ ಖಂಡ್ರೆ ಏರಿದ ಧ್ವನಿಯಲ್ಲಿ ಮಾತನಾಡುತ್ತಿದ್ದರು. ಅದರಿಂದ ಸಿಟ್ಟಿಗೆದ್ದ ಅವರು, 'ಏನು ನೀವು ಸದನದ ಮೇಲೆ ಸವಾರಿ ಮಾಡುತ್ತೀರಾ, ಕೂತ್ಕೊಳ್ಳಿ, ಹೀಗೆ ಮಾತನಾಡುತ್ತಿದ್ದರೆ ನಿಮ್ಮನ್ನು ಹೊರ ಹಾಕಬೇಕಾಗುತ್ತದೆ' ಎಂದರು.

'ನಮಗೆ ಮಾತನಾಡಲು ಅಧಿಕಾರ ಇಲ್ವಾ, ನೀವು ಸದಸ್ಯರನ್ನು ಈ ರೀತಿ ನಡೆಸಿಕೊಳ್ಳಬಾರದು. ನಮಗೂ ಮಾತನಾಡಲು ಅವಕಾಶ ನೀಡಬೇಕು' ಎಂದು ಖಂಡ್ರೆ ಏರಿದ ಧ್ವನಿಯಲ್ಲಿ ಪ್ರತ್ಯುತ್ತರ ಕೊಟ್ಟಾಗ ಕಾಂಗ್ರೆಸ್ ಸದಸ್ಯರು ಧ್ವನಿಗೂಡಿಸಿದರು.

'ನಾನು ಹೇಳ್ತಾ ಇದ್ದೇನೆ, ನೀವು ಕುಳಿತುಕೊಳ್ಳಬೇಕು. ಪೀಠದ ಮಾತು ಕೇಳದಿದ್ದರೆ ನನಗಿರುವ ಅಧಿಕಾರವನ್ನು ಚಲಾಯಿಸಬಹುದು. ನಿಮ್ಮ ಉಪನಾಯಕರು ಹೇಳಿದರೂ ನೀವು ಕೇಳುತ್ತಿಲ್ಲ. ಪ್ರತಿ ಬಾರಿ ಹೀಗೆ ನಡೆದುಕೊಳ್ಳುತ್ತೀರಿ' ಎಂದು ಕಾಗೇರಿ ಅವರು ಖಂಡ್ರೆಯನ್ನು ಉದ್ದೇಶಿಸಿ ಅವೇಶಭರಿತರಾಗಿ ಹೇಳಿದರು. 'ಹೊರಗೆ ಹಾಕುವುದಿದ್ದರೆ ಹಾಕಿ ನೋಡೋಣ' ಎಂದು ಖಂಡ್ರೆ ಸವಾಲು ಹಾಕಿದರು.

'ನಿಮಗೊಬ್ಬರಿಗೆ ಬಿ.ಪಿ ಅಲ್ಲ, ನನಗೂ ಬಿ.ಪಿ ಇದೆ. ಇಂತಹ ಸದಸ್ಯರನ್ನು ಏಕೆ ಆರಿಸಿ ಕಳಿಸುತ್ತೀರಿ ಎಂದು ನಿಮ್ಮ ಕ್ಷೇತ್ರದ ಮತದಾರರನ್ನು ಕೇಳಬೇಕಾಗುತ್ತದೆ' ಎಂದು ಕಾಗೇರಿ ಭಾವಾವೇಶದಿಂದ

ಹೇಳಿದಾಗ, ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದರು. ಖಂಡ್ರೆ ಸೇರಿದಂತೆ ಬಹುತೇಕ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಬಂದು ನಿಂತು ಧರಣಿ ಆರಂಭಿಸಿದರು.

ನಿಮ್ಮ ಆಸನಗಳಿಗೆ ಹೋಗಿ ಎಂದು ಸಭಾಧ್ಯಕ್ಷರು ಮಾಡಿದ ಮನವಿಗೆ ಒಪ್ಪಲಿಲ್ಲ. ಆಗ ಕಲಾಪವನ್ನು 15 ನಿಮಿಷಗಳಿಗೆ ಮುಂದೂಡಿದರು. ಬಳಿಕ ಸಭಾಧ್ಯಕ್ಷರು ತಮ್ಮ ಕೊಠಡಿಗೆ ಕಾಂಗ್ರೆಸ್ ಸದಸ್ಯರನ್ನು ಕರೆಸಿಕೊಂಡು ಮುಖ್ಯಮಂತ್ರಿ ಬೊಮ್ಮಾಯಿ ಸಮ್ಮುಖದಲ್ಲಿ ಪ್ರಕರಣ ಇತ್ಯರ್ಥಪಡಿಸಿದರು.

ಮತ್ತೆ ಕಲಾಪ ಸೇರಿದಾಗ ವಿಷಯ ಪ್ರಸ್ತಾಪಿಸಿದ ಕಾಗೇರಿ, 'ಕಲಾಪದ ವೇಳೆ ಕೆಲವೊಮ್ಮೆ ಇಂತಹ ಘಟನೆಗಳು ನಡೆಯುತ್ತವೆ. ಈಶ್ವರ ಖಂಡ್ರೆ ಅವರೇ ನಿಮ್ಮ ಬಗ್ಗೆ ಮತ್ತು ನಿಮ್ಮ ಕ್ಷೇತ್ರದ ಮತದಾರರ ಬಗ್ಗೆ ನನಗೆ ಗೌರವಿದೆ. ನಿಮ್ಮ ತಂದೆಯವರ ಜೊತೆ ಒಳ್ಳೆಯ ಒಡನಾಟವಿತ್ತು. ಅವರ ಶಿಸ್ತಿನ ಜೀವನ ನನಗೆ ಪ್ರೇರಣೆ ಆಗಿತ್ತು. ವೈಯಕ್ತಿಕವಾಗಿ ನಿಮ್ಮ ಬಗ್ಗೆ ಸದಭಿಪ್ರಾಯವಿದೆ. ಅನ್ಯಥಾ ಭಾವಿಸಬೇಡಿ. ಇದನ್ನು ಇಲ್ಲಿಗೇ ಮುಗಿಸೋಣ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಖಂಡ್ರೆ, 'ನಿಮ್ಮ ಬಗ್ಗೆ ಮತ್ತು ಪೀಠದ ಬಗ್ಗೆ ಗೌರವ ಇದೆ. ನಾನು ಗಡಿ ಭಾಗದ ಬೀದರ್‌ನಿಂದ ಬಂದವನು. ನಾನು ಸಹಜವಾಗಿ ಮಾತನಾಡಿದರೂ ಅದು ಏರಿದ ಧ್ವನಿಯಲ್ಲಿ ಮಾತನಾಡಿದಂತೇ ಇರುತ್ತದೆ. ಅದನ್ನು ಟೀಕೆ ಟಿಪ್ಪಣಿ ಎಂದು ಭಾವಿಸುವುದು ಬೇಡ. ಆದರೆ, ನೀವು ಈ ರೀತಿ ಮಾತನಾಡುತ್ತೀರಿ ಎಂದು ನಿರೀಕ್ಷಿಸಿರಲಿಲ್ಲ. 3 ಲಕ್ಷ ಮತದಾರರು ನನ್ನನ್ನು ಆಯ್ಕೆ ಮಾಡಿದ್ದಾರೆ. ಅವರು ತಪ್ಪು ಮಾಡಿದ್ದಾರೆ ಎಂಬ ಭಾವನೆ ಬರುತ್ತದೆ' ಎಂದರು.

'ಕಡತ ತರಿಸಿ ಯಾವುದನ್ನು ತೆಗೆಸಬೇಕೋ ಅದನ್ನು ತೆಗೆಸುತ್ತೇನೆ' ಎಂದು ಕಾಗೇರಿ ಕಾಂಗ್ರೆಸ್ ಸದಸ್ಯರಿಗೆ ಭರವಸೆ ನೀಡಿದರು.

ಆಧಾರ: ಪ್ರಜಾವಾಣಿ, ದಿನಾಂಕ: 17.02.2023

39. ನೀರಾವರಿಗೆ ಅನುದಾನದ ಝರಿ

ಯಾವುದೇ ದೇಶ ಅಥವಾ ರಾಜ್ಯದಲ್ಲಿ ಜಲಸಂಪನ್ಮೂಲ ಸಮರ್ಪಕವಾಗಿದ್ದರೆ ಅಲ್ಲಿನ ಅಭಿವೃದ್ಧಿ ನಕ್ಷೆ ಸಹಜವಾಗಿ ಏರುಮುಖವಾಗಿರುತ್ತದೆ. ಈ ನಿಟ್ಟಿನಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿರುವ ಸಿಎಂ ಬೊಮ್ಮಾಯಿ, ನೀರಾವರಿ ಕ್ಷೇತ್ರಕ್ಕೆ ಒಟ್ಟಾರೆ ರೂ. 25,000 ಕೋಟಿ ಮೀಸಲಿಟ್ಟಿದ್ದಾರೆ.

ನೀರಾವರಿಗೆ ಆದ್ಯತೆ ನೀಡುವ ದೃಷ್ಟಿಯಿಂದ 2022–23ನೇ ಸಾಲಿನಲ್ಲಿ ರೂ. 11,23 ಕೋಟಿ ಮೊತ್ತದ 38 ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಜೊತೆಗೆ ಪ್ರಸಕ್ತ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಯಿಂದ

ಸುಮಾರು 15 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ ಸೃಜಿಸಲು ಯೋಜನೆ ರೂಪಿಸಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ.

ಕೆರೆಗಳಿಗೆ ನೀರು

ಪ್ರಸಕ್ತ ಸಾಲಿನಲ್ಲಿ ಪ್ರಗತಿಯಲ್ಲಿರುವ ಜಗಳೂರು, ಕಿತ್ತೂರು, ಬಾಳಂಬೀಡ, ಹರಪನಹಳ್ಳಿ, ಯಾದಗಿರಿ, ರಾಯಚೂರಿನ ವಿವಿಧ ಕೆರೆಗಳನ್ನು ತುಂಬಿಸುವ ಯೋಜನೆಗಳನ್ನು ಪೂರ್ಣಗೊಳಿಸುವ ಜೊತೆಗೆ ಸಸಾಲಟಿ–ಶಿವಲಿಂಗೇಶ್ವರ, ಮಂಟೂರು ಮಹಾಲಕ್ಷ್ಮೀ, ಶ್ರೀ ವೆಂಕಟೇಶ್ವರ ಏತ ನೀರಾವರಿ ಯೋಜನೆಗಳು ಮತ್ತು ಮರಿಗಾಲಿ ಸೂಕ್ಷ್ಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. ಅಲ್ಲದೆ, ಕಳಸಾ ಮತ್ತು ಬಂಡೂರಾ ನಾಲಾ ತಿರುವು ಯೋಜನೆಗಳಿಗೆ ಮಹದಾಯಿ ನ್ಯಾಯಾಧೀಕರಣದಿಂದ ಹಂಚಿಕೆಯಾದ 3.90 ಟಿಎಂಸಿ ನೀರಿನ ಬಳಕೆಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಹಸಿದವರಿಗೆ ಹೆಚ್ಚುವರಿ ಅಕ್ಕಿ

ಆಹಾರ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಹೊಸ ಯೋಜನೆಗಳನ್ನು ಈ ಬಾರಿ ಘೋಷಿಸದಿದ್ದರೂ ಹೆಚ್ಚುವರಿ ಒಂದು ಕೆಜಿ ಅಕ್ಕಿ ವಿತರಿಸಲು ರಾಜ್ಯ ಸರ್ಕಾರ ಮುಂದಾಗಿದೆ. ರಾಜ್ಯದಲ್ಲಿ ಬಡವರ ಹಸಿವು ನೀಗಿಸುವ ಅನ್ನಭಾಗ್ಯ ಯೋಜನೆಯ ಸಂಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರ ವಹಿಸಿಕೊಂಡಿರುವ ಬೆನ್ನಲ್ಲೇ ರಾಜ್ಯ ಸರ್ಕಾರ, ಬಿಪಿಎಲ್ ಕುಟುಂಬದ ಪ್ರತಿ ಸದಸ್ಯನಿಗೆ ಹೆಚ್ಚುವರಿ ಒಂದು ಕೆಜಿ ಅಕ್ಕಿ ವಿತರಿಸಲು ಬಜೆಟ್‌ನಲ್ಲಿ 4,600 ಕೋಟಿ ರೂ. ಅನುದಾನ ಮೀಸಲಿಟ್ಟಿದೆ. ಹಾಗಾಗಿ, ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ (ಎನ್‌ಎಫ್‌ಎಸ್‌ಎ) ಕೇಂದ್ರದ 5 ಕೆಜಿ, ರಾಜ್ಯದ ಪಾಲಿನ ಒಂದು ಕೆಜಿ ಸೇರಿ ಒಟ್ಟು 6 ಕೆಜಿ ಅಕ್ಕಿ ಬಿಪಿಎಲ್ ಫಲಾನುಭವಿಗಳಿಗೆ ಉಚಿತವಾಗಿ ದೊರೆಯಲಿದೆ. ಇದರಿಂದ 1,17,08,386 ಬಿಪಿಎಲ್ ಕಾರ್ಡ್‌ದಾರರಿಗೆ ಅನುಕೂಲವಾಗಲಿದೆ. 2022–23ರಲ್ಲಿ ರೂ. 2,988 ಕೋಟಿ 2021–22ರಲ್ಲಿ 2,374 ಕೋಟಿ ರೂ. ಅನುದಾನವನ್ನು ಆಹಾರ ಇಲಾಖೆಗೆ ನೀಡಲಾಗಿತ್ತು.

ಬಳ್ಳಾರಿ, ಹಾವೇರಿಗೆ ಮೆಗಾಡೇರಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಾಲು ಉತ್ಪಾದನೆ ಹೆಚ್ಚಿಸಲು ರೂ.100 ಕೋಟಿ ವೆಚ್ಚದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿದಿನ 2 ಲಕ್ಷ ಲೀಟರ್ ಹಾಲು ಸಂಸ್ಕರಣಾ ಸಾಮರ್ಥ್ಯದ ಮೆಗಾಡೇರಿ, ಹಾವೇರಿಯಲ್ಲಿ 1 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾಡೇರಿ ಸ್ಥಾಪನೆಗೆ ರೂ. 90 ಕೋಟಿ ಅನುದಾನ ಮೀಸಲಿಡಲಾಗಿದೆ.

ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ 20 ಸಾವಿರ ಫಲಾನುಭವಿಗಳಿಗೆ ರೂ. 355 ಕೋಟಿ ವೆಚ್ಚದಲ್ಲಿ ಕುರಿ ಮತ್ತು ಮೇಕೆ ಘಟಕ ಸ್ಥಾಪಿಸುವ ಯೋಜನೆ ಜಾರಿಗೆ ತರುವುದಾಗಿ ಘೋಷಿಸಲಾಗಿದೆ.

ಮುಧೋಳ ಹೌಂಡ್ ಶ್ವಾನ ತಳಿ ಅಭಿವೃದ್ಧಿ: ದೇಶದ ರಕ್ಷಣಾ ವಲಯದಲ್ಲಿ ಸದ್ದು ಮಾಡಿರುವ ಮುಧೋಳ ನಾಯಿಗಳ ತಳಿ ಅಭಿವೃದ್ಧಿಗೆ ರೂ.5 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಪ್ರಾಣಿಗಳ ಮೇಲಿನ ಹಿಂಸೆ ತಡೆಯಲು ಮತ್ತು ಪ್ರಾಣಿ ಕಲ್ಯಾಣಕ್ಕಾಗಿ ಪ್ರಾಣಿ ಕಲ್ಯಾಣ ಮಂಡಳಿಗೆ ರೂ. 5 ಕೋಟಿ ಅನುದಾನ ನೀಡುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ.

ಭದ್ರಾ ಯೋಜನೆ ಅನುಷ್ಠಾನಕ್ಕೆ ಬದ್ಧ

ಕೇಂದ್ರ ಸರ್ಕಾರವು 2023–24ನೇ ಸಾಲಿನ ಆಯವ್ಯಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಪ್ರಸಕ್ತ ಸರ್ಕಾರದ ತೀವ್ರ ಪ್ರಯತ್ನದ ಫಲವಾಗಿ 'ರಾಷ್ಟ್ರೀಯ ಯೋಜನೆ' ಮಾನ್ಯತೆ ದೊರೆಯುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು ರೂ. 5,300 ಕೋಟಿ ಸಹಾಯಧನ ಘೋಷಿಸಿದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ತುಂಗಭದ್ರಾ ಜಲಾಶಯದಲ್ಲಿ ಸಂಗ್ರಾಹಕ ಸಾಮರ್ಥ್ಯದ ಕೊರತೆ ನಿವಾರಿಸಲು ಕೊಪ್ಪಳ ಜಿಲ್ಲೆಯ ನವಲೆ ಬಳಿ ಸಮತೋಲನ ಜಲಾಶಯ (Balancing reservoir) ನಿರ್ಮಿಸಲು ಯೋಜನಾ ವರದಿ ಸಿದ್ಧಪಡಿಸಲಾಗಿದೆ. ಸದರಿ ಯೋಜನೆಯು ಅಂತರ್ ರಾಜ್ಯ ಯೋಜನೆಯಾಗಿದ್ದು, ಈಗಾಗಲೆ ಆಂಧ್ರಪ್ರದೇಶ ಸರ್ಕಾರದೊಂದಿಗೆ ಸಭೆ ನಡೆಸಲಾಗಿದೆ. ಅಂಧ್ರ ಹಾಗೂ ತೆಲಂಗಾಣ ಸಿಎಂಗಳೊಂದಿಗೆ ಸಭೆ ಜರುಗಿಸಿ, ಯೋಜನೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು ಎಂದು ಸಿಎಂ ತಿಳಿಸಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 18.02.2023

40. ಬೊಮ್ಮಾಯಿ ತೇರು: ಭರವಸೆ ಜೋರು

ಮುಂದಿನ ಚುನಾವಣೆಯಲ್ಲಿ ಮತ್ತೆ ಕೇಸರಿ ಪತಾಕೆ ಹಾರಿಸಬೇಕೆಂಬ ಟೊಂಕ ಕಟ್ಟಿರುವ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ 'ನವ ಕರ್ನಾಟಕ' ನಿರ್ಮಾಣದ ಕನಸನ್ನು ತುಸು ಬದಿಗಿಟ್ಟು, ಮತದಾರರಲ್ಲಿ ಹೊಂಗನಸು ಬಿತ್ತಿ 'ಕಮಲ'ದ ಹುಲುಸಾದ ಬೆಳೆ ತೆಗೆಯುವ ಸಾಹಸವನ್ನು ತಮ್ಮ ಬಜೆಟ್‌ನಲ್ಲಿ ಮಾಡಿದ್ದಾರೆ.

ರಾಮನಗರದಲ್ಲಿ ರಾಮಮಂದಿರ ನಿರ್ಮಾಣ, ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಅಭಿವೃದ್ಧಿ ಸೇರಿದಂತೆ ವಿವಿಧೆಡೆ ದೇವಾಲಯಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಘೋಷಿಸುವ ಮೂಲಕ 'ಹಿಂದುತ್ವ'ದ ಕಾರ್ಯಸೂಚಿಯನ್ನೂ ಬಜೆಟ್‌ನಲ್ಲಿ ತಂದಿದ್ದಾರೆ. ಬಿಜೆಪಿಗೆ ಪ್ರತಿಕೂಲ ಪರಿಸ್ಥಿತಿ ಇರುವ ಪ್ರದೇಶಗಳನ್ನು ಕೇಂದ್ರೀಕರಿಸಿರುವ ಯೋಜನೆಗಳೂ ಬಜೆಟ್‌ನಲ್ಲಿವೆ.

ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಮೊತ್ತ ರೂ. 3 ಲಕ್ಷ ಕೋಟಿ ದಾಟಿಸಿರುವ ಹಿರಿಮೆಯೂ ಅವರದ್ದಾಗಿದೆ. ಯಾವುದೇ ತೆರಿಗೆ ಭಾರ ಹೊರಿಸದೇ, ಮತಾಕರ್ಷಣೆಯ ಹಾಯಿದೋಣಿಯಲ್ಲಿ ಜನರನ್ನು ಕರೆದೊಯ್ದು, ಬಿಜೆಪಿಯನ್ನು ಮತ್ತೆ ಗೆಲ್ಲಿಸುವ ತಂತ್ರವನ್ನೂ ಹೆಣೆದಿದ್ದಾರೆ. ನಾಡಿನ ಪ್ರಗತಿಗೆ ದಿಕ್ಸೂಚಿ–ಕಾರ್ಯಸೂಚಿ ನೀಲನಕ್ಷೆ ಸ್ಪಷ್ಟವಾಗಿ ಕಾಣಿಸದೇ ಇದ್ದರೂ ಮೂಲಸೌಕರ್ಯ ಕ್ಷೇತ್ರಕ್ಕೆ ಒಂದಿಷ್ಟು ಅನುದಾನವನ್ನು ಹಂಚಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡುವ ರೈತ ವಿದ್ಯಾನಿಧಿ ಘೋಷಿಸಿದ್ದರು. ಅದನ್ನು ಸಕಲ ಸಮುದಾಯಗಳಿಗೂ ವಿಸ್ತರಿಸಿ, ವಿದ್ಯೆ ಕಲಿತರೆ ಉದ್ಯೋಗ–ಸ್ವಾವಲಂಬನೆಯತ್ತ ಸಾಗಬಹುದಾದ ದಾರಿಯನ್ನೂ ಅವರು ಹುಡುಕಿಕೊಟ್ಟಂತಿದೆ.

ರಾಜ್ಯದ ಮತದಾರರಲ್ಲಿ ಸಂಖ್ಯಾಬಾಹುಳ್ಯದಲ್ಲಿ ಪ್ರಬಲವಾಗಿರುವ ರೈತರು, ಮಹಿಳೆಯರು ಮತ್ತು ಯುವಜನರನ್ನು ಕೇಂದ್ರೀಕರಿಸಿ ಭರವಸೆಗಳ ಮಹಾಪೂರವನ್ನೇ ಹರಿಸಿದ್ದಾರೆ.

ರೈತರು–88 ಲಕ್ಷ ಕುಟುಂಬ

- ಬಡ್ಡಿರಹಿತ ಸಾಲ ಮಿತಿ ರೂ. 3 ಲಕ್ಷ ದಿಂದ 5 ಲಕ್ಷಕ್ಕೆ.
- ಕಿಸಾನ್ 'ಭೂಸಿರಿ' ಯೋಜನೆಯಡಿ ರೂ. 10 ಸಾವಿರ ಸಹಾಯಧನ.
- ಸಣ್ಣ, ಅತಿಸಣ್ಣ ರೈತರ ಕುಟುಂಬಗಳಿಗೆ ಜೀವನ್ ಜ್ಯೋತಿ ವಿಮಾ ಯೋಜನೆ.
- ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆ ಉತ್ತೇಜಿಸಲು ರೂ. 100 ಕೋಟಿ.
- ಕನಿಷ್ಠ ಬೆಂಬಲ ಬೆಲೆ ಅವರ್ತನಿಧಿ ಮೊತ್ತ ರೂ. 2,000 ಕೋಟಿಯಿಂದ ರೂ. 3,500 ಕೋಟಿಗೆ ಹೆಚ್ಚಳ.

ಸ್ತ್ರೀಯರ ಸಂಖ್ಯೆ –2.5 ಕೋಟಿ

- ಶ್ರಮ ಶಕ್ತಿ ಯೋಜನೆಯಡಿ ಮಹಿಳಾ ಕೃಷಿ ಕಾರ್ಮಿಕರಿಗೆ ತಿಂಗಳಿಗೆ ರೂ. 500.
- ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ವಿತರಣೆಗೆ ರೂ. 100 ಕೋಟಿ.
- 'ವಿದ್ಯಾವಾಹಿನಿ' ಯೋಜನೆಯಡಿ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್.
- ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸ್ವಯಂನಿವೃತ್ತಿ ವೇಳೆ ಗ್ರಾಚ್ಯುಟಿ.

ಯುವ ಸಮೂಹ

- 'ಮುಖ್ಯಮಂತ್ರಿ ವಿದ್ಯಾಶಕ್ತಿ' ಯೋಜನೆಯಡಿ ಸರ್ಕಾರಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಉಚಿತ ಶಿಕ್ಷಣ.
- ಕನ್ನಡ ಮಾಧ್ಯಮದಲ್ಲಿ ಶಾಲಾ ಶಿಕ್ಷಣ ಪಡೆದ 500 ವಿದ್ಯಾರ್ಥಿಗಳಿಗೆ 'ಹಳ್ಳಿ ಮುತ್ತು' ಯೋಜನೆಯಡಿ ಸರ್ಕಾರದಿಂದ ವೃತ್ತಿಶಿಕ್ಷಣ ಶುಲ್ಕ ಪಾವತಿ.

ಕುಸಿದ ಬೆಳವಣಿಗೆ ಕೆಸೆಗೆ ಹೊರೆ: ವಿವಿಧ ವಲಯಗಳಲ್ಲಿನ ಮೌಲ್ಯವರ್ಧನೆ ಕುಸಿದಿರುವುದರಿಂದಾಗಿ ಶ್ರೀಸಾಮಾನ್ಯರ ಜೇಬಿಗೆ ಹೆಚ್ಚಿನ ಹೊರೆ ಬಿದ್ದಿರುವುದನ್ನು ಬಜೆಟ್‌ನ ಪೂರಕ ದಾಖಲೆಗಳು ಹೇಳಿವೆ.

ಡಬಲ್ ಎಂಜಿನ್‌ನಿಂದ ರಾಜ್ಯದ ಪ್ರಗತಿಗೆ ನಾಗಾಲೋಟ ಸಿಕ್ಕಿದೆ ಹಾಗೂ ರಾಜಸ್ವ ಸಂಗ್ರಹ ಭರ್ಜರಿ ದಾಖಲೆ ಸೃಷ್ಟಿಸಿದೆ ಎಂದು ಸರ್ಕಾರ ಹೇಳುತ್ತಿದೆ. ವಿಧಾನಸಭೆಯಲ್ಲಿ ಮಂಡಿಸಿದ

ಮಾಧ್ಯಮಾವಧಿ ವಿತ್ತೀಯ ಯೋಜನೆ– 2023–27ರ ಅಂಕಿ ಅಂಶಗಳನ್ನು ಮುಂದಿಟ್ಟು, ಜನರ ಆರ್ಥಿಕ ಹೊರೆಯನ್ನು ವಿಶ್ಲೇಷಿಸಿದರೆ, ಹೊರೆ ಹೆಚ್ಚಾಗಿರುವ ಲೆಕ್ಕ ಸಿಗುತ್ತದೆ.

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಎಸ್‌ಡಿಪಿ) ಪ್ರಮುಖ ಕೊಡುವೆ ನೀಡುವುದು ಕೃಷಿ, ಕೈಗಾರಿಕೆ, ಸೇವಾ ವಲಯದ ಉತ್ಪಾದನೆ ಮತ್ತು ವ್ಯವಹಾರ, ಈ ಕ್ಷೇತ್ರದಲ್ಲಿ ಬೆಳವಣಿಗೆಯಾದರಷ್ಟೇ ಜನರ ಆದಾಯವೂ ಹೆಚ್ಚುತ್ತದೆ. 2019ರ ಈಚೆಗೆ ಈ ಮೂರು ವಲಯಗಳ ಮೌಲ್ಯವರ್ಧನೆ ಕುಸಿತದ ಕಡೆಗೆ ಸಾಗಿದೆ. 2019ರಲ್ಲಿ ಕೃಷಿ ವಲಯದಲ್ಲಿ ಶೇ.18.1 ರಷ್ಟು ಮೌಲ್ಯವರ್ಧನೆಯಾಗಿದ್ದರೆ, ನಂತರದ 2022ರಲ್ಲಿ ಇದು ಶೇ.15.2, ಶೇ.8.7 ಇಳಿಕೆಯಾಗಿತ್ತು. 2022ರಲ್ಲಿ ಇದು ಶೇ.5.5.ಕ್ಕೆ ಕುಸಿಯಲಿದೆ ಎಂದು ಅಂದಾಜಿಸಲಾಗಿದೆ.

ಋಣಾತ್ಮಕ ಹಾದಿಯಲ್ಲಿದ್ದ ಕೈಗಾರಿಕೆ ಮತ್ತು ಸೇವಾವಲಯಗಳು 2021ರಲ್ಲಿ ಶೇ.10.3ಕ್ಕೆ ಏರಿಕೆಯಾಗಿದ್ದವು. 2022ರಲ್ಲಿ ಕೈಗಾರಿಕೆ ಮೌಲ್ಯವರ್ಧನೆ ಶೇ.5.1ಕ್ಕೆ ಸೇವಾವಲಯ ಶೇ.9.2ಕ್ಕೆ ಕುಸಿದಿದೆ.

ಇದೇ ಹೊತ್ತಿಗೆ ತೆರಿಗೆ ಸಂಗ್ರಹದ ಪ್ರಮಾಣ ಶೇ.17ರಷ್ಟು ಹೆಚ್ಚಳವಾಗಿದೆ ಎಂದು ಸರ್ಕಾರ ಸಂಭ್ರಮದಿಂದ ಹೇಳಿಕೊಂಡಿದೆ. ತೆರಿಗೆ ಸಂಗ್ರಹ ಹೆಚ್ಚಾಗುವುದೆಂದರೆ ಜನರ ಜೇಬಿಗೆ ಹೆಚ್ಚಿನ ಹೊರೆ. ತಿಂಗಳ ವೆಚ್ಚ ಹೆಚ್ಚಾಗುವುದು ಎಂಬುದನ್ನು ಹೇಳಲು ವಿಶೇಷ ಪರಿಣತಿ ಬೇಕಿಲ್ಲ. ಮೌಲ್ಯವರ್ಧನೆಯೂ ಹೆಚ್ಚಾಗಿ, ಅದಕ್ಕೆ ಅಲ್ಪ ಪ್ರಮಾಣದಲ್ಲಿ ತೆರಿಗೆ ಹೆಚ್ಚಾದರೆ ಜನರ ಖರ್ಚಿಗೆ ದುಡ್ಡು ಉಳಿಯುತ್ತದೆ. ಮೌಲ್ಯವರ್ಧನೆ ಕುಸಿದರೆ, ತಿಂಗಳ ವೆಚ್ಚದ ಮೇಲೆ ಹೊರೆಯಾಗುತ್ತದೆ.

ಸಣ್ಣ ಉದಾಹರಣೆ ಮೂಲಕ ಇದನ್ನು ಹೇಳುವುದಾದರೆ, ಒಬ್ಬ ರೈತ ತಿಂಗಳಿಗೆ 2021ರಲ್ಲಿ ರೂ. 100 ಸಂಪಾದಿಸುತ್ತಿದ್ದ ಎಂದಿಟ್ಟುಕೊಂಡರೆ ಕೃಷಿ ವಲಯದ ಮೌಲ್ಯವರ್ಧನೆ ಶೇ.5.5ರಷ್ಟು ಹೆಚ್ಚಳವಾದಲ್ಲಿ ಆದಾಯ ರೂ. 105.50ಕ್ಕೆ ಏರುತ್ತದೆ. ಹಣದುಬ್ಬರದ ಪ್ರಮಾಣ ಶೇ.6 ರಷ್ಟು ಎಂದುಕೊಂಡರೂ ರೂ.100ರ ಮೌಲ್ಯ ರೂ.98.93ರಷ್ಟಾಗುತ್ತದೆ. ರೂ.100ಕ್ಕೆ ಶೇ.17ರಷ್ಟು ಅಂದರೆ ರೂ.17 ಪರೋಕ್ಷ ತೆರಿಗೆ ರೂಪದಲ್ಲಿ ಕಡಿತವಾದರೆ ಆತನಿಗೆ ಉಳಿಯುವುದು ಕೇವಲ ರೂ.82 ಮಾತ್ರ ಇದು ಸದ್ಯದ ಪರಿಸ್ಥಿತಿ.

ಅಲ್ಪಸಂಖ್ಯಾತರತ್ತ ಒಲವು

ಬಿಜೆಪಿ ಸರ್ಕಾರದ ಅವಧಿಯ ಹಿಂದಿನ ವರ್ಷಗಳ ಬಜೆಟ್‌ಗಳಿಗೆ ಹೋಲಿಸಿದರೆ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಈ ಬಾರಿ ವಿಶೇಷ ಕಾರ್ಯಕ್ರಮಗಳನ್ನು ಪ್ರಕಟಿಸಲಾಗಿದೆ. ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ವಿದೇಶಗಳ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಬಡ್ಡಿರಹಿತ ಸಾಲ. ಅಗ್ನಿವೀರರ ನೇಮಕಾತಿಗೆ ತರಬೇತಿ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡಿರುವ ಅನುದಾನದದ ಮೊತ್ತ ರೋ.60 ಕೋಟಿ ಇದ್ದದ್ದು ರೂ.110ಕೋಟಿಗೆ ಜಿಗಿದಿದೆ. 'ಅಲ್ಪಸಂಖ್ಯಾತರರನ್ನೂ ಒಳಗೊಳ್ಳಬೇಕು' ಎಂಬ ಪ್ರಧಾನಿ ನರೇಂದ್ರ ಮೋದಿಯವರ ಸೂಚನೆಯೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಆಧಾರ: ಪ್ರಜಾವಾಣಿ, ದಿನಾಂಕ:18.02.2023

41. ಸದನಕ್ಕೆ ಬರಲು ಮತ್ತೊಮ್ಮೆ ಮನವಿ

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಸೋಲು–ಗೆಲುವಿನ ಆಲೋಚನೆಯಲ್ಲಿ ಸದನಕ್ಕೆ ಬಾರದೇ ಇರುವುದು ತಪ್ಪು ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು. ಸೋಮವಾರ 10.30ಕ್ಕೆ ನಿಗದಿಯಾಗಿದ್ದ ಕಲಾಪ ಕೋರಂ ಆಗದ ಕಾರಣ 11.30 ಕ್ಕೆ ಪ್ರಾರಂಭವಾದ್ದರಿಂದ ಸದನದಲ್ಲಿ

ಎರಡೂ ಕಡೆ ಸೇರಿ 30 ಸದಸ್ಯರು ಹಾಜರಿದ್ದ ಕಾರಣ ಬೇಸರ ವ್ಯಕ್ತಪಡಿಸಿದ ಅವರು, ಚುನಾವಣೆಯ ದೃಷ್ಟಿಯಿಂದ ಸಂಸದೀಯ ವ್ಯವಸ್ಥೆಯನ್ನು ಕಡೆಗಣಿಸಬಾರದು ಎಂದು ಹೇಳಿದರು. ಎಲ್ಲರಿಗೂ ಚುನಾವಣೆಯಲ್ಲಿ ಒಳ್ಳೆಯದಾಗಲಿ. ಈ ವ್ಯವಸ್ಥೆಯ ಬಗ್ಗೆ ಜನರಿಗೆ ಹೆಚ್ಚು ವಿಶ್ವಾಸ ಮೂಡುವಂತೆ, ವ್ಯವಸ್ಥೆಗೆ ಹೆಚ್ಚು ಶಕ್ತಿ ತುಂಬುವ ರೀತಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಸದನಕ್ಕೆ ಆಗಮಿಸಿ ಕಲಾಪದಲ್ಲಿ ಭಾಗಿಯಾಗಬೇಕು. ಇದಕ್ಕಿಂತ ಹೆಚ್ಚು ಹೇಳುವುದಿಲ್ಲ ಎಂದು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ: 21.02.2023

42. ಜೂನ್ ಅಂತ್ಯಕ್ಕೆ ವಿವೇಕ ಕಟ್ಟಡಗಳು ಪೂರ್ಣ

ರಾಜ್ಯದಲ್ಲಿ ಶಿಕ್ಷಣಕ್ಕೆ ಇನ್ನಿಲ್ಲದ ಆದ್ಯತೆಯನ್ನು ನೀಡಲಾಗಿದ್ದು, ಶಿಥಿಲ ಶಾಲಾ ಕಟ್ಟಡಗಳ ದುರಸ್ಥಿ ಮತ್ತು ವಿವೇಕ ಯೋಜನೆಯಡಿ ಹೊಸ ಕೊಠಡಿಗಳ ನಿರ್ಮಾಣ ಜೂನ್ ತಿಂಗಳ ಒಳಗೆ ಮುಗಿಯಲಿದೆ. ಇದಕ್ಕಾಗಿ 1900 ಕೋಟಿ ರೂಪಾಯಿ ಮೀಸಲಾಗಿಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಗೆ ತಿಳಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಚರ್ಚೆಗೆ ಉತ್ತರಿಸಿ ಅವರು ಮಾತನಾಡಿದರು. 2015–16ರ ನಂತರ ಶಾಲಾ ಕೊಠಡಿಗಳೇ ನಿರ್ಮಾಣವಾಗಿರಲಿಲ್ಲ. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ನಮ್ಮ ಸರ್ಕಾರ 8 ಸಾವಿರ ಶಾಲಾ ಕೊಠಡಿಗಳನ್ನು ಈಗಾಗಲೇ ಕಟ್ಟಿದೆ ಎಂದು ಹೇಳಿದರು.

ಹದಿನೈದು ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಇದರಲ್ಲಿ ಐದು ಸಾವಿರ ಶಿಕ್ಷಕರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದರು.

ಡಿಜಿಟಲೀಕರಣದಿಂದ ಕೂಡಿದ ಎಂಟು ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗಿದೆ. ಕರ್ನಾಟಕದ ಏಳು ಎಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಉನ್ನತೀಕರಣ ಮಾಡಲಾಗುತ್ತಿದೆ. ಇವಕ್ಕೆ ಕೆಐಟಿ ಎಂಬ ಹೆಸರಿಡಲಾಗಿದೆ. 50 ಕೋಟಿ ರೂಪಾಯಿ ಪ್ರಾರಂಭಿಕ ಅನುದಾನವನ್ನು ಇದಕ್ಕಾಗಿ ನೀಡಲಾಗಿದೆ.

ಹೆಣ್ಣು ಮಕ್ಕಳು ಹೆಚ್ಚು ಓದುತ್ತಿದ್ದಾರೆ. ಅಲ್ಪಸಂಖ್ಯಾತ ಹೆಣ್ಣು ಮಕ್ಕಳು ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚು ಓದುತ್ತಿರುವುದು ಕಂಡು ಬರುತ್ತಿದೆ. ಇದು ಸಕಾರಾತ್ಮಕ ಅಂಶ ಎಂದರು.

ಇದಕ್ಕೆ ಕಾಂಗ್ರೆಸ್‌ನ ಪ್ರಿಯಾಂಕ ಖರ್ಗೆ ಆಕ್ಷೇಪ ವ್ಯಕ್ತಪಡಿಸಿ, ನಿಮ್ಮ ಅಂಕಿಸಂಖ್ಯೆ ಸುಳ್ಳು ಎಂದರು.

ಯಾರದ್ದೋ ಒತ್ತಡಕ್ಕೆ ಮಣಿದು ಪದವಿಪೂರ್ವ (ಪಿಯು) ಕಾಲೇಜುಗಳಿಲ್ಲದ ಕಡೆಯೂ ಈ ಹಿಂದೆ ಪದವಿ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ ಎಂದು ಯಾರನ್ನೂ ಹೆಸರಿಸದೇ ಸಿಎಂ ಕಟುಕಿದರು.

5 ತಿಂಗಳಲ್ಲಿ ಶೌಚಾಲಯ

ರಾಜ್ಯದ ಎಲ್ಲ ಶಾಲೆಗಳಲ್ಲಿ ಮುಂಬರುವ ಆಗಸ್ಟ್ 15ರ ಹೊತ್ತಿಗೆ ಶೌಚಾಲಯಗಳು ನಿರ್ಮಾಣವಾಗಲಿವೆ ಎಂದು ಮುಖ್ಯಮಂತ್ರಿ ತಿಳಿಸಿದರು. ಆಗ, ಇವನ್ನು ನಿರ್ವಹಣೆ ಮಾಡಲು ಪಂಚಾಯಿತಿಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳಿ. ಶಾಲಾಭಿವೃದ್ಧಿ ಸಮಿತಿಗಳಿಂದಷ್ಟೇ ನಿರ್ವಹಣೆ ಆಗದು ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಸರ್ಕಾರಕ್ಕೆ ಸಲಹೆ ಮಾಡಿದರು.

ಜಲಜೀವನ ಮಿಷನ್

ಜಲಜೀವನ್ ಮಿಷನ್ ಅಡಿ ರಾಜ್ಯ ಮುಂಚೂಣಿಯಲ್ಲಿದ್ದು ಶೇಕಡಾ 62ರಷ್ಟು ಮನೆಗಳಿಗೆ ಈಗಾಗಲೇ ನಲ್ಲಿಗಳನ್ನು ಅಳವಡಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಈ ವರ್ಷ ಇನ್ನೂ 25 ಲಕ್ಷ ಗ್ರಾಮೀಣ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 21.02.2023

43. 15ನೇ ವಿಧಾನಸಭೆ ಶಾಸಕರ ಫೋಟೋ ಸೆಷನ್

ಹದಿನೈದನೇ ವಿಧಾನಸಭೆಯ ಕೊನೇ ಅಧಿವೇಶನದ ಹಿನ್ನೆಲೆಯಲ್ಲಿ ವಿಧಾನಸಭೆಯ ಎಲ್ಲ ಸದಸ್ಯರ ಜತೆಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಫೋಟೋ ಸೆಷನ್ ನಡೆಸಿದರು. ಸಂಜೆ 5 ಗಂಟೆಗೆ ನಡೆದ ಫೋಟೋ ಸೆಷನ್‌ನಲ್ಲಿ ಸಿಎಂ ಬಸವರಾಜ ಬೊಮ್ಮಾಯಿ, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಸಚಿವರು ಹಾಗೂ ಎಲ್ಲ ಪಕ್ಷದ ಶಾಸಕರು ಭಾಗವಹಿಸಿದ್ದರು. ನೀವು ಫೋಟೋ ತೆಗೆಯೋಣ ಎಂದು ಹೇಳಿದ್ದೀರೆಂಬ ಕಾರಣಕ್ಕೆ ಜ್ವರ ಇದ್ದರೂ ಬಂದಿದ್ದೇನೆ ಎಂದು ಸಿದ್ದರಾಮಯ್ಯ ಸದನದಲ್ಲಿ ಹೇಳಿದರು. ಸದನದಲ್ಲಿ ಸದಸ್ಯರ ಹಾಜರಾತಿ ಕಡಿಮೆ ಇದ್ದರೂ ಫೋಟೋ ಸೆಷನ್‌ಗೆ ಹಾಜರಾತಿಯೇನೂ ಕಡಿಮೆ ಇರಲಿಲ್ಲ.

ಆಧಾರ: ವಿಜಯವಾಣಿ, ದಿನಾಂಕ: 21.02.2023

ದಿನಾಂಕ: 20.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು 15ನೇ ವಿಧಾನಸಭೆಯ ಅಂತಿಮ ಅಧಿವೇಶನದ ಹಿನ್ನೆಲೆಯಲ್ಲಿ ಸನ್ಮಾನ್ಯ ವಿಧಾನ ಸಭೆಯ ಸದಸ್ಯರುಗಳೊಂದಿಗಿನ ಭಾವಚಿತ್ರ:– (ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು, ವಿರೋಧ ಪಕ್ಷದ ನಾಯಕರು ಹಾಗೂ ಸಚಿವ ಸಂಪುಟ ಸದಸ್ಯರು ಉಪಸ್ಥಿತರಿದ್ದರು)

44. 3 ತಿಂಗಳಲ್ಲಿ ಎಲ್ಲರಿಗೂ ಆಯುಷ್ಮಾನ್ ಕಾರ್ಡ್

ಮುಂದಿನ ಮೂರು ತಿಂಗಳೊಳಗೆ ನೋಂದಾಯಿತ ಎಲ್ಲರಿಗೂ 'ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ' ಕಾರ್ಡ್ ವಿತರಣೆ ಮಾಡಲಾಗುವುದು ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ತಿಳಿಸಿದ್ದಾರೆ.

ಕಾಂಗ್ರೆಸ್‌ನ ಕೆ. ಹರೀಶ್ ಕುಮಾರ್, ಯು.ಬಿ. ವೆಂಕಟೇಶ್ ಅವರು ಪ್ರತ್ಯೇಕವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಡಿ 39.48 ಕೋಟಿ ಜನರು ಚಿಕಿತ್ಸೆ ಪಡೆದಿದ್ದು, 3 ಸಾವಿರ ಕೋಟಿ ರೂಗಿಂತ ಹೆಚ್ಚು ವೆಚ್ಚ ಮಾಡಲಾಗಿದೆ. ತುರ್ತು ಸಂದರ್ಭದಲ್ಲಿ ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಯಾವುದೇ ದಾಖಲೆ ಇಲ್ಲದೆ ಇದ್ದರೂ ಚಿಕಿತ್ಸೆ ನೀಡಬೇಕು. ಈ ಸಂಬಂಧ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮಗಳ ಸೂಚನೆಯಲ್ಲಿ ತಿಳಿಸಲಾಗಿದೆ. ವೈದ್ಯರ ಶಿಫಾರಸ್ಸು ಪತ್ರದೊಂದಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುವಂತಹ ವ್ಯವಸ್ಥೆ ರದ್ದು ಮಾಡಲು ಸಾಧ್ಯವಿಲ್ಲ. ಶಿಫಾರಸ್ಸು ಪತ್ರವಿಲ್ಲದೆ ಚಿಕಿತ್ಸೆ ನೀಡಲು ಆರಂಭಿಸಿದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಯಾರೂ ಮುಂದೆ ಬರುವುದಿಲ್ಲ ಎಂದು ಸಚಿವರು ಸ್ಪಷ್ಟನೆ ನೀಡಿದರು.

ಬಾಕಿ ಪಾವತಿ 15 ದಿನಕ್ಕೆ ಇಳಿಕೆಗೆ ಯತ್ನ: ಯೋಜನೆಯಡಿ ಚಿಕಿತ್ಸಾ ಮೊತ್ತವನ್ನು ಪಡೆಯಲು ಖಾಸಗಿ ಆಸ್ಪತ್ರೆಗಳು ಆರೆಂಟು ತಿಂಗಳು ಕಾಯಬೇಕಿತ್ತು. ಈಗ ಒಂದು ತಿಂಗಳಿಗೆ ಇಳಿಸಲಾಗಿದೆ. ಮುಂದಿನ ದಿನಗಳಲ್ಲಿ 15 ದಿನಕ್ಕೆ ಇಳಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಸುಧಾಕರ್ ಉತ್ತರಿಸಿದರು.

1.78 ಕೋಟಿ ಜನರ ನೋಂದಣಿ: ಕಳೆದ ಮೂರು ವರ್ಷಗಳಲ್ಲಿ ಯೋಜನೆಯಡಿ 1,78,03,648 ಜನರು ನೋಂದಣಿ ಮಾಡಿಕೊಂಡಿದ್ದಾರೆ. ಕಳೆದ ಸೆಪ್ಟೆಂಬರ್ 2022ರಿಂದ ಈ ವರ್ಷದ ಜನವರಿ 31ರವರೆಗೆ ಉಚಿತ ಪಿವಿಸಿ ಕಾರ್ಡ್‌ಗಾಗಿ 1.28 ಕೋಟಿ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದು, ನೋಂದಣಿ ಕಾರ್ಯ ಮುಂದುವರೆದಿದೆ. ಸದರಿ ಕಾರ್ಡ್‌ಗಳನ್ನು ಬಳಸಿ ದೇಶದ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಆಯುಷ್ ಆಸ್ಪತ್ರೆಗೆ ಆದ್ಯತೆ: ಇತ್ತೀಚೆಗೆ ಆಯುಷ್ ಚಿಕಿತ್ಸೆಗೆ ಹೆಚ್ಚಿನ ಒಲವು ವ್ಯಕ್ತವಾಗುತ್ತಿರುವುದರಿಂದ ಆಯುಷ್ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಒಟ್ಟಾರೆ ರಾಜ್ಯದ 135 ಆಸ್ಪತ್ರೆಗಳಲ್ಲಿ 1460 ಹಾಸಿಗೆ ಸೌಲಭ್ಯಗಳಿವೆ. ಬಹುತೇಕ ಆಸ್ಪತ್ರೆಗಳು 5ರಿಂದ 10 ಹಾಸಿಗೆಗಳನ್ನು ಹೊಂದಿವೆ.ಹೀಗಾಗಿ ಇಂತಹ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿದ ನಂತರ ತಜ್ಞ ವೈದ್ಯರು ಹಾಗೂ ಇತರ ಸೌಲಭ್ಯ ಕಲ್ಪಿಸಲು ಸಾಧ್ಯ. ಈ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಆಧಾರ: ಕನ್ನಡ ಪ್ರಭ, ದಿನಾಂಕ: 21.02.2023

45. ನಿಮ್ಮ ಕಳಂಕವನ್ನು ಮೊದಲು ತೊಳೆದುಕೊಳ್ಳಿ

ಕಾಂಗ್ರೆಸ್ ಎಂದರೆ ಭ್ರಷ್ಟಾಚಾರ, ಕಮಿಷನ್‌ಗೂ ಅದಕ್ಕೂ ಬಿಡಿಸಲಾರದ ನಂಟು. ನಮ್ಮ ಪಕ್ಷದ ವಿರುದ್ಧ ಪೋಸ್ಟರ್‌ಗಳನ್ನು ಅಂಟಿಸುವ ಮೊದಲು ನಿಮ್ಮ ಪಕ್ಷದ ಕಳಂಕ ತೊಳೆದುಕೊಂಡು ಬನ್ನಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತೇಜಿಸಿ, ಕಾಂಗ್ರೆಸ್‌ನ ಟೀಕೆಗಳಿಗೆ ಪ್ರತಿಕ್ರಿಯಿಸಿದರು. ಕಾಂಗ್ರೆಸ್ ಸುಳ್ಳು ಹೇಳಿಕೊಂಡು ಅದನ್ನೇ ಸತ್ಯ ಮಾಡಲು ಹೊರಡಿದೆ. 100 ಬಾರಿ ಸುಳ್ಳು ಹೇಳಿದರೆ ಅದನ್ನು ಸತ್ಯ ಎಂದು ಜನ ನಂಬುತ್ತಾರೆ ಎಂದು ಕಾಂಗ್ರೆಸಿಗರು ಅಂದುಕೊಂಡಿದ್ದಾರೆ. ಆದರೆ, ರಾಜ್ಯದ ಜನ ಅವರ ಮಾತನ್ನು ನಂಬುವಷ್ಟು ಮೂರ್ಖರಲ್ಲ. ಕಾಲ ಕಾಲಕ್ಕೆ ಉತ್ತರ ನೀಡಿದ್ದಾರೆ ಮತ್ತು ನೀಡಲಿದ್ದಾರೆ. ಆಗ ಕಾಂಗ್ರೆಸ್‌ಗೆ ಅವರ ಮೂರ್ಖತನದ ಅರಿವು ಮತ್ತೊಮ್ಮೆ ಆಗಲಿದೆ ಎಂದು ಕಿಡಿ ಕಾರಿದರು.

ಗುತ್ತಿಗೆದಾರರನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ರಾಜಕಾರಣ ಮಾಡಲು ಹೊರಟಿದೆ. ಭ್ರಷ್ಟಾಚಾರ ನಡೆದಿದ್ದರೆ ದಾಖಲೆಗಳನ್ನು ಕೊಡಿ, ತನಿಖೆ ಮಾಡಿಸುತ್ತೇವೆ ಎಂದರೂ ದಾಖಲೆ ಒದಗಿಸಲಿಲ್ಲ. ಕನಿಷ್ಠ ಲೋಕಾಯುಕ್ತಕ್ಕೆ ಅಥವಾ ನ್ಯಾಯಾಲಯಕ್ಕೂ ದೂರು ನೀಡಲಿಲ್ಲ. ಕೇವಲ ಗಾಳಿಯಲ್ಲಿ ಗುಂಡು ಹಾರಿಸುವ ಕೆಲಸ ಮಾಡಿದ್ದಾರೆ. ಇದರ ಹಿಂದೆ ಕಾಂಗ್ರೆಸ್ ಕುಮ್ಮಕ್ಕಿರುವುದು ಸ್ಪಷ್ಟವಾಗಿದೆ ಎಂದು ತಿರುಗೇಟು ನೀಡಿದರು.

ತೌಡು ಕುಟ್ಟೋದು ಕಾಂಗ್ರೆಸ್‌ಗೆ ಸೀಮಿತ: ಬಿಜೆಪಿ ಸರಕಾರ ಯಾವತ್ತೂ ತೌಡು ಕುಟ್ಟುವ ಕೆಲಸ ಮಾಡಿಲ್ಲ. ಈ ಕೆಲಸ ಏನಿದ್ದರೂ ಕಾಂಗ್ರೆಸ್‌ಗೆ ಸೀಮಿತ, ರಾಜ್ಯಪಾಲರು ಸತ್ಯ ಮತ್ತು ವಾಸ್ತವಾಂಶದ ಆಧಾರದ ಮೇಲೆ ಭಾಷಣ ಮಾಡಿದ್ದಾರೆ. ಇದರಲ್ಲಿ ಯಾವುದೇ ರಾಜಕಾರಣ ಇಲ್ಲ ಎಂದರು. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಕೇವಲ ತೌಡು ಕುಟ್ಟಿಕೊಂಡೇ ಜನರನ್ನು ದಾರಿತಪ್ಪಿಸಿತು. ಅದರ ಅನುಭವದ ಮೇಲೆ ಪ್ರತಿಪಕ್ಷ ನಾಯಕರು ನಮ್ಮ ಬಗ್ಗೆ ಮಾತನಾಡಿದ್ದಾರೆ. ಆದರೆ, ನಾವು ಅಧಿಕಾರಕ್ಕೆ ಬಂದ ಮೇಲೆ ಭತ್ತ ಕುಟ್ಟಿ ಅಕ್ಕಿ ತೆಗೆಯುವ ಕೆಲಸ ಮಾಡಿದ್ದೇವೆ. ನಿಖರವಾಗಿ ಕಾರ್ಯಕ್ರಮಗಳನ್ನು ಜಾರಿ ಮಾಡಿ ಭತ್ತದಿಂದ ಅಕ್ಕಿ ತೆಗೆಯುವ ಕೆಲಸ ಮಾಡಿದ್ದೇವೆ ಎಂದು ಹೇಳಿದರು.

ಅಂಕಿ ಅಂಶಗಳ ಸಹಿತ ಉತ್ತರಿಸಿದ ಸಿಎಂ

- ರೈತ ಶಕ್ತಿ ಯೋಜನೆಯಡಿ 53 ಲಕ್ಷ ರೈತರಿಗೆ ರೂ.383 ಕೋಟಿ ವಿವಿಧ ರೂಪದ ಪರಿಹಾರ ಒದಗಿಸಲಾಗಿದೆ.
- 20 ಲಕ್ಷ ರೈತರಿಗೆ ಸಾಲ ನೀಡಿದ್ದು, ಮಾರ್ಚ್ ಅಂತ್ಯಕ್ಕೆ 30 ಲಕ್ಷ ರೈತರಿಗೆ ಸಾಲ ವಿತರಣೆ ಮಾಡುವ ಗುರಿ ಇದೆ.
- ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ 8 ಸಾವಿರ ಶಾಲಾ ಕೊಠಡಿ ನಿರ್ಮಿಸುತ್ತಿದ್ದು, ಜುಲೈಗೆ ಪೂರ್ಣಗೊಳ್ಳಲಿದೆ.
- ಯಶಸ್ವಿನಿ ಯೋಜನೆ ಮರುಜಾರಿ ಮಾಡಿ ರೂ.300 ಕೋಟಿ ಅನುದಾನ ಒದಗಿಸಲಾಗಿದೆ.
- ರೈತರಿಗೋಸ್ಕರ ಕೃಷಿ ಉತ್ಪನ್ನಗಳಿಗೆ ರೈತರಿಂದಲೇ ದೊಡ್ಡ ಪ್ರಮಾಣದ ಮಾರುಕಟ್ಟೆ ಸೃಜನೆ ಮಾಡಲಾಗಿದೆ.
- 5 ಲಕ್ಷ ಮೆಟ್ರಿಕ್ ಟನ್‌ಗಿಂತ ಹೆಚ್ಚು ರಾಗಿಯನ್ನು ಬೆಂಬಲ ಬೆಲೆ ನೀಡಿ ಖರೀದಿಸಲಾಗಿದೆ.
- ತೊಗರಿ ಬೆಳೆಗೆ ರೋಗ ಬಂದಿದ್ದರಿಂದ ಹೆಕ್ಟೇರ್‌ಗೆ ಹತ್ತು ಸಾವಿರ ರುಪಾಯಿ ನೀಡಲಾಗಿದೆ.

- ಜೋಳ, ಕುಚ್ಚಲಕ್ಕಿ ಮೊದಲಾದವುಗಳನ್ನು ಬೆಂಬಲ ಬೆಲೆ ನೀಡಿ ಖರೀದಿಸಲಾಗಿದೆ.
- ಅನೇಕ ವರ್ಷಗಳಿಂದ ಶಿಕ್ಷಕರ ನೇಮಕ ಆಗದೆ ಎದುರಾಗಿದ್ದ ತೊಂದರೆ ಬಗೆಹರಿಸಲು 15 ಸಾವಿರ ಶಿಕ್ಷಕರನ್ನು ನೇಮಿಸಲಾಗಿದೆ.
- ಎನ್‌ಇಪಿ ಅಡಿ ಎಲ್ಲ ಪಠ್ಯಗಳನ್ನು ಕನ್ನಡದಲ್ಲಿ ಅನುವಾದಿಸಲು ಬಜೆಟ್‌ನಲ್ಲಿ ಅನುದಾನ ನೀಡಲಾಗಿದೆ.
- ರಾಜ್ಯದ ಏಳು ಎಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಉನ್ನತೀಕರಣ ಮಾಡಲಾಗುತ್ತಿದೆ.
- ಜಲಜೀವನ ಮಿಷನ್ ಯೋಜನೆಯಡಿ 25 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ನೀರು ಒದಗಿಸಲು ಅನುಮೋದಿಸಲಾಗಿದೆ.
- ಹೊಸದಾಗಿ ಹಿಂದುಳಿದ ವರ್ಗದ ಎರಡೂವರೆ ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯ ಪಡೆದಿದ್ದಾರೆ.
- ಹೆಚ್ಚುವರಿ 30 ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲು ರೂ.250 ಕೋಟಿ ಒದಗಿಸಲಾಗಿದೆ.
- ಪರಿಶಿಷ್ಟ ಜಾತಿ, ಪಂಗಡ ವಿದ್ಯಾರ್ಥಿಗಳಿಗೆ ರಾಜ್ಯದ 5 ಕಡೆ ಮೆಗಾ ಹಾಸ್ಟೆಲ್ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದಿದೆ.

ಕಾಂಗ್ರೆಸ್ ಕಾಲದ ಹಗರಣಗಳು ಲೋಕಾಯುಕ್ತ ತನಿಖೆಗೆ

ಲೋಕಾಯುಕ್ತ ಸಂಸ್ಥೆ ಮುಚ್ಚಿ ಮುಖ್ಯಮಂತ್ರಿಯವರ ಅಧೀನದಲ್ಲಿ ಆರಂಭಿಸಿದ ಎಸಿಬಿ ದುರ್ಬಳಕೆ ಮಾಡಿಕೊಂಡು 50ಕ್ಕೂ ಹೆಚ್ಚು ಭ್ರಷ್ಟಾಚಾರ, ಅಕ್ರಮಗಳನ್ನು ಮುಚ್ಚಿ ಹಾಕಲಾಯಿತು. ನಾವು ಬಂದ ಮೇಲೆ ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡಿ, ಮುಚ್ಚಿ ಹಾಕಲಾಗಿದ್ದ ಎಲ್ಲ ಪ್ರಕರಣವನ್ನೂ ಲೋಕಾಯುಕ್ತಕ್ಕೆ ವಹಿಸಲಾಯಿತು. ನಮ್ಮದನ್ನು 40 ಪರ್ಸೆಂಟ್ ಸರಕಾರ ಎನ್ನಲು ಕಾಂಗ್ರೆಸ್‌ಗೆ ಯಾವ ನೈತಿಕತೆ ಇದೆ? ಅವರ ಅವಧಿಯಲ್ಲಿ ಅನೇಕ ಯೋಜನೆಗಳಿಗೆ ಟೆಂಡರ್ ಕರೆದರೂ ಕಾಮಗಾರಿ ಮಾಡದೆ ಲೂಟಿ ಹೊಡೆದಿದ್ದಾರೆ. ಇಂಥವರು ಭ್ರಷ್ಟಾಚಾರದ ಬಗ್ಗೆ ಮಾತನಾಡುವುದೇ ಹಾಸ್ಯಾಸ್ಪದ ಎಂದರು ಸಿಎಂ.

ರಾಜ್ಯದಲ್ಲಿ ಹೆಚ್ಚುವರಿ ತೆರಿಗೆ ರೂ. 15 ಸಾವಿರ ಕೋಟಿ ಸಂಗ್ರಹ

ಕೋವಿಡ್ ಮತ್ತು ಪ್ರವಾಹದಂತಹ ಸವಾಲುಗಳ ಮಧ್ಯೆಯೂ ಆರ್ಥಿಕ ಶಿಸ್ತು ಮತ್ತು ಪ್ರಗತಿಗೆ ಆದ್ಯತೆ ನೀಡಿರುವ ಸರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿರೀಕ್ಷೆ ಮೀರಿ ನಾನಾ ಮೂಲಗಳಿಂದ 15 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ತೆರಿಗೆ ಸಂಗ್ರಹಿಸಿದೆ ಎಂದು ಮುಖ್ಯ ಮಂತ್ರಿ ಬಸವರಾಜ

ಬೊಮ್ಮಾಯಿ ಹೇಳಿದ್ದಾರೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿ, ಭಾಷಣವನ್ನು ಸಮರ್ಥಿಸಿಕೊಂಡ ಅವರು, ಆರ್ಥಿಕ ಹಿಂಜರಿತ, ಕೋವಿಡ್ ಸವಾಲು, ಎರಡು ಬಾರಿ ಪ್ರವಾಹ... ಈ ಎಲ್ಲ ಸವಾಲುಗಳೊಂದಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡೆ. ಆರಂಭದಿಂದಲೂ ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಯಿತು. ತೆರಿಗೆ ದಕ್ಷತೆಗೆ ಆದ್ಯತೆ ನೀಡಿ, ತೆರಿಗೆ ವಂಚಕರನ್ನು ಪತ್ತೆಹಚ್ಚುವ ಮೂಲಕ ತೆರಿಗೆ ಸಂಗ್ರಹಕ್ಕೆ ವಿಶೇಷ ಗಮನ ನೀಡಿದ್ದರಿಂದ ರಾಜಸ್ವ ಸಂಗ್ರದಲ್ಲಿ ಸಾಕಷ್ಟು ಸುಧಾರಣೆಯಾಯಿತು ಎಂದರು.

ಕೋವಿಡ್ ಸಂದರ್ಭದಲ್ಲಿ ಬೇರೆ ರಾಜ್ಯಗಳಲ್ಲಿ ಆಮ್ಲಜನಕ ಸಿಗುವುದೇ ದುಸ್ತರ ಎಂಬ ಪರಿಸ್ಥಿತಿ ಇತ್ತು. ಆದರೆ, ನಮ್ಮಲ್ಲಿ ಅಂದಿನ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಆಕ್ಸಿಜನ್ ತಯಾರಕರನ್ನು ಕರೆಸಿ ಉತ್ಪಾದನೆ ಹೆಚ್ಚಿಸಿದರು. ರಾಜ್ಯಕ್ಕೆ ಗರಿಷ್ಠ ಮಿತಿಯಲ್ಲಿ ಆಕ್ಸಿಜನ್ ಒದಗಿಸಲಾಯಿತು. ಲಸಿಕಾಕರಣವನ್ನು ಯಶಸ್ವಿಯಾಗಿ ನಡೆಸಲಾಯಿತು. ಇದರ ಪರಿಣಾಮ 3 ಮತ್ತು 4ನೇ ಅಲೆಗಳನ್ನು ಸಮರ್ಥವಾಗಿ ಎದುರಿಸಿದೆವು. ಈ ಸಂದರ್ಭದಲ್ಲಿ ಆರೋಗ್ಯ ಸಿಬ್ಬಂದಿ, ಪೊಲೀಸ್ ಸೇರಿದಂತೆ ಎಲ್ಲರೂ ತ್ವರಿತವಾಗಿ ಕೆಲಸ ಮಾಡಿದರು. ಅವರನ್ನು ಪ್ರಶಂಸಿಸುವುದರ ಜೊತೆ ಧನ್ಯವಾದವನ್ನೂ ಹೇಳಬೇಕಾಗಿರುವುದು ನಮ್ಮ ಕರ್ತವ್ಯ ಎಂದರು.

ಇದೇ ವೇಳೆ ತಮ್ಮ ಸರಕಾರದ ಸಾಧನೆಗಳ ವಿವರಗಳನ್ನು ನೀಡಿ, ಕಾಂಗ್ರೆಸ್ ಈ ವಿಚಾರದಲ್ಲಿ ಸುಳ್ಳುಗಳನ್ನು ಹೇಳಿ ಅದನ್ನೇ ಸತ್ಯ ಮಾಡಲು ಹೊರಟಿದೆ. ಆದರೆ, ಜನರಿಗೆ ಸತ್ಯ ಏನೆಂಬುದು ಗೊತ್ತಿದೆ. ಅವರೇ ಕಾಂಗ್ರೆಸ್ಸಿಗರಿಗೆ ಸರಿಯಾದ ಉತ್ತರ ಕೊಡಲಿದ್ದಾರೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್ ಸಭಾತ್ಯಾಗ: ಮುಖ್ಯಮಂತ್ರಿ ಉತ್ತರ ಖಂಡಿಸಿ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ಮತ್ತು ಜೆಡಿಎಸ್ ಸದಸ್ಯ ಶಿವಲಿಂಗೇಗೌಡ ಸಭಾತ್ಯಾಗ ಮಾಡಿದರು. ಇದರ ನಡುವೆಯೇ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯ ಅಂಗೀಕರಿಸಲಾಯಿತು. ಸಿಎಂ ಬೊಮ್ಮಾಯಿ ಮಾತು ಮುಗಿಸುವ ಮೊದಲೇ ಪ್ರತಿಪಕ್ಷ ಉಪನಾಯಕ ಯು.ಟಿ.ಖಾದರ್, ನಿಮ್ಮ ಭಾಷಣ ಕೇವಲ ಸದನಕ್ಕೆ ಸೀಮಿತವಾಗದಿರಲಿ, ಬಡವರಿಗೆ ರೇಷನ್ ಕಾರ್ಡ್ ನೀಡಲು ಇನ್ನೂ ಆಗಿಲ್ಲ, ಹೊರಗಡೆ ಜನರು ಏನು ಮಾತನಾಡುತ್ತಿದ್ದಾರೆ ಎಂಬುದನ್ನು ತಿಳಿಯಿರಿ. ನಿಮ್ಮ ಪಕ್ಷದ ಶಾಸಕರಿಗೆ ಜನರ ಆಕ್ರೋಶ ಗೊತ್ತಾಗುತ್ತಿದೆ. ರಾಜ್ಯದ ಕಾನೂನು ಸುವ್ಯವಸ್ಥೆ, ನಿಭಾಯಿಸುತ್ತಿಲ್ಲ. ಕೆರಿಯರ್ ಗೈಡೆನ್ಸ್ ತರಬೇತಿ ಕೇಂದ್ರಗಳ ಮೇಲೆ ದಾಳಿಯಾಗಿದೆ. ಸರಕಾರ ಇಂತಹ ಯಾವುದೇ ಕೆಲಸಕ್ಕೂ ಅವಕಾಶ ಕೊಡಬಾರದು ಎಂದು ಹೇಳಿದರು. ಇದರ ಮಧ್ಯೆ ಸಿಎಂ ಭಾಷಣಕ್ಕೆ ಪ್ರತಿಪಕ್ಷ ಸದಸ್ಯರು ವಿವರಣೆ ಕೇಳಲು ಮುಂದಾದಾಗ ಸ್ಪೀಕರ್ ಅವಕಾಶ ನೀಡಲಿಲ್ಲ. ಹೀಗಾಗಿ ಸರಕಾರಕ್ಕೆ

ಜನರ ಬಗ್ಗೆ ಕಾಳಜಿ ಇಲ್ಲ ಎಂದು ಆರೋಪಿಸಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು. ಜೆಡಿಎಸ್ ಸದಸ್ಯ ಶಿವಲಿಂಗೇಗೌಡ ಕೂಡ ಇವರೊಂದಿಗೆ ಸೇರಿ ಸದನದಿಂದ ಹೊರನಡೆದರು.

ಬಜೆಟ್ ಮಂಡನೆ ವೇಳೆ ಕಾಂಗ್ರೆಸ್ ಸದಸ್ಯರು ಕಿವಿ ಮೇಲೆ ಹೂವಿಟ್ಟುಕೊಂಡು ಬಂದಿದ್ದರು. ಅವರು ತಿರುಗಾಡಿ ಬಂದ ಮೇಲೆ ರಾಜ್ಯದ ಜನ ಇವರಿಗೆ ಕಿವಿ ಮೇಲೆ ಹೂವು ಇಡುತ್ತಾರೆ ಎಂಬುದು ಗೊತ್ತಾಗಿ ಅವರೇ ಹೂವಿಟ್ಟುಕೊಂಡರು. ಕಾಂಗ್ರೆಸ್‌ನವರು ಸುಳ್ಳಿನ ಸುಳಿಯಲ್ಲಿ ಸಿಲುಕಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರು ನಮ್ಮನ್ನು ಜೈಲಿಗೆ ಕಳುಹಿಸುತ್ತೇವೆ ಎಂದು ಹೇಳಿದ್ದಾರೆ. ನಾನು ಅವರಿಗೆ ಸವಾಲು ಹಾಕುತ್ತೇನೆ, ನೀವು ದೂರು ಕೊಡಿ. ಎಲ್ಲಾ ದೂರಿನ ತನಿಖೆಯನ್ನು ಲೋಕಾಯುಕ್ತಕ್ಕೆ ಶಿಫಾರಸ್ಸು ಮಾಡುತ್ತೇನೆ.

– ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆ ಈಡೇರಿಸಿಲ್ಲ ಎಂದು ಪ್ರತಿಪಕ್ಷ ನಾಯಕರು ಹೇಳಿದ್ದಾರೆ. ಅವರು ಎಷ್ಟು ಭಾಗ್ಯಗಳನ್ನು ಕೊಟ್ಟರು? ಯಾವುದು, ಏನಾದವು ಎಂಬುದು ಗೊತ್ತಿದೆ. ಅವರು ಪ್ರಣಾಳಿಕೆಯಲ್ಲಿ ಎಷ್ಟು ಜಾರಿಗೊಳಿಸಿದ್ದಾರೆ ಎಂಬುದೂ ಗೊತ್ತಿದೆ. ಅವುಗಳನ್ನೆಲ್ಲ ವಿವರ ನೀಡಲು ಹೋಗುವುದಿಲ್ಲ.

– ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಆಧಾರ: ವಿಶ್ವವಾಣಿ, ದಿನಾಂಕ: 21.02.2023

46. ಸಿಎಜಿಗೆ ಮಾಹಿತಿ ನೀಡದ ಸರ್ಕಾರ, ಪಿಎಸಿ ಆಕ್ಷೇಪ

ಕಳೆದ 10 ವರ್ಷಗಳಲ್ಲಿ ನಾನಾ ಇಲಾಖೆಗಳು ಹೆಚ್ಚುವರಿ ಅನುದಾನದ ವಿವರವನ್ನು ಸರ್ಕಾರವು ಮಹಾಲೇಖಪಾಲರಿಗೆ (ಸಿಎಜಿ) ಸಲ್ಲಿಸಿಲ್ಲ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಆಕ್ಷೇಪ ತೆಗೆದಿದೆ.

2011–12ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಆರ್ಥಿಕ ಇಲಾಖೆಗೆ ಸಂಬಂಧಿಸಿದಂತೆ ಸಮಿತಿ ಅಧ್ಯಕ್ಷ ಕೃಷ್ಣ ಬೈರೇಗೌಡ ಅವರು ವಿಧಾನಸಭೆಯಲ್ಲಿ ವರದಿ ಮಂಡಿಸಿದರು.

ನಾನಾ ಇಲಾಖೆಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನಗಳ ಕುರಿತು ಆರ್ಥಿಕ ಇಲಾಖೆ ಸರಿಯಾದ ಮೇಲ್ವಿಚಾರಣೆ ನಡೆಸಬೇಕು. ಆರ್ಥಿಕ ಇಲಾಖೆಯ ಉನ್ನತ ಅಧಿಕಾರಿಗಳು ಮೇಲ್ವಿಚಾರಣೆ ನಡೆಸುವ ಹೊಣೆಗಾರಿಕೆ ವಹಿಸಬೇಕು. ಸಕಾರದ ಅನುದಾನಗಳ ಬಗ್ಗೆ ಮಹಾಲೇಖಪಾಲರ ಕಛೇರಿಗೆ ಮಾಹಿತಿ ಒದಗಿಸಬೇಕು. ಇಲ್ಲದಿದ್ದರೆ ಸಿಎಜಿ ವರದಿಗಳನ್ನು ಸಿದ್ಧಪಡಿಸಲು ಸಮಸ್ಯೆಯಾಗುತ್ತದೆ ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಜೆಟ್‌ನಲ್ಲಿ ನೀಡಲಾಗಿರುವ ಅನುದಾನಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಲು ಅಗತ್ಯ ಕ್ರಮಗಳನ್ನು ಇಲಾಖಾ ಮುಖ್ಯಸ್ಥರು ತೆಗೆದುಕೊಳ್ಳಬೇಕು. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಬಜೆಟ್ ಘೋಷಣೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಇಲಾಖಾ ಮುಖ್ಯಸ್ಥರು ಮೇಲ್ವಿಚಾರಣೆ ನಡೆಸಬೇಕು.

ಹೆಚ್ಚುವರಿ ಅನುದಾನಗಳೂ, ಉಳಿತಾಯ ಇತ್ಯಾದಿ ವಿಷಯಗಳಲ್ಲಿ ವೈಫಲ್ಯಗಳು ಆಗದಂತೆ ಎಚ್ಚರ ವಹಿಸಬೇಕು ಎಂದು ಸಮಿತಿ ಶಿಫಾರಸ್ಸು ಮಾಡಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:22.02.2023

47. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಮೇಲ್ಮನೆ ಅಸ್ತು

ನಮ್ಮದು ಡಬ್ಬಲ್ ಇಂಜಿನ್ ಸರ್ಕಾರ ಆಗಿದ್ದರಿಂದಲೇ ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯದ ಸಮಗ್ರ ನೆರವಿನೊಂದಿಗೆ ರಾಜ್ಯದ ಯೋಜನೆಗಳನ್ನು ಕೈಗೆತ್ತಿಕೊಳ್ಳು ಸಾಧ್ಯವಾಗಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದಾರೆ.

ರಾಜ್ಯಪಾಲರ ಭಾಷಣ ಮೇಲಿನ ವಂದನಾ ನಿರ್ಣಯ ಪ್ರಸ್ತಾವನೆಗೆ ಮುಖ್ಯಮಂತ್ರಿಗಳ ಪರವಾಗಿ ಉತ್ತರ ನೀಡಿದ ಅವರು, ಕರಾವಳಿ ಭಾಗದಿಂದ ಹಿಡಿದು, ರಾಜ್ಯದ ಹಲವು ಭಾಗಗಳಿಗೆ, ನೀರಾವರಿ, ಹೆದ್ದಾರಿ, ರೈಲ್ವೆ, ಕೈಗಾರಿಕೆ ಸೇರಿ ಎಲ್ಲಾ ಸೌಲಭ್ಯಗಳಿಗೆ ಅನುಮತಿ ನೀಡಿ ಹೆಚ್ಚಿನ ಅನುದಾನ ಕರುಣಿಸಿದ್ದು ಮೋದಿ ಸರ್ಕಾರ ಎಂದು ಬಲವಾಗಿ ಸಮರ್ಥಿಸಿಕೊಂಡರು. ರಾಜ್ಯಪಾಲರಿಂದ ಸುಳ್ಳು ಹೇಳಿಸುವ ದರ್ದು ನಮಗೆ ಬಂದಿಲ್ಲ. ನಾವು ಏನು ಮಾಡಿದ್ದೇವೊ ಅದನ್ನೆಲ್ಲ ಅವರ ಭಾಷಣದಲ್ಲಿ ಹೇಳಿಸಿದ್ದೇವೆ. ಅದೇ ಬದ್ಧತೆಯಿಂದ ನಾವು ನಡೆದುಕೊಳ್ಳುತ್ತಿದ್ದೇವೆ ಎಂದು ಹಲವು ಉದಾಹರಣೆಗಳ ಸಹಿತ ಸಮರ್ಥಿಸಿಕೊಂಡರು. ಹೆಚ್.ಡಿ.ಕುಮಾರಸ್ವಾಮಿ ಸಾಲ ಮನ್ನಾ ಎಂದು ಘೋಷಣೆ ಮಾಡಿಬಿಟ್ಟರು. ಅವರಿಗೆ ಗೊತ್ತಿತ್ತು ನಾವು 40 ಸ್ಥಾನದ ಮೇಲೆ ಗೆಲ್ಲಲ್ಲ ಅಂತ. ಅದಕ್ಕೆ ಅವರು ಘೋಷಣೆ ಮಾಡಿದ್ರು. ಅದರೆ ಹೊರೆಯನ್ನೆಲ್ಲ ತೀರುವಳಿ ಮಾಡುವುದು ನಮ್ಮ ತಲೆಗೆ ಬಂತು. ಇದು ವಾಸ್ತವ ತಾನೆ ? ಎಂದರು.

ರೈಲು ಮಂತ್ರಿ ಯಾಕಾಗಬಾರದು: ಮಾಧುಸ್ವಾಮಿ ಅವರಿಗೆ ರೈಲ್ವೆ ಖಾತೆ ಕೊಡಬೇಕು. ಚನ್ನಾಗಿ ರೈಲು ಬಿಡುತ್ತಾರೆ ಎಂದು ಪ್ರತಿಪಕ್ಷದ ನಾಯಕ ಹರಿಪ್ರಸಾದ್ ರೇಗಿಸಿದರು. ಹೌದು ಬಿಜೆಪಿಯಲ್ಲಿ ಯಾರು ಏನು ಬೇಕಾದರೂ ಆಗ್ತಾರೆ. ರೈಲು ಮಂತ್ರಿ ಯಾಕಾಗಬಾರದು? ಲಾಲೂ ಪ್ರಸಾದ್ ಯಾದವ್, ಜಾಫರ್ ಷರೀಫ್ ಸೇರಿ ಹಲವರು ಕೆಲಸ ಮಾಡಿಲ್ಲವೇ ಎಂದು ಮಾಧುಸ್ವಾಮಿ ಸಮರ್ಥಿಸಿದರು.

ಸಾವಿರಾರು ಕೋಟಿ ನಷ್ಟ: ಖನಿಜ, ಕಲ್ಲು, ಮರಳು ಸೇರಿ ಎಲ್ಲಾ ತರಹದ ಗುತ್ತಿಗೆಗಳು ರಾಜ್ಯದ ಬೊಕ್ಕಸಕ್ಕೆ ವರಮಾನ ನಷ್ಟ ತಂದೊಡ್ಡಿದ್ದು, ವಾರ್ಷಿಕ ರೂ. 18 ರಿಂದ 20 ಸಾವಿರ ಕೋಟಿ ವರೆಗೆ ನಷ್ಟವಾಗಿದೆ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಗಂಭೀರ ಅಂಶ ಬಯಲುಗೊಳಿಸಿದೆ. ಮಾಜಿ ಸಚಿವ ಕೃಷ್ಣಬೈರೇಗೌಡ ಅಧ್ಯಕ್ಷತೆಯ ಸಮಿತಿಯು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅಡಿ ಬರುವ ಗಣಿ ಮತ್ತು ಭೂ ವಿಜ್ಞಾನ ಚಟುವಟಿಕೆಗೆ ಸಂಬಂದಿಸಿದಂತೆ ವರದಿ ನೀಡಿದೆ. ಪ್ರಧಾನ ಖನಿಜಗಳಿಂದ ಸ್ವೀಕರಿಸುತ್ತಿರುವ ಸುಮಾರು ರೂ. 6,300 ಕೋಟಿ ತೆರಿಗೇತರ ರಾಜಸ್ವವನ್ನು ಎರಡರಿಂದ ಮೂರು ಪಟ್ಟು ಹೆಚ್ಚಿಸಲು ಇಲಾಖೆಗೆ ವಿಪುಲ ಅವಕಾಶಗಳಿದ್ದು ಆದಾಯವನ್ನು ವೃದ್ಧಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಶಿಫಾರಸ್ಸು ಮಾಡಿದೆ.

ರೂ. 11,267 ಕೋಟಿ ಪೂರಕ ಅಂದಾಜು: ಪೂರಕ ಅಂದಾಜು (2022–23) ಮೂರನೇ ಮತ್ತು ಅಂತಿಮ ಕಂತನ್ನು ಸರ್ಕಾರ ವಿಧಾನ ಸಭೆಯಲ್ಲಿ ಮಂಡಿಸಿದ್ದು, ರೂ. 11,267.11 ಕೋಟಿಯನ್ನು ವಿವಿಧ ಉದ್ದೇಶಕ್ಕೆ ಬಳಸಿಕೊಂಡಿರುವುದಾಗಿ ಪ್ರಸ್ತಾಪಿಸಿದೆ.

ರಾಜ್ಯಪಾಲರು, ಸಿಎಂ, ಸಚಿವರು ಹಾಗೂ ಇತರ ಗಣ್ಯ ವ್ಯಕ್ತಿಗಳ ಅಧಿಕೃತ ಪ್ರವಾಸಕ್ಕೆ ಬಾಡಿಗೆ ಆಧಾರದ ಮೇಲೆ ಪಡೆಯುವ ಹೆಲಿಕ್ಯಾಪ್ಟರ್, ಏರ್‌ಕ್ರಾಫ್ಟ್ ಬಿಲ್ಲುಗಳನ್ನು ಪಾವತಿಸಲು ರೂ.15 ಕೋಟಿ ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿದೆ. ಅದೇ ರೀತಿ ಪಶು ವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು, ಪಾಲಿ ಕ್ಲಿನಿಕ್ ಮತ್ತು ಪಶು ಆಸ್ಪತ್ರೆಗಳಿಗೆ ಅವಶ್ಯ ಇರುವ ಉಪಕರಣ, ಪರಿಕರ ಖರೀದಿಗೆ ರೂ.5 ಕೋಟಿ ವಿನಿಯೋಗಿಸಲಾಗಿದೆ.

ನಾಲ್ಕೂ ಸಾರಿಗೆ ನಿಗಮಗಳಿಗೆ ಒಂದು ಸಾವಿರ ಕೋಟಿ ನೀಡಿದ್ದು, ಕಾರಾಗೃಹ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ರೂ.50 ಕೋಟಿ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ.100 ಕೋಟಿ ನೀಡಲಾಗಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಆವರ್ತ ನಿಧಿಗಾಗಿ ರೂ.1 ಸಾವಿರ ಕೋಟಿ

ಬಳಸಲಾಗಿದೆ. ಪರಿಶಿಷ್ಟ ಜಾತಿಯ ವಸತಿ ನಿಲಯ, ವಸತಿ ಶಾಲೆ ದುರಸ್ತಿಗೆ ರೂ.25 ಕೋಟಿ ಎಸ್ಸಿಪಿ, ಎಸ್ಟಿಪಿ ವಿವಿಧ ಯೋಜನೆಗೆ ರೂ.155 ಕೋಟಿ ವಿನಿಯೋಗಿಸಿದ್ದರೆ, ಮಠ ಮಾನ್ಯಗಳಿಗೆ ರೂ.414 ಕೋಟಿ ಬಿಡುಗಡೆ ಮಾಡಲಾಗಿದೆ. ರಾಜ್ಯ ಹೆದ್ದಾರಿ ಸುಧಾರಣೆಗೆ ರೂ.370 ಕೋಟಿ ಬಾಕಿ ಬಿಲ್ ಪಾವತಿಗೆ ರೂ.450 ಕೋಟಿ, ಬೆಳಗಾವಿಯಲ್ಲಿ ಜಗನ್ನಾಥರಾವ್ ಜೋಷಿ ಜನ್ಮ ಶತಾಬ್ದಿ ಸ್ಮಾರಕ ಭವನ ನಿರ್ಮಾಣಕ್ಕಾಗಿ ರೂ.5 ಕೋಟಿ ನೀಡಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:22.02.2023

48. ಚುನಾವಣೆ ಮೇಲೆ ಎಲ್ಲರ ಗಮನ: ನಿರಸ ಅಧಿವೇಶನ

ಸಂಪ್ರದಾಯದಂತೆ ಜಂಟಿ ಸನದವನ್ನುದ್ದೇಶಿಸಿ ರಾಜ್ಯಪಾಲರ ಭಾಷಣ ಬಳಿಕ ಮುಂಗಡಪತ್ರ ಮಂಡನೆ ಅದರ ಮೇಲೆ ಚರ್ಚೆ. ಇದಕ್ಕೆ ನಿಗದಿಗೊಂಡಿದ್ದು, 11 ದಿನಗಳ ಅವಧಿಯ ಅಧಿವೇಶನ 15ನೇ ವಿಧಾನಸಭೆಯ ಕೊನೆ ಅದಿವೇಶನವೂ ಇದಾಗಿತ್ತು. ಆದರೆ ಚುನಾವಣೆ ಮೇಲೆ ರಾಜಕೀಯ ಪಕ್ಷಗಳು ಗಮನ ಕೇಂದ್ರೀಕರಿಸಿದ ಪರಿಣಾಮ ಯಾವುದೇ ಮಹತ್ವದ ಚರ್ಚೆಗಳು ನಡೆಯದೆ ಮಾತಿನ ಮಂಟಪ ನೀರಸ ಎನಿಸಿತು.

ಮುಖ್ಯಮಂತ್ರಿ ಬಸರಾಜ್ ಬೊಮ್ಮಾಯಿಯವರ ಸಾರಥ್ಯದ ಸರ್ಕಾರಕ್ಕಿದು ಕೊನೆಯ ಅಧಿವೇಶನವಾಗಿತ್ತು. ಜೊತೆಗೆ ರಾಜ್ಯಪಾಲರಿಂದ ಸಾಧನೆ ಬಿಂಬಿತವಾಗಿದ್ದವು. ಇದರ ಬೆನ್ನಿಗೇ ಮಹತ್ವದ ಮುಂಗಡಪತ್ರ ಕೂಡಾ ಮಂಡನೆಯಾಯಿತು. ಆದರೆ ಎರಡೂ ವಿಷಯಗಳ ಮೇಲೆ ಗಂಭೀರ ಚರ್ಚೆ ನಡೆಲೆಯಿಲ್ಲ. ಮೊದಲ ದಿನದಿಂದಲೂ ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಶಾಸಕರ ಗೈರು ಎದ್ದುಕಂಡಿತು. ವಿಶೇಷವೆಂದರೆ ಮೂರ್ನಾಲ್ಕು ದಿನಗಳ ಕಾಲ ಸ್ಪೀಕರ್ ಕಾಗೇರಿ ಅವರು ಸದನಕ್ಕೆ 'ಕೋರಂ' ಆಗದೆ ಕಲಾಪವನ್ನು ವಿಳಂಬವಾಗಿ ಆರಂಭಿಸಬೇಕಾಯಿತು.

ರಾಜಕೀಯ ಪಕ್ಷಗಳು ಅಧಿವೇಶನದ ನಡುವೆಯೂ ಯಾತ್ರೆಗಳನ್ನು ಹಮ್ಮಿಕೊಂಡಿದ್ದ ಫಲವಾಗಿ ಅಧಿವೇಶನ ಪೂರ್ತಿ ಶಾಸಕರ ಕೊರತೆ ಎದುರಾಯಿತು. ಸ್ಪೀಕರ್ ಆಯಾ ಪಕ್ಷಗಳ ಸಚೇತಕರಿಗೆ ಶಾಸಕರನ್ನು ಕರೆಯಿಸಿ ಎಂದ ಎಚ್ಚರಿಸಿದ್ದೂ ಆಯಿತು. ಸ್ವತಃ ವಿಪಕ್ಷ ನಾಯಕರೇ 21ರ ನಂತರ ಸದನಕ್ಕೆ ಬರಲಾಗದು ಎಂದು ನೇರವಾಗಿ ಸಭಾಧ್ಯಕ್ಷರಿಗೆ ಹೇಳಿದ್ದು, ಶಾಸನಸಭೆ ಅಧಿವೇಶನವನ್ನು ಆದೆಷ್ಟು ಗಂಭೀರವಾಗಿ ಪರಿಗಣಿಸಲಾಗಿತ್ತೆಂಬುದಕ್ಕೆ ನಿದರ್ಶನ ಎನ್ನುವಂತಿತ್ತು.

ಕಲಾಪ ಸೇರುತ್ತಿದ್ದಂತೆ ಕೈಗೆತ್ತಿಕೊಳ್ಳುವ ಪ್ರಶ್ನೋತ್ತರ ವೇಳೆ ಸಭಾಧ್ಯಕ್ಷರು ಕರೆಯುವ ಬಹುತೇಕ ಸದಸ್ಯರ ಕುರ್ಚಿಗಳು ಖಾಲಿ ಇರುತ್ತಿದ್ದವು. ಅಷ್ಟೇ ಅಲ್ಲ ಉತ್ತರಿಸಬೇಕಾಗಿದ್ದ ನಿರ್ದಿಷ್ಟ ಸಚಿವರ ಬದಲಾಗಿ ಕಾನೂನು ಸಚಿವರೇ ಇತರರ ಪರವಾಗಿ ಉತ್ತರಿಸುವ ಅಸಹಾಯಕ ಸನ್ನಿವೇಶಕ್ಕೂ ಕೊನೆಯ ಅಧಿವೇಶನ ಸಾಕ್ಷಿಯಾಗಿತ್ತು. ಏನ್ರೀ ಇದು ಸದನದಲ್ಲಿ ಸಚಿವರೇ ಇಲ್ಲದಿದ್ರೆ ಏನರ್ಥ? ಎಂದು ಸಭಾಧ್ಯಕ್ಷರು ಅನೇಕ ಬಾರಿ ಅಸಮಾಧಾನ ಹೊರಹಾಕಿದರೂ ಪರಿಸ್ಥಿತಿ ಸುಧಾರಣೆಯಾಗಲೇಯಿಲ್ಲ.

ವಿವಿಧ ವಿಧೇಯಕಗಳ ಮಂಡನೆ: ಇದೆಲ್ಲದರ ನಡುವೆ ಸಮಗ್ರ ಕನ್ನಡ ಭಾಷಾಭಿವೃದ್ಧಿಯಂತಹ ಮಹತ್ವದ ಮಸೂದೆ ಮಂಡನೆಯಾಗಿ ಅಂಗೀಕರಿಸಲ್ಪಟ್ಟಿತು. ವಿಶ್ವವಿದ್ಯಾಲಯಗಳ ತಿದ್ದುಪಡಿ ವಿಧೇಯಕ, ಬಿಬಿಎಂಪಿ ಕಾಯ್ದೆ ತಿದ್ದುಪಡಿ ವಿಧೇಯಕ, 2 ಧನವಿನಿಯೋಗ ಸಹಿತ 13 ವಿಧೇಯಕಗಳು ಮಂಡಿಸಿ ಅಂಗೀಕಾರವಾದವು. ವಿವಿಧ ಇಲಾಖೆಯ 5 ಸಿಎಜಿ ವರದಿ ಮಂಡನೆಯಾದರೆ, 30 ಅಧಿಸೂಚನೆ ಹಾಗೂ 71 ವಾರ್ಷಿಕ ವರದಿ ಸದನದಲ್ಲಿ ಮಂಡನೆಯಾದವು.

ಗದ್ದಲಕ್ಕೂ ಸದನ ಸಾಕ್ಷಿ: ಕಳೆದೆರಡು ಅಧಿವೇಶನದಲ್ಲಿ ಪ್ರತಿಧ್ವನಿಸಿದ್ದ 40% ಕಮಿಷನ್ ಕೊನೆ ಅಧಿವೇಶನವನ್ನೂ ಕಾಡಿತು. ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ವಿಪಕ್ಷ ಕಾಂಗ್ರೆಸ್ ಬಾವಿಗಿಳಿದು ಪ್ರತಿಭಟಿಸಿತು. ಸಿದ್ದರಾಮಯ್ಯ ಅವರನ್ನು ಟಿಪ್ಪು ರೀತಿ 'ಹೊಡೆದುಹಾಕಿ' ಎಂಬ ಸಚಿವ

ಅಶ್ವಥ್‌ನಾರಾಯಣ ಹೇಳಿಕೆ ಎರಡು ದಿನಗಳ ಕಾಲ ತೀವ್ರ ಗದ್ದಲ ಕೋಲಾಹಲಕ್ಕೆ ಕಾರಣವಾಯಿತು. ಲೋಕಾಯುಕ್ತ ಮುಚ್ಚುವ ಹುನ್ನಾರ, ಎಸಿಬಿ ರಚನೆ, ಅರ್ಕಾವತಿ ಲೇಔಟ್ ಅಕ್ರಮ ಸಂಬಂಧದ ನ್ಯಾಯಮೂರ್ತಿ ಕೆಂಪಣ್ಣ ವರದಿ ಪ್ರಸ್ತಾಪವೂ ಅಧಿವೇಶನದ ಕೊನೆಯ ಹಂತದಲ್ಲಿ ಪ್ರತಿಭಟನೆ, ವಾಕ್ಸಮರಕ್ಕೆ ಸಾಕ್ಷಿಯಾಯಿತು.

ನೂರು ದಾಟದ ಹಾಜರಾತಿ: ಒಟ್ಟಾರೆ 11 ದಿನಗಳ ಜಂಟಿ ಅಧಿವೇಶನ ಹೊರತುಪಡಿಸಿದರೆ ಉಳಿದ ಯಾವುದೇ ದಿನಗಳಲ್ಲಿ ಒಟ್ಟಾರೆ ಸದನದಲ್ಲಿ ಶಾಸಕರ ಸಂಖ್ಯೆ 100 ದಾಟಲಿಲ್ಲ. ಒಮ್ಮೊಮ್ಮೆ ಆಡಳಿತ–ವಿಪಕ್ಷ ಸೇರಿ 45 ರಿಂದ 50 ಮಂದಿ ಹಾಜರಾತಿ ಇತ್ತು. ಅಧಿವೇಶನ ಆರಂಭಕ್ಕೆ ಮುನ್ನವೇ ಬಹುತೇಕ ಶಾಸಕರು ಗೈರಿಗೆ ಅನುಮತಿ ಪಡೆದುಕೊಂಡಿದ್ದರೆಂಬುದು ವಿಶೇಷ ಸಂಗತಿಯಾಗಿತ್ತು.

ಶಾಸನ ಸಭೆಯ ಮಹತ್ವ, ಗೌರವ ಕುಸಿಯುತ್ತಿದೆಯೇ ಎಂಬ ಆತಂಕ ಕಾಡುತ್ತಿದೆ. ಆದರ್ಶ, ಮೌಲ್ಯಗಳ ಅಧಃಪತನಕ್ಕೆ ಇದು ನಾಂದಿ ಆಗಬಾರದು. ಎಲ್ಲರಿಂದಲೂ ಆತ್ಮಾವಲೋಕನ ಆಗಲಿ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:25.02.2023

49. 5 ವರ್ಷದಲ್ಲಿ 167 ದಿನ ಕಲಾಪ

ಪ್ರಸಕ್ತ ವಿಧಾನಸಭೆಯ 15ನೇ ಅಧಿವೇಶನವು ಫೆಬ್ರವರಿ 10 ರಿಂದ 24ರ ವರೆಗೆ ಒಟ್ಟು 11 ದಿನಗಳು, 52 ಗಂಟೆ 20 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ತಿಳಿಸಿದರು.

ಫೆಬ್ರವರಿ 10 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿ 15 ಜನ ಸದಸ್ಯರು 13.35 ಗಂಟೆ ಕಾಲ ಭಾಗವಹಿಸಿದ್ದು, ಫೆಬ್ರವರಿ 20 ರಂದು ವಂದನಾ ನಿರ್ಣಯದ ಪ್ರಸ್ತಾವವನ್ನು ಅಂಗೀಕರಿಸಲಾಯಿತು ಎಂದರು.

2018–2023ರ ನಡುವೆ (ಐದು ವರ್ಷಗಳಲ್ಲಿ) 15 ಬಾರಿ ವಿಧಾನಸಭೆ ಅಧಿವೇಶನವನ್ನು ಕರೆಯಲಾಗಿದ್ದು, ಒಟ್ಟು 167 ದಿನಗಳಲ್ಲಿ 760 ಗಂಟೆಗಳ ಕಾಲ ಸದನದ ಕಾರ್ಯಕಲಾಪ ನಡೆಸಲಾಗಿದೆ. ಈ ವಿಧಾನಸಭೆಯ ಅವಧಿಯಲ್ಲಿ 200 ವಿಧೇಯಕಗಳನ್ನು ತೆಗೆದುಕೊಂಡಿದ್ದೇವೆ. ಚುಕ್ಕೆ ಗುರುತಿನ 5,764 ಪ್ರಶ್ನೆಗಳು, ಚುಕ್ಕೆ ಗುರುತಿಲ್ಲದ 24,988 ಪ್ರಶ್ನೆಗಳನ್ನು ಸದಸ್ಯರು ಕೇಳಿದ್ದು, 350 ಗಮನ ಸೆಳೆಯುವ ಸೂಚನೆಗಳ ಚರ್ಚೆಯಾಗಿದೆ ಎಂದರು.

167 ದಿನವೂ ಹಾಜರಿ: ಬಿಜೆಪಿ ಸದಸ್ಯ ಸಿ.ಎಂ.ಲಿಂಬಣ್ಣನವರ್ ಹಾಗೂ ಜೆಡಿಎಸ್‌ನ ಕೆ.ಎಸ್.ಲಿಂಗೇಶ್ 167 ದಿನಗಳ ಕಾಲ ಸದನಕ್ಕೆ ಹಾಜರಾಗಿದ್ದಾರೆ ಎಂದು ಸ್ಪೀಕರ್ ಕಾಗೇರಿ ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ:25.02.2023

50. ಬಿಎಸ್‌ವೈ ಮೆಚ್ಚಿದ ಆರಂಭ

ರಾಜ್ಯ ವಿಧಾನಸಭೆಯಲ್ಲಿ ಶಿಕಾರಿಪುರ ಕ್ಷೇತ್ರವನ್ನು 8 ಬಾರಿ ಪ್ರತಿನಿಧಿಸಿದ್ದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಅಧಿಕೃತವಾಗಿ ಚುನಾವಣಾ ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದರು.

1983ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದ ಯಡಿಯೂರಪ್ಪ ಅವರು ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿ ಸದ್ಯದ 15ನೇ ವಿಧಾನಸಭೆಯ ಅಂತಿಮ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಸದನದಲ್ಲಿ ಹೃದಯತುಂಬಿ ಮಾತನಾಡಿದರು. ಈ ವೇಳೆ ಅವರು ಆರ್.ಎಸ್.ಎಸ್. ಬಿಜೆಪಿ ನನ್ನ ಉಸಿರು ಎಂದರು.

ಅವರ ಮಾತುಗಳಲ್ಲಿ ಪ್ರಮುಖವಾಗಿ ಹಾದು ಹೋದವರು– ಎಸ್.ಎಂ.ಕೃಷ್ಣ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ. "ಇನ್ನುಂದೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ, ಆದರೆ, ಹೊರಗಿದ್ದುಕೊಂಡೇ ಪಕ್ಷದ ಗೆಲುವಿಗೆ ಕೆಲಸ ಮಾಡುತ್ತೇನೆ," ಎಂದು ಹೇಳಿದರು.

1. **ಸಂಘವೇ ಸರ್ವಸ್ವ:** ಸಾರ್ವಜನಿಕ ಬದುಕಿನಲ್ಲಿ ಇಷ್ಟು ಎತ್ತರಕ್ಕೆ ಬೆಳೆದು ನಿಲ್ಲಲು ಹಾಗೂ ಸ್ಥಾನಮಾನಗಳನ್ನು ಪಡೆಯಲು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಕಾರಣ.
2. **ಶಿಕಾರಿಪುರಕ್ಕೆ ಸೇವೆ:** ಇಷ್ಟು ವರ್ಷ ವಿಧಾನಸಭೆಗೆ ಬರಲು ಕಾರಣರಾದ ಶಿಕಾರಿಪುರ ಕ್ಷೇತ್ರದ ಜನರಿಗೆ ಕೊನೆಯ ಉಸಿರು ಇರುವವರೆಗೆ ಸೇವೆ ಸಲ್ಲಿಸುವೆ.
3. **ಬಿಜೆಪಿಗಾಗಿ ಬೆವರು:** ಚುನಾವಣೆಗೆ ನಿಲ್ಲದಿದ್ದರೂ ಒಂದು ದಿನವನ್ನೂ ಸ್ವಂತಕ್ಕೆ ಕಾಯ್ದಿಟ್ಟುಕೊಳ್ಳದೆ ಇಡೀ ರಾಜ್ಯವನ್ನು ಸುತ್ತಿ ಮತ್ತೆ ಅಧಿಕಾರಕ್ಕೆ ತರಲು ದುಡಿಯುತ್ತೇನೆ.
4. **ಸಂತಸದ ಕೃಷ್ಣಕ್ಷಣ:** ಬಗರ್‌ಹುಕುಂ ಸಾಗುವಳಿದಾರ ರೈತರಿಗೆ ನ್ಯಾಯ ದೊರಕಿಸಿಕೊಡುವ ವಿಚಾರದಲ್ಲಿ ಆಡಳಿತ ಯಂತ್ರ ಸ್ಪಂದಿಸದಿದ್ದಾಗ ಸದನದಲ್ಲಿ ಧರಣಿ ಕುಳಿತೆ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಎಸ್.ಎಂ.ಕೃಷ್ಣ ಪರಿಹಾರ ಹುಡುಕುವ ಕೆಲಸ ಮಾಡಿದರು. ಇದು ನನ್ನ ಸಾರ್ವಜನಿಕ ಜೀವನದಲ್ಲಿ ಸಂತೋಷದ ದಿನ.
5. **ದೇವೇಗೌಡರೂ ಆದರ್ಶ:** ದೇವೇಗೌಡರು ನಮ್ಮೆಲ್ಲರಿಗೂ ಆದರ್ಶಪ್ರಾಯರು. ಈ ವಯಸ್ಸಿನಲ್ಲೂ ರಾಜ್ಯ ಮತ್ತು ದೇಶದ ಬಗ್ಗೆ ಚಿಂತಿಸುವ ಅವರ ಕಾಳಜಿಯನ್ನು ನೋಡಿದರೆ ಸಾರ್ವಜನಿಕ ಬದುಕಿನಲ್ಲಿ ಇರುವವರಿಗೆ ದೇವೇಗೌಡರಿಗಿಂತ ಆದರ್ಶ ಬೇರೆ ಇಲ್ಲ. ಅವರಿಂದ ಕಲಿಯುವುದು ಬಹಳಷ್ಟಿದೆ.
6. **ಸಿದ್ದು ಬದ್ಧತೆ:** ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರೂ ಬದ್ದತೆ, ಜನಪರ ಕಾಳಜಿಯ ನಾಯಕ.

ಕೇಡರ್ ಮೋದಿಗೆ ಬಿಎಸ್‌ವೈ ಸ್ಫೂರ್ತಿ: ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಬಿ.ಎಸ್.ಯಡಿಯೂರಪ್ಪ ಮಾಡಿದ್ದ ಭಾಷಣವನ್ನು ಪ್ರಧಾನಿ ನರೇಂದ್ರಮೋದಿ ಅವರು ಮೆಚ್ಚಿದ್ದಾರೆ. "ನನಗೆ ಎಲ್ಲವನ್ನೂ ಕೊಟ್ಟಿರುವ ಬಿಜೆಪಿ ಪಕ್ಷಕ್ಕಾಗಿ ಕೊನೇ ಉಸಿರಿರುವವರೆಗೆ ದುಡಿಯುವೆ," ಎಂದು ಯಡಿಯೂರಪ್ಪ ಹೇಳಿದ್ದರು. ಈ ಭಾಷಣದ ವಿಡಿಯೋ ಹಂಚಿಕೊಂಡು ಟ್ವೀಟ್ ಮಾಡಿರುವ ಪ್ರಧಾನಿಗಳು, "ಬಿಜೆಪಿಯ ಒಬ್ಬ ಕಾರ್ಯಕರ್ತನಾದ ನನಗೆ ಈ ಭಾಷಣ ಅತ್ಯಂತ ಸ್ಫೂರ್ತಿದಾಯಕ ಎಂದೆನಿಸಿದೆ. ಇದರಲ್ಲಿ ನಮ್ಮ ಪಕ್ಷದ ನೈತಿಕತೆಯೂ ಅಡಕವಾಗಿದೆ. ಇದು ಖಂಡಿತವಾಗಿಯೂ ಇತರ ಕಾರ್ಯಕರ್ತರಿಗೂ ಸ್ಫೂರ್ತಿ ನೀಡುತ್ತದೆ," ಎಂದರು.

- ಈ ತಿಂಗಳ 27ರಂದು ನನಗೆ 80 ವರ್ಷಗಳು ತುಂಬುತ್ತಿವೆ. ಹುಟ್ಟು ಹಬ್ಬದ ದಿನವೇ ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆಗೆ ಬರುವುದಾಗಿ ಪ್ರಧಾನಿ ನರೇಂದ್ರ ಮೋದಿಯವರು ಹೇಳಿದರು. ಇದು ನನಗೆ ಸಮಾಧಾನ ಮತ್ತು ತೃಪ್ತಿಯ ಭಾವನೆ ತಂದಿದೆ.
- ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಮತ್ತೆ ವಿಧಾನಸಭೆಗೆ ಗೆದ್ದು ಬರಲಿ ಮತ್ತೆ ಸ್ಪೀಕರ್ ಕುರ್ಚಿಯಲ್ಲಿ ಕೂರುವುದು ಬೇಡ, ಮಂತ್ರಿಯಾಗಬೇಕು.
- ವಿಧಾನಸಭೆಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬರುವಂತಾಗಬೇಕು. ಇದಕ್ಕೆ ಪುರುಷ ನಾಯಕರು ಸಹಕರಿಸಲಿ.

ಆಧಾರ: ವಿಜಯ ಕರ್ನಾಟಕ, ದಿನಾಂಕ:25.02.2023

51. 15ನೇ ಅಸೆಂಬ್ಲೀಲಿ ಐತಿಹಾಸಿಕ ಜನಪರ ಕಾನೂನು

ಹದಿನೈದನೇ ವಿಧಾನಸಭೆಯ ಅವಧಿಯಲ್ಲಿ ಐತಿಹಾಸಿಕ ಎಸಿ–ಎಸ್ಟಿ ಮೀಸಲಾತಿ ಪ್ರಮಾಣ ಹೆಚ್ಚಳ ಸೇರಿದಂತೆ ದೊಡ್ಡ ಪ್ರಮಾಣದಲ್ಲಿ ಅನೇಕ ಜನಪರ ಕಾನೂನುಗಳನ್ನು ಜಾರಿಗೆ ತಂದಿದ್ದೇವೆ. ಇದರಿಂದ ಕನಿಷ್ಠ 2 ರಿಂದ 3 ಕೋಟಿ ಜನರಿಗೆ ಒಂದಲ್ಲಾ ಒಂದು ರೀತಿ ಅನುಕೂಲವಾಗಿದೆ. ಎಸಿ–ಎಸ್ಟಿ ಮೀಸಲಾತಿ ಹೆಚ್ಚಳದ ಫಲ ಬರುವ ದಿನಗಳಲ್ಲಿ ಆ ಸಮುದಾಯದ ಜನರಿಗೆ ಸಿಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.

15ನೇ ವಿಧಾನಸಭೆಯ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ವಿದಾಯ ಭಾಷಣ ಮಾಡಿದ ಅವರು, ಹದಿನೈದನೇ ವಿಧಾನಸಭೆ 5 ವರ್ಷದಲ್ಲಿ 2–3 ವಿಚಾರಗಳಲ್ಲಿ ನಮ್ಮನ್ನು ಗಟ್ಟಿಗೊಳಿಸುತ್ತಾ ಹೋಯಿತು. ಪ್ರಜಾಪ್ರಭುತ್ವದಲ್ಲಿ ಅವಕಾಶಗಳನ್ನು ಯಾವ ರೀತಿ ಬಳಕೆ ಮಾಡಬೇಕು ಎಂಬುದನ್ನು ಹಾಗೂ ಸ್ಪಷ್ಟ ಬಹುಮತ ಬಾರದಿದ್ದಾಗ ವಿರೋಧಾಭಾಸ ಪಕ್ಷಗಳು ಒಂದುಗೂಡಿ ಅಧಿಕಾರ ನಡೆಸುವಂತಹ ಎಲ್ಲವನ್ನೂ ನೋಡಿದ್ದೇವೆ. ಇದರ ಜೊತೆಗೆ ಹಿಂದೆಂದೂ ನೋಡದ ಭಾರೀ ಪ್ರವಾಹ ನಂತರ ಕೋವಿಡ್‌ನಂತಹ ಸಂಕಷ್ಟದ ದಿನಗಳನ್ನು ಎದುರಿಸಿ ಅಂತಹ ಸಂದರ್ಭದಲ್ಲೂ ಜನರ ಕಷ್ಟಗಳಿಗೆ ಸ್ಪಂದಿಸಲಾಗಿದೆ. ಕೋವಿಡ್ ನಂತರ ಮತ್ತೆ ದೇಶ ಕಟ್ಟುವ ಸವಾಲು, ಆರ್ಥಿಕತೆಯ ಚೇತರಿಕೆ ಜೊತೆಗೆ ಸಾಮಾಜಿಕ ಬೆಳವಣಿಗೆಯ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಿದ್ದೇವೆ ಎಂದರು.

ಪ್ರಜಾಪ್ರಭುತ್ವದಲ್ಲಿ ಟೀಕೆ–ಟಿಪ್ಪಣಿಗಳು ಸಾಮಾನ್ಯ. ಅಭಿಪ್ರಾಯಗಳು ಭಿನ್ನ, ಆದರೆ ಮನಸ್ಸುಗಳು ಭಿನ್ನ ಇಲ್ಲ. ನಾವೆಲ್ಲಾ ಜನರ ಆಶೀರ್ವಾದದಿಂದಲೇ ಇಲ್ಲಗೆ ಬಂದಿದ್ದು, ಜನರ ಬೇಕು–ಬೇಡ, ನೋವು–ನಲಿವುಗಳ ಚಿಂತನೆ ಇಟ್ಟುಕೊಂಡು ಕೆಲಸ ಮಾಡಿದ್ದೇವೆ ಮತ್ತು ಜನರ ಬದುಕನ್ನು ಸುಧಾರಿಸಿ ಸರಳೀಕರಣಗೊಳಿಸಲು ಗಣಿ, ಕೈಗಾರಿಕೆ, ವಿಶ್ವವಿದ್ಯಾಲಯಗಳ ಸ್ಥಾಪನೆ, ಗ್ರಾಮ ಸ್ವರಾಜ್, ನಗರಾಭಿವೃದ್ಧಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಹಲವು ಮಹತ್ವದ ಶಾಸನಗಳನ್ನು ರೂಪಿಸಿದ್ದೇವೆ. ಇದರಲ್ಲಿ ಎಸ್ಸಿ–ಎಸ್ಟಿ ಮೀಸಲಾತಿ ಹೆಚ್ಚಳ ಕಾನೂನು ಐತಿಹಾಸಿಕವಾದುದು. ಈ ಕಾನೂನಿನ ಬಗ್ಗೆ ಈಗ ಟೀಕೆಗಳು ಬರುತ್ತಿರಬಹುದು. ಇದರ ಪರಿಣಾಮ, ಫಲ ಮುಂದಿನ ದಿನಗಳಲ್ಲಿ ಆ ಸಮುದಾಯದ ಜನರಿಗೆ ಸಿಗುತ್ತದೆ. ನಾವು ತಂದಿರುವ ಶಾಸನಗಳು ದೊಡ್ಡ ಪ್ರಮಾಣದಲ್ಲಿ ಬೇರೆ ಬೇರೆ ಕ್ಷೇತ್ರಗಳ ಅಭಿವೃದ್ಧಿಗೆ ನೆರವಾಗುತ್ತವೆ. ಕರ್ನಾಟಕದ ಕೋಟ್ಯಾಂತರ ಜನರಿಗೆ ಒಂದಲ್ಲಾ ಒಂದು ರೀತಿ ನೆರವಾಗಿದೆ ಎಂದು ಹೇಳಿದರು.

ಈ 15ನೇ ವಿಧಾನಸಭೆ ಅರ್ಥಪೂರ್ಣವಾಗಿ ಯಶಸ್ವಿಯಾಗಲು ಮಾಜಿ ಸಿಎಂ ಯಡಿಯೂರಪ್ಪ ಸೇರಿ ಹಿರಿಯರ ಕೊಡುಗೆ, ಸಚಿವ ಸಂಪುಟ ಸಹೋದ್ಯೋಗಿಗಳು ಮತ್ತು ಸದನದ ಎಲ್ಲಾ ಸದಸ್ಯರೂ ಕಾರಣ, ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರ ಪಾತ್ರವೂ ದೊಡ್ಡದು ಎಂದು ಸ್ಮರಿಸಿದರು. ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳವಳಿಯಂತ ಹೋರಾಟಗಳಿಂದಲೇ ಪ್ರಜಾಪ್ರಭುತ್ವ ದೇಶದಲ್ಲಿ ಗಟ್ಟಿಗೊಂಡಿತು. ದೇಶದ ಅಭಿವೃದ್ಧಿಗೆ ಗಾಂಧೀಜಿ, ನೆಹರು, ಡಾ:ಅಂಬೇಡ್ಕರ್, ಕುವೆಂಪು ಸೇರಿ ಹಲವು ಮಹನೀಯರು ಗಟ್ಟಿ ಅಡಿಪಾಯ ಹಾಕಿಕೊಟ್ಟರು. ಕರ್ನಾಟಕ ಏಕೀಕರಣದ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ ಮಾಜಿ ಸಿಎಂ ನಿಜಲಿಂಗಪ್ಪ, ಸಾಹುಕಾರ್ ಚೆನ್ನಯ್ಯ, ಅಂದಾನಪ್ಪ ಮೇಟಿ, ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ ಎಲ್ಲ ಕೊಡುಗೆ ಸ್ಮರಿಸಿದರು.

ಆಧಾರ: ಕನ್ನಡ ಪ್ರಭ, ದಿನಾಂಕ:25.02.2023

52. ಇನ್ಮೇಲೆ ಬಿಎಸ್‌ವೈಗೆ ಕರುನಾಡೇ ಅಸೆಂಬ್ಲಿ

ರಾಜ್ಯದಲ್ಲಿ ಬಿಜೆಪಿಯನ್ನು ಶೂನ್ಯದಿಂದ ಅಧಿಕಾರಕ್ಕೇರಿಸಿದ, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಪಕ್ಷಕ್ಕೆ ಅಧಿಕಾರ ತಂದುಕೊಟ್ಟ ಹೆಗ್ಗಳಿಕೆಯ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ವಿಧಾನಸಭೆಯ ಅಧಿಕೃತ ಪಯಣ ಶುಕ್ರವಾರಕ್ಕೆ ಅಂತ್ಯಗೊಂಡಿದೆ.

1983ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ ಅವರು ಸುದೀರ್ಘ 40 ವರ್ಷಗಳ ಕಾಲ ವಿಧಾನಮಂಡಲ, ಲೋಕಸಭೆ ಸದಸ್ಯರಾಗಿ ಸೇವೆ ಸಲ್ಲಿಸಿದರು. 40ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ಶಿಕಾರಿಪುರದಿಂದ ಶಾಸಕರಾದ ಅವರು 80ನೇ ವಯಸ್ಸಿನಲ್ಲಿ ಚುನಾವಣೆ ರಾಜಕೀಯದಿಂದ ವಿಶ್ರಾಂತಿ ಪಡೆದುಕೊಂಡಿದ್ದಾರೆ. 1967ರಲ್ಲಿ ಜನಸಂಘದೊಂದಿಗೆ ಆರಂಭವಾದ ರಾಜಕೀಯ ಪಯಣ 55 ವರ್ಷದ ಬಳಿಕವೂ ಮುಂದುವರಿದಿದೆ. ಫೆಬ್ರವರಿ 27ರಂದು ಅವರು ತಮ್ಮ 81ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ.

ರಾಜ್ಯ ರಾಜಕೀಯದ ದಿಕ್ಕು ದೆಸೆಯನ್ನು ಬದಲಿಸಿದ ಈಗಲೂ ಅದೇ ಸಾಮರ್ಥ್ಯ ಹೊಂದಿರುವ ಅವರು ರಾಜ್ಯ ಕಂಡ ಧೀಮಂತ ಮತ್ತು ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರು. ಚುನಾವಣೆ ಸ್ಪರ್ಧೆಗೆ ವಿದಾಯ ಘೋಷಿಸಿದರೂ ಇಳಿ ವಯಸ್ಸಿನಲ್ಲೂ ಚುನಾವಣೆ ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬಿಜೆಪಿಯನ್ನು ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ತರುವುದೇ ತಮ್ಮ ಗುರಿ ಎಂದು ಹೇಳಿದ್ದಾರೆ.

ಸ್ವಂತ ಪರಿಶ್ರಮ: ಮಂಡ್ಯ ಜಿಲ್ಲೆ ಬೂಕನಕೆರೆಯ ಸಾಮಾನ್ಯ ಕುಟುಂಬದಲ್ಲಿ ಜನಸಿದ ಯಡಿಯೂರಪ್ಪ ನೆಲೆ ಕಂಡುಕೊಂಡಿದ್ದು ಶಿಕಾರಿಪುರದಲ್ಲಿ, ಪುರಸಭೆ ಸದಸ್ಯ, ಅಧ್ಯಕ್ಷ, ಶಾಸಕ, ಸಂಸದ, ಮುಖ್ಯಮಂತ್ರಿ ಗದ್ದುಗೆಯನ್ನೂ ಏರಿ ರಾಜ್ಯದ ಜನಪ್ರಿಯ ನಾಯಕರಾಗಿ ಬೆಳೆದರು.

ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ ಎಂಬ ಮಾತು 1980–90ರ ದಶಕಗಳಲ್ಲಿ ಚಾಲ್ತಿಯಲ್ಲಿತ್ತು. ಬೆರಳಣಿಕೆಯ ಶಾಸಕರನ್ನು ಬೆನ್ನಿಗಿಟ್ಟುಕೊಂಡು ವಿಧಾನಸೌಧದಲ್ಲಿ ತಮ್ಮ ಮಾತುಗಳ ಮೂಲಕ ಆಡಳಿತ ಪಕ್ಷಕ್ಕೆ ಛಡಿ ಏಟು ನೀಡಿದವರು ಯಡಿಯೂರಪ್ಪ. ಪ್ರತಿಪಕ್ಷದ ಸಾಲಿನಲ್ಲಿ ಯಡಿಯೂರಪ್ಪ ಇದ್ದಾರೆ ಎಂದರೆ ಸಿಎಂ ಮತ್ತು ಸಚಿವರಾದವರು ನಿಖರವಾಗಿ ಉತ್ತರ ಕೊಡುವ ಪ್ರಯತ್ನ ಮಾಡುತ್ತಿದ್ದರು. ವಿಧಾನಸಭೆಯಲ್ಲಿ ಏಕಾಂಗಿ ಹೋರಾಟದ ಮೂಲಕ ಸರ್ಕಾರಕ್ಕೆ ನೀರಿಳಿಸಿದರು. ಸಾಲ ಮನ್ನಾ ಯೋಜನೆ ಕಾರಣರಾಗಿ, ಸರ್ಕಾರಿ ಭೂಮಿ ಸಾಗುವಳಿ ಮಾಡಿದ ರೈತರನ್ನು ಒಕ್ಕಲೆಬ್ಬಿಸುವುದನ್ನು ತಡೆದರು. ಜೀತದಾಳು ಪದ್ಧತಿ ವಿಮುಕ್ತಿ, ಬಗರ್‌ಹುಕುಂ ಸಾಗುವಳಿ ರೈತರಿಗೆ ಹಕ್ಕುಪತ್ರ ಸೇರಿದಂತೆ ವಿವಿಧ ಕಾರಣಗಳಿಗೆ ಸುದೀರ್ಘ ಪಾದಯಾತ್ರೆ ನಡೆಸಿದರು. ಶಿಕಾರಿಪುರದ ಅಂಜನಾಪುರ ಜಲಾಶಯದ ಏರಿ ಒಡೆದಾಗ ಸರ್ಕಾರದ ಅನುದಾನಕ್ಕೂ ಕಾಯದೆ ರೈತರೊಂದಿಗೆ ಸೇರಿ ದುರಸ್ಥಿ ಮಾಡಿದರು.

ಅಭಿವೃದ್ಧಿಗೆ ಅನುಭವದ ಧಾರೆ: ಜನಪರ ಹೋರಾಟಗಳೂ ಮತ್ತು ಪ್ರತಿಪಕ್ಷದ ಸಾಲಿನಲ್ಲಿ ಕುಳಿತು ಪಡೆದ ಅನುಭವವನ್ನು ಅಧಿಕಾರಕ್ಕೆ ಏರಿದಾಗ ಅಭಿವೃದ್ಧಿ ವರವಾದ ಯೋಜನೆಗಳಿಗೆ ಧಾರೆ ಎರೆದರು. ಡಿಸಿಎಂ ಮತ್ತು ಸಿಎಂ ಆಗಿ ಹಲವು ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೊಳಿಸಿ ಅಭಿವೃದ್ಧಿ ಹರಿಕಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಭ್ರಷ್ಟಾಚಾರದ ಆಪಾದನೆಯಿಂದಾಗಿ ಅಧಿಕಾರ ಕಳೆದುಕೊಂದು ಬೆಜೆಪಿಯಿಂದ ಹೊರ ನಡೆದು ಕೆಜೆಪಿ ಕಟ್ಟಿ ಅಲ್ಲೂ ಸೋಲಾದಾಗ ಯಡಿಯೂರಪ್ಪ ರಾಜಕೀಯ ಭವಿಷ್ಯ ಮುಗಿದೆ ಹೋಯಿತು ಎಂದು ಆಡಿಕೊಳ್ಳಲಾಗಿತ್ತು. ಆದರೆ, ಅಧಿಕಾರ ಕಳೆದುಕೊಂಡಿದ್ದಲ್ಲದೆ ದಯನೀಯ ಸೋಲು ಅನುಭವಿಸಿದ ಬಿಜೆಪಿಗೆ ಮರು ಜೀವ ನೀಡಲು ಮತ್ತೆ ಯಡಿಯೂರಪ್ಪ ಅವರು ಬರಬೇಕಾಯಿತು. 2018ರ ಚುನಾವಣೆಯಲ್ಲಿ ಪಕ್ಷಕ್ಕೆ ಗೆಲುವು ತಂದುಕೊಡುವ ಮೂಲಕ ತಮ್ಮ ಶಕ್ತಿ ಏನೆಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಯಡಿಯೂರಪ್ಪ ಕಡೆಗಣಿಸಿದರೆ ಉಳಿಗಾಲವಿಲ್ಲ ಎಂಬುದು ಆಗ ಬಿಜೆಪಿಗೆ ಮನವರಿಕೆಯಾಗಿತ್ತು.

ಮತ್ತೆ ಅಧಿಕಾರಕ್ಕೇರಿದ ಚಾಣಾಕ್ಯ: ದೊಡ್ಡಪಕ್ಷವಾದರೂ ಬಹುಮತ ಇಲ್ಲದೆ ಅಧಿಕಾರ ಕಳೆದುಕೊಂಡಾಗಲೂ ಸುಮ್ಮನೆ ಕೂರದ ಅವರು ಅನಾರೋಗ್ಯದ ನಡುವೆಯೂ ಮತ್ತೆ ಕಾರ್ಯಾಚರಣೆಗೆ

ಇಳಿದರು. ರಾಜಕೀಯ ತಂತ್ರಗಾರಿಕೆ ನಡೆಸಿ ಒಂದೇ ವರ್ಷದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದು ಪುನಃ ಸಿಎಂ ಗಾದಿಗೆ ಏರಿ ಚಾಣಾಕ್ಷತನ ಮೆರೆದರು.

ಅಂಕಿ ಅಂಶದಲ್ಲಿ ಸಾಧನೆ: 80 ವರ್ಷದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಒಟ್ಟಾರೆ 55 ವರ್ಷಗಳ ಚುನಾವಣೆ ರಾಜಕೀಯದಲ್ಲಿ ತಲಾ ಒಂದು ಬಾರಿ ಪುರಸಭೆ ಸದಸ್ಯ, ಅಧ್ಯಕ್ಷ, ಎಂಎಲ್‌ಸಿ, (4.5ವರ್ಷ), ಎಂಪಿ (4ವರ್ಷ) ಮತ್ತು 8 ಬಾರಿ ಎಂಎಲ್‌ಎ ಆಗಿದ್ದರು. ವಿಧಾನಮಂಡಲದಲ್ಲಿ 24 ವರ್ಷ ಪ್ರತಿಪಕ್ಷ, 11 ವರ್ಷ ಆಡಳಿತ ಪಕ್ಷದ ಸದಸ್ಯರಾಗಿದ್ದರು. ಇದರಲ್ಲಿ ವಿಧಾನಸಭೆಯಲ್ಲಿ ಮೂರು ಅವಧಿಯಲ್ಲಿ 8 ವರ್ಷ ಮತ್ತು ಪರಿಷತ್‌ನಲ್ಲಿ ಒಂದು ಅವಧಿಯಲ್ಲಿ 4.5 ವರ್ಷಗಳ ಕಾಲ ಪ್ರತಿಪಕ್ಷದ ನಾಯಕರಾಗಿದ್ದರು. 7 ವರ್ಷಗಳ ಕಾಲ ಡಿಸಿಎಂ ಮತ್ತು ಸಿಎಂ ಆಗಿದ್ದರು. ದಾಖಲೆಯ ನಾಲ್ಕು ಬಾರಿ ಸಿಎಂ ಆಗಿ ಅಧಿಕಾರ ವಹಿಸಿಕೊಂಡರು. ಒಂದೇ ಕ್ಷೇತ್ರವನ್ನು 8 ಬಾರಿ ಪ್ರತಿನಿಧಿಸಿದ ದಾಖಲೆ ಸಹ ಇವರ ಹೆಸರಿನಲ್ಲಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:25.02.2023

53. ವಿಧಾನಸಭೆಯಲ್ಲಿ ಶಾಸಕರ ವಿದಾಯ ಭಾಷಣ

ತಮ್ಮನ್ನು ಶಾಸನ ಸಭೆಗೆ ಕಳುಹಿಸಿದ ಜನತೆಗೆ ಸದಸ್ಯರ ಕೃತಜ್ಞತೆ, ರಾಜಕೀಯವಾಗಿ ಅವಕಾಶ ನೀಡಿದ ಪಕ್ಷ ಬೆಳೆಸಿದ ನಾಯಕರ ಸ್ಮರಣೆ, ಐದು ವರ್ಷ ಶಾಸಕರಾಗಿ ಅನುಭವಿಸಿದ ಸಿಹಿ–ಕಹಿಗಳ ಮೆಲುಕು. ತತ್ವ ಸಿದ್ಧಾಂತಗಳನ್ನು ಬದಿಗಿಟ್ಟು ಪರಸ್ಪರ ಸ್ನೇಹ, ಮುಂದಿನ ಚುನಾವಣೆಗಳು ದ್ವೇಷಮುಕ್ತವಾಗಿರಲಿ ಎಂದು ಕೆಲ ಸದಸ್ಯರ ಸಂದೇಶ ಹಾಗೂ ಬಹುತೇಕ ಸದಸ್ಯರಿಂದ ಮತ್ತೆ ಶಾಸಕರಾಗಿ ಆರಿಸಿ ಬರುವ ಆಶಯ.

ಇದಿಷ್ಟು ಅರ್ಥಪೂರ್ಣವಾಗಿ ಶುಕ್ರವಾರ ಮುಕ್ತಾಯಗೊಂಡ 15ನೇ ವಿಧಾನಸಭೆಯ ಕೊನೆಯ ಅಧಿವೇಶನದ ಕೊನೆಯ ದಿನದ ಕಲಾಪದ ವೇಳೆ 5 ವರ್ಷಗಳ ಶಾಸಕ ಸ್ಥಾನದ ಅವಧಿಯನ್ನು ಇನ್ನೇನು ಪೂರೈಸಿ ಮತ್ತೆ ಮತಭಿಕ್ಷೆಗೆ ಸಜ್ಜಾಗುತ್ತಿರುವ ಜನಪ್ರತಿನಿಧಿಗಳ ವಿದಾಯ ಭಾಷಣದ ಸ್ಥೂಲ ಚಿತ್ರಣ. ಕೊನೆಯ ದಿನದ ಕಾರ್ಯಕಲಾಪ ಬೆಳಿಗ್ಗೆ ಆರಂಭವಾಗುತ್ತಿದ್ದಂತೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಪ್ರಶ್ನೋತ್ತರ ಆರಂಭಿಸಿದರು. ಆದರೆ, ಪ್ರಶ್ನೆ ಕೇಳಿದ್ದ ಬಹುತೇಕ ಸದಸ್ಯರು ಗೈರಾಗಿದ್ದರು. ಹಾಗಾಗಿ, ಪ್ರಶ್ನೋತ್ತರ ಅವಧಿ ಒಂದು ಪ್ರಶ್ನೆಗೆ ಸೀಮಿತವಾಯಿತು. ಹಾಗಾಗಿ ಸ್ಪೀಕರ್ ಎಲ್ಲಾ ಶಾಸಕರು ಕೆಲ ತಿಂಗಳಲ್ಲಿ ಅವಧಿ ಪೂರ್ಣಗೊಳಿಸಿ ಮತ್ತೆ ಚುನಾವಣೆಗೆ ಹೋಗುತ್ತಿರುವುದರಿಂದ ತಮ್ಮ ಮನದಾಳದ ಮಾತುಗಳನ್ನು ಸದನದಲ್ಲಿ ಹಂಚಿಕೊಳ್ಳಲು ಅವಕಾಶ ಕೊಟ್ಟರು.

ಸಿಎಂ ಬೊಮ್ಮಾಯಿ, ಬಿ.ಎಸ್.ಯಡಿಯೂರಪ್ಪ, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಆರೋಗ್ಯ ಸಚಿವ ಡಾ:ಕೆ.ಸುಧಾಕರ್, ಅರವಿಂದ ಲಿಂಬಾವಳಿ, ಬಸವನಗೌಡ ಪಾಟೀಲ್ ಯತ್ನಾಳ್, ಪೂರ್ಣಿಮಾ, ರೂಪಾಲಿ ನಾಯಕ್, ಸಿ.ಎಂ.ನಿಂಬಣ್ಣನವರ್ ಪ್ರತಿಪಕ್ಷದ ನಾಯಕ ಯು.ಟಿ.ಖಾದರ್ ಸೇರಿದಂತೆ ಆಡಳಿತ ಹಾಗೂ ಪ್ರತಿಪಕ್ಷಗಳ ಹಲವಾರು ಸದಸ್ಯರು, ತಮ್ಮ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಡರು.

ಸದಸ್ಯರು ಪರಸ್ಪರ ಅಭಿನಂದನೆ, ಕೃತಜ್ಞತೆ ಜೊತೆಗೆ ಮುಂಬರುವ ಚುನಾವಣೆಯಲ್ಲಿ ಗೆದ್ದು ಸದನಕ್ಕೆ ಬರೋಣ ಎಂದು ಪರಸ್ಪರ ಹಾರೈಸಿಕೊಂಡರು. ಆಡಳಿತ–ಪ್ರತಿಪಕ್ಷ ಎಲ್ಲೇ ಇದ್ದರೂ ಕಳೆದ ಐದು ವರ್ಷಗಳ ಕಾಲ ಶಾಸಕರಾಗಿ ಸದನದಲ್ಲಿ ಏನೇ ಪ್ರಸ್ತಾಪ ಮಾಡಿದ್ದರೂ ಜನರ ಹಿತಕ್ಕಾಗಿ ಮಾಡಿದ್ದೇವೆ. ನಾವೆಲ್ಲಾ ರಾಜಕೀಯವಾಗಿ ಯಾವುದೇ ಪಕ್ಷದಲ್ಲಿದ್ದರೂ, ತತ್ವ ಸಿದ್ಧಾಂತ, ಅಭಿಪ್ರಾಯಗಳನ್ನು ಹೊಂದಿದ್ದರೂ ವೈಯಕ್ತಿಕವಾಗಿ ಸ್ನೇಹಿತರು. ಯಾವುದೇ ಕಹಿ ಮನಸ್ಸಿನಲ್ಲಿ ಇಲ್ಲ. ಎಲ್ಲೇ ಸಿಕ್ಕರೂ ಉಭಯ ಕುಶಲೋಪರಿ ಇದ್ದೇ ಇರುತ್ತದೆ ಎಂಬ ಭಾವನೆಯೊಂದಿಗೆ ಭಾಷಣ ಮಾಡಿದರು. ಕೊನೆಗೆ

ಸ್ಪೀಕರ್ ಕೂಡ ವಿದಾಯ ಭಾಷಣ ಮಾಡಿ ಎಲ್ಲಾ ಸದಸ್ಯರಿಗೂ ಅಭಿನಂದನೆ ತಿಳಿಸಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಇಬ್ಬರು 100% ಹಾಜರಿ: ಶುಕ್ರವಾರಕ್ಕೆ ಅಂತ್ಯಗೊಂಡ 5ನೇ ವಿಧಾನಸಭೆಯ ಎಲ್ಲಾ ಅಧಿವೇಶನಗಳಲ್ಲಿ ಕಲಘಟಗಿ ಬಿಜೆಪಿ ಶಾಸಕ ಸಿ.ಎಂ.ನಿಂಬಣ್ಣನವರ್ ಮತ್ತು ಬೇಲೂರು ಶಾಸಕ ಜೆಡಿಎಸ್‌ನ ಕೆ.ಎಸ್.ಲಿಂಗೇಶ್ ಅವರು ಶೇ.100ರಷ್ಟು ಹಾಜರಾತಿ ತೋರಿ ಸ್ಪೀಕರ್ ಮೆಚ್ಚುಗೆಗೆ ಪಾತ್ರರಾದರು. ಇವರಿದ್ದರು ಒಟ್ಟು 167ಕ್ಕೆ 167 ದಿನವೂ ಕಲಾಪದಲ್ಲಿ ಭಾಗವಹಿಸಿದ್ದರು.

ಆಧಾರ: ಕನ್ನಡ ಪ್ರಭ, ದಿನಾಂಕ:25.02.2023

54. ಬಿಎಸ್‌ವೈ ಭಾಷಣ ನನಗೆ ಸ್ಫೂರ್ತಿ: ಮೋದಿ ಮೆಚ್ಚುಗೆ

ವಿಧಾನಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಆಡಿರುವ ಮಾತುಗಳನ್ನು ಪ್ರಧಾನಿ ನರೇಂದ್ರ ಮೋದಿ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.

'ಬಿಜೆಪಿಯ ಒಬ್ಬ ಕಾರ್ಯಕರ್ತನಾದ ನನಗೆ ಈ ಭಾಷಣ ಅತ್ಯಂತ ಸ್ಫೂರ್ತಿದಾಯಕ ಎಂದೆನಿಸಿದೆ. ಇದರಲ್ಲಿ ನಮ್ಮ ಪಕ್ಷದ ನೈತಿಕತೆಯೂ ಅಡಕವಾಗಿದೆ. ಇಂದು ಖಂಡಿತವಾಗಿಯೂ ಇತರ ಕಾರ್ಯಕರ್ತರಿಗೂ ಸ್ಫೂರ್ತಿದಾಯಕ ಎಂದೆನಿಸಿದೆ. ಇದರಲ್ಲಿ ನಮ್ಮ ಪಕ್ಷದ ನೈತಿಕತೆಯೂ ಅಡಕವಾಗಿದೆ. ಇಂದು ಖಂಡಿತವಾಗಿಯೂ ಇತರ ಕಾರ್ಯಕತೃರಿಗೂ ಸ್ಫೂರ್ತಿ' ಎಂದು ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಈ ಸಂಬಂಧ ಯಡಿಯೂರಪ್ಪ ಅವರ ಸುಮಾರು 21 ನಿಮಿಷಗಳ ಕಾಲದ ಭಾಷಣದ ವಿಡಿಯೋವನ್ನು ರಾಜ್ಯ ಬಿಜೆಪಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದು. ಇದನ್ನು ಮೋದಿ ಅವರು ತಮ್ಮ ಟ್ವೀಟ್ ಜೊತೆ ಟ್ಯಾಗ್ ಮಾಡಿದ್ದಾರೆ. ನನ್ನನ್ನು ಬಿಜೆಪಿ ಮೂಲೆಗುಂಪು ಮಾಡಿಲ್ಲ. ಯಾರಿಗೂ ಕೊಡದಷ್ಟು ಅವಕಾಶ, ಸ್ಥಾನಮಾನವನ್ನು ಪಕ್ಷ ಮತ್ತು ಪ್ರಧಾನಿ ಮೋದಿ ನೀಡಿದ್ದಾರೆ. ನಾನು ಸದಾ ಮೋದಿ ಋಣಿ. ನನ್ನ ಕೊನೇ ಉಸಿರಿರುವವರೆಗೂ ಪಕ್ಷ ಸಂಘಟನೆ ಮಾಡುತ್ತೇನೆಂದು ಯಡಿಯೂರಪ್ಪ ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆ ವೇಳೆ ಹೇಳಿದ್ದರು.

ಆಧಾರ: ಕನ್ನಡ ಪ್ರಭ, ದಿನಾಂಕ:25.02.2023

55. ಬಾಬು ಕೃಷ್ಣಮೂರ್ತಿಗೆ ಪಂಪ ಪ್ರಶಸ್ತಿ ಪ್ರದಾನ

ಕನ್ನಡ ನಾಡಿನ ಹಿರಿಮೆ ಹೆಚ್ಚಿಸಿದ ಕದಂಬರ ನಾಡು ಬನವಾಸಿಯಲ್ಲಿ ಎರಡು ದಿನಗಳ ಕದಂಬೋತ್ಸವಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿ ಪ್ರತಿಷ್ಠಿತ ಪಂಪ ಪ್ರಶಸ್ತಿ ಪ್ರದಾನ ಮಾಡಿದರು.

ಕಳೆದ ಮೂರು ವರ್ಷದ ಪಂಪ ಪ್ರಶಸ್ತಿಯನ್ನು ಹಿರಿಯ ಸಾಹಿತಿ ಪ್ರೊ|ಸಿ.ಪಿ.ಕೃಷ್ಣಕುಮಾರ, ಡಾ|ಬಾಬು ಕೃಷ್ಣಮೂರ್ತಿ ಹಾಗೂ ಹಿರಿಯ ಸಾಹಿತಿ ನಾಡೋಜ ಡಾ|ಎಸ್.ಆರ್.ರಾಮಸ್ವಾಮಿ ಅವರಿಗೆ ಪ್ರಕಟಿಲಾಗಿತ್ತು. ಸಮಾರಂಭಕ್ಕೆ ಆಗಮಿಸಿದ್ದ ಬಾಬು ಕೃಷ್ಣಮೂರ್ತಿ ಅವರಿಗೆ ಪ್ರಶಸ್ತಿ ಪತ್ರ ಶಾಲು, ಹಾರ ಹಾಕಿ ಸಿ.ಎಂ.ಅಭಿನಂದಿಸಿದರು. ಬಳಿಕ ಮಾತನಾಡಿದ ಬಸವರಾಜ ಬೊಮ್ಮಾಯಿ ಅವರು, ಆದಿಕವಿ ಪಂಪ ಉಲ್ಲೇಖಿಸಿದಂತೆ ಬನವಾಸಿ ಅಭಿವೃದ್ಧಿ ಮಾಡಲಾಗುವುದು. ಪಂಪ ಹಾಡಿ ಹೊಗಳಿದ ಬನವಾಸಿ ಹಾಗೂ ಪಂಪನ ಹುಟ್ಟೂರು ಅಣ್ಣಿಗೇರಿ ಅಭಿವೃದ್ಧಿಗೆ ಸರ್ಕಾರ ಮುಂದಾಗಲಿದೆ. ಐತಿಹಾಸಿಕ ಪ್ರವಾಸೋದ್ಯಮ ಗಮನದಲ್ಲಿಟ್ಟುಕೊಂಡು ಬನವಾಸಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಕದಂಬರ ಇತಿಹಾಸ ಇಲ್ಲದೇ ಕರ್ನಾಟಕದ ಇತಿಹಾಸ ಪೂರ್ಣ ಆಗದು. ಪಲ್ಲವರ ವಿರುದ್ಧ ಹೋರಾಡಿ, ನಾಡು ಬಿಡುಗಡೆಗೊಳಿಸಿ ಬನವಾಸಿಯನ್ನು ರಾಜಧಾನಿಯಾಗಿಸಿದ್ದರು. ಆ ವೇಳೆ ಇಲ್ಲಿ

ಸಾಹಿತ್ಯ, ಸಂಸ್ಕೃತಿ, ಬಹಳ ಉನ್ನತ ಸ್ಥಾನದಲ್ಲಿತ್ತು. ಆದಿ ಕವಿ ಪಂಪ ತಮ್ಮ ಸಾಹಿತ್ಯದ ಮೂಲಕ ಕನ್ನಡದ ಶ್ರೀಮಂತಿಕೆ ಹೆಚ್ಚಿಸಿದ್ದರು ಎಂದರು.

ಬನವಾಸಿ ಅಭಿವೃದ್ಧಿಗೆ ಸಚಿವ ಶಿವರಾಮ ಹೆಬ್ಬಾರ್ ಶ್ರಮಿಸಿದ್ದಾರೆ. ಅವರ ಕ್ಷೇತ್ರದಲ್ಲಿ ಮೂರು ಏತ ನೀರಾವರಿ ಯೋಜನೆ ಅನುಷ್ಠಾನ ಮಾಡಿದ್ದಾರೆ. ಬನವಾಸಿ ಭಾಗದಲ್ಲಿ 62 ಕೆರೆಗಳಿಗೆ ವರದಾ ನದಿ ನೀರು ಹರಿಸಿದ್ದು, ಭವಿಷ್ಯದಲ್ಲಿ ಇಲ್ಲಿ ಬಂಗಾರದ ಬರ ಆಗೋದಿಲ್ಲ. ಇನ್ನು ಮುಂದೆಯೂ ಈ ಭಾಗದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ದ ಎಂದರು.

ಸಾಹಿತ್ಯ ದೇಶ ಕಟ್ಟಬೇಕು: ಪಂಪ ಪ್ರಶಸ್ತಿ ಪರಸ್ಕೃತ ಡಾ।ಬಾಬು ಕೃಷ್ಣಮೂರ್ತಿ ಮಾತನಾಡಿ, ವಿದೇಶಿ ಹಣ ಪಡೆದು ಸಮಾಜ, ದೇಶ ಒಡೆಯುವ ಕೆಲಸವನ್ನು ಹಲವರು ಮಾಡುತ್ತಿದ್ದಾರೆ. ದೇಶ, ಸಂಸ್ಕೃತಿ, ಪರಂಪರೆ ಬಗ್ಗೆ ಅಭಿಮಾನ ಮೂಡಿಸುವ, ದೇಶ ಕಟ್ಟುವ ಸಾಹಿತ್ಯದ ಕೆಲಸ ಮಾಡಬೇಕು. ಕಳೆದ ಅರವತ್ತು ವರ್ಷಗಳಿಂದ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡ ನನಗೆ ಪಂಪ ಪ್ರಶಸ್ತಿ ಕೊಟ್ಟಿದ್ದು, ನನ್ನ ಕೆಲಸಕ್ಕೊಂದು ಮುದ್ರೆ ಸಿಕ್ಕಂತಾಗಿದೆ. ಆದಿ ಕವಿಯ ನೆಲ ಬನವಾಸಿಯಲ್ಲಿ ಪ್ರಶಸ್ತಿ ಸಿಕ್ಕಿದ್ದು ಸಮಾಧಾನ ತಂದಿದೆ ಎಂದರು.

ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ, ಸಚಿವ ಶಿವರಾಮ ಹೆಬ್ಬಾರ, ಗೋವಿಂದ ಕಾರಜೋಳ ಹಾಗೂ ಕೋಟಾ ಶ್ರೀನಿವಾಸ ಪೂಜಾರ ಇದ್ದರು.

ರಾತ್ರಿ 11ಕ್ಕೆ ಕರೆ ಬಂದಿತ್ತು: ಸೋಮವಾರ ರಾತ್ರಿ 11 ಗಂಟೆಗೆ ಕಾಲ್ ಬಂದಿತ್ತು. ಎರಡನೇ ಸಲ ಬಂದಾಗ ಯಾರದ್ದಪಾ ಅಂದು ಎತ್ತಿದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯದ್ದಾಗಿತ್ತು. ನಾಳೆ ಕದಂಬೋತ್ಸವ ಇದೆ. ಪಂಪ ಪ್ರಶಸ್ತಿ ಪ್ರದಾನ ಇದೆ ಬನ್ನಿ ಎಂದರು. ನಾನ್ಯಾಕೆ ಬರಲಿ ಎಂದು ಕೇಳಿದೆ. ಇಲ್ಲ ಪಂಪ ಪ್ರಶಸ್ತಿ ತಮಗೆ ನೀಡುತ್ತಾರೆ. ನೀವು ಬರಬೇಕು ಎಂದು ಹೇಳಿದರು. ನನಗೆ 80 ವರ್ಷ ಇಲಾಖೆಯ ಒತ್ತಾಯದಿಂದ ಹೊರಟೆ. ಪಂಪ ಪ್ರಶಸ್ತಿ ಬಂದಿದ್ದು ಆಶ್ಚರ್ಯ ಆಗಿದೆ. ಕಳೆದ ಆರವತ್ತು ವರ್ಷದಿಂದ ಸಾಹಿತ್ಯ ರಚನೆಯ ಉದ್ದೇಶಕ್ಕೆ ಈ ಪ್ರಶಸ್ತಿ ಬಂದಿದೆ. ಯಾವುದೇ ಪ್ರಶಸ್ತಿ ನಿರೀಕ್ಷೆ ಮಾಡದೇ ನನ್ನ ಕರ್ತವ್ಯ ಎಂದು ಮಾಡಿಕೊಂಡು ಬಂದಿದ್ದೆ. ಇನ್ನಿಬ್ಬರು ಶ್ರೇಷ್ಠ ಸಾಹಿತಿಗಳಿಗೂ ಪ್ರಶಸ್ತಿ ಬಂದಿದೆ. ಆದರೆ, ವಯೋಮಾನ ಕಾರಣದಿಂದ ಅವರು ಬಂದಿರಲಿಕ್ಕಿಲ್ಲ ಎಂದು ಬಾಬು ಕೃಷ್ಣಮೂರ್ತಿ ಹೇಳಿದರು.

ಆಧಾರ: ಉದಯವಾಣಿ, ದಿನಾಂಕ:01.03.2023

56. ನೆಹರು ಓಲೇಕಾರ್‌ಗೆ ಹೈಕೋರ್ಟ್ 'ರಿಲೀಫ್'

ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತ ಆರೋಪ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಹಾವೇರಿ ಬಿಜೆಪಿ ಶಾಸಕ ನೆಹರು ಓಲೇಕಾರ್ ಅವರಿಗೆ ಹೈಕೋರ್ಟ್‌ನಿಂದ 'ರಿಲೀಫ್' ಸಿಕ್ಕಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 2 ವರ್ಷ ಸಾಧಾರಣ ಜೈಲು ಶಿಕ್ಷೆ ಹಾಗೂ ರೂ.2 ಸಾವಿರ ದಂಡ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 2023ರ ಫೆಬ್ರವರಿ 13ರಂದು ಹೊರಡಿಸಿದ್ದ ತೀರ್ಪನ್ನು ಅಮಾನತ್ತಿನಲ್ಲಿಟ್ಟು, ಅಲ್ಲದೇ ಜಾಮೀನು ಮಂಜೂರು ಮಾಡಿ ಹೈಕೋರ್ಟ್ ಆದೇಶಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಶಾಸಕ ನೆಹರು ಓಲೇಕಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಸ್ವರೂಪ್ ಆನಂದ್ ವಾದ ಮಂಡಿಸಿ, ಪ್ರಕರಣ ಸಂಬಂಧ ಅರ್ಜಿದಾರರ ವಿರುದ್ಧ ದೂರು ದಾಖಲಿಸಲು ದೂರುದಾರರು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನೇ ಪಡೆದಿಲ್ಲ. ಪೂರ್ವಾನುಮತಿ ಪಡೆಯದೇ ಸಲ್ಲಿಸಿದ್ದ ದೂರನ್ನು ವಿಚಾರಣೆ ನಡೆಸಿ ಅರ್ಜಿದಾರರಿಗೆ ಶಿಕ್ಷೆ ಹಾಗೂ ದಂಡ ವಿಧಿಸಿದ ವಿಚಾರಣಾ ನ್ಯಾಯಾಲಯದ ಕ್ರಮ

ಕಾನೂನುಬಾಹಿರವಾಗಿದೆ. ಇನ್ನೂ ಪ್ರಕರಣದ ಇತರೆ ಆರೋಪಗಳ ಜೊತೆಗೆ ಅರ್ಜಿದಾರ ಶಾಸಕರು ಅಪರಾದಕ್ಕೆ ಒಳಸಂಚು ರೂಪಿಸಿಲ್ಲ. ಆದ್ದರಿಂದ, ಅರ್ಜಿದಾರರನ್ನು ದೋಷಿಯಾಗಿ ತೀರ್ಮಾನಿಸಿ ಮತ್ತು ಶಿಕ್ಷೆ ವಿಧಿಸಿ ವಿಚಾರಣೆ ನ್ಯಾಯಾಲಯದ ಹೊರಡಿಸಿದ ಆದೇಶವನ್ನು ಅಮಾನತ್ತಿನಲ್ಲಿರಿಸಬೇಕು. ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬೇಕು ಎಂದು ಕೋರಿದ್ದರು. ಈ ಮನವಿಯನ್ನು ಪುರಸ್ಕರಿಸಿದ ಹೈಕೋರ್ಟ್, ವಿಚಾರಣೆ ನ್ಯಾಯಾಲಯದ ಆದೇಶವನ್ನು ಅಮಾನತ್ತಿನಲ್ಲಿರಿಸಿ ನೆಹರು ಓಲೇಕಾರ್‌ಗೆ ಜಾಮೀನು ನೀಡಿ ಆದೇಶಿಸಿತು.

ಆಧಾರ: ಉದಯವಾಸಣಿ, ದಿನಾಂಕ:04.03.2023

57. ಕಪ್ಪತ್ತಗುಡ್ಡಕ್ಕೆ ಮತ್ತೆ ಬೆಂಕಿ ತಡೆಗೆ ವಿಶೇಷ ಪಡೆ ರಚಿಸಿ

ನಾಡಿನ ಅಮೂಲ್ಯ ಆಸ್ತಿಯಾದ ಹಾಗೂ ವೈವಿಧ್ಯಮಯ ಸಸ್ಯರಾಶಿಗಳನ್ನು ಹೊಂದಿದ ಕಪ್ಪತ್ತಗುಡ್ಡ ಸಂರಕ್ಷಣೆ ಹಾಗೂ ಅಲ್ಲಿರುವ ಅಮೂಲ್ಯ ಔಷಧಿಗುಣವುಳ್ಳ ಸಸ್ಯ ಸಂಪತ್ತನ್ನು ಉಳಿಸಿಕೊಳ್ಳಲು ರಾಜ್ಯ ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಕಪ್ಪತ್ತಗುಡ್ಡಕ್ಕೆ ಪದೇ ಪದೇ ಬೆಂಕಿ ಹತ್ತುತ್ತಿದೆ. ಇದನ್ನು ತಡೆಯಲು ವಿಶೇಷ ಸಂರಕ್ಷಣಾ ಪಡೆ ರಚನೆ ಮಾಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಕಪ್ಪತ್ತಗುಡ್ಡದಲ್ಲಿರುವ ಸಂಪತ್ತನ್ನು ನುಂಗಲು ಕಳೆದ ದಶಕಗಳಿಂದ ಹೊಂಚು ಹಾಕುತ್ತಿರುವ ಕೆಲವು ಬಂಡವಾಳಶಾಹಿಗಳು, ಗಣಿಗಳ್ಳರು, ಉದ್ಯಮಿಗಳು ಪ್ರಯತ್ನಪಟ್ಟಿದ್ದಾರೆ. ತಾವು ಮೊದಲು ಕಪ್ಪತ್ತಗುಡ್ಡಕ್ಕೆ ಸರಹದ್ದು ನಿಗದಿ ಮಾಡಿದ ನಂತರ ಗಣಿ ಉದ್ಯಮಿದಾರರ ಪ್ರಸ್ತಾವನೆಯನ್ನು ಚರ್ಚಿಸೋಣ ಎಂದು ಗಟ್ಟಿ ನಿರ್ಧಾರ ತೆಗೆದುಕೊಂಡಿದ್ದು ಸ್ವಾಗತಾರ್ಹ ಕ್ರಮವಾಗಿದೆ. ವಿಶೇಷ ಸಂರಕ್ಷಣಾ ಪಡೆಯನ್ನು ಆದಷ್ಟು ಬೇಗ ರಚನೆ ಮಾಡಬೇಕು ಎಂದು ಒತ್ತಾಯ ಮಾಡಿದರು.

ಗುಡ್ಡಕ್ಕೆ ಬೆಂಕಿ ಹೊತ್ತಿಕೊಳ್ಳುವುದರಿಂದ, ನಾನಾ ರೀತಿಯ ಸಮಸ್ಯೆಗಳು ಉದ್ಭವಿಸುತ್ತವೆ. ಅಪಾರ ಸಸ್ಯರಾಶಿಗಳು, ವನ್ಯಜೀವಿಗಳು ಹಾಳಾಗುತ್ತಿವೆ. ಈ ವಿಷಯವಾಗಿ ನಾನು ಈ ಹಿಂದೆ ಸದನದ ಒಳಗೆ, ಸದನದ ಹೊರಗೆ ಹೋರಾಟ ಮಾಡಿ ಸರ್ಕಾರದ ಗಮನ ಸೆಳೆದಿದ್ದು ಎಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:07.03.2023

58. ಕಲಾಪ ದಿನಗಳ ಸಂಖ್ಯೆ ಹೆಚ್ಚಳ

ಪ್ರಸಕ್ತ 15ನೇ ವಿಧಾನಸಭೆಯ ಅವಧಿಯಲ್ಲಿ 15 ಬಾರಿ ವಿಧಾನಮಂಡಲ ಅಧಿವೇಶನ ನಡೆದಿದೆ. 167 ದಿನಗಳ ಕಾಲ ವಿಧಾನಸಭೆಯ ಕಲಾಪ ನಡೆದಿದ್ದು 200 ವಿಧೇಯಕಗಳನ್ನು ಅನುಮೋದಿಸಲಾಗಿದೆ. ಯಶಸ್ವಿಯಾಗಿ ಕಲಾಪ ನಡೆಸಲು ಸಹಕರಿಸಿದ 224 ಸದಸ್ಯರು, ಸಚಿವಾಲಯ, ಕಾರ್ಯಾಂಗ ಮತ್ತು ಮಾಧ್ಯಮ ಸೇರಿದಂತೆ ಎಲ್ಲರಿಗೂ ಅಭಿನಂದನೆ ಸಲ್ಲಿಸಲಾಗುವುದು ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಳೆದ ಮೂರು ವರ್ಷ ಎಂಟು ತಿಂಗಳ ಅವಧಿಯಲ್ಲಿನ ಕಾರ್ಯನಿರ್ವಹಣೆ ಕುರಿತಂತೆ ಮಾಹಿತಿ ನೀಡಿದರು.

"ವಿಧಾನಸಭೆಯಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಧರಣಿ, ಸತ್ಯಾಗ್ರಹ ನಡೆದಿದೆ. ಕ್ರಿಯಾ ಲೋಪದ ಪ್ರಸ್ತಾಪ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅದು ಕಡಿಮೆ ಇತ್ತು. ವಿಧೇಯಕ ಪ್ರತಿಯನ್ನು ಮೊದಲೇ ಸದಸ್ಯರಿಗೆ ನೀಡಿ ವಿಸ್ತೃತ ಚರ್ಚೆಗೆ ಅವಕಾಶ ನೀಡಲಾಗಿದೆ. ಹಾಗೆಯೇ ಬಜೆಟ್ ಮೇಲಿನ ಸಮಗ್ರ ಚರ್ಚೆಯಾಗಿದೆ" ಎಂದರು.

"ಶೂನ್ಯವೇಳೆಯಲ್ಲಿ 280 ವಿಷಯಗಳ ಪ್ರಸ್ತಾಪವಾಗಿದೆ. ಶೇ.95ರಷ್ಟು ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಸದಸ್ಯರೇ ಸದನದಲ್ಲಿ ಕೇಳಿ ಉತ್ತರ ಪಡೆದಿದ್ದಾರೆ. ದೂರದರ್ಶನದಲ್ಲಿ ಕಲಾಪದ ನೇರ ಪ್ರಸಾರ ವ್ಯವಸ್ಥೆ ಕಲ್ಪಿಸಿದ್ದರಿಂದ ಜನ ಆಸಕ್ತಿಯಿಂದ ವೀಕ್ಷಿಸಲು ನೆರವಾಗಿರುವ ಅಭಿಪ್ರಾಯವಿದೆ. 1.08 ಲಕ್ಷ ಮಂದಿ ವೀಕ್ಷಕರ ಗ್ಯಾಲರಿಯಿಂದ ನೇರವಾಗಿ ಕಲಾಪ ವೀಕ್ಷಿಸಿದ್ದಾರೆ. ಆದರೆ 2014ರಿಂದ ಪ್ರಯತ್ನ ನಡೆದಿರುವ ಇ-ವಿಧಾನ ವ್ಯವಸ್ಥೆ ಜಾರಿಯಾಗದಿರುವ ಬಗ್ಗೆ ಕೊರಗಿದೆ" ಎಂದು ಹೇಳಿದರು.

"ಹಿಂದೆಲ್ಲಾ ವರ್ಷಕ್ಕೆ ಸರಾಸರಿ 30 ದಿನ ಕಲಾಪ ನಡೆಯುತ್ತಿತ್ತು. ಅದನ್ನು ಸರಾಸರಿ 45ಕ್ಕೆ ಹೆಚ್ಚಿಸಲಾಗಿದೆ. ಮೊದಲ ಬಾರಿಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಮಾಜಿ ಸಚಿವ ಆರ್.ವಿ.ದೇಶಪಾಂಡೆ ಅವರಿಗೆ ಕ್ರಮವಾಗಿ ಎರಡು ವರ್ಷ 'ಅತ್ಯುತ್ತಮ ಶಾಸಕ' ಗೌರವ ಪ್ರದಾನ ಮಾಡಲಾಗಿದೆ. ಸಂವಿಧಾನದ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಗಿದೆ. 'ಒಂದು ದೇಶ-ಒಂದು ಚುನಾವಣೆ' ಕುರಿತು ಚರ್ಚೆ ಶುರುವಾದರೂ ಚರ್ಚೆಯಾಗಿ ಮುಕ್ತಾಯವಾಗಲಿಲ್ಲ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸದೀಯ ಮೌಲ್ಯ ವಿಷಯವಾಗಿ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದ್ದು ಇದೇ ಮೊದಲು" ಎಂದು ವಿವರ ನೀಡಿದರು.

"77 ಸಿಬ್ಬಂದಿಯನ್ನು ಪಾರದರ್ಶಕವಾಗಿ ನೇರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಕಾನ್‌ಸ್ಟಿಟ್ಯೂಷನ್ ಕ್ಲಬ್ ಆರಂಭಕ್ಕೂ ಪ್ರಯತ್ನ ನಡೆಸಲಾಗಿದೆ. ಸಂಸದೀಯ ಮೌಲ್ಯಗಳ ಕುಸಿತ ವಿಚಾರವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಚಾರಸಂಕೀರಣ ನಡೆಸಲಾಗಿತ್ತು, ಚುನಾವಣಾ ಸುಧಾರಣೆ ಕುರಿತಂತೆ 15 ಜಿಲ್ಲೆಗಳಲ್ಲಿ ಸಂವಾದ ನಡೆಸಲಾಗಿದೆ. ಒಟ್ಟಾರೆ ವಿವಾದವಿಲ್ಲದಂತೆ ಕಲಾಪ, ವಿಶೇಷ ಪ್ರಯತ್ನಗಳನ್ನು ನಡೆಸಲಾಗಿದೆ" ಎಂದು ತಿಳಿಸಿದರು.

ವರದಿ ಸಲ್ಲಿಕೆ: "ಪಕ್ಷಾಂತರ ನಿಷೇಧ ಸಂಬಂಧ ಸಂವಿಧಾನದ ಪರಿಚ್ಛೇದ 10ರ ಬಲವರ್ಧನೆಗೆ ರಾಜಸ್ಥಾನ ವಿಧಾನಸಭೆ ಸ್ಪೀಕರ್ ಸಿ.ಪಿ.ಜೋಶಿಯವರ ಅಧ್ಯಕ್ಷತೆಯ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದು, ಈಗಾಗಲೇ ಲೋಕಸಭಾ ಸ್ಪೀಕರ್‌ಗೆ ವರದಿ ಸಲ್ಲಿಸಲಾಗಿದೆ. ಶಾಸಕನ ಸ್ವಾತಂತ್ರ್ಯ ರಕ್ಷಣೆ ಸೇರಿದಂತೆ ಪಕ್ಷ, ಸಿದ್ಧಾಂತ, ಪ್ರಣಾಳಿಕೆಯ ಅನುಷ್ಠಾನ ಕುರಿತಂತೆಯೂ ಚರ್ಚಿಸಲಾಗಿದೆ. ವರದಿಯನ್ನು ಪರಿಶೀಲಿಸಿ ಲೋಕಸಭಾ ಸ್ಪೀಕರ್ ಅವರು ಕೈಗೊಳ್ಳುವ ಅಂತಿಮ ನಿಲುವಿನ ಬಗ್ಗೆ ಮಾಹಿತಿ ನೀಡಲಿದ್ದಾರೆ," ಎಂದು ಕಾಗೇರಿ ಹೇಳಿದರು.

"ಗೆಲ್ಲುವುದಷ್ಟೇ ಮಾನದಂಡವಾಗದೆ ಕೇಸರ್ ನಿರ್ಮಿಸಿ ತನ್ನ ತತ್ವ, ಸಿದ್ಧಾಂತ, ಪ್ರಣಾಳಿಕೆ ಜಾರಿಗೊಳಿಸುವ ಬದ್ಧತೆ ಬಗ್ಗೆಯೂ ಚಿಂತಿಸಬೇಕು," ಎಂದು ಅಭಿಪ್ರಾಯಪಟ್ಟರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:09.03.2023

59. ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿಯುವ ಕೆಲಸ: ಕಾಗೇರಿ

ರಾಜ್ಯ ವಿಧಾನಸಭೆ ಅಧ್ಯಕ್ಷನಾಗಿ ಸದನದ ಒಳಗೆ ಮತ್ತು ಹೊರಗೆ ಸಂಸದೀಯ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ವರ್ಷ ಎಂಟು ತಿಂಗಳು ಸ್ಪೀಕರ್ ಆಗಿ ಆದಷ್ಟೂ ನಿಯಮಾವಳಿಗಳ ಪ್ರಕಾರ ಸದನ ನಡೆಸಲಾಗಿದೆ. 224 ಸದಸ್ಯರ ಸಹಕಾರ ಇದಕ್ಕೆ ಕಾರಣವಾಗಿದೆ ಎಂದು ಹೇಳಿದರು. 15ನೇ ವಿಧಾನಸಭೆ ಅವಧಿಯಲ್ಲಿ 167 ದಿನ ಸದನದ ಕಲಾಪ ನಡೆದು 200 ವಿಧೇಯಕ ಚರ್ಚಿಸಿ ಅಂಗೀಕಾರ ಮಾಡಲಾಗಿದೆ. ಶೂನ್ಯ ವೇಳೆಯಲ್ಲಿ 280 ಸಾರ್ವಜನಿಕ ಮಹತ್ವದ ವಿಚಾರ ಮಂಡನೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು. ಈ ಹಿಂದಿನ ಅವಧಿಗೆ ಹೋಲಿಸಿದರೆ 15ನೇ ವಿಧಾನಸಭೆ ಅವಧಿಯಲ್ಲಿ ಹೆಚ್ಚು ದಿನ ಸದನ ನಡೆದಿದೆ ಎಂದು ಹೇಳಿದರು. ಈ ಅವಧಿಯಲ್ಲಿ ಧರಣಿ, ಪ್ರತಿಭಟನೆ, ಸಭಾತ್ಯಾಗ ನಡೆದದ್ದು ಅತ್ಯಂತ ಕಡಿಮೆ. ಆದಷ್ಟೂ

ಪ್ರತಿ ವಿಷಯದ ಬಗ್ಗೆಯೂ ಚರ್ಚೆಗೆ ಅವಕಾಶ ಮಾಡಿಕೊಟ್ಟು ಬಹುತೇಕ ಸರ್ವಸಮ್ಮತ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ:09.03.2023

60. ಪಕ್ಷಾಂತರ ನಿಷೇಧ ಕಾಯ್ದೆಗೆ ಬಲ ಅಗತ್ಯ

ಪಕ್ಷಾಂತರ ವಿರೋಧಿಸುವ ಶೆಡ್ಯೂಲ್ 10ರ ಪರಿಣಾಮಕಾರಿ ಜಾರಿಗೆ ರಾಜ್ಯಗಳ ವಿಧಾನಸಭೆಯ ಬಹುತೇಕ ಸ್ಪೀಕರ್‌ಗಳು ಒಮ್ಮತ ಹೊಂದಿದ್ದಾರೆ. ಸಂಸತ್‌ನಲ್ಲಿ ಮಸೂದೆ ಮಂಡಿಸಿ ಜಾರಿಗೆ ತರುವಂತೆ ಮನವಿ ಕೂಡ ಮಾಡಿದ್ದೇವೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದರು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಾಜಸ್ತಾನದ ವಿಧಾನಸಭೆಯಲ್ಲಿ ಅಲ್ಲಿನ ಸ್ಪೀಕರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಂವಿಧಾನದ 10ನೇ ಶೆಡ್ಯೂಲ್ ಪರಿಣಾಮಕಾರಿ ಜಾರಿ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಯಿತು. ಅಲ್ಲದೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲೂ ಈ ಬಗ್ಗೆ ಚರ್ಚೆ ನಡೆಸಿ ಪರಿಣಾಮಕಾರಿ ಜಾರಿಗೆ ವರದಿ ತಯಾರಿಸಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ನೀಡಲಾಗಿದೆ. ಸಂಸತ್‌ನಲ್ಲಿ ಮಂಡಿಸಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಕೋರಲಾಗಿದೆ ಎಂದು ಅವರು ಹೇಳಿದರು.

ಸದ್ಯ ಸಂಸದೀಯ ವ್ಯವಸ್ಥೆ ಕುಸಿಯುತ್ತಿದ್ದು, ಇದರ ಮೌಲ್ಯ ಉಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳು ಪ್ರಯತ್ನ ಮಾಡಬೇಕಾಗಿದೆ. ಚುನಾವಣೆ ಇನ್ನಷ್ಟು ಪಾರದರ್ಶಕವಾಗಬೇಕಿದೆ. ಚುನಾವಣೆಯಲ್ಲಿ ಯುವಕರನ್ನು ಬಳಸಿಕೊಳ್ಳುವುದು ಅಗತ್ಯ ಇದೆ. ಇದಕ್ಕಾಗಿ ಬೆಂಗಳೂರಿನಲ್ಲಿ ಕಾನೂನು ವಿದ್ಯಾರ್ಥಿಗಳ ಜೊತೆ ಚರ್ಚೆ ನಡೆಸಲಾಗಿದೆ. ನಾನು ಸ್ಪೀಕರ್ ಆದ ನಂತರ ಸಂಸದೀಯ ವ್ಯವಸ್ಥೆ ಉತ್ತಮವಾಗಿಡಲು ಶ್ರಮ ಮೀರಿ ಪ್ರಯತ್ನಿಸಿದ್ದೇನೆ ಎಂದು ಅವರು ನುಡಿದರು.

ದೂರದರ್ಶನ ಪ್ರಸಾರಕ್ಕೆ ಉತ್ತಮ ಸ್ಪಂದನೆ: ಉಭಯ ಸದನಗಳ ಕಲಾಪಗಳನ್ನು ದೂರದರ್ಶನದಲ್ಲಿ ನೇರ ಪ್ರಸಾರ ಮಾಡಿದ ಹಿನ್ನೆಲೆಯಲ್ಲಿ ಸಾರ್ವಜನಿಕರು ಉತ್ತಮವಾಗಿ ಸ್ಪಂದಿಸಿದ್ದಾರೆ. ಕಲಾಪಗಳನ್ನು ವೀಕ್ಷಣೆ ಮಾಡಲು 1 ಲಕ್ಷ 8 ಸಾವಿರ ಮಂದಿ ಆಗಮಿಸಿದ್ದಾರೆ. ಬೆಳಗಾವಿಯಲ್ಲಿ 19 ಸಾವಿರ ಮಂದಿ ವೀಕ್ಷಣೆ ಮಾಡಿದ್ದಾರೆ. ಸುಗಮ ಕಲಾಪಕ್ಕೆ ನಮಗೆ ರಾಷ್ಟ್ರದಲ್ಲಿ ಮೊದಲ ಸ್ಥಾನ ಸಿಕ್ಕಿದೆ. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ಸಮ್ಮೇಳನಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಉತ್ತಮ ಭಾಷಣ ಮಂಡಿಸಿದ್ದೇನೆ ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ನುಡಿದರು.

200 ಬಿಲ್ ಪಾಸು: 2019ರ ಜುಲೈ 31 ರಿಂದ ಇಲ್ಲಿಯವರೆಗೆ 167 ದಿನ ವಿಧಾನಸಭೆ ಕಲಾಪಗಳು ನಡೆದಿವೆ. ಈ ವೇಳೆ 200 ಬಿಲ್‌ಗಳನ್ನು ಮಂಡಿಸಿ ಚರ್ಚೆ ನಡೆಸಿ ಪಾಸು ಮಾಡಲಾಗಿದೆ. ಚರ್ಚೆ ಇಲ್ಲದೆ ಯಾವುದೇ ಬಿಲ್‌ಗಳನ್ನು ಪಾವತಿ ಮಾಡಿಲ್ಲ. ಚರ್ಚೆಯ ಅಗತ್ಯ ಇದ್ದ ಬಿಲ್‌ಗಳನ್ನು ಮುಂದೂಡಲಾಗಿತ್ತು. ಎಲ್ಲಾ ಸದಸ್ಯರ ಸಹಕಾರದಿಂದ ಇಷ್ಟು ಬಿಲ್‌ಗಳು ಅಂಗೀಕಾರವಾಗಲು ಸಾಧ್ಯವಾಯಿತು. ಸಂವಿಧಾನದ ಬಗ್ಗೆ ನಡೆದ ಚರ್ಚೆ ರಾಷ್ಟ್ರದಲ್ಲಿ ಗಮನ ಸೆಳೆಯಿತು. ಶೂನ್ಯ ವೇಳೆಯಲ್ಲಿ 280 ವಿಷಯಗಳನ್ನು ತೆಗೆದುಕೊಳ್ಳಲಾಗಿತ್ತು ಗಮನ ಸೆಳೆಯುವ ಸೂಚನೆಗೆ ಹೆಚ್ಚು ಅವಕಾಶ ಕಲ್ಪಿಸಲಾಗಿತ್ತು. ಎಲ್ಲಾ ವಿಷಯಗಳಿಗೂ ನ್ಯಾಯ ಕಲ್ಪಿಸಲಾಗಿದೆ. ಎಲ್ಲಾ ಸದಸ್ಯರಿಗೆ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಿದ್ದೆ. ಗದ್ದಲ ಹಾಗೂ ಸಣ್ಣ ತ್ಯಾಗಗಳು ಕಲಾಪದಲ್ಲಿ ತುಂಬ ಕಡಿಮೆ ಇದ್ದವು. ಚುಕ್ಕೆ ಗುರುತಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ. ಅತ್ಯಂತ ಕಡಿಮೆ ಧರಣಿ ಹಾಗೂ ಸಭಾತ್ಯಾಗ ಆಗಿವೆ. 77 ಸಿಬ್ಬಂದಿಯನ್ನು ಪಾರದರ್ಶಕವಾಗಿ ನೇಮಕ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:09.03.2023

61. ಮೇಲ್ಮನೆ ಸದಸ್ಯ ಸ್ಥಾನಕ್ಕೆ ಚಿಂಚನಸೂರ್ ರಾಜೀನಾಮೆ

ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಮಾಜಿ ಸಚಿವ ಬಾಬುರಾವ್ ಚಿಂಚನಸೂರ್ ರಾಜೀನಾಮೆ ಸಲ್ಲಿಸಿದ್ದಾರೆ. ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿ ಮಾಡಿದ ಚಿಂಚನಸೂರ್ ರಾಜೀನಾಮೆ ಸಲ್ಲಿಸಿದರು. ರಾಜೀನಾಮೆಯನ್ನು ಸಭಾಪತಿ ಅಂಗೀಕರಿಸಿದ್ದಾರೆ.

ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖ ಚಿಂಚನಸೂರ್ ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ. ಕಲಬುರಗಿ ಜಿಲ್ಲೆಯ ಗುರುಮಿಠಕಲ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವರು ಸ್ಪರ್ಧಿಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಮೊದಲು ಕಾಂಗ್ರೆಸ್‌ನಲ್ಲಿದ್ದ ಚಿಂಚನಸೂರು ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. ವಿಧಾನಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಲಾಗಿತ್ತು. ಬಿಜೆಪಿಯಿಂದಲೇ ಪರಿಷತ್ ಸದಸ್ಯರಾಗಿದ್ದ ಪುಟ್ಟಣ್ಣ ಸಹ ಇತ್ತೀಚೆಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದ್ದರು. ಆರ್.ಶಂಕರ್ ಸಹ ಅದೇ ದಾರಿಯಲ್ಲಿದ್ದಾರೆಂದು ಮೂಲಗಳು ಹೇಳುತ್ತವೆ.

ಆಧಾರ: ವಿಜಯವಾಣಿ, ದಿನಾಂಕ:21.03.2023

62. ಸದನ ಕಾರ್ಯಕಲಾಪಗಳ ಡಿಜಿಟಲೀಕರಣ

ಲೋಕಸಭೆ ಹಾಗೂ ರಾಜ್ಯಸಭೆ ಮಾದರಿಯಲ್ಲಿಯೇ ಸದನದ ಕಾರ್ಯಕಲಾಪಗಳನ್ನು ಅಂಕಿತೀಕರಣ (ಡಿಜಿಟಲೀಕರಣ) ಗೊಳಿಸುವತ್ತ ಕರ್ನಾಟಕ ವಿಧಾನಮಂಡಲವು ಹೊಸ ಹೆಜ್ಜೆಯನ್ನು ಇಟ್ಟಿದೆ ಎಂದು ರಾಜ್ಯ ವಿಧಾನಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು.

ರಾಜ್ಯ ವಿಧಾನಮಂಡಲದ ಕಾರ್ಯಕಲಾಪಗಳ ಅಂಕಿತೀಕರಣ ಇ–ವಿಧಾನ್ ಯೋಜನೆಗೆ ರಾಜ್ಯ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರೊಂದಿಗೆ ಚಾಲನೆ ನೀಡಿ ಬಳಿಕ ಮಾತನಾಡಿದ ಅವರು, ರಾಜ್ಯ ವಿಧಾನಸಭೆಯ ಅಂದಿನ ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ಅವರು 2016ರಲ್ಲಿ ಚಾಲನೆ ನೀಡಿದ್ದ ಇ–ವಿಧಾನ ಹೆಸರಿನ ಈ ಯೋಜನೆಯು ಸಕಾಲದಲ್ಲಿ ಸೂಕ್ತ ಅನುದಾನದ ಲಭ್ಯವಾಗದ ಕಾರಣ ನಿರೀಕ್ಷೆಯಂತೆ ಜಾರಿಗೊಳಿಸಲು ಸಾಧ್ಯವಾಗದೇ ನಿಧಾನವಾದದ್ದು ನಿಜ. ಆದರೆ, 2020ರ ವರೆಗೆ ತಟಸ್ಥವಾಗಿದ್ದ ಈ ಯೋಜನೆ 15ನೇ ವಿಧಾನಸಭೆಯ ಅವಧಿಯೂ ಮುಕ್ತಾಯಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಲೋಕಾರ್ಪಣೆಗೊಳ್ಳುತ್ತಿರುವುದು ತಮಗೆ ಪೂರ್ಣ ಪ್ರಮಾಣದ ಸಂತೋಷವಲ್ಲದಿದ್ದರೂ ಒಂದು ರೀತಿಯಲ್ಲಿ ಸಮಾಧಾನ ತಂದಿದೆ. ಇದೀಗ ಶೇ.80ರಷ್ಟು ಅಂಕಿತೀಕರಣ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದರು.

ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿನ ಪ್ರಶ್ನೋತ್ತರ ವೇಳೆ ಶೂನ್ಯ ವೇಳೆ ಗಮನ ಸೆಳೆಯುವ ಸೂಚನೆ ಹಾಗೂ ಎಲ್ಲಾ ರೀತಿಯ ಚರ್ಚೆಗಳನ್ನು www.kla.kar.nic.in ಅಂತರ್ಜಾಲ ತಾಣದ ಮೂಲಕ ಸಂಪರ್ಕ ಸಾಧಿಸಿ ಮಾಹಿತಿಗಳನ್ನು ವೀಕ್ಷಿಸಬಹುದು ಸಂಶೋಧಕರು. ವಿದ್ಯಾರ್ಥಿಗಳು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಇ–ವಿಧಾನ್ ಹೆಸರಿನ ಈ ಯೋಜನೆ ಅನುಕೂಲವಾಗಲಿದೆ. ಈ ಯೋಜನೆಯಲ್ಲಿ ಈವರೆಗೆ 13ನೇ ವಿಧಾನಸಭೆಯ ಅಧಿವೇಶನದಿಂದ ನಾಲ್ಕನೇ ವಿಧಾನಸಭಾ ಅಧಿವೇಶನದವರೆಗೂ ಹಿಮ್ಮುಖವಾಗಿ ಮಾಹಿತಿಯನ್ನು ಅಳವಡಿಸಲಾಗಿದೆ. ಸದ್ಯದಲ್ಲಿಯೇ ಒಂದು, ಎರಡು ಮತ್ತು ಮೂರನೇ ವಿಧಾನಸಭಾ ಅಧಿವೇಶನದ ಮಾಹಿತಿಗಳನ್ನು ಅಳವಡಿಸುವತ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:25.03.2023

ದಿನಾಂಕ:24-03-2023 ರಂದು ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಹಾಗೂ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಜಂಟಿ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನಮಂಡಲದ ನಡವಳಿಗಳ ಡಿಜಿಟಲೈಸೇಷನ್ ತಂತ್ರಾಂಶವನ್ನು ಲೋಕಾರ್ಪಣೆಗೊಳಿಸಿದರು.

63. ಶಾಸಕ ಸ್ಥಾನಕ್ಕೆ ವಾಸು ರಾಜೀನಾಮೆ

ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಬೆಂಗಳೂರಲ್ಲಿ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ಶೀಘ್ರದಲ್ಲೇ ಕಾಂಗ್ರೆಸ್ ಸೇರ್ಪಡೆಗೊಳ್ಳಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳ ಎರಡನೇ ಪಟ್ಟಿಯಲ್ಲಿ ಗುಬ್ಬಿ ಕ್ಷೇತ್ರಕ್ಕೆ ಎಸ್.ಆರ್.ಶ್ರೀನಿವಾಸ್ ಹೆಸರು ಘೋಷಣೆಯಾಗುವುದು ಖಚಿತ.

2004ರಲ್ಲಿ ಪಕ್ಷೇತ್ರರ ಅಭ್ಯರ್ಥಿಯಾಗಿ 2008, 2013, 2018ರಲ್ಲಿ ಜೆಡಿಎಸ್‌ನಿಂದ ಚುನಾಯಿತರಾಗಿದ್ದರು. ಶ್ರೀನಿವಾಸ್ ಅವರ ರಾಜೀನಾಮೆಯನ್ನು ಸ್ಪೀಕರ್ ಅಂಗೀಕರಿಸಿದ್ದಾರೆ ಎಂದು ವಿಧಾನಸಭೆ ಕಾರ್ಯದರ್ಶಿ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ ಅಧಿಸೂಚನೆ ಹೊರಡಿಸಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:28.03.2023

64. ಸುವರ್ಣ ಸೌಧದಲ್ಲಿ ಅಂಬೇಡ್ಕರ್, ಚೆನ್ನಮ್ಮ, ರಾಯಣ್ಣ

ಸ್ವಾತಂತ್ರ್ಯ ಹೋರಾಟ ಹಾಗೂ ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಗಿರುವ ಬೆಳಗಾವಿ ಜಿಲ್ಲೆಯ ಸುವರ್ಣ ವಿಧಾನಸೌಧದ ಎದುರು ಡಾ:ಬಿ.ಆರ್.ಅಂಬೇಡ್ಕರ್, ಕಿತ್ತೂರು ಚೆನ್ನಮ್ಮ ಹಾಗೂ ಸಂಗೊಳ್ಳಿರಾಯಣ್ಣನವರ ಪ್ರತಿಮೆ ಸ್ಥಾಪಿಸುವುದು ಎಲ್ಲರಿಗೂ ಸ್ಫೂರ್ತಿ ಹಾಗೂ ಪ್ರೇರಣಾದಾಯಕವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದ ಪಶ್ಚಿಮ ದ್ವಾರದ ಮುಂಭಾಗದ ಆವರಣದಲ್ಲಿ ಮೂರೂ ಪ್ರತಿಮೆಗಳನ್ನು ಅನಾವರಣಗೊಳಿಸಿ ಮಾತನಾಡಿ, ಬೆಳಗಾವಿ ಕರ್ನಾಟಕದ ಕಿರೀಟ, ಬೆಳಗಾವಿಯ ಕಿರೀಟ ಸುವರ್ಣ ಸೌಧ. ಕರ್ನಾಟಕದಲ್ಲಿ ಅತೀ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರು ಇರುವುದು ಕೂಡ ಬೆಳಗಾವಿ ಜಿಲ್ಲೆಯಲ್ಲೇ. ಇಂತಹ ಪರಂಪರೆ ಇರುವಂತಹ ಜಿಲ್ಲೆಯ ಜನರಿಗೆ ಸದಾ ಸ್ಫೂರ್ತಿಯಾಗಿ ನಿಲ್ಲಲು ಈ ಪ್ರತಿಮೆಗಳನ್ನು ಇಲ್ಲಿ ಸ್ಥಾಪನೆ ಮಾಡಲಾಗಿದೆ. ಮಹಾತ್ಮ ಗಾಂಧೀಜಿಯವರ ಪ್ರತಿಮೆ ದೊಡ್ಡದಿರುವ ಕಾರಣಕ್ಕೆ ಅನಾವರಣ ತಡವಾಗಿದ್ದು, ಇನ್ನೂ ಎರಡು ಮೂರು ತಿಂಗಳಲ್ಲಿ ಸ್ಥಾಪನೆ ಆಗಲಿದೆ ಎಂದರು.

ಈ ಎಲ್ಲಾ ಮಹನೀಯರ ಹೋರಾಟ, ತ್ಯಾಗ, ಬಲಿದಾನದ ಜೊತೆಗೆ ಆಧ್ಯಾತ್ಮಿಕ ಚಿಂತನೆಗಳು ಶಕ್ತಿಸೌಧದ ಒಳಗೂ ಪ್ರಭಾವವನ್ನು ಬೀರಿ ಕರ್ನಾಟಕ ಕಲ್ಯಾಣ ರಾಜ್ಯವಾಗಲಿ. ಎಲ್ಲರ ದೃಷ್ಟಿಯಿಂದ ಸುಖ ಶಾಂತಿ ನೆಮ್ಮದಿ, ರಾಜ್ಯಕ್ಕೆ ನೆಮ್ಮದಿಯ ಮತ್ತು ಅಭಿವೃದ್ಧಿ ರಾಜ್ಯವಾಗಲಿ ಎಂದು ಆಶಿಸಿದರು.

ಕಿತ್ತೂರು ಕರ್ನಾಟಕ ಭಾಗದ ಕೃಷಿ ನೀರಾವರಿ ಹಾಗೂ ಕೃಷಿ ಆಧಾರಿತ ಉದ್ಯಮಗಳಿಗೆ ಪ್ರೋತ್ಸಾಹ ನೀಡಿ ಹಲವು ಯೋಜನೆಗಳ ಮೂಲಕ ಇನ್ನಷ್ಟು ಅಭಿವೃದ್ಧಿಗೆ ಮುನ್ನಡಿ ಬರೆಯಲಾಗಿದೆ ಎಂದರಲ್ಲದೇ ಸುವರ್ಣಸೌಧದಲ್ಲಿ ಅಧಿವೇಶನ ನಡೆಯುವ ವೇಳೆ ಅನುಮೋದನೆಗೆ ನೀಡಿದ ಐದೂವರೆ ಸಾವಿರ ಕೋಟಿ ಮೊತ್ತದ ನೀರಾವರಿ ಯೋಜನೆಗಳು ಈಗಾಗಲೇ ಚಾಲನೆ ಪಡೆದಿವೆ. ಕಿತ್ತೂರು ಕರ್ನಾಟಕದ ಅಭಿವೃದ್ಧಿ ಪ್ರಾಧಿಕಾರವನ್ನು ಮತ್ತು ಅಭಿವೃದ್ಧಿ ಮಂಡಳಿ ರಚನೆಗೆ ಬಜೆಟ್ ಅನುಮೋದನೆ ನೀಡಿದ್ದು, ಯೋಜನೆಗಳಿಗೆ ವಿಶೇಷ ಅನುದಾನ ಮತ್ತು ಕಾರ್ಯನೀತಿ ರೂಪಿಸಲು ಇವು ಕೆಲಸ ಮಾಡುತ್ತಿವೆ ಎಂದರು.

ಮೂರ್ತಿಗಳ ಸ್ಥಾಪನೆಯಾಗಲು ಕಾರಣರಾದ ಇಲಾಖೆಯವರಿಗೆ ಮತ್ತು ಸಚಿವರಾದ ಸಿ.ಸಿ.ಪಾಟೀಲ್ ಅವರಿಗೆ ಮತ್ತು ತಾಂತ್ರಿಕ ಹಿರಿಯ ಅಧಿಕಾರಿಗಳಿಗೆ ಸಿ.ಎಂ.ಧನ್ಯವಾದಗಳು ತಿಳಿಸಿದರು. ಇದೇ ಸಂದರ್ಭದಲ್ಲಿ ವಿಧಾನಸಭೆ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ, ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಮಾತನಾಡಿದರು.

ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್, ಸಚಿವರಾದ ಶಶಿಕಲಾ ಜೊಲ್ಲೆ, ಶಂಕರ್ ಪಾಟೀಲ್ ಮುನೇನಕೊಪ್ಪ, ಮುರುಗೇಶ್ ನಿರಾಣಿ, ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ದುರ್ಯೋಧನ ಐಹೊಳೆ ತಾಂಡ ಅಭಿವೃದ್ಧಿ ನಿಗಮನದ ಅಧ್ಯಕ್ಷ ಪಿ.ರಾಜೀವ್, ಶಾಸಕರಾದ ರಮೇಶ್ ಜಾರಿಕಿಹೊಳಿ, ಅನಿಲ್ ಬೆನಕೆ, ಅಭಯ್ ಪಾಟೀಲ, ಮಹಾಂತೇಶ್ ದೊಡ್ಡಗೌಡ್ರ, ಮಹಾದೇವಪ್ಪ ಯಾದವಾಡ, ಶ್ರೀಮಂತ ಪಾಟೀಲ್, ವಿಧಾನಪರಿಷತ್ ಸದಸ್ಯರಾದ ಲಕ್ಷ್ಮಣ ಸವದಿ, ಪ್ರಕಾಶ್ ಹುಕ್ಕೇರಿ, ಜಿಲ್ಲಾಧಿಕಾರಿಗಳಾದ ನಿತೀಶ್ ಪಾಟೀಲ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಆಧಾರ: ವಿಶ್ವವಾಣಿ, ದಿನಾಂಕ:29.03.2023



ದಿನಾಂಕ:28-03-2023 ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ಪಶ್ಚಿಮ ದ್ವಾರದ ಮುಂಭಾಗದ ಆವರಣದಲ್ಲಿ ನಾಡಿನ ಮಹಾ ಚೇತನಗಳಾದ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್, ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಪುತ್ಥಳಿಗಳನ್ನು ಅತ್ಯಂತ ವಿಜೃಂಭಣೆಯಿಂದ ಸಡಗರದಿಂದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ ಅವರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಹಾಗೂ ಮಾನ್ಯ ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಸಿ ಪಾಟೀಲ್, ಮಾನ್ಯ ಮುಜರಾಯಿ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಲಕ್ಷ್ಮಣ ಸವದಿ ಮತ್ತು ಇತರ ಶಾಸಕರು ಭಾಗಿಯಾಗಿದ್ದರು.

ದಿನಾಂಕ: 28.03.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಹಾಗೂ ಡಾ: ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ; ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು, ಸಭಾಪತಿಗಳಾದ ಶ್ರೀ ಬಸವರಾಜ್ ಹೊರಟ್ಟಿಯವರು, ಸಚಿವರುಗಳು, ಶಾಸಕರು ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

65. ತುಮಕೂರು ಗ್ರಾಮಾಂತರ ಶಾಸಕ ಗೌರಿಶಂಕರ್ ಆಯ್ಕೆ ಅನೂರ್ಜಿತ

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮತದಾರರಿಗೆ ವಿಮೆ ಹಂಚಿಕೆ ಮಾಡಿ ಚುನಾವಣಾ ಅಕ್ರಮ ನಡೆಸಿರುವುದು ಸಾಬೀತಾದ ಹಿನ್ನೆಲೆಯಲ್ಲಿ ತುಮಕೂರು ಗ್ರಾಮಾಂತರ ಕ್ಷೇತ್ರದ ಜೆಡಿಎಸ್ ಶಾಸಕ ಡಿ.ಸಿ.ಗೌರಿಶಂಕರ್ ಸ್ವಾಮಿ ಆಯ್ಕೆಯನ್ನು ಅನೂರ್ಜಿತಗೊಳಿಸಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಈ ಮಧ್ಯೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕು ಎಂಬ ಗೌರಿಶಂಕರ್ ಪರ ವಕೀಲರು ಮನವಿಯನ್ನು ಮಾನ್ಯ ಮಾಡಿರುವ ಹೈಕೋರ್ಟ್, ತನ್ನ ಆದೇಶದ ಜಾರಿಯನ್ನು ಒಂದು ತಿಂಗಳು ಅಮಾನತ್ತಿನಲ್ಲಿರಿಸಿದೆ. ಅಲ್ಲದೇ ಗೌರಿಶಂಕರ್ ಅವರು ಮುಂಬರುವ ವಿಧಾನಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ಈ ಆದೇಶ ಅಡ್ಡಿಯಾಗುವುದಿಲ್ಲ ಎಂದೂ ಹೈಕೋರ್ಟ್ ಹೇಳಿದೆ.

ಗೌರಿಶಂಕರ್ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕೆಂದು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಸುನೀಲ್ ಯಾದವ್ ಅವರ ನೇತೃತ್ವದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

ಪ್ರಕರಣದಲ್ಲಿ ಇತರೆ ಪ್ರತಿವಾದಿಗಳಾಗಿರುವ ಬಾಲನೇತ್ರಯ್ಯ, ಅರೇಹಳ್ಳಿ ಮಂಜುನಾಥ್, ಕೃಷ್ಣೇಗೌಡ, ರೇಣುಕಮ್ಮ, ಸುನಂದಾ ಅವರ ಭ್ರಷ್ಟಾಚಾರ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆ. ಆದರೆ, ಆದೇಶ ಅಮಾನತ್ತಿನಲ್ಲಿರಿಸಿರುವುದು ಗೌರಿಶಂಕರ್ ಅವರಿಗೆ ಮಾತ್ರ ಅನ್ವಯಿಸಲಿದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಅಲ್ಲದೇ ಗೌರಿಶಂಕರ್ ಆಯ್ಕೆಯನ್ನು ಅಸಿಂಧುಗೊಳಿಸಿ ಇನ್ನೂ ತಮ್ಮನ್ನೇ ಚುನಾಯಿತ ಅಭ್ಯರ್ಥಿಯಾಗಿ ಘೋಷಣೆ ಮಾಡುವಂತೆ ಅರ್ಜಿದಾರ ಸುರೇಶ್ ಗೌಡ ಮಾಡಿದ್ದ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿದೆ. ಅರ್ಜಿದಾರರನ್ನು ಚುನಾಯಿತ ಅಭ್ಯರ್ಥಿಯಾಗಿ ಘೋಷಿಸಲು ಸೂಕ್ತ ಆಧಾರ ಮತ್ತು ಸಕಾರಣಗಳು ಇಲ್ಲವಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಿಚಾರಣೆ ವೇಳೆ ಎಲ್ಲಾ ಸಾಕ್ಷಿಗಳ ವಿಚಾರಣೆ ಮತ್ತು ದಾಖಲೆಗಳ ಪರಿಶೀಲನೆ ನಡೆಸಿದ ನ್ಯಾಯಪೀಠ, ಗೌರಿಶಂಕರ್ ಅವರ ತಂದೆ ಮತ್ತು ಕುಟುಂಬ ಸದಸ್ಯರು ನಿರ್ವಹಣೆ ಮಾಡುತ್ತಿರುವ ಕೊಮ್ಮಗೊಂಡನಹಳ್ಳಿ ಶ್ರೀ ಮಾರುತಿ ಸೇವಾ ಸಮಿತಿಯಿಂದ (ಕೆಎಂಎಸ್ಎಸ್) ಮತದಾರರ ಮಕ್ಕಳ ವೈದ್ಯಕೀಯ ವೆಚ್ಚವನ್ನು ಭರಿಸಲು 'ಮೆಡ್ ಅಸಿಸ್ಟ್ ಕಾರ್ಡ್' ಎಂಬ ಆರೋಗ್ಯ ವಿಮಾ ಪಾಲಿಸಿಯನ್ನು ಮಾಡಿಸಿತ್ತು. ಕೆಎಂಎಸ್ಎಸ್ ಹೆಸರಿನಲ್ಲೇ ವಿಮಾ ಪಾಲಿಸಿ ಪಡೆದುಕೊಳ್ಳಲಾಗಿತ್ತು. ಗೌರಿಶಂಕರ್ ಪರವಾಗಿ ಅವುಗಳನ್ನು ಕೆಎಂಎಸ್ಎಸ್ ಮತದಾರರಿಗೆ ಹಂಚಿಕೆ ಮಾಡಿದೆ. ವಿಮಾ ಪಾಲಿಸಿ ವಿತರಣೆಯಿಂದ ಕೆಎಂಎಸ್ಎಸ್ ಅಂತರ ಕಾಯ್ದುಕೊಂಡಿಲ್ಲ. ಚುನಾವಣಾ ಅಕ್ರಮದಲ್ಲಿ ಕೆಎಂಎಸ್ಎಸ್ ಮುಖ್ಯ ಪಾತ್ರವಹಿಸಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಅಂತಿಮವಾಗಿ ಗೌರಿಶಂಕರ್ ಅವರ ಆಯ್ಕೆಯನ್ನು ಅಸಿಂಧುಗೊಳಿಸಲು ಸೂಕ್ತ ಆಧಾರಗಳಿವೆ ಎಂದು ತಿಳಿಸಿದ ಹೈಕೋರ್ಟ್, ಅವರ ಆಯ್ಕೆಯನ್ನು ಅಸಿಂಧುಗೊಳಿಸಿ ಅರ್ಜಿಯನ್ನು ಭಾಗಶಃ ಪುರಸ್ಕರಿಸಿತು.

ತೀರ್ಪು ಅಮಾನತ್ತಿನಲ್ಲಿಡಲು ಮನವಿ: ನ್ಯಾಯಮೂರ್ತಿಗಳು ತೀರ್ಪು ಪ್ರಕಟಿಸುತ್ತಿದ್ದಂತೆ ಗೌರಿಶಂಕರ್ ಪರ ವಕೀಲ ಹೇಮಂತ್ ರಾಜ್ ಮಧ್ಯಂತರ ಅರ್ಜಿ ಸಲ್ಲಿಸಿ, ಹೈಕೋರ್ಟ್ ಆದೇಶವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗುತ್ತದೆ. ಅಲ್ಲಿಯವರೆಗೆ ಈ ಆದೇಶ ಜಾರಿಗೆ ತಡೆಯಾಜ್ಞೆ ನೀಡಬೇಕು. ಚುನಾವಣಾ ಆಯೋಗ ಈಗಾಗಲೇ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದೆ. ಆದ್ದರಿಂದ, ಸದ್ಯ ಪ್ರಕಟಿಸಿರುವ ತೀರ್ಪಿಗೆ ತಡೆ ನೀಡುವ ಅಗತ್ಯವಿದೆ. ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 116(ಬಿ)ಅಡಿ ಆದೇಶವನ್ನು ತಡೆಹಿಡಿಯಲು ಹೈಕೋರ್ಟ್‌ಗೆ ಅಧಿಕಾರವಿದೆ ಎಂದು ತಿಳಿಸಿದೆ.

ಅರ್ಜಿದಾರರ ಪರ ವಕೀಲೆ ನಳೀನಾ ಮಾಯೆಗೌಡ ಅವರು, ಅನರ್ಹತೆಯು ತಕ್ಷಣವೇ ಜಾರಿಗೆ ಬಂದಿರುವ ಕಾರಣ ಗೌರಿಶಂಕರ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಯಾವುದೇ ಅಡ್ಡಿ ಇಲ್ಲ. ಹಾಗಾಗಿ, ಅವರ ಕೋರಿಕೆಯನ್ನು ಪರಿಗಣಿಸಬಾರದು ಎಂದು ಕೋರಿದರು.

30 ದಿನ ಕಾಲಾವಕಾಶ ನೀಡಿದ ಹೈಕೋರ್ಟ್: ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಚುನಾವಣಾ ಆಯೋಗದ ಅಧಿಸೂಚನೆಯ ಪ್ರಕಾರ ವಿಧಾನಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ಏಪ್ರಿಲ್ 10 ಕೊನೆಯ ದಿನಾಂಕವಾಗಿದೆ. ಗೌರಿಶಂಕರ್ ಪರ ವಕೀಲರ ವಾದ ಹಾಗೂ ಚುನಾವಣಾ ವೇಳಾಪಟ್ಟಿಯ ಅನುಸಾರ ನಾಮಪತ್ರ ಸಲ್ಲಿಕೆಯ ಕೊನೆಯ ದಿನಾಂಕವನ್ನು ಪರಿಗಣಿಸಿದರೆ, ಮೇಲ್ಮನವಿ ಸಲ್ಲಿಸಲು ಗೌರಿಶಂಕರ್ ಅವರಿಗೆ 30 ದಿನ ಕಾಲಾವಕಾಶ ಲಭ್ಯವಿದೆ. ಮಲ್ಮನವಿ ಸಲ್ಲಿಸುವವರೆಗೆ ಹೈಕೋರ್ಟ್ ಆದೇಶ ಜಾರಿಗೆ ತರುವುದನ್ನು ತಡೆಹಿಡಿಯಲು ಪ್ರಜಾಪ್ರತಿನಿಧಿ ಕಾಯ್ದೆಯಡಿ ಅವಕಾಶವಿದೆ. ಅದರಂತೆ ಈ ಆದೇಶ ಜಾರಿಯನ್ನು ಒಂದು ತಿಂಗಳ ಕಾಲ ಅಮಾನತ್ತಿನಲ್ಲಿ ಇಡಲಾಗುತ್ತಿದೆ. ಅರ್ಜಿದಾರರು ಮುಂಬರುವ ಚುನಾವಣೆಗೆ ನಾಮಪತ್ರ ಸಲ್ಲಿಸಿ ಸ್ಪರ್ದಿಸಲು ಅರ್ಹರಾಗಿದ್ದಾರೆ ಎಂದು ತಿಳಿಸಿದೆ.

ಆಧಾರ: ಉದಯವಾಣಿ, ದಿನಾಂಕ:31.03.2023

66. 15ನೇ ವಿಧಾನಸಭೆ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

15ನೇ ವಿಧಾನಸಭೆಯ ಹದಿನೈದನೇ ಅಧಿವೇಶನವು ದಿನಾಂಕ 10ನೇ ಫೆಬ್ರವರಿ, 2023 ರಿಂದ 24ನೇ ಫೆಬ್ರವರಿ, 2023 ರವರೆಗೆ ಒಟ್ಟು 11 ದಿನಗಳ ಕಾಲ 52 ಗಂಟೆ 22 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ದಿನಾಂಕ: 10.02.2023 ರಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 15 ಮಾನ್ಯ ಸದಸ್ಯರುಗಳು ಒಟ್ಟು 13 ಗಂಟೆ 35 ನಿಮಿಷಗಳ ಕಾಲ ಭಾಗವಹಿಸಿದ್ದು, ವಂದನಾ ನಿರ್ಣಯದ ಪ್ರಸ್ತಾವವನ್ನು ದಿನಾಂಕ: 20.02.2023 ರಂದು ಅಂಗೀಕರಿಸಲಾಗಿದೆ.

- 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು (ಲೇಖಾನುದಾನ) ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:17.02.2023 ರಂದು ಮಂಡಿಸಿರುತ್ತಾರೆ. ಆಯವ್ಯಯದ ಸಾಮಾನ್ಯ ಚರ್ಚೆಯಲ್ಲಿ 14 ಮಾನ್ಯ ಸದಸ್ಯರುಗಳು ಒಟ್ಟು 08 ಗಂಟೆ 54 ನಿಮಿಷಗಳ ಕಾಲ ಭಾಗವಹಿಸಿದ್ದು, ದಿನಾಂಕ:23.02.2023 ರಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಿರುತ್ತಾರೆ.

- 2022–23ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಹಾಗೂ ಅಂತಿಮ ಕಂತನ್ನು ದಿನಾಂಕ:21.02.2023 ರಂದು ಮಂಡಿಸಿದ್ದು, 23.02.2023 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.

- ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪದ್ಮ ಪುರಸ್ಕಾರಕ್ಕೆ ಭಾಜನರಾದ ನಮ್ಮ ರಾಜ್ಯದ ಗಣ್ಯರುಗಳಿಗೆ ಸದನದ ಪರವಾಗಿ ಅಭಿನಂದನೆಯನ್ನು ಸಲ್ಲಿಸಲಾಗಿದೆ.

- ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.

- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 05 ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

- ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಸಾರ್ವಜನಿಕ ಉದ್ಯಮಗಳ ಸಮಿತಿ, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ, ವಿಧಾನಸಭೆಯ ಅರ್ಜಿಗಳ ಸಮಿತಿ, ಜಂಟಿ ಸದನ ಸಮಿತಿಯ ವರದಿಗಳನ್ನು ಮತ್ತು 30 ಅಧಿಸೂಚನೆಗಳು, 71 ವಾರ್ಷಿಕ ವರದಿಗಳು, 65 ಲೆಕ್ಕ ಪರಿಶೋಧನಾ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

- ಈ ಅಧಿವೇಶನದಲ್ಲಿ 02 ಧನವಿನಿಯೋಗ ವಿಧೇಯಕಗಳು ಸೇರಿದಂತೆ ಒಟ್ಟು 07 ವಿಧೇಯಕಗಳನ್ನು ಮಂಡಿಸಿ 13 ವಿಧೇಯಕಗಳನ್ನು ಅಂಗೀಕರಿಸಲಾಗಿದೆ.

- ಒಟ್ಟು 1382 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 135 ಪ್ರಶ್ನೆಗಳ ಪೈಕಿ 134 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 1240 ಪ್ರಶ್ನೆಗಳ ಪೈಕಿ 979 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ನಿಯಮ 351 ರಡಿಯಲ್ಲಿ 200 ಸೂಚನೆಗಳನ್ನು ಅಂಗೀಕರಿಸಿದ್ದು, 81 ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಗಮನ ಸೆಳೆಯುವ 114 ಸೂಚನೆಗಳ ಪೈಕಿ 74 ಸೂಚನಾ ಪತ್ರಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಶೂನ್ಯ ವೇಳೆಯಲ್ಲಿ ಒಟ್ಟು 29 ಸೂಚನೆಗಳನ್ನು ಚರ್ಚಿಸಲಾಗಿದೆ.

ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಸರ್ಕಾರಿ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಹಾಗೂ ಮುಂಬರುವ ಶೋಭಕೃತ್‌ನಾಮ ಸಂವತ್ಸರವು ಎಲ್ಲರಿಗೂ ಸುಖ, ಶಾಂತಿ ಹಾಗೂ ಆರೋಗ್ಯವನ್ನು ನೀಡಲೆಂದು ಹಾರೈಸಿ ಯುಗಾದಿ ಹಬ್ಬದ ಶುಭಾಶಯಗಳನ್ನು ತಿಳಿಸುತ್ತೇನೆ.

ಈಗ ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡುತ್ತಿದ್ದೇನೆ.

*****

67. ಕರ್ನಾಟಕ ವಿಧಾನಸಭೆ 15ನೇ ವಿಧಾನಸಭೆಯ ದಿನಾಂಕ:10.02.2023ರಿಂದ 24.02.2023 ರವರೆಗೆ ನಡೆದ ಹದಿನೈದನೇ ಅಧಿವೇಶನದಲ್ಲಿ ಮಂಡಿಸಿದ/ಅಂಗೀಕರಿಸಿದ ಹಾಗೂ ಹಿಂಪಡೆಯಲಾದ ವಿಧೇಯಕಗಳ ಪಟ್ಟಿ

ಕ್ರ.ಸಂ. Sl. No	ವಿಧೇಯಕಗಳ ಹೆಸರು Name of the Bill	ವಿಧೇಯಕಗಳು			ಷರಾ Remarks
		ವಿಧಾನಸಭೆ Legislative Assembly		ವಿಧಾನ ಪರಿಷತ್ತು Legislative Council	
		ಮಂಡಿಸಿದ ದಿನಾಂಕ Date of Introduction	ಅಂಗೀಕರಿಸಿದ ದಿನಾಂಕ Date of Passing	ಅಂಗೀಕರಿಸಿದ ದಿನಾಂಕ Date of Passing	
1	2	3	4	6	7
1	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:01) The Bruhat Bengaluru Mahanagara Palike (Amendment) Bill, 2023 (L.A. Bill No. 01 of 2023)	**22.02.2023**	**22.02.2023**	**24.02.2023**	
2	ಕರ್ನಾಟಕ ಧನವಿನಿಯೋಗ ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:02) The Karnataka Appropriation Bill, 2023 (L.A. Bill No. 02 of 2023)	**23.02.2023**	**23.02.2023**	**24.02.2023**	
3	ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:03) The Karnataka Appropriation (Vote on Account) Bill, 2023 (L.A. Bill No. 03 of 2023)	**23.02.2023**	**23.02.2023**	**24.02.2023**	
4	ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:04)	**22.02.2023**	**22.02.2023**	**24.02.2023**	

ಕ್ರ.ಸಂ. Sl. No	ವಿಧೇಯಕಗಳ ಹೆಸರು Name of the Bill	ವಿಧೇಯಕಗಳು			ಷರಾ Remarks
		ವಿಧಾನಸಭೆ Legislative Assembly		ವಿಧಾನ ಪರಿಷತ್ತು Legislative Council	
		ಮಂಡಿಸಿದ ದಿನಾಂಕ Date of Introduction	ಅಂಗೀಕರಿಸಿದ ದಿನಾಂಕ Date of Passing	ಅಂಗೀಕರಿಸಿದ ದಿನಾಂಕ Date of Passing	
	The Factories (Karnataka Amendment) Bill, 2023 (L.A. Bill No. 04 of 2023)				
5	ಬಿ.ಎಮ್.ಎಸ್. ವಿಶ್ವವಿದ್ಯಾಲಯ ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:05) The BMS. University Bill, 2023 (L.A. Bill No. 05 of 2023)	**23.02.2023**	**23.02.2023**	**24.02.2023**	
6	ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:06) The Karnataka Tax on Profession, Trades, Callings and Employments (Amendment) Bill, 2023 (L.A. Bill No. 06 of 2023)	**23.02.2023**	**23.02.2023**	**24.02.2023**	
7	ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ವಿಧೇಯಕ, 2023 (2023ರ ವಿ.ಸ.ವಿ. ಸಂಖ್ಯೆ:07) The Karnataka Prohibition of Violence Against Advocates Bill, 2023 (L.A. Bill No. 08 of 2023)	**23.02.2023**			

ಕಳೆದ ಅಧಿವೇಶನದಲ್ಲಿ ಮಂಡನೆಯಾಗಿ ಹದಿನೈದನೇ ಅಧಿವೇಶನದಲ್ಲಿ ಅಂಗೀಕಾರಗೊಂಡಿರುವ ವಿಧೇಯಕಗಳು				
ವಿಧೇಯಕಗಳ ಹೆಸರು **Name of the Bill**	ವಿಧೇಯಕಗಳು			ಷರಾ **Remarks**
	ವಿಧಾನ ಪರಿಷತ್ತು **Legislative Council**		ವಿಧಾನಸಭೆ **Legislative Assembly**	
	ಮಂಡಿಸಿದ ದಿನಾಂಕ **Date of Introduction**	ಅಂಗೀಕರಿಸಿದ ದಿನಾಂಕ **Date of Passing**	ಅಂಗೀಕರಿಸಿದ ದಿನಾಂಕ **Date of Passing**	
2	3	4	5	6
1. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ, 2022 (2022ರ ವಿ.ಪ.ವಿ. ಸಂಖ್ಯೆ:26) The Kannada Language Comprehensive Development Bill, 2022 (L.A. Bill No. 26 of 2022)	**22.09.2022**	**23.02.2023**	**24.02.2023**	
2.ರಾಜ್ಯ ಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:36) RajyaVokkaligaraSangha University Bill, 2022) (L.A. Bill No. 36 of 2022)	**29.12.2022**	**21.02.2023**	**22.02.2023**	
3.ಕಿಷ್ಕಿಂದ ವಿಶ್ವವಿದ್ಯಾಲಯ ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:37) The Kishkinda University Bill, 2022 (L.A. Bill No. 37 of 2022)	**29.12.2022**	**21.02.2023**	**22.02.2023**	
4.ಜಿ.ಎಮ್. ವಿಶ್ವವಿದ್ಯಾಲಯ ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:38) The G. M. University Bill, 2022 (L.A. Bill No. 38 of 2022)	**29.12.2022**	**21.02.2023**	**22.02.2023**	

5.ಟಿ. ಜಾನ್ ವಿಶ್ವವಿದ್ಯಾಲಯ ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:39) The T. John University Bill, 2022 (L.A. Bill No. 39 of 2022)	**29.12.2022**	**21.02.2023**	**22.02.2023**	
6.ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯ ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:40) The Sapthagiri NPS University Bill, 2022 (L.A. Bill No. 40 of 2022)	**29.12.2022**	**21.02.2023**	**22.02.2023**	
7.ಆಚಾರ್ಯ ವಿಶ್ವವಿದ್ಯಾಲಯ ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:41) The Acharya University Bill, 2022 (L.A. Bill No. 41 of 2022)	**29.12.2022**	**21.02.2023**	**22.02.2023**	

*****

68. ಕರ್ನಾಟಕ ವಿಧಾನ ಪರಿಷತ್ತು ನೂರನಲವತ್ತೊಂಭತ್ತನೆಯ ಅಧಿವೇಶನ(ದಿನಾಂಕ: 10.02.2023 ರಿಂದ 24.02.2023ರವರೆಗೆ) ವಿಧಾನ ಸಭೆಯಲ್ಲಿಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ವಿವರ

ಕ್ರ ಸಂ	ವಿಧೇಯಕದ ಹೆಸರು	ಬಿಲ್ ಸಂಖ್ಯೆ	ವಿ ಸ ಅಂಗೀಕರಿಸಿರುವ ದಿನಾಂಕ	ವಿ ಪ ಅಂಗೀಕರಿಸಿರುವ ದಿನಾಂಕ
1.	ಆಚಾರ್ಯ ವಿಶ್ವವಿದ್ಯಾಲಯ ವಿಧೇಯಕ, 2022,	41	21.02.2023	22.02.2023
2.	ಜಿ.ಎಂ ವಿಶ್ವವಿದ್ಯಾಲಯ ವಿಧೇಯಕ,2022,	38	21.02.2023	22.02.2023
3.	ಕಿಷ್ಕಿಂದ ವಿಶ್ವವಿದ್ಯಾಲಯ ವಿಧೇಯಕ,2022,	37	21.02.2023	22.02.2023
4.	ಸಪ್ತಗಿರಿಎನ್.ಪಿ.ಎಸ್. ವಿಶ್ವವಿದ್ಯಾಲಯ ವಿಧೇಯಕ,2022,	40	21.02.2023	22.02.2023
5	ಟಿ. ಜಾನ್ ವಿಶ್ವವಿದ್ಯಾಲಯ ವಿಧೇಯಕ,2022,	39	21.02.2023	22.02.2023
6.	ರಾಜ್ಯಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ವಿಧೇಯಕ,2022,	36	21.02.2023	22.02.2023
7.	ಕರ್ನಾಟಕಧನವಿನಿಯೋಗ ವಿಧೇಯಕ, 2023	02	23.02.2023	24.02.2023
8.	ಕರ್ನಾಟಕಧನವಿನಿಯೋಗ(ಲೇಖಾನುದಾನ)ವಿಧೇಯಕ , 2023	03	23.02.2023	24.02.2023
9	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ,2023	01	23.02.2023	24.02.2023
10	ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣತೆರಿಗೆ (ತಿದ್ದುಪಡಿ) ವಿಧೇಯಕ, 2023	06	23.02.2023	24.02.2023
11	ಕಾರ್ಖಾನೆಗಳ (ಕರ್ನಾಟಕತಿದ್ದುಪಡಿ) ವಿಧೇಯಕ,2023	04	23.02.2023	24.02.2023
12	ಕನ್ನಡ ಭಾಷಾ ಸಮಗ್ರಅಭಿವೃದ್ಧಿ ವಿಧೇಯಕ,2022	26	23.02.2023	24.02.2023
13	ಬಿ.ಎಮ್.ಎಸ್. ವಿಶ್ವವಿದ್ಯಾಲಯ ವಿಧೇಯಕ, 2023 (2023ರ ವಿಧಾನಸಭೆಯ ವಿಧೇಯಕ ಸಂಖ್ಯೆ:05.)	05	23.02.2023	24.02.2023

69. ವಿಧಾನ ಪರಿಷತ್ತಿನ 149ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಮಾನ್ಯ ಸಭಾಪತಿಯವರು:

ವಿಧಾನ ಪರಿಷತ್ತಿನ 149ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:10.02.2023 ರಿಂದ 24.02.2023 ರವರೆಗೆ ಒಟ್ಟು 11 ದಿನಗಳು ಅಂದರೆ 52 ಗಂಟೆಗಳು ನಡೆಸಲಾಗಿರುತ್ತದೆ.

ದಿನಾಂಕ:10.02.2023ರಂದು ಬೆಳಗ್ಗೆ 11.00 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಪ್ರಾರಂಭಗೊಂಡಿತು. ವಂದನಾ ನಿರ್ಣಯದ ಮೇಲೆ 11 ಗಂಟೆ 38 ನಿಮಿಷಗಳು ಚರ್ಚೆ ನಡೆಸಿ ದಿನಾಂಕ:21.02.2023ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ಸದನದ ಮೂಲಕ ನುಡಿ ನಮನವನ್ನು ಸಲ್ಲಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ದಿನಾಂಕ: 17.02.2023ರಂದು ಮಾನ್ಯ ಮುಖ್ಯಮಂತ್ರಿಯವರು 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ ಸುಮಾರು 7 ಗಂಟೆ 50 ನಿಮಿಷಗಳ ಕಾಲ ಚರ್ಚೆ ನಡೆಸಿ, ದಿನಾಂಕ:24.02.2023ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02, 03, 04 ಹಾಗೂ 05ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 2011–12 ರಿಂದ 2019–20ನೇ ಸಾಲಿನ 10ನೇ ವರದಿ ಹಾಗೂ 2017–18ನೇ ಸಾಲಿನ 11ನೇ ವರದಿ, ಸಾರ್ವಜನಿಕ ಉದ್ಯಮಗಳ ಸಮಿತಿಯ 134 ಹಾಗೂ 135ನೇ ವರದಿ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯ 38ನೇ ವರದಿ, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 38ನೇ ವರದಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2021–22 ಹಾಗೂ 2022–23ನೇ ಸಾಲಿನ 7ನೇ ವರದಿಗಳನ್ನುಮಂಡಿಸಲಾಯಿತು.

ರಾಜ್ಯದಲ್ಲಿ 2021–22ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಗಳ ಕಾಲಾವಧಿಯನ್ನು 14.01.2023 ರಿಂದ ಹನ್ನೆರಡು ತಿಂಗಳುಗಳಿಗೆ ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಅನುಪಾಲನಾ ವರದಿ (2022ನೇ ವರ್ಷದ ವರದಿ ಸಂಖ್ಯೆ–7), ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಕಾಮಗಾರಿಗಳ ಯೋಜನೆ ಮತ್ತು ಗುತ್ತಿಗೆ ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ವರದಿ (2022ನೇ ವರ್ಷದ ವರದಿ ಸಂಖ್ಯೆ–8), ಕರ್ನಾಟಕ ಗ್ರಾಮೀಣ

ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2022ನೇ ವರ್ಷದ ವರದಿ ಸಂಖ್ಯೆ–9), ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯಕ್ಷಮತೆಯ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2022ನೇ ವರ್ಷದ ವರದಿ ಸಂಖ್ಯೆ–10), ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷಕ್ಕೆ ಸಂಬಂಧಿಸಿದ ಅನುಪಾಲನಾ ಲೆಕ್ಕಪರಿಶೋಧನಾ ವರದಿ (2023ನೇ ವರ್ಷದ ವರದಿ ಸಂಖ್ಯೆ–01), ರಾಜ್ಯ ಹಣಕಾಸು ಸಂಸ್ಥೆಗೆ ಸಂಬಂಧಿಸಿದ 2020–2021ನೇ ಸಾಲಿನ ವರದಿ ಹಾಗೂ 2021–2022ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೇ ಹಾಗೂ ಅಂತಿಮ ಕಂತು) ಮಂಡಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1041 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 100 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 16 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು **906** ಪ್ರಶ್ನೆಗಳ ಪೈಕಿ 303 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 02 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ 01 ಸೂಚನೆಗೆ ಸದನದಲ್ಲಿ ಚರ್ಚೆಯಾಗಿರುತ್ತದೆ.

ನಿಯಮ 72ರಡಿಯಲ್ಲಿ 122 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 11 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 28 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 70 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 06 ಸೂಚನೆಗಳಿಗೆಸದನದಲ್ಲಿ ಉತ್ತರಿಸಲಾಯಿತು ಹಾಗೂ 18 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆಯ ಒಟ್ಟು 65 ಸೂಚನೆಗಳ ಪೈಕಿ 12 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಗಿದ್ದು, **20** ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 13 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ:–

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, **ಸದನವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡುತ್ತಿದ್ದೇನೆ.**

* * * * *



ದಿನಾಂಕ: 06–01–2023 ರಂದು ಹಾವೇರಿ ಜಿಲ್ಲೆಯ ಶ್ರೀ ಅಜ್ಜಯ್ಯ ದೇವಸ್ಥಾನ ಎದುರು ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿರವರು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪರವರು, ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಸುನಿಲ್ ಕುಮಾರ್‌ರವರು, ಕರ್ನಾಟಕ ವಿಧಾನಪರಿಷತ್ ಸದಸ್ಯರಾದ ಶ್ರೀ ಸಲೀಂ ಅಹಮದ್ ಹಾಗೂ ಇತರೆ ಗಣ್ಯರು ಭಾಗವಹಿಸಿರುವುದು.

ದಿನಾಂಕ:06–01–2023 ರಂದು ಹಾವೇರಿ ಜಿಲ್ಲೆಯ ಶ್ರೀ ಅಜ್ಜಯ್ಯ ದೇವಸ್ಥಾನ ಎದುರು ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹೊರತರಲಾದ ವಿಜಯವಾಣಿ ದಿನಪತ್ರಿಕೆಯ ವಿಜಯ ಸಂಚಿಕೆಯನ್ನು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಬಿಡುಗಡೆಗೊಳಿಸಿದರು. ಈ ವೇಳೆ ಅಧ್ಯಕ್ಷರಾದ ಡಾ.ರಂಗೇಗೌಡರು ಹಾಗೂ ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಯಾದ ಡಾ. ಶ್ರೀ ಮಹೇಶ ವಾಳ್ವೇಕರ ರವರು ಉಪಸ್ಥಿತರಿದ್ದರು.

ದಿನಾಂಕ:07–01–2023 ರಂದು ಧಾರವಾಡದ ಜನತಾ ಶಿಕ್ಷಣ ಸಮಿತಿ ವತಿಯಿಂದ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರಿಗೆ ಹಾಗೂ ಇವರ ಧರ್ಮಪತ್ನಿಯಾದ ಶ್ರೀಮತಿ ಹೇಮಲತಾ ಹೊರಟ್ಟಿ ಅವರಿಗೆ ಜನತಾ ಶಿಕ್ಷಣ ಸಮಿತಿ ಹಾಗೂ ಸಂಸ್ಥೆಯ ವಿವಿಧ ಶಾಲಾ ಕಾಲೇಜುಗಳ ವತಿಯಿಂದ ಅತ್ಯಂತ ಅಭಿಮಾನದಿಂದ ಗೌರವಪೂರ್ಣವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜನತಾ ಶಿಕ್ಷಣ ಸಮಿತಿಯ ಪದಾಧಿಕಾರಿಗಳು, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಉತ್ತಮ ಸಮಾಜ ನಿರ್ಮಾಣ ಮಾಡಲು ಪ್ರಾಥಮಿಕ ಶಾಲಾ ಮಕ್ಕಳಿಗೆ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸುವ ಕುರಿತಂತೆ ದಿನಾಂಕ: 09.01.2023ರಂದು ವಿಧಾನಸೌಧದಲ್ಲಿ, ಸಚಿವರುಗಳು, ಮಠಾಧೀಶರು, ಧಾರ್ಮಿಕ ಚಿಂತಕರು, ಶಿಕ್ಷಣ ತಜ್ಞರುಗಳೊಂದಿಗೆ ನಡೆದ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಭಾಗವಹಿಸಿದ ಸಂದರ್ಭ.



ದಿನಾಂಕ: 09.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನಲ್ಲಿ ಸನ್ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು, ಸಂಸದರು ಹಾಗೂ ಹಿರಿಯರಾದ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿದ ಸಂದರ್ಭ

ದಿನಾಂಕ: **11.01.2023**ರಂದು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿತವಾದ ಅತ್ಯುತ್ತಮ ವಿಧಾನಸಭೆ/ವಿಧಾನ ಪರಿಷತ್ತು ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸುವ ಪೀಠಾಸೀನಾಧಿಕಾರಿಗಳ ಸಮಿತಿಯ ಸಭೆಯನ್ನು ರಾಜಸ್ಥಾನದ ವಿಧಾನ ಸಭೆಯ ಆವರಣದಲ್ಲಿ ನಡೆಸಿ, ಮಾನದಂಡಗಳ ಬಗ್ಗೆ ಚರ್ಚಿಸಿ ಅಂತಿಮಗೊಳಿಸಲಾಯಿತು. ಈ ಸಭೆಯಲ್ಲಿ ಸಮಿತಿಯ ಸದಸ್ಯರಾದ ಆಸ್ಸಾಂ ವಿಧಾನ ಸಭಾಧ್ಯಕ್ಷರಾದ ಶ್ರೀ ಭಿಶ್ವಜಿತ್ ಡೈಮರಿ ದೆಹಲಿ ವಿಧಾನಸಭಾಧ್ಯಕ್ಷರಾದ ಶ್ರೀ ರಾಮ್ ನಿವಾಸ್ ಗೋಯಲ್ ಅವರು, ಲೋಕಸಭೆಯ ಅಧಿಕಾರಿಗಳು ಹಾಗೂ ವಿಧಾನ ಸಭೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ದಿನಾಂಕ:12–01–2023 ರಂದು ಭಾರತದ ಪ್ರಧಾನ ಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜಿರವರು ಹುಬ್ಬಳ್ಳಿ–ಧಾರವಾಡದಲ್ಲಿ ನಡೆದ "26ನೇ ರಾಷ್ಟ್ರೀಯ ಯುವ ಜನೋತ್ಸವ–2023" ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ರವರು, ಮಾನ್ಯ ಕೇಂದ್ರ ಸಂಸದೀಯ ವ್ಯವಹಾರ, ಗಣಿ ಮತ್ತು ಕಲ್ಲಿದ್ದಲ್ಲು ಸಚಿವರಾದ ಶ್ರೀ ಪ್ರಹ್ಲಾದ್ ಜೋಷಿರವರು, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು, ಮಾನ್ಯ ಮುಖ್ಯಮಂತ್ರಿಯಾದ ಶ್ರೀ ಬಸವರಾಜ್ ಬೊಮ್ಮಾಯಿರವರು ಹಾಗೂ ಇತರ ಗಣ್ಯರು ಭಾಗವಹಿಸಿದ್ದರು.

ದಿನಾಂಕ:12–01–2023 ರಂದು ಹುಬ್ಬಳ್ಳಿ–ಧಾರವಾಡದಲ್ಲಿ ನಡೆದ 26ನೇ ರಾಷ್ಟ್ರೀಯ ಯುವ ಜನೋತ್ಸವ–2023, ವಿಕಸಿತ ಯುವ– ವಿಕಸಿತ ಭಾರತ, ಯೋಗಥಾನ್ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು, ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯಾದ ಡಾ:ಶಾಲಿನಿ ರಜನೀಶ್ ರವರು ಯೋಗ ಮಾಡುವುದರ ಮೂಲಕ ಯುವ ಜನತೆಗೆ ಯೋಗದ ಪ್ರಾಮುಖ್ಯತೆಯನ್ನು ತಿಳಿಸಿದರು.

ದಿನಾಂಕ: 13.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನಸೌಧದ ಮುಂಭಾಗದಲ್ಲಿ ಮಹಾನ್ ಮಾನವತಾವಾದಿ, ವಿಶ್ವಗುರು ಶ್ರೀ ಬಸವೇಶ್ವರರ ಹಾಗೂ ಬೆಂಗಳೂರು ನಿರ್ಮಾತೃ ಶ್ರೀ ಕೆಂಪೇಗೌಡರವರ ಪ್ರತಿಮೆಗಳನ್ನು ಪ್ರತಿಷ್ಠಾಪಿಸುವ ಶಿಲಾನ್ಯಾಸ ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸಚಿವ ಸಂಪುಟದ ಸದಸ್ಯರುಗಳು ಮತ್ತು ವಿವಿಧ ಸಮಾಜದ ಪರಮಪೂಜ್ಯ ಮಠಾಧೀಶರುಗಳು ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.

ದಿನಾಂಕ: 19.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಮೈಸೂರಿನಲ್ಲಿ ಆಯೋಜಿಸಿದ್ದ "ಚುನಾವಣಾ ಸುಧಾರಣೆ ಕಾರ್ಯಕ್ರಮಗಳ ಕುರಿತು ಸಂವಾದ ಕಾರ್ಯಕ್ರಮ"ದಲ್ಲಿ ಭಾಗವಹಿಸಿ, ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಪ್ರಮುಖರೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಶಾಸಕರುಗಳಾದ ಶ್ರೀ ನಾಗೇಂದ್ರ, ಶ್ರೀ ತನ್ವೀರ ಸೇಠ್, ಮೈಸೂರು ಮಹಾಪೌರರಾದ ಶ್ರೀ ಶಿವಕುಮಾರ್, ಉಪ ಮಹಾಪೌರರಾದ ಡಾ: ರೂಪ, ಆಯುಕ್ತರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿ, ಉಪ ಆಯುಕ್ತರಾದ ಶ್ರೀಮತಿ ಸವಿತಾ, ನಿಗಮ ಮಂಡಳಿಗಳ ಅಧ್ಯಕ್ಷರು, ಜಿ.ಪಂ. ಸಿಇಓ, ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

ದಿನಾಂಕ: 20–01–2023 ರಂದು ಸಭಾಪತಿ ಕಛೇರಿಯಲ್ಲಿ ಮಾನ್ಯ ಸಭಾಪತಿಗಳ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್.ವಿ ಸಂಕನೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಉಪಸ್ಥಿತಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣದ ಶಿಕ್ಷಕರು, ವಿಶೇಷ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರನ್ನೊಳಗೊಂಡಂತೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ / ಮರು ಹೊಂದಾಣಿಕೆ ಎಂದು ವರ್ಗೀಕರಿಸಿರುವ ಕುರಿತು ನಡೆದ ಸಭೆ.

ದಿನಾಂಕ: 20.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ರವರೊಂದಿಗೆ ರೈತರ ಸಾಲ ಮನ್ನಾದ ಹಣ ಬಿಡುಗಡೆ ಹಾಗೂ ಸಹಕಾರಿ ಕ್ಷೇತ್ರದ ಇನ್ನಿತರ ವಿಷಯಗಳ ಕುರಿತಂತೆ ಚರ್ಚಿಸಿ ಮನವಿ ಸಲ್ಲಿಸುತ್ತಿರುವ ಸಂದರ್ಭ.

ದಿನಾಂಕ: **21–01–2023** ರಂದು ಶ್ರೀ ಕ್ಷೇತ್ರ ಸುತ್ತೂರು, ಮೈಸೂರು ಜಿಲ್ಲೆ ಆಯೋಜಿಸಿರುವ ಶ್ರೀ ಮತ್ತುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಸಂಸ್ಥಾಪನಾಚಾರ್ಯ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು ಮತ್ತು ಮಾನ್ಯ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆಯಾದ ಕು. ಶೋಭಾ ಕರಂದ್ಲಾಜೆ ರವರು ಹಾಗೂ ಪಬ್ಲಿಕ್ ಟಿವಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಹೆಚ್.ಆರ್.ರಂಗನಾಥ್‌ರವರು ಭಾಗವಹಿಸಿದ್ದರು.

ದಿನಾಂಕ:21–01–2023ರ ಸಂಜೆ ಬೆಂಗಳೂರಿನ ಜಯನಗರದಲ್ಲಿ ನಡೆದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 126ನೇ ಜನ್ಮದಿನಾಚರಣೆ ಚಿತ್ರನಟಿ ಕು.ರೂಪ ಅಯ್ಯರ್‌ರವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು, ಶ್ರೀಮತಿ ರೂಪ.ಮೌದ್ಗಿಲ್ ಭಾ.ಅ.ಸೇ. ರವರು, ಅಖಿಲ ಭಾರತ ಹಿಂದೂ ಮಹಾಸಭಾ ರಾಜ್ಯಾಧ್ಯಕ್ಷರಾದ ನೇತಾಜಿರವರ ಮರಿ ಮೊಮ್ಮಗಳಾದ ಕು.ರಾಜ್ಯಶ್ರೀ ಚೌದರಿರವರು ಹಾಗೂ ಖ್ಯಾತ ಚಿತ್ರನಟಿ ಶ್ರೀಮತಿ ಮಾಲಾಶ್ರೀ ರವರು ಭಾಗವಹಿಸಿದ್ದರು.

ದಿನಾಂಕ:25–01–2023 ರಂದು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರಿಗೆ ಮಂತ್ರಾಲಯದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀ ಪಾದಂಗಳವರು, ಸುಕ್ಷೇತ್ರ ಮಂತ್ರಾಲಯದ ವತಿಯಿಂದ ಸಾಧಕರಿಗೆ ನೀಡುವ ಅತ್ಯಂತ ಪ್ರತಿಷ್ಠಿತವಾದ 2022–23ನೇ ಸಾಲಿನ 'ಮಂತ್ರಾಲಯಂ ಪರಿಮಳ ಪ್ರಶಸ್ತಿ'ಯನ್ನು ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಆರ್.ವಿ ದೇಶಪಾಂಡೆ, ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಇತರರಿದ್ದರು.

ದಿನಾಂಕ: 26-01-2023 ರಂದು ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿರವರು ಕೊಪ್ಪಳದ ಗವಿಮಠಕ್ಕೆ ಭೇಟಿ ನೀಡಿ ಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದರು.

ದಿನಾಂಕ:27–01–2023ರಂದು ಎಂ.ಆರ್ ಶಾಖರೆ ಮೈದಾನ, ಬಿ.ವಿ.ಬಿ ಕ್ಯಾಂಪಸ್, ವಿದ್ಯಾನಗರ, ಹುಬ್ಬಳ್ಳಿಯಲ್ಲಿ ನಡೆದ ಕೆ.ಎಲ್.ಇ ಸಂಸ್ಥೆಯ ಸಹಯೋಗದಲ್ಲಿ ಡಾ.ಪ್ರಭಾಕರ ಕೋರೆ ಅವರ ಅಮೃತ ಮಹೋತ್ಸವದ ನಿಮಿತ್ತ ಅಭಿನಂದನಾ ಸಮಾರಂಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿರವರು ಭಾಗವಹಿಸಿದ್ದರು.

ದಿನಾಂಕ :28–01–2023ರಂದು ಬಿ.ವಿ.ಬಿ ಕಾಲೇಜು, ಹುಬ್ಬಳ್ಳಿಯಲ್ಲಿ ನಡೆದ ಬಿ.ವಿ.ಬಿ ಕಾಲೇಜಿನ 75ನೇ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರದ ಮಾನ್ಯ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪ ರವರು ಭಾಗವಹಿಸಿದ್ದರು.

ದಿನಾಂಕ: 31–01–2023ರಂದು ಮುಂಡರಗಿ ಜಗದ್ಗುರು ಅನ್ನದಾನೀಶ್ವರ 153ನೇ ಯಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು, ಶಿವಾನುಭವ ಮಂಟಪ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳವರಿಂದ ಆಶೀರ್ವಾದ ಸ್ವೀಕರಿಸಿದರು.



ದಿನಾಂಕ: 31-01-2023 ರಂದು ತರಳಬಾಳು ಹುಣ್ಣಿಮೆ ಮಹೋತ್ಸವ-2023, ಕೊಟ್ಟೂರು, ವಿಜಯನಗರ ಜಿಲ್ಲೆ ಕೃಷಿಕರ ಚಿಂತನ ಗೋಷ್ಠಿ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾಜಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಕೆ.ಎಸ್ ಈಶ್ವರಪ್ಪರವರು ಉಪಸ್ಥಿತರಿದ್ದರು.

ದಿನಾಂಕ: 31-01-2023 ರಂದು ವಿಜಯನಗರ ಜಿಲ್ಲೆಯ ಹೂವಿನಡಗಲಿಯ ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಕಾಯಕ್ರಮದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀಬಸವರಾಜ ಎಸ್ ಹೊರಟ್ಟಿರವರು ಭಾಗವಹಿಸಿದ್ದರು.

ದಿನಾಂಕ: 31.01.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಮಾಜಿ ಅಧ್ಯಕ್ಷರಾದ ದಿ: ಶ್ರೀ ಕೆ.ಎಂ. ಮಂಜಪ್ಪರವರ 111ನೇ ಜನ್ಮದಿನಾಚರಣೆಯ ಪ್ರಯುಕ್ತ ಆಯೋಜಿಸಿದ್ದ "ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಮೇಳ" ಕಾರ್ಯಕ್ರಮದಲ್ಲಿ ಭಗವಹಿಸಿದರು. ಈ ಸಂದರ್ಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಎನ್.ಆರ್. ಪಂಡಿತಾರಾಧ್ಯ, ಶಿಕ್ಷಣ ತಜ್ಞರು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಪ್ರಮುಖರಾದ ನಾಡೋಜ ಡಾ: ವೂಡೇ ಪಿ ಕೃಷ್ಣ, ಶ್ರೀ ರಾಜು ಚಂದ್ರಶೇಖರ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

ದಿನಾಂಕ: **01.02.2023**ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ "ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಪ್ರಮುಖರೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಮಾನ್ಯ ಸಚಿವರಾದ ಶ್ರೀ ಮುನಿರತ್ನರವರು, ವಿಧಾನಸಭೆ ಕಾರ್ಯದರ್ಶಿ ಶ್ರೀಮತಿ ಎಂ.ಕೆ. ವಿಶಾಲಾಕ್ಷಿ, ಬಿಬಿಎಂಪಿ ಆಯುಕ್ತರಾದ ಶ್ರೀ ತುಷಾರ್ ಗಿರಿನಾಥ್, ನ್ಯಾಷನಲ್ ಲಾ ಯುನಿವರ್ಸಿಟಿ ರಿಜಿಸ್ಟ್ರಾರ್ ಪ್ರೊ. ನಿಗಮ್, ಜಿಲ್ಲಾಧಿಕಾರಿಗಳಾದ ಶ್ರೀ ದಯಾನಂದ ಸಿ.ಇ.ಓ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

ದಿನಾಂಕ: 01.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಶಿರಸಿಯಲ್ಲಿ ಪರಿಸರ ವಿಶ್ವ ವಿದ್ಯಾಲಯ ಸ್ಥಾಪಿಸುವ ವಿಷಯದ ಕುರಿತಂತೆ ವಿಧಾನಸೌಧದ ತಮ್ಮ ಕಛೇರಿಯಲ್ಲಿ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಉನ್ನತ ಶಿಕ್ಷಣ ಕೃಷಿ, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸುತ್ತಿರುವ ಸಂದರ್ಭ.

ದಿನಾಂಕ:02–02–2023ರಂದು ಶಾಸಕರ ಭವನದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ವ್ಯಾಪಾರ ಮಳಿಗೆಗಳನ್ನು ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು ಪರಿಶೀಲಿಸುವುದರೊಂದಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ/ಸೂಚನೆಗಳನ್ನು ನೀಡುತ್ತಿರುವುದು.

ದಿನಾಂಕ: 02.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಭಾರತ ಸರ್ಕಾರದಿಂದ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾದ ಹಿರಿಯರು, ಮಾಜಿ ಮುಖ್ಯಮಂತ್ರಿಗಳಾದ ಗೌರವಾನ್ವಿತ ಶ್ರೀ ಎಸ್.ಎಂ.ಕೃಷ್ಣ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿ ಮಾಡಿ ಗೌರವ ಸಲ್ಲಿಸಿದರು;

ದಿನಾಂಕ: 08-02-23 ರಂದು ಸಭಾಪತಿಯವರ ಕಛೇರಿಯಲ್ಲಿ ಡಿಸಿಪಿ ಲಕ್ಷ್ಮಣ ನಿಂಬರಗಿ ರವರು ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ್ ಎಸ್ ಹೊರಟ್ಟಿ ರವರನ್ನು ಭೇಟಿ ಮಾಡಿ ಶುಭಾಷಯ ಕೋರಿದರು.

ದಿನಾಂಕ: 09-02-2023 ರಂದು ಗುಲ್ಬರ್ಗ ನಗರದಲ್ಲಿ ಹೈದರಾಬಾದ್ ಶಿಕ್ಷಣ ಸಂಸ್ಥೆಯ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಯ ನೂತನ ಕಟ್ಟಡವನ್ನು ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ್ ಎಸ್ ಹೊರಟ್ಟಿ ರವರುಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಎಂ ವೈ ಪಾಟೀಲರ ಕುಟುಂಬದಿಂದ ಸನ್ಮಾನ ಸ್ವೀಕರಿಸಿ, ಹಲವಾರು ಆತ್ಮೀಯ ಸ್ನೇಹಿತರೊಂದಿಗೆ ಸುಧೀರ್ಘವಾಗಿ ಕುಶಲೋಪರಿಯನ್ನು ವಿಚಾರಿಸಿದರು.

ದಿನಾಂಕ: 09-02-23 ರಂದು ಹೈದ್ರಾಬಾದ್ ಕರ್ನಾಟಕ ಎಜುಕೇಶನ್‌ನ ಪೂಜ್ಯ ದೊಡ್ಡಪ್ಪ ಅಪ್ಪ ಕಾಲೇಜು ಆಫ್ ನರ್ಸಿಂಗ್ ಕಾಲೇಜಿಗೆ ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ್ ಎಸ್ ಹೊರಟ್ಟಿ ರವರು ಭೇಟಿ ನೀಡಿದರು.



ದಿನಾಂಕ: 09.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಆಸ್ಸಾಂ, ಮಣಿಪುರ, ನಾಗಾಲ್ಯಾಂಡ್, ಮೇಘಾಲಯ, ತ್ರಿಪುರ, ಸಿಕ್ಕಿಂ ಸೇರಿದಂತೆ ಈಶಾನ್ಯ ಭಾರತದ ಸೀಲ್ (Student Experience in Inter-State Living) ಪ್ರತಿನಿಧಿಗಳು ಅವರುಗಳ ಪ್ರವಾಸದ ಸಂದರ್ಭದಲ್ಲಿ ವಿಧಾನಸೌಧಕ್ಕೆ ವೀಕ್ಷಣೆಗಾಗಿ ಆಗಮಿಸಿದ ಹಿನ್ನೆಲೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅವರಗಳನ್ನು ಭೇಟಿ ಮಾಡಿದ ಸಂದರ್ಭ;

ದಿನಾಂಕ: 10.02.2023ರಿಂದ ವಿಧಾನ ಮಂಡಲಗಳ ಜಂಟಿ ಸದನವನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡಲಿರುವ ಹಿನ್ನೆಲೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 09.02.2023ರಂದು ವಿಧಾನಸಭೆಯ ಸಭಾಂಗಣದಲ್ಲಿ ನಡೆಯುತ್ತಿರುವ ಪೂರ್ವ ತಯಾರಿಯನ್ನು ವೀಕ್ಷಿಸಿ, ಅಧಿಕಾರಿಗಳ ಸಭೆ ನಡೆಸಿ, ಸಲಹೆ–ಸೂಚನೆಗಳನ್ನು ನೀಡುತ್ತಿರುವ ಹಾಗೂ ಪತ್ರಿಕಾಗೋಷ್ಠಿ ಕರೆದು ವಿವರ ಒದಗಿಸುತ್ತಿರುವ ಸಂದರ್ಭ.

ದಿನಾಂಕ: 10.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು ರಾಜ್ಯದ ಮಾಜಿ ಮುಖ್ಯಮಂತ್ರಿ ವಿಧಾನಸೌಧ ನಿರ್ಮಾತೃ ದಿವಂಗತ ಶ್ರೀ ಕೆಂಗಲ್ ಹನುಮಂತಯ್ಯ ಅವರ 115ನೇ ಜನ್ಮದಿನಾಚರಣೆ ಅಂಗವಾಗಿ ವಿಧಾನಸೌಧದ ಎದುರು ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸುತ್ತಿರುವುದು.

ದಿನಾಂಕ: 10.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು, ವಿಧಾನಸೌಧದ ಕಛೇರಿಯಲ್ಲಿ ಸನ್ಮಾನ್ಯ ಗೃಹ ಸಚಿವರಾದ ಶ್ರೀ ಆರಗ ಜ್ಞಾನೇಂದ್ರ ಅವರಿಗೆ ತಿರಸಿ ನಗರಕ್ಕೆ ಸಂಚಾರಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡಿದಕ್ಕಾಗಿ ಧನ್ಯವಾದ ತಿಳಿಸುತ್ತಿರುವ ಸಂದರ್ಭ.

ದಿನಾಂಕ: 14.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು, ವಿಧಾನ ಸಭೆಯ ಅಧಿವೇಶನದ ಕಾರ್ಯಕಲಾಪಗಳ ಕುರಿತಂತೆ ವಿಧಾನಸೌಧದ ಕೊಠಡಿ ಸಂಖ್ಯೆ: 106ರಲ್ಲಿ "ಕಾರ್ಯಕಲಾಪಗಳ ಸಲಹಾ ಸಮಿತಿಯ" ಸಭೆ ನಡೆಸಿ ಚರ್ಚಿಸುತ್ತಿರುವುದು;

ದಿನಾಂಕ: 15-02-2023 ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಡಿವಿಜಿ 91 ವಸಂತ ತುಂಬಿದ ಸಂಭ್ರಮದಲ್ಲಿ ರಾಷ್ಟ್ರೀಯ ಉತ್ಕೃಷ್ಟತಾ ಪ್ರಶಸ್ತಿ ವಿಜೇತರಾದ ಶ್ರೀ ರುದ್ರಣ್ಣ ಹರ್ತಿಕೋಟೆ, ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ವಿಜೇತರಾದ ಶ್ರೀ ಪದ್ಮರಾಜ ದಂಡಾವತಿ ಹಾಗೂ ಪತ್ರಕರ್ತರ ಸಂಘದಿಂದ 6 ಜನ ಪತ್ರಕರ್ತರಿಗೆ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿ ರವರು ಸನ್ಮಾನಿಸಿ ಗೌರವಿಸಿದರು.

ದಿನಾಂಕ: 15.02.2023ರಂದು ಸನ್ಮಾನ್ಯ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿಯ ಸುವರ್ಣ ಮಹೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ, ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿ ಶುಭ ಹಾರೈಸುತ್ತಿರುವುದು. ಈ ಸಂದರ್ಭದಲ್ಲಿ ಮೇಲುಕೋಟೆ ಶ್ರೀ ಯದುಗಿರಿ ಯತಿರಾಜ ಮಠದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಯತಿರಾಜ ಸ್ವಾಮೀಜಿಗಳು, ಪ್ರಮುಖರಾದ ಶ್ರೀ ಆರ್.ಲಕ್ಷ್ಮೀಕಾಂತ್ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು

ದಿನಾಂಕ: 15.02.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನಲ್ಲಿ ಡಾಲ್ಫಿನ್ ಇರಿಗೇಷನ್ "ನೂತನ ಕೈಗಾರಿಕಾ ಕಟ್ಟಡದ ಪ್ರಾರಂಭೋತ್ಸವ ಹಾಗೂ ಕೃಷಿ ಉಪಕರಣಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ರಾಮಚಂದ್ರಾಪುರ ಮಠದ ಶ್ರೀ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳು ದಿವ್ಯ ಸಾನಿಧ್ಯದಲ್ಲಿ ಪ್ರಮುಖರಾದ ಶ್ರೀ ಶಶಿಭೂಷಣ ಹೆಗಡೆ, ಡಾ: ಗಿರಿಧರ ಕಜೆ, ಶ್ರೀ ನರಸಿಂಹಮೂರ್ತಿ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು

ದಿನಾಂಕ: 22–02–23 ರಂದು ಬೆಂಗಳೂರಿನಲ್ಲಿ ನಡೆದ NEWS 18 ಕನ್ನಡ ಸುದ್ದಿವಾಹಿನಿ ಆಯೋಜಿಸಿದ್ದ 2023ರ ವರ್ಷದ ಕನ್ನಡಿಗ ಪ್ರಶಸ್ತಿಯನ್ನು ಕರುನಾಡಿನ ಹೆಮ್ಮೆಯ ಸಾಧಕರಿಗೆ ನೀಡುವ ಸಮಾರಂಭದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜಎಸ್ ಹೊರಟ್ಟಿ, ಮಾನ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾನ್ಯಕಂದಾಯ ಸಚಿವರಾದ ಶ್ರೀ ಆರ್.ಅಶೋಕರವರು ಹಾಗೂ ಇತರಗಣ್ಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸುಳ್ಯದ 138ಕ್ಕೂ ಹೆಚ್ಚು ತೂಗುಸೇತುವೆಗಳನ್ನು ನಿರ್ಮಿಸಿದ ಶ್ರೀ ಗಿರೀಶ್ ಭಾರದ್ವಾಜ್ ಹಾಗೂ ಕರ್ನಾಟಕದ ಹೆಮ್ಮೆಯ ಸಂಸ್ಥೆಯಾದ ನಿಮಾನ್ಸ್‌ನ ನಿರ್ದೇಶಕಿ ಶ್ರೀಮತಿ ಪ್ರತಿಮಾ ಮೂರ್ತಿರವರಿಗೆ ಹೆಮ್ಮೆಯ ಕನ್ನಡಿಗ ಪ್ರಶಸ್ತಿ ಹಾಗೂ ಜೀವಮಾನ ಸಾಧನೆಗಾಗಿ ಖ್ಯಾತ ಚಲನಚಿತ್ರ ನಾಯಕ ನಟರಾದ ಪ್ರಣಯರಾಜ ಶ್ರೀ ಶ್ರೀನಾಥ್‌ರವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಿದರು.

ದಿನಾಂಕ: 23-02-23 ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ, ಬೆಂಗಳೂರು ಹಾಗೂ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಶಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರ ಹಾಗೂ ಗಣ್ಯರಿಗೆ ಅಭಿನಂದನಾ ಸಮಾರಂಭದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿರವರು ಮಾನ್ಯ ಸರ್ಕಾರ ಮುಖ್ಯ ಸಚೇತಕರಾದ ಡಾ.ವೈ.ಎ.ನಾರಾಯಣಸ್ವಾಮಿ, ಮಾನ್ಯ ವಿಧಾನಪರಿಷತ್ತು ಸದಸ್ಯರುಗಳಾದ ಶ್ರೀಪುಟ್ಟಣ್ಣ ಹಾಗೂ ಶ್ರೀ ಅರುಣ ಶಹಾಪೂರರವರಿಗೆ ಗೌರವ ಸಮರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ರಾಜ್ಯದ ದೈಹಿಕ ಶಿಕ್ಷಣ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿದರು.



ದಿನಾಂಕ: 26-02-23 ರಂದು ಮಹಾರಾಷ್ಟ್ರದ ಕೋಲ್ಹಾಪುರದ ಶ್ರೀ ಸಿದ್ದಗಿರಿ ಮಹಾಸಂಸ್ಥಾನ ಮಠವು ಹಮ್ಮಿಕೊಂಡಿರುವ "ಪಂಚ ಮಹಾಭೂತ ಲೋಕೋತ್ಸವ" ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜಎಸ್ ಹೊರಟ್ಟಿರವರು ವಿಶೇಷ ಅತಿಥಿಗಳಾಗಿ ಭಾಗವಹಿಸಿ, ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಸ್ವಾಮೀಜಿಗಳಿಂದ ಗೌರವ ಸನ್ಮಾನ ಸ್ವೀಕರಿಸಿ, ಉಪಸ್ಥಿತರಿರುವ ಜನಸಮೂಹಕ್ಕೆ ತಮ್ಮ ಅಮೂಲ್ಯವಾದ ವಿಚಾರವನ್ನು ಪ್ರಸ್ತುತಪಡಿಸಿದರು.

ದಿನಾಂಕ: 26-02-23ರಂದು ಹುಬ್ಬಳ್ಳಿಯ ರಂಭಾಪುರಿ ಕಲ್ಯಾಣ ಮಂಟಪ, ವಿದ್ಯಾನಗರದಲ್ಲಿ ನಡೆದ ಕರ್ನಾಟಕ ರಾಜ್ಯ ವಾಣಿಜ್ಯ ವಿದ್ಯಾಶಾಲೆಗಳ ಸಂಘದ 53ನೇ ಸರ್ವ ಸದಸ್ಯರ ಸಭೆಯಲ್ಲಿ ಹಿರಿಯ ಸದಸ್ಯರಿಗೆ ಗೌರವ ಫೆಲೋಶಿಪ್ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿರವರು ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಸಭಾಪತಿಯವರಿಗೆ ಸದಸ್ಯರುಗಳು ಗೌರವಿಸಿ ಸನ್ಮಾನಿಸಿದರು.

ದಿನಾಂಕ: 28-02-23 ರಂದು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ವಿವಿಧ ಇಲಾಖೆ ಕಾಮಗಾರಿಗಳ ಶಂಕುಸ್ಥಾಪನಾ ಹಾಗೂ ಉದ್ಘಾಟನಾ ಸಮಾರಂಭ ಮತ್ತು ಫಲಾನುಭವಿಗಳ ಸೌಲಭ್ಯ ವಿತರಣಾ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್.ಹೊರಟ್ಟಿ, ಮಾನ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಜಲಸಂಪನ್ಮೂಲ ಸಚಿವರಾದ ಶ್ರೀ ಗೋವಿಂದ ಎಂ.ಕಾರಜೋಳ ಹಾಗೂ ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ್ ಪೂಜಾರಿರವರು ಭಾಗವಹಿಸಿದ್ದರು.

ದಿನಾಂಕ: 08.03.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ಶಾಸಕರ ಭವನದಲ್ಲಿ ಸಭಾಪತಿಗಳಾದ ಶ್ರೀ ಬಸವರಾಜ್ ಹೊರಟ್ಟಿಯವರೊಂದಿಗೆ ನವೀಕೃತ ಕರ್ನಾಟಕ ವಿಧಾನಸಭಾ ಸಚಿವಾಲಯದ "ವಾಚನಾಲಯ"ವನ್ನು ಉದ್ಘಾಟಿಸಿದ ಸಂದರ್ಭ

ದಿನಾಂಕ: 08.03.2023ರಂದು ಬಿಹಾರ ವಿಧಾನಸಭೆಯ ಮಾಜಿ ಸಭಾಧ್ಯಕ್ಷರು, ಬಿಹಾರ ಸರ್ಕಾರದ ಆರ್ಥಿಕ, ವಾಣಿಜ್ಯ ತೆರಿಗೆ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ವಿಜಯ ಕುಮಾರ್ ಚೌಧರಿ ಅವರು ವಿಧಾನಸೌಧದ ಸಭಾಧ್ಯಕ್ಷರ ಕಛೇರಿಗೆ ಭೇಟಿ ನೀಡಿ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಸೌಹಾರ್ದಯುತವಾಗಿ ಚರ್ಚಿಸಿದ ನಂತರ ವಿಧಾನ ಸಭೆ ಸಭಾಂಗಣವನ್ನು ವೀಕ್ಷಿಸುತ್ತಿರುವುದು.

ದಿನಾಂಕ: 08.03.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರದಲ್ಲಿ ನಡೆದ ವಿಧಾನ ಸಭೆಯ ಅಧಿವೇಶನಗಳಲ್ಲಿ ನಡೆದ ಚರ್ಚೆ, ವಿಶೇಷ ಚರ್ಚೆಗಳ ಕುರಿತಂತೆ ಹಾಗೂ ಸಭಾಧ್ಯಕ್ಷರಾಗಿ ನಿರ್ವಹಿಸಿದ ಜವಾಬ್ದಾರಿಗಳ ಬಗ್ಗೆ ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ ಕರೆದು ವಿವರಗಳನ್ನು ನೀಡುತ್ತಿರುವುದು ಮತ್ತು ಈ ನಿಟ್ಟಿನಲ್ಲಿ ಸಹಕರಿಸಿದ ವಿಧಾನಸಭೆಯ ಎಲ್ಲಾ ಸದಸ್ಯರಿಗೆ, ಸರ್ಕಾರ ವಿಪಕ್ಷದವರಿಗೆ, ಅಧಿಕಾರಿ ವರ್ಗದವರಿಗೆ, ಮಾಧ್ಯಮದವರಿಗೆ ಧನ್ಯವಾದ ತಿಳಿಸುತ್ತಿರುವ ಸಂದರ್ಭ.



ದಿನಾಂಕ:10-03-2023 ರಂದು ವಿಧಾನಸೌಧದ ಸಭಾಪತಿಯವರ ಕೊಠಡಿಯಲ್ಲಿ ಬಸವಕಲ್ಯಾಣದ ವಿಶ್ವ ಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಪ್ರಕಾಶನದಲ್ಲಿ ಹೊರ ತಂದಿರುವ ಅನುಭವ ಮಂಟಪ ಸಂಸ್ಕೃತಿ ಪುಸ್ತಕವನ್ನು ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಬಿಡುಗಡೆ ಮಾಡಿದರು. ನಂತರ ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್‌ನ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು,ಬಾಲ್ಕಿಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ನಿರ್ದೇಶಕ ಶಶಿಧರ ಕೋಸುಂಬೆ ಹಾಗೂ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಯಾದ ಡಾ.ಮಹೇಶ ವಾಳ್ವೇಕರ ರವರೊಂದಿಗೆ ವಿಧಾನಪರಿಷತ್ತಿನ ಸದನವನ್ನುವೀಕ್ಷಿಸಿದರು.

ದಿನಾಂಕ:12-03-2023 ರಂದು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ರವರು ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ನೂತನ ಕಟ್ಟಡದ ಉದ್ಘಾಟನೆ ಮಾಡಿದರು. ರಾಜ್ಯದ ಮೊದಲ ಹಾಗೂ ದೇಶದ ಪ್ರಪ್ರಥಮ ಹಸಿರು ಐಐಟಿ ಎಂಬ ಖ್ಯಾತಿಗೆ ಇದು ಒಳಗಾಗಿದೆ. ಇದೇ ವೇದಿಕೆಯಲ್ಲಿ 'ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣ'ದಲ್ಲಿ ನಿರ್ಮಾಣವಾಗಿರುವ 1.5 ಕಿ.ಮೀ ಉದ್ದದ 'ವಿಶ್ವದ ಅತಿ ಉದ್ದದ ರೈಲ್ವೆ ಪ್ಲಾಟ್ ಫಾರ್ಮ್'ನ್ನು ಲೋಕಾರ್ಪಣೆಗೊಳಿಸಿದರು. ಜೊತೆಗೆ ಹಂಪಿ ಸ್ಮಾರಕ ಮಾದರಿಯ ಹೊಸಪೇಟೆ ರೈಲು ನಿಲ್ದಾಣಕ್ಕೂ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ಸಂಸದೀಯ ವ್ಯವಹಾರ, ಗಣಿ ಮತ್ತು ಕಲ್ಲಿದ್ದಲ್ಲು ಸಚಿವರಾದ ಶ್ರೀ ಪ್ರಹ್ಲಾದ್ ಜೋಷಿ, ಮಾನ್ಯ ವಿಧಾನ ಪರಿಷತ್ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಜಲಸಂಪನ್ಮೂಲ ಸಚಿವರಾದ ಶ್ರೀ ಗೋವಿಂದ ಎಂ.ಕಾರಜೋಳ, ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಸಿ ಪಾಟೀಲ, ಮಾನ್ಯ ವಸತಿ ಸಚಿವರಾದ ಶ್ರೀ ವಿ. ಸೋಮಣ್ಣ, ಮಾನ್ಯ ನಗರಾಭಿವೃದ್ಧಿ ಸಚಿವರಾದ ಶ್ರೀ ಬಿ.ಎಬಸವರಾಜ, ಮಾನ್ಯ ಕೈಮಗ್ಗ, ಜವಳಿ ಮತ್ತು ಸಕ್ಕರೆ ಸಚಿವರಾದ ಶ್ರೀ ಶಂಕರಪಾಟೀಲ್ ಮುನೇನಕೊಪ್ಪ, ಮಾಜಿ ಮುಖ್ಯಮಂತ್ರಿ ಹಾಗೂ ಶಾಸಕರಾದ ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಶಾಸಕರುಗಳಾದ ಶ್ರೀ ಸಿ.ಎಂ.ನಿಂಬಣ್ಣವರ, ಶ್ರೀ ಅರವಿಂದ ಬೆಲ್ಲದ, ಶ್ರೀ ಅಮೃತ ದೇಸಾಯಿ ಹಾಗೂ ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ರವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಿನಾಂಕ:24-03-2023 ರಂದು ಬಸವರಾಜ ಹೊರಟ್ಟಿ ಅವರ ಅಭಿಮಾನಿ ಬಳಗದಿಂದ ಬೆಂಗಳೂರಿನಲ್ಲಿ ನಡೆದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರಿಗೆ ಏರ್ಪಡಿಸಿದ ಅಭಿನಂದನಾ ಸಮಾರಂಭದ ಛಾಯಾಚಿತ್ರ.

ದಿನಾಂಕ:26-03-2023 ರಂದು ಬೆಂಗಳೂರಿನಲ್ಲಿ ಅವ್ವ ಸೇವಾ ಟ್ರಸ್ಟ್ ವತಿಯಿಂದ ನಡೆಯುವ ಅವ್ವ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಅವ್ವ ಸೇವಾ ಟ್ರಸ್ಟಿನ ಸಂಸ್ಥಾಪಕ, ಅಧ್ಯಕ್ಷರಾದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್.ಸ ಹೊರಟ್ಟಿ ಅವರು ದಿನಾಂಕ: 24-03-23ರಂದು, ಸಮಾರಂಭದ ಆಮಂತ್ರಣ ಪತ್ರಿಕೆ ನೀಡಿ ಕಾರ್ಯಕ್ರಮಕ್ಕೆ ಆಗಮಿಸಲು ಕೋರಿದರು.

ಬೆಂಗಳೂರಿನ ಶಾಸಕರ ಭವನದಲ್ಲಿರುವ ಶ್ರೀ ಮುನೇಶ್ವರ ದೇವಸ್ಥಾನವನ್ನು ನವೀಕರಿಸುವಂತೆ ಸನ್ಮಾನ್ಯ ಸಭಾಧ್ಯಕ್ಷರು ಈ ಹಿಂದೆಯೇ ಸೂಚಿಸಿದ್ದು, ಅದರಂತೆ ದೇವಸ್ಥಾನವನ್ನು ನವೀಕರಿಸಿ, ಶ್ರೀ ದೇವರ ಮೂರ್ತಿಯನ್ನು ಪುನರ್ ಪ್ರತಿಷ್ಠಾಪನೆ ಮಾಡಲಾಗಿರುತ್ತದೆ. ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 25.03.2023 ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜಾ ಕಾರ್ಯದಲ್ಲಿ ಭಾಗವಹಿಸಿದ ಸಂದರ್ಭ.

ದಿನಾಂಕ:26-03-2023 ರಂದು ನಾಡಿನ ಮಹಾನ್ ಚೇತನಗಳಾದ ಶ್ರೀ ಜಗಜ್ಯೋತಿ ಬಸವೇಶ್ವರ ಹಾಗೂ ನಾಡಪ್ರಭು ಶ್ರೀ ಕೆಂಪೇಗೌಡ ಅವರ ಪ್ರತಿಮೆಗಳ ಅನಾವರಣವನ್ನು ವಿಧಾನಸೌಧದ ಆವರಣದಲ್ಲಿ ಕೇಂದ್ರದ ಮಾನ್ಯ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಹಾಗೂ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಹಾಗೂ ಇತರ ಶಾಸಕರು ಮತ್ತು ನಾಡಿನ ವಿವಿಧ ಸಮುದಾಯದ ಧರ್ಮ ಗುರುಗಳು ಉಪಸ್ಥಿತರಿದ್ದರು.

ದಿನಾಂಕ: 26.03.2023ರಂದು ವಿಧಾನಸೌಧದ ಎದುರು ಜಗಜ್ಯೋತಿ ಶ್ರೀ ಬಸವೇಶ್ವರರು ಹಾಗೂ ನಾಡಪ್ರಭು ಶ್ರೀ ಕೆಂಪೆಗೌಡ ರವರ ಪ್ರತಿಮೆ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ಅವರೊಂದಿಗೆ ಭಾಗವಹಿಸಿದರು. ಈ ಸಂದರ್ಭದಲ್ಲಿ ರಾಜ್ಯದ ಪ್ರಮುಖ ಪರಮಪೂಜ್ಯ ಮಠಾಧೀಶರು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು, ಸಭಾಪತಿಗಳಾದ ಶ್ರೀ ಬಸವರಾಜ್ ಹೊರಟ್ಟಿಯವರು, ನಿಕಟಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪರವರು, ಸಂಪುಟ ಸಚಿವರುಗಳು, ಸಂಸದರು, ಶಾಸಕರು ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

ದಿನಾಂಕ:26-03-2023 ರಂದು ಅವ್ವ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ ಅವ್ವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು ಉದ್ಘಾಟನೆ ಮಾಡಿದರು. ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಎ.ಎಸ್ ಕಿರಣ್‌ಕುಮಾರ್ ಬಾಹ್ಯಾಕಾಶ ವಿಜ್ಞಾನಿಗಳು, ಶ್ರೀಮತಿ ಆರ್.ಸುಶೀಲಮ್ಮ ಸುಮಂಗಲಿ ಸೇವಾಶ್ರಮ, ಪ್ರೊ.ಹೆಚ್ .ಎಸ್ ಶಿವಪ್ರಕಾಶ್ ನಿವೃತ್ತ ಪ್ರಾಧ್ಯಾಪಕರು ಹಾಗೂ ಕವಿಗಳು ಮತ್ತು ನಾಟಕಕಾರರು, ನಾಡೋಜ ಡಾ.ಬಿ.ಕೆ ಸುಮಿತ್ರ ಪ್ರಸಿದ್ಧ ಚಲನಚಿತ್ರ ಗಾಯಕರು, ಶ್ರೀ ಅರ್ಜುನ್ ದೇವಯ್ಯ ಕ್ರೀಡಾ ಪಟು, ಶ್ರೀಮತಿ ಪ್ರೇಮಾ ಸೋಮಸುಂದರ್ ಶಾಂಭವಿ ಅನಾಥಾಶ್ರಮ, ಶ್ರೀಮತಿ ಪ್ರತಿಭಾ ನಾರಾಯಣ್ ರಂಗಭೂಮಿ ಕಲಾವಿದೆ, ಶ್ರೀಮತಿ ಮತ್ತು ಶ್ರೀ ತಂಬೂರಿ ಜವರಯ್ಯ ದಂಪತಿ ಜಾನಪದ ಗಾಯಕರು, ಶ್ರೀ ಎಂ.ನರಸಿಂಹ ಸಂಸ್ಥಾಪಕ ಕಾರ್ಯದರ್ಶಿಗಳು, ಇವರುಗಳು ಅವ್ವ ಪ್ರಶಸ್ತಿಯನ್ನು ಸ್ವೀಕರಿಸಿದ ಕ್ಷಣ.

ದಿನಾಂಕ: 27.03.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ರಾಜಭವನದಲ್ಲಿ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿದ ಸಂದರ್ಭ.

ದಿನಾಂಕ: 27.03.2023ರಂದು ಗುಬ್ಬಿ ಶಾಸಕರಾದ ಶ್ರೀ ಎಸ್.ಆರ್. ಶ್ರೀನಿವಾಸ್‌ರವರು ವಿಧಾನಸೌಧದ ಸನ್ಮಾನ್ಯ ಸಭಾಧ್ಯಕ್ಷರ ಕಛೇರಿಗೆ ಆಗಮಿಸಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಸನ್ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸುತ್ತಿರುವ ಸಂದರ್ಭ;

ದಿನಾಂಕ: 31.03.2023ರಂದು ಕೂಡ್ಲಿಗಿ ಶಾಸಕರಾದ ಶ್ರೀ ಎನ್.ವೈ. ಗೋಪಾಲಕೃಷ್ಣ ರವರು ಸನ್ಮಾನ್ಯ ಸಭಾಧ್ಯಕ್ಷರನ್ನು ಶಿರಸಿ ಕಛೇರಿಯಲ್ಲಿ ಭೇಟಿ ಮಾಡಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸುತ್ತಿರುವ ಸಂದರ್ಭ;

ಭಾಗ – 2

ಸಂಸತ್ ಸುದ್ದಿಗಳು

1. ದೇಶದ ವಿರಾಸತ್, ವಿಕಾಸಕ್ಕೆ ಸರ್ಕಾರ ಶ್ರಮ

ಸಂಸತ್‌ನ 2023ರ ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ಮಾಡಿದರು. 'ಭಾರತ ಸರ್ಕಾರವು ಯಾವುದೇ ತಾರತಮ್ಯ ಮಾಡದೇ ದೇಶದ ವಿರಾಸತ್ (ಪರಂಪರೆ) ಮತ್ತು ವಿಕಾಸಕ್ಕೆ ಕೆಲಸ ಮಾಡುತ್ತಿದೆ. ನಿರ್ಭೀತಿಯಿಂದ, ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳುತ್ತಿದೆ' ಎಂದು ಹೇಳಿದರು.

ಇದೇ ವೇಳೆ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಶ್ಲಾಘಿಸಿದ ಅವರು, 370ನೇ ವಿಧಿ ರದ್ದು ತ್ರಿವಳಿ ತಲಾಖ್, ಜಿಸ್‌ಟಿ, ಕೊರೋನಾ ಪರಿಸ್ಥಿತಿ ನಿರ್ವಹಣೆ, ಪ್ರಧಾನಿ ಗರೀಬ್ ಕಲ್ಯಾಣ ಅನ್ನ ಯೋಜನೆ, ಆಯೋಧ್ಯೆ ಅಭಿವೃದ್ಧಿ ಸೇರಿದಂತೆ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದರು.

ಬಿಆರ್‌ಎಸ್, ಆಪ್‌ನಿಂದ ಬಹಿಷ್ಕಾರ: ಕೇಂದ್ರ ಸರ್ಕಾರವು ರಾಜ್ಯಗಳನ್ನು ನಡೆಸಿಕೊಳ್ಳುತ್ತಿರುವ ರೀತಿ ಸೇರಿದಂತೆ ಹಲವು ವಿಚಾರಗಳನ್ನು ಖಂಡಿಸಿ ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಮತ್ತು ಆಮ್ ಆದ್ಮಿ ಪಕ್ಷ (ಆಪ್) ರಾಷ್ಟ್ರಪತಿ ಭಾಷಣವನ್ನು ಬಹಿಷ್ಕರಿಸಿದವು. ಬಹಿಷ್ಕಾರದ ಮೂಲಕ ರಾಷ್ಟ್ರಪತಿಯವರ ಘನತೆಗೆ ಈ ಪಕ್ಷಗಳು ಅವಮಾನ ಮಾಡಿವೆ ಎಂದು ಬಿಜೆಪಿ ಆರೋಪಿಸಿತು.

ಹಿಮಮಳೆಯಲ್ಲಿ ಸಿಲುಕಿದ ಕೈ ನಾಯಕರು: ಭಾರತ್ ಜೋಡೋ ಯಾತ್ರೆ ಸಮರೋಪಕ್ಕೆಂದು ಶ್ರೀನಗರಕ್ಕೆ ತೆರಳಿದ್ದ ಕಾಂಗ್ರೆಸ್‌ನ ಹಲವು ನಾಯಕರು ಅನಿವಾರ್ಯವಾಗಿ ಸಂಸತ್ ಅಧಿವೇಶನದಲ್ಲಿ ರಾಷ್ಟ್ರಪತಿ ಭಾಷಣಕ್ಕೆ ಗೈರಾಗಬೇಕಾಯಿತು. ಕಾಶ್ಮೀರದಲ್ಲಿ ಭಾರೀ ಹಿಮ ಮಳೆ ಸುರಿಯುತ್ತಿರುವ ಕಾರಣ, ವಿಮಾನಗಳ ಸಂಚಾರ ವ್ಯತ್ಯಯವಾಗಿದೆ. ಬಹುತೇಕ ನಾಯಕರಿಗೆ ಸಂಸತ್‌ಗೆ ಬರಲು ಸಾಧ್ಯವಾಗಲಿಲ್ಲ. ಪಕ್ಷದ ನಾಯಕಿ ಸೋನಿಯ ಗಾಂಧಿ ಅವರು ಮಾತ್ರ ಸಂಸತ್‌ನ ಸೆಂಟ್ರಲ್ ಹಾಲ್‌ನ ಮೊದಲ ಸಾಲಿನ ಆಸನದಲ್ಲಿ ಆಸೀನರಾಗಿದ್ದರು.

ಭಾಷಣದ ಪ್ರಮುಖಾಂಶ:

- ಆತ್ಮನಿರ್ಭರ ಭಾರತದ ಮೂಲಕ 2047ರ ವೇಳೆಗೆ ಗತಕಾಲದ ಹೆಮ್ಮೆಯೊಂದಿಗೆ ಮತ್ತು ಆಧುನಿಕತೆಯ ಎಲ್ಲಾ ಸುವರ್ಣ ಅಧ್ಯಾಯಗಳನ್ನು ಹೊಂದಿರುವ ರಾಷ್ಟ್ರವನ್ನು ನಾವು ನಿರ್ಮಿಸಬೇಕಾಗಿದೆ.
- 370ನೇ ವಿಧಿ ರದ್ದತಿ ಮೂಲಕ ಜಮ್ಮು, ಕಾಶ್ಮೀರದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಸರ್ಕಾರ ಸ್ಥಾಪಿಸಿದೆ.
- ತ್ರಿವಳಿ ತಲಾಖ್ ರದ್ದುಪಡಿಸುವ ಮೂಲಕ ಮುಸ್ಲಿಂ ಮಹಿಳೆಯರಿಗೆ ಆಗುತ್ತಿದ್ದ ಅನ್ಯಾಯವನ್ನು ತಡೆಯಲಾಗಿದೆ.
- ಭಾರತಿಯ ಸೇನೆಯನ್ನು ಆಧುನೀಕರಣಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಿದೆ. ರಾಜಕೀಯವಾಗಿ ಮತ್ತು ವ್ಯೂಹಾತ್ಮಕವಾಗಿ ಬಲಿಷ್ಠವಾಗಿರುವುದರಿಂದ ಮಾತ್ರ ಶಾಂತಿ ನೆಲೆಸಲು ಸಾಧ್ಯ ಎಂಬುದು ಸರ್ಕಾರದ ನಿಲುವಾಗಿದೆ.

- ಜಿಎಸ್‌ಟಿ ಮೂಲಕ ತೆರಿಗೆಯಲ್ಲಿ ಪಾರದರ್ಶಕತೆ ತರಲಾಗಿದೆ. ಇದರಿಂದ ತೆರಿಗೆದಾರರ ಘನತೆಯನ್ನು ಎತ್ತಿಹಿಡಿಯಲಾಗಿದೆ.
- ತೆರಿಗೆ ಮರುಪಾವತಿಗೆ ಈ ಹಿಂದೆ ಇದ್ದ ದೀರ್ಘ ಕಾಯುವಿಕೆ ಕೊನೆಗೊಂಡಿದೆ. ಐಟಿ ರಿಟರ್ನ್ ಸಲ್ಲಿಕೆಯಾದ ಕೆಲ ದಿನಗಳಲ್ಲೇ ತೆರಿಗೆ ಮರುಪಾವತಿಯಾಗುತ್ತಿದೆ.
- ಅಯೋಧ್ಯೆ, ಕಾಶಿ ವಿಶ್ವನಾಥ, ಕೇದಾರನಾಥ ಮತ್ತು ಮಹಾಕಾಲಧಾಮ ಕಾರಿಡಾರ್ ಯೋಜನೆಗಳ ಮೂಲಕ ತೀರ್ಥಕ್ಷೇತ್ರಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಆಧಾರ: ಉದಯ ವಾಣಿ, ದಿನಾಂಕ:01.02.2023

2. ಸಂಸತ್ತಲ್ಲಿ ಅದಾನಿ ಪ್ರತಿಧ್ವನಿ

ಗೌತಮ್ ಅದಾನಿ ಒಡೆತನದ ಅದಾನಿ ಸಮೂಹದ ಷೇರುಪೇಟೆ ಅಕ್ರಮ ಮತ್ತು ತೆರಿಗೆ ವಂಚನೆ ಕುರಿತು ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್ ಬರ್ಗ್ ವರದಿ ಸಂಸತ್‌ನಲ್ಲಿ ಮಾರ್ದನಿಸಿತು. ಈ ಆರೋಪ ಕುರಿತು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಥವಾ ಸುಪ್ರೀಂಕೋರ್ಟ್ ನಿಗಾದಲ್ಲಿ ತನಿಖೆ ನಡೆಸಬೇಕು ಎಂದು 11 ವಿರೋಧ ಪಕ್ಷಗಳು ಒತ್ತಾಯಿಸಿದವು. ಆದರೆ, ಲೋಕಸಭೆ ಮತ್ತು ರಾಜ್ಯ ಸಭೆಗಳ ಸಭಾಧ್ಯಕ್ಷರು ಇದನ್ನು ತಳ್ಳಿಹಾಕಿದ ಕಾರಣ ಪ್ರತಿಪಕ್ಷಗಳು ಪ್ರತಿಭಟನೆ ನಡೆಸಿ ಮಧ್ಯಾಹ್ನ 2 ಗಂಟೆವರೆಗೆ ಕಲಾಪ ಮುಂದೂಡಿಕೆ ಆಗಿತ್ತು. ಅದಾನಿ ಸಮೂಹದ ವಂಚನೆ ಕುರಿತು ಕಲಾಪದಲ್ಲಿ ಕೈಗೊಳ್ಳಬೇಕಾದ ಕ್ರಮ ಯಾವುದು ಎಂಬ ಬಗ್ಗೆ ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಸ್‌ಪಿ, ಜೆಡಿಯು, ಶಿವಸೇನೆ (ಉದ್ಧವ್ ಠಾಕ್ರೆ ಬಣ), ಸಿಪಿಐ(ಎಂ), ಸಿಪಿಐ, ಎನ್‌ಸಿಪಿ, ಐಯುಎಂಎಲ್, ಎಎಪಿ, ಎನ್‌ಸಿ ಪಕ್ಷಗಳು ಬೆಳಗ್ಗೆ ಸಭೆ ನಡೆಸಿದ್ದವು. ನರೇಂದ್ರ ಮೋದಿ ಪ್ರಧಾನಿಯಾದ ನಂತರ ಅದಾನಿ ಸಮೂಹಕ್ಕೆ ಹೆಚ್ಚು ಅನುಕೂಲ ಮತ್ತು ಲಾಭ ಆಗಿದೆ. ಈ ಬಗ್ಗೆಯೂ ಚರ್ಚೆ ನಡೆಸುವಂತೆ ಒತ್ತಾಯಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹೂಡಿಕೆ ಬಗ್ಗೆ ವಿಚಾರಣೆಗೆ ಆಗ್ರಹ: ಅದಾನಿ ಸಮೂಹದಲ್ಲಿ ಎಲ್‌ಐಸಿ, ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ಕೋಟಿಗಟ್ಟಲೇ ಹಣ ಹೂಡಿಕೆ ಮಾಡಿರುವ ಕುರಿತಾಗಿಯೂ ವಿಚಾರಣೆ ನಡೆಯಬೇಕು ಎಂದು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು. ಅದಾನಿ ಸಮೂಹದ ಅಕ್ರಮ ಕುರಿತು ಚರ್ಚೆ ನಡೆಸಲು ನಿಯಮ 267ರ ಅಡಿ ನೀಡಲಾದ ನೋಟಿಸನ್ನು ಸಭಾಧ್ಯಕ್ಷರು ಸ್ವೀಕರಿಸಿಲ್ಲ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಜನರಿಂದ ಹೂಡಿಕೆ ಪಡೆದ ಅದಾನಿ ಕಂಪನಿಗಳು ಅಕ್ರಮ ನಡೆಸಿವೆ ಎಂದು ವರದಿ ಆರೋಪಿಸಿರುವಾಗ ಈ ವಿಷಯವನ್ನು ಚರ್ಚಿಸಲು ಏಕೆ ಅವಕಾಶ ಇಲ್ಲ ಎಂದು ಖರ್ಗೆ ಪ್ರಶ್ನಿಸಿದರು.

ಮುಖೇಶ್ ಏಷ್ಯಾದ ಅತಿ ಸಿರಿವಂತ: ಅದಾನಿ ಸಮೂಹದ ಷೇರು ಕುಸಿತ ಕಾರಣ 'ಏಷ್ಯಾದ ಅತಿ ಶ್ರೀಮಂತ' ಎಂಬ ಹಿರಿಮೆಯನ್ನು ಕಳೆದುಕೊಂಡಿದ್ದಾರೆ. ಈ ಸ್ಥಾನಕ್ಕೆ ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಜಿಗಿದಿದ್ದಾರೆ. ಅದಾನಿ ಸಂಪತ್ತು 72.10 ಶತಕೋಟಿ ಡಾಲರ್‌ಗೆ ಇಳಿದಿದ್ದು, ಅಂಬಾನಿ ಸಂಪತ್ತು 81 ಶತಕೋಟಿ ಡಾಲರ್‌ಗೆ ಹಿಗ್ಗಿದೆ. ಇದರಿಂದ ಜಾಗತಿಕ ಬಿಲಿಯನೇರ್ ಸೂಚ್ಯಾಂಕದಲ್ಲಿ ಅಂಬಾನಿ 12ನೇ ಸ್ಥಾನದಲ್ಲಿ, ಅದಾನಿ 13ನೇ ಸ್ಥಾನದಲ್ಲಿದ್ದಾರೆ ಎಂದು ಬ್ಲೂಮ್ ಬರ್ಗ್ ಹೇಳಿದೆ. ಜನವರಿ ಮೂರನೇ ವಾರದಲ್ಲಿ 124 ಶತಕೋಟಿ ಡಾಲರ್ ಒಡೆಯರಾಗಿದ್ದ ಅದಾನಿ, ಜಾಗತಿಕ ಸಿರಿವಂತರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದರು.

8.22 ಲಕ್ಷ ಕೋಟಿ ರೂ. ನಷ್ಟ: ವಹಿವಾಟಿನಲ್ಲಿ ಅದಾನಿ ಎಂಟರ್‌ಪ್ರೈಸಸ್ ಶೇ.26.50 ರಷ್ಟು ಕುಸಿತ ಕಂಡಿದ್ದು, ಸಮೂಹದ ಟ್ರಾನ್ಸಮಿಷನ್, ಗ್ರೀನ್‌ಎನರ್ಜಿ, ಟೋಟಲ್ ಗ್ಯಾಸ್‌ಗಳ ಷೇರು ಮೌಲ್ಯ ತಲಾ ಶೇ.10 ಇಳಿದಿವೆ. ಅಂಬುಜಾ ಸಿಮೆಂಟ್ ಶೇ.5 ಏರಿಕೆ ದಾಖಲಿಸಿದೆ. ಹಿಂಡನ್‌ಬರ್ಗ್ ರೀಸರ್ಚ್ ವರದಿ

ಜನವರಿ 24ರಂದು ಪ್ರಕಟವಾದ ನಂತರದಿಂದ ಈವರೆಗೆ ಅದಾನಿ ಸಮೂಹದ ಕಂಪನಿಗಳಿಗೆ ರೂ.8.22 ಲಕ್ಷ ಕೋಟಿ ನಷ್ಟ ಆಗಿದೆ ಎನ್ನಲಾಗಿದೆ.

ವಿವರ ಕೇಳಿದ ಆರ್‌ಬಿಐ:

ಅದಾನಿ ಸಮೂಹದ ಕಂಪನಿಗಳು ಹೊಂದಿರುವ ಬ್ಯಾಂಕ್ ಖಾತೆ, ಪಡೆದಿರುವ ಸಾಲ. ವಿತರಿಸುವ ಸಾಲಪತ್ರ ಸೇರಿ ಈ ಸಮೂಹದ ಎಲ್ಲ ಬ್ಯಾಂಕಿಂಗ್ ವ್ಯವಹಾರದ ಮಾಹಿತಿ ನೀಡುವಂತೆ ಆರ್‌ಬಿಐ ಬ್ಯಾಂಕ್‌ಗಳಿಗೆ ಸೂಚಿಸಿದೆ. ಈ ಸಾಲಪತ್ರದ ಆಧಾರದ ಮೇಲೆ ಬ್ಯಾಂಕ್‌ಗಳು ಗ್ರಾಹಕರಿಗೆ ಸಣ್ಣ ಮೊತ್ತದ ಸಾಲ ಮಂಜೂರು ಮಾಡುತ್ತಿದ್ದವು. ಈ ಮಧ್ಯೆ, ಅದಾನಿ ಸಮೂಹದ ಕಂಪನಿಗಳು ವಿತರಿಸುವ ಸಾಲದ ಬಾಂಡ್‌ಗಳನ್ನು ಮಾನ್ಯ ಮಾಡುವುದಿಲ್ಲ ಎಂದು ಸ್ವಿಸ್‌ಬ್ಯಾಂಕ್, ಸಿಟಿ ಗ್ರೂಪ್ ಬ್ಯಾಂಕ್‌ಗಳು ಹೇಳಿದೆ. ಈ ರೀತಿ ಸಾಲದ ಬಾಂಡ್‌ಗಳನ್ನು ಆಧರಿಸಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ರೂ.7,000 ಕೋಟಿ, ಬ್ಯಾಂಕ್ ಆಫ್ ಬರೋಡಾ ರೂ.4,000 ಕೋಟಿವರೆಗೂ ಸಾಲ ವಿತರಣೆ ಮಾಡಿವೆ ಎನ್ನಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:03.02.2023

3. ಅದಾನಿ: ಚರ್ಚೆಗೆ ಸಜ್ಜಾದ ವಿಪಕ್ಷ

ಸಂಸತ್ತಿನ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿಯವರು ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಚರ್ಚೆ ನಡೆಯುವ ಸಂದರ್ಭದಲ್ಲಿ ಗದ್ದಲ ಮಾಡದಿರಲು ವಿರೋಧ ಪಕ್ಷಗಳು ನಿರ್ಧರಿಸಿವೆ. ಆದರೆ, ಅದಾನಿ ಸಮೂಹವು ಅಕ್ರಮವಾಗಿ ಷೇರುಗಳ ಮೌಲ್ಯ ಏರಿಕೆ/ಇಳಿಕೆ ಮಾಡಿದೆ ಎನ್ನಲಾದ ಪ್ರಕರಣದಿಂದ ಗಮನ ಬೇರೆಡೆಗೆ ತಿರುಗಿಸದಿರಲೂ ತೀರ್ಮಾನಿಸಿವೆ.

ಈ ಪ್ರಕರಣಕ್ಕೆ ಸಂಬಂಧಿಸಿ ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿದ ಕಾರಣ ಗುರುವಾರ ಮತ್ತು ಶುಕ್ರವಾರ ಕಲಾಪ ನಡೆದಿರಲಿಲ್ಲ.

ರಾಜ್ಯಸಭೆ ವಿರೋಧ ಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕರೆದಿರುವ ವಿರೋಧ ಪಕ್ಷಗಳ ಸಭೆಯು ನಡೆಯಲಿದೆ. ಕಲಾಪದಲ್ಲಿ ಸರ್ಕಾರವನ್ನು ಯಾವ ರೀತಿಯಲ್ಲಿ ಇಕ್ಕಟ್ಟಿಗೆ ಸಿಲುಕಿಸಬಹುದು ಎಂಬ ಬಗ್ಗೆ ಕೊನೆಯ ಕ್ಷಣದ ಕಾರ್ಯತಂತ್ರ ಹೆಣೆಯುವುದಕ್ಕಾಗಿ ಈ ಸಭೆ ಕರೆಯಲಾಗಿದೆ. ಸಭೆಯ ಬಳಿಕ, ವಿರೋಧ ಪಕ್ಷಗಳ ಮುಖಂಡರು ಸಂಸತ್ತಿನ ಎದುರು ಇರುವ ಮಹಾತ್ಮ ಗಾಂಧಿ ಪ್ರತಿಮೆಯ ಎದುರು ಪ್ರತಿಭಟನೆ ನಡೆಸಲಿದ್ದಾರೆ.

ಚರ್ಚೆಗೆ ಅವಕಾಶ ನೀಡುವುದರಲ್ಲಿ ಯವುದೇ ಅರ್ಥ ಇಲ್ಲ ಎಂದು ಕೆಲವು ಪಕ್ಷಗಳು ಅಭಿಪ್ರಾಯಪಟ್ಟಿವೆ. ಆದರೆ, ಅದಾನಿ ಸಮೂಹದ ಜೊತೆಗೆ ಎಲ್‌ಐಸಿ ಮತ್ತು ಎಸ್‌ಬಿಐ ನಡೆಸಿರುವ ಹಣಕಾಸು ವಹಿವಾಟಿಗೆ ಸಂಬಂಧಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕಿದ್ದರೆ ಚರ್ಚೆ ನಡೆಯುವುದು ಅಗತ್ಯ ಎಂಬುದು ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳ ಅಭಿಮತ. ಹಾಗಾಗಿ, 'ಚರ್ಚೆ ಬೇಡ' ಎನ್ನುತ್ತಿರುವ ಪಕ್ಷಗಳ ಮನವೊಲಿಸಲು ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಯತ್ನಿಸಬಹುದು.

ಅದಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕರದ ಮೇಲಿನ ವಾಗ್ದಾಳಿಯನ್ನು ಕಾಂಗ್ರೆಸ್ ತೀವ್ರಗೊಳಿಸಿದೆ. ಸರ್ಕಾರಕ್ಕೆ ಈ ಪ್ರಕರಣದ ಕುರಿತು ಪ್ರತಿ ದಿನ ಮೂರು ಪ್ರಶ್ನೆ ಕೇಳಲಾಗುವುದು. 'ನಮಗೂ ಅದಾನಿಗೂ ಏನು ಸಂಬಂಧ' ಎಂಬುದರ ಹಿಂದೆ ಸರ್ಕಾರವು ಅಡಗಿಕೊಳ್ಳದೆ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಸಂಸತ್ತಿನಲ್ಲಿ ಚರ್ಚೆ ನಡೆಯುವುದರ ಕುರಿತು ಬಿಜೆಪಿ ಭೀತಿಯಲ್ಲಿದೆ. ಹಾಗಾಗಿ, ಸರ್ಕಾರದ ವಿರುದ್ಧ ಇರುವ ಯಾವುದೇ ಪಕ್ಷವು ಸಂಸತ್ತಿನಲ್ಲಿ ಗದ್ದಲ ಎಬ್ಬಿಸಿದರೆ ಆ ಪಕ್ಷವು ಬಿಜೆಪಿಯ ಜೊತೆಗೆ ಒಳ ಒಪ್ಪಂದ ಮಾಡಿಕೊಂಡಿದೆ ಎಂದು ಭಾವಿಸಲಾಗುವುದು ಎಂದು ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಓ.ಬ್ರಯಾನ್ ಹೇಳಿದ್ದಾರೆ.

'ಬಿಜೆಪಿಗೆ ಭಯವಾಗಿದೆ. ಸಂಸತ್ತಿನಲ್ಲಿ ನಡೆಯುವ ಚರ್ಚೆಯಿಂದ ಪಲಾಯನ ಮಾಡಲು ಆ ಪಕ್ಷವು ಬಯಸಿದೆ. ರಾಷ್ಟ್ರಪತಿಯವರ ಭಾಷಣದ ಮೇಲೆ ನಡೆಯುವ ಚರ್ಚೆಯು ಮೋದಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಅವಕಾಶ. ನಿಕಟ ನಿಗಾ ಇರಿಸಿ. ತೃಣಮೂಲ ಕಾಂಗ್ರೆಸ್‌ಗೆ ಚರ್ಚೆ ಬೇಕಾಗಿದೆ, ಗದ್ದಲ ಬೇಕಾಗಿಲ್ಲ' ಎಂದ ಡೆರೆಕ್ ಟ್ವೀಟ್ ಮಾಡಿದ್ದಾರೆ.

ಅದಾನಿ ಪ್ರಕರಣದ ಕುರಿತು ಯಾವ ರೀತಿಯ ತನಿಖೆ ನಡೆಯಬೇಕು ಎಂಬ ಬಗ್ಗೆ ವಿರೋಧ ಪಕ್ಷಗಳ ಸಹಮತ ಇಲ್ಲ. ಜಂಟಿ ಸಂಸದೀಯ ಸಮಿತಿ ತನಿಖೆ ನಡೆಸಬೇಕು ಎಂಬುದು ಕೆಲವು ಪಕ್ಷಗಳ ಒತ್ತಾಯ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂಬುದು ಇತರ ಕೆಲವು ಪಕ್ಷಗಳ ಆಗ್ರಹ. ಆದರೆ, ವಿರೋಧ ಪಕ್ಷಗಳ ಒಗ್ಗಟ್ಟಿಗೆ ಈ ಭಿನ್ನಮತವು ಅಡ್ಡಬಂದಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:06.02.2023

4. ಪಟ್ಟು ಸಡಿಲಿಸದ ಪ್ರತಿಪಕ್ಷಗಳು

ಅದಾನಿ ಸಮೂಹದ ಷೇರು ಅಕ್ರಮ ಮತ್ತು ತೆರಿಗೆ ವಂಚನೆ ಆರೋಪದ ಬಗ್ಗೆ ತನಿಖೆಗೆ ಒತ್ತಾಯಿಸುತ್ತಿರುವ 17 ವಿರೋಧ ಪಕ್ಷಗಳು ಸಂಸತ್‌ನ ಉಭಯ ಸದನಗಳಲ್ಲಿ ಗದ್ದಲ ನಡೆಸಿದ ಕಾರಣ ಕಲಾಪಕ್ಕೆ ಭಂಗವಾಯಿತು. ನಂತರ ಸಂಸತ್ ಭವನದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದವು.

ಲೋಕಸಭೆ ಮತ್ತು ರಾಜ್ಯಸಭೆ ಸಮಾವೇಶಗೊಳ್ಳುತ್ತಿದ್ದಂತೆ ಅದಾನಿ ಸಮೂಹದ ವಿಷಯವನ್ನು ಪ್ರಸ್ತಾಪಿಸಿದ ವಿರೋಧ ಪಕ್ಷಗಳ ಸಂಸದರು, ಸ್ಪೀಕರ್/ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ನುಗ್ಗಿ ಪ್ರತಿಭಟನೆ ನಡೆಸಿದರು. ಇದರಿಂದ ಉಭಯ ಸದನಗಳನ್ನು ಮಧ್ಯಾಹ್ನ 2ರವರೆಗೆ ಮುಂದೂಡಲಾಗಿತ್ತು. ನಂತರ ಸಭೆ ಸೇರಿದಾಗಲೂ ಪರಿಸ್ಥಿತಿ ಸುಧಾರಿಸದ ಕಾರಣ ದಿನದ ಮಟ್ಟಿಗೆ ಕಲಾಪ ಮಂದೂಡಲಾಯಿತು.

ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆದ ನಂತರ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನಡೆಸಿದ ಸಭೆಯಲ್ಲಿ ಕಾಂಗ್ರೆಸ್, ಡಿಎಂಕೆ, ಎನ್‌ಸಿಪಿ, ಬಿಆರ್‌ಎಸ್, ಜೆಡಿಯು, ಎಸ್‌ಪಿ, ಸಿಪಿಐ(ಎಂ), ಸಿಸಿಐ, ಜೆಎಂಎಂ, ಆರ್‌ಎಲ್‌ಡಿ, ಆರ್‌ಎಸ್‌ಪಿ, ಎಎಪಿ. ಐಯುಎಎಂಎಲ್, ಆರ್‌ಜೆಡಿ, ಉದ್ಧವ್ ಠಾಕ್ರೆ ಬಣದ ಶಿವಸೇನೆ ಸಂಸದರು ಭಾಗಿಯಾಗಿದ್ದರು ಆದರೆ, ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಟಿಎಂಸಿ ಸಂಸದರು ಸಭೆಗೆ ಹಾಜರಾಗಿರಲಿಲ್ಲ. ಅದಾನಿ ಸಮೂಹದಲ್ಲಿ ಸರ್ಕಾರಿ ಸ್ವಾಮ್ಯದ ಎಲ್‌ಐಸಿ ಮತ್ತು ಎಸ್‌ಬಿಐಗಳು ಅಪಾರ ಪ್ರಮಾಣದಲ್ಲಿ ಹೂಡಿಕೆ ಮಾಡಿದ್ದು, ನಷ್ಟಕ್ಕೆ ಒಳಗಾಗಿವೆ. ಮುಗ್ಧ ಹೂಡಿಕೆದಾರರಿಗೆ ಅನ್ಯಾಯವಾಗಿದೆ. ಆದ್ದರಿಂದ ಅದಾನಿ ಸಮೂಹದ ಅಕ್ರಮಗಳ ಕುರಿತು ತನಿಖೆ ನಡೆಸಬೇಕು ಮತ್ತು ನಿಯಮ 267ರ ಅಡಿ ಚರ್ಚೆ ನಡೆಸಲು ವಿರೋಧ ಪಕ್ಷಗಳ ಆಗ್ರಹ.

ಸಂಸತ್‌ಗೆ ಸರ್ಕಾರದ ಉತ್ತರ:

- **ವಿದೇಶದಲ್ಲಿ ವ್ಯಾಸಂಗ:** ಕಳೆದೈದು ವರ್ಷದಲ್ಲಿ (2017–22) 30 ಲಕ್ಷ ಭಾರತೀಯರು ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ತೆರಳಿದ್ದಾರೆ ಎಂದು ಸರ್ಕಾರ ಸಂಸತ್‌ಗೆ ತಿಳಿಸಿದೆ. 30 ಲಕ್ಷದಲ್ಲಿ ಏಳೂವರೆ ಲಕ್ಷ ಮಂದಿ ಯಾವ ವಿಷಯದ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗುತ್ತಿದ್ದೇವೆ ಎಂಬುದನ್ನು ವಲಸೆ ಪರಿಶೀಲನೆ ವೇಳೆ ತಿಳಿಸಿದ್ದಾರೆ. ವಿದೇಶದಲ್ಲಿ ಅಧ್ಯಯನಕ್ಕಾಗಿ ಭಾರತೀಯರು ವ್ಯಯಿಸುತ್ತಿರುವ ಹಣ ದೇಶದ ಶಿಕ್ಷಣ ಬಜೆಟ್‌ಗಿಂತ ಅಧಿಕವಾಗಿದೆ ಎಂದು ಹೇಳಿದೆ.

- **5 ರಾಜ್ಯದಲ್ಲಿ ಹಳೇ ಪಿಂಚಣಿ ಪದ್ಧತಿ:** ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನೇ ಮರುಜಾರಿ ಮಾಡಲು ರಾಜಸ್ಥಾನ, ಛತ್ತೀಸಗಢ, ಜಾರ್ಖಂಡ್, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ಸರ್ಕಾರಗಳು ನಿರ್ಧಾರ ಕೈಗೊಂಡಿವೆ ಎಂದು ಸರ್ಕಾರ ಹೇಳಿದೆ.
- ಕೇಂದ್ರೀಯ ವಿದ್ಯಾಲಯ ಮತ್ತು ನವೋದಯ ಶಾಲೆಗಳಲ್ಲಿ ಬೋಧಕರ ಮತ್ತು ಬೋಧಕೇತರ ಹುದ್ದೆಗಳಲ್ಲಿ 58 ಸಾವಿರ ಖಾಲಿ ಉಳಿದಿವೆ.
- ಶಿಕ್ಷಣ ಸಂಸ್ಥೆಗಳಲ್ಲಿ ಋತುಚಕ್ರದ ಅವಧಿಯ ರಜೆ ನೀಡುವ ಯಾವುದೇ ಪ್ರಸ್ತಾಪ ಇಲ್ಲ.
- ನಮಾಮಿ ಗಂಗೆ ಯೋಜನೆಯ ಮುಖ್ಯ ಉದ್ದೇಶ ನದಿ ನೀರನ್ನು ಸ್ನಾನಕ್ಕೆ ಯೋಗ್ಯವನ್ನಾಗಿ ಮಾಡುವುದಾಗಿದೆ.

9,222 ಕೋಟಿ ರೂ. ಮುಂಗಡ ಪಾವತಿ:

ಪ್ರವರ್ತಕರು ಅವಧಿಗೆ ಮುನ್ನವೇ 9,222 ಕೋಟಿ ರೂಪಾಯಿಗಳನ್ನು ಪಾವತಿ ಮಾಡುವುದಾಗಿ ಹೇಳಿರುವುದರಿಂದ ಸಾಲಕ್ಕೆ ಅಡಮಾನವಾಗಿ ಇರಿಸಿರುವ ಷೇರುಗಳನ್ನು ಬಿಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅದಾನಿ ಸಮೂಹ ಹೇಳಿದೆ. ಅದಾನಿ ಪೋರ್ಟ್ಸ್, ಸ್ಪೆಷಲ್ ಎಕನಾಮಿಕ್ ಝೋನ್, ಗ್ರೀನ್ ಎನರ್ಜಿ, ಟ್ರಾನ್ಸ್ ಮಿಷನ್ ಕಂಪನಿಗಳಿಗೆ ಸೇರಿದ ಈ ಷೇರುಗಳ ಮೇಲಿನ ಸಾಲದ ವಾಯ್ದೆಯು 2024 ಸೆಪ್ಟಂಬರ್‌ವರೆಗೆ ಇದೆ.

ಷೇರು ಕುಸಿತ ಮುಂದುವರಿಕೆ: ವಹಿವಾಟಿನಲ್ಲಿ ಅದಾನಿ ಟ್ರಾನ್ಸ್‌ಮಿಷನ್ ಶೇ.10, ಟೋಟಲ್ ಗ್ಯಾಸ್, ಪವರ್, ಗ್ರೀನ್ ಎನರ್ಜಿ ವಿಲ್ಮರ್‌ಗಳ ಷೇರು ಮೌಲ್ಯ ತಲಾ ಶೇ.5 ಕುಸಿತವಾಗಿದೆ. ಅದಾನಿ ಪೋರ್ಟ್ಸ್ ಏರಿಕೆ ಕಂಡಿದೆ.

ಆಧಾರ: ವಿಜಯ ವಾಣಿ, ದಿನಾಂಕ:07.02.2023.

5. ಸಂಸತ್ತಲ್ಲಿ ಮೋದಿ ಗುಡುಗು

ಹಿಂಡನ್‌ಬರ್ಗ್ ವರದಿ ಪ್ರಸ್ತಾಪಿಸಿ ಉದ್ಯಮಿ ಗೌತಮ್ ಅದಾನಿ ಜೊತೆಗೆ ತಮ್ಮ ನಂಟನ್ನು ಪ್ರಶ್ನಿಸುತ್ತಿರುವ ವಿಪಕ್ಷಗಳ ವಿರುದ್ಧ ತೀಕ್ಷ್ಣ ವಾಗ್ದಾಳಿ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ, 'ಟೀಕಾಕಾರರು ತಮ್ಮ ಮೇಲೆ ಮಾಡುತ್ತಿರುವ ಸುಳ್ಳು ಆರೋಪ ಮತ್ತು ದೋಷಣೆಗೆ 140 ಕೋಟಿ ಭಾರತೀಯರು ನನ್ನ ಮೇಲಿಟ್ಟಿರುವ ನಂಬಿಕೆಯೇ ರಕ್ಷಣಾ ಕವಚ' ಎಂದು ಬಣ್ಣಿಸಿದ್ದಾರೆ. ಜೊತೆಗೆ 'ನನ್ನ ಜೀವನದ ಪ್ರತಿ ಕ್ಷಣವನ್ನೂ ದೇಶಕ್ಕಾಗಿ ಮುಡಿಪಿಟ್ಟಿದ್ದು, ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಕಳೆದುಕೊಂಡ ದಶಕವನ್ನು ನಮ್ಮ ಸರ್ಕಾರ 'ಭಾರತದ ದಶಕ' ದ ಮೂಲಕ ಸರಿಗಟ್ಟುವ ಯತ್ನ ಮಾಡುತ್ತಿದೆ ಎಂದು ಹೇಳಿದ್ದಾರೆ.

ರಾಷ್ಟ್ರಪತಿಗಳ ಭಾಷಣಕ್ಕೆ ಲೋಕಸಭೆಯಲ್ಲಿ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗಿಯಾಗಿ ಸುಧೀರ್ಘ 85 ನಿಮಿಷಗಳ ಕಾಲ ಮೋದಿ ಮಾತನಾಡಿದರು.

ಶತಮಾನದಲ್ಲೊಮ್ಮೆ ಕಾಣಿಸುವ ಕೋವಿಡ್‌ನಂಥ ದುರಂತ ಮತ್ತು ಜಾಗತಿಕ ಸಂಘರ್ಷದಿಂದಾಗಿ ಜಗತ್ತಿನ ಹಲವು ದೇಶಗಳು ಅಸ್ಥಿರ ಸನ್ನಿವೇಶ ಎದುರಿಸುತ್ತಿರುವ ಹೊತ್ತಿನಲ್ಲಿ ಇಡೀ ವಿಶ್ವ ಭಾರತದತ್ತ ಭರವಸೆ ಮತ್ತು ಧನಾತ್ಮಕ ದೃಷ್ಟಿಕೋನದಿಂದ ನೋಡುತ್ತಿದೆ. ಭಾರತದಲ್ಲಿನ ಸ್ಥಿರ ಮತ್ತು ನಿರ್ಣಾಯಕ ಸರ್ಕಾರದ ಫಲವಾಗಿ ಜಾಗತಿಕ ಸಂಸ್ಥೆಗಳು ಭಾರತದತ್ತ ವಿಶ್ವಾಸ ಇರಿಸಿವೆ ಎಂದು ಬಣ್ಣಿಸಿದರು.

ಈ ಸರ್ಕಾರ ರಾಷ್ಟ್ರೀಯ ಹಿತಾಸಕ್ತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಹೊಂದಿದೆ. ಅನಿವಾರ್ಯತೆಯ ಬದಲಾಗಿ ಇಚ್ಛಾಶಕ್ತಿಯ ಮೂಲಕ ಸುಧಾರಣೆಗಳನ್ನು ತರುತ್ತಿದೆ. ಆದರೆ

ಕಂಠಮಟ್ಟದವರೆಗೂ ಹತಾಶೆ ತುಂಬಿರುವ ಕೆಲವು ವ್ಯಕ್ತಿಗಳಿಗೆ ಮಾತ್ರ ಭಾರತದ ಅಭಿವೃದ್ಧಿಯ ಕಥೆ ಹಾಗೂ 140 ಕೋಟಿ ಭಾರತೀಯರ ಸಾಧನೆಗಳು ಕಾಣುತ್ತಿಲ್ಲವೆಂದು ವಿಪಕ್ಷಗಳ ವಿರುದ್ಧ ಹರಿಹಾಯ್ದರು.

ಅವರು (ವಿಪಕ್ಷಗಳು) ಅಧಿಕಾರದಲ್ಲಿದ್ದಾಗಲೂ ವಿಫಲರಾದರು ಮತ್ತು ಇದೀಗ ವಿರೋಧ ಪಕ್ಷವಾಗಿಯೂ ವಿಫಲರಾಗಿದ್ದಾರೆ. ಕೆಲ ವ್ಯಕ್ತಿಗಳು ತಮ್ಮ ಕುಟುಂಬಕ್ಕಾಗಿ ಬದುಕುತ್ತಿದ್ದರೆ, ನಾನು 25ಕೋಟಿ ಭಾರತೀಯ ಕುಟುಂಬಗಳಿಗಾಗಿ ಬದುಕುತ್ತೀದ್ದೇನೆ. 140 ಕೋಟಿ ಜನರ ವಿಶ್ವಾಸವು ನನಗೆ ನೀಡಿರುವ ರಕ್ಷಾ ಕವಚವನ್ನು ಸುಳ್ಳಿನ ಆಯುಧಗಳು ಬೇಧಿಸಲಾರವು ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಕಿಡಿಕಾರಿದರು.

ರಚನಾತ್ಮಕ ಟೀಕೆ: ರಚನಾತ್ಮಕ ಟೀಕೆಯನ್ನು ನಾವು ಪ್ರಜಾಪ್ರಭುತ್ವವನ್ನು ಶುದ್ಧೀಕರಿಸುವ ಪ್ರಕ್ರಿಯೆ ಎಂದು ಸ್ವಾಗತಿಸುತ್ತೇವೆ. ಆದರೆ ಕಳೆದ 9 ವರ್ಷಗಳಲ್ಲಿ ಉದ್ದೇಶಪೂರ್ವಕ ಟೀಕೆಯು, ರಚನಾತ್ಮಕ ಟೀಕೆಯ ಸ್ಥಾನವನ್ನು ಆವರಿಸಿಕೊಂಡಿದೆ. ಜೊತೆಗೆ, ಕೆಲವರು ನನ್ನನ್ನು ಟೀಕೆ ಮಾಡಿಕೊಂಡೆ ತಾವು ಬೆಳೆಯಬಹುದೆಂಬ ತಪ್ಪು ಕಲ್ಪನೆಯನ್ನೇ ಕಳೆದ 22 ವರ್ಷಗಳಿಂದ ಆರೈಕೆ ಮಾಡಿಕೊಂಡು ಬಂದಿದ್ದಾರೆ ಎಂದು ಹೆಸರು ಹೇಳದೆಯೇ ಕಾಂಗ್ರೆಸ್ ನಾಯಕರನ್ನು ಕುಟುಕಿದರು.

ಇ.ಡಿ.ಗೆ ಕೃತಜ್ಞತೆ: ಹಲವು ಚುನಾವಣಾ ಸೋಲಿನ ಹೊರತಾಗಿಯೂ ವಿಪಕ್ಷಗಳು ಒಂದು ವೇದಿಕೆಗೆ ಬರಲು ಸಾಧ್ಯವಾಗಲಿಲ್ಲ. ಆದರೆ ಭ್ರಷ್ಟಾಚಾರದ ಕೇಸಲ್ಲಿ ಜಾರಿ ನಿರ್ದೇಶನಾಲಯದ ಕ್ರಮಗಳ ಬಳಿಕ ಅವರೆಲ್ಲಾ ಇದೀಗ ಒಂದಾಗಿದ್ದಾರೆ. ಮತದಾರರು ಮಾಡಲಾಗದ್ದನ್ನು ಮಾಡಿದ್ದಕ್ಕೆ ವಿಪಕ್ಷಗಳೆಲ್ಲ ಇದೀಗ ಜಾರಿ ನಿರ್ದೇಶನಾಲಯಕ್ಕೆ ಕೃತಜ್ಞತೆ ಸಲ್ಲಿಸಬೇಕು ಎಂದು ಪ್ರಧಾನಿ ವ್ಯಂಗ್ಯ ವಾಡಿದರು.

ದೂಷಣೆ ಸರಣಿ: ನೀವು ಚುನಾವಣೆ ಸೋತಾಗ ಇವಿಎಂ ದೂಷಿಸಿದಿರಿ, ಚುನಾವಣಾ ಆಯೋಗವನ್ನು ಟೀಕಿಸಿದಿರಿ. ನಿಮ್ಮ ಪರವಾಗಿ ತೀರ್ಪು ನೀಡದೇ ಇದ್ದಾಗ ಸುಪ್ರೀಂಕೋರ್ಟ್ ವಿರುದ್ಧ ಟೀಕೆ ಮಾಡಿದಿರಿ. ಸೇನೆ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದರೆ ಅವರನ್ನು ಪ್ರಶ್ನಿಸಿದಿರಿ. ಆರ್ಥಿಕ ಪ್ರಗತಿ ಸಾಧಿಸಿದರೆ ಆರ್‌ಬಿಐ ಅನ್ನು ಟೀಕಿಸಿದಿರಿ ಎಂದು ವಿಪಕ್ಷಗಳ ವಿರುದ್ಧ ಕಿಡಿಕಾರಿದರು.

ಜೀವನ ದೇಶಕ್ಕೆ ಮುಡಿಪು: ಇಂದು ನಾನು ಇಷ್ಟು ದೂರ ಸಾಗಿ ಬಂದಿದ್ದೇನೆ ಎಂದರೆ ಅದು ಮಾಧ್ಯಮಗಳ ಹೆಡ್ ಲೈನ್ ಮೂಲಕ ಅಲ್ಲ, ಬದಲಾಗಿ ಈ ದೇಶಕ್ಕಾಗಿ ನನ್ನ ಜೀವನದ ಪ್ರತಿ ಕ್ಷಣವನ್ನು ಅರ್ಪಿಸಿದ ಕಾರಣಕ್ಕೆ ದೇಶದ ಜನತೆ ಮೋದಿ ಮೇಲೆ ಇಟ್ಟಿರುವ ವಿಶ್ವಾಸ ವಿಪಕ್ಷಗಳ ಊಹೆಗೂ ನಿಲುಕದ್ದು. ವಿಪಕ್ಷಗಳು ನನ್ನ ಮೇಲೆ ಎಸೆದ ಸುಳ್ಳು ಆರೋಪಗಳು ಮತ್ತು ದೂಷಣೆಗಳು ಸರ್ಕಾರದ ಉಚಿತ ಆಹಾರ, ಮನೆ, ಸಬ್ಸಿಡಿ ಔಷಧಿ, ಆರೋಗ್ಯ ವಿಮೆ, ಕುಡಿಯುವ ನೀರು ಸೇರಿದಂತೆ ಹಲವು ಯೋಜನೆಗಳ ಲಾಭ ಪಡೆದ ಕೋಟ್ಯಾಂತರ ಜನರ ವಿಶ್ವಾಸದ ಗೋಡೆಯನ್ನು ದಾಟಲಾರವು ಎಂದು ಪ್ರಧಾನಿ ಹೇಳಿದರು.

ಹಗರಣಗಳ ಸಾಲು: ಯುಪಿಎ ಸರ್ಕಾರದ ಅವಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ನಡೆದ ಭಯೋತ್ಪಾದಕ ದಾಳಿಗಳು, ಮುಂಬೈ ದಾಳಿ ಬಳಿಕ ಸರ್ಕಾರ ಸೂಕ್ತ ತಿರುಗೇಟು ನೀಡದೇ ಇದ್ದಿದ್ದನ್ನು ಪ್ರಸ್ತಾಪಿಸಿದ ಮೋದಿ ಇದೇ ವೇಳೆ 2ಜಿ, ಕಲ್ಲಿದ್ದಲು, ಕಾಮನ್ ವೆಲ್ತ್ ಸೇರಿದಂತೆ ಹಲವು ಹಗರಣಗಳನ್ನು ಪ್ರಸ್ತಾಪಿಸಿ ಕಾಂಗ್ರೆಸ್‌ಗೆ ಇರಿಸುಮುರುಸು ಉಂಟು ಮಾಡಿದರು.

2004–14 ರ ದಶಕವು, ಸ್ವಾತಂತ್ರ್ಯಾ ನಂತರ ಭಾರತ್ ಜೋಡೋ ಯಾತ್ರೆಯ ಕೊನೆಯ ಚರಣವನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಮೋದಿ, 90ರ ದಶಕದಲ್ಲಿ ತಾವು ಶ್ರೀನಗರದ ಲಾಲ್ ಚೌಕ್‌ನಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಜೆಪಿ ಅಭಿಯಾನ ಆರಂಭಿಸಿದಾಗ ಉಗ್ರರು ಹೊರಡಿಸಿದ್ದ ಎಚ್ಚರಿಕೆಯ ಹೋರತಾಗಿಯೂ ಅಲ್ಲಿಗೆ ತೆರಳಿದ್ದನ್ನು ಸ್ಮರಿಸಿಕೊಂಡರು. ಜೊತೆಗೆ, ಇತ್ತೀಚೆಗೆ ಶ್ರೀ ನಗರಕ್ಕೆ ಹೋಗಿ

ಬಂದವರು ಮತ್ತು ತಿರಂಗಾ ಯಾತ್ರೆಯಲ್ಲಿ ಭಾಗಿಯಾಗಿದ್ದವರು ಇದೀಗ ಶೀನಗರದಲ್ಲಿ ಎಷ್ಟು ಮುಕ್ತವಾಗಿ ಓಡಾಡಬಹುದು ಎಂಬುದರ ಅರಿವು ಪಡೆದುಕೊಂಡಿದ್ದಾರೆ ಎಂದು ರಾಹುಲ್‌ಗೆ ಟಾಂಗ್ ನೀಡಿದರು.

ಜೊತೆಗೆ, ಕೆಲವರಿಗೆ ಹಾರ್ವರ್ಡ್ ಅಧ್ಯಯನದ ಬಹಳ ಕ್ರೇಜ್ ಇದೆ. ಅವರೆಲ್ಲಾ ಕೋವಿಡ್‌ನಿಂದ ಭಾರತದ ವಿನಾಶದ ಬಗ್ಗೆ ಹಾರ್ವರ್ಡ್ ಸ್ಟಡಿ ಆಗುತ್ತದೆ ಅಂತಿದ್ದರು. ಆದರೆ ಇದೀಗ ಹಾರ್ವರ್ಡ್ ಸೇರಿದಂತೆ ದೊಡ್ಡ ದೊಡ್ಡ ವಿವಿಗಳೆಲ್ಲಾ ಕಾಂಗ್ರೆಸ್‌ನ ಪತನ ಮತ್ತು ಅದಕ್ಕೆ ಕಾರಣರಾದವರ ವಿರುದ್ಧ ಅಧ್ಯಯನ ಶುರು ಮಾಡಲಿವೆ ಎಂದು ಕಾಂಗ್ರೆಸ್ ವಿರುದ್ಧ ಹಾಸ್ಯವಾಡಿದರು.

ಟಾಪ್–5 ವಾಗ್ದಾಳಿ:

1. 2004 ರಿಂದ 2014 ರವರೆಗಿನ ದಶಕದ ಯುಪಿಎ ಆಡಳಿತದಲ್ಲಿ ಕಂಡದ್ದು ಹಗರಣ, ಹಣದುಬ್ಬರ, ಉಗ್ರರ ಅಟ್ಟಹಾಸ ಮಾತ್ರ.
2. ಅವರ ಆಡಳಿತ 'ನಷ್ಟದ ದಶಕ' ಈಗಿನದು 'ಭಾರತದ ದಶಕ' ಅವರು ಅಧಿಕಾರದಲ್ಲೂ, ವಿಪಕ್ಷವಾಗಿಯೂ ವಿಫಲರಾದರು.
3. ತಮಗೆ ಹಿನ್ನಡೆ ಆದರೆ ಸೇನಾಪಡೆ, ತನಿಖಾ ಸಂಸ್ಥೆಗಳು, ಚುನಾವಣಾ ಆಯೋಗ, ಕೋರ್ಟ್‌ಗಳನ್ನೂ ದೂರುತ್ತವೆ ವಿಪಕ್ಷಗಳು
4. ತಮ್ಮನ್ನೂ ಒಗ್ಗೂಗಡಿಸಿದ್ದಕ್ಕಾಗಿ ವಿಪಕ್ಷಗಳು ಇ.ಡಿ.ಗೆ ಧನ್ಯವಾದ ಹೇಳಬೇಕು. ಮತದಾರರಿಗೆ ಆಗದ್ದು, ಇ.ಡಿ.ಯಿಂದ ಆಯಿತು.
5. ಕೋವಿಡ್‌ನಿಂದ ಭಾರತದ ವಿನಾಶ ಬಗ್ಗೆ ಹಾರ್ವರ್ಡ್ ಸ್ಟಡಿ ಆಗುತ್ತದೆ ಅಂತಿದ್ದರು. ಆದದ್ದು ಕಾಂಗ್ರೆಸ್ ಪತನದ ಅಧ್ಯಯನ

ಟಾಪ್–5 ಸಮರ್ಥನೆ:

1. ಕೋವಿಡ್ ಸೇರಿದಂತೆ ಅನೇಕ ಗಂಡಾಂತರಗಳನ್ನು ಭಾರತ ದಿಟ್ಟವಾಗಿ ಎದುರಿಸಿದೆ. ಇದಕ್ಕೆ ಕಾರಣ, ಸ್ಥಿರ ನಿರ್ಣಾಯಕ ಸರ್ಕಾರ.
2. ಯುದ್ಧ, ಸಾಂಕ್ರಾಮಿಕದಿಂದಾಗಿ ಅನೇಕ ದೇಶಗಳು ತತ್ತರಿಸಿರುವಾಗ ಭಾರತ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾಗಿ ನಿಂತಿದೆ.
3. ಇಡೀ ವಿಶ್ವಭಾರತವನ್ನು ಭರವಸೆಯಾಗಿ ನೋಡುತ್ತಿದೆ. ಹತಾಶರಾದ ಕೆಲವರಿಗೆ 140 ಕೋಟಿ ಜನರ ಯಶಸ್ಸನ್ನು ಸಹಿಸಲಾಗುತ್ತಿಲ್ಲ.
4. 9 ವರ್ಷದಲ್ಲಿ ಏನೇನಾಗಿದೆ ಗೊತ್ತಾ? 70 ಏರ್ ಪೋರ್ಟ್ ಆಗಿವೆ, ರೈಲು ಸಮಯಕ್ಕೆ ಬರ್ತಿದೆ, ರೂ.10ಕ್ಕೆ 1 ಜಿಬಿ ಇಂಟರ್ನೆಟ್ ಸಿಗ್ತಿದೆ.
5. ನಿತ್ಯ ಹಿಂಸಾಚಾರ ಆಗ್ತಿದ್ದ ಕಾಶ್ಮೀರಕ್ಕೆ ಇತ್ತಿಚೆಗೆ ಕೆಲವರು(ರಾಹುಲ್) ಹೋಗಿದ್ದರು. ಅವರಿಗೆ ಅಲ್ಲಿ ಯಾವುದೇ ಸಮಸ್ಯೆ ಆಗಲಿಲ್ಲ.

ಆಧಾರ: ಕನ್ನಡ ಪ್ರಭ, ದಿನಾಂಕ:09.02.2023.

6. ಖರ್ಗೆ–ಧನಕರ್ ಮಾತಿನ ಸಮರ

ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕು ಎಂದು ವಿರೋಧ ಪಕ್ಷಗಳು ಬಿಗಿಪಟ್ಟು ಹಿಡಿದಿದ್ದರಿಂದ ರಾಜ್ಯಸಭೆಯಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಯಿತು.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ಮಾತನಾಡಿದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, 'ಉದ್ಯಮಿಯೊಬ್ಬರ ಸಂಪತ್ತು ಹೆಚ್ಚಲು ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಹೊಂದಿರುವ ಗೆಳೆತನ ಕಾರಣವೇ' ಎಂದು ಪ್ರಶ್ನಿಸಿದರು.

ಇದು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಸದನದ ನಾಯಕ ಪೀಯೂಷ್ ಗೋಯಲ್ ಹಾಗೂ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಖರ್ಗೆ ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಮೋದಿಯವರು ಮೌನವಾಗಿ ಕುಳಿತಿದ್ದರು.

ವಿದೇಶಿ ಸಂಸ್ಥೆಯೊಂದರ ವರದಿಯ ಆಧಾರದಲ್ಲಿ ದೇಶ ವಿರೋಧಿ ಹೇಳಿಕೆಗಳನ್ನು ನೀಡಲು ಸದನವನ್ನು ವೇದಿಕೆಯಾಗಿ ಬಳಸಿಕೊಳ್ಳಬಾರದು ಎಂದು ಸಭಾಪತಿ ಜಗದೀಪ್ ಧನಕರ್ ಅವರು ಸೂಚಿಸಿದರು. ಇದರಿಂದ ಕೆರಳಿದ ವಿರೋಧ ಪಕ್ಷಗಳ ಸದಸ್ಯರ ಬಿಜೆಪಿಯವರ ದೇಶಪ್ರೇಮವನ್ನು ಪ್ರಶ್ನಿಸಿದರು.

'ನಾ ಖಾವುಂಗಾ. ನಾ ಖಾನೆದೂಂಗಾ' ಎಂದು ಮೋದಿ ಅವರು 2014ರಲ್ಲಿ ಹೇಳಿದ್ದರು. ಇದು ಪೊಳ್ಳು ಭರವಸೆಯೇ. ಮೋದಿ ಅವರ ಆಪ್ತ ಸ್ನೇಹಿತನ ಸಂಪತ್ತು 13 ಪಟ್ಟು ಹೆಚ್ಚಿದೆ. 2019ರಲ್ಲಿ ರೂ. 1 ಲಕ್ಷ ಕೋಟಿಯಷ್ಟಿದ್ದ ಸಂಪತ್ತು ರೂ.12 ಲಕ್ಷ ಕೋಟಿಗೆ ಏರಿದ್ದು ಹೇಗೆ? ಎರಡು ವರ್ಷದಲ್ಲಿ ಅದ್ಯಾವ ಪವಾಡ ನಡೆಯಿತು. ಇದು ಗೆಳೆತನದ ಫಲವೇ' ಎಂದು ಅದಾನಿ ಹೆಸರು ಪ್ರಸ್ತಾಪಿಸಿದೆ ಖರ್ಗೆ ಕುಟುಕಿದರು.

ಆಗ ಮಧ್ಯಪ್ರವೇಶಿಸಿದ ಸಭಾಪತಿ, 'ಭಾಷಣದ ವೇಳೆ ಆಧಾರ ರಹಿತವಾಗಿ ಆರೋಪ ಮಾಡಬಾರದು' ಎಂದು ತಾಕೀತು ಮಾಡಿದರು. ಮೋದಿ ಅವರ ಮೇಲಿನ ಆರೋಪ ಸಾಬೀತು ಪಡಿಸಲು ಅಗತ್ಯ ವಿರುವ ದಾಖಲೆಗಳನ್ನು ಸದನಕ್ಕೆ ಸಲ್ಲಿಸಿ ಎಂದೂ ಸೂಚಿಸಿದರು.

'ಸದನದಲ್ಲಿ ಏನೇ ಮಾತನಾಡಿದರೂ ಅದು ದೇಶದ ಹಿತಾಸಕ್ತಿಗೆ ಸಂಬಂಧಿಸಿದ್ದಾಗಿರಬೇಕು. ಅವು ವಿಶ್ವಾಸಾರ್ಹತೆಯಿಂದ ಕೂಡಿರಬೇಕು' ಎಂದು ಹೇಳಿದರು.

'ನಾನು ಸತ್ಯ ಹೇಳಲು ಹೊರಟರೆ ಅದು ದೇಶ ವಿರೋಧಿ ಹೇಳಿಕೆಯಾಗುತ್ತದೆ. ನಾನು ದೇಶ ವಿರೋಧಿಯಲ್ಲ. ನಿಮಗಿಂತಲೂ ದೊಡ್ಡ ದೇಶಭಕ್ತ. ಜೊತೆಗೆ ಭೂಮಿಪುತ್ರ. ನನ್ನ ಭಾವನೆಗಳನ್ನು ಹತ್ತಿಕ್ಕಲು ಪ್ರಯತ್ನಿಸಬೇಡಿ. ದೇಶವನ್ನು ಲೂಟಿ ಹೊಡೆಯುತ್ತಿರುವ ನೀವು ನನ್ನನ್ನು ದೇಶ ವಿರೋಧಿ ಎಂದು ಕರೆಯುತ್ತಿದ್ದೀರಾ' ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು. 'ಕೋಮು ಗಲಭೆಗಳಿಂದಾಗಿ ಭಾರತದ ವರ್ಚಸ್ಸಿಗೆ ಕುಂದುಂಟಾಗುತ್ತಿದೆ. ಯಾವ ಮುಖ ಇಟ್ಟುಕೊಂಡು ನಾನು ವಿದೇಶಗಳಿಗೆ ಹೋಗಲಿ.

ರಾಜಧರ್ಮವು ಪಾಲನೆಯಾಗುತ್ತಿಲ್ಲ ಎಂದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಅಹಮದಾಬಾದ್‌ನಲ್ಲಿ ಹೇಳಿದ್ದರು' ಎಂದ ಖರ್ಗೆ ಸ್ಮರಿಸಿದರು. ಆಗ ಸದನದಲ್ಲಿ ಕೋಲಾಹಲ ಸೃಷ್ಟಿಯಾಯಿತು.

ವಾಜಪೇಯಿಯವರ ಹೇಳಿಕೆ ಪ್ರಕಟಿಸಿದ್ದ ದಿನಪತ್ರಿಕೆಯೊಂದನ್ನು ಖರ್ಗೆ ಅವರು ಸದನದಲ್ಲಿ ಪ್ರದರ್ಶಿಸಿದರು. ಆದರೆ ಸಭಾಪತಿ ಅದನ್ನು ಒಪ್ಪಲಿಲ್ಲ. 'ದಿನಪತ್ರಿಕೆಗಳಲ್ಲಿ ಪ್ರಕಟವಾದ ವರದಿಯು ದಾಖಲೆಗೆ ಪರ್ಯಾಯವಲ್ಲ. ನೀವು ಏನು ಹೇಳುತ್ತಿದ್ದಿರೋ ಅದನ್ನು ದೃಢೀಕರಿಸಬೇಕು' ಎಂದು ಖರ್ಗೆ ಅವರಿಗೆ ಮತ್ತೊಮ್ಮೆ ಸೂಚಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:09.02.2023.

7. ಮೋದಿ ನೇತೃತ್ವದಲ್ಲಿ ಪರಂಪರೆಯ ಪುನರುತ್ಥಾನ

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯ ಪುನರುತ್ಥಾನವಾಗುತ್ತಿದೆ. ಈ ಬದಲಾವಣೆಗಳು ಭಾರತೀಯರಿಗೆ ಆಶ್ಚರ್ಯ ಮೂಡಿಸಿದ್ದು ಮಾತ್ರವಲ್ಲ ಗರಿಮೆಯನ್ನೂ ಹೆಚ್ಚಿಸಿವೆ ಎಂದು ಧರ್ಮಸ್ಥಳ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಪ್ರಶಂಸಿಸಿದ್ದಾರೆ.

ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ನೀಡುತ್ತಿರುವ ಪ್ರೋತ್ಸಾಹ ಮಹತ್ತರವಾದದ್ದು ಅಂಥ ಕಾರ್ಯಗಳನ್ನು ಕಂಡು ಬಹಳ ಸಂತಸವಾಗಿದೆ ಎಂದಿದ್ದಾರೆ. ಇದೇ ವೇಳೆ, ತಾವು ಕಾಶಿಗೆ ಭೇಟಿ ನೀಡಿದ್ದ ವಿಚಾರವನ್ನು ಭಾಷಣದಲ್ಲಿ ಪ್ರಸ್ತಾಪಿಸಿದ ಅವರು, 'ಈ ಹಿಂದೆಯೂ ಕಾಶಿಗೆ ತೆರಳಿದ್ದೇ. ಆದರೆ, ಈ ಬಾರಿಯ ಬದಲಾವಣೆಗಳು ನನ್ನ ಕಣ್ಣನ್ನು ನಾನೇ ನಂಬಲಾಗದಂತೆ ಮಾಡಿದೆ. ಧರ್ಮಸ್ಥಳದಲ್ಲಿನ ಅಭಿವೃದ್ಧಿಗಳಿಗೆ ಹೋಲಿಕೆಯಾಗುವಂಥ ಸಾಕಷ್ಟು ಬದಲಾವಣೆಗಳನ್ನು ನಾನು ಕಾಶಿಯಲ್ಲಿ ಗಮನಿಸಿದೆ. ಕೇದಾರನಾಥ, ಮಹಾಕಾಲ ಮಹಾಲೋಕ ಕ್ಷೇತ್ರಗಳಲ್ಲಿನ ಅಭಿವೃದ್ಧಿಯ ಬದಲಾವಣೆಗಳು ನಮ್ಮ ಪರಂಪರೆಯನ್ನು ನಿರ್ಲಕ್ಷ್ಯಿಸಲಾಗಿಲ್ಲ ಎನ್ನುವ ಸಂದೇಶವನ್ನು ಮತ್ತೆ ಪುನರುಚ್ಚರಿಸುವುದರ ಜೊತೆಗೆ ಅಲ್ಲಿನ ಬದಲಾವಣೆಗಳು ದೇಶದ ಆಶ್ಚರ್ಯ ಮಾತ್ರವಲ್ಲ ಹೆಮ್ಮೆಯನ್ನು ಮೂಡಿಸಿವೆ ಎಂದು ಹೇಳಿದ್ದಾರೆ.

ಯುವಜನರ ಹೆಮ್ಮೆ: ನಮ್ಮ ದೇಶದ ಯುವಜನತೆ ಇಂದು ಆಧುನಿಕತೆಗೆ ಒಗ್ಗಿಕೊಂಡಿದ್ದರೂ, ನಮ್ಮ ಪರಂಪರೆ ಹಾಗೂ ಆಧ್ಯಾತ್ಮದ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಧಾರ್ಮಿಕ ಕ್ಷೇತ್ರಗಳಲ್ಲಿನ ಇಂಥ ಬದಲಾವಣೆ ಯುವಜನರ ಮನಸ್ಸಿನಲ್ಲಿ ಗೌರವವನ್ನು ಹೆಚ್ಚಿಸುತ್ತದೆ. ಸರ್ಕಾರ ಧಾರ್ಮಿಕ ಹಾಗೂ ಐತಿಹಾಸಿಕ ಕ್ಷೇತ್ರಗಳ ಅಭಿವೃದ್ಧಿಗೆ ನೀಡುತ್ತಿರುವ ಕೊಡುಗೆ ಶ್ಲಾಘನೀಯ ಮತ್ತು ಅತ್ಯಗತ್ಯ ಎಂದು ತಿಳಿಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:10.02.2023.

8. ನೆಹರೂ ಉಪನಾಮ ಏಕೆ ಬಳಸಲ್ಲ

'ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಶ್ರೇಷ್ಠ ಆಡಳಿತಗಾರರಾಗಿದ್ದೇ ಆದಲ್ಲಿ ಅವರ ವಂಶಸ್ಥರು ತಮ್ಮ ಹೆಸರಿನ ಜೊತೆ ಅವರ ಉಪನಾಮವನ್ನು ಏಕೆ ಬಳಸುತ್ತಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಶ್ನಿಸಿದ್ದಾರೆ. ಆ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಕುಟುಕಿದ್ದಾರೆ.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ರಾಜ್ಯಸಭೆಯಲ್ಲಿ ಉತ್ತರ ನೀಡಿದ ಅವರು, ಕಾಂಗ್ರೆಸ್ ಹಾಗೂ ಇತರೆ ವಿರೋಧ ಪಕ್ಷಗಳ ಮೇಲೆ ಮತ್ತೊಮ್ಮೆ ಹರಿಹಾಯ್ದರು.

ಸ್ವಾತಂತ್ರ್ಯಾನಂತರದಲ್ಲಿ ಈ ದೇಶ ಕಟ್ಟುವುದಕ್ಕಾಗಿ ನೆಹರೂ ಅವರು ಅನೇಕ ಕೊಡುಗೆಗಳನ್ನೂ ನೀಡಿದ್ದಾರೆ ಆದರೆ ಬಿಜೆಪಿಯವರು ಅದನ್ನು ಕಡೆಗಣಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಸಂಸದರು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೋದಿ 'ನೆಹರು ಅಷ್ಟೊಂದು ಶ್ರೇಷ್ಠ ಆಡಳಿಗಾರರಾಗಿದ್ದೇ ಅದಲ್ಲಿ ಅವರ ವಂಶಸ್ಥರು ಏಕೆ ಅವರ ಉಪನಾಮ ಬಳಸುತ್ತಿಲ್ಲ ಎಂದು ತಿರುಗೇಟು ನೀಡಿದರು. ಇದು ವಿರೋಧ ಪಕ್ಷದ ಸಂಸದರನ್ನು ಕೆರಳಿಸಿತು. ಭೀತ್ತಿ ಪತ್ರ ಹಿಡದಿದ್ದ ಕೆಲವರು ಸಭಾಪತಿ ಪೀಠದ ಮುಂಭಾಗಕ್ಕೆ ತೆರಳಿ ಪ್ರಧಾನಿ ವಿರುದ್ಧ ಘೋಷಣೆಗಳನ್ನೂ ಕೂಗಿದರು. ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಗದ್ದಲದ ನಡುವೆಯೂ ಮಾತು ಮುಂದುವರಿಸಿದ ಮೋದಿ, 'ನೀವು ಎಷ್ಟು ಕೆಸರು ಎರಚುತ್ತೀರೋ (ಆರೋಪ) ಅಷ್ಟು ದೊಡ್ಡದಾಗಿ ಕಮಲ ಅರಳುತ್ತದೆ' ಎಂದು ವಿರೋಧ ಪಕ್ಷಗಳ ಸಂಸದರನ್ನು ಛೇಡಿಸಿದರು. ಎದೆ ತಟ್ಟಿಕೊಳ್ಳುತ್ತಲೇ, 'ನಾನು ಈ ದೇಶಕ್ಕಾಗಿ ಬದುಕುತ್ತಿದ್ದೇನೆ. ಈ ದೇಶಕ್ಕಾಗಿ ಏನನ್ನಾದರು ಮಾಡಬೇಕೆಂದು ಬಯಸುತ್ತಿದ್ದೇನೆ. ಇದನ್ನು ವಿರೋಧ ಪಕ್ಷಗಳು ಸಹಿಸಿಕೊಳ್ಳುತ್ತಿಲ್ಲ. ತಮ್ಮ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ರಾಜಕೀಯ ನಾಟಕಗಳನ್ನು ಆಡುತ್ತಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು.

'ನಾನೊಬ್ಬನೇ ಎಲ್ಲರನ್ನೂ ಎದುರಿಸುತ್ತಿದ್ದೇನೆ. ಎಲ್ಲರನ್ನೂ ಮೀರಿಸುತ್ತಿದ್ದೇನೆ. ಅದನ್ನು ಇಡೀ ದೇಶವೇ ನೋಡುತ್ತಿದೆ' ಎಂದು ಹೇಳಿದಾಗ ವಿರೋಧ ಪಕ್ಷಗಳ ಸದಸ್ಯರು 'ಮೋದಿ–ಅದಾನಿ ಭಾಯ್ ಭಾಯ್; ದೇಶ್ ಬೇಚ್ ಕೆ ಖಾಯಿ ಮಲಾಯ್' (ಮೋದಿ–ಅದಾನಿ ಸಹೋದರರು, ದೇಶ ಮಾರಿ ಕೆನೆ ಉಂಡರು) ಎಂದು ಗೇಲಿ ಮಾಡಿದರು. ಇದರಿಂದ ವಿಚಲಿತರಾದ ಮೋದಿ, 'ನನ್ನನ್ನು ಏಕಾಂಗಿಯಾಗಿ ಎದುರಿಸುವುದಕ್ಕೆ ವಿರೋಧ ಪಕ್ಷಗಳಿಗೆ ಧೈರ್ಯವಿಲ್ಲ' ಎಂದರು.

'ಕಾಂಗ್ರೆಸ್ ಪಕ್ಷ ದೇಶದ ಸಮಸ್ಯೆಗಳನ್ನು ಪರಿಹರಿಸುವ ವಿಚಾರದಲ್ಲಿ ಸಾಂಕೇತಿಕ ದೋರಣೆಗಳನ್ನಷ್ಟೇ ಅನುಸರಿಸಿತ್ತು. ಆ ಪಕ್ಷ ತನ್ನ ರಾಜಕೀಯ ಹಿತಾಸಕ್ತಿ ಬಗ್ಗೆ ಯೋಚಿಸುತ್ತಿತ್ತೇ ಹೊರತು ದೇಶದ ಅಭಿವೃದ್ಧಿಯ ಕುರಿತಲ್ಲ. ಸಾಂಕೇತಿಕ ಧೋರಣೆಗಳಲ್ಲಿ ನಮಗೆ ನಂಬಿಕೆ ಇಲ್ಲ. ದೇಶ ಮುನ್ನಡೆಸುವ ವಿಚಾರದಲ್ಲಿ ನಾವು ಪರಿಶ್ರಮದ ಹಾದಿ ಆಯ್ದುಕೊಂಡಿದ್ದೇವೆ' ಎಂದರು.

'ರಾಜ್ಯಗಳ ಹಕ್ಕು ಕಸಿದಿದ್ದ ಕಾಂಗ್ರೆಸ್': 'ಕಾಂಗ್ರೆಸ್ ಪಕ್ಷವು ಸಂವಿಧಾನದ 356ನೇ ವಿಧಿಯನ್ನು ದುರ್ಬಳಕೆ ಮಾಡಿಕೊಂಡು 90 ಬಾರಿ ಚುನಾಯಿತ ಸರ್ಕಾರಗಳನ್ನು ವಜಾಗೊಳಿಸಿತ್ತು. ಆ ಮೂಲಕ ರಾಜ್ಯಗಳು ಹಾಗೂ ಪ್ರಾದೇಶಿಕ ಪಕ್ಷಗಳ ಹಕ್ಕು ಕಸಿದಿತ್ತು. ಇಂದಿರಾಗಾಂಧಿ ಒಬ್ಬರೇ 50 ಬಾರಿ ಸರ್ಕಾರಗಳನ್ನು ವಜಾ ಮಾಡಿದ್ದರು' ಎಂದು ಮೋದಿ ಆರೋಪಿಸಿದರು.

'ಈ ದೇಶ ಯಾರೋಬ್ಬರ ಸ್ವತ್ತಲ್ಲ. ನಮ್ಮ ನೀತಿಗಳು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತವೆ. ಈಗ ಇಲ್ಲಿ ಕುಳಿತಿದ್ದಾರಲ್ಲ (ಕಾಂಗ್ರೆಸ್) ಇವರ ಮುಖವಾಡವನ್ನು ನಾನು ಕಳಚಲು ಬಯಸುತ್ತೇನೆ' ಎಂದು ಹರಿಹಾಯ್ದದರು.

'ಕೇರಳದಲ್ಲಿನ ಎಡಪಕ್ಷ, ಶರದ್ ಪವಾರ್ ನೇತೃತ್ವದ ಮಹಾರಾಷ್ಟ್ರ ಸರ್ಕಾರ ಹಾಗೂ ಎಂಜಿಆರ್ ಮುಂದಾಳತ್ವದ ತಮಿಳುನಾಡು ಸರ್ಕಾರಗಳನ್ನು ಕಾಂಗ್ರೆಸ್ ವಜಾಗೊಳಿಸಿತ್ತು. ಎನ್‌ಟಿಆರ್ ಅವರು ಚಿಕಿತ್ಸೆಗಾಗಿ ಅಮೆರಿಕಕ್ಕೆ ತೆರಳಿದ್ದಾಗ ಅವರ ಸರ್ಕಾರ ವಜಾಗೊಳಿಸಲಾಗಿತ್ತು. ಈ ಪಕ್ಷಗಳ ಸಂಸದರು ಇಂದು ಕಾಂಗ್ರೆಸ್ ಸಂಸದರ ಜೊತೆಯೇ ಕುಳಿತಿದ್ದಾರೆ. ಈ ಹಿಂದೆ ಹಲವು ಪಾಪಗಳನ್ನು ಮಾಡಿರುವ ಕಾಂಗ್ರೆಸ್ ಈಗ ದೇಶದ ದಾರಿ ತಪ್ಪಿಸಲು ಮುಂದಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನಿಮ್ಮ ರಾಜಕೀಯ ಹಿತಾಸಕ್ತಿಗಾಗಿ ಉಚಿತ ಕೊಡುಗೆಗಳನ್ನು ಪ್ರಕಟಿಸಲು ಹೋಗಬೇಡಿ. ಹಳೆ ಪಿಂಚಣಿ ವ್ಯವಸ್ಥೆಯಂತಹ ಯೋಜನೆಗಳನ್ನು ಮರು ಜಾರಿಗೊಳಿಸಬೇಡಿ. ಇಂತಹ ಪಾಪಗಳ ಮೂಲಕ ಮುಂದಿನ ಪೀಳಿಗೆಯನ್ನು ಸಂಕಷ್ಟಕ್ಕೆ ದೂಡಬೇಡಿ ಎಂದು ರಾಜ್ಯಗಳಿಗೆ ಎಚ್ಚರಿಸಿದರು.

ಧನಕರ್ ವಿರುದ್ಧ ಕಾಂಗ್ರೆಸ್ ಕಿಡಿ: ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾಡಿದ್ದ ಭಾಷಣದ ಕೆಲ ಭಾಗಗಳನ್ನು ಕಡತದಿಂದ ತೆಗೆದುಹಾಕಿರುವ ಸಭಾಪತಿ ಜಗದೀಪ್ ಧನಕರ್ ಅವರ ನಿಲುವನ್ನು ಕಾಂಗ್ರೆಸ್ ಸದಸ್ಯರು ಖಂಡಿಸಿದ್ದಾರೆ.

ರಾಜ್ಯಸಭೆ ಕಲಾಪ ಆರಂಭವಾಗುತ್ತಿದ್ದಂತೆ ಎದ್ದುನಿಂತ ಕಾಂಗ್ರೆಸ್ ಸದಸ್ಯರು ಸಭಾಪತಿಯವರ ನಿರ್ಧಾರವನ್ನು ಪ್ರಶ್ನಿಸಿದರು. ಖರ್ಗೆ ಅವರು ಅಸಂಸದೀಯ ಪದ ಪ್ರಯೋಗಿಸಿಲ್ಲ. ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಹಾಗೂ ಮನಮೋಹನ್ ಸಿಂಗ್ ಅವರು ಈ ಹಿಂದೆ

ಆಡಿದ್ದ ಮಾತುಗಳನ್ನೇ ಖರ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ ಎಂದು ಪ್ರತಿಪಾದಿಸಿದರು. ವಿರೋಧ ಪಕ್ಷದವರ ಈ ವಾದವನ್ನು ಧನಕರ್ ತಳ್ಳಿಹಾಕಿದರು.

'ನಾನು ಅಸಂಸದೀಯ ಪದ ಅಥವಾ ಭಾಷೆ ಪ್ರಯೋಗಿಸಿಲ್ಲ. ಹೀಗಿದ್ದರು ಕೆಲ ಪದಗಳನ್ನೂ ಕೈ ಬಿಟ್ಟಿದ್ದೀರಿ. ನೀವು ಅವುಗಳನ್ನು ತಪ್ಪಾಗಿ ಅರ್ಥೈಸಿದ್ದೀರಿ ಎಂದು ನಾನು ಹೇಳುವುದಿಲ್ಲ. ನಿಮಗೆ ಏನಾದರೂ ಅನುಮಾನಗಳಿದ್ದರೆ ನನ್ನ ಬಳಿ ಸ್ಪಷ್ಟನೆ ಕೇಳಬಹುದಿತ್ತು. ಅದನ್ನು ಬಿಟ್ಟು ಭಾಷಣದಲ್ಲಿನ ಒಟ್ಟು ಆರು ಭಾಗಗಳನ್ನು ಕಡತದಿಂದ ತೆಗೆದುಹಾಕಿದ್ದೀರಿ' ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

'ವಾಜಪೇಯಿ ಅವರು ಆಗಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ಕುರಿತು ಮಾತನಾಡುವಾಗ ಸದನದಲ್ಲಿ ಬಳಸಿದ್ದ ಪದಗಳನ್ನೇ ನಾನೂ ಬಳಸಿದ್ದೆ. ವಾಜಪೇಯಿ ಅವರ ಪದಗಳು ಈಗಲೂ ಕಡತದಲ್ಲಿವೆ. ಬೇಕಿದ್ದರೆ ಪರಿಶೀಲಿಸಿ' ಎಂದು ಹೇಳಿದರು.

'ಮುಖ್ಯ ಸಚೇತಕ ಜೈರಾಮ್ ರಮೇಶ್ ಸೇರಿದಂತೆ ಪಕ್ಷದ ಸದಸ್ಯರು ಯಾವುದಾದರೂ ವಿಷಯ ಪ್ರಸ್ತಾಪಿಸಲು ಪ್ರಯತ್ನಿಸಿದರೆ ಅದಕ್ಕೆ ಅಡ್ಡಿಪಡಿಸುತ್ತೀರಿ. ಇದು ಸರಿಯಲ್ಲ. ನೀವು ಕುಳಿತುಕೊಳ್ಳಿ ಎಂದೆಲ್ಲಾ ಹೇಳುತ್ತೀರಿ. ಜೈರಾಮ್ ರಮೇಶ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದವರು. ಅವರು ಹಿಂದಿ, ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಬಲ್ಲವರು. ಅವರಿಗೆ ಸಂಸದೀಯ ಭಾಷೆಯ ಅರಿವೂ ಇದೆ. ಹೀಗಿದ್ದರೂ ನೀವೂ ಅವರ ಮಾತಿಗೆ ಅಡ್ಡಿಸುತ್ತಿದ್ದೀರಿ. ಇದು ಸರಿಯಲ್ಲ' ಎಂದು ಸಭಾಪತಿಯವರ ವಿರುದ್ಧ ಕಿಡಿಕಾರಿದರು.

ನನ್ನ ಬೆಂಬಲಕ್ಕೆ ನಿಂತವರಿಗೆ ಮಾತನಾಡಲು ಅವಕಾಶವನ್ನೇ ನೀಡುತ್ತಿಲ್ಲ ಎಂದು ಖರ್ಗೆ ಹೇಳಿದಾಗ ಎಲ್ಲರನ್ನೂ ನಿಯಂತ್ರಿಸುವ ಅಧಿಕಾರ ಸಭಾಪತಿಗೆ ಇದೆ ಎಂದು ಧನಕರ್ ಪ್ರತ್ಯುತ್ತರ ನೀಡಿದರು. ಈ ಧೋರಣೆ ಸರಿಯಲ್ಲ ಎಂದು ಖರ್ಗೆ ಮಾರುತ್ತರ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ್ದ ಜೈರಾಮ್ ರಮೇಶ್, 'ಖರ್ಗೆ ಅವರು ಸಂಸದೀಯ ಪದ ಹಾಗೂ ಭಾಷೆಯನ್ನೇ ಪ್ರಯೋಗಿಸಿದ್ದಾರೆ. ಅವುಗಳನ್ನು ಕಡತದಿಂದ ತೆಗೆದು ಹಾಕಿದರೆ ಸದನದಲ್ಲಿ ಮಾತನಾಡಿ ಏನು ಪ್ರಯೋಜನ? ಇದು ತಪ್ಪು. ಅದನ್ನು ನಾವು ಒಪ್ಪುವುದಿಲ್ಲ' ಎಂದಿದ್ದರು.

ಆಗ ಮಧ್ಯಪ್ರವೇಶಿಸಿದ್ದ ಧನಕರ್, 'ಒಪ್ಪಲು ಸಾಧ್ಯವಿಲ್ಲ ಎಂದರೆ ಏನರ್ಥ? ನಿಮ್ಮ ಮಾತು ಕೇಳಿ ನನಗೆ ಆಶ್ಚರ್ಯವಾಗಿದೆ' ಎಂದು ಹೇಳಿದ್ದರು.

ಧನಕರ್ ಅವರಿಗೆ ಖರ್ಗೆ ಬರೆದಿರುವ ಪತ್ರದ ಮುಖ್ಯಾಂಶಗಳು:

- ವಿರೋಧ ಪಕ್ಷಗಳ ಸಂಸದರು ಸಂಸತ್ತಿನಲ್ಲಿ ಯಾವುದೇ ವಿಚಾರ ಪ್ರಸ್ತಾಪಿಸುವ ಮುನ್ನ ತನಿಖೆ ಕೈಗೊಂಡು, ಸೂಕ್ತ ಸಾಕ್ಷ್ಯಾಧಾರಗಳನ್ನು ಕಲೆಹಾಕಿಕೊಂಡು ಬರಬೇಕೆಂದು ತಾಕೀತು ಮಾಡುವುದು ಆಡಳಿತ ವ್ಯವಸ್ಥೆ ಬುಡಮೇಲು ಮಾಡವ ಪ್ರಯತ್ನವಾಗಲಿದೆ.
- ಸದನದ ಯಾವುದೇ ನಿರ್ದೇಶನ ಅಥವಾ ನಿಯಮದ ಮೂಲಕ ಸಂಸದರಿಗೆ ಸಂವಿಧಾನದತ್ತವಾಗಿ ನೀಡಿರುವ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸಾಧ್ಯವಿಲ್ಲ.
- ಕಾರ್ಯಂಗದ ಉತ್ತರದಾಯಿತ್ವ ನಿಗದಿಪಡಿಸಲು ಇರುವ ವೇದಿಕೆಯೇ ಸಂಸತ್ತು. ಸರ್ಕಾರದ ಯಾವುದೇ ನೀತಿಗಳು ಹಾಗೂ ನಿರ್ಧಾರಗಳನ್ನು ಟೀಕಿಸುವುದನ್ನು ಯಾವುದೇ ಸಂಸದನ ವಿರುದ್ಧ ಆರೋಪ ಎಂದು ಭಾವಿಸಬಾರದು.
- ಸರ್ಕಾರದ ವಿರುದ್ಧದ ಟೀಕೆಯನ್ನು ಸದನದ ಘನತೆಯೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:10.02.2023.

9. Inconvenient words and expunction in Parliament

The Chair ordering the deletion-or expunction- from legislative records of words or remarks made during the proceedings of the House by one or several of its legislators is familar enough. But the proceedings of the recently concluded leg of the Budget session had the Opposition accuse Lok Sabha Chairman Jagdeep Dhankhar of rank partisanship for ordering the expunging of Congress leaders Rahul Gandhi and Mallikarjun Kharge's allegations made in the context of investment research firm Hindenburg Research's report on the Adani Group. The controversy has cast a shadow on the rights of an MP to raise issues of public importance involving members of the executive.

The Opposition complained that Birla and Dhankhar ordered the expunction of Rahul Gandhi's 18 remarks and Kharge's eight, including a poem from the records of Lok Sabha and Rajya Sabha, respectively. However, none of Prime Minister Narendra Modi's remarks during his chest-thumping speech, which the Opposition thought to be derogatory were expunged. "The MP directly insults me. He asks why is your surname Gandhi and not Nehru. But his words are not taken off the record. But it does not matter because the truth always comes out," Rahul Gandhi said in Wayanad last week.

According to the rules of parliamentary procedure, the Lok Sabha Speaker and the Rajya Sabha Chairman have discretionary powers to expunge legislators remarks that they consider improper, unparliamentary and accusatory. On February 8, Dhanakhar expressed displeasure with Kharge's reference to the PM and a conglomerate in his speech during the motion of thanks on the President's address. The Rajya Sabha Chairman asked Kharge to authenticate his claims with documents. Kharge shot off a letter a day later, arguing that Parliament is a platform to hold the Executive accountable. He said any direction or rule of the House could not subvert the constitutional gurantee of the freedom of speech mandated for MPs through Article 105 of the Constitution.

"It would be an inversion of the system of governance if Opposition members re expected to carry out the complete investigation, gather evidence and then raise the matter on the floor of the House," Kharge also the Congress president said. The arrangement, he said is that the Opposition MP raises issues on the basis of inputs from the media, reports in the public domain or even confidential personal information. "The member, after of the House to such issues, and it is incumbent upon the government to investigate the matter and take appropriate action in consonance with the law of the land," he said.

Former Lok Sabha Secretary General PDT Achary says the Chair expunging unparliamentary undignified words and remarks is more a norm than the exception, but the recent events in Parliament are slightly different. The ruling party argued that the Opposition MPs, such as Rahul Gandhi did not support their allegations against the PM with evidence and their statements should therefore be expunged. According to Achary no House rules only

lay down the procedure to be followed so that the Speaker or the government are not taken by surprise.

According to House rules, MPs need to give advance concerned- the minister whose department is to look into such allegations-if they plan to make allegations that could be construed as defamatory or incriminatory. For example, the Speaker and the Minister of Corporate Affairs should be given notice if there is an allegation relate to links between an MP and an industrial conglomerate. So, when the MP makes these allegations the minister can present the facts to the government on the issue. “So both the version will be available to the House. That is the end of that no expunction is needed,” Achary says.

However, if an MP were to accuse a minister of being a “liar”, that is an unparliamentary word that the Chair will order to be expunged. With House rules not specifying defamation, legislatures rely on section 499 of the Indian Penal Code and its second exception. The second exception states that “it is not defamation to express in good faith any opinion” regarding the conduct of a public servant in the discharge of his public functions. According to Achary an MP does not need to submit an advance notice in such instances, as was the case when Opposition MPs flagged the Hindenburg report in their speeches on the motion of thanks.

Records for posterity: With the live telecast of parliamentary proceedings on sundry television channels and the expunged remarks remaining available on difficult-to-monitor social media channels, some might consider the ragmarole of ordering the the expunction obsolete. “But as some of us MPs have discovered over the last few years, legislative records stay for posterity, comprise reference material for historians and need to be purged of inconvenient truths,” an MP said.

In February 2017 CPI(M) General Secretary Sitaram Yechury, a Rajya Sabha MP at the time alleged that some words from his speech made during a discussion on the motion of thanks were edited out of the ‘verbatim record’ of the day’s proceedings on the Rajya Sabha website. According to Yechury the missing words were ‘deception’ disruption, ‘diversion’ and ‘diabolic agenda’.

At the time of Yechury’s speech none from the government protested and neither did the Chair object to these four words he had used to describe the government’s conduct. According to Yechury the missing words were included in the transcript after he lodged an official complaint. But the episode raised questions about the integrity of parliamentary records. “Why were only the words critical of the ruling party removed ? Who ordered the removal when the Chair hadn’t” Yechury asked.

In March 2016 during a discussion on the Aadhaar Bill in the Rajya Sabha, Congress MP Jairam Ramesh disputed then finance minister Arun Jaitely’s claim that two Bills in the 1980s were categorised by the then Congress governments as ‘Money Bills’. Jaitely’s response had come in the context of the Opposition contesting the government’s claim that

the Aadhaar Bill was a ‘Money Bill’ and can, therefore only be passed by the Lok Sabha. As Jaitely asserted the Juvenile Justice Bill of 1986 and the African Development Bank Bill of 1983 were classified as ‘Money Bills’.

“When I heard the finance minister make that claim, I thought that cannot be true. But Mr.Jaitely is never wrong on facts, and I respect him for that, so I decided to check. I spent a few days in the Parliment library going through the records. And then, I went to the Rajya Sabha secretariat to establish the truth. And now I can conclusive say that those two Bills, which the finance minister claimed had been passed as Money Bills, were not Money Bills. I have the confirmation of the Rajya Sabha secretariat,” Ramesh said. Jaitely, however argued that the information was available on the Lok Sabha website.

Eventually Ramesh agreed that the information was indeed available on the Lok Sabha website and that the finance minister had not intentionally misled the House. However the episode raised questions about the veracity of information available on the parliamentary websites.

At present the parties are taking a stand depending on which part of the aisle they stand in. The latest episode concerning the Adani group has brought to fore the issue of expunction and hopefully, it could lead to a more robust system that reflects democratic traditions.

Courtesy: Deccan Herald, Dated: 19.02.2023

10. Rajya Sabha panel seeks explanation from 13 MPs

The Privileges Committee of the Rajya Sabha, headed by Deputy Chairman Harivansh, sought an explanation from 13 Opposition members, including suspended Congress member Rajni Patil for disorderly conduct during the first half of the Budget Session. Ms.Patil was suspended for shooting a video of the House proceedings on her phone.

On February 20, the Rajya Sabha Secretariat named Syed Nasir Hussain, Shaktisinh Gohil, Imran Pratapgarhi, L.Hanumanthaiah, Kumar Ketkar, Jebi Mather, Ranjeet Ranjan, Phulo Devi Netam and Naranbhai, J.Rathwa for the Congress and Sanjay Singh, Sandeep Kumar Guptha and Sushil Kumar Gupta of the AAP for violating the rules of the House and obstructing the proceedings, compelling the Chair to repeatedly adjourn the sitting.

The Secretariat also informed that Mr.Sanjay Singh’s conduct would also be investigated for “repeated submission of identical notices under Rule 267”.

Courtesy: The Hindu, Dated: 28.02.2023

11. ಸಂಸದರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಇಲ್ಲ : ಸ್ಪೀಕರ್

'ಸಂಸತ್ತಿನ ಕೆಳಮನೆಯಲ್ಲಿ ಎಲ್ಲ ಸಂಸದರು ಅಭಿವ್ಯಕ್ತಿ ಸ್ವಾತಂತ್ರ್ಯ ಅನುಭವಿಸುತ್ತಿದ್ದಾರೆ' ಎಂದು ಹೇಳಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬ್ರಿಟನ್ ಪ್ರವಾಸದಲ್ಲಿ ನೀಡಿದ್ದ 'ಪ್ರತಿಪಕ್ಷಗಳ ಸಂಸದರು ಮಾತನಾಡುವಾಗ ಮೈಕ್‌ಗಳು ಸ್ಥಗಿತವಾಗುತ್ತವೆ' ಎಂಬ ಹೇಳಿಕೆಗೆ ಅಂತರರಾಷ್ಟ್ರೀಯ ವೇದಿಕೆಯಲ್ಲಿ ತಿರುಗೇಟು ನೀಡಿದ್ದಾರೆ.

ಬಹರೇನ್‌ನ ಮನಾಮಾದಲ್ಲಿ 'ಶಾಂತಿಯುತ ಸಹಬಾಳ್ವೆ ಮತ್ತು ಎಲ್ಲಾ ಸಮಾಜಗಳನ್ನು ಒಳಗೊಳ್ಳುವಿಕೆ ಉತ್ತೇಜಿಸುವುದು' ಕುರಿತು ಅವರು ಮಾತನಾಡಿದರು.

'ಎಲ್ಲ ಸಂಸದರು ಲೋಕಸಭೆಯಲ್ಲಿ ತಮ್ಮ ಅಭಿಪ್ರಾಯ ಮತ್ತು ಆಲೋಚನೆಗಳನ್ನು ಹಂಚಿಕೊಳ್ಳುವ ಮುಕ್ತ ಸ್ವಾತಂತ್ರ್ಯ ಅನುಭವಿಸುತ್ತಿದ್ದಾರೆ. ಜನರ ಆಶೋತ್ತರಗಳನ್ನು ಚುನಾಯಿತ ಪ್ರತಿನಿಧಿಗಳ ಮೂಲಕ ಅಭಿವ್ಯಕ್ತಿಗೊಳಿಸುವ ಬಹು ಪಕ್ಷಗಳ ವ್ಯವಸ್ಥೆ ನಮ್ಮದು. ಸಂಸತ್ತಿನಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಂಸದರಿಗೆ ಯಾವುದೇ ಅಡೆತಡೆಯಿಲ್ಲದ ಹಕ್ಕುಗಳಿವೆ' ಎಂದರು. ಅದರೆ ಅವರು ಎಲ್ಲಿಯೂ ರಾಹುಲ್ ಗಾಂಧಿ ಹೆಸರನ್ನು ಉಲ್ಲೇಖಿಸಲಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:12.03.2023.

12. ಸಮಿತಿಗಳಿಗೆ ಧನಕರ್ ಆಪ್ತ ಸಿಬ್ಬಂದಿ ನೇಮಕ: ಅಧಿಕ ಪ್ರಸಂಗದ ನಿರ್ಧಾರ

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ತಮ್ಮ ಆಪ್ತ ಸಿಬ್ಬಂದಿಯ ಪೈಕಿ ಎಂಟು ಮಂದಿಯನ್ನು ಸಂಸತ್ತಿನ ವಿವಿಧ ಸಮಿತಿಗಳಿಗೆ ಮತ್ತು ರಾಜ್ಯ ಸಭೆಯ ಅಧೀನದಲ್ಲಿ ಬರುವ ಇಲಾಖಾ ಸಂಬಂಧಿ ಸಮಿತಿಗಳಿಗೆ ನೇಮಕ ಮಾಡಿದ್ದಕ್ಕೆ ಮೌಲಿಕವಾದ ಯಾವ ಕಾರಣವೂ ಇಲ್ಲ. ರಾಜ್ಯಸಭೆಯ ಸದಸ್ಯರೇ ಇರುವ 20 ಸಮಿತಿಗಳಿವೆ ಅದರಲ್ಲಿ 12 ಸ್ಥಾಯಿ ಸಮಿತಿಗಳು ಹಾಗೂ ಇಲಾಖೆಗಳಿಗೆ ಸಂಬಂಧಿಸಿದ ಎಂಟು ಸಮಿತಿಗಳು ಇವೆ. ರಾಜ್ಯಸಭಾ ಸಚಿವಾಲಯವು ಅಧಿಕಾರಗಳನ್ನು ಈ ಸಮಿತಿಗಳಿಗೆ ನಿಯೋಜಿಸಿ ಕಳದ ವಾರ ಆದೇಶ ಹೊರಡಿಸಿದೆ. ಇದು ತಕ್ಷಣದಿಂದಲೇ ಜಾರಿಗೆ ಬಂದಿದೆ ಮತ್ತು ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ ಎಂದು ಹೇಳಿದೆ. ಸಮಿತಿಗಳ ಕೆಲಸದಲ್ಲಿ ನೆರವಾಗುವುದು ಈ ಅಧಿಕಾರಿಗಳ ಹೊಣೆ. ಸಮಿತಿಗಳ ಕೆಲಸದಲ್ಲಿ ಗೋಪ್ಯ ಸ್ವರೂಪದ ಸಭೆಗಳೂ ಸೇರಿವೆ ಈಗಾಗಲೇ ಇರುವ ಅಧಿಕಾರಿಗಳ ಜೊತೆಗೆ ಹೆಚ್ಚುವರಿಯಾಗಿ ನಿಯೋಜಿಸಲಾಗಿರುವ ಅಧಿಕಾರಿಗಳು ಸೇರಿಕೊಳ್ಳುತ್ತಾರೆ. ಆಯಾ ಸಮಿತಿಗಳಿಗೆ ಇವರು ನೆರವು ನೀಡಲಿದ್ದಾರೆ ಎಂದೂ ಹೇಳಲಾಗಿದೆ. ಸಮಿತಿಗಳಿಗೆ ಸಂಶೋಧನಾ ಮಾಹಿತಿಯನ್ನು ಒದಗಿಸಲು ಈ ಅಧಿಕಾರಿಗಳು ನೆರವಾಗಲಿದ್ದಾರೆ. ರಾಜ್ಯ ಸಭೆಯ ವಿವಿಧ ವಿಭಾಗಗಳಲ್ಲಿ ಈ ಅಧಿಕಾರಿಗಳು ಕೆಲಸ ಮಾಡಿದ್ದಾರೆ. ಹಾಗಾಗಿ ಅವರ ಅನುಭವದ ಲಾಭವೂ ಸಮಿತಿಗಳಿಗೆ ದೊರೆಯಲಿದೆ ಎಂದು ಹೇಳಲಾಗಿದೆ. ಆದರೆ, ಈ ನಿರ್ಧಾರಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಮಸೂದೆಗಳು ಸಂಸತ್ತಿನಲ್ಲಿ ಅಂಗೀಕಾರವಾಗುವ ಮುನ್ನ ಅವುಗಳನ್ನು ಪರಿಶೀಲನೆಗೆ ಒಳಪಡಿಸುವಂತಹ ಮಹತ್ವದ ಪಾತ್ರವನ್ನು ಸಮಿತಿಗಳು ವಹಿಸುತ್ತವೆ. ಈಗ ಇರುವ ವ್ಯಾಖ್ಯೆ ಮತ್ತು ಪದ್ಧತಿ ಪ್ರಕಾರ, ರಾಜ್ಯ ಸಭೆಯ ಸದಸ್ಯರು ಮಾತ್ರ ಈ ಸಮಿತಿಗಳ ಸದಸ್ಯರಾಗಬಹುದು. ರಾಜ್ಯ ಸಭೆಯ ಸಿಬ್ಬಂದಿಯು ಸದಸ್ಯರಿಗೆ ನೆರವಾಗಬಹುದು. ಲೋಕಸಭೆಯ ಸ್ಪೀಕರ್ ಮತ್ತು ರಾಜ್ಯ ಸಭೆಯ ಸಭಾಪತಿಯ ಆಪ್ತ ಸಿಬ್ಬಂದಿಯನ್ನು ಸಂಸತ್ ಸಚಿವಾಲಯದ ಸಿಬ್ಬಂದಿ ಎಂದು ಪರಿಗಣಿಸಲಾಗುವುದಿಲ್ಲ. ಹಾಗಾಗಿ ಈ ಸಮಿತಿಗಳಲ್ಲಿ ಅವರಿಗೆ ಯಾವ ಪಾತ್ರವೂ ಇರುವುದಿಲ್ಲ. ಹಾಗೇಯೇ ಇಂತಹ ನೇಮಕಗಳನ್ನು ಮಾಡುವ ಅಧಿಕಾರವನ್ನು ಸ್ಪೀಕರ್ ಅಥವಾ ಸಭಾಪತಿಗೆ ನೀಡುವ ಯಾವ ನಿಯಮವೂ ಇಲ್ಲ ಅದಲ್ಲದೆ, ಹೆಚ್ಚಿನ ಸಿಬ್ಬಂದಿ ಬೇಕು ಎಂದು ಯಾವುದೇ ಸಮಿತಿಯು ಬೇಡಿಕೆಯನ್ನೂ ಮುಂದಿಟ್ಟಿಲ್ಲ. ಈವರೆಗೆ ರಾಜ್ಯಸಭೆಯ ಸಭಾಪತಿ ಆಗಿದ್ದ ಯಾರೂ ತಮ್ಮ ಆಪ್ತ ಸಿಬ್ಬಂದಿಯನ್ನು

ಸಮಿತಿಗಳಿಗೆ ನಿಯೋಜಿಸಿರಲಿಲ್ಲ. ಇಂತಹ ಸಮಿತಿಗಳು ಕೆಲವೊಮ್ಮೆ ಅತ್ಯಂತ ಸೂಕ್ಷ್ಮ ವಿಚಾರಗಳ ಕುರಿತು ಸಮಾಲೋಚನೆ ನಡೆಸುತ್ತವೆ. ಸಭಾಪತಿಯ ಆಪ್ತ ಸಿಬ್ಬಂದಿಯು ಇಂತಹ ಸಮಿತಿಗಳಲ್ಲಿ ಇದ್ದರೆ, ಅದು ಗೋಪ್ಯತೆಯಲ್ಲಿ ರಾಜಿ ಮಾಡಿಕೊಂಡಂತೆ ಆಗುತ್ತದೆ. ಸಮಾಲೋಚನೆಯ ಆಧಾರದಲ್ಲಿ ಈ ನೇಮಕದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. 'ಸಂಸದರಿಗೆ ನೇರವಾಗುವುದಕ್ಕಾಗಿ ಜ್ಞಾನವನ್ನು ಹೊಂದಿರುವ ವ್ಯಕ್ತಿಗಳನ್ನು ನೇಮಿಸಲಾಗಿದೆ' ಎಂದು ಧನಕರ್ ಅವರು ವಿವರಣೆ ಕೊಟ್ಟಿದ್ದಾರೆ. ಅವರಲ್ಲಿ ಕೆಲವರು ಐಎಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳೂ ಇದ್ದಾರೆ. ಸಮಿತಿಗಳಿಗೆ ಹೆಚ್ಚು ಕೆಲಸ ಮಾಡಲು ನೆರವಾಗುವ ಉದ್ದೇಶದಿಂದ ಈ ನೇಮಕ ಮಾಡಲಾಗಿದೆ ಎಂದು ಧನಕರ್ ಹೇಳಿದ್ದಾರೆ. ಸಮಾಲೋಚನೆ ನಡೆಸಿ ನೇಮಕ ಮಾಡಲಾಗಿದೆ ಎಂಬುದನ್ನು ವಿರೋಧ ಪಕ್ಷಗಳು ಅಲ್ಲಗಳೆದಿವೆ. ಸ್ಥಾಯಿ ಸಮಿತಿಗಳ ಸಂರಚನೆಯನ್ನೇ ಬದಲಾಯಿಸುವುದು ಧನ್‌ಕರ್ ಅವರ ನಿರ್ಧಾರದ ಉದ್ದೇಶ ಇದ್ದಂತಿದೆ; ಇದು ಸಂಸತ್ತಿನ ಸ್ಥಾಪಿತ ಪ್ರಕ್ರಿಯೆಗಳ ಉಲ್ಲಂಘನೆ ಎಂದು ವಿರೋಧ ಪಕ್ಷಗಳು ಹೇಳಿವೆ.

ದೇಶದಲ್ಲಿ ಸಂಸದೀಯ ಸಮಿತಿಗಳ ವ್ಯವಸ್ಥೆಯನ್ನು ಸ್ಥಾಪಿಸಿದ್ದು ಮಹತ್ವದ್ದಾಗಿದೆ. ಸದನದಲ್ಲಿ ಮಂಡನೆಯಾದ ಹಲವು ಮಸೂದೆಗಳನ್ನು ಇಂತಹ ಸಮಿತಿಗಳ ಪರಿಶೀಲನೆಗೆ ಒಪ್ಪಿಸಲಾಗಿದೆ. ಮಸೂದೆಯೊಂದರ ಎಲ್ಲ ಆಯಾಮಗಳನ್ನು ಚರ್ಚಿಸಲು ಸದನಕ್ಕೆ ವಿವಿಧ ಕಾರಣಗಳಿಂದಾಗಿ ಸಮಯ ದೊರೆಯುವುದಿಲ್ಲ. ಹಾಗಾಗಿ, ಸಂಸತ್ ಸ್ಥಾಯಿ ಸಮಿತಿಗಳಿಗೆ ಮಸೂದೆಗಳನ್ನು ಒಪ್ಪಿಸುವುದು ಬಹಳ ಮುಖ್ಯ. ಸ್ಥಾಪಿತವಾದ ವ್ಯವಸ್ಥೆಯನ್ನು ಬದಲಾಯಿಸುವ ನಿರ್ಧಾರ ಕೈಗೊಳ್ಳುವಾಗ ಸಮಾಲೋಚನೆ ಮತ್ತು ಸಹಮತ ಅತ್ಯಗತ್ಯ ಇಲ್ಲದೇ ಹೋದರೆ ಅದು ತಿರುಗುಬಾಣ ಆಗುವುದರಲ್ಲಿ ಅನುಮಾನ ಇಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:13.03.2023.

13. ರಾಹುಲ್ ಕ್ಷಮೆಯಾಚನೆಗೆ ಪಟ್ಟು

ಭಾರತದ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಳೆದವಾರ ಬ್ರಿಟನ್‌ನಲ್ಲಿ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಕ್ಷಮೆ ಕೇಳಬೇಕೆಂಬ ಸರ್ಕಾರದ ಒತ್ತಾಯ ಹಾಗೂ ಆಡಳಿತ–ವಿರೋಧ ಪಕ್ಷದ ಸದಸ್ಯರ ವಾಗ್ವಾದ, ಕೋಲಾಹಲದ ಹಿನ್ನೆಲೆಯಲ್ಲಿ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಗದ್ದಲ ಉಂಟಾಗಿ ಉಭಯ ಸದನಗಳ ಕಲಾಪವನ್ನು ಮೊದಲು ಮಧ್ಯಾಹ್ನದವರೆಗೆ ನಂತರ ದಿನದ ಮಟ್ಟಿಗೆ ಮುಂದೂಡಲಾಯಿತು.

ರಾಹುಲ್ ಗಾಂಧಿ ಕ್ಷಮೇ ಕೋರಬೇಕು ಎಂದು ಆಡಳಿತ ಪಕ್ಷದ ಸದಸ್ಯರು ಮತ್ತು ಅದಾನಿ ಸಮೂಹದ ವಿರುದ್ಧ ಅಮೆರಿಕದ ಹಿಂಡೆನಬರ್ಗ್ ರೀಸರ್ಚ್ ವರದಿ ಕುರಿತು ಜಂಟಿ ಸಂಸದೀಯ ಸಮಿತಿ (ಜೆಪಿಸಿ)ತನಿಖೆಗೆ ಆಗ್ರಹಿಸಿದ ಪ್ರತಿಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿದರು. ಎರಡೂ ಕಡೆ ನಿರಂತರ ಘೋಷಣೆಗಳ ನಡುವೆಯೇ ಸ್ಥಾಯೀ ಸಮಿತಿ ವರದಿಗಳನ್ನು ಮಂಡಿಸಲಾಯಿತು. ಇದಾದ ನಂತರ ಅನೇಕ ಸಂಸದರು ಸ್ಪೀಕರ್ ಅವರ ಮುಂದಿನ ಅಂಗಳಕ್ಕೆ ನುಗ್ಗಿ ಗದ್ದಲ ಎಬ್ಬಿಸಿದರು.

ಇದಕ್ಕೂ ಮೊದಲು ಲೋಕಸಭೆ ಕಲಾಪದ ಬೆಳಗಿನ ಅವಧಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭಾರತೀಯ ಪ್ರಜಾಪ್ರಭುತ್ವದ ಬಗ್ಗೆ ಹೇಳಿಕೆಗಳ ಮೂಲಕ ರಾಹುಲ್ ಗಾಂಧಿ ಲಂಡನ್‌ನಲ್ಲಿ ಭಾರತದ ಗೌರವಕ್ಕೆ ಧಕ್ಕೆಯುಂಟು ಮಾಡಲು ಪ್ರಯತ್ನಿಸಿದ್ದಾರೆ. ಸದನವು ರಾಹುಲ್ ಗಾಂಧಿಯವರ ಟೀಕೆಗಳನ್ನು ಖಂಡಿಸಬೇಕು ಮತ್ತು ಕ್ಷಮೆಯಾಚಿಸಲು ಕಾಂಗ್ರೆಸ್ ನಾಯಕನಿಗೆ ನಿರ್ದೇಶನ ನೀಡಬೇಕೆಂದು ಸಿಂಗ್ ಅವರು ಸ್ಪೀಕರ್ ಓಂ ಬಿರ್ಲಾಗೆ ಒತ್ತಾಯಿಸಿದರು. ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಯು ಕ್ರೂರವಾದ ಧಾಳಿಗೆ ತುತ್ತಾಗುತ್ತಿದೆ. ದೇಶದ ಸಂಸ್ಥೆಗಳ ಮೇಲೆ ಪೂರ್ಣ ಪ್ರಮಾಣದ ಧಾಳಿ ನಡೆಯುತ್ತಿದೆ ಎಂದು ರಾಹುಲ್ ಗಾಂಧಿ ಇತ್ತೀಚೆಗೆ ಲಂಡನ್‌ನಲ್ಲಿ ಆರೋಪಿಸಿದ್ದರು.

ಅದಾನಿ ಗ್ರೂಪ್ ಆರೋಪ ಸಂಬಂಧ ಸೆಬಿ ತನಿಖೆ: ಜನವರಿ 24 ಮತ್ತು ಮಾರ್ಚ 1 ರ ನಡುವೆ ಅದಾನಿ ಸಮೂಹದ 9 ಕಂಪನಿಗಳ ಮಾರುಕಟ್ಟೆ ಬಂಡವಾಳದಲ್ಲಿ ಶೇಕಡಾ 60ರಷ್ಟು ಕುಸಿತ

ಕಂಡಿದ್ದು, ಅದಾನಿ ಸಮೂಹದ ವಿರುದ್ಧ ಮಾರುಕಟ್ಟೆ ಆರೋಪಗಳ ಕುರಿತಂತೆ ಸೆಬಿ ತನಿಖೆ ನಡೆಸುತ್ತಿದೆ ಹೊರತು ಸರ್ಕಾರ ಯಾವುದೇ ಸಮಿತಿ ರಚಿಸಿಲ್ಲ ಎಂದು ರಾಜ್ಯಸಭೆಗೆ ತಿಳಿಸಿದೆ. ಅದಾನಿ ಸಮೂಹದ ಕಂಪನಿಗಳಲ್ಲಿನ ಎಲ್‌ಐಸಿಯ ಸಾಲದ ಮಾನ್ಯತೆಯು 2022 ರ ಡಿಸೆಂಬರ್ 31 ರ ಹೊತ್ತಿಗೆ ರೂ.6,347 ಕೋಟಿ ಇದ್ದದ್ದು, ಇದೇ ಮಾರ್ಚ್ 5ರ ಹೊತ್ತಿಗೆ ರೂ.6,183 ಕೋಟಿಗಳಿಗೆ ಇಳಿಕೆಯಾಗಿದೆ ಎಂದು ಹೇಳಿದೆ.

ಪ್ರಸಕ್ತ ವರ್ಷದಲ್ಲಿ ರೂ.1.48 ಲಕ್ಷ ಕೋಟಿ ಹೆಚ್ಚುವರಿ ವೆಚ್ಚ: ಪ್ರಸಕ್ತ ಹಣಕಾಸು ವರ್ಷದಲ್ಲಿ ಹೆಚ್ಚುವರಿಯಾಗಿ ರೂ.1.48 ಲಕ್ಷ ಕೋಟಿ ವೆಚ್ಚವಾಗಿದ್ದು, ಇದಕ್ಕೆ ಅಂಗೀಕಾರ ಪಡೆಯುವ ಪ್ರಸ್ತಾವನೆಯನ್ನು ಸರ್ಕಾರ ಸಂಸತ್‌ನಲ್ಲಿ ಮಂಡಿಸಿತು. ರಸಗೊಬ್ಬರದ ಸಬ್ಸಿಡಿಗೆ ರೂ.36,325 ಕೋಟಿ ಪಾವತಿಸಲು ರೂ.36,325 ಕೋಟಿ ಹೆಚ್ಚುವರಿ ಅನುದಾನಕ್ಕೂ ಒಪ್ಪಿಗೆ ಬೇಡಿತು. ಸೇನೆಯ ನಿವೃತ್ತ ಯೋಧರ ಒಂದು ಶ್ರೇಣಿ ಒಂದು ಪಿಂಚಣಿಗಾಗಿ ರೂ.33,718 ಕೋಟಿ ಅನುದಾನಕ್ಕೂ ಬೇಡಿಕೆ ಮಂಡಿಸಿತು. ಚಲಾವಣೆಯಲ್ಲಿರುವ ಕರೆನ್ಸಿಯ ಮೊತ್ತ 2014ರಲ್ಲಿ ಇದ್ದ 13 ಲಕ್ಷ ಕೋಟಿ ರೂಪಾಯಿಯಿಂದ 2022ರ ಮಾರ್ಚ್‌ನಲ್ಲಿ ರೂ.31.33 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದರು.

ರಾಜ್ಯ ಸಭೆಯಲ್ಲೂ ಗದ್ದಲ: ರಕ್ಷಣಾ ಉತ್ಪಾದನೆ ಗುರಿ ರೂ.1.75 ಲಕ್ಷ ಕೋಟಿ : ರಾಹುಲ್ ಹೇಳಿಕೆ ಕುರಿತಂತೆ ಆಡಳಿತಾ ರೂಢ ಬಿಜೆಪಿ ಮತ್ತು ವಿರೋಧ ಪಕ್ಷದ ಸಂಸದರ ನಡುವೆ ಆರೋಪ–ಪ್ರತ್ಯಾರೋಪಗಳು ಮುಂದುವರಿದ ಕಾರಣ ರಾಜ್ಯ ಸಭೆಯ ಕಲಾಪವನ್ನು ಕೂಡ ದಿನದ ಮಟ್ಟಿಗೆ ಮುಂದೂಡಲಾಯಿತು. ಭೋಜನ ಪೂರ್ವದಲ್ಲಿ ಮುಂದೂಡಲ್ಪಟ್ಟ ನಂತರ ಮಧ್ಯಾಹ್ನದ ಕಲಾಪ ಪುನರಾರಂಭವಾದಾಗ, ಸಚಿವ ಪಿಯೂಷ್ ಗೋಯಲ್, 'ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ವಿದೇಶಕ್ಕೆ ಹೋಗಿ ಭಾರತದಲ್ಲಿ ಪ್ರಜಾಪ್ರಭುತ್ವವು ಅಪಾಯದಲ್ಲಿದೆ ಎಂದು ಹೇಳಿ, ದೇಶದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸುವಂತೆ ಅಮೆರಿಕ ಮತ್ತು ಯೂರೋಪ್‌ಗೆ ಕೇಳಿಕೊಂಡಿದ್ದಾರೆ. ಸದನವು ಇಂತಹ ಹೇಳಿಕೆಗಳನ್ನು ಖಂಡಿಸಬೇಕು. ಅವರು ಕ್ಷಮೆಯಾಚಿಸಬೇಕು' ಎಂದರು. ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಸದನದ ಹಿಂದಿನ 2 ರೂಲಿಂಗ್ ಉಲ್ಲೇಖಿಸಿ ಗೋಯಲ್ ಹೇಳಿಕೆಗಳನ್ನು ಆಕ್ಷೇಪಿಸಿದರು. ಅವರ ಟೀಕೆಗಳನ್ನು ಕಡತದಿಂದ ಕಿತ್ತು ಹಾಕುವಂತೆ ಆಗ್ರಹಿಸಿದರು. ಈ ವಿಷಯವಾಗಿ ಆರೋಪ–ಪ್ರತ್ಯಾರೋಪ ಮುಂದುವರೆದಿದ್ದರಿಂದ ಸದನವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ತುರ್ತು ಪರಿಸ್ಥಿತಿ ವೇಳೆ ಮೂಲಭೂತ ಹಕ್ಕುಗಳನ್ನು ತುಳಿದಾಗ ಯಾರು ಅಧಿಕಾರದಲ್ಲಿದ್ದರು? ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅಧ್ಯಕ್ಷತೆ ಸಚಿವ ಸಂಪುಟ ಯಥಾವತ್ತಾಗಿ ಅಂಗೀಕರಿಸಲ್ಪಟ್ಟ ಸುಗ್ರೀವಾಜ್ಞೆಯನ್ನು ಹರಿದು ಅಸಬಂದ್ಧವೆಂದು ರಾಹುಲ್ ಗಾಂಧಿ ಟೀಕಿಸಿದಾಗ ಪ್ರಜಾಪ್ರಭುತ್ವ ಎಲ್ಲಿತ್ತು?

ಪ್ರಲ್ಹಾದ ಜೋಶಿ, ಸಂಸದೀಯ ವ್ಯವಹಾರಗಳ ಸಚಿವ.

2024–25 ರ ವೇಳೆಗೆ ರೂ.35,000 ಕೋಟಿಗಳ ರಕ್ಷಣಾ ರಫ್ತು ಸೇರಿದಂತೆ ರೂ.1,75,000 ಕೋಟಿಗಳ ರಕ್ಷಣಾ ಉತ್ಪಾದನೆ ಸಾಧಿಸುವ ಗುರಿ ನಿಗಧಿಪಡಿಸಲಾಗಿದೆ ಎಂದು ಸರ್ಕಾರವು ರಾಜ್ಯಸಭೆಗೆ ತಿಳಿಸಿತು. ಶೇ.46 ರಷ್ಟಿದ್ದ ವಿದೇಶಗಳಿಂದ ರಕ್ಷಣಾ ಸಲಕರಣೆ, ಆಯುಧಗಳ ಖರೀದಿಯು 2018–19 ರಲ್ಲಿ ಶೇ.36.7 ಕ್ಕೆ ಇಳಿಕೆ ಆಗಿದೆ. ಕಳೆದ ಡಿಸೆಂಬರ್‌ನಲ್ಲೂ ಈ ಅಂಕಿಅಂಶ ಇಳಿಕೆಯ ಹಾದಿಯಲ್ಲೇ ಇದೆ. ಪ್ರಸಕ್ತ ವರ್ಷದಲ್ಲಿ ರೂ.13.399 ಕೋಟಿ ಮೌಲ್ಯದ ರಕ್ಷಣಾ ಸಾಮಗ್ರಿಗಳು, ಶಸ್ತ್ರಾಸ್ತ್ರಗಳು ನಿರ್ಯಾತ ಆಗಿದೆ ಎಂದು ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಹೇಳಿದರು. ಭಾರತಿಯ ಸಶಸ್ತ್ರ ಪಡೆಗಳಿಗೆ ಒದಗಿಸಲು ಉದ್ದೇಶಿಸಲಾಗಿರುವ ಕಲಾಶ್ನಿಕೋವ್ ಎಕೆ–203 ರೈಫಲ್ ಉತ್ತರ ಪ್ರದೇಶದ ಕೋರ್ವಾದಲ್ಲಿ ಭಾರತ–ರಷ್ಯಾ ಜಂಟಿ ಉದ್ಯಮದ ಮೂಲಕ ತಯಾರಾಗುತ್ತಿದ್ದು, ಪರೀಕ್ಷಾ ಹಂತದಲ್ಲಿವೆ ಎಂದರು.

ಆಧಾರ: ವಿಜಯ ವಾಣಿ, ದಿನಾಂಕ:13.03.2023.

14. ಸದನದಲ್ಲಿ ಸಿನಿಮಾ ಸದ್ದು

ಪ್ರತಿಬಾರಿಯೂ ರಾಜಕೀಯ, ಪರಸ್ಪರ ವಾಗ್ಯುದ್ಧ ಕೆಸರೆರಚಾಟಕ್ಕೆ ಸಾಕ್ಷಿಯಾಗುತ್ತಿದ್ದ ಸಂಸತ್‌ನಲ್ಲಿ ಪರಿಸ್ಥಿತಿ ಕೊಂಚ ಭಿನ್ನವಾಗಿತ್ತು. ಸದಸ್ಯರೆಲ್ಲರೂ ಕಲಾಪದಲ್ಲಿ 'ಬಣ್ಣದ ಲೋಕ' ದ ಚರ್ಚೆಯಲ್ಲಿ ಮುಳುಗಿದ್ದು ಕಂಡುಬಂತು.

ದೇಶಕ್ಕೆ ಇದೇ ಮೊದಲ ಬಾರಿಗೆ ಎರಡು ಆಸ್ಕರ್ ಪ್ರಶಸ್ತಿಗಳು ಸಂದಿರುವ ಖುಷಿ ರಾಜ್ಯಸಭೆಯಲ್ಲಿ ಗೊಚರಿಸಿತು. ಆರ್‌ಆರ್‌ಆರ್ ಮತ್ತು ದಿ ಎಲಿಫೆಂಟ್ ವಿಸ್ಪರರ್ಸ್ ಚಿತ್ರಗಳನ್ನು ನಿರ್ಮಿಸಿದವರಿಗೆ ಸಂಸದರು ಒಬ್ಬರಾದ ಮೇಲೆ ಒಬ್ಬರಂತೆ ಅಭಿನಂದಿಸಿದರು. ಅಷ್ಟೇ ಅಲ್ಲ 'ಒಟಿಟಿ ಪ್ಲಾಟ್‌ಫಾರಂ, ಸಿನಿಮಾ ಮಾರುಕಟ್ಟೆ ಸೌತ್ ವರ್ಸಸ್ ಬಾಲಿವುಡ್, ಬಾಯ್ಕಾಟ್ ಸಂಸ್ಕೃತಿ' ಸೇರಿದಂತೆ ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಚಾರಗಳ ಕುರಿತು ಚರ್ಚೆ ನಡೆಯಿತು.

'ಈ ಸಾಧನೆಯೂ ಭಾರತೀಯ ಕಲಾವಿದರ ಅಭೂತಪೂರ್ವ ಪ್ರತಿಭೆ, ಅತ್ಯದ್ಭುತ ಕ್ರಿಯಾಶೀಲತೆ ಬದ್ಧತೆಯನ್ನು ಪ್ರತಿಬಿಂಬಿಸಿದೆ. ಇದು ಭಾರತವು ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿರುವುದರ ಸಂಕೇತವೂ ಹೌದು' ಎಂದು ರಾಜ್ಯ ಸಭಾ ಅಧ್ಯಕ್ಷ ಜಗದೀಪ್ ಧನ್ಕರ್ ಹೇಳಿದರು.

ಸಂಸದೆ ಜಯಾ ಬಚ್ಚನ್ ಮಾತನಾಡಿ, 'ಇದು ಆರಂಭ ಅಷ್ಟೆ ಸಿನಿಮಾದ ಮಾರುಕಟ್ಟೆ ಭಾರತವೇ ಹೊರತು ಅಮೆರಿಕ ಅಲ್ಲ' ಎಂದರು. ರಾಜ್ಯಸಭಾ ಸದಸ್ಯೆ ಪ್ರಿಯಾಂಕ ಚತುರ್ವೇದಿ ಮಾತನಾಡಿ, "ಆಸ್ಕರ್‌ನಲ್ಲಿನ ಈ ಸಾಧನೆ ಬಳಿಕ, ಇನ್ನಾದರು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುವ ಬಾಯ್ಕಾಟ್ ಸಂಸ್ಕೃತಿ (ಸಿನಿಮಾ ಬಹಿಷ್ಕರಿಸುವ ಪದ್ಧತಿ) ಕೊನೆಯಾಗಲಿ' ಎಂದು ಆಶಿಸಿದರು.

ಒಟಿಟಿಗೆ ಮೆಚ್ಚುಗೆ : ಕೆಲವು ಸಂಸದರು, ದೇಶದಲ್ಲಿ ಒಟಿಟಿ ಪ್ಲಾಟ್ ಫಾರಂ ವ್ಯಾಪ್ತಿ ಹೆಚ್ಚಿದ ಕಾರಣ, ಎಲಿಫೆಂಟ್ ವಿಸ್ಪರರ್ಸ್‌ನಂಥ ಚಿತ್ರಗಳಿಗೆ ವೇದಿಕೆ ಸಿಕ್ಕಿದೆ ಎಂದು ಅಭಿಪ್ರಾಯ ಪಟ್ಟರು. ಇನ್ನು ಜಯಾಬಚ್ಚನ್, ಜಾನ್ ಬ್ರಿಟ್ಟಾಸ, ರಾಜೀವ್ ಶುಕ್ಲಾ, ಶಂತನು ಸೇನ್ ಸೇರಿದಂತೆ ಕೆಲ ಸದಸ್ಯರು, ಇದು ಇಡೀ ಭಾರತದ ಗೆಲುವು. ಇಲ್ಲಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂಬ ಮಾತೇ ಬರಬಾರದು ಎಂದರು. ಇದಕ್ಕೂ ಮೊದಲು ಮಾತನಾಡಿದ ಎಂಡಿಎಂಕೆ, ಎಐಎಡಿಎಂಕೆ, ಆಂಧ್ರ ಬಿಜೆಪಿ ನಾಯಕರು, 'ದಕ್ಷಿಣದ ಸಿನಿಮಾಗೆ ಪ್ರಶಸ್ತಿ ಬಂದಿದೆ' ಎಂಬಂತೆ ಮಾತಾಡಿದರು.

2ನೇ ದಿನವೂ ಕೊಚ್ಚಿಹೋದ ಕಲಾಪ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲಂಡನ್‌ನಲ್ಲಿ ಭಾರತದ ಪ್ರಜಾಪ್ರಭುತ್ವದ ಕುರಿತು ನೀಡಿದ ಹೇಳಿಕೆಯು ಸತತ 2ನೇ ದಿನವೂ ಸಂಸತ್ ಕಲಾಪವನ್ನು ವ್ಯರ್ಥಗೊಳಿಸಿತು. ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು 'ರಾಹುಲ್ ಗಾಂಧಿ ಕ್ಷಮೆ ಕೇಳಬೇಕು' ಎಂದು ಘೋಷಣೆ ಕೂಗಿದರೆ, ಪ್ರತಿಪಕ್ಷಗಳ ಸದಸ್ಯರು, 'ಹಿಂದಿನ ಜನ್ಮದಲ್ಲಿ ಏನು ಪಾಪ ಮಾಡಿದ್ದೇನೋ ಗೊತ್ತಿಲ್ಲ ಈ ಜನ್ಮದಲ್ಲಿ ಹಿಂದುಸ್ಥಾನದಲ್ಲಿ ಹುಟ್ಟಿದೆ' ಎಂಬ ಪ್ರಧಾನಿ ಮೋದಿಯವರ ಹೇಳಿಕೆಗಳಿರುವ ಫಲಕಗಳನ್ನು ಹಿಡಿದು ಘೋಷಣೆ ಕೂಗತೊಡಗಿದರು. ಎರಡೂ ಸದನಗಳಲ್ಲಿ ಪರಿಸ್ಥಿತಿ ಹೀಗೆ ಮುಂದುವರಿದ ಕಾರಣ, ಕೊನೆಗೆ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಆಧಾರ: ವಿಜಯವಾಣಿ, ದಿನಾಂಕ:15.03.2023.

15. 2ನೇ ದಿನವೂ ಕಲಾಪ ಹಾಳು

ಭಾರತದಲ್ಲಿ ಪ್ರಜಾಪ್ರಭುತ್ವ ಕಣ್ಮರೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ಈ ಬಗ್ಗೆ ಪ್ರತಿಕ್ರಿಯಿಸಬೇಕೆಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬ್ರಿಟನ್‌ನಲ್ಲಿ ನೀಡಿದ ಹೇಳಿಕೆ ಕುರಿತಂತೆ ಸಂಸತ್ತಿನ ಉಭಯ ಸದನಗಳಲ್ಲಿ ಸತತ ಎರಡನೇ ದಿನವು ಗದ್ದಲ ಮುಂದುವರಿದ ಕಾರಣ ದಿನದ ಮಟ್ಟಿಗೆ ಕಲಾಪಗಳನ್ನು ಮುಂದೂಡಲಾಯಿತು. ಸದನ ಸೇರುತ್ತಿದ್ದಂತೆಯೇ

ಲೋಕಸಭೆಯಲ್ಲಿ ಬಿಜೆಪಿ ಸದಸ್ಯರು ರಾಹುಲ್ ಕ್ಷಮೆ ಯಾಚಿಸುವಂತೆ ಘೋಷಣೆಗಳನ್ನು ಕೂಗಿದರು, ಇದೇ ವೇಳೆ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ವಿದೇಶ ಪ್ರವಾಸದ ಸಂಧರ್ಭದಲ್ಲಿ ಮಾಡಿದ ಭಾಷಣಗಳಲ್ಲಿನ ಉಲ್ಲೇಖಗಳಿರುವ ಭಿತ್ತಿಫಲಕಗಳನ್ನು ಪ್ರದರ್ಶಿಸಿದರು. ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾದ ದೇಶಗಳ ಗುಂಪಾದ ಬ್ರಿಕ್ಸ್‌ನಲ್ಲಿ 'ಐ' ನಾಪತ್ತೆಯಾಗಿದೆ ಎಂದು ಭಿತ್ತಿಫಲಕವೊಂದರಲ್ಲಿ ಬರೆಯಲಾಗಿತ್ತು. 'ಹಿಂದಿನ ಜನ್ಮದಲ್ಲಿ ಏನು ಪಾಪ ಮಾಡಿದ್ದೇನೋ ಗೊತ್ತಿಲ್ಲ, ಈಗ ಭಾರತದಲ್ಲಿ ಹುಟ್ಟಿದ್ದೇನೆ' ಎಂದು 2015ರ ಮೇ ತಿಂಗಳಲ್ಲಿ ಸಿಯೋಲ್‌ನಲ್ಲಿ ಪ್ರಧಾನಿ ಮಾಡಿದ ಭಾಷಣವನ್ನು ಉಲ್ಲೇಖಿಸಿದ ಮತ್ತೊಂದು ಫಲಕವನ್ನು ಕಾಂಗ್ರೆಸ್ ಸದಸ್ಯರೊಬ್ಬರು ಪ್ರದರ್ಶಿಸಿದರು. ಈ ಬಗ್ಗೆ ಪ್ರಧಾನಿ ಮೊದಲು ಕ್ಷಮೆ ಕೋರಲಿ ಎಂದ ಆಗ್ರಹಿಸಿದರು. ಅದಾನಿ ಸಮೂಹ ಕುರಿತು ಹಿಂಡೆನ್ ಬರ್ಗ ರಿಸರ್ಚ್ ಪ್ರಕಟಿಸಿರುವ ವರದಿಯ ವಿವಾದದ ತನಿಖೆಗೆ ಜಂಟಿ ಸಂಸದೀಯ ಸಮಿತಿ (ಜೆಪಿಸಿ)ರಚಿಸಬೇಕೆಂದು ಆಗ್ರಹಿಸಿಯೂ ಗದ್ದಲ ನಡೆಯಿತು. ಪ್ರಶ್ನೋತ್ತರ ಅವಧಿಯ ನಂತರ ನಿಯಮಗಳ ಪ್ರಕಾರ ಪ್ರತಿ ವಿಷಯಕ್ಕೂ ಅವಕಾಶ ನೀಡುತ್ತೇನೆ ಎಂದು ಸ್ಪೀಕರ್ ಓಂ ಬಿರ್ಲಾ ಮಾತನ್ನು ಯಾರೂ ಕೇಳಲಿಲ್ಲ. ಹೀಗಾಗಿ ಸದನ ಮುಂದೂಡಲ್ಪಟ್ಟಿತು. ಗದ್ದಲದ ನಡುವೆಯೇ ಸ್ಥಾಯೀ ಸಮಿತಿ ವರದಿಗಳನ್ನು ಮಂಡಿಸಲಾಯಿತು.

ಟಿಎಂಸಿ ಬೆಂಬಲ: ರಾಹುಲ್ ಗಾಂಧಿಗೆ ಅನಿರೀಕ್ಷಿತ ವಲಯದಿಂದ ಬೆಂಬಲ ದೊರೆತಿದೆ. ಬ್ರಿಟನ್‌ನಲ್ಲಿ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ರಾಹುಲ್ ಭಾರತವನ್ನು ಅವಮಾನಿಸಿಲ್ಲ ಎಂದು ತೃಣಮೂಲ ಕಾಂಗ್ರೆಸ್ ಸಂಸದ ಸೌಗತ ರೇ ಹೇಳಿದ್ದಾರೆ. ರಾಹುಲ್ ಕ್ಷಮೆ ಯಾಚಿಸುವ ಅಗತ್ಯವಿಲ್ಲ. ಅವರು ತಮ್ಮ ಹೇಳಿಕೆ ಮೂಲಕ ದೇಶವನ್ನು ಅವಮಾನಿಸಿದ್ದಾರೆ ಎಂದು ನಾನು ಭಾವಿಸುವುದಿಲ್ಲ' ಎಂದು ಹೇಳಿದ್ದಾರೆ ರಾಹುಲ್‌ಗೆ ಬೆಂಬಲ ವ್ಯಕ್ತಪಡಿಸಿ ವಿರೋಧ ಪಕ್ಷಗಳು ನಡೆಸಿದ್ದ ಜಂಟಿ ಪತ್ರಿಕಾಗೋಷ್ಠಿಯಿಂದ ತೃಣಮೂಲ ಕಾಂಗ್ರೆಸ್ ದೂರ ಉಳಿದಿತ್ತು. ಕಾಂಗ್ರೆಸ್ ಮುಖ್ಯಸ್ಥ ಖರ್ಗೆ ಕರೆ ಇದ್ದ ಪ್ರತಿಪಕ್ಷಗಳ ಸಭೆಯಲ್ಲೂ ಭಾಗವಹಿಸಿರಲಿಲ್ಲ.

ಗೋಯಲ್ ವಿರುದ್ಧ ಹಕ್ಕುಚ್ಯುತಿ ನೋಟಿಸ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕ್ಷಮೆ ಯಾಚಿಸಬೇಕೆಂಬ ಬೇಡಿಕೆ ಹಿನ್ನೆಲೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ಗದ್ದಲ ಮುಂದುವರಿದಿದ್ದರಿಂದ ರಾಜ್ಯ ಸಭೆಯ ಕಲಾಪವನ್ನು ಕೂಡ ದಿನ ಮಟ್ಟಿಗೆ ಮುಂದೂಡಲಾಯಿತು. ಈ ಮಧ್ಯೆ, ಸಚಿವ ಪಿಯೂಷ್ ಗೋಯಲ್ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ನೋಟಿಸ್ ನೀಡಿತು. ಕಲಾಪ ಆರಂಭಗೊಂಡ ತಕ್ಷಣ, ಆಸ್ಕರ್ ಪ್ರಶಸ್ತಿ ವಿಜೇತ ಭಾರತಿಯರನ್ನು ಪಕ್ಷಾತೀತವಾಗಿ ಸದಸ್ಯರೆಲ್ಲರೂ ಅಭಿನಂಧಿಸಿದರು. ಇದಾದ ನಂತರ ರಾಹುಲ್ ಗಾಂಧಿ ಹೇಳಿಕೆ ಕುರಿತ ಗದ್ದಲದ ಹಿನ್ನೆಲೆಯಲ್ಲಿ ಮುಂದೂಡಿದ ನಂತರ ಮೇಲ್ಮನೆಯು ಮಧ್ಯಾಹ್ನ 2 ಗಂಟೆಗೆ ಪುನಃ ಸೇರಿದಾಗ ಸಚಿವ ಮತ್ತು ಸಭಾನಾಯಕ ಪಿಯೂಷ್ ಗೋಯಲ್ ಅವರು, ರಾಹುಲ್ ಗಾಂಧಿ ಅವರು ತಮ್ಮ ಹೇಳಿಕೆಗೆ ಕ್ಷಮೆ ಯಾಚಿಸಬೇಕು ಎಂಬ ಸರ್ಕಾರದ ನಿಲುವನ್ನು ಪುನರುಚ್ಚರಿಸಿದರು. ರಾಹುಲ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಗೋಯಲ್ ಬೇರೆ ಸದನದ ಸದಸ್ಯರು ಮಾಡಿದ ಕೆಲವು ಅವಲೋಕನಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಸತ್ಯಾಂಶ ಇಲ್ಲದೆ ಟೀಕಿಸಿದ್ದಾರೆ. ಉದ್ದೇಶಪೂರ್ವಕವಾಗಿ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಕಾಂಗ್ರೆಸ್‌ಗೆ ಗೋಯುಲ್ ಅವರು ಹಕ್ಕುಚ್ಯುತಿ ನೋಟಿಸ್‌ನಲ್ಲಿ ಆರೋಪಿಸಿದ್ದಾರೆ.

ಸಂಸತ್‌ಗೆ ಸರ್ಕಾರದ ಉತ್ತರ :

- ಕಳೆದ 12 ವರ್ಷಗಳಲ್ಲಿ ಭಾರತದಲ್ಲಿ ನಕ್ಸಲ್ ಹಿಂಸಾಚಾರ ಶೇ.77 ಮತ್ತು ಸಾವನ್ನಪ್ಪಿದವರ ಸಂಖ್ಯೆ ಶೇ.90 ಕಡಿಮೆಯಾಗಿದೆ.
- ಯಾವುದೇ ಹೊಸ ರಾಜ್ಯ ರಚನೆಯ ಪ್ರಸ್ತಾಪ ಈಗ ಪರಿಗಣನೆಯಲ್ಲಿಲ್ಲ.

- ಭಾರತದಲ್ಲಿ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ 2022ರಲ್ಲಿ 14.6 ಲಕ್ಷದಿಂದ 2025 ರಲ್ಲಿ 15.7 ಲಕ್ಷಕ್ಕೆ ಏರಿಕೆಯಾಗುವ ಸಂಭವ ಇದೆ.
- ಅಂಗಾಂಗ ಕಸಿ ಮಾಡಿಸಿಕೊಳ್ಳುವ ರೋಗಿಗಳ ನೋಂದಣಿಗೆ ರಾಜ್ಯದಲ್ಲಿನ ನಿವಾಸಿ ನಿಯಮ ತೆಗೆದುಹಾಕಲಾಗಿದ್ದು, ಯಾವುದೇ ರಾಜ್ಯಕ್ಕೆ ಹೋಗಿ ನೋಂದಾಯಿಸಿಕೊಳ್ಳಬಹುದು.
- ದೇಶದ 63 ಪೊಲೀಸ್ ಠಾಣೆಗಳಲ್ಲಿ ಯಾವುದೇ ವಾಹನವಿಲ್ಲ, 628 ಠಾಣೆಗಳಿಗೆ ದೂರವಾಣಿ ಸಂಪರ್ಕವಿಲ್ಲ, 285 ಠಾಣೆಗಳಲ್ಲಿ ವೈರ್‌ಲೆಸ್ ಸೆಟ್ ಅಥವಾ ಮೊಬೈಲ್ ಫೋನ್ ಇಲ್ಲ.
- 2026–27ಕ್ಕಿಂತ ಮುಂಚಿತವಾಗಿ ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ರೂಪಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.
- ಹಳೆಯ ಪಿಂಚಣಿ ಯೋಜನೆ ಪುನಾರಾರಂಭಿಸಲು ಬಯಸುವ ಐದು ರಾಜ್ಯಗಳು ಸಂಗ್ರಹಿಸಿರುವ ಎನ್‌ಪಿಎಸ್ ನಿಧಿಯ ಮರುಪಾವತಿಗೆ ಪಿಎಫ್‌ಆರ್‌ಡಿಎ ಕಾಯ್ದೆಯಲ್ಲಿ ಯವುದೇ ಅವಕಾಶವಿಲ್ಲ.
- ವಿದೇಶಿ ಎನ್‌ಜಿಒ ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ ಪ್ರಕಟಿಸಿದ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದ ಅಭಿಪ್ರಾಯಗಳು ಮತ್ತು ದೇಶದ ಶ್ರೇಯಾಂಕಗಳಿಗೆ ಸರ್ಕಾರವು ಚಂದಾದಾರರಾಗಿಲ್ಲ ಹಾಗೂ ಇದನ್ನು ಒಪ್ಪುವುದಿಲ್ಲ.

ಆಧಾರ: ವಿಜಯವಾಣಿ, ದಿನಾಂಕ:15.03.2023.

16. Parliamentary panel urges review of NREGA app

The Parliamentary standing committee on rural development has flagged the difficulties beneficiaries of the Mahotma Gandhi National Rural Employment Guarantee Scheme (MGNREGS) are facing with the introduction of the NMMS App and has asked the rural development ministry to review its implementation.

It also noted the reduced fund allocation by the Centre to the scheme. In its report tabled in the Rajya Sabha, it said the allocation for the MGNREGS has been reduced by Rs 29,400 crore for 2023-24 when compared to the revised estimates of 2022-23.

The government pointed out that the MGNREGS is a demand-driven scheme, and that there is “ no dearth of money” if the demand arises for wage employment.

The committee said it understands the need to introduce the NMMS app. However, the “ flip side” is that capturing two real- time photographs in a day hinges upon the availability of smartphones and proper internet connectivity.

It said the MGNREGA beneficiaries belong to extremely deprived sections o f society, belonging to different linguistic milieus.

“ Expecting the MGNREGA workers to be well versed with the functioning and language of the app or for that matter even depending upon a nodal human intervention perhaps adds to their woes,” the committee noted.

It urgeupon the Department of Rural Development of " to review the implementation of attendance app holistically while taking into consideration the ground reality and challenges being faced by MGNREGA workers and come out with an acceptable provision at the earliest."

The Committee said that there is 15.89% hike in the total budgetary allocation of the Department of Rural Development for the financial year 2023-24 and a 172.44% increase in the budget of the Pradhan Mantri Awas Yojana-Gramin while MGNREGA has seen a drop of 17.81% in its budget, the National Social assistance Programme has witnessed a drop of 0.17% while Pradhan Mantri Gram Sadak Yojana's allocation is the same as that of the previous year.

"The role and importance of MGNREGA were visible during the Covid-19 pandemic times when it acted as a ray of hope for the needy in times of distress," the report said.

Will not make it mandatory to consult CM in guv appointmet: Govt

The Narendra Modi government made it clear that it is not planning to amend the Constitution to make it mandatory that Chief ministers are consulted in the appointment fo governors.

It was responding to a query raised by CPM Rajya Sabha MP John Brittas whether the government would consider the recommendation of the Sarkaria Commission that the Governors should be appointed after consultation with the CM of the respective states and whether it would amend Article 155 to incorporate it.

" The government is of the veiw that the practive of consultation with the state chief minister may be followed as a matter of covention, and there does not appear any need to amend Article 155 of the Constitution," MoS for Home Nityanand Rai said in a written response.

Ariticle 155 deals with the appointment of governors and it reads, " the governors and it reads," the governor of a state shall be appointed by the President by warrant under his hand and seal." Responding to the government's stand , Brittas said, "Such an amendment would have made this proposal obligatory. The government , instead , tried to tone down the subject ."

The government's stand comes at a time when several Opposition-ruled states are up in arms against governors.

Centre to introduce bill to empower tri-service commanders in LS:

More than two decades after forming the first tri-service command , the defence ministry introduced a bill in the Lok Sabha to empower the commanding offficers of such units as well as the heads of inter-services training establishments to take disciplinary actions against the officers and personnel serving in the units.

This has not been possible till now because service personnel of the air force, army and navy are governed by the provisions of the Air Force Act, 1950, the Army Act, 1950 and the Navy Act, 1957. only officers of the respective services are empowered to exercise discilinary powers over the service personnel under the respective Service Acts.

The Inter-Service Organisations(Command, Control and Discipline) bill 2023- introduced by the Minister of State for Defence Ajay Bhatt –will seek to bridge this gap because of which taking disciplinary actions in tri-service commands has become a lengthy and time-consuming exercise.

The bill would have a direct impact on the command, control and displine of inter-services organisations like Andaman and Nicobar Command or Defence Space Agency, and joint training establishments like National Defence Academy or National Defence College , according to the Statement of Objects and Reasons in the bill.

The Commander-in –Chief or officer-in –Command of such Inter –services Organisations are not empowered to exercise disciplinary or administrative powers over the personnel belonging to other services.

The first tri-service command, the Andaman and Nicobar Command, was formed in 2001 by the Atal Bihari Vajpayee government as a par of overhauiling of India's higher defence management. This was followed by the Strategic Forces Command two years later.

Courtesy:Indian Express , Dated:16.03.2023.

17. Cong. moves privilege motion against PM

Congress general secretary and Rajya Sabha member K.C Venugopal wrote to Rajya Sabha Chariman Jagdeep Dhankar seeking privilege proceedings against Prime Minister Narendra Modi over his remarks on why former Prime Minister Jawaharlal Nehru's family did not use his surname.

In his notice , Mr. Venugopal mentioned that the comments of the Prime Minsiter were " distasteful, derogatory and defamatory" against Sonia Gandhi and Rahul Gandhi.

The move comes a day after reports that the BJP is exploring the possibility of getting Mr. Gandhi " suspended " if he doesn't apologise for his ' democracy under threat" remarks.

The Prime Minster had made the remarks during his reply to the Motion of Thanks on the President's Address in the Rajya Sabha on february 9 during the first part of the Budget session.

"I hereby give a notice of question of privilege against the Prime Minister of India under Rule 188 of the Rules of Procedure and Conduct of Business in Council of states (Rajya Sabha) for having cast reflections upon members of Parliament during his reply to the Motion of Thanks on the President's Address on February 9, 2023," Mr. Venugopal said

in his notice. The Congress leader, also in his notice , claimed that Mr. Modi's question on why the Gandhis did not use Nehru as a surname is "presposterous" as the Prime Minister knows very well that the daughter does not take the surname of the father.

"Despite knowing that, he dliberately mocked... The tone and tenor of the remark are insinuating and derogatory in nature. This clearly amounts to casting reflections upon Sonia Gandhi and Rahul Gandhi by the Prime Mister , which breaches their privileges and tantamounts to contempt of the House. I seek privilege proceedings against Shri Narendra Modi, Prime Minister of India , for making derogatory , insulting , distasteful and defamatory remarks," the Congress leader said in his notice.

Courtesy: The Hindu, Dated:18.03.2023.

18. ಕೇವಲ 218 ನಿಮಿಷ ಕಲಾಪ

ಸಂಸತ್ ಅಧಿವೇಶನದ ದ್ವಿತೀಯಾರ್ಧ ಆರಂಭವಾಗಿ ಒಂದು ವಾರ ಕಳೆದರೂ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವಿನ ಗುದ್ದಾಟದಿಂದಾಗಿ ಸದನಗಳ ಅಮೂಲ್ಯ ಸಮಯ ವ್ಯರ್ಥವಾಗಿದೆ. ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ಈ ವಾರ ಸುಮರು 3,600 ನಿಮಿಷಗಳ ಕಾಲ ಕಲಾಪ ನಡೆಯಬೇಕಿತ್ತು. ಆದರೆ, ಸಂಸದರ ಗದ್ದಲದಿಂದ ಕಲಾಪಗಳು ಸತತ ಮುಂದೂಡಿಕೆಯಾದ ಕಾರಣ, ಕೇವಲ 218 ನಿಮಿಷಗಳ ಕಾಲ ಮಾತ್ರ ಕಲಾಪ ನಡೆದಿದೆ.

ಅಧಿವೇಶನ ಆರಂಭವಾದಾಗಿನಿಂದಲೂ, ಆಡಳಿತ ಪಕ್ಷ ಬಿಜೆಪಿ 'ಲಂಡನ್‌ನಲ್ಲಿ ರಾಹುಲ್ ಗಾಂಧಿ ನೀಡಿರುವ ಹೇಳಿಕೆಗೆ ಕ್ಷಮೆ ಯಾಚಿಸಬೇಕು' ಎಂದು ಪಟ್ಟು ಹಿಡಿದರೆ, ಪ್ರತಿಪಕ್ಷಗಳು 'ಅದಾನಿ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ ತನಿಖೆಗೆ ಒಪ್ಪಿಸಬೇಕು' ಎಂದು ಒತ್ತಾಯಿಸಿ ಪ್ರತಿಭಟಿಸುತ್ತಲೇ ಇವೆ. ಪರಿಣಾಮ, ಕಲಾಪಗಳ ಅವಧಿ ಸದ್ವಿನಿಯೋಗ ಆಗಿಲ್ಲ ಎರಡೂ ಸದನಗಳಲ್ಲಿ ಕೋಲಾಹಲ ಮುಂದುವರಿದ ಕಾರಣ, ಕಲಾಪ ಮುಂದೂಡಲ್ಪಟ್ಟಿತ್ತು.

ಆರೋಪ–ಪ್ರತ್ಯಾರೋಪ: ಕಲಾಪ ಆರಂಭವಾದ ಸ್ವಲ್ಪ ಹೊತ್ತಲ್ಲೇ ಪ್ರತಿಪಕ್ಷಗಳ ನಾಯಕರು ಪ್ರತಿಭಟಿಸುತ್ತಿದ್ದಾಗ ಲೋಕಸಭೆಯ ಆಡಿಯೋ ಕೆಲ ಹೊತ್ತು ಆಫ್ ಆಗಿತ್ತು. ಇದರ ವಿಡಿಯೋವನ್ನು ಟ್ವಿಟರ್‌ನಲ್ಲಿ ಹಾಕಿದ ಕಾಂಗ್ರೆಸ್, 'ಸರ್ಕಾರದ ವಿರುದ್ಧದ ಪ್ರತಿಭಟನೆಯ ಧ್ವನಿಯನ್ನು ಹತ್ತಿಕ್ಕಲು ಆಡಿಯೋವನ್ನೇ ಮ್ಯೂಟ್ ಮಾಡಲಾಗುತ್ತಿದೆ ಎಂದು ಆರೋಪಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ, 'ತಾಂತ್ರಿಕ ತೊಂದರೆಯಿಂದ ಆಡಿಯೋ ಮ್ಯೂಟ್ ಆಗಿತ್ತೇ ವಿನಾ ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ' ಎಂದು ಹೇಳಿತು.

ಪ್ರಧಾನಿ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ನೋಟೀಸ್: ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಕೆ.ಸಿ.ವೇಣುಗೋಪಾಲ್ ಹಕ್ಕುಚ್ಯುತಿ ನೋಟಿಸ್ ನೀಡಿದ್ದಾರೆ. ದೇಶದ ಮೊದಲ ಪ್ರಧಾನಿ ದಿ.ಜವಾಹರ್ ಲಾಲ್ ನೆಹರೂ ಕುಟುಂಬ ಸದಸ್ಯರು 'ನೆಹರೂ' ಎಂಬ ಹೆಸರನ್ನೂ (ಸರ್‌ನೇಮ್) ಏಕೆ ಬಳಸಲಿಲ್ಲ ಎಂದು ಪ್ರಧಾನಿ ಫೆಬ್ರವರಿ 9 ರಂದು ಸದನದಲ್ಲಿ ಪ್ರಶ್ನಿಸಿದ್ದಕ್ಕಾಗಿ ರಾಜ್ಯಸಭೆ ಸಭಾಪತಿ ಜಗದೀಪ್ ಧನ್ಕರ್ ಅವರ ಮೂಲಕ ನೋಟಿಸ್ ನೀಡಲಾಗಿದೆ. ಪ್ರಧಾನಿಯವರು ತಮ್ಮ ಮಾತಿನಲ್ಲಿ ನೆಹರೂ ಕುಟುಂಬದ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ, ಸಂಸದ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡು ಈ ಮಾತುಗಳನ್ನಾಡಲಾಗಿದೆ ಎಂದೂ ವೇಣುಗೋಪಾಲ್ ಆರೋಪಿಸಿದ್ದಾರೆ.

ಆಗಬೇಕಿದ್ದೆಷ್ಟು, ಆಗಿದ್ದೆಷ್ಟು:

- ಲೋಕಸಭೆಯಲ್ಲಿ ಕಲಾಪ ನಡೆಯಬೇಕಾಗಿದ್ದ ಅವಧಿ–1,800 ನಿಮಿಷ
- ಕಲಾಪ ನಡೆದ ಅವಧಿ–65 ನಿಮಿಷ
- ಶುಕ್ರವಾರ ಕಲಾಪ ನಡೆದಿದ್ದು–21 ನಿ.
- ಗುರುವಾರ ನಡೆದ ಅವಧಿ–2 ನಿಮಿಷ
- ರಾಜ್ಯಸಭೆಯಲ್ಲಿ ಕಲಾಪ ನಡೆಯ ಬೇಕಾಗಿದ್ದ ಅವಧಿ–1,800 ನಿಮಿಷ
- ಕಲಾಪ ನಡೆದ ಅವಧಿ–153 ನಿಮಿಷ
- ಗುರುವಾರ ಕಲಾಪ ನಡೆದ ಅವಧಿ–4 ನಿ.

ಆಧಾರ: ಉದಯವಾಣಿ, ದಿನಾಂಕ:18.03.2023.

19. Disruptions continue in Parliament ; Cong. hits out at mute telecast of LS proceedings

The first week of the second leg of the Budget Session was a washout, as both ruling and Opposition parties hardened their stance, with the audio of the televised proceedings of the Lok Sabha being muted.

Sources in the Lok Sabha secretariat told The Hindu that the audio of the televised proceedings got muted because of a “ technical issue”, but the Opposition members reacted sharply and accused the ruling establishment of stifiling their voices.

Lok Sabha adjourned for the day in 20 minutes, after it convened int he morning amid slogan shouting by both Treasury and Opposition benches.

The ruling side continued to demand an apology from Congress leader Rahul Gandhi for his alleged “ anti-India –India “ remarks that he made in the U.K, while the Opposition reiterated its call for a Joint Parliamentary Committee probe int o the Adani-Hindenburg issue.

Adding to the chours, the Congress members, soon after the House assembled for the day, demanded that Mr. Gandhi, who was present in the House, be allowed to speak. coinciding with their slogans”Rahul ji ko Bolne Do” (Let Mr. Gandhi speak), the audio of Sansad Tv was muted.

On Friday , Congress leader Adhir Ranjan Chowdhury, who met Lok Sabha Speaker Om Birla at his chamber, asserted that there cannot be any break through unless Mr.Gandhi is allowed to speak.

“It is his right to speak and respond to the allegations on the floor of the House,” Mr. Chowdhury said.”How can you break the logjam when the ruling party is resorting to disruptions? “ the Congress MP asked.

Mr. Birla's exhortations to bring the House in order went in vain. "Honourable members, I appeal to you to allow the House to run smoothly. People did not send you here to do this . I will give everyone an opportunity to speak, but the House has to be in order," Mr. Birla said. As protesting members ignored his pleas, the Speaker adjourned the House.

The Congress reacted sharply to the audio of sansad TV being muted. Party's Deputy Leader in Lok Sabha, Gaurav Gogoi, called it "a new low for democracy under Prime Minister Narendra Modi".

Lok Sabha MP Shashi Tharoor tweeted, "The muting of sound on Sansad TV is a new technique. you don't need to switch off individual microphones if you can shut down the transmission of sound to the world!"

Party's general secrtary (communications) Jairam Ramesh, speaking to The Hindu, further elaborated on the point . "Rajya Sabha Chairman Jagdeep Dhankar claimed a few days ago that mics are never switched off in India's Parliament . I had immediately challenged that claim and incurred his displeasure. This morning, mics were indeed switched off in Lok Sabha for more than 15 minutes and there is conclusive evidence for it," he said.

The Rajya Sabha ran for 20 minutes with initial calm while tabling papers and the Standing Commitee reports.

Chairman Dhankhar in formed the House that he had received 11 adjournment notices under Rule 267 (seeking suspension of day's business to discuss important issues) but disallowed those.

The members of th Treasury benches stood up in protest repeating similar slogans as their Lok Sabha Colleagues. Taking up the point of order raised by Mr. Kharge, the Chairman directed Leader of the House Piyush Goyal to authenticate the assertions made by him on March 13 and 14.

Courtesy: The Hindu, Dated:18.03.2023.

20. ಸಂಸತ್ತಿನ ಮೂಲಕ ಸಂವಿಧಾನದ ವಿಕಸನ

ಸಂವಿಧಾನವು ಸಂಸತ್ತಿನ ಮೂಲಕ ವಿಕಸನಗೊಳ್ಳಬೇಕೇ ಹೊರತು ಕಾರ್ಯಾಂಗದ ಮುಖೇನವಲ್ಲ. ಇದರಲ್ಲಿ ಕಾರ್ಯಾಂಗ, ನ್ಯಾಯಾಂಗ ಸೇರಿದಂತೆ ಇತರೆ ಯಾವ ಉನ್ನತ ಸಂಸ್ಥೆಗಳ ಪಾತ್ರವೂ ಇಲ್ಲ' ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ತಮಿಳುನಾಡಿನ ಮಾಜಿ ರಾಜ್ಯಪಾಲ ಪಿ.ಎಸ್.ರಾಮಮೋಹನ್ ರಾವ್ ಅವರ ಜೀವನ ಚರಿತ್ರೆ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಪ್ರಜಾಪ್ರಭುತ್ವ ಸರ್ಕಾರದ ಸ್ಥಿರತೆ, ಸಾಮರಸ್ಯ ಹಾಗೂ ಉತ್ಪಾದಕತೆಯನ್ನು ನಿರ್ಧರಿಸುವುದೇ ಸಂವಿಧಾನದ ಶ್ರೇಷ್ಠತೆ. ಜನಾದೇಶವನ್ನು ಪ್ರತಿಬಿಂಬಿಸುವ ಸಂಸತ್ತು ಈ ಸಂವಿಧಾನದ ಪ್ರಮುಖ ನಿರ್ಮಾತೃ' ಎಂದು ವಿವರಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:20.03.2023.

21. ಮುಗಿಯದ ಸದನ ಕದನ

ಸಂಸತ್ತಿನಲ್ಲಿ ನಡೆಯುತ್ತಿರುವ ಬಜೆಟ್ ಅಧಿವೇಶನದ ಎರಡನೇ ಭಾಗದ ಅಧಿವೇಶನದ ಸತತ ಏಳನೇ ದಿನವೂ ವ್ಯರ್ಥವಾಗಿದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಣ ಸಂಘರ್ಷ ಮುಂದುವರಿದಿದೆ.

ಅದಾನಿ ಪ್ರಕರಣದಲ್ಲಿ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸಬೇಕು ಎಂಬ ಆಗ್ರಹಕ್ಕೆ ಕಿವಿಗೊಡದ ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಪ್ರತಿಪಕ್ಷಗಳು ಪ್ರತಿಭಟನೆಗೆ ವಿನೂತನ ಮಾರ್ಗ ಹಿಡಿದಿವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಉದ್ಯಮಿ ಗೌತಮ್ ಅದಾನಿ ಅವರ ಚಿತ್ರಗಳಿರುವ ಬೃಹತ್ ಗಾತ್ರದ ಬ್ಯಾನರ್ ಅನ್ನು ಸಂಸತ್ತಿನ ಮೊದಲ ಮಹಡಿಯಲ್ಲಿ ಪ್ರದರ್ಶಿಸಿ ಪ್ರತಿ ಪಕ್ಷಗಳು ಆಕ್ರೋಶ ವ್ಯಕ್ತಪಡಿಸಿದವು. ಸಂಸತ್ ಭವನದಲ್ಲಿ ಈ ರೀತಿಯ ದೊಡ್ಡ ಬ್ಯಾನರ್ ನೇತುಹಾಕಿ ಪ್ರತಿಭಟಿಸಿದ್ದು ಇದೇ ಮೊದಲು ಎನ್ನಲಾಗಿದೆ.

ಕಲಾಪ ಆರಂಭವಾಗುವುದಕ್ಕೂ ಮುನ್ನ, ರಾಜ್ಯಸಭೆಯು ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನಡೆದ ಪ್ರತಿಪಕ್ಷಗಳ ಸಭೆಯಲ್ಲಿ 'ವಿನೂತನ' ಪ್ರತಿಭಟನೆಗೆ ಅಂತಿಮ ರೂಪ ನೀಡಲಾಯಿತು.

ಸಂಸತ್ತಿನ ಉಭಯ ಸದನಗಳ ಕಲಾಪವೂ ಮಧ್ಯಾಹ್ನಕ್ಕೆ ಮುಂದೂಡಿಕೆಯಾದ ಬಳಿಕ 17 ಪ್ರತಿಪಕ್ಷಗಳ ಸಂಸದರು ಸಂಸತ್ ಭವನದ ಮೊದಲ ಮಹಡಿಯಲ್ಲಿರುವ ಎಸ್‌ಬಿಐ ಕಚೇರಿ ಎದುರು ಸೇರಿದರು. ಅದಾನಿ ಸಮೂಹಕ್ಕೆ ಸಾಲ ನೀಡಿರುವ ಎಸ್‌ಬಿಐ ಕಚೇರಿ ಎದುರು ಪ್ರತಿಭಟನೆ ನಡೆಸಿದರು. 'ಮೋದಾನಿ', 'ನಮಗೆ ಜೆಪಿಸಿ ಬೇಕು' ಎಂದು ಬರೆಯಲಾಗಿದ್ದ ದೊಡ್ಡ ಬ್ಯಾನರ್ ಪ್ರದರ್ಶಿಸಿದರು. 'ಮೋದಿ ಮತ್ತು ಅದಾನಿ ಅಣ್ಣತಮ್ಮಂದಿರು. ಇಬ್ಬರೂ ಸೇರಿ ದೇಶವನ್ನು ಮಾರುತ್ತಾರೆ' ಎಂಬುದಾಗಿ ಘೋಷಣೆಗಳನ್ನು ಕೂಗಿದರು.

ಕಾಂಗ್ರೆಸ್, ಎಎಪಿ, ಬಿಆರ್‌ಎಸ್, ಡಿಎಂಕೆ, ಸಿಪಿಎಂ, ಸಿಪಿಐ, ಆರ್‌ಜೆಡಿ, ಎನ್‌ಸಿಪಿ ಹಾಗೂ ಎಸ್‌ಪಿ ಸದಸ್ಯರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಇದೇ 13 ರಿಂದ ಆರಂಭವಾದಾಗ ಎರಡನೇ ಹಂತದ ಬಜೆಟ್ ಅಧಿವೇಶನದಲ್ಲಿ ಪ್ರತಿಪಕ್ಷಗಳು ಒಗ್ಗಟ್ಟಾಗಿ ನಡೆಸಿದ ನಾಲ್ಕನೇ ಪ್ರತಿಭಟನೆ ಇದು.

ಸದನ ನಾಯಕರ ಸಭೆಗೆ ಗೈರು: ರಾಜ್ಯ ಸಭೆಯ ಸಭಾಪತಿ ಜಗದೀಪ್ ಧನಕರ್ ಅವರು, ಸಂಸತ್ ಕಲಾಪದ ಬಿಕ್ಕಟ್ಟು ಪರಿಹರಿಸುವ ಕುರಿತಂತೆ ಕರೆದಿದ್ದ ಎರಡು ಸಭೆಗಳಿಗೆ ಪ್ರತಿಪಕ್ಷಗಳು ಹಾಜರಾಗಲಿಲ್ಲ. ಬೆಳಗ್ಗಿನ ಕಲಾಪ ಮುಂದೂಡಿಕೆಯಾದ ಬಳಿಕ ಕರೆದಿದ್ದ ಸದನ ನಾಯಕರ ಸಭೆಗೆ ಪ್ರತಿಪಕ್ಷಗಳು ಗೈರಾಗಿದ್ದವು. ಡಿಎಂಕೆ, ಬಿಆರ್‌ಎಸ್, ಎಎಪಿ ಒಳಗೊಂಡಂತೆ ವಿವಿಧ ಪಕ್ಷಗಳ ಸದನ ನಾಯಕರು ಸಭೆಗೆ ಹಾಜರಾಗದಿರಲು ತೀರ್ಮಾನಿಸಿದ್ದರು. 'ಸರ್ಕಾರವು ಜೆಪಿಸಿ ರಚನೆಗೆ ಸಿದ್ಧವಿಲ್ಲ ಎಂಬುದು ಈ ನಡೆಯಿಂದ ಗೊತ್ತಾಗುತ್ತದೆ. ಕಲಾಪಕ್ಕೆ ಅಡ್ಡಿಪಡಿಸುತ್ತಿರುವ ಸರ್ಕಾರದ ಜೊತೆ ಸಭೆ ನಡೆಸವುದರಲ್ಲಿ ಅರ್ಥವಿಲ್ಲ' ಎಂದು ಪ್ರತಿಪಕ್ಷಗಳು ಹೇಳಿವೆ. ಬಿಜೆಪಿ ವೈಎಸ್‌ಆರ್ ಕಾಂಗ್ರೆಸ್ ಹಾಗೂ ಟಿಡಿಪಿ ಸಭೆಯಲ್ಲಿ ಭಾಗಿಯಾಗಿದ್ದವು ಎಂದು ಧನಕರ್ ಅವರು ಸಭೆಯ ಬಳಿಕ ಟ್ವೀಟ್ ಮಾಡಿದರು. ಸಭೆಗೆ ಹಾಜರಾಗದ ಪ್ರತಿಪಕ್ಷಗಳ ವರ್ತನೆ ಸರಿಯಿಲ್ಲ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು. ಸಭೆಗೂ ಮುನ್ನ ತಮ್ಮನ್ನು ಭೇಟಿಯಾಗಿದ್ದ ಕಾಂಗ್ರೆಸ್ ಮುಖ್ಯ ಸಚೇತಕ ಮತ್ತು ಡಿಎಂಕೆ ಸದನ ನಾಯಕರು ಸಭೆಗೆ ಹಾಜರಾಗುತ್ತಿಲ್ಲ ಎಂಬುದನ್ನು ತಿಳಿಸಿದ್ದರು ಎಂದು ಧನಕರ್ ಹೇಳಿದ್ದಾರೆ.

ಮಧ್ಯಾಹ್ನ 2.30ಕ್ಕೆ ಧನಕರ್ ಅವರು ಕರೆದಿದ್ದ ಮತ್ತೊಂದು ಸಭೆಯಲ್ಲಿ ಪ್ರತಿಪಕ್ಷಗಳಾದ ಎನ್‌ಸಿಪಿ, ಡಿಎಂಕೆ ಹಾಗೂ ಟಿಎಂಸಿಯ ಕೆಲವು ಪ್ರತಿನಿಧಿಗಳು ಕಾಣಿಸಿಕೊಂಡರು. ಮತ್ತೆ ಸಭೆ ಕರೆದ ಸಭಾಪತಿ ಅವರಿಗೆ ಅಗೌರವ ತೋರಬಾರದು ಎಂಬ ಕಾರಣಕ್ಕೆ ಕೆಲವರನ್ನು ಸಭೆಗೆ ಕಳುಹಿಸಲು ಪ್ರತಿಪಕ್ಷಗಳು ತೀರ್ಮಾನಿಸಿದ್ದವು ಎಂದು ಮೂಲಗಳು ತಿಳಿಸಿವೆ.

ಎರಡೂ ಕಡೆಯವರು ತಮ್ಮ ವಿಷಯಗಳನ್ನೂ ಪಕ್ಕಕ್ಕಿಡಬೇಕು ಎಂದು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಸಲಹೆ ನೀಡಿದರು. ಬಿಜೆಪಿ ಇದಕ್ಕೆ ಒಪ್ಪಿಕೊಂಡಿತ್ತಾದರೂ, ಕಾಂಗ್ರೆಸ್‌ನಿಂದಲೂ ಇದೆ ನಿಲುವನ್ನು ಬಯಸಿತು. ಆದರೆ, ಅದಾನಿ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸುವುದನ್ನು ಮುಂದುವರಿಸುವುದಾಗಿ ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಹೇಳಿದರು. ರಾಹುಲ್ ಅವರಿಗೆ ಮಾತನಾಡಲು ಅವಕಾಶ ನೀಡಬೇಕು ಎಂಬ ಬೇಡಿಕೆಯನ್ನು ಅವರು ಮುಂದಿಟ್ಟರು.

ಆಧಾರ: ಪ್ರಜಾವಾಣಿ, ದಿನಾಂಕ:22.03.2023.

22. Amid ruckus, LS passes Union Budget without discussion

The Lok Sabha passed the Union Budget without any dicussion as the Opposition continued protest over its demand for a Joint Parliamentary Committee (JPC) probe into the Adani issue.

The Lower House functioned barely for six mimutes in the first half before Speaker Om Birla adjourned it until the post lunch session. Similar scenes were witnessed at 2 p.m when the House resumed as the Opposition members trooped into the well demanding a JPC and the Treasury benches matching the demands with slogans asking Congress leader Rahul Gandhi to apologise for his remarks in the U.k. Following this, the House was adjourned again.

When the House reconvened at 6 p.m., the Oppostion's amendments to the government 's spending plan were rejected by voice vote. Union Finance Minsister Nirmala Sitharman then moved the Demands for Grants for 2023-24 and the relevant Appropriation Bills for discussion and voting. The Speaker then applied guillotine and put the Demands for grants of all Ministeries for voting which were passed, amid sloganeeriing by the Opposition.

Though the Business Advisory Committee had granted approval , no discussion could take place on the Ministries of railway, rural development, health and family welfare, panchayati raj, tirbal affairs and, tourism and culture.

The Speaker applying guillotine to get the Demand for Grants passed is significant with speculation rife that the Budget session might end early. Both houses have failed to function in the second leg of the session due to protests by the Opposition and Treasury benches.

The House is likely to take up the Finance Bill, 2023 on Friday, with the passage of the Bill, tax proposals announced in the Budget would be passed. The Budget envisages an expenditure of round Rs.45 lakh crore for the financial year starting April 1. The total expenditure is estmated at Rs. 45,03,097 crore, of which total capital expenditure has been pegged at Rs.10,00,961 crore.

Courtesy: The Hindu, Dated:24.03.2023.

23. ರಾಹುಲ್ ಅಪರಾಧಿ

'ಮೋದಿ ಸರ್‌ನೇಮ್' ಕುರಿತ 2019ರ ಕ್ರಿಮಿನಲ್ ಮಾನಹಾನಿ ಪ್ರಕರಣವೊಂದಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಗುಜರಾತ್ ಸೂರತ್‌ನಲ್ಲಿರುವ ಚೀಫ್ ಜ್ಯುಡೀಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್ 2 ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ತೀರ್ಪು ಪ್ರಕಟಿಸಿದ ಕೂಡಲೇ, ರೂ.15 ಸಾವಿರಗಳ ಶ್ಯೂರಿಟಿ ಪಡೆದು 30 ದಿನಗಳ ಕಾಲ ಶಿಕ್ಷೆಯನ್ನು ಮಾಫಿ ಮಾಡಿರುವ ಕೋರ್ಟ್, ಈ ಅವಧಿಯೊಳಗೆ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಆದರೆ, ಪ್ರಜಾಪ್ರಾತಿನಿಧ್ಯ ಕಾಯ್ದೆ 1951ರ ಪ್ರಕಾರ, ಸಂಸದರಿಗೆ 2 ವರ್ಷಕ್ಕಿಂತ ಹೆಚ್ಚು ಜೈಲು ಶಿಕ್ಷೆಯಾದರೆ ಅವರು ಅನರ್ಹರಾಗುವ ಕಾರಣ, ರಾಹುಲ್ ತಲೆ ಮೇಲೆ 'ಅನರ್ಹತೆಯ ತೂಗುಗತ್ತಿ' ತೂಗಲಾರಂಭಿಸಿದೆ.

2019 ರ ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಕೋಲಾರದಲ್ಲಿ ಮಾತನಾಡಿದ್ದ ರಾಹುಲ್, 'ನೀರವ್ ಮೋದಿಯಾಗಿರಲಿ, ಲಲಿತ್ ಮೋದಿಯಾಗಿರಲಿ ಅಥವಾ ನರೇಂದ್ರ ಮೋದಿಯಾಗಿರಲಿ, ಎಲ್ಲ ಕಳ್ಳರ ಸರ್‌ನೇಮ್ ಕೂಡ ಮೋದಿಯೇ ಆಗಿರುವುದೇಕೆ? ಎಂದು ಪ್ರಶ್ನಿಸಿದ್ದರು, ಈ ಹಿನ್ನೆಲೆಯಲ್ಲಿ ಗುಜರಾತ್‌ನ ಮಾಜಿ ಸಚಿವ, ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಎಂಬುವರು ರಾಹುಲ್ ವಿರುದ್ಧ ಮಾನಹಾನಿ ಕೇಸು ದಾಖಲಿಸಿ ಕೋರ್ಟ್ ಮೆಟ್ಟಿಲೇರಿದ್ದರು.

ನ್ಯಾ.ಎಚ್.ಎಚ್.ವರ್ಮಾ ಅವರು ತೀರ್ಪು ಪ್ರಕಟಿಸುವ ವೇಳೆ ರಾಹುಲ್ ಅವರೂ ಖುದ್ದು ಕೋರ್ಟ್‌ನಲ್ಲಿ ಹಾಜರಿದ್ದರು. ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡದ ರಾಹುಲ್, ನಂತರ ಮಹಾತ್ಮ ಗಾಂಧೀಜಿಯ ಹೇಳಿಕೆಯನ್ನು ಟ್ವೀಟ್ ಮಾಡಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಸೇರಿದಂತೆ ದೇಶಾದ್ಯಂತದ ಕಾಂಗ್ರೆಸ್ ನಾಯಕರು ತೀರ್ಪಿನ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜೊತೆಗೆ, ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದಾಗಿಯೂ ಹೇಳಿದ್ದಾರೆ.

ಕೋರ್ಟ್ ಹೇಳಿದ್ದೇನೆ?

- ಆರೋಪಿಯು ಸಂಸದರಾಗಿರುವ ಕಾರಣ, ಅವರು ಮಾಡುವ ಭಾಷಣವು ಹೆಚ್ಚಿನ ಪರಿಣಾಮ ಬಿರುತ್ತದೆ. ಇದು ಅಪರಾಧದ ಗಂಭೀರತೆಯನ್ನು ಹೆಚ್ಚಿಸುತ್ತದೆ.
- ಆರೋಪಿಗೆ ನಾವು ಕಡಿಮೆ ಪ್ರಮಾಣದ ಶಿಕ್ಷೆ ವಿಧಿಸಿದರೆ, ಅದರಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನೆಯಗುತ್ತದೆ.
- ಜೊತೆಗೆ ಮಾನಹಾನಿ ಕೇಸಿನ ಉದ್ದೇಶವೂ ಪೂರ್ಣಗೊಂಡಂತೆ ಆಗುವುದಿಲ್ಲ ಯಾರು ಬೇಕಾದರೂ ಯಾರನ್ನೂ ನಿಂದಿಸಬಹುದು ಎಂಬ ಸಂದೇಶ ಹೋಗುತ್ತದೆ.

ಆಧಾರ: ಉದಯವಾಣಿ, ದಿನಾಂಕ:24.03.2023.

24. ಹೊಸ ತೆರಿಗೆ ಪದ್ಧತಿಯಲ್ಲಿ ವಿನಾಯಿತಿ

ವಾರ್ಷಿಕವಾಗಿ ಏಳು ಲಕ್ಷ ರೂಪಾಯಿ ಅಥವಾ ಅದಕ್ಕಿಂತ ತುಸು ಹೆಚ್ಚು ಆದಾಯ ಇರುವವರು ಹೊಸ ತೆರಿಗೆ ಪದ್ಧತಿಯನ್ನು ಆಯ್ದು–ಕೊಂಡರೆ ಅಂತವರಿಗೆ ಹೆಚ್ಚುವರಿಯಾಗಿ ತೆರಿಗೆ ವಿನಾಯಿತಿಯನ್ನು ಸರ್ಕಾರ ಕಲ್ಪಿಸಿದೆ. ಏಳು ಲಕ್ಷ ರೂಪಾಯಿತಗಿಂತ ಅಧಿಕ ಆದಾಯ ಹೊಂದಿರುವವರು ಹೊಸ ತೆರಿಗೆ ಪದ್ಧತಿಯಲ್ಲಿ ರೂ.7 ಲಕ್ಷ ಮಿತಿ ಮೇಲ್ಪಟ್ಟ ತೆರಿಗೆ ವ್ಯಾಪ್ತಿಗೆ ಬರುತ್ತಾರೆ. ಇಂಥ ತೆರಿಗೆದಾರರಿಗೆ ತುಸು ನಿರಾಳ ನೀಡುವ ತಿದ್ದುಪಡಿಯನ್ನು 2023–24ನೇ ಹಣಕಾಸು ವಿಧೇಯಕದಲ್ಲಿ ಸರ್ಕಾರ ಮಾಡಿದೆ.

ಬಜೆಟ್ ವೇಳೆ ಮಂಡಿಸಿದ ಪ್ರಸ್ತಾವದಲ್ಲಿ ರೂ.7 ಲಕ್ಷ ವರೆಗಿನ ಆದಾಯ ಹೊಂದಿರುವವರಿಗೆ ತೆರಿಗೆ ವಿನಾಯಿತಿ ನೀಡಲಾಗಿದೆ. ಆದರೆ, ಆದಾಯ ರೂ.7,00,100 ಇದ್ದರೆ ಅಂತಹವರು ರೂ.25,010 ತೆರಿಗೆ ಕಟ್ಟಬೇಕು. ಅಂದರೆ ಕೇವಲ ರೂ.100 ಹೆಚ್ಚು ಆದಾಯವಿದ್ದಿದ್ದಕ್ಕೆ 25,000 ಸಾವಿರ ತೆರಿಗೆ ಹೊರೆ ಬೀಳುತ್ತಿತ್ತು. ತಿದ್ದುಪಡಿಯಿಂದ ರೂ.7,27,700 ವರೆಗೆ ಆದಾಯವಿದ್ದರೂ ವಿನಾಯಿತಿಯ ಲಾಭ ಸಿಗಲಿದೆ. ಇದೇ ರೀತಿ ಅತಿ ಶ್ರೀಮಂತರಿಗೆ ಅದರ ವಾರ್ಷಿಕವಾಗಿ ರೂ.5 ಕೋಟಿಗಿಂತ ಹೆಚ್ಚು ಆದಾಯ ಇರುವವರಿಗೆ ವಿಧಿಸಲಾಗಿದ್ದ ಶೇ.37 ಹೆಚ್ಚುವರಿ ತೆರಿಗೆಯನ್ನು ಶೇ.25ಕ್ಕೆ ಇಳಿಸಲಾಗಿದೆ. ಇದರಿಂದ ಈ ವರ್ಗದವರಿಗೆ ತೆರಿಗೆ ಶೇ.42.7 ರಿಂದ ಶೇ.39ಕ್ಕೆ ಇಳಿಕೆ ಆಗಲಿದೆ. ಈ ತಿದ್ದುಪಡಿಯಿಂದಾಗಿ ಸರ್ಕಾರಕ್ಕೆ ರೂ.35 ಕೋಟಿ ವರಮಾನ ಕೈತಪ್ಪಲಿದೆ.

ಹಣಕಾಸು ವಿಧೇಯಕ ಅಂಗೀಕಾರ: ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆಬ್ರವರಿ 1 ರಂದು ಮಂಡಿಸಿದ 2023–24ನೇ ಸಾಲಿನ ರೂ.45 ಲಕ್ಷ ಕೋಟಿ ಬಜೆಟ್‌ಗೆ ಲೋಕಸಭೆಯಲ್ಲಿ ಕೇವಲ 9 ನಿಮಿಷದಲ್ಲಿ ಧ್ವನಿಮತದ ಮೂಲಕ ಒಪ್ಪಿಗೆ ನೀಡಲಾಗಿದೆ. ಈ ಸಂದರ್ಭದಲ್ಲಿ ವಿರೋಧ ಪಕ್ಷಗಳ ಸದಸ್ಯರು ಸ್ಪೀಕರ್ ಮುಂದಿನ ಅಂಗಳದಲ್ಲಿ ಫಲಕಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ವಿಧೇಯಕಕ್ಕೆ ರಾಜ್ಯ ಸಭೆಯ ಅನುಮೋದನೆ ದೊರೆತ ನಂತರ ರಾಷ್ಟ್ರಪತಿ ಅಂಕಿತಕ್ಕೆ ರವಾನೆಯಾಗಲಿದೆ. ಬಜೆಟ್ ಏಪ್ರಿಲ್ 1 ರಿಂದ ಜಾರಿಗೆ ಬರಲಿದೆ. ಸಾಲದ ಮ್ಯೂಚುವಲ್ ಫಂಡ್‌ಗಳಿಗೆ ನೀಡಲಾಗಿದ್ದ ತೆರಿಗೆ ಪ್ರಯೋಜನ ರದ್ದು, ರಾಜಧನದ ಮೇಲಿನ ತೆರಿಗೆ ಮತ್ತು ತಾಂತ್ರಿಕ ಸೇವೆಯ ಶುಲ್ಕವನ್ನು ಶೇ.10 ರಿಂದ ಶೇ.20ಕ್ಕೆ ಏರಿಸುವ ತಿದ್ದುಪಡಿ ಸೇರಿ 64 ತಿದ್ದುಪಡಿಗಳನ್ನು ವಿಧೇಯಕ ಒಳಗೊಂಡಿದೆ.

ಮದರಸಾ ವಿಶೇಷ ನಿಧಿ ತಿರಸ್ಕೃತ: ಮುಸ್ಲಿಂರ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಾನ ಗಮನದಲ್ಲಿಟ್ಟುಕೊಂಡು ಮದರಸಾಗಳ ಆಧುನೀಕರಣಕ್ಕೆ ವಿಶೇಷ ನಿಧಿ ರಚಿಸಬೇಕೆಂಬ ನಿರ್ಣಯವನ್ನು ರಾಜ್ಯಸಭೆ ತಿರಸ್ಕರಿಸಿದೆ. ಫೆಬ್ರವರಿ 10 ರಂದು ಸಂಸತ್ತಿನ ಮೇಲ್ಮನೆಯಲ್ಲಿ ಇಂಡಿಯನ್ ಯುನಿಯನ್ ಮುಸ್ಲಿಂ ಲೀಗ್ ಸದಸ್ಯ ಅಬ್ದುಲ್ ವಹಬ್ ಈ ನಿರ್ಣಯವನ್ನು ಮಂಡಿಸಿದರು. ನಿರ್ಣಯದ ಮೇಲೆ ಮಾತನಾಡಿದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವೆ ಸ್ಮೃತಿ ಇರಾನಿ, ಧರ್ಮದ ಆಧಾರದಲ್ಲಿ ನವಭಾರತವನ್ನು ಒಡೆಯಲು ಸಾಧ್ಯವಿಲ್ಲ. ಸಮಾನತೆ ಆಧಾರದಲ್ಲಿ ನವಭಾರತವನ್ನು ನಿರ್ಮಿಸಬೇಕು. ಹೀಗಾಗಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಬೇಕು ಎಂದು ಸದನದಲ್ಲಿ ಮನವಿ ಮಾಡಿದರು. ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆ ನಿರ್ಣಯವನ್ನು ಧ್ವನಿಮತದಿಂದ ತಿರಸ್ಕರಿಸಲಾಯಿತು.

ಪ್ರೀಮಿಯಂಗಿಂತ 5 ಪಟ್ಟು ಪರಿಹಾರ: ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ (ಪಿಎಂಎಫ್‌ಬಿವೈ) ಅಡಿಯಲ್ಲಿ ರೈತರು ಪಾವತಿಸಿದ ಪ್ರತಿ ರೂ.100 ಪ್ರೀಮಿಯಂಗೆ ಸುಮಾರು ರೂ.514 ಪರಿಹಾರದ ರೂಪದಲ್ಲಿ ಅವರಿಗೆ ಸಿಕ್ಕಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. 2016 ರಲ್ಲಿ ಪಿಎಂಎಫ್‌ಬಿವೈ ಜಾರಿಗೆ ಬಂದ ನಂತರ ಸುಮಾರು 38 ಕೋಟಿ ರೈತರು ಇದರ ಪ್ರಯೋಜನ ಪಡೆದಿದ್ದಾರೆ. 12.37 ಕೋಟಿಗೂ ಹೆಚ್ಚು ರೈತರು ಹಕ್ಕು ಪತ್ರಗಳನ್ನು ಪಡೆದಿದ್ದಾರೆ ಎಂದು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:25.03.2023.

25. ರಾಹುಲ್ ಗಾಂಧಿ ಅನರ್ಹ

'ಮೋದಿ ಉಪನಾಮ' ಕುರಿತು ಆಕ್ಷೇಪಾರ್ಹವಾಗಿ ಮಾತನಾಡಿದ ಪ್ರಕರಣದಲ್ಲಿ 2 ವರ್ಷ ಜೈಲು ಶಿಕ್ಷೆಗೆ ಒಳಗಾದ ಬೆನ್ನಲ್ಲೇ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ. ಇದರಿಂದಾಗಿ ರಾಹುಲ್ ತಕ್ಷಣವೇ ಸಂಸತ್ ಸದಸ್ಯತ್ವವನ್ನು

ಕಳೆದುಕೊಳ್ಳುವುದರ ಜೊತೆಗೆ, ಮುಂದಿನ 8 ವರ್ಷಗಳ ಕಾಲ ಯಾವುದೇ ಶಾಸನಸಭೆಗಳಿಗೆ ಚುನಾವಣೆಗೆ ಸ್ಪರ್ಧಿಸುವುದರಿಂದ ನಿರ್ಬಂಧಕ್ಕೆ ಒಳಗಾಗಲಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆಗಳು ಬೆನ್ನಿಗಿರುವಾಗಲೇ ನಡೆದ ಈ ಬೆಳವಣಿಗೆ ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿಗೆ ಭಾರೀ ಶಾಕ್ ನೀಡಿದೆ. ಈ ನಡುವೆ ಸರ್ಕಾರದ ನಿರ್ಧಾರವನ್ನು ಕಟುವಾಗಿ ಟೀಕಿಸಿರುವ ಕಾಂಗ್ರೆಸ್, 'ಇದು ಪ್ರಜಾಪ್ರಭುತ್ವದ ಕಗ್ಗೊಲೆ. ಇದನ್ನು ರಾಜಕೀಯ ಮತ್ತು ಕಾನೂನಾತ್ಮಕವಾಗಿ ಎದುರಿಸಲಾಗುವುದು. ದೇಶವ್ಯಾಪಿ ಜನಾಂದೋಲನ ರೂಪಿಸಲಾಗುವುದು ಎಂದು ಘೋಷಿಸಿದೆ. ರಾಹುಲ್ ಕೂಡಾ ನಾನು ಭಾರತದ ದನಿಯಾಗಿ ಹೋರಾಡುತ್ತಿದ್ದೇನೆ. ಇದಕ್ಕಾಗಿ ನಾನು ಯಾವುದೇ ಬೆಲೆ ತೆರಲು ಸಿದ್ಧ ಎಂದು ಘೋಷಿಸಿದಾರೆ.

ಈ ನಡುವೆ ಬಹುತೇಕ ವಿಪಕ್ಷಗಳು ಆಡಳಿತ ಪಕ್ಷ ಪ್ರತೀಕಾರದ ರಾಜಕಾರಣ ನಡೆಸುತ್ತಿದೆ. 130 ಕೋಟಿ ಜನರು ಈ ಅಹಂಕಾರದ ವಿರುದ್ಧ, ಒಂದಾಗಬೇಕು ಎಂದು ಕರೆಕೊಟ್ಟಿವೆ. ಆದರೆ ಕೇಂದ್ರ ಸರ್ಕಾರ 'ಅನರ್ಹತೆ ಕ್ರಮಬದ್ಧ' ವಾಗುದೆ ಎಂದು ಹೇಳಿದೆ. ಜೊತೆಗೆ ಬಿಜೆಪಿ ಕೂಡ ಇದು ನ್ಯಾಯಲಯದ ಆದೇಶದ ಅನ್ವಯ ನಡೆದ ಬೆಳವಣಿಗೆ. ಇದರಲ್ಲಿ ರಾಜಕೀಯ ಏನೂ ಇಲ್ಲ. ರಾಹುಲ್ ಕಾನೂನಿಗೆ ಅತೀತರಲ್ಲ ಎಂದ ಕಾಂಗ್ರೆಸ್‌ಗೆ ತಿರುಗೇಟು ನೀಡಿದೆ.

ರಾಹುಲ್ ಅನರ್ಹ: ಕೋಲಾರ ಹೇಳಿಕೆ ಪ್ರಕರಣದಲ್ಲಿ 2 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದ ರಾಹುಲ್ ಬೆಳಗ್ಗೆ ಲೋಕಸಭಾ ಕಲಾಪಕ್ಕೆ ಹಾಜರಾಗಿ, ಬಳಿಕ ಸಂಸದೀಯ ಪಕ್ಷದ ಸಭೆಯಲ್ಲೂ ಭಾಗಿಯಾಗಿದ್ದರು. ಆದರೆ ಮಧ್ಯಾಹ್ನ 2.30ರ ವೇಳೆಗೆ ಅಧಿಸೂಚನೆ ಹೊರಡಿಸಿದ ಲೋಕಸಭಾ ಸಚಿವಾಲಯವು, 'ಸೂರತ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರು ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಸಂಸದ ರಾಹುಲ್ ಗಾಂಧಿ ಅವರನ್ನು ದೋಷಿ ಎಂದು ಪರಿಗಣಿಸಿರುವ ಕಾರಣ, ಅವರನ್ನು 2023ರ ಮಾರ್ಚ್ 23 ರಿಂದಲೇ ಅನ್ವಯವಾಗುವಂತೆ ಅನರ್ಹಗೊಳಿಸಲಾಗಿದೆ' ಎಂದು ಮಾಹಿತಿ ನೀಡಿತು.

ಖರ್ಗೆ, ಜೈರಾಂ ರಮೇಶ ಕಿಡಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, 'ಅವರು (ಬಿಜೆಪಿ) ರಾಹುಲ್‌ರನ್ನು ಅನರ್ಹಗೊಳಿಸಲು ಎಲ್ಲಾ ರೀತಿಯಲ್ಲಿ ಪ್ರಯತ್ನಿಸಿದರು. ಅವರು ಸತ್ಯ ಮಾತನಾಡುವವರನ್ನು ಉಳಿಸಿಕೊಳ್ಳಲು ಬಯಸುವುದಿಲ್ಲ. ಆದರೆ ನಾವು ಸತ್ಯ ಮಾತನಾಡುವುದನ್ನು ಮುಂದುವರಿಸುತ್ತೇವೆ. ಅಗತ್ಯವಿದ್ದರೆ ನಾವು ಜೈಲಿಗೆ ಹೋಗುತ್ತೇವೆ' ಎಂದರು.

ಕಾಂಗ್ರೆಸ್ ಮುಖಂಡ ಮಣೀಶ್ ತಿವಾರಿ ಮಾತನಾಡಿ, ' ಸಂವಿಧಾನದ ಪರಿಚ್ಛೇದ 103 ರ ಪ್ರಕಾರ ಕೇವಲ ರಾಷ್ಟ್ರಪತಿಗೆ ಮಾತ್ರ ಸಂಸದರನ್ನು ಅನರ್ಹ ಮಾಡುವ ಅಧಿಕಾರವಿದೆ. ಸ್ಪೀಕರ್‌ಗಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ ಟ್ವೀಟ್ ಮಾಡಿ, "ಪಕ್ಷವು ಯದ್ಧದಲ್ಲಿ ಹೋರಾಡುತ್ತದೆ. ಇದಕ್ಕೆ ಹೆದರುವುದಿಲ್ಲ. ಮೌನ ವಹಿಸಲ್ಲ. ನಾವು ಈ ಹೋರಾಟವನ್ನು ಕಾನೂನಾತ್ಮಕವಾಗಿ ಮತ್ತು ರಾಜಕೀಯವಾಗಿ ಮಾಡುತ್ತೇವೆ. ರಾಹುಲ್ ಬಾಯಿ ಮುಚ್ಚಿಸಲು ಕೇಂದ್ರ ಸರ್ಕಾರ ಮಿಂಚಿನ ವೇಗದಲ್ಲಿ ಕೆಲಸ ಮಾಡುತ್ತಿದೆ. ಇದರ ವಿರುದ್ಧ ದೇಶವ್ಯಾಪಿ ಆಂದೋಲನ ನಡೆಸಲು ನಿರ್ಧರಿಸಲಾಗಿದೆ ಎಂದರು.

ಕೇಂದ್ರ ಸರ್ಕಾರದ ಸಮರ್ಥನೆ: ಕೇಂದ್ರ ಕಾನೂನು ಖಾತೆ ರಾಜ್ಯ ಸಚಿವ ಎಸ್‌ಪಿಎಸ್ ಭಾಘೇಲ್ ಅವರು, 'ಅನರ್ಹತೆ ಕ್ರಮ ಸಮರ್ಪಕವಾಗಿದೆ. ಕಾನೂನು ಮುಂದೆ ಎಲ್ಲರೂ ಒಂದೇ. ಇತ್ತೀಚೆಗೆ ಕ್ರಿಮಿನಲ್ ಕೇಸಿನಲ್ಲಿ ದೋಷಿಯಾದ ಉತ್ತರ ಪ್ರದೇಶದ ಬಿಜೆಪಿ ಶಾಸಕರೊಬ್ಬರು ಅನರ್ಹಗೊಂಡಿದ್ದರು' ಎಂದು ಸಮರ್ಥಿಸಿಕೊಂಡರು.

ರಾಹುಲ್ ದೋಷಿ ಏಕೆ: 2019ರ ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಕರ್ನಾಟಕದ ಕೋಲಾರದಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, 'ಎಲ್ಲ ಕಳ್ಳರ ಉಪನಾಮ (ಅಡ್ಡಹೆಸರು) ಮೋದಿ

ಎಂದೇ ಏಕೆ ಆಗಿರುತ್ತದೆ?' ಎಂದು ಪ್ರಶ್ನಿಸಿದರು. ಇದನ್ನು ಪ್ರಶ್ನಿಸಿ ಅಂದಿನ ಗುಜರಾತ್ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಸೂರತ್ ಕೋರ್ಟ್‌ನಲ್ಲಿ ಮಾನಾಹಾನಿ ದಾವೆ ದಾಖಲಿಸಿದ್ದರು. ಈ ಕುರಿತು ತೀರ್ಪು ನೀಡಿದ್ದ ಕೋರ್ಟ್, ರಾಹುಲ್‌ಗೆ 2 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

ಏಕೆ ಅನರ್ಹತೆ: 'ಎಲ್ಲ ಕಳ್ಳರ ಅಡ್ಡ ಹೆಸರು ಮೋದಿ ಎಂದೇ ಏಕೆ ಇರುತ್ತದೆ' ಎಂದು ರಾಹುಲ್ 2019ರ ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಕೋಲಾರದಲ್ಲಿ ಭಾಷಣ ಮಾಡಿದ್ದರು. ಅದರ ವಿರುದ್ಧ ಹೂಡಿದ್ದ ಮಾನನಷ್ಟ ದಾವೆಯಲ್ಲಿ ಸೂರತ್ ಕೋರ್ಟ್ ರಾಹುಲ್‌ಗೆ 2 ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಜನಪ್ರತಿನಿಧಿಕಾಯ್ದೆ ಅನ್ವಯ 2 ವರ್ಷ ಅಥವಾ ಅದಕ್ಕಿಂತ ಹೆಚ್ಚು ಜೈಲು ಶಿಕ್ಷೆಯಾದರೆ ಶಾಸನಸಭೆಯಿಂದ ಅನರ್ಹಗೊಳಿಸಲಾಗುತ್ತದೆ.

ಮುಂದೇನು:

- ಶಿಕ್ಷೆ ವಿಧಿಸಿದ ಕೋರ್ಟ್‌ನಿಂದಲೇ 30 ದಿನಗಳ ಕಾಲ ಶಿಕ್ಷೆ ಅಮಾನತು
- ಹೀಗಾಗಿ ಸದ್ಯಕ್ಕೆ ರಾಹುಲ್ ಗಾಂಧಿಗೆ ಜೈಲಿಗೆ ಹೋಗುವ ಭೀತಿ ಇಲ್ಲ.
- ಸೂರತ್ ಕೋರ್ಟ್ ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಿರುವ ರಾಹುಲ್
- ಉನ್ನತ ಕೋರ್ಟ್‌ನಲ್ಲಿ ಶಿಕ್ಷೆ ರದ್ದಾದರೆ ಅಥವಾ ತಡೆ ಸಿಕ್ಕರೆ ಅನುಕೂಲ
- ಆಗ ಮತ್ತೆ ಶಾಸನಸಭೆ ಸದಸ್ಯತ್ವವನ್ನು ರಾಹುಲ್ ಗಾಂಧಿ ಕೇಳಬಹುದು
- ಈ ಎಲ್ಲ ಕಾನೂನು ಪ್ರಕ್ರಿಯೆಗಳು ಜಟಿಲ, ಹೀಗಾಗಿ ಸದ್ಯಕ್ಕೆ ಯಥಾಸ್ಥಿತಿ

ತಜ್ಞರು ಎನಂತಾರೆ:

1. ಉಪಚುನಾವಣೆ ಘೋಷಣೆ ಒಳಗೆ ಶಿಕ್ಷೆಗೆ ತಡೆ ತರದಿದ್ದರೆ ಅನರ್ಹತೆ ರದ್ದತಿ ಕಷ್ಟ: ದಿಲ್ಲಿ ವಕೀಲರ ಸಂಘದ ಅಧ್ಯಕ್ಷ
2. ಹೈಕೋರ್ಟ್ ಮೇಲ್ಮನವಿಯನ್ನು ಪುರಸ್ಕರಿಸಿ ನಿರ್ದಿಷ್ಟವಾಗಿ ಸೂಚಿಸಿದರೆ ಮಾತ್ರ ಅನರ್ಹತೆ ರದ್ದು: ಬಿ.ಎಲ್.ಶಂಕರ್
3. ಜೈಲು ಶಿಕ್ಷೆಗೆ ಉನ್ನತ ನ್ಯಾಯಲಯ ತಡೆ ನೀಡಿದರೆ ಅನರ್ಹತೆ ತನ್ನಿಂತಾನೆ ರದ್ದು: ಅಶೋಕ್ ಹಾರನಹಳ್ಳಿ
4. ಅಮಾನತ್ತಲ್ಲಿರುವ ಕಾರಣ ಸಂಸತ್ ಸದಸ್ಯತ್ವ ಅನರ್ಹತೆ ಆದೇಶವೇ ಕಾನೂನು ಬಾಹಿರ: ಸದಾಶಿವ ರೆಡ್ಡಿ.
5. ಕ್ರಿಮಿನಲ್ ಕೇಸಲ್ಲಿ ದೋಷಿಯಾಗಿ ಎರಡು ವರ್ಷ ಜೈಲು ಶಿಕ್ಷೆಯಾದರೆ ತನ್ನಿಂತಾನೆ ಅನರ್ಹ:ಶ್ಯಾಮ್ ಸುಂದರ್
6. ಉನ್ನತ ಕೋರ್ಟ್‌ಲ್ಲಿ ಕೇಸ್ ತಾರ್ಕಿಕ ಅಂತ್ಯ ಕಾಣುವ ಮುನ್ನ ಅನರ್ಹಗೊಳಿಸಿದ್ದು ತಪ್ಪು: ಹಸ್ಮತ್ ಪಾಷ .

ಆಧಾರ: ಕನ್ನಡ ಪ್ರಭ, ದಿನಾಂಕ:25.03.2023.

26. ಹಣಕಾಸು ಮಸೂದೆ ಅನುಮೋದನೆ

ಲೋಕಸಭೆಯಲ್ಲಿ ಹಣಕಾಸು ಮಸೂದೆಗೆ ಚರ್ಚೆಯಿಲ್ಲದೆ ಅನುಮೋದನೆ ದೊರೆತಿದೆ. 64 ಅಧಿಕೃತ ತಿದ್ದುಪಡಿಗಳೊಂದಿಗೆ ಮಸೂದೆಯನ್ನು ಅಂಗೀಕರಿಸಲಾಗಿದೆ. ಅದಾನಿ ತನಿಖೆಗೆ ವಿಪಕ್ಷಗಳ

ಆಗ್ರಹ ಮತ್ತು ರಾಹುಲ್ ಲಂಡನ್ ಹೇಳಿಕೆಗೆ ಕ್ಷಮಾಪಣೆ ಕೋರಿ ಆಡಳಿತ ಪಕ್ಷದ ಸದಸ್ಯರ ಒತ್ತಾಯದಿಂದ ಲೋಕಸಭೆಯಲ್ಲಿ ಗಲಾಟೆ ನಡೆಯುತ್ತಿದ್ದ ಸಮಯದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಸೂದೆಯನ್ನು ಮಂಡಿಸಿದ್ದಾರೆ. ಇದರಲ್ಲಿ ಕೆಲವು ವರ್ಗಗಳ ಸಾಲ ಮ್ಯೂಚಯಲ್ ಫಂಡ್‌ಗಳ ಮೇಲಿನ ದೀರ್ಘಾವಧಿಯ ತೆರಿಗೆ ಪ್ರಯೋಜನಗಳನ್ನು ಹಿಂಪಡೆಯುವ ಮತ್ತು ಜಿಎಸ್‌ಟಿ ಮೇಲ್ಮನವಿ ನ್ಯಾಯಾಧಿಕರಣವನ್ನು ಸ್ಥಾಪಿಸುವ ಪ್ರಸ್ತಾವ ಇನ್ನೊಂದು ವಿಧೇಯಕವೂ ಸೇರಿದೆ. ಏಪ್ರಿಲ್ 1 ರಿಂದ ಪ್ರಾರಂಭವಾಗುವ ಆರ್ಥಿಕ ವರ್ಷದ ತೆರಿಗೆ ಪ್ರಸ್ತಾವಗಳು ಅಂಗೀಕಾರಗೊಂಡವು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:25.03.2023.

27. ಸ್ಪೀಕರ್ ವಿರುದ್ಧ ಅವಿಶ್ವಾಸ

ಮಾನಹಾನಿ ಪ್ರಕರಣದಲ್ಲಿ ಸೂರತ್ ಕೋರ್ಟ್‌ನಿಂದ 2 ವರ್ಷ ಜೈಲು ಶಿಕ್ಷೆ ಗುರಿಯಾದ ರಾಹುಲ್ ಗಾಂಧಿಯನ್ನು ಸದಸ್ಯತ್ವದಿಂದ ಅನರ್ಹಗೊಳಿಸಲು ಲೋಕಸಭಾ ಸಚಿವಾಲಯ ತರಾತುರಿ ಮಾಡಿದೆ. ಹೀಗಾಗಿ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ಕಾಂಗ್ರೆಸ್ ಚಿಂತಿಸಿದೆ. ಈ ಸಂಬಂಧ ಅದು ಪ್ರತಿಪಕ್ಷಗಳೊಂದಿಗೆ ಮಾತುಕತೆ ನಡೆಸುತ್ತಿದೆ. 19 ಪ್ರತಿಪಕ್ಷಗಳು ಕಾಂಗ್ರೆಸ್ ಜೊತೆಗಿವೆ ಎಂದ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಎಂ. ಮಲ್ಲಿಕಾರ್ಜುನ್ ಖರ್ಗೆ ನಿವಾಸದಲ್ಲಿ ವಿರೋಧ ಪಕ್ಷ ನಾಯಕರೊಂದಿಗೆ ಸಭೆ ನಡೆಸಿದ್ದು, ರಾಹುಲ್ ಗಾಂಧಿಗೆ ಬೆಂಬಲ ಸೂಚಿಸುವುದಾಗಿ ಈ ಪಕ್ಷಗಳ ನಾಯಕರು ಹೇಳಿದ್ದಾರೆ. ಆದರೆ, ಅವಿಶ್ವಾಸ ಗೊತ್ತುವಳಿಗೆ ಸಹಮತ ಸೂಚಿಸಿರುವ ಬಗ್ಗೆ ಖಚಿತತೆ ಇಲ್ಲ ಎಂದು ಮೂಲಗಳು ಹೇಳಿವೆ.

ಈ ಮಧ್ಯೆ, ಅದಾನಿ ಸಮೂಹದ ವಿರುದ್ಧ ತನಿಖೆಗೆ ಜಂಟಿ ಸಂಸದೀಯ ಸಮಿತಿ(ಜೆಪಿಸಿ) ರಚನೆ ಹಾಗೂ ರಾಹುಲ್ ಗಾಂಧಿ ಅನರ್ಹತೆ ವಿಷಯದಲ್ಲಿ ಸಂಸತ್ ಉಭಯ ಸದನಗಳಲ್ಲಿ ಗದ್ದಲ ನಡೆದ ಕಾರಣ ಎರಡೂ ಸದನವನ್ನು ಮೊದಲು ಮಧ್ಯಾಹ್ನದವರೆಗೆ ನಂತರ ದಿನದ ಮಟ್ಟಿಗೆ ಮುಂದೂಡಲಾಯಿತು. ಕಾಂಗ್ರೆಸ್ ಸಂಸದರು ಕೂಡ ಕಪ್ಪು ಬಟ್ಟೆ ಧರಿಸಿ ಸದನಕ್ಕೆ ಆಗಮಿಸಿದ್ದರು. ಈ ಗದ್ದಲದ ನಡುವೆಯೂ ಸದನದಲ್ಲಿ ಕೆಲವು ದಾಖಲೆ ಪತ್ರಗಳು ಮತ್ತು ವರದಿಗಳನ್ನು ಮಂಡಿಸಲಾಯಿತು. ಈ ನಡುವೆ, ರಾಹುಲ್‌ರ ವಿವಾದಾತ್ಮಕ ಹೇಳಿಕೆ ವಿಚಾರದಲ್ಲಿ ಬಿಜೆಪಿ ಸಂಸದರು ಸಂಸತ್ ಭವನದ ಬಳಿಯಿರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿತು.

ಇಂದು ಕಾಂಗ್ರೆಸ್ ಪಂಜಿನ ಮೆರವಣಿಗೆ : ರಾಹುಲ್ ಗಾಂಧಿಯವರನ್ನು ಲೋಕಸಭೆ ಸದಸ್ಯತ್ವದಿಂದ ಅನರ್ಹಗೊಳಿಸಿರುವ ಕ್ರಮವನ್ನು ವಿರೋಧಿಸಿ ಕಾಂಗ್ರೆಸ್ ನವದೆಹಲಿಯಲ್ಲಿ ಪಂಜಿನ ಮೆರವಣಿಗೆ ನಡೆಸಲಿದೆ. ಕೆಂಪು ಕೋಟೆಯಿಂದ ಚಾಂದನಿ ಚೌಕದಲ್ಲಿರುವ ಟೌನ್ ಹಾಲ್‌ವರೆಗೆ ನಡೆಯಲಿರುವ 'ಲೋಕತಂತ್ರ ಬಚಾವೋ ಮಶಾಲ್ ಶಾಂತಿ ಮಾರ್ಚ್'ನಲ್ಲಿ ಪಕ್ಷದ ಸಂಸದರು ಭಾಗವಹಿಸಲಿದ್ದಾರೆ. ಸಂಜೆ 7 ಗಂಟೆಗೆ ಮೆರವಣಿಗೆ ಆರಂಭವಾಗಲಿದ್ದು ಸಂಸದರು ಕೈಗಳಲ್ಲಿ ಪಂಜುಗಳನ್ನು ಹಿಡಿದುಕೊಂಡು ಪಾಲ್ಗೊಳ್ಳಲಿದ್ದಾರೆ.

ಬಿಜೆಪಿ ಸಂಸದನ ವಿವಾದಾತ್ಮ ಹೇಳಿಕೆ: ಮೋದಿ ಉಪನಾಮದ ಕುರಿತ ವಿವಾದ ಮುಂದುವರಿದಿರುವುದರ ನಡುವೆಯೇ ಬಿಜೆಪಿ ಸಂಸದ ಸಂಜಯ್ ಜೈಸ್ವಾಲ್, ರಾಹುಲ್ ಗಾಂಧಿ ಕುಟುಂಬದ ವಿರುದ್ಧ ವೈಯುಕ್ತಿಕ ಟೀಕೆ ಮಾಡಿ ವಿವಾದ ಸೃಷ್ಟಿಸಿದ್ದಾರೆ. 'ವಿದೇಶಿ ಮಹಿಳೆಗೆ ಜನಿಸಿದ ವ್ಯಕ್ತಿ ಯಾವತ್ತೂ ದೇಶಪ್ರೇಮಿಯಾಗಲಾರ' ಎಂದು ಟಿವಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಜೈಸ್ವಾಲ್ ಹೇಳಿರುವುದು ವ್ಯಾಪಕ ಟೀಕೆಗೆ ಗುರಿಯಾಗಿದೆ. ಇದು 2,000 ವರ್ಷಗಳ ಹಿಂದೆ ಚಾಣಕ್ಯ ಹೇಳಿದ ಮಾತಾಗಿದ್ದು ತಾನು ಅದನ್ನು ಪುನರಾವರ್ತಿಸಿದ್ದೇನಷ್ಟೇ ಎಂದು ಜೈಸ್ವಾಲ್ ಸಮಜಾಯಷಿ ನೀಡಿದ್ದಾರೆ.

ಸಂಸತ್‌ಗೆ ಸರ್ಕಾರದ ಉತ್ತರ:

- ಸಂಸ್ಕೃತವನ್ನು ಅಧಿಕೃತ ಭಾಷೆ ಎಂದು ಪರಿಗಣಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ.
- ಕಳೆದ 3 ವರ್ಷದಿಂದ ಪಾಕ್ ಮೂಲಕ ಡ್ರೋನ್‌ಗಳಿಂದ ಶಸ್ತ್ರ, ಮಾದಕದ್ರವ್ಯಗಳನ್ನು ಪಂಜಾಬ್‌ನಲ್ಲಿ ಇಳಿಸಿದ 28 ಪ್ರಕರಣಗಳು ವರದಿಯಾಗಿವೆ.
- ಉಷ್ಣ ಹವೆ ಹೆಚ್ಚಳದಿಂದ ಗೋಧಿ ಇಳುವರಿ ಮೇಲೆ ಪರಿಣಾಮ ಉಂಟಾಗಲಿದೆ ಎನ್ನುವುದನ್ನು ಈಗ ಅಂದಾಜು ಮಾಡುವುದು ತರಾತುರಿಯಾಗುತ್ತದೆ.
- ಕೃಷಿ ವಿವಿಯಲ್ಲಿ ಅಖಿಲ ಭಾರತ ಮಟ್ಟದ ಕೋಟಾದಡಿಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಪರಿಶೀಲಿಸಲಾಗುವುದು.
- 2022–23ರಲ್ಲಿ ಮಾರ್ಚ್ 24 ರವರೆಗೆ 74.86ಲಕ್ಷ ಟನ್ ಯೂರಿಯಾ ಆಮದು ಮಾಡಿಕೊಳ್ಳಲಾಗಿದೆ.
- ಕಳೆದ 5 ವರ್ಷದಲ್ಲಿ ರಿಟರ್ನ್ ಆಫ್ (ದಾಸ್ತಾವೇಜಿನಿಂದ ಹೊರಗಿಡಲಾದ) ಸಾಲದಲ್ಲಿ ಶೇ.14ರಷ್ಟನ್ನು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ವಸೂಲು ಮಾಡಿವೆ. ಇದರ ಮೊತ್ತ ರೂ.7.34 ಲಕ್ಷ ಕೋಟಿ.

ಆಧಾರ: ವಿಜಯವಾಣಿ, ದಿನಾಂಕ:29.03.2023.

28. ತಿದ್ದುಪಡಿ ಮಸೂದೆಗೆ ಒಪ್ಪಿಗೆ

ಪ್ರತಿಪಕ್ಷ ಸದಸ್ಯರ ಘೋಷಣೆ ಮಧ್ಯೆ ಸ್ಪರ್ಧಾತ್ಮಕತೆ ತಿದ್ದುಪಡಿ ಮಸೂದೆಯನ್ನೂ ಮಂಡಿಸಿ ಯಾವುದೇ ಚರ್ಚೆಯಿಲ್ಲದೆ ಲೋಕಸಭೆಯಲ್ಲಿ ಅಂಗೀಕರಿಸಲಾಯಿತು. ಗದ್ದಲದ ನಡುವೆಯೂ ಪರಿಸರ ಸಚಿವ ಭೂಪೇಂದ್ರ ಯಾದವ್ ಅರಣ್ಯ ಸಂರಕ್ಷಣೆ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು.

ಗೌತಮ್ ಅದಾನಿ ಉದ್ಯಮ ಸಮೂಹದ ಅಕ್ರಮದ ಕುರಿತು ತನಿಖೆಗೆ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸಬೇಕೆಂಬ ಬೇಡಿಕೆಗೆ ಪಟ್ಟು ಹಿಡಿದು ಪ್ರತಿಪಕ್ಷಗಳು ಗದ್ದಲ ಎಬ್ಬಿಸಿದ್ದರಿಂದ ಸಂಸತ್ತಿನ ಉಭಯ ಸದನಗಳ ಕಲಾಪ ಬಲಿಯಾಯಿತು. ಶ್ರೀರಾಮ ನವಮಿ ನಿಮಿತ್ತ ರಜೆಯಿದ್ದು ಕೂಡ ಕಲಾಪ ನಡೆಸಲು ನಿರ್ಧರಿಸಲಾಗಿದೆ. ಹೀಗಾಗಿ, ಉಭಯ ಸದನಗಳು ಸಭೆ ಸೇರಲಿವೆ. ಏಳು ತಿಂಗಳ ಹಿಂದೆ ಮಂಡಿಸಲಾಗಿದ್ದು ಸ್ಪರ್ಧಾತ್ಮಕತೆ ತಿದ್ದುಪಡಿ ಮಸೂದೆಯಲ್ಲಿ, ಭಾರತೀಯ ಸ್ಪರ್ಧಾತ್ಮಕ ಆಯೋಗ (ಸಿಸಿಐ)ಕ್ಕೆ ದಂಡ ವಿಧಿಸುವ ಅಧಿಕಾರವನ್ನು ಬಲಪಡಿಸಲಾಗಿದೆ. ಹಾಲಿ ಸಂಬಂಧಿಸಿದ ಮರುಕಟ್ಟೆಯಲ್ಲಿ ವಹಿವಾಟನ್ನು ಆಧಾರಿಸಿ ದಂಡವನ್ನು ಸಿಸಿಐ ವಿಧಿಸುತ್ತಿದೆ. ಆದರೆ ಇದನ್ನು ಜಾಗತಿಕ ವಹಿವಾಟಿಗೆ ಅನುಗುಣವಾಗಿ ಹೆಚ್ಚಿಸಲು ತಿದ್ದುಪಡಿ ಮಸೂದೆ ಅವಕಾಶ ಕಲ್ಪಿಸುತ್ತದೆ.

ಪ್ರಧಾನಿ ಹೇಳಿಕೆಗೆ ಖರ್ಗೆ ವ್ಯಂಗ್ಯ: ರಾಹುಲ್ ವಿಚಾರದಲ್ಲಿ ಪ್ರತಿಪಕ್ಷಗಳು ಒಂದಾಗಿರುವುದು ಸರ್ಕಾರದ ಭ್ರಷ್ಟಾಚಾರ ವಿರೋಧಿ ಅಭಿಯಾನದ ವಿರುದ್ಧವಾಗಿದೆ ಎಂದು ಪ್ರಧಾನಿ ಮೋದಿ ಆರೋಪಿಸಿರುವುದಕ್ಕೆ ಕಾಂಗ್ರೆಸ್ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ ತಿರುಗೇಟು ನೀಡಿದ್ದಾರೆ. 'ಭ್ರಷ್ಟಾಚಾರಿಗಳು ದೇಶದಿಂದ ಓಡಿಹೋಗಲೂ ನೆರವಾಗುವ ಅಭಿಯಾನ' ವನ್ನು (ಭ್ರಷ್ಟಾಚಾರಿ ಭಗಾವೋ ಅಭಿಯಾನ) ನಡೆಸುತ್ತಿರುವ ಮೋದಿ, ಭ್ರಷ್ಟಾಚಾರ ವಿರೋಧಿ ಹೋರಟಗಾರ ಎಂಬ ಇಮೇಜ್ ಕಟ್ಟಿಕೊಳ್ಳುವುದನ್ನು ಬಿಡಬೇಕೆಂದಿದ್ದಾರೆ. 'ಲಲಿತ್ ಮೋದಿ, ನೀರವ್ ಮೋದಿ, ಮೆಹುಲ್

ಚೋಕ್ಸಿ, ವಿಜಯ್ ಮಲ್ಯ, ಜತ್ತಿನ ಮೆಹ್ತಾ 'ಭ್ರಷ್ಟಾಚಾರಿ ಭಗಾವೋ ಅಭಿಯಾನ'ದ ಸದಸ್ಯರೇ' ಎಂದು ಟ್ವಿಟ್‌ನಲ್ಲಿ ಖರ್ಗೆ ಪ್ರಶ್ನಿಸಿದ್ದಾರೆ.

9.79 ಲಕ್ಷ ಹುದ್ದೆ ಖಾಲಿ : ಕೇಂದ್ರ ಸರ್ಕಾರದಲ್ಲಿ 9.79 ಲಕ್ಷ ಹುದ್ದೆಗಳು ಖಾಲಿ ಇದ್ದು, ರೈಲ್ವೆಯಲ್ಲೇ 2.93 ಲಕ್ಷ ಹುದ್ದೆಗಳು ಭರ್ತಿ ಆಗಬೇಕಿದೆ. ರಕ್ಷಣಾ ಇಲಾಖೆಯಲ್ಲಿ 2.64 ಲಕ್ಷ ಸಿವಿಲ್ ಹುದ್ದೆ ಖಾಲಿ ಇವೆ. 1.43 ಲಕ್ಷದ ಹುದ್ದೆಗಳು ಗೃಹ ಇಲಾಖೆಯಲ್ಲೂ 90 ಸಾವಿರ ಹುದ್ದೆಗಳು ಅಂಚೆ ಇಲಾಖೆಯಲ್ಲಿ ಭರ್ತಿ ಆಗಿಲ್ಲ ಎಂದು ಸರ್ಕಾರ ಸಂಸತ್‌ಗೆ ತಿಳಿಸಿದೆ.

ರಾಹುಲ್ ಗಾಂಧಿಗೆ ಶಿಕ್ಷೆ ಮೇಲ್ಮನವಿ ಅರ್ಜಿ ಸಿದ್ಧ: ಮಾನಹಾನಿ ಪ್ರಕರಣದಲ್ಲಿ ಸೂರತ್‌ನ ನ್ಯಾಯಾಲಯ ಕಾಂಗ್ರೆಸ್ ನಾಯಕ್ ರಾಹುಲ್ ಗಾಂಧಿಗೆ ಎರಡು ವರ್ಷದ ಜೈಲು ಶಿಕ್ಷೆ ವಿಧಿಸಿದನ್ನು ಪ್ರಶ್ನಿಸಿ ಸಲ್ಲಿಸಲಾಗುವ ಅರ್ಜಿಯನ್ನು ಸಿದ್ಧಪಡಿಸಲಾಗಿದ್ದು, ಒಂದೆರೆಡು ದಿನದಲ್ಲಿ ಕೋರ್ಟ್‌ಗೆ ಸಲ್ಲಿಸಲಾಗುವುದೆಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಪಕ್ಷದ ಕಾನೂನು ಸಲಹೆಗಾರರು ಅರ್ಜಿಯ ಪರಿಶೀಲನೆ ನಡೆಸುತ್ತಿದ್ದು, ಸೂರತ್ ಸೆಷನ್ಸ್ ನ್ಯಾಯಾಲಯಕ್ಕೆ ದಿನದಲ್ಲಿ ಸಲ್ಲಿಸಲಾಗುವುದೆಂದು ಮೂಲಗಳು ಹೇಳಿವೆ. 'ಮೋದಿ ಉಪನಾಮ ಹೊಂದಿರುವವರು ಕಳ್ಳರೇಕೆ? ಎಂಬ ರಾಹುಲ್ ಹೇಳಿಕೆ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ಈ ಶಿಕ್ಷೆ ವಿಧಿಸಲಾದೆ. ಈ ಹಿನ್ನೆಲೆಯಲ್ಲಿ ಅವರ ಲೋಕಸಭಾ ಸದಸ್ಯತ್ವ ಅನರ್ಹಗೊಂಡಿದೆ. ಈ ವಿಚಾರವನ್ನು ರಾಜಕೀಯವಾಗಿಯೂ ಕಾನೂನತ್ಮಕವಾಗಿಯು ಎದುರಿಸಿ ಹೋರಾಡಲು ಕಾಂಗ್ರೆಸ್ ತೀರ್ಮಾನಿಸಿದೆ.

ಸಂಸತ್‌ಗೆ ಸರ್ಕರದ ಉತ್ತರ:

- ದೇಶದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಹಸಿವೆಯಿಂದ ಸತ್ತಿರುವ ಒಂದು ಪ್ರಕರಣವೂ ವರದಿ ಆಗಿಲ್ಲ. ಆದರೆ ದೇಶದಲ್ಲಿ 14 ಲಕ್ಷ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.
- ಮೊದಲ ಹಂತದಲ್ಲಿ 2.63 ಲಕ್ಷ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಡೇಟಾಬೇಸ್ ರಚನೆ ಪೂರ್ಣಗೊಂಡಿದೆ.
- 2021ರ ಡಿಸೆಂಬರ್ ವರೆಗೆ 472 ಮಂದಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದಾರೆ. ಉತ್ತರ ಪ್ರದೇಶದಲ್ಲಿ 67, ಬಿಹಾರ 46, ಮಹಾರಾಷ್ಟ್ರ 44, ಮದ್ಯಪ್ರದೇಶ 39, ಪಶ್ಚಿಮ ಬಂಗಾಳ 37, ಜಾರ್ಖಂಡ್ 31 ಮತ್ತು ಕರ್ನಾಟಕ 27 ಪ್ರಕರಣಗಳಿವೆ.
- 2021–22ರಲ್ಲಿ ಆರು ಟೆಲಿಕಾಂ ಕಂಪನಿಗಳ ಮೇಲೆ ರೂ.4.17 ಲಕ್ಷ ಕೋಟಿ ಸಾಲದ ಹೊರೆ ಇದೆ.
- ಕಿಸಾನ್ ರೈಲು ಸೇವೆ ಮೂಲಕ 167 ಮಾರ್ಗದಲ್ಲಿ 2,364 ರೈಲುಗಳು ಸಂಚರಿಸಿದ್ದು, 4 ರೂ. ಕೋಟಿ ಸಬ್ಸಿಡಿ ನೀಡಲಾಗಿದೆ.
- 2018 ರಿಂದೀಚೆಗೆ 30 ಸಾವಿರ ವೆಬ್ ಲಿಂಕ್‌ಗಳನ್ನು ವಿವಿಧ ಕಾರಣಕ್ಕಾಗಿ ನಿರ್ಬಂಧಿಸಲಾಗಿದೆ.
- ಯಾವುದೇ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ ಭರವಸೆಯನ್ನು ನೀಡಲಾಗಿಲ್ಲ.
- ದೆಹಲಿ, ಕರ್ನಾಟಕ. ಮಹಾರಾಷ್ಟ್ರ, ತಮಿಳುನಾಡಿನ(ಎನ್‌ಜಿಓ) ಗಳೂ ರೂ.55,600 ಕೋಟಿ ಹೆಚ್ಚು ವಿದೇಶಿ ದೇಣಿಗೆ ಪಡೆದಿವೆ. ಇದರಲ್ಲಿ ಕರ್ನಾಟಕದ ಎನ್‌ಜಿಓಗಳ ಪಡೆದ ಪಾಲು ರೂ.7,241 ಕೋಟಿ.

ಆಧಾರ: ವಿಜಯವಾಣಿ, ದಿನಾಂಕ:30.03.2023.

29. ಸಂಸತ್ತಿನಲ್ಲಿ ಗದ್ದಲ: ನಡೆಯದ ಕಲಾಪ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಅನರ್ಹತೆ ಖಂಡಿಸಿ ಪ್ರತಿಪಕ್ಷಗಳು ಪ್ರತಿಭಟನೆ ನಡೆಸಿದ್ದರಿಂದ ಲೋಕಸಭೆ ಹಾಗೂ ರಾಜ್ಯ ಸಭೆಯ ಕಲಾಪಗಳು ಸುಗಮವಾಗಿ ನಡೆಯಲಿಲ್ಲ. ಗದ್ದಲದ ನಡುವೆಯೇ ಸ್ವಧಾ (ತಿದ್ದುಪಡಿ) ಮಸೂದೆಗೆ ಲೋಕಸಭೆಯಲ್ಲಿ ಯಾವುದೇ ಚರ್ಚೆ ಇಲ್ಲದೆ ಅಂಗೀಕಾರ ಸಿಕ್ಕಿತು.

ಲೋಕಸಭೆಯಲ್ಲಿ, ಕಪ್ಪು ದಿರಿಸಿನಲ್ಲಿ ಪ್ರತಿಪಕ್ಷಗಳ ಸದಸ್ಯರು ಸ್ಪೀಕರ್ ಪೀಠದ ಎದುರು ಘೋಷಣೆಗಳನ್ನು ಕೂಗಿದರು. ಅದಾನಿ ಸಮೂಹದ ಷೇರುಗಳ ಮೌಲ್ಯ ತಿರುಚಿದ ಆರೋಪವನ್ನು ಜಂಟಿ ಸಂಸದೀಯ ಸಮಿತಿ ತನಿಖೆಗೆ ಒಳಪಡಿಸಬೇಕು ಎಂದು ವಿರೋಧ ಪಕ್ಷಗಳ ಸಂಸದರು ಒತ್ತಾಯಿಸಿದರು. ಸದನವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಮಧ್ಯಾಹ್ನವೂ ಗದ್ದಲ ಮುಂದುವರೆದ ಕಾರಣ ಕಲಾಪವನ್ನು ದಿನದಮಟ್ಟಿಗೆ ಮುಂದೂಡಲಾಯಿತು.

ರಾಜ್ಯಸಭೆಯಲ್ಲೂ ಇದೇ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ಸದಸ್ಯರು ಘೋಷಣೆ ಕೂಗಿದರು. ಗದ್ದಲದ ನಡುವೆಯೇ ಅರಣ್ಯ ಸಂರಕ್ಷಣೆ (ತಿದ್ದುಪಡಿ) ಮಸೂದೆಯ ಜಂಟಿ ಸಂಸದೀಯ ಸಮಿತಿಗೆ ಸದಸ್ಯರನ್ನು ನೇಮಿಸುವ ಗೊತ್ತುವಳಿಯನ್ನು ಮಂಡಿಸಲು ಸಚಿವ ಭೂಪೇಂದ್ರ ಯಾದವ್ ಅವರಿಗೆ ಸಭಾಪತಿ ಜಗದೀಪ್ ಸೂಚಿಸಿದರು. ಯಾದವ್ ಅವರು ಸದಸ್ಯರು ಹೆಸರನ್ನು ಪ್ರಕಟಿಸಿದರು. ಈ ಬಳಿಕ ಸದನವನ್ನು ಮೂಂದೂಡಲಾಯಿತು.

ಮುಖ್ಯಾಂಶಗಳು:

- ಎರಡನೇ ಹಂತದ ಬಜೆಟ್ ಅಧಿವೇಶನದಲ್ಲಿ ಕೋಲಾಹಲ
- ಮಾರ್ಚ್ 13 ರಿಂದಲೂ ನಡೆಯದ ಪ್ರಶ್ನೋತ್ತರ ಕಲಾಪ

'ಸ್ಥಾಯಿ ಸಮಿತಿಯನ್ನು ಅಪಮೌಲ್ಯ ಮಾಡಿದ ಕೇಂದ್ರ' : 'ಕೇಂದ್ರ ಸರ್ಕಾರವು' ಅರಣ್ಯ (ಸಂರಕ್ಷಣಾ) ತಿದ್ದುಪಡಿ ಮಸೂದೆ'ಯನ್ನು ಸಂಸದೀಯ ಸ್ಥಾಯಿ ಸಮಿತಿಗೆ ನೀಡುವ ಬದಲಿಗೆ, ಜಂಟಿ ಸಮಿತಿಗೆ ನೀಡಿದೆ. ಈ ಮೂಲಕ ಸ್ಥಾಯಿ ಸಮಿತಿಯನ್ನು ಅಪಮೌಲ್ಯ ಮತ್ತು ಅವಹೇಳನ ಮಾಡಿದೆ' ಎಂದು ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಈ ಸಂಬಂಧ ರಾಜ್ಯ ಸಭಾ ಸಭಾಪತಿ ಜಗದೀಪ್ ಧನಕರ್ ಅವರಿಗೆ ಪತ್ರ ಬರೆದಿರುವ ಅವರು, ಈ ವಿಚಾರದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಿ ಎಂದು ಆಗ್ರಹಿಸಿದ್ದಾರೆ.

'ಸದನಗಳಲ್ಲಿ ಮಂಡನೆಯಾಗುವ ಮಸೂದೆಗಳ ಪರಿಶೀಲನೆ ಅಗತ್ಯವಿದ್ದರೆ, ಅದನ್ನು ಸಂಬಂಧಿತ ಸಂಸದೀಯ ಸ್ಥಾಯಿ ಸಮಿತಿಗೆ ನೀಡಲಾಗುತ್ತದೆ. ಆದರೆ, ಸರ್ಕಾರವು ಈ ಮಸೂದೆಯನ್ನು ಜಂಟಿ ಸಮಿತಿಗೆ ನೀಡಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಸತ್ತಿನ ಉಭಯ ಸದನಗಳ ಸದಸ್ಯರನ್ನು ಒಳಗೊಂಡ ಎಂಟು ಸ್ಥಾಯಿ ಸಮಿತಿಗಳು ಇವೆ. 'ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸ್ಥಾಯಿ ಸಮಿತಿ'ಗೆ ಜೈರಾಮ್ ರಮೇಶ್ ಅಧ್ಯಕ್ಷರಾಗಿದ್ದಾರೆ.

'ನಾನು ಕಾಂಗ್ರೆಸ್ ಹಾಗೂ ಎಲ್ಲಾ ವಿರೋಧ ಪಕ್ಷಗಳ ಪರವಾಗಿ ಈ ಪತ್ರ ಬರೆಯುತ್ತಿದ್ದೇನೆ. ಸಂಸದೀಯ ಸ್ಥಾಯಿ ಸಮಿತಿಯ ಶಕ್ತಿಯನ್ನು ಸಂಪೂರ್ಣವಾಗಿ ಕುಂದಿಸುವ ಪ್ರಯತ್ನ ನಡೆಯುತ್ತಿದೆ. ಮಸೂದೆಯ ಪರಿಶೀಲನೆಗಾಗಿ ಲೋಕಸಭೆಯಲ್ಲಿ ಮೊದಲು ಜಂಟಿ ಸಂಸದೀಯ ಸಮಿತಿಗೆ ನೀಡಲಾಯಿತು. ನಂತರ ರಾಜ್ಯ ಸಭೆಯಲ್ಲಿ ನೀಡಲಾಯಿತು. ಈ ಮಸೂದೆಯು ನಮ್ಮ ಸ್ಥಾಯಿ ಸಮಿತಿಯ ಕಾರ್ಯವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರವು ಉದ್ದೇಶಪೂರ್ವಕವಾಗಿ ಈ ಮಸೂದೆಯ ಪರಿಶೀಲನೆ ನಡೆಸಲು ಸಂಸದೀಯ ಸ್ಥಾಯಿ ಸಮಿತಿಗೆ ನೀಡಿಲ್ಲ' ಎಂದು ರಮೇಶ್ ಅವರು ಪತ್ರದಲ್ಲಿ ಹೇಳಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:30.03.2023.

ಭಾಗ – 3

ಕೇಂದ್ರ ಸರ್ಕಾರದ ಸುದ್ದಿಗಳು

1. ಭಾರತಕ್ಕೆ ಜಲಜನಕ ಬಲ

ದೇಶದ ಇಂಧನ ಭದ್ರತೆಯ ಆಧಾರಸ್ಥಂಭವಾಗಬಲ್ಲ ಜಲಜನಕ ಉತ್ಪಾದನೆ ಹಾಗೂ ಭಾರತವನ್ನು ಸ್ವಚ್ಛ ಇಂಧನ ತಯಾರಿಕೆಯ ಜಾಗತಿಕ ಹಬ್ ಮಾಡುವ ಉದ್ದೇಶದ ರಾಷ್ಟ್ರೀಯ ಹಸಿರು ಜಲಜನಕ (ಹೈಡ್ರೋಜನ್) ಮಿಷನ್ ಸ್ಥಾಪನೆಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕಾಗಿ 19,744 ಕೋಟಿ ಅನುದಾನ ನಿಗದಿ ಮಾಡಿದೆ. ಯೋಜನೆಯ ಆರಂಭಿಕ ವೆಚ್ಚ 19,744 ಕೋಟಿ ಆಗಿದ್ದು, ಇದು ಹಸಿರು ಜಲಜನಕ ಪರಿವರ್ತನಾ ಕಾರ್ಯಕ್ರಮಕ್ಕಾಗಿ ಕಾರ್ಯತಂತ್ರ ಮಧ್ಯಸ್ಥಿಕೆ (ಸೈಟ್) ಯೋಜನೆಯ 17,490 ಕೋಟಿ ರೂಪಾಯಿಯನ್ನು ಒಳಗೊಂಡಿದೆ. 1,466 ಕೋಟಿ ರೂ. ವೆಚ್ಚದಲ್ಲಿ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತದೆ. ಈ ಪೈಕಿ 400 ಕೋಟಿ ರೂ.ಗಳನ್ನು ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ 388 ಕೋಟಿ ರೂಗಳನ್ನು ಯೋಜನೆಯ ಬಿಡಿಘಟಕಗಳಿಗೆ ನಿಗದಿ ಮಾಡಲಾಗಿದೆ. ನವೀನ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಸಚಿವಾಲಯ 'ಯೋಜನೆಯ ಮಾರ್ಗದರ್ಶಿಯನ್ನು ರಚಿಸಲಿದೆ ಎಂದು ವಾರ್ತಾ ಸಚಿವ ಅನುರಾಗ ಠಾಕೂರ್ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2030ರ ವೇಳೆಗೆ ದೇಶದಲ್ಲಿ 125 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಗುರಿ ಹೊಂದಲಾಗಿದೆ. ಜೊತೆಗೆ, 50 ಲಕ್ಷ ಮೆಟ್ರಿಕ್ ಟನ್‌ನಷ್ಟು (ಎಂಎಂಟಿ) ಹಸಿರು ಹೈಡ್ರೋಜನ್ ಉತ್ಪಾದನಾ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಇದಕ್ಕಾಗಿ 8 ಲಕ್ಷ ಕೋಟಿ ರೂ. ಹೂಡಿಕೆ ನಿರೀಕ್ಷಿಸಲಾಗಿದ್ದು, ಆರು ಲಕ್ಷ ಉದ್ಯೋಗವಾಕಾಶ ಸೃಷ್ಟಿಯಾಗುತ್ತದೆ ಎಂದು ನವೀಕರಿಸಬಹುದಾದ ಇಂಧನ ಸಚಿವಾಲಯ ತಿಳಿಸಿದೆ. ಹಸಿರು ಹೈಡ್ರೋಜನ್ ಉತ್ಪಾದನೆಯಿಂದ ತೈಲಾಧಾರಿತ ಇಂಧನವನ್ನು ಆಮದು ಮಾಡಿಕೊಳ್ಳುವ ಬಾಬ್ತಿನಲ್ಲಿ ರೂ.1 ಲಕ್ಷ ಕೋಟಿ ಉಳಿತಾಯ ಆಗಲಿದೆ. ಜೊತೆಗೆ, ಹಸಿರುಮನೆ ಅನಿಲ ಹೊರಸೂಸುವಿಕೆಯು ವಾರ್ಷಿಕ 50 ಎಂಎಂಟಿಯಷ್ಟು ತಗ್ಗಲಿದೆ.

ವಿದ್ಯುತ್ ಮೂಲಗಳು: ಭಾರತದ ಒಟ್ಟು ಇಂಧನ ಅವಶ್ಯಕತೆಯಲ್ಲಿ ಶೇ. 40ರಷ್ಟನ್ನು ನವೀಕರಿಸಬಹುದಾದ ಮೂಲಗಳಿಂದ ಪಡೆಯಲಾಗುತ್ತಿದೆ. ಇದರಲ್ಲಿ ಸೌರ, ಪವನ, ಜಲ, ಜೈವಿಕ ಮೂಲಗಳು ಸೇರಿವೆ. ಪರಮಾಣು ಇಂಧನದಿಂದ ಶೇ.3.11ರಷ್ಟು ವಿದ್ಯುತ್ ಪಡೆಯಲಾಗುತ್ತಿದೆ. ದೇಶದ ಒಟ್ಟು ವಿದ್ಯುತ್ ಅಗತ್ಯದಲ್ಲಿ ಶೇ.55ರಷ್ಟು ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳಿಂದ ಪೂರೈಕೆಯಾಗುತ್ತದೆ.

ಎಲೆಕ್ಟ್ರೋಲೇಸರ್ ಮತ್ತು ಹಸಿರು ಹೈಡ್ರೊಜನ್ ತಯಾರಿಕೆಯ ದೇಶೀಯ ಗುರಿ ಅನ್ವಯ ಉತ್ಪಾದನೆ, ಬಳಕೆ ಮತ್ತು ರಫ್ತಿನ ಬೇಡಿಕೆ ಹೆಚ್ಚಳವನ್ನು ಈ ಯೋಜನೆ ಸಾಧ್ಯವಾಗಿಸಲಿದೆ. ಉತ್ಪಾದನಾ ಮಾರ್ಗದಲ್ಲಿ ಪ್ರಾಯೋಗಿಕ ಯೋಜನೆಯನ್ನೂ ಈ ಮಿಷನ್ ಬೆಂಬಲಿಸುತ್ತದೆ. ದೊಡ್ಡ ಪ್ರಮಾಣದ ಬಳಕೆಯ ಸಾಮರ್ಥ್ಯವಿರುವ ಪ್ರದೇಶವನ್ನು ಗುರುತಿಸಿ ಹಬ್‌ಗಳಂತೆ ಅಭಿವೃದ್ಧಿಪಡಿಸಲು ಅವಕಾಶ ಇದೆ. ಹೈಡ್ರೊಜನ್ ಇಂಧನ ವಲಯದ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವಕ್ಕೂ ಆಸ್ಪದ ಇದ್ದು, ಆ ಆ್ಯಂಡ್ ಡಿ ಯೋಜನೆಗಳು ಗುರಿಯಾಧಾರಿತದ್ದಾಗಿರುತ್ತದೆ. ಜಾಗತಿಕಮಟ್ಟದ ಸ್ಪರ್ಧಾತ್ಮಕತೆಗೆ ತಕ್ಕಂತೆ ಸಹಕಾರ ಮನೋಭಾವದಿಂದ ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದಾಗಿದೆ. ಇದರಲ್ಲಿ ಕೇಂದ್ರ ಸರ್ಕಾರ ಸಂಬಂಧಿತ ಎಲ್ಲ ಸಚಿವಾಲಯ, ಇಲಾಖೆ, ಸಂಸ್ಥೆಗಳ ಸಹಕಾರದಿಂದ ಮಿಷನ್ ಮುಖ್ಯ ಗುರಿಯನ್ನು ತಲುಪುವ ಆಶಯ ಹೊಂದಲಾಗಿದೆ. ಈ ಎಲ್ಲ ಯೋಜನೆಗಳ ಸಮನ್ವಯದ ಹೊಣೆಗಾರಿಕೆಯನ್ನು ನವೀಕರಿಸಬಹುದಾದ ಇಂಧನ ಮೂಲಗಳ ಸಚಿವಾಲಯಕ್ಕೆ ನೀಡಲಾಗಿದೆ.

ವರ್ಷಾಂತ್ಯಕ್ಕೆ ಹೈಡ್ರೋಜನ್ ರೈಲು

ಭಾರತದ ಮೊದಲ ಹೈಡ್ರೋಜನ್ ಚಾಲಿತ ರೈಲು ಈ ವರ್ಷಾಂತ್ಯಕ್ಕೆ ಸಂಚರಿಸಲಿದೆ. ಪಾರಂಪರಿಕ ಮಾರ್ಗದ ನ್ಯಾರೋಗೇಜ್‌ನಲ್ಲಿ ಈ ರೈಲು ಓಡಾಡಲಿದೆ ಎಂದು ರೈಲ್ವೆ ಸಚಿವ ಅಶ್ವನಿ ವೈಷ್ಣವ್ ಇತ್ತೀಚೆಗೆ ಹೇಳಿದ್ದರು. ಭಾರತೀಯ ರೈಲ್ವೆಯು ಎಂಟು ಮಾರ್ಗವನ್ನು ಪಾರಂಪರಿಕ ಮಾರ್ಗವೆಂದು ಗುರುತಿಸಿದೆ. ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೆ, ನೀಲಗಿರಿ ಮೌಂಟೇನ್ ರೈಲ್ವೆ, ಕಲ್ಕಾ–ಶಿಮ್ಲಾ ರೈಲ್ವೆ, ಮಾಥೆರಾನ್ ಹಿಲ್ ರೈಲ್ವೆ, ಕಂಗ್ರಾ ಕಣಿವೆ, ಬಿಲ್ಲೋರಾ, ವಾಫ್ಟ್, ಮಾರ್ವಾರ್–ದೇವಗಢ ಮಾದ್ರಿಯಾ ಮಾರ್ಗಗಳಲ್ಲಿ ಈ ರೈಲು ಸಂಚರಿಸಲಿದೆ. ಕೆಲ ದಿನಗಳ ಹಿಂದಷ್ಟೇ ಚೀನಾದ ಮೊದಲ ಹೈಡ್ರೋಜನ್ ರೈಲು ಸಂಚರಿಸಿದ್ದು, ಇದು ವಿಶ್ವದಲ್ಲಿ ಎರಡನೇ ಮತ್ತು ಏಷ್ಯಾದ ಪ್ರಥಮ ಹೈಡ್ರೋಜನ್ ಚಾಲಿತ ರೈಲಾಗಿದೆ. ಈ ವಿಚಾರದಲ್ಲಿ ಜರ್ಮನಿ ಮೊದಲ ರಾಷ್ಟ್ರ ಎನಿಸಿದೆ.

2ನೇ ಅತಿದೊಡ್ಡ ತೈಲ ಖರೀದಿದಾರ

ಜಾಗತಿಕವಾಗಿ ಹೆಚ್ಚು ಇಂಧನ ಖರೀದಿಸುವ ರಾಷ್ಟ್ರಗಳ ಪೈಕಿ ಭಾರತ ಎರಡನೇ ಸ್ಥಾನದಲ್ಲಿದೆ. ದೇಶದ ಒಟ್ಟು ಬಳಕೆಯಲ್ಲಿ ಶೇ.85ರಷ್ಟು ಇಂಧನ ಆಮದಾಗುತ್ತದೆ. ವಾರ್ಷಿಕವಾಗಿ ಸರಾಸರಿ 250 ದಶಲಕ್ಷ ಟನ್ ಇಂಧನವನ್ನು ಭಾರತ ಖರೀದಿ ಮಾಡುತ್ತದೆ. 2022ರ ಆರ್ಥಿಕ ಸಾಲಿನ ಪ್ರಥಮಾರ್ಧದಲ್ಲಿ 116.6 ದಶಲಕ್ಷ ಟನ್ ಇಂಧನ ಖರೀದಿಗೆ ತಗುಲಿದ ವೆಚ್ಚ 90.30 ಬಿಲಿಯನ್ ಡಾಲರ್ (ಅಂದಾಜು ರೂ.7.47 ಲಕ್ಷ ಕೋಟಿ). ಹಸಿರು ಹೈಡ್ರೋಜನ್ ಉತ್ಪಾದನೆಯಿಂದ ಈ ಆಮದು ಮೊತ್ತದಲ್ಲಿ ರೂ.1 ಲಕ್ಷ

ಕೋಟಿ ಉಳಿತಾಯ ಆಗಲಿದೆ ಎಂಬ ಅಂದಾಜಿದೆ. ನವೀಕರಿಸಬಹುದಾದ ಇಂಧನ ಮತ್ತು ಹೈಡ್ರೋಜನ್ ಉತ್ಪಾದನೆಯಲ್ಲಿ ಏರಿಕೆಯಾದ ಕಾರಣ 2022ರಲ್ಲಿ ಕಚ್ಚಾ ತೈಲ ಖರೀದಿ ಶೇ.67 ಇತ್ತು. ಭಾರತಕ್ಕೆ ಅತಿ ಹೆಚ್ಚು ತೈಲ ಪೂರೈಸುವ ರಾಷ್ಟ್ರ ಇರಾಕ್. ಇಲ್ಲಿಂದ ಶೇ.52.5ರಷ್ಟು ಇಂಧನ ಖರೀದಿಸಲಾಗುತ್ತದೆ. ಉಳಿದ ಪಾಲನ್ನು 14 ರಾಷ್ಟ್ರಗಳಿಂದ ಪಡೆಯಲಾಗುತ್ತದೆ. ಯೂಕ್ರೇನ್ ಸಂಘರ್ಷ ಆರಂಭವಾದ ಮೇಲೆ ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲವನ್ನು ಭಾರತ ಖರೀದಿಸುತ್ತಿದೆ.

ಯೋಜನೆಯಿಂದಾಗುವ ಪ್ರಯೋಜನಗಳು

- ಹಸಿರು ಹೈಡ್ರೋಜನ್ ಮತ್ತು ಅದರ ಉತ್ಪನ್ನಗಳ ರಫ್ತಿಗೆ ಅವಕಾಶ ಹೆಚ್ಚಳ.
- ಕೈಗಾರಿಕೆಗಳನ್ನು ಇಂಗಾಲ ಹೊರಸೂಸುವಿಕೆಯಿಂದ ಮುಕ್ತಗೊಳಿಸುವುದು.
- ಇಂಧನ ಆಮದಿನ ಅವಲಂಬನೆಯನ್ನು ತಗ್ಗಿಸುತ್ತದೆ.
- ದೇಶೀಯವಾಗಿ ಹೊಸ ಇಂಧನ ತಯಾರಿಕೆಯ ಸಾಮರ್ಥ್ಯ.
- ಉದ್ಯೋಗ ಸೃಜನೆ, ಅತ್ಯಾಧುನಿಕ ತಂತ್ರಜ್ಞಾನದ ಅಭಿವೃದ್ಧಿ.

ಆಧಾರ: ವಿಜಯವಾಣಿ, ದಿನಾಂಕ: 05.01.2023

2. ಹೊಸ ಸಂಸತ್ ಭವನ ಸಜ್ಜು

ಕೇಂದ್ರ ಸರ್ಕಾರದ ದೆಹಲಿಯ ಸೆಂಟ್ರಲ್ ವಿಸ್ಟಾ ಮರು ಅಭಿವೃದ್ಧಿ ಯೋಜನೆಯ ಭಾಗವಾಗಿರುವ ಹೊಸ ಸಂಸತ್ ಕಟ್ಟಡ ನಿರ್ಮಾಣ ಕಾರ್ಯ ಬಹುತೇಕ ಅಂತಿಮಗೊಳ್ಳುತ್ತಿದ್ದು, ಬರುವ ಮಾರ್ಚ್‌ನಲ್ಲಿ ಉದ್ಘಾಟನೆಯಾಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಏತನ್ಮಧ್ಯೆ, ಫೆಬ್ರವರಿ 1ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನ್ನು ಹೊಸ ಸಂಸತ್ತಲ್ಲಿ ಮಂಡಿಸಲಿದ್ದಾರೆ ಎಂದು ಹೇಳಲಾಗಿದೆ. 2023ರ ಬಜೆಟ್ ಸ್ಮರಣೀಯವಾಗಿರಿಸುವ ಉದ್ದೇಶದಿಂದ ಹೊಸ ಸಂಸತ್‌ನಲ್ಲಿ ಬಜೆಟ್ ಮಂಡಿಸಬೇಕು ಎಂಬುದು ಕೇಂದ್ರದ ಚಿಂತನೆ. ರಾಷ್ಟ್ರಪತಿ ದ್ರೌಪದಿ ಮುರ್ಮು 31ರಂದು ಇದೇ ಕಟ್ಟಡದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆನ್ನಲಾಗಿದೆ. ರಾಷ್ಟ್ರಪತಿಯಾದ ಬಳಿಕ ಮುರ್ಮು ಸಂಸತ್‌ನಲ್ಲಿ ಮಾಡುತ್ತಿರುವ ಮೊದಲ ಭಾಷಣ ಇದಾಗಲಿದೆ. ಲೋಕಸಭೆ ಸಚಿವಾಲಯದ ಕಾರ್ಯದರ್ಶಿ ಕಚೇರಿ ಮೂಲಕ ಹೊಸ ಸಂಸತ್ ಪ್ರವೇಶಕ್ಕೆ ಸಂಬಂಧಿಸಿ ಸಂಸದರಿಗೆ ಹೊಸ ಗುರುತಿನ ಕಾರ್ಡ್‌ಗಳನ್ನು ಸಿದ್ಧಪಡಿಸಲಾಗಿದೆ.

ರೂ. 862 ಕೋಟಿ ಅಂದಾಜು ವೆಚ್ಚ

ಸರ್ಕಾರ ಈ ಹಿಂದೆ ನೀಡಿದ್ದ ಮಾಹಿತಿ ಪ್ರಕಾರ 862 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಾಣಗೊಳ್ಳುತ್ತಿದೆ. 2020ರಲ್ಲಿ ಪ್ರಧಾನಿ ನರೇಂದ್ರ ಮೋದಿ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ್ದರು. ರಾಜ್ಯದ ಶೃಂಗೇರಿ ಶಾರದಾ ಪೀಠದ ಪುರೋಹಿತ ವರ್ಗ ಶಂಕುಸ್ಥಾಪನೆಗೆ ಸಂಬಂಧಿಸಿದ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿತ್ತು.

1,224 ಆಸನಗಳು

ಸಂಸತ್ ಭವನ ನಿರ್ಮಾಣ ಕಾರ್ಯದಲ್ಲಿ ಸುಮಾರು ಎರಡು ಸಾವಿರ ಮಂದಿ ನೇರವಾಗಿ ತೊಡಗಿದ್ದರೆ, ಪರೋಕ್ಷವಾಗಿ 9 ಸಾವಿರ ಜನ ಕೆಲಸ ಮಾಡಿದ್ದಾರೆ. ಅಧಿವೇಶನದಲ್ಲಿ 1,224 ಸಂಸದರು ಆಸೀನ ರಾಗುವಷ್ಟು ದೊಡ್ಡದಾಗಿ ಹಾಲ್ ನಿರ್ಮಾಣ ಮಾಡಲಾಗಿದೆ. ಹಳೆಯ ಸಂಸತ್ ಭವನ ಸ್ಮಾರಕ ವನ್ನಾಗಿ ರಕ್ಷಿಸಿಡಲು ಕೇಂದ್ರ ಯೋಜನೆ ಮಾಡಿದೆ.

9 ದಶಕದ ಹಳೆಯ ಭವನ

ಈಗಿರುವ ಸಂಸತ್ ಭವನವು (ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್) ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದ್ದು, 1921ರಲ್ಲಿ ಕಾಮಗಾರಿ ಆರಂಭವಾಗಿ 1927ಕ್ಕೆ ಪೂರ್ಣಗೊಂಡಿತ್ತು. ಇದಕ್ಕೆ ತಗುಲಿದ ವೆಚ್ಚ ರೂ. 83 ಲಕ್ಷ ಕಟ್ಟಡದ ವಿನ್ಯಾಸವನ್ನು ಎಲ್ವಿನ್ ಲುಟಿಯೆನ್ ಮತ್ತು ಹರ್ಬರ್ಟ್ ಬೇಕರ್ ಮಾಡಿದ್ದರು. 1927ರ ಜನವರಿ 18ರಂದು ಕಟ್ಟಡವನ್ನು ಭಾರತದ ವೈಸ್‌ರಾಯ್ ಲಾರ್ಡ್ ಇರ್ವಿನ್ ಉದ್ಘಾಟಿಸಿದ್ದರು. ಮರುದಿನವೇ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಮೊದಲ ಸಭೆ ನಡೆದಿತ್ತು. 1956ರಲ್ಲಿ ಇನ್ನೆರಡು ಅಂತಸ್ತನ್ನು ನಿರ್ಮಿಸಲಾಯಿತು.

ಗಮನ ಸೆಳೆಯುವ ವಿನ್ಯಾಸ

ನೂತನ ಸಂಸತ್ ಭವನದ ಚಿತ್ರಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದು, ಹೊಸ ವಿನ್ಯಾಸ, ಕಟ್ಟಡ, ಸೆಂಟ್ರಲ್ ಹಾಲ್, ಲೈಬ್ರರಿ ಸೇರಿ ವಿವಿಧ ಕಟ್ಟಡಗಳು ಗಮನಸೆಳೆಯುತ್ತಿವೆ. ಜನವರಿ 31ರಂದು ಆರಂಭಗೊಳ್ಳುತ್ತಿರುವ ಬಜೆಟ್ ಅಧಿವೇಶನ ಈ ಕಟ್ಟಡದಲ್ಲಿ ನಡೆಯುವ ಸಾಧ್ಯತೆಗಳ ಬಗ್ಗೆ ಕೇಂದ್ರ ಯಾವುದೇ ಅಧಿಕೃತ ಮಾಹಿತಿ ಹಂಚಿಕೊಂಡಿಲ್ಲ. ಆದರೆ ಮಾರ್ಚ್‌ನಿಂದ ಏಪ್ರಿಲ್ ವರೆಗಿನ ಬಜೆಟ್ ಅಧಿವೇಶನದ ದ್ವಿತೀಯಾರ್ಧ ಹೊಸ ಸಂಸತ್‌ನಲ್ಲಿ ನಡೆಯಬಹುದು ಎಂದು ಹೇಳಲಾಗುತ್ತಿದೆ ಸೆಂಟ್ರಲ್ ವಿಸ್ತಾ ಯೋಜನೆಯ ಭಾಗವಾಗಿ ಟಾಟಾ ಪ್ರಾಜೆಕ್ಟ್ ಲಿಮಿಟೆಡ್ ಕಾರ್ಯನಿರ್ವಹಿಸುತ್ತಿದೆ.

ಆಧಾರ: ವಿಜಯವಾಣಿ, ದಿನಾಂಕ: 21.01.2023

3. ಮೊಘಲ್ ಗಾರ್ಡನ್ ಇನ್ನು ಅಮೃತ ಉದ್ಯಾನ

ರಾಷ್ಟ್ರಪತಿ ಭವನದಲ್ಲಿರುವ ಪ್ರಸಿದ್ಧ ಮೊಘಲ್ ಉದ್ಯಾನ ಇನ್ನು 'ಅಮೃತ್ ಉದ್ಯಾನ್' ಆಗಿ ಬದಲಾಗಲಿದೆ. ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮರುನಾಮಕರಣ ಮಾಡಲು ತೀರ್ಮಾನಿಸಿದ್ದಾರೆ.

ರಾಷ್ಟ್ರಪತಿ ಭವನ ಸುಂದರವಾದ, ವೈವಿಧ್ಯಮಯ ಉದ್ಯಾನಗಳನ್ನೊಳಗೊಂಡಿರುವ ಸ್ಥಳ. ಈಸ್ಟ್ ಲಾನ್, ಸೆಂಟ್ರಲ್ ಲಾನ್, ಲಾಂಗ್ ಗಾರ್ಡನ್ ಮತ್ತು ಸರ್ಕ್ಯುಲರ್ ಗಾರ್ಡನ್‌ಗಳೆಂಬ ವಿಶಿಷ್ಟ ಉದ್ಯಾನಗಳು ಇಲ್ಲಿವೆ. ಮಾಜಿ ರಾಷ್ಟ್ರಪತಿಗಳಾದ ದಿವಂಗತ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಮತ್ತು ರಾಮನಾಥ ಕೋವಿಂದ ಅವಧಿಯಲ್ಲಿ ಹರ್ಬಲ್–ಐ, ಹರ್ಬಲ್–ಐಐ, ಟ್ಯಾಕ್ಟೈಲ್ ಗಾರ್ಡನ್, ಬೋನ್ಸಾಯ್ ಗಾರ್ಡನ್ ಮತ್ತು ಆರೋಗ್ಯ ವನಗಳನ್ನು ರೂಪಿಸಲಾಯಿತು.

ಅಮೃತ್ ಉದ್ಯಾನವು ಜಮ್ಮು–ಕಾಶ್ಮೀರದ ಮೊಘಲ್ ಉದ್ಯಾನ, ತಾಜ್ ಮಹಲ್ ಸುತ್ತಲಿನ ಉದ್ಯಾನ, ಭಾರತ– ಪರ್ಷಿಯಾದ ವರ್ಣಚಿತ್ರಗಳಿಂದ ಸ್ಫೂರ್ತಿ ಪಡೆದಿದೆ ಎಂಬ ಮಾಹಿತಿ ರಾಷ್ಟ್ರಪತಿ ಭವನದ ವೆಬ್‌ಸೈಟ್‌ನಲ್ಲಿದೆ. ನಾಳೆಯಿಂದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಯಾನಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲಿದ್ದಾರೆ.

1917ರಲ್ಲಿ ವಿನ್ಯಾಸ: ನವದೆಹಲಿಯ ರಾಷ್ಟ್ರಪತಿ ಭವನ ಸೇರಿ ಹಲವು ಕಟ್ಟಡಗಳನ್ನು ನಿರ್ಮಾಣ ಮಾಡಿದ್ದ ಬ್ರಿಟಿಷ್ ವಾಸ್ತುಶಿಲ್ಪಿ ಸರ್ ಎಲ್ವಿನ್ ಲುಟೆನ್ 1917ರಲ್ಲಿ ಈ ಉದ್ಯಾನವನ್ನು ಅಂತಿಮಗೊಳಿಸಿದ್ದರು. ಆದರೆ ವಿನ್ಯಾಸ ಅಂತಿಮಗೊಂಡ 10 ವರ್ಷಗಳ ಬಳಿಕ ಇಲ್ಲಿ ಸಸ್ಯಗಳನ್ನು ಬೆಳೆಸಲಾಯಿತು. ಭಾರತದ ಮೊದಲ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ ಅವರು ದೇಶದ ಆಹಾರ ಕೊರತೆಯ ಸಮಸ್ಯೆ ಪರಿಹರಿಸುವ ಸಲುವಾಗಿ ಮೈದಾನದ ಒಂದು ಭಾಗದಲ್ಲಿ ಗೋಧಿಯನ್ನು ಸಾಂಕೇತಿಕವಾಗಿ ಬೆಳೆದಿದ್ದರು. ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ತಮ್ಮ ಅಧಿಕಾರಾವಧಿಯಲ್ಲಿ ಹರ್ಬಲ್ ಗಾರ್ಡನ್ಸ್, ದೃಷ್ಟಿಹೀನರಿಗೆ ಟ್ಯಾಕ್ಟೈಲ್ ಗಾರ್ಡನ್, ಮ್ಯೂಸಿಕಲ್ ಗಾರ್ಡನ್, ಜೈವಿಕ ಇಂಧನ ಪಾರ್ಕ್, ಆಧ್ಯಾತ್ಮಿಕ ಮತ್ತು ಪೋಷಣೆ ಉದ್ಯಾನಗಳನ್ನು ಅಭಿವೃದ್ಧಿ ಪಡಿಸಿದ್ದರು. ಸಂಪನ್ಮೂಲಗಳ ಸಮರ್ಥ ಬಳಕೆ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಯಿಂದ ರಾಷ್ಟ್ರಪತಿ ಭವನವನ್ನು ಪರಿಸರಸ್ನೇಹಿ ಮಾಡುವ ರೋಶಿನಿ ಯೋಜನೆ ಜೊತೆಗೆ ಬೋನ್ಸಾಯ್ ಉದ್ಯಾನವನ್ನು ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟಿಲ್ ನಿರ್ಮಾಣ ಮಾಡಿದ್ದರು.

ಈ ವರ್ಷದ ಉದ್ಯಾನ ಉತ್ಸವದಲ್ಲಿ ವಿಶೇಷವಾಗಿ ಬೆಳೆಸಲಾದ 12 ಪ್ರಭೇದಗಳ ಹೂಗಿಡಗಳನ್ನು ಪ್ರವಾಸಿಗರು ನೋಡಬಹುದು. ವಿವಿಧ ಹಂತಗಳಲ್ಲಿ ಅರಳುವ ಈ ಹೂಸಸ್ಯಗಳ ಬಗ್ಗೆ ಹೆಚ್ಚಿನ

ಮಾಹಿತಿಯನ್ನು ಉದ್ಯಾನದಲ್ಲಿರಿಸಲಾಗುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಪಡೆಯಬಹುದು. ಉದ್ಯಾನಕ್ಕೆ ಭೇಟಿ ನೀಡಲು ಪ್ರವಾಸಿಗರು ಆನ್‌ಲೈನ್ ಬುಕಿಂಗ್ (https://rashtrapatisachivalaya.gov.in ಅಥವಾ https://rbnic.in/rbvisit/visit%oplan.aspx) ಮೂಲಕ ಸ್ಲಾಟ್‌ಗಳನ್ನು ನಿಗದಿಗೊಳಿಸಬಹುದು. ನೂರಾರು ಮಾದರಿಯ ಸಸ್ಯ, ಹೂವುಗಳಿಂದ ಈ ಉದ್ಯಾನ ಜನಾಕರ್ಷಣೆಯ ಕೇಂದ್ರವಾಗಿದೆ.

ಯಾವ್ಯಾವ ಹೆಸರು ಬದಲಾವಣೆ?

2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಎನ್‌ಡಿಎ ಸರ್ಕಾರ ಪ್ರಧಾನಿ ನಿವಾಸದ ಎದುರಿನ ರೇಸ್ ಕೋರ್ಸ್ ರಸ್ತೆಗೆ ಲೋಕಕಲ್ಯಾಣ ಮಾರ್ಗ, ಪಕ್ಕದಲ್ಲಿರುವ ಔರಂಗಾಜೇಬ್ ರಸ್ತೆಗೆ ಡಾ. ಅಬ್ದುಲ್ ಕಲಾಂ ರಸ್ತೆ ಎಂಬ ಹೆಸರನ್ನಿಡುವ ತೀರ್ಮಾನ ಕೈಗೊಂಡಿತ್ತು. ಕಳೆದ ವರ್ಷ ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್ ನಡುವಿನ ಮೂರೂವರೆ ಕಿಲೋಮೀಟರ್ ಉದ್ದದ ರಾಜಪಥದ ಹೆಸರನ್ನು ಕರ್ತವ್ಯಪಥ ಎಂದು ಬದಲಿಸಲಾಗಿತ್ತು. ಸೆಂಟ್ರಲ್ ವಿಸ್ಟಾ ಮರು ಅಭಿವೃದ್ಧಿ ಯೋಜನೆಯಡಿಯಲ್ಲಿ ಕರ್ತವ್ಯಪಥವನ್ನು ಅಭಿವೃದ್ಧಿಗೊಳಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ: 29.01.2023

4. ಹಿಂಜರಿತ ತಡೆಗೆ ಅಮೃತ ಬಜೆಟ್

ಸ್ವಾತಂತ್ರ್ಯದ 75ನೇ ವರ್ಷದಿಂದ 100ನೇ ವರ್ಷದವರೆಗಿನ 'ಅಮೃತ ಕಾಲ' ದಲ್ಲಿ ಭಾರತವನ್ನು ಹೊಸ ಎತ್ತರಕ್ಕೆ ಒಯ್ದು ಬಲಿಷ್ಠವಾಗಿಸಲು, ವಿಶ್ವವನ್ನು ಅಲುಗಾಡಿಸುತ್ತಿರುವ ಜಾಗತಿಕ ಆರ್ಥಿಕ ಹಿಂಜರಿತ ಭೀತಿಯನ್ನು ಸಮರ್ಥವಾಗಿ ಎದುರಿಸಲು, ಹಿಂಜರಿತವನ್ನೇ ಅವಕಾಶನ್ನಾಗಿಸಿಕೊಂಡು ಮತ್ತಷ್ಟು ಅಭಿವೃದ್ಧಿ ಸಾಧಿಸಲು, ಭಾರತವನ್ನು ಉತ್ಪಾದನಾ ತಾಣವನ್ನಾಗಿಸಲು, ಭವಿಷ್ಯದ ಉದ್ಯೋಗಗಳನ್ನು ಕಬಳಿಸಲು ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಬಜೆಟ್‌ನಲ್ಲಿ ಒತ್ತು ನೀಡಿದ್ದಾರೆ. ಮೋದಿ ಸರ್ಕಾರದ 2ನೇ ಅವಧಿಯ ಕೊನೆಯ ಪೂರ್ಣ ಪ್ರಮಾಣದ ಬಜೆಟ್ ಇದಾಗಿದ್ದರೂ ಉಚಿತ ಘೋಷಣೆಗಳನ್ನು ಮಾಡಿ ಮತ ಸೆಳೆಯುವ ಪ್ರಯತ್ನ ಮಾಡಿಲ್ಲ. ಆದರೆ ಕೆಲವೊಂದು ವರ್ಗಗಳಿಗೆ ವಿಶೇಷ ಒತ್ತು ನೀಡಿ ಯೋಜನೆಗಳನ್ನು ಪ್ರಕಟಿಸಲಾಗಿದೆ.

ಮಾಧ್ಯಮ ವರ್ಗಕ್ಕೆ ತೆರಿಗೆ ಬಂಪರ್: 7 ಲಕ್ಷ ಆದಾಯಕ್ಕೆ ತೆರಿಗೆ ಇಲ್ಲ ರೂ.37500ವರೆಗೆ ಉಳಿತಾಯ ಹೊಸ ತೆರಿಗೆ ವ್ಯವಸ್ಥೆಯಡಿ ರೂ.5 ಲಕ್ಷ ದವರೆಗಿನ ವಾರ್ಷಿಕ ಆದಾಯಕ್ಕಿದ್ದ ತೆರಿಗೆ ವಿನಾಯಿತಿ ರೂ.7 ಲಕ್ಷಕ್ಕೆ ಹೆಚ್ಚಳ. ಹೀಗಾಗಿ ವಾರ್ಷಿಕ 7 ಲಕ್ಷದವರೆಗೆ ಆದಾಯ ಇದ್ದರೆ ನಯಾಪೈಸೆ ತೆರಿಗೆ ಕಟ್ಟಬೇಕಿಲ್ಲ. ಇದರ ಪರಿಣಾಮವಾಗಿ ರೂ.7 ಲಕ್ಷದವರೆಗಿನ ಆದಾಯ ಹೊಂದಿದವರಿಗೆ ರು.32500, ರೂ.15 ಲಕ್ಷ ಆದಾಯ ಗಳಿಸುತ್ತಿರುವವರಿಗೆ ರೂ. 37500 ಉಳಿತಾಯ.

ತೆರಿಗೆ ವಿನಾಯಿತಿ ಮಿತಿ 3 ಲಕ್ಷಕ್ಕೆ: ವಾರ್ಷಿಕ ರೂ.2.5 ಲಕ್ಷವರೆಗಿನ ಆದಾಯಕ್ಕೆ ಇದ್ದ ತೆರಿಗೆ ವಿನಾಯಿತಿ ಮಿತಿ ರೂ.3 ಲಕ್ಷಗೆ ಏರಿಕೆ. 9 ವರ್ಷದ ಬಳಿಕ ತೆರಿಗೆ ವಿನಾಯಿತಿ ಮಿತಿ ಹೆಚ್ಚಳ. ತೆರಿಗೆ ಸ್ಲ್ಯಾಬ್‌ಗಳ ಸಂಖ್ಯೆ 6 ರಿಂದ 5 ಕ್ಕೆ ಇಳಿಕೆ.

ಆರ್ಥಿಕತೆಗೆ ಬೂಸ್ಟರ್: ರೂ.10 ಲಕ್ಷ ಕೋಟಿ ಹೂಡಿಕೆ ಅಭಿವೃದ್ಧಿ, ಉದ್ಯೋಗಕ್ಕೆ ಭಾರಿ ಕೊಡುಗೆ ನೀಡುವ ಬಂಡವಾಳ ಹೂಡಿಕೆ ಮೊತ್ತ ಸತತ 3ನೇ ವರ್ಷವೂ ಏರಿಕೆ. ರೂ.10 ಲಕ್ಷ ಕೋಟಿಗೆ ಹೆಚ್ಚಳ. ಇದು ಜಿಡಿಪಿಯ ಶೇ.3.3 ರಷ್ಟು .2019–20ನೇ ಸಾಲಿಗೆ ಹೋಲಿಸಿದರೆ 3 ಪಟ್ಟು ಅಧಿಕ.

ಸಾರಿಗೆಗೆ ರೂ.75000 ಕೋಟಿ: ಬಂದರು, ಕಲ್ಲಿದ್ದಲು, ಉಕ್ಕು, ರಸಗೊಬ್ಬರ, ಆಹಾರ, ಧಾನ್ಯ ವಲಯಗಳಿಗೆ ಕೊನೆಯವರೆಗೂ ಸಂಪರ್ಕ ಕಲ್ಪಿಸಲು 100 ಕ್ಲಿಷ್ಟಕರ ಸಾರಿಗೆ ಮೂಲಸೌಕರ್ಯ ಯೋಜನೆಗೆ ರೂ.75 ಸಾವಿರ ಕೋಟಿ ಹೂಡಿಕೆ.

50 ಏರ್‌ಪೋರ್ಟ್, ಏರೋಡ್ರೋಂ: 50 ಹೆಚ್ಚುವರಿ ಏರ್ ಪೋರ್ಟ್, ಹೆಲಿಪೋರ್ಟ್, ವಾಟರ್ ಏರೋಡ್ರೋಮ್, ಅತ್ಯಾಧುನಿಕ ಲ್ಯಾಂಡಿಂಗ್ ಗ್ರೌಂಡ್‌ಗಳಿಗೆ ಪುನಶ್ಚೇತನ. ತನ್ಮೂಲಕ ಪ್ರಾದೇಶಿಕ ವಿಮಾನಯಾನ ಸಂಪರ್ಕ ಸುಧಾರಣೆ.

2,3ನೇ ಹಂತದ ನಗರಗಳಿಗೆ ನಿಧಿ: 2 ಹಾಗೂ 3ನೇ ಹಂತದ ನಗರಗಳಲ್ಲಿ ಮೂಲಸೌಕರ್ಯ ಸೃಷ್ಟಿಸಲು ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆ. ರಾಷ್ಟ್ರೀಯ ಹೌಸಿಂಗ್ ಬ್ಯಾಂಕ್‌ನಿಂದ ನಿರ್ವಹಣೆ. ಸಾರ್ವಜನಿಕ ಸಂಸ್ಥೆಗಳ ಬಳಕೆಗೆ ಲಭ್ಯ.

ಆತ್ಮ ನಿರ್ಭರತೆಗೆ ಸುಂಕ ಕಡಿತ: ಸ್ವದೇಶಿ ಉತ್ಪಾದನೆಗೆ ಒತ್ತು ನೀಡಲು ಮೊಬೈಲ್ ಕ್ಯಾಮೆರಾ ಲೆನ್ಸ್, ಬ್ಯಾಟರಿ, ಟೀವಿ ಪ್ಯಾನೆಲ್ ಮೇಲಿನ ಸೀಮಾಸುಂಕ ಕಡಿತ. ಕೆಲವೊಂದು ರಾಸಾಯನಿಕ, ಪೆಟ್ರೋಕೆಮಿಕಲ್‌ಗಳಿಗೂ ಆಮದು ಸುಂಕ ಕಡಿತ.

ರಾಜ್ಯಗಳಿಗೆ 1.3 ಲಕ್ಷ ಕೋಟಿ ಸಾಲ : ಮೂಲಸೌಕರ್ಯ ಹೂಡಿಕೆ ಹೆಚ್ಚಿಸಲು ರಾಜ್ಯಗಳಿಗೆ ನೀಡಲಾಗುವ ಬಡ್ಡಿರಹಿತ ಸಾಲ ಯೋಜನೆ ಇನ್ನು 1 ವರ್ಷ ವಿಸ್ತರಣೆ. ಇದರ ಮೊತ್ತ ರೂ.80 ಸಾವಿರ ಕೋಟಿಯಿಂದ ರೂ.1.3 ಲಕ್ಷ ಕೋಟಿಗೆ ಹೆಚ್ಚಳ.

ರೂ.45 ಲಕ್ಷ ಕೋಟಿ: 2023–24ನೇ ಸಾಲಿನ ಬಜೆಟ್‌ನ ಒಟ್ಟು ಗಾತ್ರ

ಹಿರಿಯ ನಾಗರಿಕರಿಗೆ 2 ಭರ್ಜರಿ ಗಿಫ್ಟ್:

1. ಅಂಚೆ ಇಲಾಖೆ, ಬ್ಯಾಂಕುಗಳಲ್ಲಿ ಹಿರಿಯ ನಾಗರಿಕರ ಉಳಿತಾಯ ಯೋಜನೆಯಡಿ ಠೇವಣಿ ಇಡುವ ಮೊತ್ತ ರೂ.15 ರಿಂದ 30 ಲಕ್ಷ ಗೇರಿಕೆ. 5 ವರ್ಷಗಳ ಅವಧಿ ಹೊಂದಿರುವ ಯೋಜನೆಯಡಿ ಹಿರಿಯರಿಗೆ ಶೇ.7.4 ಬಡ್ಡಿ ಸಿಗುತ್ತದೆ. ಸೆಕ್ಷನ್ 80ಸಿ ಅಡಿ ತೆರಿಗೆ ವಿನಾಯಿತಿ ಸಿಗುತ್ತದೆ.
2. ಅಂಚೆ ಇಲಾಖೆ ಒದಗಿಸುವ ಮಾಸಿಕ ಆದಾಯ ಯೋಜನೆಯಡಿ ಒಂದು ಖಾತೆಯಿಂದ ಹೂಡಬಹುದಾದ ಗರಿಷ್ಠ ಮೊತ್ತ ರೂ.4.5 ಲಕ್ಷದಿಂದ ರೂ.9 ಲಕ್ಷಕ್ಕೆ ಏರಿಕೆ. ಜಂಟಿ ಖಾತೆಯಿಂದ ಹೂಡಬಹುದಾದ ಗರಿಷ್ಠ ಮೊತ್ತ ರೂ.15 ಲಕ್ಷಕ್ಕೆ ಹೆಚ್ಚಳ.

ಭದ್ರಾ ಮೇಲ್ದಂಡೆಗೆ ರೂ.5300 ಕೋಟಿ:

ಮಧ್ಯ ಕರ್ನಾಟಕದ ಬಯಲು ಸೀಮೆಯ ಪ್ರದೇಶಗಳಿಗೆ ನೀರೋದಗಿಸುವ ಮಹತ್ವದ ಭಧ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ರೂ.5300 ಕೋಟಿ ನೆರವು ಘೋಷಣೆ ಮಾಡಲಾಗಿದೆ. ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳಿರುವಾಗ ಕೇಂದ್ರ ಸರ್ಕಾರ ಅನುದಾನ ಪ್ರಕಟಿಸಿರುವುದು ಮಹತ್ವದ್ದಾಗಿದೆ. ಭದ್ರಾ ಮೇಲ್ದಂಡೆಗೆ ಕೇಂದ್ರೀಯ ಅನುದಾನ ಪಡೆಯುವ ಸಲುವಾಗಿ ಈ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ' ಎಂದು ಘೋಷಿಸಬೇಕು ಎಂದ ಕರ್ನಾಟಕ ಸರ್ಕಾರ ಕೇಂದ್ರದ ಮೇಲೆ ನಿರಂತರವಾಗಿ ಒತ್ತಡ ಹೇರುತ್ತಲೇ ಬಂದಿತ್ತು. ಅದಕ್ಕೆ ಮನ್ನಣೆ ಸಿಕ್ಕಿದೆ. ಈ ಯೋಜನೆಯಿಂದ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ತುಮಕೂರು ಜಿಲ್ಲೆಗಳ 12 ತಾಲ್ಲೂಕುಗಳ

787 ಹಳ್ಳಿಗಳ 74.26 ಲಕ್ಷ ಜನರಿಗೆ ಅನುಕೂಲವಾಗಲಿದ್ದು, 2.25 ಲಕ್ಷ ಹೆಕ್ಟೇರ್ ಜಮೀನು ನೀರಾವರಿಗೆ ಒಳಪಡಲಿದೆ. 367 ಕೆರೆಗಳಿಗೆ ನೀರು ಹರಿಯಲಿದೆ.

ಮೋದಿ, ನಿರ್ಮಾಲಾಗೆ ಧನ್ಯವಾದ: ರಾಜ್ಯ ಸರ್ಕಾರದ ಮಹತ್ವದ ಭದ್ರಾ ಮೆಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ರೂ.5300 ಕೋಟಿ ಅನುದಾನ ಘೋಷಿಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರಿಗೆ ಕರ್ನಾಟಕದ ಪರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಧನ್ಯವಾದಗಳನ್ನು ತಿಳಿಸಿದರು.

ಈ ಬಜೆಟ್‌ನ ಹೊಸ ಯೋಜನೆಗಳು:

ಸ್ತ್ರೀಯರಿಗೆ ಹೊಸ ಉಳಿತಾಯ ಸ್ಕೀಂ ಮಹಿಳಾ ಸಮ್ಮಾನ್: ಸ್ವತಂತ್ರ್ಯದ ಅಮೃತೋತ್ಸವ ಸ್ಮರಣಾರ್ಥ ಮಹಿಳೆಯರಿಗಾಗಿ 'ಮಹಿಳಾ ಸಮ್ಮಾನ್ ಸೇವಿಂಗ್ಸ್ ಸರ್ಟಿಫಿಕೆಟ್' ಎಂಬ ಹೊಸ ಸಣ್ಣ ಉಳಿತಾಯ ಯೋಜನೆ ಜಾರಿ. 2025ರ ಮಾರ್ಚ್‌ವರೆಗೆ 2 ವರ್ಷ ಠೇವಣಿ ಇಟ್ಟರೆ ವಾರ್ಷಿಕ 7.5% ಬಡ್ಡಿ ಪಾವತಿ. ಭಾಗಶಃ ವಿತ್ ಡ್ರಾ ಆಯ್ಕೆಯೂ ಲಭ್ಯ.

ಒಂದು ಜಿಲ್ಲೆ ಒಂದು ಉತ್ಪನ್ನಕ್ಕೆ ಯೂನಿಟ್ ಮಾಲ್: 'ಒಂದು ಜಿಲ್ಲೆ ಒಂದು ಉತ್ಪನ್ನ', ಭೌಗೋಳಿಕ ಸೂಚ್ಯಂಕದ ಮಾನ್ಯತೆ ಹೊಂದಿರುವ ವಸ್ತು, ಕರಕುಶಲ ವಸ್ತುಗಳನ್ನು ಮಾರಾಟ ಮಾಡಲು ರಾಜ್ಯಗಳ ರಾಜಧಾನಿ ಅಥವಾ ಪ್ರಮುಖ ಪ್ರವಾಸಿ ಕೇಂದ್ರ ಅಥವಾ ವಾಣಿಜ್ಯ ನಗರಗಳಲ್ಲಿ ಯೂನಿಟ್ ಮಾಲ್ ಸ್ಥಾಪಿಸಲು ರಾಜ್ಯಗಳಿಗೆ ಪ್ರೋತ್ಸಾಹ.

ಸಿರಿಧಾನ್ಯ ಇನ್ನು ಶ್ರೀ ಅನ್ನ: ಭಾರತವೇ ಜಾಗತಿಕ ಹಬ್: ಸಿರಿಧಾನ್ಯ ಉತ್ಪಾದನೆಯಲ್ಲಿ ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿರುವ ಭಾರತವನ್ನು ಸಿರಿಧಾನ್ಯದ ಜಾಗತಿಕ ಹಬ್ ಮಾಡಲು ಒತ್ತು. ಇದಕ್ಕಾಗಿ ಸಿರಿಧಾನ್ಯಕ್ಕೆ 'ಶ್ರೀ ಅನ್ನ' ಎಂಬ ಹೊಸ ನಾಮಕರಣ ಹೈದರಾಬಾದ್‌ನ ಸಿರಿಧಾನ್ಯ ಸಂಸ್ಥೆಯನ್ನು ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರ ಮಾಡಲು ನೆರವು.

ಪರ್ಯಾಯ ರಸಗೊಬ್ಬರಕ್ಕೆ ಪಿಎಂ–ಪ್ರಣಾಮ್: ಪರ್ಯಾಯ ರಸಗೊಬ್ಬರ ಹಾಗೂ ರಾಸಯನಿಕ ಗೊಬ್ಬರಗಳ ಸಮತೋಲಿತ ಬಳಕೆಗಾಗಿ ರಾಜ್ಯಗಳಿಗೆ ಉತ್ತೇಜನ. ಇದಕ್ಕಾಗಿ ಪಿಎಂ.–ಪ್ರಣಾಮ್ (ಭೂತಾಶಯ ಪುನರುಜ್ಜೀವನ, ಜಾಗೃತಿ, ಪೋಷಕಾಂಶ ವೃದ್ಧಿ, ಉತ್ತಮೀಕರಣ ಕಾರ್ಯಕ್ರಮ) ಎಂಬ ಯೋಜನೆ ಆರಂಭ.

ಕರಾವಳಿಯಲ್ಲಿ ಕಾಡು ಬೆಳೆಸಲು ಮಿಷ್ಟಿ ಯೋಜನೆ: ಕರಾವಳಿಯಲ್ಲಿ ಹಾಗೂ ಉಪ್ಪು ಭೂಮಿಯಲ್ಲಿ ಮ್ಯಾಂಗ್ರೋವ್ ಕಾಡು ಬೆಳೆಸುವ ಮೂಲಕ ಸಮುದ್ರ ಕೋರಕಲು ತಡೆಗೆ ಮಿಷ್ಟಿ ಯೋಜನೆ. ತನ್ಮೂಲಕ ಅರಣ್ಯ ಹೆಚ್ಚಳಕ್ಕೆ ಕಸರತ್ತು. ಇದಕ್ಕಾಗಿ ಉದ್ಯೋಗ ಖಾತ್ರಿ, ಅರಣ್ಯ ನಿಧಿ ಹಾಗೂ ಇನ್ನಿತರೆ ಮೂಲಗಳು ಬಳಕೆ.

ವಿಶ್ವಕರ್ಮರ ಕೌಶಲ್ಯವೃದ್ಧಿಗೆ ಪಿಎಂ ವಿಕಾಸ್ ಸ್ಕೀಂ: ಕರಕುಶಲ ಕಲೆಯಲ್ಲಿ ತೊಡಗಿರುವ ವಿಶ್ವಕರ್ಮರಿಗೆ ಪ್ಯಾಕೇಜ್. ಕೌಶಲ್ಯ ತರಬೇತಿ, ಆಧುನಿಕ ತಂತ್ರಜ್ಞಾನ ಕಲಿಕೆ, ಬ್ರಾಂಡ್ ಪ್ರಮೋಷನ್, ಜಾಗತಿಕ ಮಾರುಕಟ್ಟೆ ಕಲ್ಪಿಸಲು ನೆರವು. ಎಸ್ಸಿ, ಎಸ್ಟಿ, ಒಬಿಸಿ ವರ್ಗದವರಿಗೆ ಈ ಯೋಜನೆಯಿಂದ ಭಾರಿ ಅನುಕೂಲ.

ಆಧಾರ: ಕನ್ನಡ ಪ್ರಭ, ದಿನಾಂಕ:02.02.2023.

5. ಮಧ್ಯಮ ವರ್ಗಕ್ಕೆ ಸಿರಿಕನಸು

"ಎಲ್ಲಿರಿಗೂ ಬಜೆಟ್‌ನಲ್ಲಿ ಏನಾದರೂ ಒಂದು ಕೊಟ್ಟೇ ಕೋಡುತ್ತಾರೆ, ಅದರೆ ನಮ್ಮನ್ನೇ ಮರೆತುಬಿಡುತ್ತಾರೆ" ಎಂಬುದು ದೇಶದ ಮಧ್ಯಮ ವರ್ಗದ ಹುಸಿಮುನಿಸಿಗೆ ಕರಗಿರುವ ಕೇಂದ್ರ ವಿತ್ತ

ಸಚಿವೆ ನಿರ್ಮಲಾ ಸೀತಾರಾಮನ್, ಅವರ ಬಹುದಿನಗಳ ಬೇಡಿಕೆಯಾದ ಆದಾಯ ತೆರಿಗೆ ಸ್ಲ್ಯಾಬ್ ಮಿತಿ ಹೆಚ್ಚಳ ಮಾಡಿ ಕೋಪ ತಣಿಸಲು ಮುಂದಾಗಿದ್ದಾರೆ. ಹಾಗೆಯೇ, ಉಳಿತಾಯ ಯೋಜನೆಗಳ ಮೂಲಕ ಮಹಿಳೆಯರ ಮನವೊಲಿಕೆಗೂ ವಿತ್ತ ಸಚಿವರು ಹೆಜ್ಜೆ ಇಟ್ಟಿದ್ದಾರೆ.

ಲೋಕಸಭೆಯಲ್ಲಿ ತಮ್ಮ ಐದನೇ ಬಜೆಟ್ ಮಂಡಿಸಿದ ನಿರ್ಮಾಲಾ, ಯಾರಿಗೂ ಹೆಚ್ಚು ಹೊರೆ ನೀಡದೆ, ಎಲ್ಲರನ್ನೂ ತೃಪ್ತಿಗೊಳಿಸಲು ಮುಂದಾಗಿದ್ದಾರೆ. ರಕ್ಷಣೆ, ಆರೋಗ್ಯ, ಕೃಷಿ ಗ್ರಾಮೀಣಭೀವೃದ್ಧಿ, ಮೂಲಸೌಕರ್ಯ, ರೈಲ್ವೆ ಸಾರ್ವಜನಿಕ ವಿತರಣೆ ಹೀಗೆ ಸಾಲು ಸಾಲು ಇಲಾಖೆಗಳಿಗೆ ಲಕ್ಷಲಕ್ಷ ಕೋಟಿ ರೂ. ಅನುದಾನ ನೀಡಿದ್ದಾರೆ.

ಹೊಸ ತೆರಿಗೆ ಪದ್ಧತಿಯಂತೆ ಇದುವರೆಗೆ ರೂ.5 ಲಕ್ಷಗಳವೆರಗೆ ಯಾವುದೇ ಆದಾಯ ತೆರಿಗೆ ಇರಲಿಲ್ಲ. ಇದನ್ನು 7 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಹಾಗೆಯೇ ಹಳೆ ಪದ್ಧತಿಯಲ್ಲಿನ ಆದಾಯ ತೆರಿಗೆ ಸ್ಲ್ಯಾಬ್‌ಗಳ ಮಿತಿ ಏರಿಕೆ ಮಾಡಲಾಗಿದೆ. ಹಿಂದೆ ಇದ್ದ ಆರು ಸ್ಲ್ಯಾಬ್‌ಗಳನ್ನು ಐದಕ್ಕೆ ಇಳಿಕೆ ಮಾಡಲಾಗಿದೆ. ಅಂದರೆ, ಇದು ವರೆಗಿನ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ರೂ.2.5 ಲಕ್ಷಗಳಿಂದ ರೂ.3 ಲಕ್ಷಗಳಿಗೆ ಏರಿಸಲಾಗಿದೆ. ಉಳಿದಂತೆ 3 ರಿಂದ 6 ಲಕ್ಷ ರೂ. ಗೆ ಶೇ. 5,6 ರಿಂದ ರೂ.9 ಲಕ್ಷ ಗೆ ಶೇ.10,9 ರಿಂದ 12 ಲಕ್ಷ ರೂ. ಗೆ ಶೇ.15 ಮತ್ತು 12 ರಿಂದ 15 ಲಕ್ಷ ರೂ. ಗೆ ಶೇ.20 ಹಾಗೂ 15 ಲಕ್ಷ ರೂ. ಮೇಲ್ಪಟ್ಟ ಆದಾಯಕ್ಕೆ ಸೇ. 30 ರಷ್ಟು ತೆರಿಗೆ ವಿಧಿಸಲು ನಿರ್ಧರಿಸಲಾಗಿದೆ.

ಬಜೆಟ್‌ನಲ್ಲಿ ಈ ನಿರ್ಧಾರ ದೇಶದ ಮಧ್ಯಮ ವರ್ಗ ಹಾಗೂ ವೇತನದಾರರಿಗೆ ಸಂತಸ ತಂದಿದೆ. 2020ರ ಬಜೆಟ್ ಬಿಟ್ಟರೆ, ಇತ್ತೀಚಿನ ವರ್ಷಗಳಲ್ಲಿ ಮಧ್ಯಮ ವರ್ಗದ ಅತ್ಯಂತ ನಿರೀಕ್ಷೆಯ ಆದಾಯ ತೆರಿಗೆ ಸ್ಲ್ಯಾಬ್‌ಗಳಲ್ಲಿ ಬದಲಾವಣೆ ತಂದಿರಲಿಲ್ಲ.

ಬಜೆಟ್‌ನಲ್ಲಿ ಏಳು ಆದ್ಯತಾ ವಲಯಗಳನ್ನು ಗುರುತಿಸಲಾಗಿದ್ದು ಇದಕ್ಕೆ ಸಪ್ತರ್ಷಿ ಎಂದು ನಿರ್ಮಲಾ ಕರೆದಿದ್ದಾರೆ. ಹಾಗೇಯೇ, ಅಮೃತಕಾಲದಿಂದ ಶತಮಾನೋತ್ಸವದತ್ತ ಭಾರತ ಎಂಬ ಪರಿಕಲ್ಪನೆಯಡಿ ನಾಲ್ಕು ಅವಕಾಶಗಳನ್ನು ಗುರುತಿಸಿದ್ದಾರೆ. ಅಷ್ಟೇ ಅಲ್ಲ 2024ರ ಲೋಕಸಭೆ ಚುನಾವಣೆಗೂ ಮುನ್ನ ಮಂಡನೆಯಾಗುತ್ತಿರುವ ಪೂರ್ಣ ಬಜೆಟ್ ಇದು ಎಂಬುದು ವಿಶೇಷ ಕಳೆದ ವರ್ಷದ ಬಜೆಟ್‌ಗೆ ಹೋಲಿಕೆ ಮಾಡಿದರೆ, ಈ ಭಾರಿ ಶೇ.7.4 ರಷ್ಟು ಹೆಚ್ಚು ವೆಚ್ಚ ಕಾಣಿಸಿದೆ. ಅಂದರೆ, ಈ ಬಜೆಟ್‌ನ ಗಾತ್ರ ರೂ.45 ಲಕ್ಷ ಕೋಟಿಗಳಾಗಿದೆ. ವಿತ್ತೀಯ ಕೊರತೆಯ ಗುರಿಯನ್ನು ಶೇ. 5.9ಕ್ಕೆ ಇರಿಸಿಕೊಳ್ಳಲಾಗಿದೆ.

ಕೆಲವು ವಸ್ತುಗಳ ಪರೋಕ್ಷ ತೆರಿಗೆಯನ್ನೂ ನಿರ್ಮಲಾ ಇಳಿಕೆ ಮಾಡಿದ್ದಾರೆ. ಅಂದರೆ, ಮೊಬೈಲ್ ಸಲಕರಣೆಗಳ ಕಸ್ಟಮ್ ಸುಂಕವನ್ನು ಕಡಿತ ಮಾಡಲಾಗಿದೆ. ಜೊತೆಗೆ ಲಿಥಿಯಂ ಬ್ಯಾಟರಿಗಳ ಸುಂಕ ಇಳಿಕೆ ಮಾಡಲಾಗಿದೆ. ಸಿಗರೇಟ್, ಬೆಳ್ಳಿಯಂಥ ವಸ್ತುಗಳ ದರ ಏರಿಕೆಯಾಗಿದೆ.

ಸಪ್ತರ್ಷಿಗಳು:

1. ಸರ್ವಜನರ ತೋಟ (ಸರ್ವರ ಅಭಿವೃದ್ಧಿ)
2. ಸರ್ವರ ಬಳಿಗೂ ವಿಕಾಸದ ಬೆಳಕು (ಕಟ್ಟಕಡೆಯ ವ್ಯಕ್ತಿಯವರೆಗೆ)
3. ಹಣಕಾಸು ಸಮ್ಮಾನ (ಹಣಕಾಸು ವಿಭಾಗ)
4. ಯುವಶಕ್ತಿ ಮೇವ ಜಯತೇ (ಯುವಶಕ್ತಿ)
5. ಹಸಿರ ಹಾದಿಯಲ್ಲಿ (ಹಸಿರು ಪ್ರಗತಿ)
6. ಹೂಡಿಕೆ ಬೇಡಿಕೆ (ಮೂಲ ಸೌಕರ್ಯ)
7. ಬದುಕಿಗೆ ಡಿಜಿಟಲ್ ಟಚ್ (ಸಾಮರ್ಥ್ಯಗಳ ಅನಾವರಣ)

ರಾಜ್ಯದ ಮತ ಬುಟ್ಟಿಗೆ ನಿರ್ಮಲಾ ಭದ್ರತೆ: ಭದ್ರಾ ಮೇಲ್ದಂಡೆ ಯೋಜನೆಗೆ ಕೊನೆಗೂ 'ರಾಷ್ಟ್ರೀಯ ಮಾನ್ಯತೆ' ಸಿಕ್ಕಿದೆ. ಐದು ದಶಕಗಳ ಕನಸು ಸಾಕಾರಗೊಂಡ ಸಂಭ್ರಮದ ಜೊತೆಗೆ ರಾಜ್ಯದ ನೀರಾವರಿ ಯೋಜನೆಯೊಂದು ರಾಷ್ಟ್ರೀಯ ಸ್ಥಾನಮಾನ ಪಡೆದ ಮೊದಲ 'ಯೋಜನೆ' ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಸದ್ಯದಲ್ಲೇ ರಾಜ್ಯದಲ್ಲಿ ಚುನಾವಣೆ ಎದುರಾಗಲಿದ್ದು ಈ ಘೋಷಣೆ ಮಹತ್ವ ಪಡೆದುಕೊಂಡಿದೆ.

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾ ರಾಮನ್ ಮಂಡಿಸಿರುವ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ರೂ. 5,300 ಕೋಟಿ ಅನುದಾನ ಮೀಸಲಿಡಲಾಗಿದೆ. ಮಲೆನಾಡು ಭಾಗದ ನೀರನ್ನು ಬಯಲು ಸೀಮೆಗೆ ಹರಿಸುವ ಈ ಬೃಹತ್ ಯೋಜನೆ ಮಧ್ಯ ಕರ್ನಾಟಕ ಭಾಗದ ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಯ 2.25 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಡಿ ನೀರಾವರಿ ಸೌಲಭ್ಯ ಹಾಗೂ 367 ಕೆರೆಗಳಿಗೆ ನೀರು ತುಂಬಿಸುವ ಗುರಿ ಹೊಂದಿದೆ.

ಯಾರ್ಯಾರಿಗೆ ಲಾಭ: ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು; ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳೆಲ್ಕೆರೆ, ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮುರು; ದಾವಣಗೆರೆ ಜಿಲ್ಲೆಯ ಜಗಳೂರು ಹಾಗೂ ತುಮಕೂರು ಜಿಲ್ಲೆಯ ಶಿರಾ, ಚಿಕ್ಕನಾಯಕನಹಳ್ಳಿ, ಪಾವಗಡ ತಾಲ್ಲೂಕುಗಳ ನೀರಿನ ಸಮಸ್ಯೆ ನೀಗಿಸುವ ಯೋಜನೆ ಇದಾಗಿದೆ. ತುಂಗಾ, ಭದ್ರಾ, ಕೃಷ್ಣಾ ಕಣಿವೆ ನದಿಗಳು ಈ ಯೋಜನೆ ವ್ಯಾಪ್ತಿಯಡಿ ಬರಲಿದ್ದು, 787 ಗ್ರಾಮಗಳು ಹಾಗೂ ಸುಮಾರು 75 ಲಕ್ಷ ಜನರಿಗೆ ಇದರಿಂದ ಅನುಕೂಲವಾಗಲಿದೆ.

ಬೆಂಗಳೂರಿಗೆ ರೂ.1,350 ಕೋಟಿ: ಬೆಂಗಳೂರು ಉಪನಗರ ರೈಲ್ವೆ ಯೋಜನೆ ಕೆ–ರೈಡ್‌ಗೆ ರೂ.1,350 ಕೋಟಿ ಯೋಜನೆಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಬೆಂಗಳೂರು ನಗರ–ದೇವನಹಳ್ಳಿ, ಚಿಕ್ಕ ಬಾಣಾವರ–ಬೈಯ್ಯಪ್ಪನಹಳ್ಳಿ ಕೆಂಗೇರಿ–ವೈಟ್‌ಫೀಲ್ಡ್ ಹಾಗೂ ಹೀಲಲಗೆ–ರಾಜಾನುಕುಂಟೆ ಮಾರ್ಗದಲ್ಲಿ 4 ಕಾರಿಡಾರ್ ನಿರ್ಮಿಸಲು ಭಾರತೀಯ ರೈಲ್ವೆ ಒಟ್ಟು ರೂ.1,350 ಕೋಟಿ ಅನ್ನು ಬಜೆಟ್‌ನಲ್ಲಿ ನಿಗದಿಪಡಿಸಿದೆ ಎಂದು ಸಚಿವೆ ನಿರ್ಮಲಾ ಸೀತರಾಮನ್ ಪ್ರಕಟಿಸಿದರು.

ಭದ್ರಾ ಮೇಲ್ದಂಡೆಗೆ ಅನುದಾನ ಖುಷಿ ತಂದಿದೆ: ಭದ್ರಾ ಮೇಲ್ದಂಡೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ರಾಷ್ಟ್ರೀಯ ಮಾನ್ಯತೆ ಘೋಷಿಸಿದ್ದು ಸ್ವಾಗತರ್ಹ. ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಮನ್ನಣೆ ಸಿಕ್ಕಿದೆ. ಮಧ್ಯ ಕರ್ನಾಟಕ ಭಾಗದ ಚಿತ್ರದುರ್ಗ, ದಾವಣಗೆರೆ, ತುಮಕೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಜನರಿಗೆ ಅನುಕೂಲವಾಗಲಿದೆ. ಇಷ್ಟು ದೊಡ್ಡ ಪ್ರಮಾಣದ ಅನುದಾನ ನೀಡಿದ್ದು ಸಂತಸ ತಂದಿದೆ.

ಆಧಾರ: ಉದಯವಾಣಿ, ದಿನಾಂಕ:02.02.2023.

6. ಜಿಎಸ್‌ಟಿ ಬಾಕಿ ಪಾವತಿಗೆ ಸಮ್ಮತಿ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಬಂಧ ರಾಜ್ಯಗಳಿಗೆ 2022ರ ಜೂನ್ 1 ರವರೆಗೆ ಬಾಕಿಯಿರುವ ರೂ.16,982 ಕೋಟಿ ಪರಿಹಾರ ಹಣವನ್ನು ಪೂರ್ಣವಾಗಿ ಪಾವತಿಸಲಾಗುವುದೆಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು. ಇದರೊಂದಿಗೆ ಶಿವರಾತ್ರಿಯಂದು ರಾಜ್ಯಗಳಿಗೆ ಶುಭಸುದ್ದಿ ನೀಡಿದರು.

ಇಷ್ಟೊಂದು ಹಣ ಸದ್ಯಕ್ಕೆ ಪರಿಹಾರ ನಿಧಿಯಲ್ಲಿ ಲಭ್ಯವಿಲ್ಲದಿದ್ದರೂ ನಮ್ಮದೇ ಸಂಪನ್ಮೂಲಗಳಿಂದ ಬಿಡುಗಡೆ ಮಾಡಲು ನಾವು ನಿರ್ಧರಿಸಿದ್ದೇವೆ. ಮುಂದಿನ ಪರಿಹಾರ ಸೆಸ್ ಸಂಗ್ರಹದಿಂದ ಅದನ್ನು ಹೊಂದಿಸಿಕೊಳ್ಳಲಾಗುತ್ತದೆ ಎಂದು ಜಿಎಸ್‌ಟಿ ಮಂಡಳಿಯ 49ನೇ ಸಭೆಯ ನಂತರ ಅವರು ವಿಚಾರಿಸಿದರು. ಐದು ವರ್ಷಗಳ ಪರಿಹಾರ ಬಾಕಿಯನ್ನು ಪಾವತಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಜಿಎಸ್‌ಟಿ ಅನುಷ್ಠಾನಗೊಳಿಸಿದ 2017 ಜುಲೈ 1 ರಿಂದ ನಷ್ಟವಾದ ಹಣವನ್ನು ಭರಿಸಿಕೊಳ್ಳಲು ಸೆಸ್ ಹೇರಿಕೆಗೆ 2017 ರ ಜಿಎಸ್‌ಟಿ (ರಾಜ್ಯಗಳಿಗೆ ಪರಿಹಾರ) ಕಾನೂನು ಅವಕಾಶ ನೀಡುತ್ತದೆ. ಅದನ್ನು ರಾಜ್ಯಗಳಿಗೆ ಪಾವತಿಸಿಲಾಗುತ್ತದೆ. ಜಿಎಸ್‌ಟಿ ವ್ಯವಸ್ಥೆಯ ಅಳವಡಿಕೆಯಿಂದಾಗಿ ಅನೇಕ ರಾಜ್ಯಗಳಿಗೆ ಆದಾಯ ನಷ್ಟವಾಗಿದೆ. 2017ರ ಜುಲೈನಿಂದ ಲೆಕ್ಕ ಹಾಕಿ ಐದು ವರ್ಷಗಳ ಅವಧಿಗೆ ಪರಿಹಾರ ಒದಗಿಸಬೇಕಿದೆ. ತೆಳು ಬೆಲ್ಲ, ಪೆನ್ಸಿಲ್ ಶಾರ್ಪನರ್ ಮತ್ತು ಕೆಲವು ಟ್ರ್ಯಾಕಿಂಗ್ ಸಾಧನಗಳ ಜಿಎಸ್‌ಟಿ ಕಡಿಮೆ ಮಾಡಲೂ ಸಭೆ ನಿರ್ಧರಿಸಿದೆ. ಸಿಮೆಂಟ್ ಮೇಲಿನ ಜಿಎಸ್‌ಟಿ ತಗ್ಗಿಸುವ ಪ್ರಸ್ತಾಪನೆ ಇನ್ನೂ ಫಿಟ್ಮೆಂಟ್ ಸಮಿತಿ ಮುಂದೆ ಬಂದಿಲ್ಲ.

ರಾಜ್ಯದ ಪಾಲು, ರೂ.1,934 ಕೋಟಿ: ರಾಜ್ಯಕ್ಕೆ ಬರಬೇಕಾಗಿದ್ದ 2022ರ ಜೂನ್ ವರೆಗಿನ ಜಿಎಸ್‌ಟಿ ಪರಿಹಾರ ಬಾಕಿ ಮೊತ್ತ ರೂ.1,934 ಕೋಟಿಗಳನ್ನು ಕೇಂದ್ರ ಸರ್ಕಾರ ಚುಕ್ತಾ ಮಾಡಿದ್ದು, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನಿರಂತರ ಪ್ರಯತ್ನ ಕೊನೆಗೂ ಫಲಿಸಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯು 23 ರಾಜ್ಯಳಿಗೆ ಬಾಕಿ ಉಳಿಸಿಕೊಂಡಿದ್ದ ರೂ.16,982 ಕೋಟಿ ಪಾವತಿಸಲು ಒಪ್ಪಿಗೆ ನೀಡಿದೆ. ಈ ಪೈಕಿ ಕರ್ನಾಟಕದ ಬಾಕಿ ಮೊತ್ತ ರೂ.1,934 ಕೋಟಿ ಸೇರಿದೆ.

ಸಭೆಯ ಇತರ ನಿರ್ಧಾರಗಳು :

- ಧಾನ್ಯಗಳ ಹೊಟ್ಟು ಮತ್ತು ಚಾಕುಗಳಿಗೆ ಶೇ. 5 ರಿಂದ ಶೂನ್ಯ ತೆರಿಗೆ.
- ತೊಳೆದ ಕಲ್ಲಿದ್ದಲು ಅಥವಾ ಅಂಥ ಘಟಕಗಳಿಂದ ಸರಬರಾಜು ಮಾಡುವ ಕಲ್ಲಿದ್ದಲು ತಿರಸ್ಕಾರಗೊಂಡಲ್ಲಿ ಅಂಥ ವಹಿವಾಟುಗಳಿಗೆ ಶೂನ್ಯ ಜಿಎಸ್‌ಟಿ.
- ಕೋರ್ಟ್‌ಗಳು ಮತ್ತು ನ್ಯಾಯಾಧೀಕರಣಗಳ ಸೇವೆಗಳಿಗೆ ರಿವರ್ಸ್–ಚಾರ್ಜ್ ವ್ಯವಸ್ಥೆಯಡಿ ತೆರಿಗೆ ಹೇರಿಕೆ.

ಶಿಫಾರಸ್ಸು ಅಂಗೀಕಾರ: ಪಾನ್ ಮಸಲಾ ಮತ್ತು ಗುಟ್ಕಾ ಮೇಲಿನ ಸಾಮರ್ಥ್ಯ ಆಧಾರಿತ ತೆರಿಗೆ (ಕೆಪಾಸಿಟಿ ಬೇಸ್ಡ್ ಟ್ಯಾಕ್ಸೇಶನ್) ಕುರಿತು ಸಚಿವರ ಗುಂಪು ಮಾಡಿದ ಶಿಫಾರಸ್ಸನ್ನು ಜಿಎಸ್‌ಟಿ ಮಂಡಳಿ ಸಭೆ ಅಂಗೀಕರಿಸಿದೆ.

ಮೇಲ್ಮನವಿ ಟ್ರಿಬ್ಯುನಲ್ ರಚನೆ ವರದಿಗೆ ಒಪ್ಪಿಗೆ: ಜಿಎಸ್‌ಟಿ ಮೇಲ್ಮನವಿ ಟ್ರಿಬ್ಯುನಲ್ ಸ್ಥಾಪನೆಗೆ ಸಂಬಂಧಿಸಿದಂತೆ ಸಚಿವರ ಗುಂಪು ನೀಡಿದ ವರದಿಯನ್ನು ಜಿಎಸ್‌ಟಿ ಮಂಡಳಿಯು ಕೆಲ ಮಾರ್ಪಾಡುಗಳೊಂದಿಗೆ ಒಪ್ಪಿಕೊಂಡಿದೆ. ಭಾಷೆಯ ಒಂದು ಬದಲಾವಣೆಯೊಂದಿಗೆ ವರದಿ ಅಂಗೀಕರಿಸಲಾಗಿದೆ. ಕರಡಿನಲ್ಲಿನ ಬದಲಾವಣೆಯನ್ನು ಐದಾರು ದಿನಗಳಲ್ಲಿ ಸದಸ್ಯರಿಗೆ ಅವರ ಅಭಿಪ್ರಾಯಗಳನ್ನು ಕೋರಿ ನೀಡಲಾಗುತ್ತದೆ ಎಂದು ಸಚಿವೆ ತಿಳಿಸಿದ್ದಾರೆ. ಕಳೆದ ಜುಲೈನಲ್ಲಿ ಹರಿಯಾಣಾ ಉಪ ಮುಖ್ಯಮಂತ್ರಿ ದುಷ್ಯಂತ್ ಚೌಟಾಲಾ ನೇತೃತ್ವದಲ್ಲಿ ಮೇಲ್ಮನವಿ ಟ್ರಿಬ್ಯುನಲ್ ರಚನೆಗೆ ಸಂಬಂಧಸಿ ಸಮಿತಿ ರಚಿಸಲಾಗಿತ್ತು. ವಾರ್ಷಿಕ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆಯ ವಿಳಂಬಕ್ಕೆ ವಿಧಿಸಲಾಗುವ ದಂಡಗಳ ಸುಧಾರಣೆಗೆ ಮಂಡಳಿ ಸಭೆ ಕೆಲ ಶಿಫಾರಸ್ಸುಗಳನ್ನು ಮಾಡಿದೆ ಜಿಎಸ್‌ಟಿ ಮಂಡಳಿಯ 48ನೇ ಸಭೆ 2022 ಡಿಸೆಂಬರ್ 17 ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದಿತ್ತು. ಭೌತಿಕ ಸಾಕ್ಷ್ಯವನ್ನು ನಾಶಪಡಿಸುವುದು ಸೇರಿದಂತೆ ಮೂರು ವಿವಿಧ ಬಗೆಯ ಅಪರಾಧಗಳನ್ನು ಅಪರಾಧವಲ್ಲವೆಂದು ಪರಿಗಣಿಸಲು (ಡಿಕ್ರಿಮಿನಲೈಸ್) ಅಡ್ಡಿ ಅಥವಾ ತಡೆ ಮತ್ತು ಮಾಹಿತಿ ನೀಡಲು ವೈಫಲ್ಯ ಇನ್ನೆರಡು ಅಪರಾಧಗಳಾಗಿವೆ.

ತೆಳು ಬೆಲ್ಲಕ್ಕೆ ಜಿಎಸ್‌ಟಿ ಇಲ್ಲ: ತೆಳು ಬೆಲ್ಲ (ಜೋನಿ ಬೆಲ್ಲ) ಮೇಲಿನ ಜಿಎಸ್‌ಟಿಯನ್ನು ಈಗಿರುವ ಶೇಕಡ 18 ರಿಂದ ಶೂನ್ಯ ಅಥವಾ ಶೇ.5ಕ್ಕೆ ಇಳಿಸಲು ಮಂಡಳಿ ಸಭೆ ನಿರ್ಧರಿಸಿತು. ತೆಳು ಬೆಲ್ಲ ಉತ್ತರ

ಪ್ರದೇಶ ಮತ್ತು ಬೆಲ್ಲ ತಯಾರಿಸುವ ಎಲ್ಲ ರಾಜ್ಯಗಳಲ್ಲಿ ಸಿಗುವ ಒಂದು ವಿಶಿಷ್ಟ ಬಗೆಯ ದ್ರವ ಬೆಲ್ಲವಾಗಿದೆ. ಕರ್ನಾಟಕದಲ್ಲೂ ಇದು ಲಭ್ಯ. ಚಿಲ್ಲರೆಯಾಗಿ ಮಾರಿದರೆ ಯಾವುದೇ ಲೇಬಲ್ಡ್ ಶೇ. 5 ಜಿಎಸ್‌ಟಿ ಇರಲಿದೆ ಎಂದು ವಿತ್ತ ಮಂತ್ರಿ ವಿವರಿಸಿದರು. ಟ್ಯಾಗುಗಳ, ಟ್ರ್ಯಾಕಿಂಗ್ ಸಾಧನಗಳು ಅಥವಾ ಆ ಬೆಲೆ ಬಾಳುವ ಕಂಟೇನರ್‌ಗಳ ಮೇಲೆ ಲಗತ್ತಿಸಿರುವ ಡೇಟಾ ಲಾಗರ್ಸ್ ಮೇಲಿನ ಜಿಎಸ್‌ಟಿಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಶೇಕಡ 18ರಿಂದ ಶೂನ್ಯಕ್ಕೆ ಇಳಿಸಲಾಗಿದೆ. ಪೆನ್ಸಿಲ್ ಶಾರ್ಪನರ ಜಿಎಸ್‌ಟಿಯನ್ನು 18ರಿಂದ ಶೇ.12 ಕ್ಕೆ ಇಳಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:09.02.2023.

7. ನೇರ ತೆರಿಗೆ ಸಂಗ್ರಹ 24% ಏರಿಕೆ

ಫೆಬ್ರವರಿ 10ರ ವರೆಗಿನ ತೆರಿಗೆ ಸಂಗ್ರಹಗಳ ತಾತ್ಕಾಲಿಕ ಅಂಕಿ ಅಂಶಗಳನ್ನು ಹಣಕಾಸು ಸಚಿವಾಲಯ ಬಿಡುಗಡೆ ಮಾಡಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ಇದೇ ಅವಧಿಗೆ ಹೋಲಿಸಿದರೆ 2022–23ನೇ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಸಂಗ್ರಹದಲ್ಲಿ ಶೇಕಡ 24.09 ರಷ್ಟು ಏರಿಕೆಯಾಗಿದೆ. ಸಂಗ್ರಹವಾದ ನೇರ ತೆರಿಗೆ ಮೊತ್ತ 15.67 ಲಕ್ಷ ಕೋಟಿ ರೂಪಾಯಿ ಆಗಿದ್ದು, ಮರು ಪಾವತಿಯ ನಂತರ ಇದರ ಮೊತ್ತ 12.98 ಲಕ್ಷ ಕೋಟಿ ರೂಪಾಯಿ ಆಗಿದೆ. ಶೇಕಡವಾರು ಬೆಳವಣಿಗೆಯಲ್ಲಿ ಶೇ.18.40 ಏರಿಕೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಬಜೆಟ್ ಪರಿಷ್ಕೃತ ಅಂದಾಜಿನಲ್ಲಿ ಶೇ. 79 ರಷ್ಟು ಕರ ಸಂಗ್ರಹ ಈವರೆಗೆ ಆಗಿದೆ.

ಇದುವರೆಗೆ ಕಾರ್ಪೊರೇಟ್ ಆದಾಯ ತೆರಿಗೆ(ಸಿಐಟಿ) ಮತ್ತು ವೈಯುಕ್ತಿಕ ಆದಾಯ ತೆರಿಗೆ (ಪಿಐಟಿ) ದರದಲ್ಲಿ ಅನುಕ್ರಮವಾಗಿ ಶೇಕಡ 19.33 ಹಾಗೂ ಶೇಕಡ 29.63 ಬೆಳವಣಿಗೆ ಆಗಿದೆ. ರೀಫಂಢ್ ಹೊಂದಾಣಿಕೆ ನಂತರ ಸಿಐಟಿ ಸಂಗ್ರಹದಲ್ಲಿ ಶೇಕಡ 15.84 ನಿವ್ವಳ ಬೆಳವಣಿಗೆ ಮತ್ತು ಪಿಐಟಿ ಸಂಗ್ರಹದಲ್ಲಿ ಶೇಕಡ 21.93 ಬೆಳವಣಿಗೆಯಾಗಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ವಿವರಿಸಿದೆ.

2022 ಏಪ್ರೀಲ್ 1 ರಿಂದ 2023 ಫೆಬ್ರವರಿ 10 ರವರೆಗೆ 2.69 ಲಕ್ಷ ಕೋಟಿ ರೂಪಾಯಿಗಳನ್ನು ಮರುಪಾವತಿ ಮಾಡಲಾಗಿದೆ. ಇದು ಹಿಂದಿನ ವರ್ಷ ಇದೇ ಅವಧಿಯಲ್ಲಿ ಮಾಡಲಾದ ರೀಫಂಡ್‌ಗಿಂತ ಶೇಕಡ 61.58 ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಹೊಸ ಸ್ಲ್ಯಾಬ್ ಮಧ್ಯಮ ವರ್ಗಕ್ಕೆ ಲಾಭ:

ಮಧ್ಯಮ ವರ್ಗದವರಲ್ಲಿ ಹೆಚ್ಚು ಹಣ ಉಳಿಯುವಂತೆ ಮಾಡುವುದರಿಂದ ಹೊಸ ತೆರಿಗೆ ವ್ಯವಸ್ಥೆಯು ಈ ವಿಭಾಗಕ್ಕೆ ಅನುಕೂಲ ಆಗಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಹೇಳಿದರು. ಆರ್‌ಬಿಐ ಕೇಂದ್ರೀಯ ಮಂಡಳಿಯಲ್ಲಿ ಬಜೆಟೋತ್ತರ ಸಾಂಪ್ರದಾಯಿಕ ಭಾಷಣದ ನಂತರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ನಿರ್ಮಲಾ 2023–24ನೇ ಸಾಲಿನ ಆಯವ್ಯಯ ಪತ್ರದ ಅನುಕೂಲಗಳನ್ನು ಸಮರ್ಥಿಸಿಕೊಂಡರು.

ಸರ್ಕಾರಿ ಯೋಜನೆಗಳ ಮೂಲಕ ಹೂಡಿಕೆಗೆ ವ್ಯಕ್ತಿಗಳನ್ನು ಒಲಿಸಬೇಕಿಲ್ಲ. ಆದರೆ ಹೂಡಿಕೆ ಬಗ್ಗೆ ವೈಯುಕ್ತಿಕ ನಿರ್ಧಾರ ಕೈಗೊಳ್ಳಲು ಅವರಿಗೆ ಅವಕಾಶ ನೀಡಿದರೆ ಸಾಕು ಎಂದು ಅಭಿಪ್ರಾಯ ಪಟ್ಟರು. ಹೊಸ ತೆರಿಗೆ ವ್ಯವಸ್ಥೆಯಲ್ಲಿ 3 ಲಕ್ಷ ರೂಪಾಯಿ ವರೆಗಿನ ಆದಾಯಕ್ಕೆ ಯಾವುದೇ ತೆರಿಗೆ ಇಲ್ಲ. 3 ರಿಂದ 6 ಲಕ್ಷ ರೂ. ಗೆ ಶೇ.5, 6ರಿಂದ 9 ಲಕ್ಷ ರೂ ವರೆಗೆ ಶೇ.10, 9 ರಿಂದ 12 ಲಕ್ಷ ರೂ. ವರೆಗೆ ಶೇಕಡ 15, 12 ರಿಂದ 15 ಲಕ್ಷದ ರೂ. ವರೆಗೆ ಶೇಕಡ 20 ಮತ್ತು 15 ಲಕ್ಷ ರೂ. ಮೇಲ್ಪಟ್ಟ ಆದಾಯಕ್ಕೆ ಶೇ.30 ತೆರಿಗೆ ವಿಧಿಸಲಾಗುತ್ತದೆ. ಆದರೆ, ರೂ.7 ಲಕ್ಷ ವರೆಗಿನ ಆದಾಯ ಇರುವವರು ಉಳಿತಾಯದ ಮೂಲಕ ತೆರಿಗೆಯಿಂದ ವಿನಾಯಿತಿ ಪಡೆಯಬಹುದು ಎಂದರು. ಅದಾನಿ ಉದ್ಯಮ ಸಮೂಹದ ವಂಚನೆ

ವಿವಾದದ ಕುರಿತ ಪ್ರಶ್ನೆಗೆ, ಷೇರು ಮಾರುಕಟ್ಟೆ ನಿಯಂತ್ರಕರು ತುಂಬ ಅನುಭವಿಗಳು. ಹಗರಣದ ಸಂಬಂಧ ಅವರು ಪರಿಶೀಲನೆ ನಡೆಸುತ್ತಿದ್ದಾರೆ' ಎಂದರು. ಕ್ರಿಪ್ಟೋ ಸೊತ್ತುಗಳ ನಿಯಂತ್ರಣ ವಿಚಾರದಲ್ಲಿ ಜಿ–20 ದೇಶಗಳೊಂದಿಗೆ ಚರ್ಚಿಸಲಾಗುತ್ತಿದೆ. ನಿಯಮಗಳ ಸಾಮಾನ್ಯ ಚೌಕಟ್ಟಿನ ಅಗತ್ಯವಿರುವುದರಿಂದ ಸಮಾಲೋಚನೆ ನಡೆಸಲಾಗುತ್ತದೆ ಎಂದರು. ಕ್ರಿಪ್ಟೋ, ಎನ್‌ಎಫ್‌ಟಿಗಳು ಅಥವಾ ಡಿಜಿಟಲ್ ಆಸ್ತಿಗಳ ಬಗ್ಗೆ ಸಚಿವರು ಬಜೆಟ್‌ನಲ್ಲಿ ಯಾವುದೇ ಹೊಸ ಕ್ರಮಗಳನ್ನು ಪ್ರಕಟಿಸಿಲ್ಲ.

ಆರೋಪ ತಿರಸ್ಕರಿಸಿದ ಸಚಿವೆ : ಮುಂಗಡದಲ್ಲಿ ಶುದ್ಧ ಹಾಗೂ ಪರಿಸರ–ಸ್ನೇಹಿ ಇಂಧನಕ್ಕೆ ಗೌತಮ್ ಅದಾನಿ ಸಮೂಹವನ್ನು ಗಮನದಲ್ಲಿಟ್ಟುಕೊಂಡು ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂಬ ಪ್ರತಿಪಕ್ಷಗಳ ಆರೋಪವನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತಳ್ಳಿಹಾಕಿದ್ದಾರೆ.

'ಬಾವನೆಂಟ ಮತ್ತು ಅಳಿಯಂದಿರಿಗೆ' ಲಾಭ ಮಾಡಿಕೊಡುವುದು ಕಾಂಗ್ರೆಸ್ ಸಂಸ್ಕೃತಿ ಆಗಿರಬಹುದು. ಆದರೆ ಅದು ಮೋದಿ ಸರ್ಕಾರದ ಸಂಸ್ಕೃತಿಯಲ್ಲಿ ಸರ್ಕಾರದ ಗಮನದಲ್ಲಿರುವುದು ದೇಶದ ಹಿತ ಮಾತ್ರ. ಎಂದು ಸಂಸತ್‌ನಲ್ಲಿ ಹೇಳಿದ್ದಾರೆ. 2023–24ನೇ ಸಾಲಿನ ಬಜೆಟ್‌ನಲ್ಲಿ ಶುದ್ಧ ಇಂಧನ ಸಾಮರ್ಥ್ಯ ಹೆಚ್ಚಳದಿಂದ ಪರಿಸರ ಸ್ನೇಹಿ ಜಲಜನಕ ಉತ್ಪಾದನೆವರೆಗೆ ಇಂಧನ ಕ್ಷೇತ್ರದಲ್ಲಿ ಬೃಹತ್ ಯೋಜನೆಗಳನ್ನು ಪ್ರಕಟಿಸಿರುವುದರಿಂದ ಅವರ ಅನುಕೂಲಕ್ಕೆಂದೇ ಹೀಗೆ ಮಾಡಲಾಗಿದೆ ಎನ್ನುವುದು ಪ್ರತಿಪಕ್ಷಗಳ ಆರೋಪವಾಗಿದೆ. ಈ ಅನುದಾನವನ್ನು 'ಹಸಿರು ಬಜೆಟ್' ಎಂದು ಹೆಸರಿಸಲಾಗಿದೆ.

ಹಿಂಡನ್ ಬರ್ಗ್ ರೀಸರ್ಚ ಮಾಡಿರುವ ಆರೋಪಗಳ ಹಿನ್ನೆಲೆಯಲ್ಲಿ ಅದಾನಿ ಸಮೂಹದ ಹಣಕಾಸು ವಂಚನೆಗಳ ಬಗ್ಗೆ ಜಂಟಿ ಸಂಸದೀಯ ಸಮಿತಿ ಅಥವಾ ಸುಪ್ರೀಂ ಕೋರ್ಟ್ ಮೇಲುಸ್ತುವಾರಿಯಲ್ಲಿ ತನಿಖೆ ನಡೆಸುವಂತೆ ಆಗ್ರಹಿಸಿ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಗದ್ದಲ ಎಬ್ಬಿಸಿ ಕಲಾಪಗಳಿಗೆ ಅಡ್ಡಿಪಡಿಸಿವೆ.

ನಿರೀಕ್ಷಿತ ಹಣದುಬ್ಬರ ಶೇ.5.3: 2023–24ನೇ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣ ಸುಮಾರು ಶೇಕಡ 5.3 ಇರುವ ಸಾಧ್ಯತೆಯಿದೆ. ಕಚ್ಚಾತೈಲ ಬೆಲೆ ಸೌಮ್ಯವಾಗಿದ್ದರೆ ಹಣದುಬ್ಬರ ಇಳಿಯಲೂ ಬಹುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ ಹೇಳಿದರು. ಕಚ್ಚಾ ತೈಲ ಪ್ರತಿ ಬ್ಯಾರೆಲ್ ಬೆಲೆ 95 ಅಮೆರಿಕನ್ ಡಾಲರ್ ಆಗಿರಬಹುದೆಂಬ ಲೆಕ್ಕಾಚಾರದಲ್ಲಿ ಮುಂದಿನ ವರ್ಷದ ಹಣದುಬ್ಬರದ ಅಂದಾಜು ಮಾಡಲಾಗಿದೆ ಎಂದರು. ಸಾಲ ಮತ್ತು ಠೇವಣಿ ಮೇಲಿನ ಬಡ್ಡಿ ದರಗಳು ಅನಿಯಂತ್ರಿತ ವಿಭಾಗಕ್ಕೆ ಸೇರಿರುವುದರಿಂದ ಮಾರುಕಟ್ಟೆ ಸ್ಪರ್ಧೆ ಆ ದರಗಳನ್ನು ನಿರ್ಣಯಿಸಲಿವೆ ಎಂದು ಆರ್‌ಬಿಐ ಮುಖ್ಯಸ್ಥರು ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ:12.02.2023.

ಭಾಗ – 4

ರಾಜ್ಯ ಸರ್ಕಾರ ಸುದ್ದಿಗಳು

1. ಸಹಕಾರ ಚಳುವಳಿಗೆ ಹೊಸ ದಿಕ್ಸೂಚಿ

ರಾಷ್ಟ್ರದಲ್ಲಿ ಸಹಕಾರ ಚಳುವಳಿಗೆ ಉತ್ತಮ ದಿಕ್ಸೂಚಿ ಸಿದ್ಧಪಡಿಸಲಾಗುತ್ತಿದೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.

ಮಲ್ಲೇಶ್ವರದಲ್ಲಿರುವ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಫೆಡರೇಷನ್‌ಗೆ ಭೇಟಿ ನೀಡಿ ಸೌಹಾರ್ದ ಸಹಕಾರಿಗಳೊಂದಿಗೆ ಸಂವಾದ ನಡೆಸಿದ ಅವರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಒಂದೇ ಮಾದರಿಯ ಉಪವಿಧಿಗಳು, ಒಂದೇ ಮಾದರಿಯ ಸಾಫ್ಟ್‌ವೇರ್ ಸಿದ್ಧಪಡಿಸಲಾಗುತ್ತಿದೆ. ಅವುಗಳ ಮೂಲಕ ಗ್ಯಾಸ್ ವಿತರಣೆ, ನೀರು ಸರಬರಾಜು ವ್ಯವಸ್ಥೆ ಮತ್ತಿತರ ವಿಸ್ತೃತ ಚಟುವಟಿಕೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ ಎಂದರು. ಸಹಕಾರ ಚಳುವಳಿಗೆ ಸಂಬಂಧಿಸಿದಂತೆ ನೀಲನಕ್ಷೆ ಸಿದ್ಧಪಡಿಸಬೇಕಾಗಿದ್ದು, ಈ ಕುರಿತು ನಾವೆಲ್ಲರೂ ಸೇರಿ ಚಿಂತನೆ ಮಾಡೋಣ, ಸಹಕಾರ ಕ್ಷೇತ್ರವನ್ನು ಪರಿಶುದ್ಧತೆಯತ್ತ ಕೊಂಡೊಯ್ಯೋಣ. ಪ್ರತಿಯೊಂದು ಪಂಚಾಯಿತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅವಶ್ಯವಿದ್ದು, ಅದಷ್ಟು ಬೇಗ ಅದನ್ನು ಕಾರ್ಯಗತಗೊಳಿಸೋಣ ಎಂದು ಹೇಳಿದರು.

ಆಧಾರ:ವಿಶ್ವವಾಣಿ, ದಿನಾಂಕ:01.01.2023.

2. ಭಯೋತ್ಪಾದನೆ, ಗಡಿ ಸವಾಲುಗಳಿಗೆ ಸಮಂಜಸ ಪರಿಹಾರ

ಭಯೋತ್ಪಾದನೆ, ಗಡಿ ವ್ಯಾಜ್ಯ ಸೇರಿದಂತೆ ಹಲವು ಸವಾಲುಗಳಿಗೆ ಸಮಂಜಸ ಪರಿಹಾರ ಕಂಡುಕೊಳ್ಳಲು ಕೇಂದ್ರ ಸರ್ಕಾರ ಆಧ್ಯತೆ ನೀಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಸಮೀಪದ ಆವತಿ ಗ್ರಾಮದಲ್ಲಿ ಕೇಂದ್ರೀಯ ಪತ್ತೇದಾರಿ ತರಬೇತಿ ಶಾಲೆಯ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಅನಂತ ವಿದ್ಯಾನಿಕೇತನ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತ ಟಿಬೆಟ್ ಗಡಿ ರಕ್ಷಣಾದಳ ಬೆಂಗಳೂರು ವಿಭಾಗದ ವಿವಿಧ ಕಟ್ಟೆಗಳನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಮಾತನಾಡಿದರು. ಪೊಲೀಸ್ ವಿಭಾಗದ ಎಲ್ಲಾ ದಳಗಳ ನಡುವೆ ಸಮನ್ವಯ ಸಾಧಿಸಿ, ಸಂವಾದ ನಡೆಸಿ ಭದ್ರತೆ ಹೆಚ್ಚಿಸಲು ಪೊಲೀಸ್ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ ಕೇಂದ್ರ ಗುಪ್ತಚರ ಸಂಸ್ಥೆಯ ತರಬೇತಿ ಶಾಲೆ ಮಹತ್ವದ ವೇದಿಕೆಯಾಗಲಿದೆ ಎಂದರು.

ಕೇಂದ್ರೀಯ ಗುಪ್ತಚರ ತರಬೇತಿ ಸಂಸ್ಥೆಯ ಕಟ್ಟಡಕ್ಕೆ ರಾಜ್ಯ ಸರ್ಕಾರ ಉತ್ತಮ ಪರಿಸರದಲ್ಲಿ ನಿವೇಶನ ಒದಗಿಸಿದೆ. ಮುಂಬರುವ ದಿನಗಳಲ್ಲಿ ಇದು ದೇಶದ ಪೊಲೀಸ್ ವ್ಯವಸ್ಥೆಗೆ ಬಹಳ ಪ್ರಯೋಜನಕಾರಿಯಾಗಲಿದೆ. ವಿವಿಧ ಪೊಲೀಸ್ ದಳಗಳನ್ನು ಬಲಪಡಿಸಲು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

ಸಮಾಜ ಚಲನಶೀಲವಾಗಿರುತ್ತದೆ. ಆದರೆ ವಿಚಾರ, ಗಮನ, ಧೋರಣೆ, ಸ್ವರೂಪಗಳು ಹಾಗೂ ಪಥ ಬದಲಾಗುತ್ತಿರುತ್ತವೆ. ಅದಕ್ಕೆ ಅನುಗುಣವಾಗಿ ಪೊಲೀಸ್ ಬಲಗಳು ಕೂಡ ಬದಲಾವಣೆಗಳನ್ನು ಆಳವಡಿಸಿಕೊಳ್ಳದಿದ್ದರೆ ಅಪ್ರಸ್ತುತವಾಗುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆ ಆಧರಿಸಿ ಸುರಕ್ಷತಾ ತಂತ್ರಗಳು, ರಣನೀತಿ ರೂಪಿಸಿಕೊಳ್ಳುವುದು ಮಹತ್ವಪೂರ್ಣವಾಗಿರುತ್ತದೆ ಎಂದರು.

ಭಾರತದಂತಹ ದೊಡ್ಡ ದೇಶದಲ್ಲಿ ಹಲವು ಸಂಸ್ಕೃತಿ, ಆಚರಣೆಗಳಿವೆ, ಅದಕ್ಕೆ ಅನುಗುಣವಗಿ ದೇಶದ ಆಂತರಿಕ ಕಾನೂನು ಮತ್ತು ಸುವ್ಯವಸ್ಥೆ ವಿಷಯವನ್ನು ಸಂವಿಧಾನದ ರಾಜ್ಯಪಟ್ಟಿಯಲ್ಲಿರಿಸಲಾಗಿದೆ. ಕಾಲಾಂತರದಲ್ಲಿ ಹೆಚ್ಚಿನ ಭಯೋತ್ಪಾದನೆ, ಗಡಿ ವಿವಾದಗಳು ಹೊಸ ಸವಾಲುಗಳನ್ನು ಒಡ್ಡಿವೆ. ಬಿಪಿಆರ್ ಆಂಡ್ ಡಿ ಇಂತಹ ಸವಾಲುಗಳಿಗೆ ಪರಿಹಾರ ಅನ್ವೇಷಿಸುತ್ತದೆ. ಇದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ ಎಂದರು. ಬೆಂಗಳೂರಿನ ಐಟಿಬಿಪಿ ಕಟ್ಟಡಗಳ ಸಮುಚ್ಚಯದಿಂದ ವರ್ಚುವಲ್ ಆಗಿ ಯೋಧರು ಮತ್ತು ಕುಟುಂಬದ ಸದಸ್ಯರು ಮಾತನಾಡಿ, ವಸತಿ ಸೌಕರ್ಯಗಳ ಬಗ್ಗೆ ಸದಭಿಪ್ರಾಯ ವ್ಯಕ್ತಪಡಿಸಿದರು. ಮುಖ್ಯಮಂತ್ರಿಯವರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಆರಗ ಜ್ಞಾನೇಂದ್ರ, ಡಾ: ಕೆ. ಸುಧಾಕರ್ ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಮಹಾ ನಿರ್ದೇಶಕ ಬಾಲಾಜಿ ಶ್ರೀವಾಸ್ತವ, ಭಾರತ ಟಿಬೆಟ್ ಗಡಿ ಪೊಲೀಸ್ ದಳದ ಮಹಾನಿರ್ದೇಶಕ ಅನೀಶ್ ದಯಾಳ್, ಹೆಚ್ಚುವರಿ ಮಹಾನಿರ್ದೇಶಕ ನೀರಜ್ ಸಿನ್ಹಾ ಮತ್ತಿತರರು ಇದ್ದರು.

ಮುಖ್ಯಂಶ:

- ದೇಶದ ವಿವಿಧ ಪೊಲೀಸ್ ದಳಗಳ ನಡುವೆ ಸಮನ್ವಯ
- ಮಹಾನಗರಗಳ ಕಾನೂನು ಮತ್ತು ಸುವ್ಯವಸ್ಥೆ ಹೆಚ್ಚಿಸಲು ಅಧ್ಯಯನ
- ಗಡಿ ಸುರಕ್ಷಾ ದಳಗಳ ಕೇಂದ್ರ ಸ್ಥಾನಗಳಲ್ಲಿ ವಸತಿ ಸೌಕರ್ಯ ಅಭಿವೃದ್ಧಿ

ಆಧಾರ:ವಿಶ್ವವಾಣಿ, ದಿನಾಂಕ:02.01.2023.

3. ಭಾಷಾ ವಿಧೇಯಕಕ್ಕೆ ಸುಗ್ರೀವಾಜ್ಞೆ

ಕನ್ನಡಿಗರ ಬಹು ನಿರೀಕ್ಷಿತ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ–2022ವನ್ನು ತಕ್ಷಣದಲ್ಲಿ ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಡೋಜ ಡಾ:ಎಂ. ಮಹೇಶ್ ಜೋಶಿ ಆಗ್ರಹಿಸಿದ್ದಾರೆ.

ಈ ಬಾರಿ ಚಳಿಗಾಲದ ಅಧಿವೇಶನದಲ್ಲಿ ವಿಧೇಯಕ ಮುನ್ನೆಲೆಗೆ ಬಂದಿತಾದರೂ ಚರ್ಚೆ ಆಗಲಿಲ್ಲ. ಹಾಗಾಗಿ ವಿಧೇಯಕ ಕಾನೂನಾಗಿಸುವ ಭರವಸೆ ಇಟ್ಟುಕೊಂಡವರಿಗೆ ನಿರಾಸೆಯಾಗಿದೆ. ಕನ್ನಡ ಭಾಷೆ ಉಳಿದರೆ ಮಾತ್ರ ಕರ್ನಾಟಕದ ಅಸ್ಮಿತೆ ಉಳಿಯಲು ಸಾಧ್ಯ. ಆದ್ದರಿಂದ ಭಾಷೆ ಸಂಸ್ಕೃತಿಯ ಉಳಿವಿಗೆ ವಿಧೇಯಕ ಕಾನೂನು ಆಗಬೇಕಿರುವುದು ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ.

ಸರ್ಕಾರಕ್ಕೆ ಈ ಬಗ್ಗೆ ಸಾಕಷ್ಟು ಬಾರಿ ಮನವರಿಕೆ ಮಾಡಿಕೊಟ್ಟಿದ್ದು, ಸದನದಲ್ಲಿ ಪಕ್ಷಭೇದ ಮರೆತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ–2022ದ ಕುರಿತು ಸಮಗ್ರ ಚರ್ಚೆ ನಡೆಸಿ ಕಾನೂನು ಮಾಡುವುದಕ್ಕೆ ಬೆಂಬಲ ವ್ಯಕ್ತಪಡಿಸುವುದಾಗಿ ಎಲ್ಲ ಪಕ್ಷದ ನಾಯಕರು ಕನ್ನಡ ಸಾಹಿತ್ಯ ಪರಿಷತ್ತಿಗೆ ಭರವಸೆ ನೀಡಿದ್ದರು. ಅದರಂತೆ ವಿಧೇಯಕವನ್ನು ಕಾನೂನು ಮಾಡುವುದಕ್ಕೆ ಎಲ್ಲರ ಒಮ್ಮತದ ಒಪ್ಪಿಗೆ ಇರುವುದರಿಂದ ಆದಷ್ಟು ಬೇಗ ಕಾನೂನು ಜಾರಿಯಾಗಬೇಕು ಎಂದು ಒತ್ತಾಯಿಸಿದ್ದಾರೆ.

ನ್ಯಾಯಮೂರ್ತಿ ಎಸ್.ಆರ್. ಬನ್ನೂರಮಠ ನೆತೃತ್ವದ ಕರ್ನಾಟಕ ಕಾನೂನು ಆಯೋಗವು ತನ್ನ 57ನೇ ವರದಿಯಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ–2022 ಅನ್ನು ಸಿದ್ಧಪಡಿಸಿ, ವರದಿಯ ಅನುಷ್ಠಾನಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ವಿಧೇಯಕವನ್ನು ಕಾನೂನು ಆಗುವ ಸಂಬಂಧ ಸೆಪ್ಟೆಂಬರ್ –22 ರಂದು ಕನ್ನಡ–ಸಂಸ್ಕೃತಿ ಸಚಿವ ವಿ ಸುನೀಲ್ ಕುಮಾರ್ ವಿಧಾನಸಭೆ ಅಧಿವೇಶನದಲ್ಲಿ ವಿಧೇಯಕ ಮಂಡಿಸಿದರು ಎಂದು ನಂತರದ ಬೆಳವಣಿಗೆಗಳ ಕುರಿತು ವಿವರಿಸಿದ್ದಾರೆ.

ಕಸಾಪ ಆವರಣದಲ್ಲಿ ಸ್ಥಾಪಿಸಿರುವ ಭುವನೇಶ್ವರಿ ಪ್ರತಿಮೆ ಅನಾವರಣ ಸಂದರ್ಭದಲ್ಲಿ ಭರವಸೆ ನೀಡಿದ್ದ ಮುಖ್ಯಮಂತ್ರಿಯವರು, ನೀಡಿದ್ಧ ಭರವಸೆಯಂತೆ ಕೂಡಲೇ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಬೇಕು. ಈ ಸಂಬಂಧ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಪುಸ್ತಕ ಪರಿಷೆಯಾಗಲಿದೆ ಸಮ್ಮೇಳನ: ಶ್ರೀಮಂತ ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆ ಮೂಲೆಗೆ ತಲುಪಿಸುತ್ತಿರುವ 400 ಅಧಿಕ ಕನ್ನಡ ಪುಸ್ತಕ ಪ್ರಕಾಶಕರು ಮತ್ತು ಮಾರಾಟಗಾರರನ್ನು ಒಂದೇ ಕಡೆ ನೋಡುವ ಭಾಗ್ಯವನ್ನು ಹಾವೇರಿಯ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಕ್ಷರ ಪ್ರೇಮಿಗಳಿಗೆ ಒದಗಿಸಿಕೊಡಲಿದೆ.

ಪ್ರತಿ ಸಾಹಿತ್ಯ ಸಮ್ಮೇಳನದಲ್ಲಿ ಸುಮಾರು 200 ರಿಂದ 300 ಪುಸ್ತಕ ಮಳಿಗೆಗಳು ಇರುತ್ತಿದ್ದವು. ಈ ಬಾರಿ 400 ಪುಸ್ತಕ ಮಳಿಗೆಗಳು, 200 ವಾಣಿಜ್ಯ ಮಳಿಗೆಗಳು ಸೇರಿ ಒಟ್ಟು 600 ಮಳಿಗೆಗಳು ಇರಲಿವೆ. ಸಮ್ಮೇಳನದ ಮುಖ್ಯ ವೇದಿಕೆ ಎದುರು ಇದಕ್ಕಾಗಿ ಜರ್ಮನ್ ತಂತ್ರಜ್ಞಾನದ ಟೆಂಟ್ ಹಾಕಲಾಗಿದೆ. ಇದೇ ಮೊದಲ ಬಾರಿಗೆ ಆನ್‌ಲೈನ್ ಮೂಲಕ ಮಳಿಗೆ ನೋಂದಣಿ ಮಾಡಲಾಗಿದ್ದು, ಎಲ್ಲ ಮಳಿಗೆಗಳು ಭರ್ತಿಯಾಗಿವೆ. ಸಾಹಿತ್ಯ ಪ್ರಕಾಶನ, ಸಾಮಣ್ಣ, ಧಾತ್ರಿ ಪಬ್ಲಿಕೇಶನ್ಸ್, ಸಪ್ನ ಬುಕ್ ಹೌಸ್ ಸೇರಿ ನಾಡಿನ ಖ್ಯಾತ ಪ್ರಕಾಶನ ಸಂಸ್ಥೆಗಳು ಹಾಗೂ ಪುಸ್ತಕ ಮಾರಾಟ ಸಂಸ್ಥೆಗಳು ಹೆಚ್ಚಿನ ಮಳಿಗೆಗಳನ್ನು ಪಡೆದಿವೆ. ಕಸಾಪ ಪ್ರಕಟಿಸಿರುವ ಎಲ್ಲ ಪುಸ್ತಕಗಳ ಮಾರಾಟಕ್ಕಾಗಿ 10 ಮಳಿಗೆ ಕಾಯ್ದಿರಿಸಲಾಗಿದೆ.

ಸಿಗಲಿದೆ ರಿಯಾಯಿತಿ: ಹಲವರು ಪುಸ್ತಕ ಖರೀದಿಗೋಸ್ಕರವೇ ಸಮ್ಮೇಳನಕ್ಕೆ ಬರುತ್ತಾರೆ. ಮಾರಾಟಗಾರರು ಈ ಬಾರಿ ಯೋಗ್ಯ ರಿಯಾಯಿತಿ ನೀಡುತ್ತಿದ್ದಾರೆ. (ಕಸಾಪದಿಂದ) ಕೆಲ ಹಳೆಯ ಸಾಹಿತ್ಯಗಳು ಶೇ.70 ರಷ್ಟು ರಿಯಾಯಿತಿಯಲ್ಲೂ ಸಿಗಲಿವೆ.

ಅಚ್ಚುಕಟ್ಟಾದ ವ್ಯವಸ್ಥೆ ಮಾಡಿ: ಸಮ್ಮೇಳನ ಎಂದೊಡನೆ ತಿಂಡಿ ತಿನಿಸು, ಆಟಿಕೆ ಮತ್ತಿತರ ವಸ್ತುಗಳ ಮಾರಾಟ ಮಾಡುವ ನೂರಾರು ಮಂದಿ ಬಂದು ಕುಳಿತುಬಿಡುತ್ತಾರೆ. ಇದರಿಂದ ಪುಸ್ತಕ ಮಳಿಗೆಗಳಿಗೆ ಜನ ಬರಲು ಅಡ್ಡಿಯಾಗುವುದು ಇದೆ. ಹಾವೇರಿ ಸಮ್ಮೇಳನದಲ್ಲಿ ಈ ಸಮಸ್ಯೆ ಉದ್ಭವಿಸದಂತೆ ಆಯೋಜಕರು ಮುನ್ನೆಚ್ಚರಿಕೆ ವಹಿಸಲಿ. ಪುಸ್ತಕ ಇಡಲು ಒಂದು ಮಳಿಗೆಗೆ ಕೇವಲ 2 ಟೇಬಲ್ ಕೋಡುತ್ತಿದ್ದಾರೆ. ಇದು ಸಾಕಾಗಲ್ಲ. ನೆಲದ ಮೇಲೆ ಪುಸ್ತಕ ಇಡುವುದು ಸರಿಯಲ್ಲ. ಕನಿಷ್ಠ 4 ಟೇಬಲ್ ಕೊಡಬೇಕು ಎಂದು ಒತ್ತಾಯಿಸುತ್ತಾರೆ, ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಮಾಲೀಕ ಎಂ.ಎ ಸುಬ್ರಹ್ಮಣ್ಯ ಮಾತನಾಡಿ ಕನ್ನಡ ಭಾಷೆ ಮತ್ತು ಕನ್ನಡಿಗರ ರಕ್ಷಣೆಗೆ ರೂಪಿಸಿರುವ ಸಮಗ್ರ ಕನ್ನಡ ಭಾಷಾ ವಿಧೇಯಕವನ್ನು ರಾಜ್ಯ ಸರ್ಕಾರ ಸುಗ್ರಿವಾಜ್ಞೆ ಮೂಲಕ ಜಾರಿಗೆ ತರಬೇಕು. ಬೆಳಗಾವಿ ಅಧಿವೇಶನದಲ್ಲಿ ಸರ್ಕಾರ ವಿಧೇಯಕವನ್ನು ಮಂಡಿಸುವ ಬಗ್ಗೆ ನಮಗೆ ಭಾರಿ ನಿರೀಕ್ಷೆ ಇತ್ತು. ಆದರೆ, ಇದು ಹುಸಿಯಾಗಿದೆ. ಸಾಹಿತ್ಯ ಸಮ್ಮೇಳನ ನಡೆಯುವ ಮುನ್ನ ಈ ವಿಧೇಯಕವನ್ನು ಸರ್ಕಾರ ಜಾರಿಗೆ ತಂದಲ್ಲಿ ಅರ್ಥಪೂರ್ಣವಾಗುತ್ತದೆ ಎಂದರು.

ಆಧಾರ:ವಿಜಯವಾಣಿ, ದಿನಾಂಕ:02.01.2023.

4. ರಾಜ್ಯಕ್ಕೆ ಆರ್ಥಿಕ ಶುಭಾಶಯ

ಪ್ರಸಕ್ತ ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕ ಅವಧಿ ಪೂರ್ಣಗೊಂಡಿದ್ದು, ನವಮಾಸದಲ್ಲಿ ಸರ್ಕಾರದ ಸ್ವಂತ ತೆರಿಗೆ ಮೂಲದಿಂದ ರೂ.1.05 ಲಕ್ಷಕೋಟಿ ಆದಾಯ ಸಂಗ್ರಹವಾಗಿದೆ. ಇನ್ನೂ ಒಂದು ತ್ರೈಮಾಸಿಕ ಬಾಕಿ ಇರುವಾಗಲೇ ವಾರ್ಷಿಕ ಗುರಿಯ ಶೇ.80ರಷ್ಟು ತೆರಿಗೆ ಸಂಗ್ರಹವಾಗಿದೆ.

ಆರ್ಥಿಕ ವರ್ಷದ ಆರಂಭದಿಂದಲೂ ವಾಣಿಜ್ಯ ತೆರಿಗೆ ಸಂಗ್ರಹ ಉತ್ತಮವಾಗಿದೆ. ಆ ಮೂಲಕ ರಾಜ್ಯದ ಆರ್ಥಿಕತೆಯ ನಿರಂತರ ಬೆಳವಣಿಗೆ ಜೊತೆಗೆ ಸ್ಥಿರತೆ ಕಾಯ್ದುಕೊಂಡಿರುವುದು ಸ್ಪಷ್ಟ. ಸಕಾಲದಲ್ಲಿ ತೆರಿಗೆ ಸಂಗ್ರಹ ಸಂಬಂಧ ಮೇಲ್ವಿಚಾರಣೆ, ವಿಳಂಬಕ್ಕೆ ದಂಡ ಪ್ರಯೋಗ ಇತರೆ ಕ್ರಮಗಳಿಂದಾಗಿ ಮಾಸಿಕವಾರು ತೆರಿಗೆ ಸಂಗ್ರಹದಲ್ಲಿ ಸ್ಥಿರತೆ ಕಾಯ್ದುಕೊಳ್ಳಲಾಗಿದೆ. 2022–23ನೇ ಸಾಲಿನಲ್ಲಿ ವಾರ್ಷಿಕ ಗುರಿ ಮೀರಿ ತೆರಿಗೆ ಸಂಗ್ರಹವಾಗಲಿದೆ. ಕೇಂದ್ರ ಸರ್ಕಾರದಿಂದ 9 ತಿಂಗಳಲ್ಲಿ ಜಿಎಸ್‌ಟಿ ಪರಿಹಾರ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ರೂ.10,547 ಕೋಟಿ ಬಂದಿದೆ ಎಂದು ವಾಣಿಜ್ಯ ತೆರಿಗೆಗಳ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

ಮೂರನೇ ತ್ರೈಮಾಸಿಕ ಅಂತ್ಯಕ್ಕೆ ವಾಣಿಜ್ಯ, ಅಬಕಾರಿ, ಸಾರಿಗೆ ಹಾಗೂ ಮುದ್ರಾಂಕ ಮತ್ತು ನೋಂದಣಿ ಶುಲ್ಕದಿಂದ ಸರಾಸರಿ ಗುರಿ ಶೇ.75ರ ಮೀರಿ ತೆರಿಗೆ ಸಂಗ್ರಹವಾಗಿರುವುದು ಆಶಾದಾಯಕವೆನಿಸಿದೆ. ಆ ಮೂಲಕ ನಾಲ್ಕು ತೆರಿಗೆ ಮೂಲಗಳು ಅನಾಯಾಸವಾಗಿ ವಾರ್ಷಿಕ ಗುರಿ ತಲುಪುವ ನಿರೀಕ್ಷೆ ಮೂಡಿಸಿವೆ.

ಬೆಳವಣಿಗೆ ಜೊತೆಗೆ ಸ್ಥಿರತೆ ಸರ್ಕಾರ ಕೈಗೊಳ್ಳುವ ಅಭಿವೃದ್ಧಿ ಯೋಜನೆಗಳು, ಕಲ್ಯಾಣ ಕಾರ್ಯಕ್ರಮಗಳು, ನೌಕರರ ವೇತನ, ಪಿಂಚಣಿ ಇತರೆ ಬದ್ಧತಾ ವೆಚ್ಚಗಳಿಗೆ ದೊಡ್ಡ ಕೊಡುಗೆ ನೀಡುವ ವಾಣಿಜ್ಯ ತೆರಿಗೆ ಸಂಗ್ರಹ ಉತ್ತಮವಾಗಿದ್ದು, ಡಿಸೆಂಬರ್‌ನಲ್ಲಿ ರೂ.7,292 ಕೋಟಿ ಸಂಗ್ರಹವಾಗಿದೆ. ಆ ಮೂಲಕ ಮೂರನೇ ತ್ರೈಮಾಸಿಕ ಅಂತ್ಯಕ್ಕೆ ವಾಣಿಜ್ಯ ತೆರಿಗೆ ರೂಪದಲ್ಲಿ ರೂ.63,862 ಕೋಟಿ ಸಂಗ್ರಹವಾಗಿದೆ.

ಪರಿಷ್ಕೃತ ಗುರಿ ದಾಟುವ ಭರವಸೆ: ಬಜೆಟ್‌ನಲ್ಲಿ ವಾಣಿಜ್ಯ ತೆರಿಗೆಯಿಂದ ಪ್ರಸಕ್ತ ಸಾಲಿನಲ್ಲಿ ರೂ. 77,010 ಕೋಟಿ ಸಂಗ್ರಹ ಗುರಿ ನಿಗದಿಪಡಿಸಲಾಗಿತ್ತು. ಆದರೆ, ಆರಂಭದಿಂದಲೂ ನಿರೀಕ್ಷೆ ಮೀರಿ ತೆರಿಗೆ ಸಂಗ್ರಹದ ಕಾರಣ ಸರ್ಕಾರವು ವಾರ್ಷಿಕ ಗುರಿಯನ್ನು ರೂ.79,00 ಕೋಟಿಗೆ ಪರಿಷ್ಕರಿಸಿತ್ತು. ಆ ವಾರ್ಷಿಕ ಗುರಿಯಲ್ಲೂ 9 ತಿಂಗಳ ಅವಧಿಯಲ್ಲಿ ಶೇ. 80.83 ತೆರಿಗೆ ಸಂಗ್ರಹಿಸುವ ಮೂಲಕ ಬಾಕಿ ಮೂರು ತಿಂಗಳಲ್ಲಿ ಶೇ.20 ರಷ್ಟು ತೆರಿಗೆಯನ್ನು ಅನ್ಯಾಯವಾಗಿ ಸಂಗ್ರಹಿಸುವ ವಿಶ್ವಾಸ ಮೂಡಿಸಿದೆ.

ಶೇ.15ರಷ್ಟು ನೋಂದಣಿ ಹೆಚ್ಚಳ: ಆರ್ಥಿಕ ವರ್ಷದ ಒಂಬತ್ತು ತಿಂಗಳ ಹೊಸ ವಾಹನ ನೋಂದಣಿ ಉತ್ತಮವಾಗಿದೆ. ಡಿಸೆಂಬರ್‌ನಲ್ಲಿ ರೂ.709 ಕೋಟಿ ಸಂಗ್ರಹವಾಗಿದ್ದು, ಹೊಸ ವಾಹನಗಳ ನೋಂದಣಿ ಸರಾಸರಿ ಪ್ರಮಾಣಕ್ಕೆ ಹೋಲಿಸಿದರೆ ಶೇ.15ರಷ್ಟು ಹೆಚ್ಚಳವಾಗಿದೆ. ಯೋಜಿತ ರೀತಿಯಲ್ಲಿ ತೆರಿಗೆ ಸಂಗ್ರಹ ಕ್ರಮಗಳಿಂದಾಗಿ ನಿರೀಕ್ಷೆ ಮೀರಿ ಆದಾಯ ಸಂಗ್ರಹವಾಗಿದೆ ಎಂದು ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಒಟ್ಟಾರೆ 2022–23ನೇ ಆರ್ಥಿಕ ವರ್ಷದ ಆರಂಭದಿಂದಲೂ ಬಹುಪಾಲು ಏರು ಗತಿಯಲ್ಲೇ ಇರುವ ತೆರಿಗೆ ಆದಾಯವು ಮುಂದೆಯೂ ಬೆಳವಣಿಗೆ ದರದಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ವಿಶ್ವಾಸ ಮೂಡಿಸಿದೆ. ಆ ಮೂಲಕ ಬಜೆಟ್‌ನಲ್ಲಿ ಘೋಷಿತ ಯೋಜನೆಗಳು, ಕಾರ್ಯಕ್ರಮಗಳ ಜೊತೆಗೆ ಪೂರಕ ವೆಚ್ಚದ ಅಂದಾಜಿಗೂ ಅಗತ್ಯ ಹಣ ಹೊಂದಿಕೆಯಾಗುವ ನಿರೀಕ್ಷೆ ಮೂಡಿಸಿದೆ. ತೆರಿಗೆ ಆದಾಯ ಹೆಚ್ಚಾದಂತೆ ಸಾಲ ಪಡೆಯುವ ಪ್ರಮಾಣವು ತಗ್ಗಲಿದ್ದು ಆರ್ಥಿಕ ಶಿಸ್ತು ಕಾಯ್ದಕೊಳ್ಳಲು ಸಹಕಾರಿಯಾಗಲಿದೆ.

ಡಿಸೆಂಬರ್ ತೆರಿಗೆ (ಕೋಟಿ ರೂ.ಗಳಲ್ಲಿ)	
ವಾಣಿಜ್ಯ	7,292.93
ಅಬಕಾರಿ	2,543.79
ಮುದ್ರಾಂಕ ನೋಂದಣಿ	1,580

ಗುರಿ ಮೀರಿ ಆದಾಯ: ಇತರೆ ಮೂರು ತೆರಿಗೆ ಮೂಲಗಳಿಗೆ ಹೋಲಿಸಿದರೆ ಯಾವಾಗಲೂ ಹಿಂದಿರುತ್ತಿದ್ದ ಮೋಟಾರು ವಾಹನ ತೆರಿಗೆಯಿಂದ ಸಾಕಷ್ಟು ಆದಾಯ ಸಂಗ್ರಹವಾಗಿದೆ. ಡಿಸೆಂಬರ್‌ನಲ್ಲಿ ಈ ಮೂಲದಿಂದ ರೂ.709 ಕೋಟಿ ಸಂಗ್ರಹವಾಗಿದೆ. ಮೂರನೇ ತ್ರೈಮಾಸಿಕ ಅಂತ್ಯಕ್ಕೆ ರೂ.6005 ಕೋಟಿ ಸಂಗ್ರಹ ಗುರಿ ಮೀರಿ ರೂ.6649 ಕೋಟಿ ಆದಾಯ ಬಂದಿದೆ. ಆಂದರೆ ಗುರಿಗಿಂತಲೂ ಬರೋಬ್ಬರಿ ರೂ.644 ಕೋಟಿ ಹೆಚ್ಚುವರಿ ಸಂಗ್ರಹವಾಗಿದೆ.

ಅಬಕಾರಿ ಆದಾಯ ಭರ್ಜರಿ: ಕೋವಿಡ್ ಹಾವಳಿ ಸಂದರ್ಭದಲ್ಲೂ ಸರ್ಕಾರದ ಬೊಕ್ಕಸಕ್ಕೆ ನಿರಂತರ ಕೊಡುಗೆ ನೀಡಿದ ಅಬಕಾರಿ ತೆರಿಗೆ ಆದಾಯವು ಉತ್ತಮವಾಗಿದೆ. ಡಿಸೆಂಬರ್‌ನಲ್ಲಿ ರೂ.2543.79 ಕೋಟಿ ಸಂಗ್ರಹವಾಗಿದ್ದು, 2021ರ ಡಿಸೆಂಬರ್‌ಗೆ ಹೋಲಿಸಿದರೆ ತುಸು ಕಡಿಮೆಯಾಗಿದೆ. ಆದರೆ, 2021ನೇ ಸಾಲಿನ ಮೂರನೇ ತ್ರೈಮಾಸಿಕ ಅಂತ್ಯಕ್ಕೆ ಹೋಲಿಸಿದರೆ 2022ನೇ ಸಾಲಿನ ಮೂರನೇ ತ್ರೈಮಾಸಿಕ ಅಂತ್ಯಕ್ಕೆ ಆದಾಯದಲ್ಲಿ ಶೇ.14.23ರಷ್ಟು ಹೆಚ್ಚಳವಾಗಿದೆ.

ತೆರಿಗೆ ಸಂಗ್ರಹ ವಿವರ (ಕೋಟಿ ರೂ.ಗಳಲ್ಲಿ)			
ಮೂಲ	**ವಾರ್ಷಿಕ ಗುರಿ**	**ಏ.1-ಡಿ.31ರವರೆಗಿನ ಸಂಗ್ರಹ**	**ಶೇಕಡಾವಾರು**
ವಾಣಿಜ್ಯ	79,000	63,862	80.83%
ಅಬಕಾರಿ	29,000	22,200	76.55%
ಸಾರಿಗೆ	8,006	6,649	83.00%
ಮುಂದ್ರಾಕ ನೋಂದಣಿ	15,000	12,600	84.00%
ಒಟ್ಟು	1,31,006	1,05,311	–

15% ನೋಂದಣಿ ಹೆಚ್ಚಳ: ಆರ್ಥಿಕ ವರ್ಷದ ಒಂಬತ್ತು ತಿಂಗಳಲ್ಲಿ ಹೊಸ ವಾಹನ ನೋಂದಣಿ ಉತ್ತಮವಾಗಿದೆ. ಡಿಸೆಂಬರ್‌ನಲ್ಲಿ ರೂ.709 ಕೋಟಿ ಸಂಗ್ರಹವಾಗಿದ್ದು, ಹೊಸ ವಾಹನಗಳ ನೋಂದಣಿ ಸರಾಸರಿ ಪ್ರಮಾಣಕ್ಕೆ ಹೋಲಿಸಿದರೆ ಶೇ.15 ರಷ್ಟು ಹೆಚ್ಚಳವಾಗಿದೆ. ಯೋಜಿತ ರೀತಿಯ ಕ್ರಮಗಳಿಂದಾಗಿ ನಿರೀಕ್ಷ ಮೀರಿ ಆದಾಯ ಸಂಗ್ರಹವಾಗಿದೆ.

ರೂ.1850 ಕೋಟಿ ಹೆಚ್ಚು ಆದಾಯ: ಮುದ್ರಾಂಕ ಮತ್ತು ನೋಂದಣಿ ಶುಲ್ಕ ರೂಪದಲ್ಲಿ ಡಿಸೆಂಬರ್ ತಿಂಗಳೊಂದರಲ್ಲಿಯೇ ರೂ.1580 ಕೋಟಿ ಆದಾಯ ಹರಿದು ಬಂದಿದೆ. ಆದರಿಂದಾಗಿ ಮೂರನೇ ತ್ರೈಮಾಸಿಕ ಅವಧಿ ಅಂತ್ಯಕ್ಕೆ ಸಂಗ್ರಹವಾಗಬೇಕಿದ್ದ ರೂ.1750 ಕೋಟಿ. ಗುರಿ ಮೀರಿ ರೂ.1850 ಕೋಟಿ ಹೆಚ್ಚುವರಿ ಆದಾಯ ಸಂಗ್ರಹವಾಗಿದೆ. ಬಾಕಿಯಿರುವ ಮೂರು ತಿಂಗಳಲ್ಲಿ ರೂ.2,400 ಕೋಟಿ ಸಂಗ್ರಹವಾದರೆ ಗುರಿ ತಲುಪಿದಂತಾಗುತ್ತದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:04.01.2023.

5. ಜಲಾಶಯಗಳ ನೀರು ಹಂಚಿಕೆ ಆಡಿಟ್

ಕೈಗಾರಿಕೆ ಸ್ಥಾಪನೆಯಾಗಿ ಸರ್ಕಾರದಿಂದ ಕೆಐಎಡಿಬಿ ಮೂಲಕ ಹಂಚಿಕೆ ಮಾಡಲಾದ ಭೂಮಿ ಮತ್ತು ಜಲಾಶಯಗಳಿಂದ ಹಂಚಿಕೆಯಾಗಿರುವ ನೀರಿನ ಪ್ರಮಾಣದ ಆಡಿಟ್ ಮಾಡಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿದರು.

ನಗರದಲ್ಲಿ ನೂತನ ಜಿಲ್ಲಾಡಳಿತ ಭವನ ಉದ್ಘಾಟಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೈಗಾರಿಕೆ ಸ್ಥಾಪನೆಗಾಗಿ ರಾಜ್ಯಾದಂತ ಜಮೀನು ಹಂಚಿಕೆ ಮಾಡಲಾಗಿದೆ. ಹಂಚಿಕೆಯಾದ ಜಮೀನಿನಲ್ಲಿ ಪ್ರಮಾಣದಲ್ಲಿ ಕೈಗಾರಿಕೆಗೆ ಬಳಸಲಾಗಿದೆ. ಎಷ್ಟು ಬಳಕೆಯಾಗದೆ, ಹಾಗೆ ಉಳಿದಿದೆ ಎಂಬುದನ್ನು ತಿಳಿಯಲು ಜಮೀನು ಆಡಿಟ್ ಮಾಡಲಾಗುವುದು ಎಂದರು.

ಇದರೊಂದಿಗೆ ರಾಜ್ಯದಲ್ಲಿರುವ ಹಲವಾರು ಜಲಾಶಯಗಳಿಂದಲೂ ನೀರನ್ನು ಹಂಚಿಕೆ ಮಾಡಲಾಗುತ್ತಿದೆ. ಎಷ್ಟು ಪ್ರಮಾಣದ ನೀರನ್ನು ಹಂಚಿಕೆ ಮಾಡಲಾಗಿದೆ ಎಂಬುದನ್ನು ಆಡಿಟ್ ಮಾಡಿಸಬೇಕಾಗಿದೆ. ಈ ಕುರಿತ ಮೊದಲ ವರದಿ ಬಂದಿದ್ದು, ಎರಡನೇ ಹಂತದ ಆಡಿಟ್ ವರದಿ ಬರಬೇಕಾಗಿದೆ ಎಂದರು.

ಬಳ್ಳಾರಿ ತಾಲ್ಲೂಕು ಕುಡತಿನಿ ಬಳಿ ಕೈಗಾರಿಕೆ ಸ್ಥಾಪನೆಗಾಗಿ ಹತ್ತು ವರ್ಷಗಳ ಹಿಂದೆ ಸಾವಿರಾರು ಎಕರೆ ಜಮೀನು ಹಂಚಿಕೆ ಮಾಡಲಾಗಿದೆ. ಈ ಜಮೀನುಗಳಲ್ಲಿ ಕೈಗಾರಿಕೆ ಸೋಲಾರ್ ಎನರ್ಜಿ ಪ್ಲಾಂಟ್ ಪ್ರಾರಂಭಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಸಲ್ಲಿಕೆಯಾಗಿದ್ದವು. ಕೈಗಾರಿಕೆ ಸ್ಥಾಪನೆಗೆ ದೊಡ್ಡ ದೊಡ್ಡ ಕಂಪನಿಗಳು ಮುಂದಾಗಿದ್ದಾವಾದರೂ ಆ ಕಂಪನಿಗಳ ಹಣಕಾಸಿನ ಪರಿಸ್ಥಿತಿ ಹಿಂದಿನಂತೆ ಈಗಿಲ್ಲ. ಹಾಗಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗುವುದು ಎಂದರು.

ಸಮಾನಾಂತರ ಜಲಾಶಯಕ್ಕೆ ಡಿಪಿಆರ್: ತುಂಗಭಂದ್ರಾ ಜಲಾಶಯದ ಹೆಚ್ಚುವರಿ ನೀರನ್ನು ಸಂಗ್ರಹಿಸಲು ನವಿಲೆ ಬಳಿ ನಿರ್ಮಿಸಲು ಉದ್ದೇಶಿಸಲಾಗಿರುವ ಸಮಾನಾಂತರ ಜಲಾಶಯಕ್ಕೆ ಡಿ.ಪಿ.ಆರ್ ಸಿದ್ಧಗೊಂಡಿದೆ. ತುಂಬಭದ್ರಾ ಆಡಳಿತ ಮಂಡಳಿ ಅನುಮೋದನೆ ನೀಡಬೇಕಾಗಿದೆ. ಈ ಕುರಿತು ಆಂಧ್ರ ಮುಖ್ಯಮಂತ್ರಿ ಬಳಿ ಚರ್ಚಿಸಿದ್ದೇನೆ. ಅವರು ತಾಂತ್ರಿಕ ತಂಡವನ್ನು ಕಳುಹಿಸಿದ್ದು, ನಮ್ಮ ರಾಜ್ಯದ ತಾಂತ್ರಿಕ ತಂಡಗಳು ಸಹ ಪರಿಶೀಲನೆ ನಡೆಸಿವೆ. ಜೊತೆಗೆ ಆಂಧ್ರ, ತೆಲಂಗಾಣ ರಾಜ್ಯಗಳ ನೀರಾವರಿ ಸಚಿವರೊಂದಿಗೆ ನಮ್ಮ ನೀರಾವರಿ ಸಚಿವರು ನಾನು ಸೇರಿ ಚರ್ಚಿಸುತ್ತೇವೆ. ರಾಜ್ಯದ ಹಿತಾಸಕ್ತಿಯಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದರು.

ಮರು ಟೆಂಡರ್: ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 63ರ ರಸ್ತೆ ಕಾಮಗಾರಿ ಕಳೆದ ಐದು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು, ಈ ಕುರಿತು ಮರು ಟೆಂಡರ್ ಕರೆಯುವಂತೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಈಚೆಗೆ ಭೇಟಿಯಾಗಿ ಮನವಿ ಮಾಡಲಾಗಿದೆ. ಕಾಮಗಾರಿ ನಡೆಸುತ್ತಿರುವ ಗ್ಯಾಮನ್ ಇಂಡಿಯಾ ಕಂಪನಿ ಹಣಕಾಸಿನ ತೊಂದರೆ ಎದುರಿಸುತ್ತಿದ್ದು, ಆ ಕಂಪನಿ ವಿವಿಧೆಡೆ ನಡೆಸುತ್ತಿರುವ ಎಲ್ಲ ಕಾಮಗಾರಿಗಳು ಇದೇ ಪರಿಸ್ಥಿತಿಯಲ್ಲಿವೆ. ಫೆಬ್ರವರಿಯಲ್ಲಿ ಮರು ಟೆಂಡರ್ ಆಹ್ವಾನಿಸಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಉಸ್ತುವಾರಿ ಸಚಿವ ಬಿ. ಶ್ರೀರಾಮುಲು ಶಾಸಕರಾದ ಜಿ. ಸೋಮಶೇಖರರೆಡ್ಡಿ, ಬಿ. ನಾಗೇಂದ್ರ ಡಿಸಿ ಪವನ್ ಕುಮಾರ್ ಮೂಲಪಾಟಿ ಇದ್ದರು.

ದಶಪಥ ಹೆದ್ದಾರಿ ಕಾಮಗಾರಿ ಪರಿಶೀಲನೆ:

ರಾಮನಗರ: ರಾಜ್ಯಕ್ಕೆ ಆಗಮಿಸಿರುವ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಕಾಮಗಾರಿ ವೀಕ್ಷಣೆ ನಡೆಸಲಿದ್ದಾರೆ. ದಶಪಥ ಹೆದ್ದಾರಿ ವೀಕ್ಷಣೆಯನ್ನು ಸಚಿವರು ಹೆಲಿಕಾಪ್ಟರ್ ಮೂಲಕ ನಡೆಸಲಿದ್ದಾರೆ. ಅದರೂ ರಾಮನಗರ ಹೊರವಲಯದ ಕೆಂಪೇಗೌಡನ ದೊಡ್ಡಿ , ಜಿಗೇನಹಳ್ಳಿಯಿಂದ ಸುಮಾರು 10 ಕಿ.ಮಿ. ರಸ್ತೆಯಲ್ಲಿ ಸ್ವತ: ಕಾರು ಚಲನೆ ಮಾಡುವ ಮೂಲಕ ರಸ್ತೆ ಕಾಮಗಾರಿ ಪರಿಶೀಲನೆ ನಡೆಸುವರು ಅದಕ್ಕಾಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಗೇನ ಹಳ್ಳಿಯಲ್ಲಿ ದಶಪಥ ಹೆದ್ದಾರಿಯಲ್ಲಿಯೇ ಎರಡು ಹೆಲಿಪ್ಯಾಡ್ ನಿರ್ಮಾಣ ಮಾಡಲಾಗಿದ್ದು, ನಿತಿನ್ ಗಡ್ಕರಿ ಹಾಗೂ ಮುಖ್ಯಮಂತ್ರಿಯವರು ಕಾಮಗಾರಿಯನ್ನು ಸ್ವತ: ಪರಿಶೀಲನೆ ನಡೆಸಲಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಖಚಿತ: ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗುವುದು ಖಚಿತ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ತಿಳಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು ಈ ವೇಳೆಗಾಗಲೇ ಸಂಪುಟ ವಿಸ್ತರಣೆ ಆಗಬೇಕಿತ್ತು. ಇನ್ನೂ ಆಗಿಲ್ಲ. ಶೀಘ್ರ ಆಗಲಿದೆ ಎಂದು ಹೇಳಿದರು. ನಳಿನ್ ಕುಮಾರ್ ಕಟೀಲ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅರುಣ್ ಸಿಂಗ್, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಮ್ಮ ಚುನಾವಣಾ ಅಜೆಂಡಾ ಸಿದ್ಧವಾಗಿದೆ. ಕಟೀಲ್ ಹೇಳಿಕ ಬಗ್ಗೆ ಮಾಹಿತಿ ಪಡೆಯುತ್ತೇನೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯವರು ಮಾತನಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ರಾಜ್ಯದ ಜನರು ಅದಕ್ಕೆ ಉತ್ತರಿಸುತ್ತಾರೆ. ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ. ಮುಖ್ಯಮಂತ್ರಿಯ ಬಗ್ಗೆ ಆ ರೀತಿ ಹೇಳುವುದು ರಾಜ್ಯಕ್ಕೆ ಮಾಡುವ ಅವಮಾನ, ಕೀಳು ಸಂಸ್ಕೃತಿ ಕಾಂಗ್ರೆಸ್‌ನವರ ರಕ್ತದಲ್ಲೇ ಇದೆ ಎಂದು ಟೀಕಿಸಿದರು.

ಆಧಾರ:ಉದಯವಾಣಿ, ದಿನಾಂಕ:05.01.2023.

6. ರಾಜ್ಯದ 221 ಕ್ಷೇತ್ರದಲ್ಲಿ 5 ಕೋಟಿ ಮತದಾರರು

ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಸಿದ್ಧತೆ ನಡೆಸುತ್ತಿರುವ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಮತದಾರರ ಅಂತಿಮ ಪಟ್ಟಿ ಪ್ರಕಟಿಸಿದ್ದು ರಾಜ್ಯದ 221 ವಿಧಾನಸಭಾ ಕ್ಷೇತ್ರಗಳಲ್ಲಿ ಐದು ಕೋಟಿಗೂ ಅಧಿಕ ಮತದಾರರು ಈ ಬಾರಿ ತಮ್ಮ ಹಕ್ಕು ಚಲಾಯಿಸಲಿದ್ದಾರೆ.

ಇನ್ನುಳಿದ ಮೂರು ವಿಧಾನಸಭಾ ಕ್ಷೇತ್ರಗಳಾದ ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯು ಇದೇ ತಿಂಗಳ 15ಕ್ಕೆ ಪ್ರಕಟವಾಗಲಿದೆ. ಮತದಾರರ ವೈಯಕ್ತಿಕ ವಿವರ ಕಳವು ಪ್ರಕರಣ ಹಿನ್ನೆಲೆಯಲ್ಲಿ ಜನವರಿ 15ಕ್ಕೆ ಪ್ರಕಟಿಸಲಾಗುತ್ತದೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ, ಅವರು ಮತದಾರರ ಅಂತಿಮ ಪಟ್ಟಿ ಪ್ರಕಟಿಸಿ ಮಾಹಿತಿ 221 ವಿಧಾನ ಸಭಾ ಕ್ಷೇತ್ರದಲ್ಲಿ 5,05,48,553 ಮತದಾರರಿದ್ದಾರೆ. ಈ ಪೈಕಿ 2,54,49,725 ಪುರುಷರು, 2,50,94,326 ಮಹಿಳೆಯರು, 4502 ಇತರ ಮತದಾರರಿದ್ದಾರೆ. ಸಾಮಾನ್ಯ ಮತದಾರರು, 5,05,00,739 ಮಂದಿ ಇದ್ದು 2,54,03,511 ಪುರುಷರು, 2,50,92,72 ಮತ್ತು ಇತರರು 4,346 ಮತದಾರರಿದ್ದಾರೆ. ಇನ್ನು ಸೇವಾ ಮತದಾರರು ಒಟ್ಟು 47,814 ಮಂದಿ ಇದ್ದು 46,214 ಪುರುಷರು, 1600 ಮಹಿಳೆಯರು ಇದ್ದಾರೆ ಎಂದು ವಿವರಿಸಿದರು.

ನವೆಂಬರ್ ತಿಂಗಳಲ್ಲಿ ಕರಡು ಮತದಾರರ ಪಟ್ಟಿ ಪ್ರಕಟಿಸಿದ ಬಳಿಕ 18,32,169 ಮತದಾರರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಕರಡು ಮತದಾರರ ಪಟ್ಟಿ ಪ್ರಕಟಿಸಿದ ಬಳಿಕ ಶೇ.5 ರಷ್ಟು ನೋಂದಣಿಯಾಗಿದೆ. 7,01,243 ಮತದಾರರು 18–19 ವರ್ಷದ ಯುವಜನಾಂಗದವರಾಗಿದ್ದಾರೆ. 3,88,064 ಪುರುಷರು, 313,040 ಮಹಿಳೆಯರು ಮತ್ತು 139 ಇತರೆ ಮತದಾರರಿದ್ದಾರೆ, ಇನ್ನು ಲೈಂಗಿಕ ಕಾರ್ಯಕರ್ತರು 1,00,834, ಬುಡಕಟ್ಟು ಜನಾಂಗದವರು 30,517 ಅಂಗವಿಕಲರು 5,09,553 ಮತ್ತು ತೃತೀಯ ಲಿಂಗಿಗಳು 41,312 ಮಂದಿ ನೋಂದಣಿಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಅಂತಿಮ ಮತದಾರರ ಪಟ್ಟಿಯ ಪರಿಷ್ಕರಣೆ ವೇಳೆಯಲ್ಲಿ 12,31,540 ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದ್ದು, 6,18,965 ಹೆಸರುಗಳನ್ನು ತೆಗೆದು ಹಾಕಲಾಗಿದೆ. 7,88,485 ಮಂದಿಯ ಮಾಹಿತಿಯನ್ನು ಮಾರ್ಪಾಡಿಸಲಾಗಿದೆ. 221 ವಿಧಾನಸಭಾ ಕ್ಷೇತ್ರಗಳ ಪೈಕಿ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವು ಅತಿ ಹೆಚ್ಚು ಮತದಾರರನ್ನು ಹೊಂದಿದೆ. 6,50,532 ಮತದಾರರು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನಸಭಾ ಕ್ಷೇತ್ರವು ಅತಿ ಕಡಿಮೆ ಮತದಾರರು ಇದ್ದು, 1,66,521 ಮಂದಿ ಇದ್ದಾರೆ ಒಟ್ಟು 57,388 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.

ನಾಲ್ಕು ಬಾರಿ ನೋಂದಣಿಗೆ ಅವಕಾಶ: ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಈ ಮೊದಲು ಜನವರಿ 1ರೊಳಗೆ 18 ವರ್ಷಗಳನ್ನು ಪೂರ್ಣಗೊಳಿಸಿದವರು ಮಾತ್ರ ನೋಂದಾಯಿಸಿಕೊಳ್ಳಬಹುದಿತ್ತು.

ಆದರೆ, ಈಗ ನಾಲ್ಕು ಬಾರಿ ನೋಂದಣಿಗೆ ಅವಕಾಶ ನೀಡಲಾಗಿದೆ. ಜನವರಿ–1, ಏಪ್ರಿಲ್–1, ಜೂನ್–1 ಮತ್ತು ಆಕ್ಟೋಬರ್ 1ರೊಳಗೆ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ. 17 ವರ್ಷ ಮೇಲ್ಪಟ್ಟವರು ಮೊದಲೇ ಅರ್ಜಿ ಹಾಕಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಈವರೆಗೆ 25,299 ಮಂದಿ ಅರ್ಜಿಯನ್ನು ಸಲ್ಲಿಕೆ ಮಾಡಿದ್ದಾರೆ 18 ವರ್ಷ ಪೂರ್ಣಗೊಳಿಸುವ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮನೋಜ್ ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿಗಳಾದ ವೆಂಕಟೇಶ್ ಕುಮಾರ್, ರಾಜೇಂದ್ರ ಚೋಳನ್ ಉಪಸ್ಥಿತರಿದ್ದರು.

ನಾಮಪತ್ರ ಸಲ್ಲಿಕೆ ಮುಗಿದ 10 ದಿನಕ್ಕೂ ಮುನ್ನದವರೆಗೆ ಮತದಾರರ ಪಟ್ಟಿಗೆ ಸೇರಿಸಲು ಅವಕಾಶ ಇರುತ್ತದೆ. ಮತದಾರರ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಸಹ ಮಾಡಿಕೊಳ್ಳಬಹುದು ನಾಮಪತ್ರ ಸಲ್ಲಿಕೆಯ ಕಡೆ ದಿನದ 10 ದಿನಕ್ಕೆ ಮೊದಲು ಎಲ್ಲಾ ಪ್ರಕ್ರಿಯೆ ನಿಲ್ಲಿಸಲಾಗುತ್ತದೆ ಎಂದ ಮನೋಜ್ ಕುಮಾರ್ ಮೀನಾ, ಮುಖ್ಯ ಚುನಾವಣಾಧಿಕಾರಿ, ತಿಳಿಸಿದರು.

ಪುರುಷ ಮತದಾರರು	25449725
ಮಹಿಳಾ ಮತದಾರರು	25094326
ಇತರೆ ಮತದಾರರು	4502
ಒಟ್ಟು ಮತದಾರರು	50548553
ಗರಿಷ್ಠ ಕನಿಷ್ಠ ಮತದಾರರ ಕ್ಷೇತ್ರ	
ಬೆಂಗಳೂರು ನಗರ ಜಿಲ್ಲೆ	650532
ಶೃಂಗೇರಿ	166521

ಆಧಾರ:ಕನ್ನಡಪ್ರಭ, ದಿನಾಂಕ:06.01.2023.

7. ಸಮ್ಮೇಳನ ನಿರ್ಣಯ ಮುಖ್ಯಮಂತ್ರಿ ಸ್ಪಂದನೆ

ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿಯಲ್ಲಿ ವಿಜೃಂಭಣೆಯಿಂದ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಮುಖ ನಿರ್ಣಯಗಳ ಆಗ್ರಹಕ್ಕೆ ಸಮಾರೋಪ ಸಮಾರಂಭದಲ್ಲೇ ಮುಖ್ಯಮಂತ್ರಿಯವರು ಸ್ಪಂದಿಸುವುದರೊಂದಿಗೆ ನುಡಿಜಾತ್ರೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಕನ್ನಡ ಹೋರಾಟಗಾರರ ಮೇಲಿನ ಪ್ರಕರಣ ವಾಪಸ್ ಪಡೆಯುವುದು ಗಡಿ ಅಭಿವೃದ್ಧಿಗೆ ರೂ.100 ಕೋಟಿ ನೀಡುವುದು. ಶಾಸ್ತ್ರೀಯ ಸ್ಥಾನಮಾನ ಅನುಷ್ಠಾನ ಮಾರ್ಗದರ್ಶನಕ್ಕೆ ಹಿರಿಯ ಸಾಹಿತಿಗಳ ಸಮಿತಿ ರಚಿಸುವುದಾಗಿ ಮುಖ್ಯಮಂತ್ರಿ ಘೋಷಿಸಿದರು. ಇದಕ್ಕೂ ಮುನ್ನ ಸಮ್ಮೇಳನದ ವೇದಿಕೆಯಲ್ಲಿ ಈ ವಿಷಯವಾಗಿ ನಿರ್ಣಯ ಕೈಗೊಳ್ಳಲಾಗಿತ್ತು. ತಕ್ಷಣವೇ ಸ್ಪಂದಿಸಿದ ಮುಖ್ಯಮಂತ್ರಿ ಸರ್ಕಾರದ ಮುಂದಿನ ನಡೆಯನ್ನು ವೇದಿಕೆಯಲ್ಲೇ ಘೋಷಿಸಿ, ಕನ್ನಡ ಮನಸ್ಸುಗಳನ್ನು ಸಂತೈಸಿದರು. ಅಷ್ಟೇ ಅಲ್ಲದೇ ಕನ್ನಡ ಅಸ್ಮಿತೆ ಉಳಿಸಲು ಸರ್ಕಾರವು ಸದಾ ಬದ್ಧ ಎಂಬ ಸಂದೇಶವನ್ನು ರವಾನಿಸಿದರು. ಗಡಿನಾಡು ಮತ್ತು ಗಡಿಯಾಚೆ ಕನ್ನಡಿಗರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಹಲವು ಯೋಜನೆಗಳು ಜಾರಿಯಲ್ಲಿವೆ.

ಮಂಡ್ಯದಲ್ಲಿ ಮುಂದಿನ ಸಮ್ಮೇಳನ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯ ಸಕ್ಕರೆ ನಾಡು ಮಂಡ್ಯಕ್ಕೆ ದೊರೆತಿದೆ. ಹಾವೇರಿ ಪ್ರವಾಸಿ ಮಂದಿರದಲ್ಲಿ ನಡೆದ ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎರಡು ತಾಸಿನ ಚರ್ಚೆಯ ಬಳಿಕ ಗೌಪ್ಯ ಮತದಾನದ ಮೂಲಕ ಮಂಡ್ಯ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ: ಮಹೇಶ್ ಜೋಶಿ ಘೋಷಿಸಿದರು. ಬೆಂಗಳೂರು ಗ್ರಾಮಾಂತರ, ಮಂಡ್ಯ, ಚಿಕ್ಕಮಗಳೂರು, ಉತ್ತರ ಕನ್ನಡ, ರಾಮನಗರ, ಬಳ್ಳಾರಿ, ಬೆಳಗಾವಿ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಗಳು ಮುಂದಿನ ಅತಿಥ್ಯಕ್ಕೆ ಕೋರಿಕೆ ಸಲ್ಲಿಸಿದ್ದವು.

ನಿರ್ಣಯಗಳೇನು: ಸಮಾರೋಪಕ್ಕೆ ಮುನ್ನ ಮಹಾರಾಷ್ಟ್ರ ಗಡಿ ವಿವಾದ ಇತ್ಯರ್ಥಪಡಿಸುವುದು ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು. ಹಿಂದಿ ಭಾಷೆ ಹೇರಿಕೆಯನ್ನು ಖಂಡಿಸುವುದು. ವಿಶ್ವಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿ ಆಯೋಜಿಸುವುದು ಸೇರಿ ಆರು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಕಸಾಪ ಗೌರವ ಅಧ್ಯಕ್ಷ ಬಿ.ಎಂ. ಪಟೇಲಪಾಂಡು ಸರ್ವಾನುಮತದಿಂದ ಕೈಗೊಂಡ ನಿರ್ಣಯಗಳನ್ನು ಮಂಡಿಸಿದರು. ಬಹಿರಂಗ ಅಧಿವೇಶನ ಅನುಮೋದಿಸಿತು.

- ಸಂವಿಧಾನದ ಎಂಟನೇ ಪರಿಚ್ಛೇದದ ಅನ್ವಯ ಎಲ್ಲ ಪ್ರಾಂತೀಯ ಭಾಷೆಗಳನ್ನು ಸಮಾನ ಎಂದು ಗುರುತಿಸಿದ್ದು, ಈ ಪಟ್ಟಿಯಲ್ಲಿರುವ 22 ಭಾಷೆಗಳಲ್ಲಿರುವ ಕನ್ನಡ ಕರ್ನಾಟಕದ ಸಾರ್ವಭೌಮ ಭಾಷೆಯಾಗಿದೆ. ಇದರ ಮೇಲಿನ ಹಿಂದಿ ಅಥವಾ ಇನ್ನಾವುದೇ ಭಾಷೆಯ ಅಕ್ರಮಣವನ್ನು ಹೇರಿಕೆಯನ್ನು ಈ ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ.

- ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕ ಕೂಡಲೇ ಸುಗ್ರೀವಾಜ್ಞೆ ಮೂಲಕ ಕಾನೂನಿನ ರೂಪ ಪಡೆದು ಶಿಕ್ಷಣ ನ್ಯಾಯಾಂಗ ಆಡಳಿತದಲ್ಲಿ ಕನ್ನಡ ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು ಎಂದು ಬಲವಾದ ಆಗ್ರಹ.

- ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಕುರಿತ ಮಹಾಜನ ವರದಿಯು ನ್ಯಾಯಾಲಯದಲ್ಲಿ ಪ್ರಶ್ನಿತವಾಗಿ ಪ್ರಕರಣ ವಿಚಾರಣೆಯ ಹಂತದಲ್ಲಿ ಇರುವುದರಿಂದ ಅಂತಿಮ ತೀರ್ಪಿನ ಮಾರ್ಗದರ್ಶನದಂತೆ ಸೂಕ್ತ ಕ್ರಮವನ್ನು ವಿಳಂಬವಿಲ್ಲದೇ ಕೈಗೊಳ್ಳಬೇಕು.

- ವಿಶ್ವ ಕನ್ನಡ ಸಮ್ಮೇಳನವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಜರುಗಿಸಬೇಕು ನಿಯೋಜಿತ ಸಮ್ಮೇಳನದ ಸಂಬಂಧವಾಗಿ ಸರ್ಕಾರ ಜರುಗಿಸುವ ಸಭೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

ಆಧಾರ:ವಿಜಯವಾಣಿ, ದಿನಾಂಕ:09.01.2023.

8. ಶಾಸ್ತ್ರೀಯ ಸ್ಥಾನಮಾನಕ್ಕೆ ಸಮಿತಿ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದರೂ ಅನುದಾನ ಪಡೆದುಕೊಳ್ಳುವಲ್ಲಿ ಹಾಗೂ ಅನುಷ್ಠಾನ ಮಾಡುವ ವಿಚಾರದಲ್ಲಿ ಹಿಂದೆ ಬಿದ್ದಿದ್ದೇವೆ ಎಂಬ ಕೂಗು ಕೊನೆಗಾಣಿಸಲು ಸರ್ಕಾರ ಹಿರಿಯ ಸಾಹಿತಿಗಳ ಮಾರ್ಗದರ್ಶನ ಪಡೆಯಲು ತೀರ್ಮಾನಿಸಿದೆ.

ಹಾವೇರಿ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ವಿಷಯ ಪ್ರಸ್ತಾಪಿಸಿದ ಮುಖ್ಯಮಂತ್ರಿಯವರು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದೆ. ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಒಟ್ಟು ರೂ.13.30 ಕೋಟಿ ನೆರವು ಬಂದಿದೆ. ಮೈಸೂರು ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡು ಅಲ್ಲಿಯ ಕಟ್ಟಡವೊಂದರಲ್ಲಿ ಅಧ್ಯಯನ ಕೇಂದ್ರ ತೆರೆಯಲಾಗಿದೆ. ಶಾಸ್ತ್ರೀಯ ಭಾಷೆ ಕುರಿತ ಸಂಶೋಧನೆ, ಗ್ರಂಥಾಲಯ, ಚರ್ಚೆ, ಮಾರ್ಗದರ್ಶನ ಪಡೆಯಲು ಹಿರಿಯ ಸಾಹಿತಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು ಎಂದರು. ಸಮಸ್ಥಿತಿ ಸೂಚಿಸುವ ಕಾರ್ಯಗಳಿಗೆ ಎಷ್ಟು ಅನುದಾನ ಬೇಕಾದರೂ ಸರ್ಕಾರ ಒದಗಿಸಲಿದೆ ಎಂದು ಇದೇ ವೇಳೆ ವಾಗ್ದಾನ ಮಾಡಿದರು.

ಸಮ್ಮೇಳನಾಧ್ಯಕ್ಷರು ಸಹ ತಮ್ಮ ಭಾಷಣದಲ್ಲಿ ಈ ಬಗ್ಗೆ ದನಿ ಎತ್ತಿದ್ದರು. ಸಮಾರೋಪದಲ್ಲಿ ಮುಖ್ಯಮಂತ್ರಿಯವರು ಇದಕ್ಕೆ ಪ್ರತಿಕ್ರಿಯೆ ನೀಡಿ, ಪರಿಹಾರ ಕಂಡುಕೊಳ್ಳಲು ಸಾಹಿತಿಗಳ ನೆರವು ಪಡೆಯುವುದಾಗಿ ತಿಳಿಸಿದರು.

ಸಂವಿಧಾನ ಕವಚ: ಭಾರತ ವಿವಿಧತೆಯಲ್ಲಿ ಏಕತೆ ಹೊಂದಿರುವ ರಾಷ್ಟ್ರ. ಮಾತೃಭಾಷೆಗಳಿಗೆ ಸಂವಿಧಾನದ ಸಂರಕ್ಷಣೆ ಅಗತ್ಯ. ಈ ಹಿನ್ನೆಲೆಯಲ್ಲಿ ಕೇಂದ್ರದ ತಜ್ಞರೊಂದಿಗೆ ಚರ್ಚಿಸಿ, ಕನ್ನಡ ಭಾಷೆಗೆ ಸಂವಿಧಾನ ರಕ್ಷಣೆ ಕೊಡುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಕಾರ್ಯ ಅನುಸರಣೆ ವರದಿ ಕೊಡಿ: ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬರುವ ಆಗ್ರಹಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಮತ್ತು ಕಸಾಪ ಕಾರ್ಯೋನ್ಮುಖವಾಗಬೇಕು. ಒಂದು ಸಮಿತಿ ರಚಿಸಿ, ಕಾರ್ಯ ಅನುಸರಣೆ ವರದಿ (ಎಟಿಆರ್) ಪಡೆಯಬೇಕು. ಎಷ್ಟು ಬೇಡಿಕೆ ಈಡೇರಿವೆ ಎಂಬುದನ್ನು ಮುಂದಿನ ಸಮ್ಮೇಳನದಲ್ಲಿ ಮಂಡಿಸಬೇಕು. ಇದರಿಂದ ಕಸಾಪದ ಮೇಲೆ ವಿಶ್ವಾಸ ಹೆಚ್ಚಲಿದೆ ಎಂದು ವಿಶ್ರಾಂತ ಕುಲಪತಿ ಡಾ: ಬಿ.ಎ.ವಿವೇಕ ರೈ ಹೇಳಿದರು.

ಕಸಾಪ ನಡೆಸುವ ಸಾಹಿತ್ಯ ಸಮ್ಮೇಳನದಲ್ಲಿ ತುಳು, ಕೊಡವ, ಕೊಂಕಣಿ, ಬ್ಯಾರಿ ಭಾಷೆಗಳಿಗೂ ಅವಕಾಶ ಕಲ್ಪಿಸಬೇಕು. 100 ವರ್ಷ ಮೀರಿದ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ವಿವೇಕ ರೈ ಆಗ್ರಹಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ ಆಶಯ ನುಡಿಗಳನ್ನಾಡಿದರು. ಸಚಿವರಾದ ಬಿ.ಸಿ. ಪಾಟೀಲ, ಬಿ.ಸಿ. ನಾಗೇಶ, ಸಂಸದ ಶಿವಕುಮಾರ ಉದಾಸಿ, ಮಾಜಿ ಸಂಸದರಾದ ಪ್ರೋ.ಐ.ಜಿ. ಸನದಿ, ಮಂಜುನಾಥ್ ಕುನ್ನೂರ, ಶಾಸಕರಾದ ನೆಹರು ಓಲೇಕಾರ, ಅರುಣಕುಮಾರ ಪೂಜಾರ, ವಿರೂಪಾಕ್ಷಪ್ಪ ಬಳ್ಳಾರಿ ವಿಧಾನ ಪರಿಷತ್ ಸದಸ್ಯ ಆರ್ ಶಂಕರ್, ನಗರಸಭೆ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಮಾಜಿ ಶಾಸಕ ಶಿವರಾಜ ಸಜ್ಜನರ, ಡಿ.ಎಂ ಸಾಲಿ ಇತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಯೋಜನೆ ಘೋಷಣೆ ಶೀಘ್ರ: ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆ ಎಂದು ತೀರ್ಮಾನಿಸುವ ಸಂಬಂಧ ಕೇಂದ್ರ ಸರ್ಕಾರವು ಸಚಿವ ಸಂಪುಟದಲ್ಲಿ ಚರ್ಚಿಸಿ ಶೀಘ್ರವೇ ಪ್ರಕಟಿಸುವ ಸಾಧ್ಯತೆ ಇದೆ. ಇದರಿಂದ ರೂ.13 ಸಾವಿರ ಕೋಟಿ ಅನುದಾನ ಲಭಿಸಲಿದೆ ಎಂದು ಮುಖ್ಯಮಂತ್ರಿಯವರು ವಿಶ್ವಾಸ ವ್ಯಕ್ತಪಡಿಸಿದರು. ಸರಿಸುಮಾರು ಎರಡು ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಈ ಯೋಜನೆಯಿಂದ ನೀರು ಲಭಿಸಲಿದೆ. ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಿಸಿ ಬಚಾವತ್ ಆಯೋಗದ ತೀರ್ಪು ಬಂದು 11 ವರ್ಷ ಆಗಿದೆ. ಸುಪ್ರೀಂಕೋರ್ಟ್‌ನಲ್ಲಿ ವಾದ ನಡೆದಿದೆ. ಶೀಘ್ರವೇ ಅಂತಿಮ ಹಂತಕ್ಕೆ ಬಂದರೆ ಆಲಮಟ್ಟಿ ಜಲಾಶಯ ಎತ್ತರಿಸಲಾಗುವುದು ಎಂದು ಮಾಹಿತಿ ಹಂಚಿಕೊಂಡರು. ಕಳಸಾ–ಬಂಡೂರಿ ಯೋಜನೆಗೆ ಅನುಷ್ಠಾನಕ್ಕೆ ಕೇಂದ್ರದ ಒಪ್ಪಿಗೆ ಸಿಕ್ಕಿದೆ. ಶೀಘ್ರವೇ ಕಾರ್ಯಾರಂಭ ಮಾಡಲಾಗುವುದು. ವ್ಯಾಜವೆಲ್ಲ ಮುಗಿದು ಮೇಕೆದಾಟೂ ಯೋಜನೆಯೂ ಜಾರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ವಿರೋಧಿ ಸಾಹಿತಿಗಳೇ ಕಸಾಪಕ್ಕೆ ಬನ್ನಿ: ಎಲ್ಲರಲ್ಲೂ ಅಭಿಪ್ರಾಯ ಭೇದ ಇರುತ್ತದೆ. ಒಟ್ಟಾಗಿ ಕುಳಿತು ಬಗೆಹರಿಸಿಕೊಳ್ಳೋಣ. ಕನ್ನಡ ಒಂದು ನಾವೆಲ್ಲರೂ ಒಂದು ಕಸಾಪಕ್ಕೆ ಬಂದು ಬಿಡಿ, ಚರ್ಚಿಸೋಣ. ಚರ್ಚೆಯಿಂದ ನಿರ್ಣಯ ಆಗುತ್ತದೆ. ಟೀಕೆಯಿಂದ ಪ್ರಯೋಜನ ಪುನರುಜ್ಜೀವನ ಆಗುವುದಿಲ್ಲ ಎಂದು ಅಚ್ಚರಿಯ ಕರೆಯೊಂದನ್ನು ಸಮ್ಮೇಳನಾಧ್ಯಕ್ಷ ಡಾ: ದೊಡ್ಡರಂಗೇಗೌಡ ಅವರು ನೀಡಿದರು. ಸಾಹಿತ್ಯಕ್ಕಿರುವ ತಂತ್ರ ಶಕ್ತಿಯೂ ಮನುಷ್ಯತ್ವ ಬೆಸೆಯುವುದು. ಹೃದಯ–ಹೃದಯ ಸಮ್ಮಿಲನವಾಗಬೇಕು ಎಂದು ಬುದ್ಧಿವಾದ ಹೇಳಿದರು.

ಹಾವೇರಿ ಜಿಲ್ಲಾ ಕಸಾಪಕ್ಕೆ ರೂ.3 ಕೋಟಿ: ಹಾವೇರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣಾರ್ಥ ಹಾವೇರಿ ಜಿಲ್ಲಾ ಕಸಾಪ ಭವನ ನಿರ್ಮಿಸಿ ಜಾನಪದ ವಿವಿಯೊಂದಿಗೆ ಸಂಶೋಧನಾ ಕೇಂದ್ರ ಸ್ಥಾಪಿಸಲು ರೂ.3 ಕೋಟಿಗಳನ್ನು ಸರ್ಕಾರ ನೀಡಲಿದೆ ಎಂದು ಮುಖ್ಯಮಂತ್ರಿಯವರು ಪ್ರಕಟಿಸಿದರು.

ಸ್ಥಳೀಯ ಭಾಷೆಗಳಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ದೊರೆಯಬೇಕು ಎಂದು ಚರ್ಚೆಗಳು ನಡೆದಾಗ ಕೆಲವರು ಸಂಶೋಧನೆ ಮತ್ತು ಅಭಿವೃದ್ಧಿಗೆ ವ್ಯತ್ಯಾಸವಾಗಲಿದೆ ಎಂದಿದ್ದರೂ, ಹೊಸ ಶಿಕ್ಷಣ ನೀತಿಯಡಿ ಸ್ಥಳೀಯ ಭಾಷೆಗೆ ಆದ್ಯತೆ ನೀಡಲಾಗಿದೆ.

ಪ್ರಹ್ಲಾದ ಜೋಶಿ, ಕೇಂದ್ರ ಸಚಿವ.

ರಾಜಕೀಯದಲ್ಲಿ ಜಾತಿ–ಧರ್ಮ ಭ್ರಷ್ಟಾಚಾರ ಬೆರೆತು ಹೋಗಿದೆ. ಸಾಹಿತಿಗಳು ರಾಜಕಾರಣಿಗಳಿಗೆ ಬುದ್ಧಿ ಹೇಳಿ ತಿದ್ದುವ ಕಾರ್ಯ ಮಾಡಬೇಕು. ಆದರೆ ವಿಧಾನಸೌಧವನ್ನು ಮೀರಿಸುವ ರೀತಿಯಲ್ಲಿ ಸಾಹಿತ್ಯ ಸಂಘಟನೆಗಳ ಚುನಾವಣೆಗಳು ನಡೆಯುತ್ತಿವೆ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ.

ಸಾಹಿತಿಗಳು ನಮ್ಮ ನಾಡಿನ ಹಿರಿಮೆಯನ್ನು ಸಾಹಿತ್ಯದ ಮೂಲಕ ಜಗತ್ತಿಗೆ ಸಾರಿದ್ದಾರೆ. ಸಾಹಿತ್ಯ ಮನುಷ್ಯರನ್ನು ಬೆಸೆಯಬೇಕು. ಭಾರತದ ಸಂಸ್ಕೃತಿ, ಪರಂಪರೆಗೆ ಧಕ್ಕೆ ತರುವವರಿಗೆ ಸಾಹಿತ್ಯ ಕ್ಷೇತ್ರ ಎಚ್ಚರಿಕೆ ನೀಡಬೇಕು.

ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಸಭಾಧ್ಯಕ್ಷರು.

ಆಧಾರ:ವಿಜಯವಾಣಿ, ದಿನಾಂಕ:09.01.2023.

9. ಜನರಿಗೆ ನೇರ ತಲುಪುವ ಯೋಜನೆಗಳ ಪರಾಮರ್ಶೆ

ಎಲೆಕ್ಷನ್ ಬಜೆಟ್ ತಯಾರಿಗೆ ಮುಖ್ಯಮಂತ್ರಿಯವರು ಉತ್ಸುಕವಾಗಿದ್ದಾರೆ. ಈ ಮಧ್ಯೆ ಹಾಲಿ ಹಣಕಾಸು ವರ್ಷದ ಬಜೆಟ್‌ನ ಘೋಷಣೆಗಳ ಉತ್ಸುಕವಾಗಿದಾರೆ. ಈ ಮಧ್ಯೆ ಹಣಕಾಸು ವರ್ಷದ ಬಜೆಟ್‌ನ ಘೋಷಣೆಗಳ ಕಡೆಗೂ ಗಮನಹರಿಸಿದ್ದಾರೆ, ದುಡಿಯುವ ವರ್ಗಗಳು ಸೇರಿ ಯೋಜನೆಗಳ ಫಲ ನೇರವಾಗಿ ಜನರಿಗೆ ತಲುಪಿಸುವ ಜವಾಬ್ದಾರಿ ಹೊತ್ತ ಇಲಾಖೆಗಳ ಕಾರ್ಯವಿಧಾನವನ್ನು ಅಳೆದು ತೂಗಿದರು.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಮುಖ್ಯಮಂತ್ರಿಯವರು ಜನ ಸಾಮಾನ್ಯರಿಗೆ ಹತ್ತಿರವಾಗಿರುವ ಪ್ರಮುಖ ಐದು ಇಲಾಖೆಗಳ ಪ್ರಗತಿ ಪರಿಶೀಲಿಸಿದರು. ಜೊತೆಗೆ ಯೋಜನೆಗಳ ಲಾಭವನ್ನು ನೇರವಾಗಿ ತಲುಪಿಸುವಲ್ಲಿ ಎಲ್ಲ ಹಂತದ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ತಾಕೀತು ಮಾಡಿದರು ಎಂದು ಮೂಲಗಳು ತಿಳಿಸಿವೆ. ಕಾಲಮಿತಿಯೊಳಗೆ ಕಾರ್ಯಕ್ರಮ ಅನುಷ್ಠಾನಗೊಳಿಸಿದರ ಫಲಾನುಭವಿಗಳಿಗೆ ಸಕಾಲಕ್ಕೆ ಲಭಿಸಲಿದ್ದು, ಇದರಿಂದ ಆಡಳಿತ ಇಲಾಖೆಗಳಿಗೂ ತೃಪ್ತಿ ಹಾಗೂ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಎಂದು ಮುಖ್ಯಮಂತ್ರಿಯವರು ಕಿವಿಮಾತು ಹೇಳಿದ

ತಡೆಗೆ ಕ್ರಮ: ಮಕ್ಕಳಲ್ಲಿ ಅಪೌಷ್ಟಿಕತೆ, ಬಾಲ್ಯ ವಿವಾಹ, ತಾಯಿ–ಶಿಶು ಮರಣ ಇತ್ಯಾದಿ ಸಮಸ್ಯೆಗಳು ಕಲ್ಯಾಣ ಕರ್ನಾಟಕ ಮಾತ್ರವಲ್ಲ. ಹಲವಾರು ಜಿಲ್ಲೆಗಳನ್ನು ಬಾಧಿಸುತ್ತಿವೆ. ಪೌಷ್ಟಿಕತೆ ಹೆಚ್ಚಳ, ಬಾಲ್ಯ ವಿವಾಹ ತಡೆಗೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೈಗೊಂಡ ಕ್ರಮಗಳನ್ನು ಇನ್ನಷ್ಟು ಚುರುಕುಗೊಳಿಸಿ, ಸಮಸ್ಯಾತ್ಮಕ ಜಿಲ್ಲೆಗಳಿಗೂ ವಿಸ್ತರಿಸಬೇಕು ಎಂದು ಸೂಚಿಸಿದರು. ಆರ್ಥಿಕ ಹಾಗೂ ಭೌತಿಕ ಪ್ರಗತಿಯ ಕುರಿತು ಕಾಗದದ ಮೇಲಿನ ಅಂಕಿ–ಅಂಶಗಳು ವಾಸ್ತವಿಕವಾಗಿ ಕಾರ್ಯರೂಪಕ್ಕೆ ಬಂದು, ಉದ್ದೇಶಿತ ಫಲಾನುಭವಿಗಳಿಗೆ ತಲುಪಿದನ್ನು ಖಾತರಿ ಮಾಡಿಕೊಳ್ಳುವುದು ಉನ್ನತಾಧಿಕಾರಿಗಳ ಜವಾಬ್ದಾರಿ ಎಂದು ಮುಖ್ಯಮಂತ್ರಿಯವರು ಸಲಹೆ ನೀಡಿದರು ಎನ್ನಲಾಗಿದೆ.

ಪರಾಮರ್ಶಿಸಿದ ಇಲಾಖೆಗಳು: ಮುಂಗಡ ಪತ್ರದಲ್ಲಿ ಘೋಷಿಸಿದ ಯೋಜನೆಗಳ ಅನುಷ್ಠಾನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಿಂದುಳಿದ ವರ್ಗಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ, ವಾಣಿಜ್ಯ ಮತ್ತು ಕೈಗಾರಿಕೆ (ಎಂಎಸ್‌ಎಂಇ) ಇಲಾಖೆಗಳ ಕಾರ್ಯವೈಖರಿಯನ್ನು ಮುಖ್ಯಮಂತ್ರಿಯವರು ಪರಾಮರ್ಶಿಸಿದರು.

ಆಧಾರ:ವಿಜಯವಾಣಿ, ದಿನಾಂಕ:11.01.2023.

10. ರೂ.3 ಲಕ್ಷ ಕೋಟಿ ಗಡಿ ದಾಟಲಿದೆ ರಾಜ್ಯ ಬಜೆಟ್

ಮುಂದಿನ ಫೆಬ್ರವರಿಯಲ್ಲಿ ಮುಖ್ಯಮಂತ್ರಿಯುವರು 2023–24ನೇ ಸಾಲಿನ ಬಜೆಟ್ ಮಂಡಿಸಲಿದ್ದು, ಕೆಲವೇ ತಿಂಗಳಲ್ಲಿ ವಿಧಾನಸಭೆ ಚುನಾವಣೆ ಬರಲಿರುವುದರಿಂದ ಈ ಬಾರಿಯ ಬಜೆಟ್ ಗಾತ್ರ ರೂ.3 ಲಕ್ಷ ಕೋಟಿ ದಾಟುವ ಸಾಧ್ಯತೆ ಇದೆ.

ಬಜೆಟ್ ಮಂಡನೆಗೆ ಹೆಚ್ಚು ಸಮಯ ಇಲ್ಲದ ಕಾರಣ ಮುಖ್ಯಮಂತ್ರಿಯವರು ಸಿದ್ಧತೆಗಳನ್ನು ಆರಂಭಿಸಲು ನಿರ್ಧರಿಸಿದ್ದು, ಮೊದಲ ಹಂತವಾಗಿ ಹಣಕಾಸು ಇಲಾಖೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಿದ್ದಾರೆ. ಈ ವೇಳೆ ಇದುವರೆಗೆ ಆಗಿರುವ ತೆರಿಗೆ ಸಂಗ್ರಹದ ಪ್ರಗತಿ ಮತ್ತು ಮುಂದಿನ ಬಜೆಟ್ ಕುರಿತಂತೆ ಪ್ರಾಥಮಿಕ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

2022–2023ನೇ ಸಾಲಿನ ಸರ್ಕಾರ 2,65,720 ಲಕ್ಷ ಕೋಟಿ ವೆಚ್ಚದ ಬಜೆಟ್ ಮಂಡಿಸಿತ್ತು. ಇದು ರೂ.3 ಲಕ್ಷ ಕೋಟಿ ದಾಟಬೇಕಾದರೆ ಈ ಬಾರಿ ರೂ.34,280 ಕೋಟಿ ಹೆಚ್ಚುವರಿ ಮೊತ್ತ ಬೇಕಾಗುತ್ತದೆ. ಚುನಾವಣಾ ವರ್ಷವಾದ 2018ರಲ್ಲಿ ಬಜೆಟ್ ಮೊತ್ತ ಹಿಂದಿನ ವರ್ಷಕ್ಕಿಂತ ರೂ.44,702

ಕೋಟಿ ಹೆಚ್ಚಿದ್ದನ್ನು ಲೆಕ್ಕ ಹಾಕಿದರೆ ಈ ಬಾರಿ ಬಜೆಟ್ ಗಾತ್ರ ರೂ.3 ಲಕ್ಷ ಕೋಟಿ ದಾಟುವುದು ನಿಶ್ಚಿತ ಎಂದು ಹೇಳಲಾಗುತ್ತಿದೆ.

ಕೋವಿಡ್‌ನಿಂದಾಗಿ ಕುಸಿದಿದ್ದ ಆರ್ಥಿಕತೆ ನಿರೀಕ್ಷೆಗಿಂತ ವೇಗವಾಗಿ ಚೇತರಿಸಿಕೊಳ್ಳುತ್ತಿದೆ. ಹೀಗಾಗಿ 2022–23ನೇ ಸಾಲಿನಲ್ಲಿ ಬಜೆಟ್ ನಿರೀಕ್ಷೆಗಿಂತ ಹೆಚ್ಚಿನ ರಾಜಸ್ವ ಸಂಗ್ರಹವಾಗುವ ಸಾಧ್ಯತೆ ಇದೆ. ಇದಲ್ಲದೆ ಸಾಲದ ಪ್ರಮಾಣವೂ ನಿರೀಕ್ಷೆಯ ರೂ.72 ಸಾವಿರ ಕೋಟಿಗಿಂತ ಕಡಿಮೆಯಾಗಲಿದೆ. ಅದರ ಆಧಾರದ ಮೇಲೆ ಬಜೆಟ್ ಮೊತ್ತವನ್ನು ಹೆಚ್ಚಿಸಲಾಗುವುದು ಎಂದು ಆರ್ಥಿಕ ಇಲಾಖೆ ಮೂಲಗಳು ತಿಳಿಸಿವೆ.

ಮತ್ತೊಂದೆಡೆ ಏಪ್ರಿಲ್–ಮೇ ತಿಂಗಳಲ್ಲಿ ರಾಜ್ಯ ವಿಧಾನಸಭೆ ಚುನಾವಣೆಯೂ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರ ಜನಪರಕ್ಕಿಂತ ಜನಪ್ರಿಯ ಬಜೆಟ್ ಮಂಡಿಸಬೇಕಾಗುತ್ತದೆ.ಅದಕ್ಕಾಗಿ ಹಲವು ಹೊಸ ಕಾರ್ಯಕ್ರಮಗಳನ್ನು ಪ್ರಕಟಿಸಬೇಕಾಗುತ್ತದೆ. ಅದರಲ್ಲೂ ಮುಖ್ಯವಾಗಿ ರಾಜ್ಯದ ನೀರಾವರಿ ಯೋಜನೆಗಳು ಶಿಕ್ಷಣ ಆರೋಪ ವಿವಿಧವಾಗಿದೆ.

ವರ್ಷದಿಂದ ವರ್ಷ ಹಿಗ್ಗಿದೆ: ಇನ್ನು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಬಜೆಟ್ ಗಾತ್ರವನ್ನು ಗಮನಿಸಿದಾಗ ಮತ್ತು ಚುನಾವಣೆ ಇರುವುದರಿಂದ ಈ ಬಾರಿಯ ಬಜೆಟ್ ಗಾತ್ರ ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗಬಹುದು ಎಂದು ಹೇಳಲಾಗುತ್ತಿದೆ. 2020–21ರ ಬಜೆಟ್ ಗಾತ್ರ ರೂ. 2,37,893 ಲಕ್ಷ ಕೋಟಿ ಇದ್ದರೆ, ಕೋವಿಡ್ ಲಾಕ್‌ಡೌನ್, ಆರ್ಥಿಕ ಬಿಕ್ಕಟ್ಟಿನ ಮಧ್ಯೆಯೂ 2021–22ರಲ್ಲಿ ಅದು ರೂ.2,46,207 ಲಕ್ಷ ಕೋಟಿಗೆ ಹೆಚ್ಚಾಗಿತ್ತು. ನಂತರದಲ್ಲಿ ಸ್ವಲ್ಪ ಮಟ್ಟಿನ ಆರ್ಥಿಕ ಸುಧಾರಣೆ ಕಂಡು ಬಂದಿದ್ದರಿಂದ 2022–23ರ ಬಜೆಟ್ ಗಾತ್ರ ರೂ.2,65,720 ಲಕ್ಷ ಕೋಟಿಗೆ ಹೆಚ್ಚಿತ್ತು. ಅಂದರೆ, ರೂ.19,513 ಕೋಟಿ ಏರಿಕೆಯಾಗಿತ್ತು. ಈ ಬಾರಿ ಚುನಾವಣಾ ಬಜೆಟ್ ಆಗಿರುವುದರಿಂದ ಮತ್ತು ಆದಾಯ ಸಂಗ್ರಹ ಹೆಚ್ಚಾಗುತ್ತಿರುವುದರಿಂದ ಪ್ರಮುಖ ಇಲಾಖೆಗಳು ಈಗಾಗಲೇ ಕಳೆದ ವರ್ಷಕ್ಕಿಂತ 3 ರಿಂದ 18 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಮೊತ್ತದ ಯೋಜನೆಗಳಿಗೆ ಪ್ರಸ್ತಾವನೆಗಳನ್ನು ಸಿದ್ಧಪಡಿಸುತ್ತಿವೆ. ಬಜೆಟ್ ಗಾತ್ರ ಕಳೆದ ಬಾರಿಗಿಂತ 35 ರಿಂದ 40 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ರಾಜಸ್ವ ಸ್ವೀಕೃತಿ ಶೇ.22 ಹೆಚ್ಚಳ: ಕೋವಿಡ್ ಕಾರಣದಿಂದ ಕುಸಿತವಾಗಿದ್ದ ಆರ್ಥಿಕತೆ ವೇಗವಾಗಿ ಚೇತರಿಸಿಕೊಳ್ಳುತ್ತಿದ್ದು, ಇದಕ್ಕೆ ರಾಜಸ್ವ ಸ್ವೀಕೃತಿಯಲ್ಲಿ ಆಗಿರುವ ಹೆಚ್ಚಳವೇ ಉದಾಹರಣೆ. ಒಟ್ಟಾರೆ ರಾಜಸ್ವ ಸ್ವೀಕೃತಿ ಮತ್ತು ಸ್ವಂತ ತೆರಿಗೆಯಲ್ಲಿ ಡಿಸೆಂಬರ್ ಅಂತ್ಯಕ್ಕೆ ಬಜೆಟ್ ಗುರಿಯು ಶೇ.80ಕ್ಕಿಂತ ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಯಲ್ಲಿ ಶೇ.22 ಮತ್ತು ಸ್ವಂತ ತೆರಿಗೆಯಲ್ಲಿ ಶೇ.24ಕ್ಕಿಂತ ಪ್ರಗತಿಯಾಗಿದೆ. ಇನ್ನೂ ಮೂರು ತಿಂಗಳು ಬಾಕಿ ಇದ್ದು, ಗುರಿ ಮೀರಿದ ರಾಜಸ್ವ ಸಂಗ್ರಹ ನಿರೀಕ್ಷಿಸಲಾಗುತ್ತಿದೆ.

ಕಳೆದ ಬಾರಿ ರೂ.44,702 ಕೋಟಿ ಹೆಚ್ಚಾಗಿತ್ತು, ಮತ್ತೆ ಅಧಿಕಾರಕ್ಕೆ ಬರಲೇಬೇಕು ಎಂಬ ಕಾರಣಕ್ಕೆ ಚುನಾವಣಾ ವರ್ಷದಲ್ಲಿ ಆಡಳಿತ ಪಕ್ಷ ಹಲವು ಹೊಸ ಘೋಷಣೆಗಳೊಂದಿಗೆ ಬಜೆಟ್ ಮೊತ್ತವನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸುತ್ತದೆ. ಇದರ ಆಧಾರದ ಮೇಲೆ ಈ ಬಾರಿ ಬಜೆಟ್ ಗಾತ್ರ ರೂ.3 ಲಕ್ಷ ಕೋಟಿ ಮೀರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

- 2012–13ರಲ್ಲಿ 1,02,742 ಕೋಟಿ ರೂಪಾಯಿ.
- 2013–14ರಲ್ಲಿ 1,17,005 ಕೋಟಿ ರೂಪಾಯಿ (14,253 ಕೋಟಿ ಹೆಚ್ಚಳ)
- 2016–17ರಲ್ಲಿ 1,64,479 ಕೋಟಿ ರೂಪಾಯಿ

ಆಧಾರ:ವಿಶ್ವವಾಣಿ, ದಿನಾಂಕ:11.01.2023.

11. ರನ್‌ವೇ ಸಿದ್ಧ, ಟೇಕಾಫ್‌ಗೆ ಯುವಜನತೆ ಸಿದ್ಧರಾಗಲಿ

ದೇಶದಲ್ಲಿ ಈಗಿರುವುದು ವಿಶೇಷ ಪೀಳಿಗೆ ಹೀಗಾಗಿ ಜಗತ್ತಿನ ಉದ್ಯಮಗಳು ಭಾರತದತ್ತ ನೋಡುತ್ತಿವೆ. ಆರ್ಥಿಕ ಸುಧಾರಣೆ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಕಳೆದ 9 ವರ್ಷಗಳಲ್ಲಿ ಸಾಕಷ್ಟು ಕೆಲಸಗಳಾಗಿವೆ. ಇದೀಗ ರನ್‌ವೇ ಸಿದ್ದವಿದ್ದು, ಅದನ್ನು ಬಳಸಿಕೊಂಡು ಯುವ ಸಮುದಾಯ ಅಭಿವೃದ್ಧಿಯ ದಿಗಂತದ ಕಡೆಗೆ ಹಾರಲು ಟೇಕಾಫ್ ಆಗಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ವಿಕಸಿತ ಯುವ–ವಿಕಸಿತ ಭಾರತ' ಎಂಬ ಘೋಷವಾಕ್ಯದೊಂದಿಗೆ ಹುಬ್ಬಳ್ಳಿ–ಧಾರವಾಡದಲ್ಲಿ ಜನವರಿ 16ರ ವರೆಗೆ ನಡೆಯಲಿರುವ 26ನೇ ರಾಷ್ಟ್ರೀಯ ಯುವಜನೋತ್ಸವವನ್ನು ಕೇಶ್ವಾಪುರದ ರೈಲ್ವೆ ಮೈದಾನದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಯುವಶಕ್ತಿಯ ಮುಂದೆ ಹತ್ತಾರು ಅವಕಾಶಗಳಿವೆ. ಆಯ್ಕೆ ಅವರ ಮುಂದಿದೆ. ಕ್ಷಿಪ್ರವಾಗಿ ಬದಲಾಗುತ್ತಿರುವ ಈ ಸಂದರ್ಭದಲ್ಲಿ ಯುವಕರು ವೈಯಕ್ತಿಕ ಸಾಧನೆಯ ಜೊತೆಗೆ ಸಾಂಸ್ಥಿಕ ಹಾಗೂ ಅನ್ವೇಷಣೆ ಮೂಲಕ ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಡಿಜಿಟಲ್ ಇಂಡಿಯಾದ ಪ್ರಸ್ತುತ ಕಾಲಘಟ್ಟದಲ್ಲಿ ಕೌಶಲ್ಯ ಭರಿತ ಯುವ ಜನತೆಗೆ ಅವಕಾಶಗಳ ಬಾಗಿಲು ತೆರೆದಿವೆ. "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಸ್ವಾಮಿ ವಿವೇಶಕಾನಂದರ ಮಂತ್ರವನ್ನು ಮನದಲ್ಲಿಟ್ಟುಕೊಂಡು ಅಭಿವೃದ್ಧಿಯ ದಿಗಂತದ ಕಡೆಗೆ ದೇಶವನ್ನು ಕೊಂಡೊಯ್ಯಲು ಯುವ ಸಮುದಾಯ ಕೈಜೋಡಿಸಬೇಕು ಎಂದು ಹೇಳಿದರು.

ಮೂರುಸಾವಿರ ಮಠ, ಸಿದ್ಧರೂಢ ಮಠ ಇಂತಹ ಅನೇಕ ಮಠಗಳ ಕ್ಷೇತ್ರಗಳಿಗೆ ನನ್ನ ನಮಸ್ಕಾರಗಳು. ಚೆನ್ನಮ್ಮನ ನಾಡು, ರಾಯಣ್ಣನ ಬೀಡಾದ ಪುಣ್ಯದ ನಾಡಿಗೆ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲಿ ಮಾತು ಆರಂಭಿಸಿದ ಪ್ರಧಾನಿ ನರೇಂದ್ರ ಮೋದಿ, "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಸ್ವಾಮಿ ವಿವೇಕಾನಂದರ ಮಂತ್ರವನ್ನು ಕನ್ನಡದಲ್ಲಿ ಉಚ್ಚರಿಸಿದರು. ದೇಶದ ಪ್ರಗತಿಯಲ್ಲಿ ಯುವಕರ ಪಾತ್ರವನ್ನು ಮನದಟ್ಟು ಮಾಡಿಕೊಟ್ಟರು.

ರಾಷ್ಟ್ರಶಕ್ತಿ ಮುನ್ನಡೆಸುವ ಸ್ತ್ರೀಶಕ್ತಿ: ಸ್ತ್ರೀಶಕ್ತಿಯು ರಾಷ್ಟ್ರಶಕ್ತಿಯನ್ನು ಮುನ್ನಡೆಸುವಲ್ಲಿ ಸಫಲವಾಗಿದೆ. ಫ್ಲೈಟರ್ ಜೆಟ್ ಹಾರಿಸುತ್ತಿರುವ ಮಹಿಳೆಯರು ವಿಜ್ಞಾನ, ತಂತ್ರಜ್ಞಾನ, ಕ್ರೀಡೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನುಗ್ಗುತ್ತಿದ್ದಾರೆ. ಯುವಜನತೆ ವರ್ತಮಾನದಲ್ಲಿದ್ದುಕೊಂಡು ಭವಿಷ್ಯದ ಕಡೆ ಸಕಾರಾತ್ಮಕವಾಗಿ ಯೋಚಿಸುವ ಮೂಲಕ ಹೊಸ ಹೊಸ ಅವಿಷ್ಕಾರಗಳತ್ತ ಚಿತ್ತ ಹರಿಸಬೇಕು. ಹತ್ತು ವರ್ಷಗಳಲ್ಲಿ ಇಲ್ಲದ ಎಷ್ಟೋ ವಿಷಯಗಳಿಂದ ನಾವು ಈಗ ಚಕಿತರಾಗಿದ್ದೇವೆ. ಈಗ ಸೈಬರ್ ಸೆಕ್ಯೂರಿಟಿ, ಡೇಟಾ ಸೈನ್ಸ್, ದೇಶದ ಸುರಕ್ಷತೆ ಸೇರಿ ಎಲ್ಲದರ ಸ್ವರೂಪ ಬದಲಾಗಿದೆ. ಯುವಸಮುದಾಯವು ತಂತ್ರಜ್ಞಾನದ ಈ ಬದಲಾವಣೆಯಿಂದ ಪಾಠ ಕಲಿತು ಹೊಸ ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಸ್ವಚ್ಛ ಭಾರತ, ಡಿಜಿಟಲ್ ಇಂಡಿಯಾ, ಕೋವಿಡ್ ಲಸಿಕೆ ಹೀಗೆ ಪ್ರತಿಯೊಂದು ಮಜಲುಗಳಲ್ಲಿ ಕೆಲವರು ಅಪಹಾಸ್ಯ ಮಾಡಿದ್ದರು. ಆದರೆ ಭಾರತದ ಈ ಸಾಧನೆಯ ಬಗ್ಗೆ ಜಗತ್ತಿನಲ್ಲಿ ಈಗ ಚರ್ಚೆ ನಡೆದಿದೆ. ಯುವಶಕ್ತಿಯನ್ನು ಕಟ್ಟಿಕೊಂಡು ದೇಶದಲ್ಲಿ ವಿಭಿನ್ನ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ದೇಶದ ಬೇರೆ ಬೇರೆ ಭೌಗೋಳಿಕ ಪ್ರದೇಶಗಳ ಯುವಕರ ತಂಡಗಳು ಬಂದಿವೆ. ಇಲ್ಲಿನ ಸ್ಪರ್ಧೆಯಲ್ಲಿ ಯಾರೇ ಗೆದ್ದರೂ ಅಂತಿಮವಾಗಿ ಭಾರತವೇ ಗೆಲ್ಲುತ್ತದೆ. ಆದ್ದರಿಂದ ಯುವಜನೋತ್ಸವದಲ್ಲಿ ಭಾಗವಹಿಸುವ ತಂಡಗಳು ವಿಕಸಿತ ಭಾರತ ಸಮರ್ಥ್ಯ ಭಾರತವನ್ನು ಗಮನದಲ್ಲಿಟ್ಟುಕೊಂಡು ದೇಶ ಮುನ್ನಡೆಸಬೇಕು ಎಂದು ಕರೆ ನೀಡಿದರು.

ಸಾಧಕ ಕನ್ನಡಿಗರನ್ನು ಸ್ಮರಿಸಿದ ಮೋದಿ:

- ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗರು, ಭೀಮಸೇನ್ ಜೋಶಿ, ಗಂಗೂಬಾಯಿ ಹಾನಗಲ್ ಸೇರಿದಂತೆ ಸಂಗೀತ ಲೋಕದ ದಿಗ್ಗಜರು, ಸ್ವಾಮೀಜಿಯವರನ್ನು ಸ್ಮರಿಸಿದ ಪ್ರಧಾನಿ ಮೋದಿ.
- ಸ್ವಾಮಿ ವಿವೇಕಾನಂದ ಕರ್ನಾಟಕದ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದರು. ವಿವೇಕಾನಂದರು ಶಿಕಾಗೋ ಸಮ್ಮೇಳನಕ್ಕೆ ಹೋಗಲು ಮೈಸೂರು ಮಹಾರಾಜರು ನೆರವು ನೀಡಿದ್ದರು.
- ಚೆನ್ನಮ್ಮ ಎಂತಹ ಸಂಕಷ್ಟದ ಕಾಲದಲ್ಲೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸಂಗೊಳ್ಳಿ ರಾಯಣ್ಣನ ಶೌರ್ಯವು ಬ್ರಿಟಿಷ್‌ರ ಎದೆ ನಡುಗಿಸಿತ್ತು. ಇಂತಹ ಮಹನೀಯರ ದೇಶಭಕ್ತಿ ನಮಗೆ ಆದರ್ಶವಾಗಬೇಕಿದೆ.
- ಸರ್.ಎಂ.ವಿಶ್ವೇಶ್ವರಯ್ಯ ತಮ್ಮ ಪ್ರತಿಭೆಯ ಮೂಲಕ ದೇಶ ಕಟ್ಟಿದರು. ಯುವ ಸಮುದಾಯವು ಹೇಗೆ ಎಲ್ಲೆಡೆ ಪಸರಿಸಿದೆ ಎಂಬುದಕ್ಕೆ ಅವರು ಉದಾಹರಣೆಯಾಗಿದ್ದಾರೆ.

ಭರ್ಜರಿ ರೋಡ್‌ಶೋ: ಸಂಜೆ 4.25 ಸುಮಾರಿಗೆ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿ ಮೋದಿ ಪ್ರಮುಖ ರಸ್ತೆಗಳಲ್ಲಿ ಸುಮಾರು ಒಂದು ಗಂಟೆ ಕಾಲ ರೋಡ್‌ಶೋ ನಡೆಸಿ ಜನರತ್ತ ಕೈಬೀಸಿದರು. ದಾರಿಯುದ್ದಕ್ಕೂ ನೆರೆದಿದ್ದ ಸಹಸ್ರಾರು ಮಂದಿ ಪ್ರಧಾನಿ ಮತ್ತು ಅವರ ಕಾರಿನ ಮೇಲೆ ಹೂವಿನ ಸುರಿಮಳೆಗೈದರು. ದಾರಿ ಮಧ್ಯೆ 2–3 ಕಡೆಗಳಲ್ಲಿ ಕಾರಿನಿಂದ ಇಳಿದ ನರೇಂದ್ರ ಮೋದಿ ಜನರ ಬಳಿ ತೆರಳಿ ಮಾತನಾಡಿದರು. ರೋಡ್‌ಶೋನಲ್ಲಿ ಪ್ರಧಾನಿಯವರನ್ನು ನೋಡಲು ಇಕ್ಕೆಲಗಳಲ್ಲಿ ಜನಸಾಗರವೇ ನೆರೆದಿತ್ತು. ರಸ್ತೆ ಬದಿ ಮಾತ್ರವಲ್ಲದೆ, ಕಟ್ಟಡಗಳ ಮೇಲೆ ನಿಂತು ರೋಡ್‌ಶೋ ವೀಕ್ಷಿಸಿದರು. ನೆಚ್ಚಿನ ಪ್ರಧಾನಿಯನ್ನು ಕಂಡ ಜನ ಮೋದಿ ಮೋದಿ.... ಜೈ ಜೈ ಮೋದಿ... ಎಂಬ ಘೋಷಣೆ ಕೂಗಿದರು. ಭಾರತ್ ಮಾತಾಕಿ ಜೈ ಎಂದು ಕೂಗಿದರು.

ಭದ್ರತಾ ಲೋಪ: ಪ್ರಧಾನಿ ರೋಡ್‌ಶೋ ವೇಳೆ ಭದ್ರತಾ ಲೋಪವಾಯಿತು. ಬಿಗಿ ಭದ್ರತೆ ನಡುವೆಯೂ ಬಾಲಕನೊಬ್ಬ ಬ್ಯಾರಿಕೇಡ್ ಹಾರಿ ಹಾರದೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಾಕಲು ಓಡಿಬಂದ. ಕೂಡಲೇ ಪ್ರಧಾನಿ ಭದ್ರತಾ ಸಿಬ್ಬಂದಿ ಆತನನ್ನು ದೂರ ತಳ್ಳಿದರು. ಅಷ್ಟರಲ್ಲಿ ಆತನ ಕೈಯಲಿದ್ದ ಹಾರವನ್ನು ಪ್ರಧಾನಿ ತಮ್ಮ ಕೈಗೆ ತೆಗೆದುಕೊಂಡಿದ್ದರು. ಬಳಿಕ ಅಲ್ಲೇ ಇದ್ದ ಪೊಲೀಸರು ಬಾಲಕನನ್ನು ಎಳೆದೊಯ್ದರು. ಭದ್ರತಾ ಲೋಪದ ಬಗ್ಗೆ ಆಕ್ರೋಶ ವ್ಯಕ್ತವಾಗಿದೆ.

ಆಧಾರ: ವಿಶ್ವವಾಣಿ, ದಿನಾಂಕ:13.01.2023

12. ಒಂದು ರಾಷ್ಟ್ರ ಒಂದು ಪೊಲೀಸ್ ಸಮವಸ್ತ್ರ

ಕೇಂದ್ರ ಗೃಹ ಸಚಿವಾಲಯದ 'ಒಂದು ರಾಷ್ಟ್ರ ಒಂದು ಪೊಲೀಸ್ ಸಮವಸ್ತ್ರ' ಜಾರಿಗೆ ರಾಜ್ಯ ಗೃಹ ಇಲಾಖೆ ತಾತ್ವಿಕ ಒಪ್ಪಿಗೆ ಸೂಚಿಸಿದೆ.

2022ರ ಅಕ್ಟೋಬರ್‌ನಲ್ಲಿ ಕೇಂದ್ರ ಸರ್ಕಾರ, ಒಂದು ರಾಷ್ಟ್ರ ಒಂದು ಪೊಲೀಸ್ ಸಮವಸ್ತ್ರ ಜಾರಿಗೆ ತರುವ ಸಲುವಾಗಿ ಎಲ್ಲಾ ರಾಜ್ಯಗಳಿಂದ ಒಪ್ಪಿಗೆ ಕೋರಿ ಪತ್ರ ಬರೆದಿತ್ತು. ರಾಜ್ಯ ಗೃಹ ಸಚಿವಾಲಯ ಕೇಂದ್ರ ಯೋಜನೆ ಕುರಿತು ಚರ್ಚೆ ನಡೆಸಿ ಒಪ್ಪಿಗೆ ಸೂಚಿಸಿ ಪತ್ರ ಬರೆದಿದೆ. ಇದೀಗ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಂದ ಅಭಿಪ್ರಾಯ ಸಂಗ್ರಹಿಸಿ ಅಂತಿಮ ನಿರ್ಧಾರ ತೆಗೆದುಕೊಂಡು ಜಾರಿ ತರಲಿದೆ.

ಇತ್ತೀಚೆಗೆ ಹರಿಯಾಣದ ಸೂರಜ್ ಕುಂಡ್‌ನಲ್ಲಿ ನಡೆದಿದ್ದ ಎಲ್ಲಾ ರಾಜ್ಯಗಳ ಗೃಹ ಸಚಿವರ ಚಿಂತನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಒಂದು ರಾಷ್ಟ್ರ

ಒಂದು ಸಮವಸ್ತ್ರ ಜಾರಿಗೆ ಸಲಹೆ ನೀಡಿದ್ದರು. ಪೊಲೀಸರಿಗೆ ಗುರುತು ಅನನ್ಯವಾಗಿರಬೇಕು. ಇದು ಪರಿಕಲ್ಪನೆ ಅಷ್ಟೇ ಆಗಿದ್ದು, ಹೇರಿಕೆ ಅಲ್ಲ. ಈ ಸಲಹೆಯನ್ನು ಪರಿಗಣಿಸುವಂತೆ ರಾಜ್ಯಗಳಿಗೆ ಪ್ರಧಾನಿ ಸಲಹೆ ನೀಡಿದ್ದರು. ಅದರಂತೆ ದೇಶದ ಎಲ್ಲಾ ರಾಜ್ಯಗಳ ಪೊಲೀಸರಿಗೆ ಅನ್ವಯ ಆಗುವಂತೆ ಏಕರೂಪ ಸಮವಸ್ತ್ರ ರೂಪಿಸಿ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳ ಅಭಿಪ್ರಾಯ ಕೋರಿ ಪತ್ರ ಬರೆದಿದ್ದರು. ಇದಕ್ಕೆ ಗೃಹ ಸಚಿವ ಅರಗ ಜ್ಞಾನೇಂದ್ರ ಒಪ್ಪಿಗೆ ಸೂಚಿಸಿದ್ದಾರೆ. ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಜಾರಿಗೆ ಇರುವ ಸಮವಸ್ತ್ರಕ್ಕೂ ಮತ್ತು ಕೇಂದ್ರ ಗೃಹ ಸಚಿವಾಲಯ ಸಲ್ಲಿಸಿರುವ ಒಂದು ದೇಶ ಒಂದು ಪೊಲೀಸ್ ಸಮವಸ್ತ್ರಕ್ಕೂ ಯಾವುದೇ ವ್ಯತ್ಯಾಸ ಕಂಡು ಬಂದಿಲ್ಲ. ಈಗಾಗಲೇ ರಾಜ್ಯದ ಪೊಲೀಸರ ಸಮವಸ್ತ್ರವಾಗಿದೆ ಎಂದು ಆರಗ ಜ್ಞಾನೇಂದ್ರ ತಿಳಿಸಿದರು.

ಪೊಲೀಸರ ವಿವಿಧ ಸಮವಸ್ತ್ರದ ವಿವರ:

- **ಕಾನೂನು ಮತ್ತು ಸುವ್ಯವಸ್ಥೆ (ಸಿವಿಲ್):** ಖಾಕಿ ಸಮವಸ್ತ್ರ, ಖಾಕಿ ಸ್ಲೋಚ್ ಟೋಪಿ, ಕಪ್ಪು ಅ್ಯಂಕಲ್ ಶೂ, ಪಿಯು ರಬ್ಬರ್ ಸೋಲ್, ಕಪ್ಪು ಬೆಲ್ಟ್, ಎಂಬ್ಲೆಮ್.
- **ಸಂಚಾರ ಪೊಲೀಸರು:** ಬಿಳಿ ಶರ್ಟ್, ಖಾಕಿ ಪ್ಯಾಂಟ್, ಬಿಳಿ ಸ್ಲೋಚ್ ಟೋಪಿ, ಕಪ್ಪು ಅ್ಯಂಕಲ್ ಶೂ, ಪಿಯು ರಬ್ಬರ್ ಸೋಲ್, ಕಪ್ಪು ಬೆಲ್ಟ್, ಎಂಬ್ಲೆಮ್.
- **ಮಹಿಳಾ ಪೊಲೀಸರು:** ಖಾಕಿ ಸಮವಸ್ತ್ರ, ಖಾಕಿ ಬೆರೆಟ್ ಟೋಪಿ, ಖಾಕಿ ಸೀರೆ (ಗರ್ಭಿಣಿ), ಕಪ್ಪು ಮಹಿಳಾ ಶೂ, ಕಪ್ಪು ಬೆಲ್ಟ್, ಎಂಬ್ಲಮ್.
- **ಸಶಸ್ತ್ರ ಪೊಲೀಸರು:** ಖಾಕಿ ಸಮವಸ್ತ್ರ, ಖಾಕಿ ಸ್ಲೋಚ್ ಟೋಪಿ, ಕಪ್ಪು ಬೆಲ್ಟ್, ಎಂಬ್ಲಮ್.
- **ಸಹಾಯಕ ಸಬ್ ಇನ್ಸ್‌ಪೆಕ್ಟರ್:** ಖಾಕಿ ಸಮವಸ್ತ್ರ, ಖಾಕಿ ಪೀಕ್ ಕ್ಯಾಪ್, ಬ್ರೌನ್ ಆಕ್ಸ್‌ಫರ್ಡ್ ಶೂ, ಬ್ರೌನ್ ಬೆಲ್ಟ್, ಎಂಬ್ಲೆಮ್.
- **ಮಹಿಳಾ ಎಎಸ್‌ಐ:** ಖಾಕಿ ಸಮವಸ್ತ್ರ, ಖಾಕಿ ಪೀಕ್ ಕ್ಯಾಪ್, ಖಾಕಿ ಸಿರೆ (ಗರ್ಭಿಣಿ) ಬ್ರೌನ್ ಆಕ್ಸ್‌ಫರ್ಡ್ ಶೂ, ಬ್ರೌನ್ ಬೆಲ್ಟ್, ಎಂಬ್ಲಮ್.
- **ಸಬ್ ಇನ್ಸ್‌ಪೆಕ್ಟರ್:** ಖಾಕಿ ಸಮವಸ್ತ್ರ, ಖಾಕಿ ಪೀಕ್ ಕ್ಯಾಪ್, ಬ್ರೌನ್ ಆಕ್ಸ್‌ಫರ್ಡ್ ಶೂ, ಬ್ರೌನ್ ಬೆಲ್ಟ್, ಎಂಬ್ಲೆಮ್.
- **ಮಹಿಳಾ ಸಬ್ ಇನ್ಸ್‌ಪೆಕ್ಟರ್:** ಖಾಕಿ ಸಮವಸ್ತ್ರ, ಖಾಕಿ ಪೀಕ್ ಕ್ಯಾಪ್, ಖಾಕಿ ಸೀರೆ (ಗರ್ಭಿಣಿ) ಬ್ರೌನ್ ಆಕ್ಸ್‌ಫರ್ಡ್ ಶೂ, ಬ್ರೌನ್ ಆಕ್ಸ್‌ಫರ್ಡ್ ಶೂ, ಎಂಬ್ಲಮ್.

ಆಧಾರ: ವಿಜಯವಾಣಿ, ದಿನಾಂಕ:18.01.2023

13. 21 ರಿಂದ ಉತ್ತರ ಕರ್ನಾಟಕ ಉತ್ಸವ

ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯು ಜನವರಿ 21, 22ರಂದು ಎರಡು ದಿನಗಳ ಕಾಲ ಅರಮನೆ ಮೈದಾನದಲ್ಲಿ ಉತ್ತರ ಕರ್ನಾಟಕ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಈ ಉತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದು, ಗದಗ ತೋಂಟದಾರ್ಯ ಮಠದ ಶ್ರೀ ತೋಂಟದ ಸಿದ್ದಲಿಂಗ ಸ್ವಾಮಿಜಿ ಸಾನಿಧ್ಯ ವಹಿಸಲಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆಂದು ಮಹಾಸಂಸ್ಥೆ ಅಧ್ಯಕ್ಷ ಶಿವಕುಮಾರ ಮೇಟಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿವಿಧ ಉದ್ಯೋಗವನ್ನು ಆರಸಿ ಬಂದು ಬೆಂಗಳೂರು ಮಹಾನಗರದಲ್ಲಿ ನೆಲೆಸಿರುವ ನಮ್ಮ ಜನರಿಗಾಗಿ ವಿವಿಧ ಬಡಾವಣೆಯಲ್ಲಿ ಸಂಘಗಳನ್ನು ಕಟ್ಟಿಕೊಳ್ಳಲಾಗಿದ್ದು, ಈ ಎಲ್ಲಾ ಸಂಸ್ಥೆಗಳು ಸೇರಿ ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯಾಗಿದೆ ಎಂದರು. ಬೆಂಗಳೂರಿನಲ್ಲಿರುವ ಉತ್ತರ ಕರ್ನಾಟಕ ಭಾಗದ ಜನರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ರಾಜ್ಯ ಸರ್ಕಾರ 3.24 ಗುಂಟೆ ಜಮೀನು ಮಂಜೂರು ಮಾಡಿದೆ. ಈ ಹಿನ್ನೆಲೆಯಲ್ಲಿ ಅಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಭಿನಂದಿಸಲಾಗುತ್ತದೆ ಎಂದು ಹೇಳಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:19.01.2023

14. ಸ್ಫೂರ್ತಿಗೆ ಸಂಪುಟ ಅಸ್ತು

ಹೆಣ್ಣು ಮಕ್ಕಳಿಗೆ ಕೌಶಲ ಆಧಾರಿತ ಶಿಕ್ಷಣ ನೀಡುವುದು, ಬಾಲ್ಯ ವಿವಾಹ ತಡೆ, ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಜಾಗೃತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ಮೂಲಕ 'ಸ್ಫೂರ್ತಿ ಯೋಜನೆ' ಅನುಷ್ಠಾನಕ್ಕೆ ಸಂಪುಟ ಒಪ್ಪಿಗೆ ಸೂಚಿಸಿದೆ.

ಒಟ್ಟು, ರೂ.12.51 ಕೋಟಿ ವೆಚ್ಚದ ಈ ಯೋಜನೆಯನ್ನು ಮೊದಲಿಗೆ ಕಲಬುರಗಿ, ರಾಯಚೂರು, ಬಾಗಲಕೋಟೆ, ವಿಜಯಪುರ ಮತ್ತು ಬೆಳಗಾವಿಯ 11 ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಲು ನಿರ್ಧರಿಸಲಾಗಿದೆ. ಸಂಪುಟ ಸಭೆ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೊಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ನಗರ ಪ್ರದೇಶಗಳಲ್ಲಿ 117 ಆರೋಗ್ಯ ಕೇಂದ್ರಗಳನ್ನು 'ನಮ್ಮ ಕ್ಲಿನಿಕ್'ಗಳಾಗಿ ಪರಿವರ್ತಿಸಲಾಗುವುದು. ಜೊತೆಗೆ, ಗ್ರಾಮೀಣ ಪ್ರದೇಶದ 847 ಉಪ ಕೇಂದ್ರಗಳನ್ನು ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾಪಕ್ಕೆ ಸಂಪುಟ ಒಪ್ಪಿಗೆ ನೀಡಿತು.

ಮಡಿಕೇರಿ, ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗಳಲ್ಲಿ ಕ್ರಿಟಿಕಲ್ ಕೇರ್ ಸೆಂಟರ್‌ಗಳನ್ನು ತೆರೆಯಲು ಕ್ರಮವಾಗಿ ರೂ. 13.22 ಕೋಟಿ, ರೂ. 23.75 ಕೋಟಿ ಹಾಗೂ ರೂ.22.75 ಕೋಟಿಗಳನ್ನು ಹೆಚ್ಚುವರಿ ಅನುದಾನ ಭರಿಸಲು ತೀರ್ಮಾನಿಸಲಾಯಿತು. ಕಿತ್ತೂರು ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರವನ್ನು ರೂ.19 ಕೋಟಿ ವೆಚ್ಚದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ನಿರ್ಧರಿಸಲಾಯಿತು.

ನಾರಾಯಣ ಗುರು ವಸತಿ ಶಾಲೆ: ಬಂಟ್ವಾಳದ ಪೂಂಜಾಲಕಟ್ಟೆ, ಕುಂದಾಪುರದ ವಡ್ಡರ್ಸೆ, ಸೊರಬ ತಾಲ್ಲೂಕಿನ ಹಿರೇಶಕುನ ಹಾಗೂ ಉತ್ತರ ಕನ್ನಡ ಜಿಲ್ಲೆಯ ಜಾಲಿ ಗ್ರಾಮದಲ್ಲಿ ಒಟ್ಟು ರೂ. 72 ಕೋಟಿ ವೆಚ್ಚದಲ್ಲಿ 'ನಾರಾಯಣ ಗುರು ವಸತಿ ಶಾಲೆ'ಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆಗೆ ಸಂಪುಟ ಒಪ್ಪಿಗೆ ನೀಡಿತು.

ಸಂಪುಟದ ಇತರ ತೀರ್ಮಾನಗಳು:

- ರೂ.600 ಕೋಟಿ ವೆಚ್ಚದಲ್ಲಿ ಪಿಡಬ್ಲ್ಯೂಡಿ ಇಲಾಖೆ ಮೂಲಕ 100 ಡಾ:ಅಂಬೇಡ್ಕರ್ ವಸತಿ ನಿಲಯಗಳ ನಿರ್ಮಾಣ ಪ್ರಸ್ತಾವನೆಗೆ ಒಪ್ಪಿಗೆ.
- 'ಕರ್ನಾಟಕ ಪಬ್ಲಿಕ್ ಶಾಲೆ'ಗಳಿಗೆ ರೂ.15 ಕೋಟಿ ವೆಚ್ಚದಲ್ಲಿ ಎಲೆಕ್ಟ್ರಾನಿಕ್ ಪೀಠೋಪಕರಣ ಖರೀದಿಗೆ ನಿರ್ಧಾರ.
- ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ರೂ.13.70 ಕೋಟಿ ವೆಚ್ಚದಲ್ಲಿ ಕೋರ್ಟ್ ಸಂಕೀರ್ಣ ನಿರ್ಮಾಣ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ.

- ಹೊಸನಗರ ತಾಲ್ಲೂಕಿನ ಕೆರೆಹಳ್ಳಿಯಲ್ಲಿ ಹಾಸ್ಟೆಲ್, ಸಮುದಾಯ ಭವನ ನಿರ್ಮಾಣಕ್ಕಾಗಿ ಕ್ಷತ್ರಿಯ ಮರಾಠ ಯುವ ವೇದಿಕೆಗೆ 2 ಎಕರೆ ಭೂಮಿ ಮಂಜೂರು.
- ತರೀಕೆರೆ ತಾಲ್ಲೂಕು ಕಲ್ಲತ್ತಿಹಳ್ಳಕ್ಕೆ ಅಡ್ಡಲಾಗಿ ರೂ.20 ಕೋಟಿ ವೆಚ್ಚದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಪ್ರಸ್ತಾವನೆಗೆ ಅನುಮೋದನೆ.
- ಹಾಸನ ನಗರಕ್ಕೆ 3ನೇ ಹಂತದ ಒಳಚರಂಡಿ ನಿರ್ಮಾಣ ಯೋಜನೆಗೆ ರೂ.171.8 ಕೋಟಿ ಮೊತ್ತದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.
- ಬೆಂಗಳೂರಿನ ಕಲಾಸಿಪಾಳ್ಯದಲ್ಲಿ ಅತ್ಯಾಧುನಿಕ ಬಸ್ ಟರ್ಮಿನಲ್ ನಿರ್ಮಾಣಕ್ಕೆ ಹೆಚ್ಚುವರಿ ರೂ.63 ಕೋಟಿ ಅನುದಾನಕ್ಕೆ ಘಟನೋತ್ತರ ಅನುಮೋದನೆ.
- ಮಾಜಿ ಸೈನಿಕರ ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಸರ್ಕಾರದ ವತಿಯಿಂದ ನಿವೇಶನ ಹಂಚಿಕೆ ಮಾಡುವ ಸಂಬಂಧ ನಗರಾಭಿವೃದ್ಧಿ ಪ್ರಾಧಿಕಾರಗಳ ನಿಯಮಗಳಿಗೆ ತಿದ್ದುಪಡಿ ತರಲು ನಿರ್ಧಾರ.

ಆಧಾರ: ವಿಜಯಕರ್ನಾಟಕ, ದಿನಾಂಕ:21.01.2023

15. ಫೆಬ್ರವರಿ 10 ಅಧಿವೇಶನ, 17ಕ್ಕೆ ಬಜೆಟ್

ಈ ವರ್ಷದ ಮೊದಲ ಹಾಗೂ ಬೊಮ್ಮಾಯಿ ಸರ್ಕಾರದ ಕೊನೆಯ ವಿಧಾನಮಂಡಲದ ಅಧಿವೇಶನಕ್ಕೆ ದಿನಾಂಕ ನಿಗದಿಯಾಗಿದೆ. ಫೆಬ್ರವರಿ 10 ರಂದು ರಾಜ್ಯಪಾಲರು ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದು, 17ಕ್ಕೆ 2023–24ನೇ ಸಾಲಿನ ಆಯವ್ಯಯ ಮಂಡನೆಯಾಗಲಿದೆ. ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಕಲ್ಲು ಕ್ವಾರಿ ಮರು ಹೊಂದಾಣಿಕೆಗೆ ಅವಕಾಶ, ರಾಜ್ಯದ 100 ಕಡೆಗಳಲ್ಲಿ ಅಂಬೇಡ್ಕರ್ ಹಾಸ್ಟೆಲ್ ನಿರ್ಮಾಣಕ್ಕೆ ರೂ.600 ಕೋಟಿ ನೀಡುವುದು ಸೇರಿ ಹಲವು ಮಹತ್ವದ ನಿರ್ಣಯಗಳಿಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಫೆಬ್ರವರಿ 10 ರಂದು ರಾಜ್ಯಪಾಲರು ಮಾಡುವ ಜಂಟಿ ಅಧಿವೇಶನದ ಭಾಷಣ ಕರಿತು ಫೆಬ್ರವರಿ 13 ರಿಂದ 16ರವರೆಗೂ ಚರ್ಚೆಗೆ ಅವಕಾಶ ಸಿಗಲಿದೆ. ಬಳಿಕ 17ರಂದು ಬಜೆಟ್ ಮಂಡನೆಯಾಗಲಿದೆ. ಫೆಬ್ರವರಿ 20 ರಿಂದ 24ರವರೆಗೂ ಬಜೆಟ್ ಮೇಲಿನ ಚರ್ಚೆಗೆ ಅವಕಾಶ ನೀಡಲಾಗುತ್ತದೆ. ಸದ್ಯಕ್ಕೆ ಸರ್ಕಾರ ಅಧಿವೇಶನ ಕೊನೆಗೊಳಿಸುವ ದಿನವನ್ನು ನಿಗದಿ ಮಾಡಿಲ್ಲ. ಅಂದರೆ, ಕಲಾಪದಲ್ಲಿ ಶಾಸಕರ ಹಾಜರಾತಿ ಮತ್ತು ಆಸಕ್ತಿ ಮೇಲೆ ಕೊನೆಗೊಳಿಸುವ ದಿನವನ್ನು ನಿಗದಿ ಮಾಡಲು ಸರ್ಕಾರ ನಿರ್ಣಯಿಸಿದೆ.

100 ಕಡೆ ಅಂಬೇಡ್ಕರ್ ಹಾಸ್ಟೆಲ್: ರಾಜ್ಯದ 100 ಕಡೆಗಳಲ್ಲಿ ಅಂಬೇಡ್ಕರ್ ಹಾಸ್ಟೆಲ್ ಕಟ್ಟಡ ನಿರ್ಮಿಸಲು 600 ಕೋಟಿ ಅನುದಾನ ಬಿಡುಗಡೆಗೆ ಸಮ್ಮತಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ನಿರ್ವಹಣೆಯಾಗುತ್ತಿರುವ ಹಾಸ್ಟೆಲ್ ಪ್ರವೇಶಕ್ಕೆ ಸಾಕಷ್ಟು ಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ಹೆಚ್ಚು ಅಗತ್ಯ ಇರುವ ಕಡೆ ಅದ್ಯತೆ ಮೇಲೆ ಹಾಸ್ಟೆಲ್ ಕಟ್ಟಡ ನಿರ್ಮಿಸಲು ಸಂಪುಟ ಒಪ್ಪಿದೆ. ಅದೇ ರೀತಿ ಉಡುಪಿ, ಶಿವಮೊಗ್ಗ, ಉತ್ತರ ಕನ್ನಡದಲ್ಲಿ ನಾರಾಯಣ ಗುರು ಸ್ಮರಣಾರ್ಥ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆ ಸ್ಥಾಪನೆಗೆ ರೂ.72 ಕೋಟಿ ಅನುದಾನ ಮೀಸಲಿಡಲಾಗಿದೆ.

ಸೆಸ್ ಪರಿಷ್ಕರಣೆ: ಸಕ್ಕರೆ, ಕಬ್ಬು ಸಂಶೋಧನೆಗಾಗಿ ಸ್ಥಾಪಿತವಾಗಿರುವ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ನಡೆಸಲು ಸೆಸ್ ಸಂಗ್ರಹಿಸುತ್ತಿದ್ದು, ಸೆಸ್ ದರವನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ. ಕಬ್ಬು ಅರೆಯುವ ಸಾಮರ್ಥ್ಯದ ಮೇಲೆ ಸೆಸ್ ಬೇರೆ ಬೇರೆ ರೂಪದಲ್ಲಿದೆ.

30–40 ವರ್ಷದ ಹಿಂದೆ ನಿಗದಿಯಾದ ಸೆಸ್ ಆಗಿದ್ದು, ಸಕ್ಕರೆ ಕಾರ್ಖಾನೆಗಳು ರೂ. 50 ಸಾವಿರ, ರೂ. ಒಂದು ಲಕ್ಷ ನೀಡುವುದು ಕಷ್ಟವಾಗಲ್ಲ ಎಂಬ ಕಾರಣಕ್ಕೆ ಸಂಸ್ಥೆ ನಡೆಸಲು ದರ ಪರಿಷ್ಕರಣೆ ಮಾಡಿರುವುದಾಗಿ ಸರ್ಕಾರ ಹೇಳಿಕೊಂಡಿದೆ.

ಪ್ರಮುಖ ತೀರ್ಮಾನಗಳು:

- ಮಡಿಕೇರಿ, ಬೆಳಗಾವಿ, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಕ್ರಿಟಿಕಲ್ ಕೇರ್ ಕೇಂದ್ರ ಆರಂಭಿಸಲು ರೂ. 59 ಕೋಟಿ.
- ಕಿತ್ತೂರು ತಾಲ್ಲೂಕಿನ ಆಸ್ಪತ್ರೆ ಮೇಲ್ದರ್ಜೆಗೆ ರೂ. 19 ಕೋಟಿ.
- ತರೀಕೆರೆಯ ಕಲ್ಲತ್ತಹಳ್ಳಕ್ಕೆ ಆರು ಪಿಕಪ್, ಒಂದು ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ರೂ. 20 ಕೋಟಿ.
- ಬೀದರ್ ಜಿಲ್ಲಾ ಔರಾದ್ ನ್ಯಾಯಾಲಯ ಸಂಕೀರ್ಣ ನಿರ್ಮಿಸಲು ರೂ. 23 ಕೋಟಿ.
- ಹೊಸನಗರ ತಾಲ್ಲೂಕು ರಿಪ್ಪನ್‌ಪೇಟೆಯ ಕ್ಷತ್ರಿಯ ಮರಾಠ ಯುವ ವೇದಿಕೆಗೆ ಮಕ್ಕಳ ಹಾಸ್ಟೆಲ್ ನಿರ್ಮಾಣಕ್ಕಗಿ ಎರಡು ಎಕರೆ ಜಮೀನು.
- ಕಲಾಸಿಪಾಳ್ಯ ನವೀನ ಮಾದರಿ ಬಸ್ ನಿಲ್ದಾಣಕ್ಕೆ ರೂ.63 ಕೋಟಿ ಘಟನೋತ್ತರ ಅನುಮತಿ.
- ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಶೇ.5 ಸೈಟನ್ನು ಮೃತ ಮಾಜಿ ಸೈನಿಕರ ಕುಟುಂಬಕ್ಕೆ ನೀಡಲು ನಿಯಮ ತಿದ್ದುಪಡಿ.
- ಶಿವಮೊಗ್ಗ ಜಿಲ್ಲೆ ಆನವೇರಿ ಸೇರಿ 23 ಗ್ರಾಮಗಳಿಗೆ ಜಲಜೀವನ್ ಯೋಜನೆಯಡಿ ಬಹು ಗ್ರಾಮ ಕುಡಿವ ನೀರಿನ ಯೋಜನೆಗೆ ರೂ. 26.6 ಕೋಟಿ.

ಪ್ರಮುಖ ನಿರ್ಣಯಗಳು:

- ರಾಜ್ಯದ ವಿವಿಧೆಡೆ 100 ಅಂಬೇಡ್ಕರ್ ಹಾಸ್ಟೆಲ್ ಕಟ್ಟಡ ನಿರ್ಮಿಸಲು ರೂ. 640 ಕೋಟಿ.
- ನಾರಾಯಣ ಗುರುಗಳ ಹೆಸರಿನಲ್ಲಿ ಬಿಸಿಎಂ ಹಾಸ್ಟೆಲ್ ಸ್ಥಾಪನೆಗೆ ರೂ. 71 ಕೋಟಿ.
- ಕೇಂದ್ರದ ಸಹಕಾರದಲ್ಲಿ 114 ನಗರ ಆರೋಗ್ಯ ಕ್ಷೇಮ ಕೇಂದ್ರ ಸ್ಥಾಪನೆ.
- ರಾಜ್ಯದ 647 ಆರೋಗ್ಯ ಉಪ ಕೇಂದ್ರಗಳು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಾಗಿ ಮೇಲ್ದರ್ಜೆಗೆ.
- ಬಾಲ್ಯ ವಿವಾಹ ತಡೆಯಲು 11 ತಾಲ್ಲೂಕುಗಳಲ್ಲಿ ಸ್ಫೂರ್ತಿ ಯೋಜನೆ ಜಾರಿ.
- 11 ತಾಲ್ಲೂಕುಗಳಲ್ಲಿ ಬಾಲ್ಯ ವಿವಾಹ ತಡೆಯುವ ಜಾಗೃತಿ ಮೂಡಿಸುವ ಸ್ಫೂರ್ತಿ ಯೋಜನೆ ಅನುಷ್ಠಾನಕ್ಕೆ ರೂ.12.51 ಕೋಟಿ.
- ಸರ್ಕಾರದ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (ಹೆಚ್‌ಆರ್‌ಎಂಎಸ್) ವ್ಯವಸ್ಥೆಗೆ ಹೊಸ ಸಾಫ್ಟ್‌ವೇರ್ ಅಳವಡಿಕೆಗೆ ರೂ. 40 ಕೋಟಿ ಅನುದಾನಕ್ಕೆ ಅಸ್ತು.
- ಕರ್ನಾಟಕ ಪಬ್ಲಿಕ್ ಶಾಲೆ ಎಲೆಕ್ಟ್ರಾನಿಕ್ ಉಪಕರಣ ಖರೀದಿಗೆ ಅವಕಾಶ.

ಆಧಾರ: ವಿಜಯವಾಣಿ, ದಿನಾಂಕ:21.01.2023

16. ಈ ಬಾರಿ ಚುನಾವಣೆಗೆ ಹೊಸ EVM

2023ರ ವಿಧಾನಸಭೆ ಚುನಾವಣೆಗೆ ಎಲ್ಲಾ ಪಕ್ಷಗಳು ಭರ್ಜರಿ ಸಿದ್ಧತೆಯಲ್ಲಿರುವಂತೆ ರಾಜ್ಯ ಚುನಾವಣಾ ಆಯೋಗ ಸಹ ಹೊಸ ಮತ ಯಂತ್ರಗಳ ಬಳಕೆಗೆ ಸಜ್ಜಾಗಿದೆ. ಹೊಸ ಎವಿಎಂಗಳ ವಿಶೇಷ ಎಂದರೆ, ಒಂದು ಮತ ಯಂತ್ರದಲ್ಲಿ 300 ಅಭ್ಯರ್ಥಿಗಳ ಹೆಸರು ದಾಖಲಿಸಬಹುದು.

ಹೈದರಾಬಾದ್ ಮೂಲದ ಇಸಿಐಎಲ್ (ಎಲೆಕ್ಟ್ರಾನಿಕ್ ಕಾರ್ಪೋರೇಷನ್ ಇಂಡಿಯಾ ಲಿಮಿಟೆಡ್) ಹೊಸ ಮತ ಯಂತ್ರಗಳನ್ನು ತಯಾರಿಸಿದೆ. ಇದರ ಬಳಕೆ ಸಂಬಂಧ ಚುನಾವಣಾ ಸಿಬ್ಬಂದಿಗೆ ಈಗಾಗಲೇ ಜಿಲ್ಲಾ ಮಟ್ಟಗಳಲ್ಲಿ ತರಬೇತಿ ಆರಂಭಿಸಲಾಗಿದೆ. ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ನೀಡಿರುವ ಮಾಹಿತಿ ಪ್ರಕಾರ, ಬೆಂಗಳೂರಿನ ಬಿಇಎಲ್ ತಯಾರಿಸುತ್ತಿದ್ದ ಹಿಂದಿನ ಮತಯಂತ್ರಗಳಲ್ಲಿ 64 ಅಭ್ಯರ್ಥಿಗಳ ಹೆಸರನ್ನು ಮಾತ್ರ ದಾಖಲಿಸಲು ಅವಕಾಶವಿತ್ತು. ಅಭ್ಯರ್ಥಿಗಳ ಸಂಖ್ಯೆ ಅದಕ್ಕಿಂತ ಜಾಸ್ತಿ ಇದ್ದರೆ, ಹೆಚ್ಚುವರಿ ಇವಿಎಂಗಳನ್ನು ಅಳವಡಿಸಬೇಕಿತ್ತು. ಹೊಸ ಮತಯಂತ್ರಗಳಲ್ಲಿ 300 ವಿವಿಪ್ಯಾಟ್‌ಗಳು ಸಹ ತ್ವರಿತವಾಗಿ ಮಾಹಿತಿ ನೀಡುವ ತಂತ್ರಜ್ಞಾನ ಅಳವಡಿಸಲಾಗಿದೆ.

ಹೊಸ ಮತಯಂತ್ರಗಳು ಈಗಾಗಲೇ ಬಹುತೇಕ ಜಿಲ್ಲೆಗಳಿಗೆ ರವಾನೆಯಾಗಿವೆ. ಕೇಂದ್ರ ಚುನಾವಣಾ ಆಯೋಗದ ತಂಡ ಈ ಮತಯಂತ್ರಗಳ ಗುಣಮಟ್ಟ, ಕಾರ್ಯಕ್ಷಮತೆಗಳನ್ನು ಪರಿಶೀಲಿಸಿದ ಬಳಿಕವೇ ಜಿಲ್ಲೆಗಳಿಗೆ ಕಳುಹಿಸಿಕೊಟ್ಟಿದೆ. ಚುನಾವಣಾ ಸಿಬ್ಬಂದಿ ಜೊತೆಗೆ, ರಾಜಕೀಯ ಪಕ್ಷಗಳ ಮುಖಂಡರಿಗೂ ತಿಳಿವಳಿಕೆ ನೀಡುವ ಕಾರ್ಯವು ಹಾವೇರಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಆರಂಭವಾಗಿದೆ.

ಹೊಸ ಗೋದಾಮು: ಚುನಾವಣಾ ಮುಗಿದು ಫಲಿತಾಂಶ ಘೋಷಣೆ ನಂತರ ಮತಯಂತ್ರಗಳನ್ನು ಸುರಕ್ಷಿತವಾಗಿ ಇರಿಸುವುದೇ ಜಿಲ್ಲಾ ಚುನಾವಣಾ ವಿಭಾಗಕ್ಕೆ ಸವಾಲು. ಈಗ ಮತಯಂತ್ರಗಳನ್ನು ಸಂರಕ್ಷಿಸಿ ಇಡಲು ಜಿಲ್ಲೆಗಳಲ್ಲಿ ಪ್ರತ್ಯೇಕ ಗೋದಾಮು ಸ್ಥಾಪಿಸಿರುವುದು ಜಿಲ್ಲಾಡಳಿತಗಳ ಚುನಾವಣಾ ವಿಭಾಗಕ್ಕೆ ನೆಮ್ಮದಿ ಮೂಡಿಸಿದೆ. ಈವರೆಗೆ ಬಳಸಿರುವ ಮತಯಂತ್ರಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:24.01.2023

17. ಗುಜರಿಗೆ 9 ಲಕ್ಷ ಸರ್ಕಾರಿ ಗಾಡಿ

ವಿಷಕಾರಿ ಹೊಗೆ ಸೂಸಿ ವಾಯುಮಾಲಿನ್ಯ ಉಂಟು ಮಾಡುವ, ಎಲ್ಲೆಂದರಲ್ಲಿ ರಸ್ತೆ ಮಧ್ಯೆ ನಿಂತು ಕಿರಿಕಿರಿ ಉಂಟು ಮಾಡುವ ಸರ್ಕಾರಿ ಬಸ್ಸುಗಳು, ಜೀಪುಗಳು ಸೇರಿದಂತೆ 15 ವರ್ಷ ಪೂರೈಸಿರುವ ಎಲ್ಲಾ ರೀತಿಯ ಹಳೇ ವಾಹನಗಳಿಗೆ ಏಪ್ರಿಲ್ 1 ರಿಂದ ಮುಕ್ತಿ ದೊರೆಯಲಿದೆ. 15 ವರ್ಷ ಹಳೆಯದಾಗಿದ್ದರೂ ರಿಜಿಸ್ಟ್ರೇಷನ್ ನವೀಕರಣಗೊಂಡಿರುವ ವಾಹನಗಳ ನೋಂದಣಿಯೂ ಮುಲಾಜಿಲ್ಲದೆ ರದ್ದಾಗಲಿದೆ. ಇದೇ ವೇಳೆ ಕರ್ನಾಟಕದಲ್ಲಿ ಖಾಸಗಿ ಹಾಗೂ ವಾಣಿಜ್ಯ ಬಳಕೆಯ 15 ವರ್ಷ ಪೂರೈಸಿರುವ ವಾಹನಗಳನ್ನು ಕಡ್ಡಾಯವಾಗಿ ಗುಜರಿಗೆ ಹಾಕುವ ನಿಯಮ ಜಾರಿಗೊಳಿಸುವ ಬದಲು ಮಾಲೀಕರ ಆಯ್ಕೆಗೆ ಬಿಡಲು ಸಾರಿಗೆ ಇಲಾಖೆ ನಿರ್ಧರಿಸಿದೆ. ಸ್ಕ್ರ್ಯಾಪಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಫೆಬ್ರವರಿ 1 ರಿಂದ ಅರ್ಜಿ ಆಹ್ವಾನಿಸಲಿದೆ.

ಕೇಂದ್ರ ಮೋಟಾರು ವಾಹನಗಳ (ಮೊದಲ ತಿದ್ದುಪಡಿ) ನಿಯಮ 2023 ಜಾರಿಗೆ ತರಲಾಗಿದೆ. ಗುಜರಿ ನೀತಿಯ ಭಾಗವಾಗಿ ತಿದ್ದುಪಡಿಗೊಳಿಸಿರುವ ಈ ನಿಯಮವನ್ನು ಇದೇ ಏಪ್ರಿಲ್ 1 ರಿಂದ ದೇಶಾದ್ಯಂತ ಅನುಷ್ಠಾನಕ್ಕೆ ತರುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಆದೇಶ

ಹೊರಡಿಸಿದೆ. ನೋಂದಣಿಯಾಗಿ 15 ವರ್ಷ ಮುಗಿದಿರುವ ಸರ್ಕಾರಿ ವಾಹನಗಳ ನೋಂದಣಿ ನವೀಕರಣಕ್ಕೆ 2022ರ ನವೆಂಬರ್ 24ರಿಂದಲೇ ಕೇಂದ್ರ ಸರ್ಕಾರ ನಿರ್ಬಂಧ ವಿಧಿಸಿದೆ.

ಕೇಂದ್ರ, ರಾಜ್ಯ ಸರ್ಕಾರಗಳ ಅಧೀನದಲ್ಲಿರುವ 9 ಲಕ್ಷಕ್ಕೂ ಅಧೀಕ ವಾಹನಗಳು, ಏಪ್ರಿಲ್ 1 ರಿಂದ ರಸ್ತೆಗಿಳಿಯುವಂತಿಲ್ಲ. ಕರ್ನಾಟಕದಲ್ಲಿ ಅಂದಾಜು 40 ರಿಂದ 50 ಸಾವಿರ ಸರ್ಕಾರಿ ವಾಹನಗಳಿವೆ. **ಗುಜರಿಗೆ ಹಾಕಲಾಗುವ ಹಳೇ ವಾಹನಗಳ ಬದಲಿಗೆ ವಾಯುಮಾಲಿನ್ಯ ಉಂಟು ಮಾಡದ ಪರ್ಯಾಯ ಇಂಧನ (ಸಿಎನ್‌ಜಿ, ಬಯೋ ಎಲ್‌ಎನ್‌ಜಿ) ಕಲ್ಪಿಸಲಾಗಿದೆ.**

ಕೇಂದ್ರ ಮೋಟಾರು ವಾಹನಗಳ ನಿಯಮ 1989ಕ್ಕೆ ತಿದ್ದುಪಡಿ ತಂದು ಹೊಸ ನಿಯಮಾವಳಿ 52ಎ ನಿಯಮ (ಸರ್ಕಾರಿ ವಾಹನಗಳ ನೋಂದಣಿ ಪ್ರಮಾಣಪತ್ರ ನವೀಕರಣ) ಸೇರ್ಪಡೆ ಮಾಡಲಾಗಿದೆ. ಏಪ್ರಿಲ್ 1 ರಿಂದಲೇ ತಿದ್ದುಪಡಿ ನಿಯಮ ಪಾಲನೆ ಕಡ್ಡಾಯವಾಗಲಿದೆ.

ಆರಂಭಿಕ ನೋಂದಣಿಯಾಗಿ 15 ವರ್ಷ ಪೂರ್ಣಗೊಳ್ಳುವ ಮುನ್ನವೇ ಕೆಲ ಇಲಾಖೆಗಳ ವಾಹನಗಳ ನೋಂದಣಿ ನವೀಕರಣ ಮಾಡಲಾಗಿದೆ. ಅಂತಹ ನೋಂದಣಿ ನವೀಕರಣ ಪ್ರಮಾಣಪತ್ರಗಳು ಕೂಡ 15 ವರ್ಷ ಪೂರ್ಣಗೊಂಡಿರುವ ಕಾರಣಕ್ಕೆ ಸ್ವಯಂಚಾಲಿತವಾಗಿ ರದ್ದಾಗಲಿದೆ ಎಂದು ನಿಯಮದಲ್ಲಿ ಉಲ್ಲೇಖಿಸಲಾಗಿದೆ.

ಎಲ್ಲಾ ರಾಜ್ಯಗಳ ಸಾರಿಗೆ ಸಂಸ್ಥೆಗಳಲ್ಲಿ ಹಳೇ ಬಸ್‌ಗಳು ಹೆಚ್ಚಾಗಿವೆ. ಉಳಿದಂತೆ ಪೊಲೀಸ್ ಇಲಾಖೆ, ಆರ್‌ಟಿಒ ಕಛೇರಿಗಳು, ಅರಣ್ಯ ಇಲಾಖೆ, ಅಬಕಾರಿ ಇಲಾಖೆ, ಶಿಕ್ಷಣ ಇಲಾಖೆಗಳಲ್ಲಿ ಹಳೇ ವಾಹನಗಳು ಜಾಸ್ತಿ ಎಂದು ಅಧಿಕಾರಿಗಳು ಮಾಹಿತಿ ನೀಡುತ್ತಾರೆ.

ಗುಜರಿ ಬಸ್‌ಗಳ ಆತಂಕ ದೂರ: ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ, ವಾಯುವ್ಯ, ಈಶಾನ್ಯ ಸಾರಿಗೆ ಸಂಸ್ಥೆ ಹಾಗೂ ಬಿಎಂಟಿಸಿಯ ಹಳೇ ಬಸ್‌ಗಳದ್ದೇ ದೊಡ್ಡ ಆತಂಕ. 10–15 ಲಕ್ಷ ಕಿ.ಮೀ. ಓಡಿಸಿರುವ ಬಸ್‌ಗಳು ಎಲ್ಲೆಂದರಲ್ಲಿ ಕೆಟ್ಟು ನಿಲ್ಲುತ್ತವೆ. ಸಂಚರಿಸುತ್ತಿದ್ದಾಗಲೇ ಬ್ರೇಕ್ ಫೇಲಾಗಿ ಅಪಘಾತ ಸಂಭವಿಸಿ ಹಲವರ ಜೀವ ತೆಗೆದಿರುವ ಉದಾಹರಣೆಗಳಿವೆ. ಕೆಎಸ್‌ಆರ್‌ಟಿಸಿ ವ್ಯಾಪ್ತಿಯಲ್ಲೇ 3 ಸಾವಿರಕ್ಕೂ ಅಧಿಕ ಗುಜರಿ ಬಸ್‌ಗಳಿವೆ. ಬಿಎಂಟಿಸಿಯಲ್ಲೂ ಸಾವಿರಾರು ಹಳೇ ಬಸ್‌ಗಳಿವೆ. ಹೊಸ ಬಸ್‌ಗಳ ಖರೀದಿ ಹಿನ್ನೆಲೆಯಲ್ಲಿ ಹಳೇ ಬಸ್‌ಗಳನ್ನು ಗ್ರಾಮೀಣ ಭಾಗದಲ್ಲಿ ಓಡಿಸಲು ಚಿಂತನೆ ನಡೆದಿದೆ. ಆದರೆ, 15 ವರ್ಷ ಪೂರೈಸಿರುವ ಬಸ್‌ಗಳನ್ನು ಗುಜರಿಗೆ ಹಾಕದಿರುವುದರಿಂದ ಪ್ರಯಾಣಿಕರಿಗೂ ಅನುಕೂಲವಾಗಲಿದೆ.

ಖಾಸಗಿ ವಾಹನ ಗುಜರಿಗೆ ಹಾಕೋದು ಕಡ್ಡಾಯವಲ್ಲ: ಖಾಸಗಿ ವಾಹನಗಳನ್ನು ಗುಜರಿಗೆ ಹಾಕುವ ನಿರ್ಧಾರವನ್ನು ಆಯಾ ರಾಜ್ಯಗಳಿಗೆ ಕೊಡಲಾಗಿದೆ. 15 ವರ್ಷ ತುಂಬಿರುವ ವಾಹನಗಳನ್ನು ಗುಜರಿಗೆ ಹಾಕುವ ಬಗ್ಗೆ ರಾಜ್ಯ ಸರ್ಕಾರ 2022 ಡಿಸೆಂಬರ್ 30ರಂದೇ ಅಧಿಸೂಚನೆ ಹೊರಡಿಸಿದೆ. ಮೊದಲ ಹಂತವಾಗಿ ಖಾಸಗಿ ವಾಹನವನ್ನು ಗುಜರಿಗೆ ಹಾಕುವ ಆಯ್ಕೆ ಮಾಲೀಕರಿಗೆ ಬಿಡಲಾಗಿದೆ. ಮಾಲೀಕ ಇಚ್ಛಿಸಿದರೆ ಮಾತ್ರ ತನ್ನ ವಾಹನವನ್ನು ಗುಜರಿಗೆ ಹಾಕಬಹುದು. ಆದರೆ, ಮುಂದಿನ ದಿನಗಳಲ್ಲಿ ಕಡ್ಡಾಯಗೊಳಿಸಲು ಇಲಾಖೆ ತೀರ್ಮಾನಿಸಿದೆ. ಗುಜರಿಗೆ ಹಾಕಲಾಗುವ ವಾಹನದಲ್ಲಿರುವ ಸ್ಟೀಲ್‌ಗೆ ಕೆ.ಜಿ. ಲೆಕ್ಕದಲ್ಲಿ ಹಣ ಪಾವತಿಸಲಾಗುತ್ತದೆ. ಜೊತೆಗೆ ವಾಹನ ಮಾಲೀಕರಿಗೆ ಠೇವಣಿ ಪ್ರಮಾಣಪತ್ರ (ಸಿಒಡಿ) ವಿತರಿಸಲಾಗುತ್ತದೆ. ಹೊಸ ವಾಹನ ಖರೀದಿಸುವಾಗ ಈ ಪ್ರಮಾಣಪತ್ರ ಆಧರಿಸಿ ಸಾರಿಗೇತರ ವಾಹನಕ್ಕೆ ಶೇ.25 ಹಾಗೂ ಸಾರಿಗೆ ವಾಹನಕ್ಕೆ ಶೇ.15 ತೆರಿಗೆ ವಿನಾಯಿತಿ ಇರಲಿದೆ. ಈ ವಿನಾಯಿತಿ ಸಾರಿಗೇತರ ವಾಹನಕ್ಕೆ 15 ವರ್ಷದವರೆಗೆ ಹಾಗೂ ಸಾರಿಗೆ ವಾಹನಕ್ಕೆ 8 ವರ್ಷದವರೆಗೆ ಲಭ್ಯವಿರುತ್ತದೆ. ಈ ಅವಧಿಯಲ್ಲಿ ಯಾವಾಗ ಬೇಕಾದರೆ ತೆರಿಗೆ ವಿನಾಯಿತಿ ಪಡೆಯಬಹುದು. ದೇಶದಲ್ಲಿ ಸೂಕ್ತ ನೋಂದಣಿಪತ್ರ ಮತ್ತು ಫಿಟ್‌ನೆಸ್ ಸರ್ಟಿಫಿಕೇಟ್ ಇಲ್ಲದೆ ಗುಜರಿಗೆ ಹೋಗಲು ಅರ್ಹವಾಗಿರುವ 1.2 ಕೋಟಿ ವಾಹನಗಳಿವೆ. ಈ ಪೈಕಿ ಕರ್ನಾಟಕದಲ್ಲಿ ಅಂದಾಜು 14. 3 ಲಕ್ಷ ವಾಹನಗಳಿವೆ.

ವಾಹನ ನೋಂದಣಿ ರದ್ದು ಏಕೆ:

- ರಿಪೇರಿ ಹೆಸರಲ್ಲೇ ವಾರ್ಷಿಕ ಲಕ್ಷಾಂತರ ರೂ. ವ್ಯಯಿಸಲಾಗುತ್ತೆ.
- ಮಿತಿ ಮೀರುತ್ತಿರುವ ವಾಯುಮಾಲಿನ್ಯ ಪ್ರಮಾಣ ನಿಯಂತ್ರಣ.
- ರಸ್ತೆ, ಪ್ರಯಾಣಿಕರು ಹಾಗೂ ವಾಹನ ಸುರಕ್ಷತೆಗೆ ಹೆಚ್ಚು ಆದ್ಯತೆ.
- ಆಟೋಮೊಬೈಲ್ ಕ್ಷೇತ್ರ ಉತ್ತೇಜನದ ಜೊತೆ ಉದ್ಯೋಗ ಸೃಷ್ಟಿ.
- ಪರ್ಯಾಯ ಇಂಧನ, ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಆದ್ಯತೆ.

ಯಾವ್ಯಾವ ವಾಹನ ಗುಜರಿಗೆ:

- ಕೇಂದ್ರ, ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶ ಒಡೆತನದ್ದು.
- ಮುನ್ಸಿಪಲ್ ಕಾರ್ಪೋರೇಷನ್/ಪುರಸಭೆ, ಪಂಚಾಯ್ತಿಗೆ ಸೇರಿದ್ದು.
- ರಸ್ತೆ ಸಾರಿಗೆ ನಿಗಮ 1950ರಡಿ ಸ್ಥಾಪಿತ ರಾಜ್ಯ ಸಾರಿಗೆ ಸಂಸ್ಥೆಯವು.
- ಕೇಂದ್ರ ರಾಜ್ಯ ಸರ್ಕಾರ ಒಡೆತನದ ಅಥವಾ ಸ್ವಯತ್ತ ಸಂಸ್ಥೆಗಳದ್ದು.
- ಕೇಂದ್ರ ರಾಜ್ಯ ಸರ್ಕಾರಗಳ ಅಧೀನದ ಸಾರ್ವಜನಿಕ ವಲಯದವು.

ಹಳೇ ವಾಹನಗಳ ನಾಶ ಹೇಗೆ:

15 ವರ್ಷ ಮೇಲ್ಪಟ್ಟ ವಾಹನಗಳನ್ನು ಗುಜರಿಗೆ ನೀಡುವುದು. ವ್ಯಕ್ತಿ, ಸಂಸ್ಥೆ, ಸೂಸೈಟಿಗಳಿಗೆ ಆಯಾ ರಾಜ್ಯಗಳು ಗುಜರಿ ಕೇಂದ್ರ ಸ್ಥಾಪಿಸಲು ಅನುಮತಿ ನೀಡಲಾಗುತ್ತದೆ. ಆ ಕೇಂದ್ರಗಳಲ್ಲಿ ಕಾನೂನುಬದ್ಧವಾಗಿ ವಾಹನಗಳನ್ನು ನಾಶಪಡಿಸಬೇಕು ಎಂದು ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ಕೊಟ್ಟಿದೆ.

ಯಾವ ವಾಹನಗಳಿಗೆ ವಿನಾಯ್ತಿ:

- ವಿಶೇಷ ಉದ್ದೇಶಕ್ಕಾಗಿ ರೂಪಿಸಲು ವಾಹನಗಳಿಗೆ ಗುಜರಿ ನೀತಿ ಅನ್ವಯಿಸಲ್ಲ.
- ರಕ್ಷಣಾ ಇಲಾಖೆ ಕಾರ್ಯಾಚರಣೆಯ ಶಸ್ತ್ರಸಜ್ಜಿತ ವಾಹನ. ಇತರ ವಿಶೇಷ ವಾಹನ.
- ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ರೂಪಿಸಿದ ವಾಹನಗಳು.
- ದೇಶ/ರಾಜ್ಯದ ಆಂತರಿಕ ಭದ್ರತಾ ಕಾರ್ಯಕ್ಕೆ ತಯಾರಿಸಲಾಗಿರುವ ವಾಹನಗಳು.

ಆಧಾರ: ವಿಜಯವಾಣಿ, ದಿನಾಂಕ:31.01.2023

18. ರಾಜ್ಯದ ನಿರೀಕ್ಷೆಗೆ ಕೇಂದ್ರ ಸ್ಪಂದನೆ

ಗ್ರಾಮೀಣಾಭಿವೃದ್ಧಿ, ಕೃಷಿ, ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಒತ್ತು ನೀಡಿ, ಅನುದಾನ ಹೆಚ್ಚಳವಾಗಬೇಕು ಎಂಬ ರಾಜ್ಯದ ನಿರೀಕ್ಷೆಗೆ ಕೇಂದ್ರ ಸರ್ಕಾರ ಸ್ಪಂದಿಸಿದೆ ಎಂದು ಮುಖ್ಯಮಂತ್ರಿಯವರು ಸಮರ್ಥಿಸಿಕೊಂಡರು.

ಕೇಂದ್ರ ಬಜೆಟ್‌ನ ಅನುಕೂಲಗಳ ಬಗ್ಗೆ ವಿವರಿಸಲು ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೃಷಿ ಸೇವಾ ಹಾಗೂ ಉತ್ಪಾದನಾ ವಲಯದಲ್ಲಿ

ಅಭಿವೃದ್ಧಿ ಕಾಣುತ್ತಿದ್ದು, ಈ ಬಜೆಟ್ ಇನ್ನಷ್ಟು ಶಕ್ತಿ ತುಂಬಿ ಅಮೂಲಾಗ್ರ ಬದಲಾವಣೆಗೆ ನೆರವಾಗಲಿದೆ ಎಂದರು.

ವಿಶ್ವದ ಅಭಿವೃದ್ಧಿ ಹೊಂದಿದ್ದ ದೇಶಗಳಿಗೆ ಹೋಲಿಸಿದರೆ ಭಾರತದ ಆರ್ಥಿಕ ಸ್ಥಿತಿ ಉತ್ತಮವಾಗಿದ್ದು, ಬೆಳವಣಿಗೆಯ ಪ್ರಮಾಣ 6 ರಿಂದ 6.8 ರಷ್ಟಿದೆ. ಕೆಲವು ದೇಶಗಳು ಆಹಾರ, ಕ್ಷಾಮ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದರೆ, ಪ್ರಧಾನಿ ಮೋದಿಯವರ ದಿಟ್ಟಕ್ರಮ, ಮುಂದಾಲೋಚನೆಗಳು ಆರೋಗ್ಯಕರ ಬೆಳವಣಿಗೆಯನ್ನು ದೇಶ ಸಾಧಿಸಲು ಸಾಧ್ಯವಾಗಿದೆ ಎಂದು ಮುಖ್ಯಮಂತ್ರಿಯವರು ವಿವರಿಸಿದರು.

ಪ್ರಗತಿಪರ, ಸಮತೋಲಿತ: ಅಮೃತ ಕಾಲದಲ್ಲಿ ರಾಷ್ಟ್ರದ ಪ್ರಗತಿಗೆ ಭದ್ರ ಬುನಾದಿ ಹಾಕುವ ಎಲ್ಲ ಅಂಶಗಳಿದ್ದು, ಸಮಗ್ರ ಅಭಿವೃದ್ಧಿ ದೃಷ್ಟಿಕೋನದ ಸಮತೋಲಿತ ಹಾಗೂ ಪ್ರಗತಿಪರ ಮುಂಗಡಪತ್ರವಾಗಿದೆ. ಬಂಡವಾಳ ವೆಚ್ಚದ ಮಿತಿ ರೂ.10 ಕೋಟಿ ಏರಿಕೆಯಿಂದ ವಹಿವಾಟು, ಉದ್ಯೋಗ ಸೃಷ್ಟಿ, ಸಾಮಾಜಿಕ ಮೂಲ ಸವಲತ್ತುಗಳಿಗೆ ಹೆಚ್ಚಿನ ಆಧ್ಯತೆ ನೀಡಿದಂತಾಗಿದೆ ಎಂದು ಹೇಳಿದರು. ಕುಡಿಯುವ ನೀರು, ಸ್ವಚ್ಛತೆ, ಗ್ರಾಮೀಣ ಸವಲತ್ತು ಸೇರಿ ಪ್ರತಿಯೊಂದು ಸೂಕ್ಷ್ಮ, ಅತಿಸೂಕ್ಷ್ಮ ವಿಚಾರಗಳ ಬಗ್ಗೆ ಗಂಭೀರ ಚಿಂತನೆ ನಡೆಸಿ ಆದ್ಯತೆ ನೀಡಲಾಗಿದೆ. ಮಹಿಳೆಯರ ಸ್ವಸಹಾಯ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ, ಆರೋಗ್ಯ ಮತ್ತು ಶಿಕ್ಷಣಕ್ಕೆ ಅಷ್ಟೇ ಪ್ರಾಮುಖ್ಯತೆ ಲಭಿಸಿದೆ. ಮೆಟ್ರೋ ಮೂರನೇ ಹಂತದ ಕಾಮಗಾರಿಗೆ ರೂ.23 ಸಾವಿರ ಕೋಟಿ ರೂಪಾಯಿ ಅನುದಾನ ದೊರೆತಿದೆ. ಈ ಕೆಲಸ 2024ರ ಡಿಸೆಂಬರ್ ಅಂತ್ಯದೊಳಗೆ ಮುಗಿಯಲಿದ್ದು, ಇದಕ್ಕೂ ಅನುದಾನ ಲಭಿಸಲಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು.

ಸಚಿವರಾದ ವಿ.ಸೋಮಣ್ಣ, ಸಿಸಿ.ಪಾಟೀಲ್, ಆರಗ ಜ್ಞಾನೇಂದ್ರ, ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಚಲವಾದಿ ನಾರಾಯಣಸ್ವಾಮಿ ಇನ್ನಿತರರು ಇದ್ದರು.

ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆ: ಭದ್ರಾಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆ ಮನ್ನಣೆ ನೀಡಲು ಕೇಂದ್ರ ಜಲಸಂಪನ್ಮೂಲ, ಆರ್ಥಿಕ ಇಲಾಖೆಗಳು ಕೇಂದ್ರೀಯ ಜಲಸಂಪನ್ಮೂಲ ಆಯೋಗದ ತೀರುವಳಿ ದೊರೆತು, ಸಚಿವ ಸಂಪುಟ ಸಭೆ ಅನುಮೋದನೆ ಪಡೆದು ಬಜೆಟ್‌ನಲ್ಲಿ ಅನುದಾನ ಘೋಷಿಸಿದ್ದು. ರಾಷ್ಟ್ರೀಯ ಯೋಜನೆ ಎಂದು ಒಪ್ಪಿಗೆ ನೀಡಿದಂತೆಯೇ ಎಂದು ಮುಖ್ಯಮಂತ್ರಿಯವರು ಅರ್ಥೈಸಿದರು. ಯಾವುದೇ ಕರಾರಿಲ್ಲದೇ ರೂ.5,300 ಕೋಟಿ ಮೀಸಲಿರಿಸಲಾಗಿದೆ. ಆಡಳಿತಾತ್ಮಕ ವೆಚ್ಚವಾಗಿ ರೂ.300 ಕೋಟಿ ನೀಡಿದ್ದು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಪ್ರತ್ಯೇಕ ನೆರವು ಕೋರಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ. ಯೋಜನೆಯಡಿ ಹಂಚಿಕೆಯಾದ ನೀರಿನ ಪ್ರಮಾಣ 16 ರಿಂದ 23 ಟಿಎಂಸಿ ಅಡಿಗಳಿಗೆ ಹೆಚ್ಚಿದ್ದು ಪ್ರಗತಿಯಲ್ಲಿರುವ ಕಾಮಗಾರಿಗೆ ರಾಜ್ಯ ಸರ್ಕಾರ ರೂ.13 ಸಾವಿರ ಕೋಟಿ ವ್ಯಯಿಸಿದೆ. ಕೇಂದ್ರದ ನೆರವಿನಿಂದ ಕಾಮಗಾರಿ ಹೆಚ್ಚಲಿದೆ ಎಂದರು. ಕೇಂದ್ರದ ಈ ನಿರ್ಧಾರದಿಂದ ಪ್ರತಿಪಕ್ಷದವರಿಗೆ ನಿರಾಸೆಯುಂಟಾಗಿ ಟೀಕಿಸುತ್ತಿದ್ದಾರೆ. ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಜನರ ಮೂಗಿಗೆ ತುಪ್ಪ ಸವರಿದ್ದರು. ಇದರಿಂದಾಗಿ ಕಳೆದ ಚುನಾವಣೆಯಲ್ಲಿ ಜನರು ಸೋಲಿಸಿದರು ಎಂದು ಮುಖ್ಯಮಂತ್ರಿಯುವರು ಕುಟುಕಿದರು.

ಕಾಂಗ್ರೆಸ್‌ನ ತಪ್ಪು ಹೆಜ್ಜೆ: ಮೇಕೆದಾಟು ವಿವಾದ ಸುಪ್ರೀಂ ಕಟಕಟೆಯಲ್ಲಿ ನಿಲುಕುವುದಕ್ಕೆ ಕಾಂಗ್ರೆಸ್‌ನ ತಪ್ಪು ನಡೆಯೇ ಕಾರಣವೆಂದರೂ. ಕೋರ್ಟ್‌ನಿಂದ ಅನುಮತಿ ಸಿಕ್ಕ ತಕ್ಕಣ ಕಾಮಗಾರಿಗೆ ಚಾಲನೆ ನೀಡುವ ಉದ್ದೇಶದಿಂದ ಅನುದಾನ ಕಾದಿರಿಸಿದ್ದೇವೆ ಎಂದು ಮುಖ್ಯಂತ್ರಿಯವರು ಸಮಜಾಯಿಷಿ ನೀಡಿದರು.

ಬಜೆಟ್ ಪ್ರಚಾರ ಅಭಿಯಾನ: ಪ್ರಧಾನಿ ನರೇಂದ್ರ ಮೋದಿ ಜನಪ್ರಿಯತೆ, ಸರ್ಕಾರದ ವರ್ಚಸ್ಸು ವೃದ್ಧಿಯ ಪ್ರತಿಯೊಂದು ಅವಕಾಶವನ್ನು ಬಿಜೆಪಿ ಬಳಸಿಕೊಳ್ಳುವ ಉತ್ಸಾಹದಲ್ಲಿದ್ದು, ವಿಧಾನಸಭೆ

ಚುನಾವಣೆ ಹತ್ತಿರವಾಗುತ್ತಿರುವ ಕಾರಣ ಪ್ರಚಾರಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಕೇಂದ್ರ ಸರ್ಕಾರದ 2023–24ನೇ ಸಾಲಿನ ಬಜೆಟ್ ಬಗ್ಗೆ ವಿಭಿನ್ನ ವೇದಿಕೆಗಳನ್ನು ಪ್ರಚಾರ ಅಭಿಯಾನಕ್ಕೆ ಮುಂದಾಗಿದೆ. ವರಿಷ್ಠರ ಸೂಚನೆಯಂತೆ ಈ ಚಟುವಟಿಕೆ ರೂಪುರೇಷೆ ಸಿದ್ಧವಾಗಿದ್ದು, ದೆಹಲಿಯಿಂದ ರವಾನಿಸಿದ ಟಿಪ್ಪಣಿ ಅಂಶಗಳ ಪ್ರಕಾರ ಮಾಹಿತಿ ಹಂಚಿಕೆಯಾಗಲಿದೆ. ವರಿಷ್ಠರ ಸಂದೇಶದ ಭಾಗವಾಗಿಯೇ ಮುಖ್ಯಮಂತ್ರಿಯವರು ಮಾಧ್ಯಮಗೋಷ್ಠಿ ಕರೆದು ವಿವರ ಹಂಚಿಕೊಂಡಿದ್ದಾರೆ. ರಾಜ್ಯ ಮಟ್ಟದ ಪ್ರಚಾರ ಅಭಿಯಾನ ಕ್ರಮೇಣ ಜಿಲ್ಲಾ ಮಂಡಲ ಹಂತಕ್ಕೂ ವಿಸ್ತರಣೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

4ಕ್ಕೆ ಗೋಯಲ್ ಆಗಮನ: ಕೇಂದ್ರದ ವಾಣಿಜ್ಯ ಮತ್ತು ಜವಳಿ ಸಚಿವ ಫೆಬ್ರವರಿ 4ರಂದು ರಾಜ್ಯಕ್ಕೆ ಆಗಮಿಸುತ್ತಿದ್ದು, ಕೇಂದ್ರ ಬಜೆಟ್‌ನ ಮಾಹಿತಿ ಹಂಚಿಕೆ ಈ ಪ್ರವಾಸದ ಮುಖ್ಯ ಉದ್ದೇಶವಾಗಿದೆ. ಬಜೆಟ್‌ನಲ್ಲಿ ರಾಜ್ಯಕ್ಕೆ ಯಾವ್ಯಾವ ಯೋಜನೆಯಡಿ ಎಷ್ಟು ಅನುದಾನ ಸಿಗಲಿದೆ ಎಂಬ ಅಂಕಿಅಂಶಗಳನ್ನು ಬಿಡುಗಡೆ ಮಾಡುವ ಸಾಧ್ಯತೆಗಳಿವೆ. ಜಿಲ್ಲಾಮಟ್ಟದ ಮಾಧ್ಯಮಗೋಷ್ಠಿಗಳು, ಮಂಡಲಮಟ್ಟದಲ್ಲಿ ಪ್ರಚಾರ ಸಭೆಗಳನ್ನು ಸಂಘಟಿಸಿ, ಆಯಾ ಜಿಲ್ಲೆ ಮತ್ತು ಮಂಡಲ ವ್ಯಾಪ್ತಿಗೆ ನೀಡಿದ ಪ್ರಾಮುಖ್ಯತೆ ಮೇಲೆ ಫೋಕಸ್ ಮಾಡಿ ಕೇಂದ್ರ ಬಜೆಟ್‌ನ ಮಾಹಿತಿ ಹಂಚಿಕೆಗೆ ಸೂಚನೆ ನೀಡಲಾಗಿದೆ.

ಮುಖ್ಯಮಂತ್ರಿ ಮೇಲೆ ಶಾಸಕರ ಒತ್ತಡ: ಬಜೆಟ್ ತಯಾರಿಯಲ್ಲಿರುವ ಮುಖ್ಯಮಂತ್ರಿ ಅವರಿಗೆ ಹೆಚ್ಚಿನ ಅನುದಾನ ಘೋಷಿಸುವಂತೆ ಶಾಸಕರಿಂದ ಒತ್ತಡ ಹೆಚ್ಚಾಗುತ್ತಿದೆ. ಬಹಳ ವರ್ಷಗಳಿಂದ ಬಾಕಿ ಉಳಿದಿರುವ ನೀರಾವರಿ, ಕುಡಿಯುವ ನೀರಿನ ಯೋಜನೆಗಳು ಹಾಗೂ ಕೆರೆ ತುಂಬಿಸುವ ಯೋಜನೆಗಳಿಗೆ ಹೆಚ್ಚಾಗಿ ಬೇಡಿಕೆ ಬರುತ್ತಿದ್ದು, ಹೆಚ್ಚಿನ ಅನುದಾನ ಒದಗಿಸುವಂತೆ ಶಾಸಕರು ಒತ್ತಾಯಿಸಲಾರಂಭಿಸಿದ್ದಾರೆ. ಸಚಿವರ ಬೇಡಿಕೆ ಪಟ್ಟಿಯೂ ಬೆಳೆಯುತ್ತಿದೆ. ನಾವು ಅಶ್ವಾಸನೆ ಕೊಟ್ಟ ರೀತಿಯಲ್ಲಿ ಕ್ಷೇತ್ರದ ಜನರ ಬೇಡಿಕೆ ಈಡೇರಿಕೆ ಮಾಡಲು ಈಗಲೂ ಕ್ರಮ ಕೈಗೊಳ್ಳದೆ ಇದ್ದರೆ, ಯಾರೂ ಒಪ್ಪುವುದಿಲ್ಲ. ಜನರನ್ನು ಮನವೂಲಿಕೆ ಮಾಡುವುದು ಕಷ್ಟ ಎಂದು ಮುಖ್ಯಮಂತ್ರಿಯವರ ಬಳಿ ಸಚಿವರೂ ಪ್ರತ್ಯೇಕ ಮನವಿ ಸಲ್ಲಿಸುತ್ತಿದ್ದಾರೆ. ಶಾಸಕರ ಬೇಡಿಕೆ ಗಮನಿಸಿರುವ ಮುಖ್ಯಮಂತ್ರಿ ಪ್ರತ್ಯೇಕ ಪಟ್ಟಿ ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಆಧಾರ:ವಿಶ್ವವಾಣಿ, ದಿನಾಂಕ:03.02.2023.

19. ಟ್ರಾಫಿಕ್ ಬಾಕಿ ದಂಡಕ್ಕೆ ಶೇ.50 ರಿಯಾಯಿತಿ

ನಿಯಮ ಉಲ್ಲಂಘನೆ ಆರೋಪದಲ್ಲಿ ಸಂಚಾರ ಪೊಲೀಸರು ನಿಮ್ಮ ವಾಹನದ ಮೇಲೆ ಸಿಕ್ಕಾಪಟ್ಟೆ ದಂಡ ವಿಧಿಸಿದ್ದಾರೆಯೇ, ಪೊಲೀಸರು ಹಿಡಿದಾಗಲೆಲ್ಲ ಕಿರಿಕಿರಿಯಾಗುತ್ತಿದೆಯೇ ಹಾಗಿದ್ದರೆ ಸರ್ಕಾರ ಬಂಪರ್ ಆಫರ್ ಕೊಟ್ಟಿದೆ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಫೆಬ್ರವರಿ 11ರೊಳಗೆ ಪಾವತಿಸಿದರೆ ಶೇ.50 ರಿಯಾಯಿತಿ ಸಿಗಲಿದೆ. ಅಂದರೆ ರೂ.2 ಸಾವಿರ ದಂಡ ಇದ್ದರೆ ರೂ.1 ಸಾವಿರ ರೂಪಾಯಿ ಪಾವತಿಸಿದರೆ ಬಾಕಿ ಮೊತ್ತ ಮನ್ನಾ ಆಗಲಿದೆ.

ಹೈಕೋರ್ಟ್ ನ್ಯಾಯಮೂರ್ತಿ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷ ನ್ಯಾ. ಬಿ.ವೀರಪ್ಪ ಅಧ್ಯಕ್ಷತೆಯಲ್ಲಿ ಜನವರಿ 27ರಂದು ನಡೆದ ಸಭೆಯಲ್ಲಿ ರಾಜ್ಯ ಸಾರಿಗೆ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚೆ ನಡೆದಿತ್ತು. ಎಲ್ಲರಿಗೂ ನ್ಯಾಯ ಒದಗಿಸುವ ಸಲುವಾಗಿ ಬಾಕಿ ಇರುವ ಟ್ರಾಫಿಕ್ ಫೈನ್ ಪಾವತಿಗೆ ವಿನಾಯಿತಿ ನೀಡುವಂತೆ ಮನವಿ ಮಾಡಿದ್ದರು.

ಇದಕ್ಕೆ ರಾಜ್ಯ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಗ್ರೀನ್ ಸಿಗ್ನಲ್ ನೀಡಿದ್ದರು ಇದರ ಮೇರೆಗೆ ಕಾನೂನು ಸೇವೆಗಳ ಪ್ರಾಧಿಕಾರ ರಾಜ್ಯಾದ್ಯಂತ ಸಂಚಾರ ಪೊಲೀಸರು ದಾಖಲಿಸಿರುವ ಸಂಚಾರ ಉಲ್ಲಂಘನೆ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ವಿನಾಯಿತಿ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

ಈ ಬಗ್ಗೆ ಕಾನೂನು ಇಲಾಖೆ ಅಧಿಕಾರಿಗಳ ಒಪ್ಪಿಗೆ ಪಡೆದ ಸಾರಿಗೆ ಇಲಾಖೆ ಶೇ.50 ರಷ್ಟು ವಿನಾಯಿತಿ ನೀಡಿದೆ. ಹಲವು ದಿನಗಳಿಂದ ಬಾಕಿ ಉಳಿಸಿಕೊಂಡಿರುವ ಸಂಚಾರ ದಂಡವನ್ನು ಫೆಬ್ರವರಿ 11ರ ಒಳಗೆ ಪಾವತಿಸಿದರೆ ಶೇ.50 ರಷ್ಟು ವಿನಾಯಿತಿ ಸಿಗಲಿದೆ. ನಿಗದಿತ ಅವಧಿಗೆ ಬಾಕಿ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಳ್ಳುವವರಿಗೆ ಮಾತ್ರ ಇದು ಅನ್ವಯ ಆಗಲಿದೆ. ಅನಂತರ ಬಂದವರಿಗೆ ವಿನಾಯಿತಿ ಸಿಗುವುದಿಲ್ಲ ಎಂದು ಸಾರಿಗೆ ಇಲಾಖೆ ಸ್ಪಷ್ಟಪಡಿಸಿದೆ.

ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗದಲ್ಲಿ ಹಲವು ವರ್ಷಗಳಿಂದ ಅಂದಾಜು ರೂ.2 ಕೋಟಿ ಪ್ರಕರಣಗಳು ಬಾಕಿ ಉಳಿದಿವೆ. ರಾಜ್ಯ ಸರ್ಕಾರ ಕೊಟ್ಟಿರುವ ಅವಕಾಶವನ್ನು ಜನರು ಸದುಪಯೋಗ ಪಡಿಸಿಕೊಳ್ಳಬೇಕು. ಆನ್‌ಲೈನ್ ಅಥವಾ ಸಂಚಾರ ಪೊಲೀಸ್ ಠಾಣೆಯಲ್ಲಿ ದಂಡದ ಮೊತ್ತವನ್ನು ಪಾವತಿಸಿ ವಿನಾಯಿತಿ ಪಡೆಯುವಂತೆ ಪೊಲೀಸ್ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:03.02.2023

20. 6,796 ಸರ್ಕಾರಿ ಶಾಲೆಗಳ ವಿಲೀನ

3,457 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಸಮೀಪದ ಶಾಲೆಗಳಲ್ಲಿ ವಿಲೀನ ಹಾಗೂ 3,339 ಶಾಲೆ–ಕಾಲೇಜುಗಳನ್ನು ವಿಲೀನಗೊಳಿಸಿ ಕ್ಲಸ್ಟರ್ ಪ್ರೌಢಶಾಲೆ ಅಥವಾ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಬೇಕು ಎಂದು ಆಡಳಿತ ಸುಧಾರಣಾ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಹೀಗೆ ಮಾಡಿದಲ್ಲಿ ಒಟ್ಟು 6,796 ಶಾಲೆ–ಕಾಲೇಜುಗಳು ವಿಲೀನಗೊಳ್ಳಲಿವೆ. 3,457 ಶಾಲೆಗಳನ್ನು 1,667 ಶಾಲೆಗಳಲ್ಲಿ ವಿಲೀನಗೊಳಿಸುವಂತೆ ಸಲಹೆ ನೀಡಲಾಗಿದೆ. ಹೀಗಾದಲ್ಲಿ 3,457 ಶಾಲೆಗಳು ಅಸ್ತಿತ್ವವನ್ನೆ ಕಳೆದುಕೊಳ್ಳಲಿವೆ.

3,339 ಪ್ರಾಥಮಿಕ, ಪ್ರೌಢಶಾಲೆ, ಪಿಯು ಕಾಲೆಜುಗಳನ್ನು ಸಮೀಪದ 1,135 ಶಾಲೆ–ಕಾಲೇಜುಗಳಲ್ಲಿ ವಿಲೀನಗೊಳಿಸಬೇಕು ಬಳಿಕ ಅವುಗಳನ್ನು ಸಮೂಹ ಪ್ರೌಢಶಾಲೆ ಅಥವಾ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಬೇಕು.

ಆಡಳಿತ ಸುಧಾರಣೆಗೆ ಸಲಹೆ ನೀಡಲು ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಆಯೋಗವು 1,609 ಶಿಫಾರಸ್ಸುಗಳನ್ನು ಒಳಗೊಂಡ ನಾಲ್ಕು ಮತ್ತು ಐದನೇ ವರದಿಯನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿತು. ಈ ವರದಿಯಲ್ಲಿ ಶಾಲೆಗಳ ವಿಲೀನ ಹಾಗೂ ಮೇಲ್ದರ್ಜೆಗೆ ಏರಿಸಲು ಸಲಹೆ ನೀಡಲಾಗಿದೆ.

ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಗ್ರಾಮೀಣ ಕೋಟಾ: ಗ್ರಾಮೀಣ ಕೋಟಾದಲ್ಲಿ ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಸರ್ಕಾರಿ ಶಾಲೆ ವಿದ್ಯಾರ್ಥಿಗಳ ಸಂಖ್ಯೆ ಶೇ.3.45 ರಷ್ಟಿದೆ. ಸಿಬಿಎಸ್‌ಇ, ಐಸಿಎಸ್‌ಇ ವಿದ್ಯಾರ್ಥಿಗಳೇ ಕೋಟಾ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮೀಣ ಕೋಟಾವನ್ನು ಗ್ರಾಮೀಣ ಸರ್ಕಾರಿ ಶಾಲಾ ವಿದ್ಯಾರ್ಥಿ ಕೋಟಾವಾಗಿ ಪರಿವರ್ತಿಸಬೇಕು. ಇಲ್ಲವೇ ಶೇ.7.5ರಷ್ಟು ಸೀಟುಗಳನ್ನು ಅವರಿಗೆ ಮೀಸಲಿಡಬೇಕು. ಗ್ರಾಮೀಣ ವ್ಯಾಸಂಗ ಕನ್ನಡ ಮಾಧ್ಯಮ, ಹೈದರಾಬಾದ್ ಕರ್ನಾಟಕ ಪ್ರಮಾಣ ಪತ್ರಗಳ ಸಿಂಧುತ್ವವನ್ನು ಜೀವಿತಾವಧಿಗೆ ವಿಸ್ತರಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ.

ಶಾಲೆಯಿಂದ ಹೊರಗುಳಿದ 15 ರಿಂದ 18 ವರ್ಷದ ಬಾಲಕಿಯವರಿಗೂ ಪ್ರೌಢ ಕಿಶೋರಿಯರ ಯೋಜನೆ ವಿಸ್ತರಿಸಬೇಕು. ಶಾಲೆಗಳಿಗೆ ನೀಡುವ ವಾರ್ಷಿಕ ಅನುದಾನವನ್ನು ಹೆಚ್ಚುಗೊಳಿಸಬೇಕು. ಸಣ್ಣ ಶಾಲೆಗಳಿಗೆ ರೂ.20 ಸಾವಿರದಿಂದ ರೂ.2 ಲಕ್ಷ ನೀಡಬೇಕು ಎಂದು ಹೇಳಲಾಗಿದೆ.

ಅಪೌಷ್ಟಿಕತೆಯಿಂದ ಬಳಲಿ ತಿಂಗಳಿನಿಂದ 3 ವರ್ಷದ ವಾರಕ್ಕೆ ಐದು ದಿನಗಳು ಮೊಟ್ಟೆ ಕೊಡಬೇಕು., ಇತರೆ ಮಕ್ಕಳಿಗೂ ಎರಡು ದಿನ ಮೊಟ್ಟೆ ಕೊಡಬೇಕು.

ಕ್ರೀಡಾ ಚಟಟುವಟಿಕೆ ಅಸಂಘಟಿತ ಕಾರ್ಮಿಕರಿಗೆ ವರ್ಗಗಳ ಅಭಿವೃದ್ಧಿಗೆ ವರ್ಗಗಳ ಅಭಿವೃದ್ಧಿಗೆ ಸಂಸ್ಥೆಗಳಿಂದ ಸೆಸ್ ಸಂಗ್ರಹಿಸಿ ವಿವಿಧ ಶುಲ್ಕಗಳನ್ನು ಪರಿಷ್ಕರಿಸಿದ್ದು ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮಸೂದೆ ತ್ವರಿತವಾಗಿ ಅಂತಿಮಗೊಳಿಸಬೇಕು. ಉತ್ಪನ್ನಗಳ ಮಾರುಕಟ್ಟೆಯ ಮಾರಾಟಕ್ಕೆ ಶುಲ್ಕ ವಿಧಿಸಿ ಪರವಾನಗಿ ಕಡ್ಡಾಯ ಮಾಡಿ ನಿರಂತರ ಸುಧಾರಣಾ ಕ್ರಮ ತೆಗೆದುಕೊಳ್ಳಲು ಪ್ರತಿ ಕಛೇರಿಗೆ ಕಾರ್ಯ ಸುಧಾರಣಾ ಸಮಿತಿ ರಚಿಸಬೇಕು ಎಂದು ವಿವರಿಸಲಾಗಿದೆ.

ಜಲ ಸಂಪನ್ಮೂಲ ಸಚಿವ ಕಾರಜೋಳ, ರಾಜ್ಯ ಸರ್ಕಾರದ ಕಾರ್ಯದರ್ಶಿ ವಂದಿತಾ ಗೃಹ ಇಲಾಖೆ ರಜನೀಶ್ ಗೋಯಲ್ ಆಯೋಗದ ಸಲಹೆಗಾರ ಕುಮಾರ್ ಉಪಸ್ಥಿತರಿದ್ದರು.

ವೈದ್ಯ:ಶೇ 10ರಷ್ಟು ಎನ್‌ಆರ್‌ಐ ಕೋಟಾ: ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾದ ಸೀಟುಗಳನ್ನು ಶೇ.5 ರಿಂದ 10 ರಷ್ಟು ಹೆಚ್ಚಳ ಮಾಡಬೇಕು ಎಂದು ಆಯೋಗ ವರದಿ ಹೇಳಿದೆ.

ಹರಿಯಾಣ, ರಾಜಸ್ಥಾನ, ಹಿಮಾಚಲ ಪ್ರದೇಶ, ಪಂಜಾಬ್, ಪುದುಚೇರಿ ರಾಜ್ಯಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾವನ್ನು ಒದಗಿಸುತ್ತಿವೆ. ರಾಜ್ಯದಲ್ಲೂ ಸೀಟುಗಳ ಸಂಖ್ಯೆ ಹೆಚ್ಚಿಸಬೇಕು. ಹೆಚ್ಚಿನ ಶುಲ್ಕ ವಿಧಿಸಬೇಕು. ಸಂಗ್ರಹವಾದ ಹಣವನ್ನು ಸರ್ಕಾರಿ ಆಸ್ಪತ್ರೆಗಳ ಅಭಿವೃದ್ಧಿಗೆ ಬಳಸಬೇಕು ಎಂದು ಸಲಹೆ ನೀಡಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:04.02.2023.

21. ಕೆಳಹಂತಕ್ಕೆ ಬಲ ನೀಡಿ

ಸರ್ಕಾರಿ ಗ್ರಾಮೀಣ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪದವಿ ಪ್ರವೇಶಕ್ಕೆ 7.5ಶೇ. ಮೀಸಲಾತಿ, ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸಲು ಸರ್ಕಾರಿ ಶಾಲೆಗಳ ವಿಲೀನ ಕೆಪಿಎಸ್‌ಸಿ ಸದಸ್ಯರ ಸಂಖ್ಯೆ ಕಡಿತಗೊಳಿಸುವುದು ಸೇರಿದಂತೆ ಹಲವು ಮಹತ್ವದ ಸಲಹೆ ಶಿಫಾರಸ್ಸುಗಳನ್ನು ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ನೇತೃತ್ವದ ಎರಡನೇ ಆಡಳಿತ ಸುಧಾರಣಾ ಆಯೋಗ ಸರ್ಕಾರದ ಮುಂದಿಟ್ಟಿದೆ.

ಮುಖ್ಯಮಂತ್ರಿಯವರ ಅಧಿಕೃತ ನಿವಾಸ ರೇಸ್‌ವ್ಯೂ ಕಾಟೇಜ್‌ನಲ್ಲಿ ಮುಖ್ಯಮಂತ್ರಿಯವರನ್ನು ನಿಯೋಗದೊಂದಿಗೆ ಭೇಟಿ ಮಾಡಿದ ಆಯೋಗದ ಅಧ್ಯಕ್ಷ ವಿಜಯಭಾಸ್ಕರ್, ಆಡಳಿತ ಸಾಮರ್ಥ್ಯ ಸುಧಾರಣೆ, ಕಾರ್ಯವಿಧಾನ ಸರಳೀಕರಣ, ಪರಿಣಾಮಕಾರಿ ಅನುಷ್ಠಾನಕ್ಕಾಗಿ ಆಯೋಗ ಸಿದ್ಧಪಡಿಸಿರುವ ಶಿಫಾರಸ್ಸುಗಳನ್ನು ಒಳಗೊಂಡು 4 ಮತ್ತು 5ನೇ ವರದಿಗಳನ್ನು ಸಲ್ಲಿಸಿದರು. ಮೊದಲ ಮೂರೂ ವರದಿಗಳಲ್ಲಿ ಆಡಳಿತ ಇಲಾಖೆಗಳು ರಾಜ್ಯಮಟ್ಟದಲ್ಲಿ ಕೈಗೊಳ್ಳಬೇಕಾದ ಸುಧಾರಣೆ, ಕಡತ ವಿಲೇವಾರಿ ಹಂತ ಇನ್ನಿತರ ಕ್ರಮಗಳಿಗೆ ಒತ್ತು ನೀಡಿದ್ದರು. 4 ಮತ್ತು 5ನೇ ವರದಿಯಲ್ಲಿ ಮುಂಚೂಣಿ ಸಂಸ್ಥೆಗಳಲ್ಲಿ ನಾಗರಿಕ ಸೇವೆ ಸುಧಾರಣೆ ಒಳಗೊಂಡ ಹಲವು ಮಹತ್ವದ ಶಿಫಾರಸ್ಸು ಮಾಡಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸಬಲಗೊಳಿಸಿ ಹಲವು ಅಧಿಕಾರಿಗಳ ಪ್ರತ್ಯಾಯೋಜನೆಗೆ ಆಯೋಗ ಸೂಚಿಸಿದೆ. ಗ್ರೂಪ್ ಸಿ ಮತ್ತು ಡಿ ವೃಂದ ಸಿಬ್ಬಂದಿ ನೇಮಕ ಅಧಿಕಾರ, ಸೇವಾ ವಿಷಯಗಳ ಇತ್ಯರ್ಥ ಮುಂತಾದ ಅಧಿಕಾರಿಗಳನ್ನು ನೀಡಲು ಎಲ್ಲ ಇಲಾಖೆಗಳ ಕಾಯ್ದೆಗಳಿಗೆ ತಿದ್ದುಪಡಿ ಮಾಡಲು ತಿಳಿಸಿವೆ.

ಶಾಲೆಗಳ ವಿಲೀನ: 3,457 ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲೆಗಳನ್ನು 1,667 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಲೀನಗೊಳಿಸಬಹುದು. ಅಲ್ಲದೆ, 2,460 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು 1,135 ಸಂಯುಕ್ತ/ ಕ್ಲಸ್ಟರ್ ಪ್ರೌಢಶಾಲೆ ಅಥವಾ ಪಬ್ಲಿಕ್

ಸ್ಕೂಲ್‌ಗಳಾಗಿ ವಿಲೀನ 879 ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು 359 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಾಗಿ ವಿಲೀನ ಮಾಡಲು ಸಲಹೆ ಇದೆ.

ಮೊಟ್ಟೆ ಹೆಚ್ಚಳ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ ವಿಭಜಿಸಿ ಪ್ರತ್ಯೇಕ ಮಹಿಳಾ ಸಬಲೀಕರಣ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ ಸ್ಥಾಪನೆ. ಅಪೌಷ್ಟಿಕತೆ ಹೆಚ್ಚಿರುವ ಮಕ್ಕಳಿಗೆ ವಾರದಲ್ಲಿ ಎರಡು ಬದಲು ಐದು ಮೊಟ್ಟೆಗೆ ಹೆಚ್ಚಿಸಬೇಕು. ಸಾಮಾನ್ಯ ಮಕ್ಕಳಿಗೆ ಎರಡು ಮೊಟ್ಟೆ ವಿತರಿಸಬೇಕು ಎಂದು ಹೇಳಿದೆ.

ಪಶು ಚಿಕಿತ್ಸಾಲಯಗಳ ಸ್ಥಳಾಂತರ: 25 ಜಿಲ್ಲೆಗಳಲ್ಲಿ 737 ಹೆಚ್ಚುವರಿ ಚಿಕಿತ್ಸಾಲಯಗಳಿವೆ. ಈ ಪೈಕಿ 154 ಪಶು ಚಿಕಿತ್ಸಾಲಯಗಳನ್ನು ಕೊರತೆಯಿರುವ ಬೆಳಗಾವಿ, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸ್ಥಳಾಂತರ ಮಾಡಬಹುದು ಎಂದು ವರದಿ ಹೇಳಿದೆ.

30 ಉಪ ಆಯುಕ್ತ ಹುದ್ದೆ ಸೃಜನೆ: ಬಿಬಿಎಂಪಿಯ 30 ಕಂದಾಯ ವಿಭಾಗಗಳ ವಿಕೇಂದ್ರೀಕರಣ, ಹೆಚ್ಚಿನ ಸಮನ್ವಯ ಸಾಧಿಸಲು ಗ್ರೂಪ್–ಎ ಹಿರಿಯ ಶ್ರೇಣಿಯ 30 ಉಪ ಆಯುಕ್ತರ ಹುದ್ದೆಗಳ ಸೃಜನೆಗೆ ಆಯೋಗ ಸಲಹೆ ನೀಡಿದೆ. ಈ ಅಧಿಕಾರಿಗಳು ಕಾರ್ಯನಿರ್ವಾಹಣ ಇಂಜಿನಿಯರ್, ವಿಭಾಗೀಯ ಆರೋಗ್ಯಾಧಿಕಾರಿಗಳು ಮತ್ತಿತರ ಇಲಾಖೆಗಳು ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ. ಭಾಗಶ: ರಾಜ್ಯ ಸರ್ಕಾರದ ಮೂಲಕ, ಉಳಿದರ್ಧ ಬಿಬಿಎಂಪಿ ಕಂದಾಯ ಅಧಿಕಾರಿಗಳಿಗೆ ಬಡ್ತಿ ನೀಡಿ ಈ ಹುದ್ದೆಗಳನ್ನು ತುಂಬಬಹುದು ಎಂದು ವಿವರಿಸಿದೆ.

ಎಸ್.ಎಸ್.ಎಲ್.ಸಿ ಪಾಸ್‌ಗೆ ಉದಾರತೆ: ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟಾರೆ 210 ಅಂಕಗಳಿಸಿದವರನ್ನು ತೇರ್ಗಡೆ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಒಟ್ಟಾರೆ ಅಂಕ 210ಕ್ಕಿಂತ ಹೆಚ್ಚು ಗಳಿಸಿ ಯಾವುದಾದರೂ ಎರಡು ವಿಷಯದಲ್ಲಿ 35ಕ್ಕಿಂತ ಕಡಿಮೆ, 28ಕ್ಕಿಂತ ಹೆಚ್ಚು ಅಂಕಗಳಸಿದ್ದರೂ ತೇರ್ಗಡೆ ಮಾಡಲಾಗುತ್ತಿದೆ. ಈ ರೀತಿ ತೇರ್ಗಡೆಯ ಅಂಕ 28 ರಿಂದ 20ಕ್ಕೆ ಇಳಿಸಲು ಆಡಳಿತ ಸುಧಾರಣಾ ಆಯೋಗ ಶಿಫಾರಸ್ಸು ಮಾಡಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫೇಲ್ ಆಗುವವರು ಮದ್ಯೆದಲ್ಲೇ ಶಾಲೆ ತೊರೆಯುವವರ ಸಂಖ್ಯೆ ಹೆಚ್ಚಿರುವ ಹಿನ್ನಲೆಯಲ್ಲಿ ಪಾಸ್‌ಗೆ ಒಂದಿಷ್ಟು ಉದಾರತೆ ತೋರಿಸಿದರೆ ಫಲಿತಾಂಶ ಸುಧಾರಣೆಯಾಗಿ ಡ್ರಾಪ್‌ಔಟ್ ಕಡಿಮೆಯಾಗಲಿದೆ ಎಂದು ಸಲಹೆ ನೀಡಿದೆ. ಈ ರೀತಿಯ ಶಿಫಾರಸ್ಸು ಮಡುವುದಕ್ಕೂ ಮುನ್ನ ಸಚಿವ ಬಿ.ಸಿ. ನಾಗೇಶ್ ಜೊತೆಗೂ ಆಯೋಗದ ಅಧ್ಯಕ್ಷ ವಿಜಯಭಾಸ್ಕರ್ ಚರ್ಚೆ ನಡೆಸಿದ್ದರು.

ಗ್ರಾಮೀಣ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ವೈದ್ಯ ಸೀಟು: ಪದವಿ ವೈದ್ಯಕೀಯ ಪ್ರವೇಶಕ್ಕೆ ಶೇಕಡ 7.5 ಸೀಟುಗಳನ್ನು ಗ್ರಾಮೀಣ ಸರ್ಕಾರಿ ಶಾಳೆಗಳಲ್ಲಿ ಓದಿದ ವಿದ್ಯಾರ್ಥಿಗಳಿಗೆ ಮೀಸಲಿಡುವಂತೆ ಶಿಫಾರಸ್ಸು ಮಾಡಲಾಗಿದೆ. ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಗ್ರಾಮೀಣ ಸೇವೆ ಸಲ್ಲಿಸಿದ ವೈದ್ಯರಿಗೆ ಗರಿಷ್ಠ 30 ಕೃಪಾಂಕ ಪರಿಗಣಿಸಲು ಸಲಹೆ ಮಾಡಿದೆ. ಕೆಲಸದ ಹೊರೆ ಹೊಂದಿರುವ 100 ಹಾಸಿಗೆ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆಗಳಲ್ಲಿ ಜಿಎನ್‌ಎಂ ಅಥವಾ ಬಿಎಸ್‌ಸಿ ನರ್ಸಿಂಗ್ 20 ಸೀಟುಗಳೊಂದಿಗೆ ಕೋರ್ಸ್ ಕಾಲೇಜು ಸ್ಥಾಪನೆ. 10 ಸೀಟುಗಳ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭಿಸುವುದು. ತಾಲ್ಲೂಕು, ಜಿಲ್ಲಾಸ್ಪತ್ರೆಗಳಲ್ಲೊ ವ್ಯವಸ್ಥಾಪಕರ ನೇಮಕ, ಆಸ್ಪತ್ರೆ ಮ್ಯಾನೇಜ್‌ಮೆಂಟ್ ವ್ಯಾಸಂಗ ಮಾಡಿದವರಿಗೆ ಅವಕಾಶ. ವೈದ್ಯಕೀಯ ಸ್ನಾತಕೊತ್ತರ ಸರ್ಕಾರಿ ವೈದ್ಯರ ಖಾಸಗಿ ವೃತ್ತಿ ನಿಷೇಧ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆ ಹೊರರೋಗಿಗಳ ವಿಭಾಗ ಪ್ರಾರಂಭ ಇತರ ಪ್ರಮುಖ ಶಿಫಾರಸ್ಸುಗಳಾಗಿವೆ.

ಕೆ.ಪಿಎಸ್‌ಸಿ ಸದಸ್ಯ ಬಲ ಇಳಿಕೆ: ಉತ್ತರ ಪ್ರದೇಶ ಸೇರಿ ಇತರ ರಾಜ್ಯಗಳಲ್ಲಿ ಲೋಕಸೇವಾ ಆಯೋಗದ ಸದಸ್ಯರ ಸಂಖ್ಯೆ ಎಂಟು ಅಥವಾ ಅದಕ್ಕಿಂತ ಕಡಿಮೆಯಿದೆ. ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದ ಅಧ್ಯಕ್ಷ ಸೇರಿ ಸದಸ್ಯಬಲವನ್ನು 14 ರಿಂದ ಎಂಟಕ್ಕೆ ಇಳಿಸಲು ಶೀಫಾರಸ್ಸು ಮಾಡಿದೆ.

ಪ್ರಮುಖ ಅಂಶಗಳು:

- ಕೌಶಲ್ಯ ಮಿಷನ್‌ನಡಿ ಸಿಬ್ಬಂದಿ, ಸವಲತ್ತು ಸಹಿತ ಉದ್ಯೋಗ ಸೇವಾ ಇಲಾಖೆಯಲ್ಲಿ ವಿಲೀನ, ಕೈಗಾರಿಕಾ ತರಬೇತಿ ಇಲಾಖೆ ಎಂದು ಮರು ನಾಮಕರಣ.
- ಸಹಕಾರ ಚುನಾವಣಾ ಪ್ರಾಧಿಕಾರ ರದ್ದು, ಹಿಂದಿನಂತೆ ಅಪರ ನಿಬಂಧಕರ ನೇತೃತ್ವದಲ್ಲಿ ಪ್ರತ್ಯೇಕ ಚುನಾವಣಾ ಕೋಶ ಸೃಜನೆ.
- ಸಹಕಾರ ಸಂಸ್ಥೆಗಳಲ್ಲಿ ಗಂಭೀರ ವಂಚನೆ ತಡೆಗೆ ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಅಧೀನದಲ್ಲಿ ಗಂಭೀರ ವಂಚನೆ ತನಿಖಾಧಿಕಾರಿ ನೇಮಕಕ್ಕೆ ಕಾಯ್ದೆಗೆ ತಿದ್ದುಪಡಿ.
- ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕರಡು ಮಸೂದೆ–2020 ಅನ್ನು ತ್ವರಿತವಾಗಿ ಅಂತಿಮಗೊಳಿಸುವುದು.
- ಸ್ವತ್ತುಗಳ ಮೋಸ ನೋಂದಣಿಯಲ್ಲಿ ವಂಚನೆಯಿಂದ ಬಾಧಿತರಿಗೆ ಪರಿಹಾರ ಸಿವಿಲ್ ಕೋರ್ಟ್‌ಗಳ ಮೇಲಿನ ಹೊರೆ ತಗ್ಗಿಸಲು 1908ರ ನೋಂದಣಿ ಕಾಯ್ದೆಗೆ ತಿದ್ದುಪಡಿಯನ್ನು ಕಂದಾಯ ಇಲಾಖೆ ಪ್ರಸ್ತಾಪಿಸಬಹುದು.
- ಅಮೆರಿಕ, ನ್ಯೂಜಿಲೆಂಡ್, ಕೆನಡಾ ಇನ್ನಿತರ ದೇಶಗಳ ಮಾದರಿಯಲ್ಲಿ ಇ–ಆಡಳಿತ ಇಲಾಖೆಯಲ್ಲಿ ಮುಖ್ಯ ತಂತ್ರಜ್ಞಾನ ಅಧಿಕಾರಿ ಹುದ್ದೆ ಸೃಜನೆ.
- ತೋಟಗಾರಿಕೆ ಇಲಾಖೆಯಲ್ಲಿ ಕೊಯ್ಲೋತ್ತರ ಕೋಶ ಸ್ಥಾಪನೆ.
- ರಾಜ್ಯ ಸಾರ್ವಜನಿಕ ಉದ್ದಿಮೆಗಳಲ್ಲಿ ಅಪ್ರಂಟಿಶಿಪ್ ಹುದ್ದೆಗಳ ಪ್ರಮಾಣ ಶೇ.15ರಷ್ಟು ಹೆಚ್ಚಳ.
- ಗ್ರಾಮೀಣ ವ್ಯಾಸಂಗ, ಹೈ–ಕ. ಅರ್ಹತಾ, ಕನ್ನಡ ಮಾಧ್ಯಮ ಪ್ರಮಾಣಪತ್ರಗಳನ್ನು ಜೀವಿತಾವಧಿ ಅಥವಾ ಸಿಂಧುತ್ವ ರದ್ದುಗೊಳಿಸುವ ತನಕ ವಿಸ್ತರಣೆ

ಪ್ರತಿ ಸರ್ಕಾರಿ ಕಚೇರಿಯಲ್ಲಿ ಕಾರ್ಯಸುಧಾರಣಾ ತಂಡ: ನಿರಂತರ ಸುಧಾರಣಾ ಕ್ರಮಗಳಿಗಾಗಿ ಪ್ರತಿ ಸರ್ಕಾರಿ ಕಚೇರಿಯಲ್ಲಿ ಕಾರ್ಯ ಸುಧಾರಣಾ ತಂಡಗಳನ್ನು ರಚಿಸುವುದು. ರೈತ ಸಂಪರ್ಕ ಕೇಂದ್ರದಲ್ಲಿ ಚುನಾಯಿತ ಪ್ರತಿನಿಧಿಗಳು, ಪ್ರಗತಿಪರ ಪುರಸ್ಕೃತ ರೈತರು, ಕಂದಾಯ, ತೋಟಗಾರಿಕೆ, ಸಂಪರ್ಕ ವಿಜ್ಞಾನಿಗಳು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ರೈತ ಸಲಹಾ ಸಮಿತಿ ಸ್ಥಾಪನೆ.

ಆಧಾರ:ವಿಜಯವಾಣಿ, ದಿನಾಂಕ:04.02.2023.

22. ರಾಜ್ಯಕ್ಕೆ ರೈಲ್ವೆ ಬಂಪರ್

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಈ ಬಾರಿ ರಾಜ್ಯದ ರೈಲ್ವೆ ಯೋಜನೆಗಳಿಗೆ ಬಂಪರ್ ಅನುದಾನ ದೊರೆತಿದ್ದು, ಒಟ್ಟು ರೂ.7561 ಕೋಟಿಗಳ ನೆರವು ಲಭಿಸಿದೆ. ಇದು ಈ ಹಿಂದೆ ಯಾವುದೇ ಒಂದು ವರ್ಷದಲ್ಲಿ ರಾಜ್ಯಕ್ಕೆ ದೊರೆತ ಅನುದಾನದಲ್ಲಿ ಅತ್ಯಂತ ಗರಿಷ್ಠ ಮೊತ್ತವಾಗಿದೆ.

ನೈಋತ್ಯ ರೈಲ್ವೆ ವಲಯಕ್ಕೆ ಈ ಬಾರಿ ರೂ.9200 ಕೋಟಿ ನೆರವು ನೀಡಲಾಗಿದೆ. ಅದರಲ್ಲಿ ಕರ್ನಾಟಕವೊಂದಕ್ಕೆ ರೂ.7561 ಕೋಟಿ ದೊರೆತಿದೆ. ಇನ್ನುಳಿದ ಮೊತ್ತ ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರಕ್ಕೆ ಲಭಿಸಿದೆ. ಬಹು ಬೇಡಿಕೆಯ ಹತ್ತು ಮಾರ್ಗಗಳ ಕಾಮಗಾರಿ, ವಿದ್ಯುಧೀಕರಣ, ನಿಲ್ದಾಣಗಳ ಮೇಲ್ದರ್ಜೆಗೇರಿಸುವುದು, ಜೋಡಿಮಾರ್ಗ (ಡಬ್ಲಿಂಗ್) ಯೋಜನೆಗಳು ಈ ಬಾರಿ ರಾಜ್ಯಕ್ಕೆ ಲಭಿಸಿವೆ. ಆದರೆ, ಹೊಸದಾಗಿ ಯಾವುದೇ ಹೊಸ ಮಾರ್ಗಗಳನ್ನು ಘೋಷಣೆ ಮಾಡಿಲ್ಲ.

ದಾಖಲೆ ಆದಾಯ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೈಋತ್ಯ ರೈಲ್ವೆವಲಯ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್, 2022ರಲ್ಲಿ ನೈಋತ್ಯ ರೈಲ್ವೆ ಸಾರ್ವಕಾಲಿಕ ಆದಾಯ ದಾಖಲೆ ಬರೆದಿದೆ. ಈ ಅವಧಿಯಲ್ಲಿ ರೂ.5,680 ಕೋಟಿ ಆದಾಯ ಗಳಿಸಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಆದಾಯ ಗಳಿಕೆಯಲ್ಲಿ 29% ಹೆಚ್ಚಾಗಿದೆ ಎಂದರು.

ಹೊಸ ಮಾರ್ಗ: ಈಗಾಗಲೇ ಘೋಷಣೆಯಾದ ಹೊಸ ಮಾರ್ಗಗಳಿಗೆ ಒಟ್ಟಾರೆ ರೂ.2,423 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ಕರ್ನಾಟಕಕ್ಕೆ ರೂ.1,408 ಕೋಟಿ ದೊರೆತಿದೆ. ರೂ.865 ಕೋಟಿಗಳನ್ನು ಮುಂದೆ ಘೋಷಣೆಯಾಗುವ ಹೊಸ ಮಾರ್ಗಕ್ಕೆ ಮೀಸಲಿಡಲಾಗುವುದು ಎಂದರು.

ನಿಲ್ದಾಣ ಮೇಲ್ದರ್ಜೆಗೆ: ಈ ಬಾರಿ ಅಮೃತ್ ಭಾರತ ಯೋಜನೆಯಡಿ ರಾಜ್ಯದ ಹುಬ್ಬಳ್ಳಿ, ಧಾರವಾಡ, ಚಾಮರಾಜನಗರ, ಹರಿಹರ, ಹಾಸನ, ಶಿವಮೊಗ್ಗ ಸೇರಿ 52 ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಕೈಗೊಳ್ಳಲಾಗುವುದು. ಅದರಲ್ಲಿ ಈಗಾಗಲೇ ಯಶವಂತಪುರ ಹಾಗೂ ಬೆಂಗಳೂರು ದಂಡು ರೈಲ್ವೆ ನಿಲ್ದಾಣವನ್ನು ಆದ್ಯತೆ ಮೇರೆಗೆ ಹೈ ಟೆಕ್ ಮಾಡಲಾಗುತ್ತಿದೆ. ಆತ್ಯಾಧುನಿಕ ಸೌಕರ್ಯ ಹಾಗೂ ತಂತ್ರಜ್ಞಾನಗಳೊಂದಿಗೆ ಈ ನಿಲ್ದಾಣಗಳು ತಲೆ ಎತ್ತಲಿವೆ ಎಂದು ತಿಳಿಸಿದರು.

ಜೋಡಿ ಮಾರ್ಗ: ಜೋಡಿ ಮಾರ್ಗಕ್ಕಾಗಿ ರೂ.1,529 ಕೋಟಿ, ವಿದ್ಯುಧೀಕರಣಕ್ಕಾಗಿ ರೂ.793.3 ಕೋಟಿ ಮೀಸಲಿದ್ದು, ಈಗಾಗಲೇ ನೈರುತ್ಯ ವಲಯ ಮಾರ್ಗದಲ್ಲಿ 2,243 ಕಿ.ಮಿ. ನಷ್ಟು ವಿದ್ಯುಧೀಕರಣ ಪೂರ್ಣಗೊಂಡಿದೆ.

ಜೊತೆಗೆ 44 ಹೊಸ ಮಾರ್ಗಗಳ ಯೋಜನೆ ಸಮೀಕ್ಷೆಗಾಗಿ ರೂ.10ಕೋಟಿ ಮೀಸಲಾಗಿದೆ. ಸಂಚಾರಿ ವ್ಯವಸ್ಥೆ ಸುಧಾರಣೆಗೆ ರೂ.100 ಕೋಟಿ ರಸ್ತೆ ಮೇಲ್ಸೇತುವೆ ಹಾಗೂ ಕೆಳಸೇತುವೆಗಳ ನಿರ್ಮಾಣಕ್ಕಾಗಿ ರೂ.242 ಕೋಟಿ ಮೀಸಲಿಡಲಾಗಿದೆ. ದಕ್ಷಿಣ ರೈಲ್ವೆಯ ಮಂಗಳೂರು ವಿಭಾಗಕ್ಕೆ ಕೆಳ ಸೇತುವೆ ರಚನೆ, ಸಂಪರ್ಕ ರಸ್ತೆ, ಸೇತುವೆಗಳಿಗೆ ಈ ಬಾರಿ ರೂ.29.74 ಕೋಟಿ ರೂಪಾಯಿ ಮಾತ್ರ ಲಭಿಸಿದೆ. ಮಧ್ಯ ರೈಲ್ವೆಯ ಕಲಬುರಗಿ ವಿಭಾಗಕ್ಕೆ ರೂ.1,000 ಲಕ್ಷ ದೊರೆತಿದೆ ಎಂದರು.

ಬೆಂಗಳೂರಿನಲ್ಲಿ ವಂದೇ ಮೆಟ್ರೋ: ವಂದೇ ಭಾರತ್ ರೈಲಿನಂತೆ ವಂದೇ ಮೆಟ್ರೋ ಕೂಡ ಬೆಂಗಳೂರಿನಲ್ಲಿ ಆರಂಭವಾಗಲಿದೆ. ಇನ್ನು ರಾಜ್ಯದ ಹಲವು ಕಡೆಗಳಲ್ಲಿ ಹೊಸ ರೈಲು ಮಾರ್ಗಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರದ ಜೊತೆ ಚರ್ಚೆ ಮಾಡಿ ಭೂಸ್ವಾಧೀನ ಪ್ರಕ್ರಿಯೆ ನಡೆಯಲಿದೆ. ಇನ್ನು ರೂ.50 ಸಾವಿರ ಜನಸಂಖ್ಯೆ ಇರುವ ನಗರಕ್ಕೆ ಹೊಸದಾಗಿ ರೈಲ್ವೆ ಸಂಪರ್ಕ ಕಲ್ಪಿಸಲು ಒಟ್ಟಾರೆ ರೂ.60 ಸಾವಿರ ಕೋಟಿ ಐಷಾರಾಮಿ ನಿಲ್ದಾಣಗಳ ನಿರ್ಮಾಣಕ್ಕೆ ರೂ.30 ಸಾವಿರ ಕೋಟಿ ಮೀಸಲಾಗಿದ್ದು ನೈಋತ್ಯ ರೈಲ್ವೆಗೆ ಮುಂದೆ ಮೊತ್ತ ಮಂಜೂರಾಗಲಿದೆ.

ವಿದ್ಯುಧೀಕರಣಕ್ಕೆ ಹಣ	**ಕೋಟಿ ರೂಪಾಯಿಗಳಲ್ಲಿ**
ಗದಗ–ಹೊಟಗಿ	110
ಚಿಕ್ಕಬಾಣಾವರ–ಹುಬ್ಬಳ್ಳಿ	128
ಬಿರೂರು–ತಾಳಗುಪ್ಪ	56
ಹಾಸನ–ಮಂಗಳೂರು	134
ಮೀರಜ್–ಲೋಂಡಾ	182
ಹೊಸಪೇಟೆ–ಹುಬ್ಬಳ್ಳಿ–ವಾಸ್ಕೋಡಗಾಮಾ	20
ಚಿಕ್ಕಬಾಣಾವರ–ಹಾಸನ	77

ಅವಧಿ	ರಾಜ್ಯಕ್ಕೆ ದೊರೆತ ಸರಾಸರಿ ಅನುದಾನ
2009–14	835 ಕೋಟಿ
2014–22	3424 ಕೋಟಿ
2023–24	7561 ಕೋಟಿ

10 ಮಾರ್ಗಗಳ ಕಾಮಗಾರಿ	ಕೋಟಿ ರೂಪಾಯಿಗಳಲ್ಲಿ
ಗದಗ (ತಳಕಲ್) – ವಾಡಿ	350
ಗಿಣಿಗೇರಾ – ರಾಯಚೂರು	300
ತುಮಕೂರು–ದಾವಣಗೆರೆ (ಚಿತ್ರದುರ್ಗ ಮಾರ್ಗ)	420.85
ತುಮಕೂರು –ರಾಯದುರ್ಗ (ಕಲ್ಯಾಣದುರ್ಗ ಮಾರ್ಗ)	350
ಬಾಗಲಕೋಟಿ – ಕುಡಚಿ	360
ಶಿವಮೊಗ್ಗ – ಶಿಕಾರಿಪುರ–ರಾಣಿಬೆನ್ನೂರ	150
ಬೆಳಗಾವಿ–ಧಾರವಾಡ (ಕಿತ್ತೂರ ಮಾರ್ಗ)	10
ಮಾರಿಕುಪ್ಪಮ್ – ಕುಪ್ಪಮ್	200
ಕಡೂರು – ಚಿಕ್ಕಮಗಳೂರು–ಹಾಸನ	145
ಮಳಗೂರ–ಪಾಲಸಮುದ್ರಮ್	20

2014ಕ್ಕಿಂತ ಈ ಬಾಕಿ 9 ಪಟ್ಟು ಹೆಚ್ಚು ಹಣ: 2009–14ರ ಅವಧಿಯಲ್ಲಿ ಕರ್ನಾಟಕಕ್ಕೆ ಕೇವಲ ಸರಾಸರಿ ರೂ.835 ಕೋಟಿ ಅನುದಾನ ಸಿಕ್ಕಿತ್ತು. ಅದಕ್ಕೆ ಹೋಲಿಸಿದರೆ 9 ಪಟ್ಟು ಹೆಚ್ಚು ಅಂದರೆ, ರೂ.7562 ಕೋಟಿ ಅನುದಾನ ಈ ವರ್ಷ ಪ್ರಧಾನಿ ನರೇಂದ್ರ ಮೋದಿಯವರಿಂದ ಈ ಬಾರಿ ಕರ್ನಾಟಕಕ್ಕೆ ಲಭಿಸಿದೆ.

ಅಶ್ವಿನಿ ವೈಷ್ಣವ್, ರೈಲ್ವೆ ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವ

ಡಬ್ಲಿಂಗ್ ಯೋಜನೆ	ಕೋಟಿ ರೂಪಾಯಿಗಳಲ್ಲಿ
ಗದಗ – ಹೊಟಗಿ	170
ಪೆನುಕೊಂಡ–ಧರ್ಮಾವರಂ	120
ಬೈಯ್ಯಪ್ಪನಹಳ್ಳಿ– ಹೊಸೂರು	100
ಯಶವಂತಪುರ–ಚನ್ನಸಂದ್ರ	85
ಲೋಂಡಾ–ಮೀರಜ್	200
ಹುಬ್ಬಳ್ಳಿ–ಚಿಕ್ಕಜಾಜೂರು	150
ಬೆಂಗಳೂರು ಕಂಟೋನ್ಮೆಂಟ್–ವೈಟ್‌ಫೀಲ್ಡ್	250
ಹೊಸಪೇಟೆ–ತಿನೈಘಾಟ್–ವಾಸ್ಕೋಡಗಾಮಾ	400
ಕಡೂರು–ಚಿಕ್ಕಮಗಳೂರು–ಹಾಸನ	145
ಮಳಗೂರ–ಪಾಲಸಮುದ್ರಮ್	20

ಆಧಾರ:ಕನ್ನಡಪ್ರಭ, ದಿನಾಂಕ:04.02.2023.

23. ಚುನಾವಣೆಗೆ ರೂ.500 ಕೋಟಿ ವೆಚ್ಚ

ಸರ್ಕಾರ ಮುಂಬರುವ ವಿಧಾನಸಭೆ ಚುನಾವಣೆಗೆ ಬರೋಬರಿ ರೂ.500 ಕೋಟಿ ಬೇಕು. ಅಂದರೆ, ವಿಧಾನಸೌಧಕ್ಕೆ 224 ಶಾಸಕರನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಚುನಾವಣಾ ಆಯೋಗ ತಲಾ ರೂ.2 ಕೋಟಿ ವೆಚ್ಚ ಮಾಡಬೇಕಾಗುತ್ತದೆ.

ಕಳೆದ ವಿಧಾನಸಭೆ ಚುನಾವಣೆಗೆ ಸುಮಾರೂ ರೂ.394 ಕೋಟಿ ವೆಚ್ಚವಾಗಿತ್ತು. ಈಗ ವಾರ್ಷಿಕ ಹಣದುಬ್ಬರ, ಬೆಲೆ ಏರಿಕೆ ಇತ್ಯಾದಿ ಕಾರಣಗಳಿಂದಾಗಿ ಈ ಭಾರಿಯ ಚುನಾವಣೆಗೆ ರೂ.500 ಕೋಟಿ ಬೇಕಾಗಬಹುದು ಎಂದು ಚುನಾವಣಾ ಆಯೋಗ ಅಂದಾಜಿಸಿದೆ. ಇದು ಈವರೆಗಿನ ಅಂದಾಜು ಆಗಿದ್ದು 10 ರಿಂದ 12 ಕೋಟಿ ಹೆಚ್ಚಾಗಬಹುದು ಎನ್ನಲಾಗಿದೆ.

ಈಗಾಗಲೇ ರಾಜ್ಯ ಸರ್ಕಾರ ಪೂರಕ ಅಂದಾಜಿನಲ್ಲಿ ರೂ.300 ಕೋಟಿ ಬಿಡುಗಡೆ ಮಾಡಿದೆ. ಉಳಿದ ಹಣ ಮುಂದಿನ ಹಣಕಾಸು ವರ್ಷದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಮೂಲಗಳು ತಿಳಿಸಿವೆ.

ಪ್ರತಿ ಚುನಾವಣೆಗೆ ವೆಚ್ಚ ದುಪ್ಪಟ್ಟು ಆಗುತ್ತಲೇ ಇದೆ. 2013ರ ವಿಧಾನಸಭೆ ಚುನಾವಣೆಗೆ ಸುಮಾರು ರೂ.160 ಕೋಟಿ ವೆಚ್ಚವಾಗಿತ್ತು. 2018ರಲ್ಲಿ ರೂ.250 ಕೋಟಿ ಬೇಕಾಗಬಹುದು ಎಂದು ಅಂದಾಜಿಸಲಾಗಿತ್ತು. ಆದರೆ, ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಇವಿಎಂ ಜೊತೆಗೆ ವಿವಿಪ್ಯಾಟ್

ಬಳಕೆ ಮಾಡಿದ್ದರಿಂದ ವೆಚ್ಚ ರೂ.394 ಕೋಟಿಗೆ ತಲುಪಿತ್ತು. ಈಗ ರೂ.500 ಕೋಟಿ ಆಗಬಹುದು ಎಂದು ಅಂದಾಜಿಸಲಾಗಿದೆ.

ಯಾವುದಕ್ಕೆ ವೆಚ್ಚ: ಮತದಾರರ ಪಟ್ಟಿ ತಯಾರಿಕೆ, ಮುದ್ರಣ, ಎಪಿಕ್ ಕಾರ್ಡ್‌ಗಳ ಮುದ್ರಣ ಮತದಾರರ ಜಾಗೃತಿ ಕಾರ್ಯಕ್ರಮ, ಚುನಾವಣಾ ಸಿಬ್ಬಂದಿಗೆ ತರಬೇತಿ ಕರ್ತವ್ಯ ಭತ್ಯೆ, ಇವಿಎಂ ಹಾಗೂ ಇತರ ಚುನಾವಣಾ ಸಾಮಾಗ್ರಿಗಳ ಸಾಗಾಟ, ಚಕ್‌ಪೋಸ್ಟ್‌ಗಳ ನಿರ್ಮಾಣ ಮತಗಟ್ಟೆ ಸ್ಟ್ರಾಂಗ್ ರೂಂ ಹಾಗೂ ಮತ ಎಣಿಕೆ ಕೇಂದ್ರಗಳನ್ನು ಸಜ್ಜುಗೊಳಿಸುವುದು, ಚುನಾವಣಾ ನೀತಿ ಸಂಹಿತೆ.

ಯಾವುದಕ್ಕೆ ಹೆಚ್ಚು: ಚುನಾವಣೆಗೆ ತಗಲುವ ಒಟ್ಟು ವೆಚ್ಚದಲ್ಲಿ ಭದ್ರತಾ ವೆಚ್ಚ ಹಾಗೂ ಸಿವಿಲ್ ವೆಚ್ಚಕ್ಕೆ ಇಲಾಖೆಯಿಂದ ಮಾಡುವ ಭದ್ರತಾ ವ್ಯವಸ್ಥೆಗೆ ರೂ.100 ರಿಂದ 150 ಕೋಟಿ ರೂಪಾಯಿ ಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ನಿಯೋಜಿಸಲ್ಪಡುವ ಭದ್ರತಾ ಪಡೆಗಳ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಬೇಕಾಗುತ್ತದೆ. ಉಳಿದಂತೆ ಸಿವಿಲ್ ವೆಚ್ಚಗಳಾದ ಮತದಾರರ ಜಾಗೃತಿ ಕಾರ್ಯಕ್ರಮಗಳು, ಚುನಾವಣಾ ಸಿಬ್ಬಂದಿಗಳ ಮತ್ತು ವೀಕ್ಷಕರ ನಿಯೋಜನೆ ಹಾಗೂ ತರಬೇತಿ, ಮತಗಟ್ಟಗಳ ನಿರ್ಮಾಣ, ಮತದಾರರ ಪಟ್ಟಿಯ ಮುದ್ರಣ, ಗುರುತಿನಚೀಟಿ ಮುದ್ರಣ, ಚುನಾವಣಾ ಸಾಮಾಗ್ರಿಗಳ ಸಾಗಾಟಕ್ಕೆ ಒಟ್ಟು ವೆಚ್ಚದ ಶೇ.45 ರಿಂದ 50ರಷ್ಟು ಬೇಕಾಗುತ್ತದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಮೂಲಗಳು ತಿಳಿಸಿವೆ.

ಉಳಿದಂತೆ, ಚೆಕ್‌ಪೋಸ್ಟ್‌ಗಳ ನಿರ್ಮಾಣಕ್ಕೆ ಶೇ.10 ಮತ ಎಣಿಕೆ ಕೇಂದ್ರಗಳ ಸ್ಥಾಪನೆ, ಸ್ಟ್ರಾಂಗ್ ರೂಂಗಳ ನಿರ್ಮಾಣಕ್ಕೆ ಶೇ.30 ರಷ್ಟು, ಚುನಾವಣಾ ನೀತಿ ಸಂಹಿತಿ ಜಾರಿಗೆ ಶೇ.10ರಷ್ಟು ಬೇಕಾಗಬಹುದು ಎಂದು ಚುನಾವಣಾ ಆಯೋಗ ಅಂದಾಜು ಹಾಕಿಕೊಂಡಿದೆ. ಚುನಾವಣೆ ವೆಚ್ಚವು ಮತಗಟ್ಟೆಗಳ ಸಂಖ್ಯೆ ಏರಿಕೆಯನ್ನು ಆವಲಂಬಿಸಿರುತ್ತದೆ. ಮತದಾರರ ಸಂಖ್ಯೆ ಹೆಚ್ಚಾದರೆ ಮತಗಟ್ಟೆಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಆದರೆ, ಕಳೆದ ಬಾರಿಗಿಂತ ಮತಗಳ ಸಂಖ್ಯೆ ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಏರಿಕೆ ಆಗಿಲ್ಲ. ಆದರೂ ಸಿವಿಲ್ ವೆಚ್ಚ ಇದ್ದೇ ಇರುತ್ತದೆ ಎಂದು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಾರಿಯ ವಿಧಾನಸಭೆ ಚುನಾವಣೆಗೆ ಸುಮಾರು ರೂ.500 ಕೋಟಿ ವೆಚ್ಚಬರಬಹುದು. ಈಗಾಗಲೇ ಸರ್ಕಾರ ರೂ.300ಕೋಟಿ ಬಿಡುಗಡೆ ಮಾಡಿದೆ.

ಮನೋಜ್ ಕುಮಾರ್ ಮೀನಾ,

ರಾಜ್ಯ ಮುಖ್ಯ ಚುನಾವಣಾಧಿಕಾರಿ.

ಹೆಚ್ಚು ವೆಚ್ಚ ಯಾವುದಕ್ಕೆ:

- ರೂ.160 ಕೋಟಿ –2013ರ ವೆಚ್ಚ
- ರೂ.394 ಕೋಟಿ –2018ರಲ್ಲಿ ರಾಜ್ಯ ವಿಧಾನಸಭೆ ಚುನಾವಣೆಗೆ ತಗುಲಿದ್ದ ಒಟ್ಟು ವೆಚ್ಚ
- ರೂ.100–150 ಕೋಟಿ ಭದ್ರತಾ ಮತ್ತು ಸಿವಿಲ್ ವೆಚ್ಚ
- 45% ರಿಂದ 50% ಜಾಗೃತಿ ಕಾರ್ಯಕ್ರಮ ನಿಯೋಜನೆ, ತರಬೇತಿ ಮತಗಟ್ಟೆಗಳ ನಿರ್ಮಾಣ, ಮತದಾರರ ಪಟ್ಟಿಯ ಮುದ್ರಣ ವಗೈರೆ.
- 10% ಚೆಕ್‌ಪೊಸ್ಟ್ ನಿರ್ಮಾಣಕ್ಕೆ

- 30% ಸ್ಟಾಂಗ್ ರೂಂ ಮತ ಎಣಿಕೆ ಕೇಂದ್ರ ಸ್ಥಾಪನೆ
- 10% ನೀತಿ ಸಂಹಿತೆ ಜಾರಿ.

ಆಧಾರ:ಕನ್ನಡಪ್ರಭ, ದಿನಾಂಕ:05.02.2023.

24. ರಕ್ಷಣಾ ಕ್ಷೇತ್ರದಲ್ಲೂ ಸ್ವಾವಲಂಬನೆ

ರಕ್ಷಣಾ ಕ್ಷೇತ್ರದಲ್ಲೂ ದೇಶ ಸ್ವಾವಲಂಬನೆಯತ್ತ ಹೆಜ್ಜೆ ಹಾಕಿದ್ದು, ಮುಂದಿನ ದಿನಗಳಲ್ಲಿ ವಿದೇಶಗಳ ಅವಲಂಬನೆ ಕಡಿಮೆಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ಗುಬ್ಬಿ ತಾಲ್ಲೂಕಿನ ಬಿದರೆಹಳ್ಳ ಕಾವಲ್ ಬಳಿ ನಿರ್ಮಿಸಿರುವ ಎಚ್‌ಎಎಲ್ ಹೆಲಿಕಾಪ್ಟರ್ ತಯಾರಿಕೆ ಘಟಕವನ್ನು ದೇಶಕ್ಕೆ ಸಮರ್ಪಿಸಿ ಅವರು ಮಾತನಾಡಿದರು. ಹಿಂದಿನ ದಿನಗಳಲ್ಲಿ ಸೇನೆ ಮತ್ತು ರಕ್ಷಣಾ ಕ್ಷೇತ್ರಕ್ಕೆ ಬೇಕಾದ ಶೇ.90ರಷ್ಟು ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತಿತ್ತು. ಈಗ ಅದನ್ನು ಶೇ.60ರಷ್ಟಕ್ಕೆ ಇಳಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಮಾಣವನ್ನು ಮತ್ತಷ್ಟು ತಗ್ಗಿಸಲಾಗುವುದು. ವಿದೇಶಗಳ ಅವಲಂಬನೆ ಕಡಿಮೆ ಮಾಡಿ, ದೇಶದ ರಕ್ಷಣಾ ಕ್ಷೇತ್ರವನ್ನು ಸ್ವಾವಲಂಬಿ ಮಾಡುವುದೇ ನಮ್ಮ ಗುರಿ ಎಂದರು.

ರಫೇಲ್ ಯುದ್ಧ ವಿಮಾನ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪ ಮಾಡಿದರು. ಎಚ್‌ಎಎಲ್ ಮಾರಾಟ ಮಾಡಲಾಗುತ್ತಿದೆ ಎಂದು ಹುಯಿಲೆಬ್ಬಿಸಿದರು. ಹತ್ತು ಬಾರಿ ಸುಳ್ಳು ಹೇಳಿ, ನಿಜ ಮಾಡಲು ಹೊರಟವರಿಗೆ ಈಗ ಎಚ್‌ಎಎಎಲ್ ಘಟಕ ಸ್ಥಾಪಿಸಿ ಹೆಲಿಕಾಪ್ಟರ್ ತಯಾರಿಕೆ ಆರಂಭಿಸುವ ಮೂಲಕ ಉತ್ತರ ನೀಡಿದ್ದೇವೆ ಎಂದು ಪ್ರಧಾನಿ ಹೇಳಿದರು.

ಗುಬ್ಬಿ ಘಟಕದಲ್ಲಿ ದೊಡ್ಡಮಟ್ಟದಲ್ಲಿ ಹೆಲಿಕಾಪ್ಟರ್ ತಯಾರಿಸುವ ಮೂಲಕ ಟೀಕಾಕಾರರಿಗೆ ತಕ್ಕ ಉತ್ತರ ನೀಡಲಾಗುವುದು. ಎಲ್ಲವನ್ನೂ ಅಭಿವೃದ್ಧಿ ಮೂಲಕ ಟೀಕಾಕಾರರಿಗೆ ತಕ್ಕ ಉತ್ತರ ನೀಡಲಾಗುವುದು. ಎಲ್ಲವನ್ನೂ ಅಭಿವೃದ್ಧಿ ಮೂಲಕ ಮಾಡಿ ತೋರಿಸುತ್ತೇವೆ ಎಂದು ವಿರೋಧ ಪಕ್ಷಗಳಿಗೆ ಕುಟುಕಿದರು.

ರಾಜ್ಯದ ತಂತ್ರಜ್ಞರು ಎಂಜಿನಿಯರ್‌ಗಳು ತೇಜಸ್‌ನಂತಹ ಯುದ್ಧ ವಿಮಾನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇದು ದೇಶದ ಸೇನೆಯ ಆತ್ಮಬಲ ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ರೂ.4 ಲಕ್ಷ ಕೋಟಿ ವಹಿವಾಟು ನಡೆಸುವ ಸಂಸ್ಥೆಯನ್ನಾಗಿ ರೂಪಿಸಿ ಎಚ್‌ಎಎಲ್‌ಗೆ ಮತ್ತಷ್ಟು ಶಕ್ತಿ ತುಂಬಲಾಗುವುದು ಎಂದು ಅವರು ಭರವಸೆ ನೀಡಿದರು.

35 ನಿಮಿಷದ ಭಾಷಣದಲ್ಲಿ ದೇಶದ ಪ್ರಗತಿ ಕೇಂದ್ರ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಸ್ತಾಪಿಸುತ್ತಲೇ ವಿರೋಧಿಗಳನ್ನೂ ಟೀಕಿಸಿದರು. 'ಡಬಲ್ ಎಂಜಿನ್ ಸರ್ಕಾರ ಅಧಿಕಾರದಲ್ಲಿ ಇದ್ದರೆ ಪ್ರಗತಿ ಸಾಧ್ಯವಾಗಲಿದೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ನಿಮ್ಮ ಆಶೀರ್ವಾದ ನಮ್ಮ ಮೇಲೆ ಇರಬೇಕು' ಎಂದು ಕೇಳುತ್ತಲೇ ಮತಯಾಚನೆಯನ್ನೂ ಮಾಡಿದರು.

ಕರ್ನಾಟಕದ ಅಭಿವೃದ್ಧಿ ಮಾದರಿ ಗಮನಿಸಿದರೆ ಭಾರತ ಯಾವ ರೀತಿ ಪ್ರಗತಿ ಹೊಂದುತ್ತಿದೆ ಎಂದೂ ತಿಳಿಯುತ್ತದೆ. ರಕ್ಷಣಾ ಉಪಕರಣ ತಯಾರಿಕೆಯಲ್ಲೂ ಮುಂಚೂಣಿಯಲ್ಲಿದ್ದು, ಎಚ್‌ಎಎಲ್ ಘಟಕದಲ್ಲಿ ಶಕ್ತಿಶಾಲಿ ಹೆಲಿಕಾಪ್ಟರ್ ತಯಾರಿಸುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಆಧಾರ: ಪ್ರಜಾವಾಣಿ, ದಿನಾಂಕ:07.02.2023.

25. ಸುಳ್ಳು ಸೋಲಲೇಬೇಕು

'ಸುಳ್ಳು ಎಷ್ಟೇ ದೊಡ್ಡದಿರಲಿ, ಎಷ್ಟು ದೊಡ್ಡವರೇ ಹೇಳಲಿ, ಎಷ್ಟೇ ಬಾರಿ ಹೇಳಲಿ, ಅಂತಿಮವಾಗಿ ಅದು ಸತ್ಯದ ಮುಂದೆ ಸೋಲಲೇಬೇಕು'.

ಇದು ರೆಫೇಲ್ ಡೀಲ್ ವಿಚಾರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆಗೈದ ಪ್ರತಿಪಕ್ಷಗಳಿಗೆ ಪ್ರಧಾನಮಂತ್ರಿ ಮೋದಿ ಅವರು ನೀಡಿದ ತಿರುಗೇಟು.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಸಮೀಪದ ಬಿದರೆಹಳ್ಳ ಕಾವಲ್‌ನಲ್ಲಿ ಹೆಚ್‌ಎಎಲ್ ಹೆಲಿಕಾಪ್ಟರ್ ಕಾರ್ಖಾನೆ ಉದ್ಘಾಟನೆ ಮತ್ತು ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ಅನಾವರಣ ಜಲಜೀವನ್ ಮಿಷನ್ ಯೋಜನೆ, ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್, ತುಮಕೂರು ಕೈಗಾರಿಕಾ ಟೌನ್‌ಶಿಪ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಸಾರ್ವಜನಿಕರನ್ನುದ್ದೇಶಿಸಿ ಅವರು ಮಾತನಾಡಿದರು. ಪ್ರತಿಪಕ್ಷಗಳು 70 ವರ್ಷಗಳ ಕಾಲ ಮಾಡದ ಅಭಿವೃದ್ಧಿಯನ್ನು ಕೇವಲ ಎಂಟು ವರ್ಷಗಳಲ್ಲಿಯೇ ನಮ್ಮ ಸರ್ಕಾರ ಮಾಡಿ ತೋರಿಸಿದೆ. ದೇಶ ಮೊದಲು ಎಂಬ ಸಂಕಲ್ಪದೊಂದಿಗೆ ಕೆಲಸ ಮಾಡಿದರೆ ಯಶಸ್ಸು ಖಚಿತ ಎಂದರು.

ರಫೇಲ್ ಯುದ್ಧ ವಿಮಾನ ಒಪ್ಪಂದವು ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಡಿಫೆನ್ಸ್, ಲಿ.ಗೆ ಅನುಕೂಲ ಕಲ್ಪಿಸಲಿದ್ದು, ಕೇಂದ್ರ ಸರ್ಕಾರವು ಸರ್ಕಾರಿ ಸ್ವಾಮ್ಯದ ಹೆಚ್‌ಎಎಲ್ (ಹಿಂದುಸ್ತಾನ್ ಏರೋನಾಟಿಕ್ಸ್ ಲಿ.) ಅನ್ನು ನಾಶ ಮಾಡಲು ಹೊರಟಿದೆ ಎಂಬ ಪ್ರತಿಪಕ್ಷಗಳ ಆರೋಪಕ್ಕೆ ಈ ಕಾರ್ಯಕ್ರಮದಲ್ಲೇ ತಿರುಗೇಟು ಕೊಟ್ಟ ಪ್ರಧಾನಿ ಮೋದಿ, ಹೆಚ್‌ಎಎಲ್ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಲಾಗಿತ್ತು. ನಮ್ಮ ಸರ್ಕಾರದ ವಿರುದ್ಧವೇ ಹಲವಾರು ಸುಳ್ಳು ಆರೋಪಗಳನ್ನು ಹೊರಿಸಲಾಗಿತ್ತು. ಈ ವಿಚಾರವನ್ನು ಮುಂದಿಟ್ಟುಕೊಂಡು ಸಂಸತ್‌ನ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಲಾಯಿತು. ಕಾಂಗ್ರೆಸ್ ಸುಳ್ಳು ಹೊರಿಸಿದರೂ ಅವರ ನಿಜ ಬಣ್ಣವನ್ನು ಬಯಲು ಮಾಡಲಿದೆ ಎಂದು ಕಾಂಗ್ರೆಸ್‌ನ ಹೆಸರೆತ್ತದೇ ಪರೋಕ್ಷವಾಗಿ ಚುಚ್ಚಿದರು. ಜೊತೆಗೆ ಹೆಚ್‌ಎಎಲ್ ರಕ್ಷಣಾ ವಲಯದಲ್ಲಿ ಆತ್ಮನಿರ್ಭರತೆಯನ್ನು ಉತ್ತೇಜಿಸುತ್ತಿದೆ. ಇಂದು ಉದ್ಘಾಟನೆಗೊಂಡ ಫ್ಯಾಕ್ಟರಿಯು ಪ್ರತಿಪಕ್ಷಗಳ ಎಲ್ಲಾ ಆರೋಪಗಳಿಗೂ ಉತ್ತರ ನೀಡುತ್ತಿದೆ. ಸತ್ಯವು ಇಂದೇ ಬಯಲಾಯಿತು ನೋಡಿ ಎಂದರು.

ಇದುವರೆಗೂ ಭಾರತದ ರಕ್ಷಣಾ ಕ್ಷೇತ್ರ ವಸ್ತುವನ್ನೂ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಕಳೆದ 8 ವರ್ಷಗಳಲ್ಲಿ ಸರ್ಕಾರ ತೆಗೆದುಕೊಂಡ ದಿಟ್ಟ ನಿರ್ಧಾರದ ಫಲವಾಗಿ ಶೇ.60 ರಷ್ಟು ವಸ್ತುಗಳನ್ನು ಭಾರತದಲ್ಲಿಯೇ ತಯಾರಿಸಲಾಗುತ್ತಿದೆ. ಮುಂದಿನ 25 ವರ್ಷಗಳಲ್ಲಿ ಭಾರತ ರಕ್ಷಣಾ ವಲಯದಲ್ಲಿ ಸಂಪೂರ್ಣ ಸ್ವಾಲಂಬಿಯಾಗಲಿದೆ. ಈ ಮಹತ್ವದ ಹೆಜ್ಜೆಗೆ ಹೆಚ್‌ಎಎಲ್ ಕಾರ್ಖಾನೆಯೇ ಸಾಕ್ಷಿ ಎಂದೂ ಮೋದಿ ಹೇಳಿದರು.

ಇದೇ ವೇಳೆ ಬಜೆಟ್ ಕೊಡುಗೆಗಳ ಬಗ್ಗೆ ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಗೆ ಹೆಚ್ಚು ಒತ್ತು ನೀಡಲಾಗಿದೆ. ಬೆಂಗಳೂರು–ಚೆನ್ನೈ, ಬೆಂಗಳೂರು–ಬಾಂಬೆ, ಚೆನ್ನೈ–ಹೈದರಾಬಾದ್ ಹೀಗೆ ಒಟ್ಟು ನಾಲ್ಕು ಕೈಗಾರಿಕಾ ಕಾರಿಡಾರ್‌ಗಳು ಏಕಕಾಲದಲ್ಲಿ ಆರಂಭಗೊಂಡಿದ್ದು, ತುಮಕೂರು ಕೈಗಾರಿಕಾ ಟೌನ್ ಶಿಪ್‌ನಿಂದ ಸಾವಿರಾರು ಜನರಿಗೆ ಉದ್ಯೋಗ ದೊರೆಯಲಿದೆ ಎಂದರು.

ಸಾವಿರ ಹೆಲಿಕಾಪ್ಟರ್ ಉತ್ಪಾದನೆಯ ಗುರಿ: ಉದ್ಘಾಟನೆಗೊಂಡ ಗ್ರೀನ್‌ಫೀಲ್ಡ್ ಹೆಲಿಕಾಪ್ಟರ್ ಫ್ಯಾಕ್ಟರಿಯು ಲಘು ಹೆಲಿಕಾಪ್ಟರ್‌ಗಳು ಮತ್ತು ಭಾರತೀಯ ಬಹುಪಯೋಗಿ ಹೆಲಿಕಾಪ್ಟರ್‌ಗಳನ್ನು ತಯಾರಿಸಲಿದೆ. ಆರಂಭದಲ್ಲಿ ವರ್ಷಕ್ಕೆ 30 ಕಾಪ್ಟರ್‌ಗಳನ್ನು ಉತ್ಪಾದಿಸಲಾಗುತ್ತದೆ. ನಂತರ 60, ಬಳಿಕ ಹಂತ ಹಂತವಾಗಿ ವರ್ಷಕ್ಕೆ 90 ಕಾಪ್ಟರ್‌ಗಳನ್ನು ತಯಾರಿಸಲಾಗುತ್ತದೆ. ಮುಂದಿನ 2 ದಶಕಗಳಲ್ಲಿ, ತುಮಕೂರು ಫ್ಯಾಕ್ಟರಿಯು ಸುಮಾರು ಒಂದು ಸಾವಿರ ಕಾಪ್ಟರ್‌ಗಳನ್ನು ತಯಾರಿಸಲಿದೆ. ಅಷ್ಟೇ ಅಲ್ಲದೆ,

ಇಲ್ಲಿ ಸಾವಿರಾರು ಉದ್ಯೋಗ ಸೃಷ್ಟಿಯಾಗಲಿದ್ದು, ನೇರ ಮತ್ತು ಪರೋಕ್ಷ ಉದ್ಯೋಗದ ಮೂಲಕ 6 ಸಾವಿರಕ್ಕೂ ಅಧಿಕ ಮಂದಿಗೆ ಅನುಕೂಲ ಕಲ್ಪಿಸಲಿದೆ ಎಂದೂ ಮೋದಿ ಹೇಳಿದರು.

ಆಧಾರ: ಉದಯವಾಣಿ, ದಿನಾಂಕ:07.02.2023

26. ಕೇಂದ್ರದ ಅಂಗಳಕ್ಕೆ ಮೀಸಲು

ರಾಜ್ಯದಲ್ಲಿ ಪರಿಶಿಷ್ಟ ಜಾತಿ– ಪಂಗಡದ ಮೀಸಲು ಹೆಚ್ಚಳಕ್ಕೆ ಈಗಾಗಲೇ ಕೈಗೊಂಡಿರುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಸಾಂವಿಧಾನಿಕ ಮಾನ್ಯತೆ ಕಲ್ಪಿಸಲು, ಈ ಕಾಯಿದೆಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ (ಶೆಡ್ಯೂಲ್) ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮಹತ್ವದ ತೀರ್ಮಾನವನ್ನು ರಾಜ್ಯ ಸಚಿವ ಸಂಪುಟ ಸಭೆ ಕೈಗೊಂಡಿದೆ.

ಪರಿಶಿಷ್ಟ ಜಾತಿ, ಪಂಗಡ ಸಮುದಾಯದವರಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲು ಪ್ರಮಾಣವನ್ನು ಒಟ್ಟು ಶೇ.6 ರಷ್ಟು ಹೆಚ್ಚಳ ಮಾಡಿದ್ದು, ಇದಕ್ಕೆ ಸಾಂವಿಧಾನಿಕ ಮಾನ್ಯತೆ ದೊರಕಿಸಿಕೊಡಲು ಮುಂದಾಗಿದೆ.

ಪರಿಶಿಷ್ಟರ ಮೀಸಲು ಹೆಚ್ಚಳ ವಿಚಾರದಲ್ಲಿ ರಾಜ್ಯ ಸರ್ಕಾರ ಮೂಗಿಗೆ ತುಪ್ಪ ಸವರಿದೆ ಎಂಬುದಾಗಿ ಆರೋಪಿಸುತ್ತಿದ್ದ ಪ್ರತಿಪಕ್ಷಗಳು ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರದ ಮೇಲೆ ಮುಗಿ ಬೀಳಲು ಸಜ್ಜಾಗಿದ್ದವು. ಅದಕ್ಕೂ ಮೊದಲೇ ಸರ್ಕಾರ ಸಚಿವ ಸಂಪುಟ ನಿರ್ಣಯ ಕೈಗೊಳ್ಳುವ ಮೂಲಕ ಜಾಣ ನಡೆ ಇರಿಸಿದೆ.

ಶೇ.6ರಷ್ಟು ಅಧಿಕ ಮೀಸಲು: ಪರಿಶಿಷ್ಟ ಜಾತಿಯ ಮೀಸಲು ಪ್ರಮಾಣವನ್ನು ಶೇ.15 ರಿಂದ ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲು ಪ್ರಮಾಣವನ್ನು ಶೇ.3 ರಿಂದ ಶೇ.7ಕ್ಕೆ ಹೆಚ್ಚಳ ಮಾಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಪ್ರತಿಪಕ್ಷಗಳು ಒತ್ತಾಯಿಸಿದ್ದವು. ಅದೇ ಅಧಿವೇಶನದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಒಟ್ಟಾರೆ ಶೇ.6ರಷ್ಟು ಹೆಚ್ಚಳ ಮಾಡುವ ವಿಧೇಯಕಕ್ಕೆ ಸರ್ವಾನುಮತದ ಅನುಮೋದನೆ ನೀಡಲಾಗಿತ್ತು.

ಮೀಸಲು ಹೆಚ್ಚಳ ಜಾರಿ: ಬೊಮ್ಮಾಯಿ

"ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲು ಪ್ರಮಾಣ ಹೆಚ್ಚಿಸಿದ್ದು ಜನವರಿ 10ರ ನಂತರ ನಡೆದಿರುವ ಎಲ್ಲಾ ನೇಮಕಾತಿ, ಬಡ್ತಿಯನ್ನು ಹೊಸ ಮೀಸಲಾತಿ ಅನ್ವಯ ನೀಡುವಂತೆ ಆಜ್ಞೆ ಮಾಡಿ, ಅದರ ಪ್ರತಿಯನ್ನು ಇಲ್ಲಿಗೆ ತಂದಿದ್ದೇನೆ" ಎಂದು ಮುಖ್ಯಮಂತ್ರಿ ಹೇಳಿದರು. ಹರಿಹರ ತಾಲ್ಲೂಕಿನ ರಾಜನಹಳ್ಳಿಯ ಮಹರ್ಷಿ ಗುರುಪೀಠದಲ್ಲಿ ನಡೆದ ವಾಲ್ಮೀಕಿ ಜಾತ್ರಾ ಮಹೋತ್ಸವ ಉದ್ಘಾಟಿಸಿ ಮಾತನಾಡಿದರು.

"ಈ ಕುರಿತು ಕಾನೂನನ್ನು ಅಂಗೀಕಾರ ಮಾಡಲಾಗಿದೆ. ಸಂವಿಧಾನಕ್ಕೆ ತಿದ್ದುಪಡಿ ತಂದು 9ನೇ ಪರಿಚ್ಛೇದಕ್ಕೆ ಸೇರಿಸುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಇದೆಲ್ಲಾ ನಮಗೆ ಗೊತ್ತಿದ್ದೇ ನಾವು ಮೀಸಲು ಪ್ರಮಾಣ ಹೆಚ್ಚಿಸಿದ್ದೇವೆ. ಮಾತಿನಿಂದ ಭಾಷಣದಿಂದ ಸಾಮಾಜಿಕ ನ್ಯಾಯ ಕೊಡಲು ಆಗುವುದಿಲ್ಲ. ಅದಕ್ಕೆ ಹೃದಯಬೇಕು" ಎಂದರು.

ಮುಂದಿನ ಪ್ರಕ್ರಿಯೆ:

- ರಾಜ್ಯ ಸಚಿವ ಸಂಪುಟ ಮಾಡುವ ಶಿಫಾರಸ್ಸು ರಾಷ್ಟ್ರಪತಿಯವರ ಅಂಕಿತಕ್ಕೆ ಕಳುಹಿಸಲಾಗುತ್ತದೆ.
- ರಾಷ್ಟ್ರಪತಿ ಅಂಕಿತದ ನಂತರ ಕೇಂದ್ರ ಗೃಹ ಇಲಾಖೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ಕಾನೂನು ಇಲಾಖೆ ಈ ಶಿಫಾರಸ್ಸನ್ನು ಪರಿಶೀಲಿಸುತ್ತದೆ.

- ಅಂತಿಮವಾಗಿ ಗೃಹ ಇಲಾಖೆ ಪರಾಮರ್ಶೆ ನಡೆಸಿ ಕೇಂದ್ರ ಸಚಿವ ಸಂಪುಟದ ಮುಂದಿಡುತ್ತದೆ. ಬಳಿಕ ಇದಕ್ಕೆ ಸಂಸತ್ ಒಪ್ಪಿಗೆ ನೀಡಬೇಕು.
- ನಂತರವಷ್ಟೇ ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆಯಾಗಲಿದೆ.

ಏನಿದೆ 9ನೇ ಶೆಡ್ಯೂಲ್: ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲಾಗುವ ಕಾಯಿದೆ, ಕಾನೂನುಗಳು ನ್ಯಾಯಾಲಯದಲ್ಲಿ ವಿಚಾರಣಾ ವ್ಯಾಪ್ತಿಯಿಂದ ಸಾಮಾನ್ಯವಾಗಿ ಹೊರಗಿರುತ್ತವೆ. ಭೂ ಸುಧಾರಣೆ ಕಾಯಿದೆ, ಮೋಟಾರು ವಾಹನ ಕಾಯಿದೆ, ತಮಿಳುನಾಡು ಮೀಸಲು ಕಾಯಿದೆ ಈ ಪರಿಚ್ಛೇದದ ವ್ಯಾಪ್ತಿಯಲ್ಲಿವೆ. ಕರ್ನಾಟಕ ಸರ್ಕಾರದ ಮೀಸಲು ಕಾಯಿದೆಯನ್ನು ಇದಕ್ಕೆ ಸೇರಿಸಿದರೆ, ಅದಕ್ಕೆ ಸಾಂವಿಧಾನಿಕ ಮಹತ್ವ ಬರುತ್ತದೆ.

ಆಧಾರ: ವಿಜಯಕರ್ನಾಟಕ, ದಿನಾಂಕ:10.02.2023

27. ಕಲ್ಯಾಣ ನೇಮಕ ಆದೇಶದಲ್ಲಿ ಬದಲಾವಣೆ

ಕಲ್ಯಾಣ ಕರ್ನಾಟಕ (ಹೈದರಾಬಾದ್ ಕರ್ನಾಟಕ) ಭಾಗದ ವಿವಿಧ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಕಳೆದ ವರ್ಷ ಹೊರಡಿಸಿದ್ದ ಆದೇಶದಲ್ಲಿ ಮಹತ್ವದ ಬದಲಾವಣೆ ತರುವುದರೊಂದಿಗೆ ಪ್ರತ್ಯೇಕ ಅಧಿಸೂಚನೆ ಹೊರಡಿಸಲು ಪ್ರತ್ಯೇಕ ನೇಮಕ ಪ್ರಕ್ರಿಯೆ ನಡೆಸಲು ಸೂಚಿಸಿದೆ.

ಕಳೆದ ಜೂನ್ 15ರ ಸುತ್ತೋಲೆಯ ಕೊನೆಯ ಪ್ಯಾರಾದಲ್ಲಿರುವ ಅಂಶಗಳ ಬಗ್ಗೆ ಕಲ್ಯಾಣ ಕರ್ನಾಟಕ ಭಾಗದ ಸ್ಥಳೀಯ ಅಭ್ಯರ್ಥಿಗಳು ಮತ್ತು ಜನಪ್ರತಿನಿಧಿಗಳಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ವಿಷಯದ ಕುರಿತು ಕಳೆದ ಡಿಸೆಂಬರ್ 29 ರಂದು ನಡೆದ ಸಚಿವ ಸಂಪುಟ ಉಪಸಮಿತಿಯ ಸಭೆಯಲ್ಲಿ ಚರ್ಚಿಸಲಾಗಿತ್ತು. 2022ರ ಜೂನ್ 15ರ ನಿರ್ಧಾರವನ್ನು ಹಿಂಪಡೆಯಲಾಗಿದೆ ಎಂದು 2023ರ ಫೆಬ್ರವರಿ 1 ರಂದು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹೊಸ ಸುತ್ತೋಲೆಯಲ್ಲಿ ತಿಳಿಸಿದೆ.

ಹೊಸ ಸುತ್ತೋಲೆಯಲ್ಲಿ ಏನಿದೆ: ಒಂದು ವೇಳೆ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸದಿದ್ದಲ್ಲಿ, ಅಂಥ ನೇಮಕಾತಿ ಪ್ರಕ್ರಿಯೆಗಳಿಗೆ ಸೀಮಿತವಾಗಿ ಮಾತ್ರ ಅರ್ಜಿ ಸಲ್ಲಿಸುವ ಸಮಯದಲ್ಲಿ ಸ್ಥಳೀಯ ಅಭ್ಯರ್ಥಿಗಳಿಂದ ಪಡೆಯಲಾಗಿರುವ ಆಯ್ಕೆಯನ್ನು ಪರಿಗಣಿಸಲ್ಲ ಬದಲಿಗೆ, ಅರ್ಹತೆ ಆಧಾರದ ಮೇಲೆ ಆಯ್ಕೆ ಪಟ್ಟಿ ತಯಾರಿಸುವಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸುವುದು. ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸಬೇಕು ಎಂದು ಹೊಸ ಸುತ್ತೋಲೆಯಲ್ಲಿ ಸೂಚಿಸಿದೆ.

2022ರ ಜೂನ್ 15ರ ಸುತ್ತೋಲೆ ಜಾರಿಗೆ ಬರುವ ಮುನ್ನ ವಿವಿಧ ನೇಮಕಾತಿ ಪ್ರಾಧಿಕಾರಗಳು ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳನ್ನು ಹೊರತುಪಡಿಸಿ, ಬೇರೆ ಎಲ್ಲಾ ಹುದ್ದೆಗಳ ನೇಮಕಾತಿಗಾಗಿ 2020ರ ಜೂನ್ 6ರ ಸುತ್ತೋಲೆ ಅನ್ವಯ ನೇಮಕಾತಿ ಅಧಿಸೂಚನೆ ಹೊರಡಿಸಬೇಕು.

2020ರ ಜೂನ್‌ನಲ್ಲಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶದ ಪ್ರಕಾರ ಒಂದೇ ಅಧಿಸೂಚನೆಯಲ್ಲಿ ಮಿಕ್ಕುಳಿದ ವೃಂದ ಮತ್ತು ಸ್ಥಳೀಯ ವೃಂದ ಎಂದು ಹುದ್ದೆಗಳನ್ನು ವಿಭಾಗಿಸಿ, ನೇಮಕ ಪ್ರಕ್ರಿಯೆ ನಡೆಸಲಾಗುತ್ತಿತ್ತು. ಅಭ್ಯರ್ಥಿಗಳಿಗೆ ಒಂದೇ ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನದ ಮೂಲಕ ನೇಮಕಾತಿ ಪ್ರಕ್ರಿಯೆ ನಡೆಯುತ್ತಿತ್ತು. ಅಭ್ಯರ್ಥಿಗಳು ತಮ್ಮ ಇಚ್ಛೆಯಂತೆ ಸ್ಥಳೀಯ ಅಥವಾ ಮಿಕ್ಕುಳಿದ ವೃಂದವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತಿತ್ತು. ಈಗಾಗಲೇ ನಡೆಯುತ್ತಿರುವ ನೇಮಕ ಪ್ರಕ್ರಿಯೆಯಲ್ಲಿ 2020ರ ಸುತ್ತೋಲೆಯಂತೆ ನೇಮಕ ಪ್ರಕ್ರಿಯೆ ನಡೆಸುವಂತೆ ತಿಳಿಸಿರುವುದಕ್ಕೆ ಕಲ್ಯಾಣ

ಕರ್ನಾಟಕ ಭಾಗದ ಸ್ಥಳೀಯ ಅಭ್ಯರ್ಥಿಗಳಿಂದ ಹಾಗೂ ಜನಪ್ರತಿನಿಧಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಇನ್ನೂ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸದೆ ಇರುವ ನೇಮಕಾತಿಗಳಲ್ಲಿ ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿ ತಯಾರಿಸುವಾಗ ಸ್ಥಳೀಯ ಅಭ್ಯರ್ಥಿಗಳನ್ನು ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಪರಿಗಣಿಸಿ, ಆಯ್ಕೆಪಟ್ಟಿ ತಯಾರಿಸಲಾಗುತ್ತದೆ. ನಂತರ ಸ್ಥಳೀಯ ವೃಂದದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸಲಾಗುತ್ತದೆ.

ನೂತನ ಸುತ್ತೋಲೆಯಲ್ಲಿ ಆದ ಬದಲಾವಣೆಯಿಂದ ನೇಮಕಾತಿ ಪ್ರಕ್ರಿಯೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸ್ಥಳೀಯ (371ಜೆ ಅಡಿ) ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುತ್ತದೆ. ಕಲ್ಯಾಣ ಕರ್ನಾಟಕ ಭಾಗದ ಮೆರಿಟ್ ಪಡೆದ ಅಭ್ಯರ್ಥಿಗಳು (371ಜೆ ಮೀಸಲು ಕೋರಿದ್ದರೂ) ರಾಜ್ಯದ ಇತರ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಿ ಆಯ್ಕೆಯಾಗುತ್ತಾರೆ. ಉಳಿದಂತೆ ಮೀಸಲು ಸ್ಥಾನಗಳು ಮೀಸಲು ಕೋರಿದ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:10.02.2023

28. ನವೀಕರಿಸಬಹುದಾದ ಇಂಧನ ನೀತಿಗೆ ಅಸ್ತು

ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ–2007ಕ್ಕೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದ್ದು ಹೊಸದಾಗಿ ಸೋಲಾರ್ ಘಟಕ ಸ್ಥಾಪಿಸಲು ಈಗಿರುವ 3.5 ಎಕರೆ ಜಮೀನಿನ ಮಿತಿಯನ್ನು 4 ಎಕರೆಗೆ ವಿಸ್ತರಿಸಲಾಗಿದೆ. ಅದೇ ರೀತಿ ಪವನ್ ವಿದ್ಯುತ್ ಯೋಜನೆಗೆ ಅನುಮತಿ ಪಡೆದು ಕಾರ್ಯಾರಂಭ ಮಿತಿ ಮೂರು ವರ್ಷದಿಂದ ಎರಡು ವರ್ಷಕ್ಕೆ ಇಳಿಸಲಾಗಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಪುನರ್ ನವೀಕರಿಸಬಹುದಾದ ಇಂಧನ ವಲಯದಲ್ಲಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಹಾಗೂ ಬಂಡವಾಳ ಹೂಡಿಕೆಗೆ ಮುಂದಾಗುವವರಿಗೆ ಅನುಕೂಲ ಕಲ್ಪಿಸಲು ನೂತನ ನೀತಿ ಜಾರಿಗೊಳಿಸಲಾಗುತ್ತಿದೆ. ಈ ಹಿಂದೆ 2022ರ ವರೆಗೆ ನೀತಿ ರೂಪಿಸಲಾಗಿತ್ತು. ಇದೀಗ 2027ರ ವರೆಗೆ ಐದು ವರ್ಷಗಳ ಅವಧಿಗೆ ಹೊಸ ನೀತಿ ರೂಪಿಸಲಾಗಿದೆ ಎಂದು ಹೇಳಿದರು.

ಮೊದಲ ಹಂತದಲ್ಲಿ ಉನ್ನತೀಕರಣ: ರಾಜ್ಯದ ಸರ್ಕಾರಿ ಐಟಿಐಗಳನ್ನು ಟಾಟಾ ಸಂಸ್ಥೆಯ ಸಹ ಭಾಗಿತ್ವದಲ್ಲಿ ಉನ್ನತೀಕರಣಗೊಳಿಸುವ ರೂ. 927 ಕೋಟಿ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದ್ದು 155 ಸರ್ಕಾರಿ ಐಟಿಐಗಳ ಪೈಕಿ 30 ಐಟಿಐಗಳನ್ನು ತಲಾ ರೂ.27 ಕೋಟಿ ವೆಚ್ಚದಲ್ಲಿ ಮೊದಲ ಹಂತದಲ್ಲಿ ಉನ್ನತೀಕರಣ ಮಾಡಲಾಗುವುದು. ಯೋಜನೆಯಡಿ ರೂ. 816 ಕೋಟಿಗಳನ್ನು ಸಂಸ್ಥೆ ಭರಿಸಲಿದ್ದು, ಉಳಿದ ರೂ.111 ಕೋಟಿ ರಾಜ್ಯ ಸರ್ಕಾರ ಭರಿಸಲಿದೆ ಎಂದು ತಿಳಿಸಿದರು.

ಹಾವೇರಿ ಜಿಲ್ಲೆ ಹಿರೇಕೆರೂರಿನ ಸರ್ವಜ್ಞ ಪ್ರಾಧಿಕಾರದಿಂದ ಹಾವೇರಿ, ಹಿರೇಕೆರೂರು, ಮಾಸೂರು, ಅಬಲೂರು ಸೇರಿ ವಿವಿಧ ಗ್ರಾಮಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ರೂ. 25 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ ಎಂದು ಹೇಳಿದರು.

ರೂ. 436 ಕೋಟಿ ಯೋಜನೆ: ಜಲಜೀವನ ಮಿಷನ್ ಯೋಜನೆಯಡಿ ಚಾಮರಾಜನಗರ, ಉತ್ತರ ಕನ್ನಡ, ಬೆಳಗಾವಿ, ಚಿತ್ರದುರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳಿಗೆ ನೀರು ಒದಗಿಸಲು ರೂ. 436 ಕೋಟಿ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದೆ.

ಚಾಮರಾಜನಗರ ಜಿಲ್ಲೆಯ 166 ಗ್ರಾಮಗಳಿಗೆ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸಲು ರೂ. 26 ಕೋಟಿ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ರಾಮನಗರದ 15 ಗ್ರಾಮಗಳಿಗೆ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು

ಒದಗಿಸಲು ರೂ. 28 ಕೋಟಿ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೈನಾಪುರ ಸೇರಿ 12 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ರೂ. 32 ಕೋಟಿ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ನಗರ ಸೇರಿ 363 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ರೂ. 350 ಕೋಟಿ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದೆ ಎಂದು ತಿಳಿಸಿದರು.

ಉತ್ತರ ಕನ್ನಡದ ಯಲ್ಲಾಪುರ ಹೋಬಳಿಯಲ್ಲಿ ಬುಡಕಟ್ಟು ಜನರಿಗೆ ವನವಾಸಿ ಶಾಲೆಗಾಗಿ 1 ಎಕರೆ ಜಮೀನು, ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಪೊಲೀಸ್ ವಸತಿ ಸಂಕೀರ್ಣ ನಿರ್ಮಾಣದ ರೂ. 12 ಕೋಟಿ ವೆಚ್ಚದ ಯೋಜನೆ ಹಾಗೂ ಕಲಬುರಗಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಸ್ ನಿಲ್ದಾಣ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದರು. ಗದಗ ಜಿಲ್ಲೆಯಲ್ಲಿ ವೀರರಾಣಿ ಚೆನ್ನಮ್ಮ ಹೆಸರಿನ ಸಮುದಾಯ ಭವನ ನಿರ್ಮಾಣಕ್ಕೆ ಲಿಂಗಾಯತ ಪಂಚಮಸಾಲಿ ಟ್ರಸ್ಟ್‌ಗೆ ಎರಡು ಎಕರೆ ಜಮೀನು ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿಯ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಯಿಂದ 200 ಹಾಸಿಗೆಗೆಗಳಿಗೆ ಮೇಲ್ದರ್ಜೆಗೇರಿಸಲು ರೂ. 23 ಕೋಟಿ, ಬೆಂಗಳೂರಿನ ಗೋವಿಂದರಾಜನಗರ ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿರುವ 300 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಉಪಕರಣಗಳನ್ನು ಖರೀದಿಸಲು ರೂ. 24 ಕೋಟಿ ಬಿಡುಗಡೆ ಮಾಡಲು ಸಂಪುಟ ಒಪ್ಪಿಗೆ ನೀಡಿದೆ ಎಂದು ವಿವರಿಸಿದರು.

ರೂ.54.4 ಕೋಟಿ ಠೇವಣಿ: ಬೆಂಗಳೂರಿನ ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಟೋಲ್ ಘಟಕವನ್ನು ಒಡೆದು ಹಾಕಿರುವ ಬಗ್ಗೆ ತನಿಖೆ ನಡೆಸಲು ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಈ ಬಗ್ಗೆ ಸುಪ್ರೀಂಕೋರ್ಟ್‌ನ ವಿಚಾರಣೆಗಾಗಿ ರೂ. 54.4 ಕೋಟಿ ಠೇವಣಿ ಇಡಲು ಸಂಪುಟ ಒಪ್ಪಿಗೆ ನೀಡಿದೆ. ರಾಯಚೂರಿನ ಹಗರಬೊಮ್ಮನಹಳ್ಳಿಯಲ್ಲಿ ರೂ. 25 ಕೋಟಿ ವೆಚ್ಚದಲ್ಲಿ ಕೃಷಿ ಕಾಲೇಜು ಸ್ಥಾಪಿಸಲು ಸಂಪುಟ ಅನುಮೋದನೆ ನೀಡಿದೆ ಎಂದು ಸಚಿವ ಮಾಧುಸ್ವಾಮಿ ಹೇಳಿದರು.

ರಾಜ್ಯದಲ್ಲೇ ಪ್ರಥಮ ಎನ್ನುವಂತೆ ಸೊರಬ ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಕಛೇರಿಗಳನ್ನು ಒಂದೇ ಸೂರಿನಡಿ ತರಲು 18 ಎಕರೆ ಜಾಗದಲ್ಲಿ ಕಟ್ಟಡ ನಿರ್ಮಿಸುವ ರೂ. 49.66 ಕೋಟಿ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ. ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಸರ್ಕಾರಿ ಟೂಲ್ ರೂಂ ಸ್ಥಾಪಿಸುವ ರೂ. 73.55 ಕೋಟಿ ಹಾಗೂ ನೆಲಗಾಳದಲ್ಲಿರುವ ಟೂಲ್ ರೂಂ ರೂ. 37.55 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವ ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದೆ ಎಂದು ವಿವರಿಸಿದರು.

ಸಿಎಂಗೆ ಅಧಿಕಾರ: ಲೋಕಸೇವಾ ಆಯೋಗದಲ್ಲಿ ಖಾಲಿ ಇರುವ ಒಂದು ಸದಸ್ಯ ಸ್ಥಾನ ಭರ್ತಿ ಅಧಿಕಾರವನ್ನು ಸಂಪುಟ ಸಭೆ ಮುಖ್ಯಮಂತ್ರಿ ಅವರಿಗೆ ನೀಡಿದೆ.

ಆಧಾರ: ಉದಯವಾಣಿ, ದಿನಾಂಕ:10.02.2023

29. ತಾಲ್ಲೂಕು ಕೇಂದ್ರದಲ್ಲಿ ವಿಸ್ತಾರ ಸೌಧ

ಸರ್ಕಾರದ ಆಯ್ದ ಪ್ರಮುಖ ಸೇವೆಗಳನ್ನು ಒಂದೇ ಕಡೆ ಜನರಿಗೆ ಸುಗಮವಾಗಿ ಕಲ್ಪಿಸುವ ಸಲುವಾಗಿ ತಾಲ್ಲೂಕು ಮಟ್ಟದಲ್ಲಿ 'ವಿಸ್ತಾರ ಸೌಧ' ಕಟ್ಟಡ ನಿರ್ಮಿಸುವ ಪ್ರಾಯೋಗಿಕ ಯೋಜನೆಯನ್ನು ಸೊರಬ ತಾಲ್ಲೂಕಿನಲ್ಲಿ ಜಾರಿಗೊಳಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆ ಸೇರಿದಂತೆ ಆಯ್ದ ಇಲಾಖೆಗಳು ಒಟ್ಟಾಗಿ ಒಂದೇ ಸ್ಥಳದಲ್ಲಿ 'ವಿಸ್ತಾರ ಸೌಧ' ಕಟ್ಟಡ ನಿರ್ಮಾಣದ ಮೂಲಕ ಜನರಿಗೆ ಪ್ರಮುಖ ಅಗತ್ಯ ಸೇವೆಗಳೆಲ್ಲಾ ಒಂದೇ ಸೂರಿನಡಿ ಸಿಗುವ ವ್ಯವಸ್ಥೆ ಕಲ್ಪಿಸುವ ವಿನೂತನ ಯೋಜನೆ ಇದಾಗಿದೆ.

ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಮಾಹಿತಿ ನೀಡಿದ ಸಚಿವ ಜೆ.ಸಿ.ಮಾಧುಸ್ವಾಮಿ, ರೂ. 49.60 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ, ಎಂದರು.

ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022–27ಕ್ಕೆ 2 ತಿದ್ದುಪಡಿ ತರಲು ಸಂಪುಟ ಒಪ್ಪಿಗೆ ನೀಡಿದೆ. ಸೌರಶಕ್ತಿ ವಿದ್ಯುತ್ ಘಟಕ ಸಂಬಂಧ ಒಂದು ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಅಳವಡಿಕೆಗೆ ಗೊತ್ತುಪಡಿಸಲಾಗಿದ್ದ ವಿಸ್ತೀರ್ಣವನ್ನು 3.5 ಎಕರೆಯಿಂದ 4 ಎಕರೆಗೆ ವಿಸ್ತರಿಸಲು ಅವಕಾಶ ನೀಡುವ ತಿದ್ದುಪಡಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಪವನಶಕ್ತಿ ವಿದ್ಯುತ್ ಘಟಕ ನಿರ್ಮಾಣ ಸಂಬಂಧ ಮಂಜೂರಾತಿ ಆದೇಶ ನೀಡಿದ ಬಳಿಕ ಘಟಕ ನಿರ್ಮಾಣಕ್ಕೆ ನೀಡಲಾಗಿದ್ದ ಕಾಲಾವಕಾಶವನ್ನು 3 ವರ್ಷದಿಂದ 2 ವರ್ಷಕ್ಕೆ ಇಳಿಕೆ ಮಾಡುವ ತಿದ್ದುಪಡಿಗೂ ಒಪ್ಪಿಗೆ ಕೊಡಲಾಗಿದೆ. ಅಂತರರಾಷ್ಟ್ರೀಯ ಮಟ್ಟದ ಪ್ರದರ್ಶನದಲ್ಲಿ ಉದ್ಯಮಿಗಳು, ಕಂಪನಿಗಳ ಮನವಿ ಮೇರೆಗೆ ಈ ತಿದ್ದುಪಡಿ ತರಲಾಗುತ್ತಿದೆ ಎಂದು ವಿವರಿಸಿದರು.

30 ಐಟಿಐ ಮೇಲ್ದರ್ಜೆಗೆ: ಪ್ರಸಕ್ತ ಸಾಲಿನಲ್ಲಿ 30 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಟಾಟಾ ಟೆಕ್ನಾಲಜಿಸ್ ಲಿಮಿಟೆಡ್‌ನ ಸಹಯೋಗದಲ್ಲಿ ರೂ. 927.30 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ಪ್ರಮುಖ ನಿರ್ಣಯಗಳು:

- ಕೆಪಿಎಸ್‌ಸಿಯಲ್ಲಿ ಖಾಲಿಯಿರುವ ಒಂದು ಸದಸ್ಯ ಹುದ್ದೆ ಭರ್ತಿ ಮಾಡಲು ಸಿಎಂಗೆ ಅಧಿಕಾರ.
- ಬಳ್ಳಾರಿ ಜಿಲ್ಲೆ ಹಗರಿಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ರೂ. 25 ಕೋಟಿ ವೆಚ್ಚದಲ್ಲಿ ಕೃಷಿ ಕಾಲೇಜು ಸ್ಥಾಪನೆ.
- ಹೊನ್ನಾಳಿ ತಾಲ್ಲೂಕಿನ ಆಸ್ಪತ್ರೆಯನ್ನು 250 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಅನುಮೋದನೆ.
- ನೆಲಮಂಗಲ–ಚಿಕ್ಕಬಳ್ಳಾಪುರ ರಸ್ತೆಯಲ್ಲಿ 54 ಕಿ.ಮೀ. ನಿಂದ 62 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿಗೆ ರೂ.10.13 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ.
- ಚಾಮರಾಜನಗರ ತಾಲ್ಲೂಕಿನ 166 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಜಿಜಿಎಂ ಅಡಿ ರೂ. 26 ಕೋಟಿ ವೆಚ್ಚಕ್ಕೆ ಒಪ್ಪಿಗೆ.
- ಮಡಿಕೇರಿಯಲ್ಲಿ ಜಿಲ್ಲಾ ಪೊಲೀಸ್ ಸಂಕೀರ್ಣ ನಿರ್ಮಾಣಕ್ಕೆ ರೂ. 12 ಕೋಟಿ ವೆಚ್ಚಕ್ಕೆ ಒಪ್ಪಿಗೆ.
- ಚಿತ್ರದುರ್ಗ–ಜಿಲ್ಲೆಯ ಹೊಸದುರ್ಗ ಪಟ್ಟಣ, 366 ಗ್ರಾಮಗಳು ಹಾಗೂ ಏರು ಕೊಳೆ ಮಾರ್ಗವಾಗಿ ಬರುವ ತರೀಕೆರೆಯ 113 ಜನವಸತಿಗೆ 'ಡಿಬಿಒಟಿ' ವಿಧಾನದಡಿ ಜಿಜಿಎಂ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ರೂ.350 ಕೋಟಿ ಆಡಳಿತಾತ್ಮಕ ಅನುಮೋದನೆ (ಕೇಂದ್ರ ಸರ್ಕಾರ ರೂ. 163 ಕೋಟಿ ಹಾಗೂ ರಾಜ್ಯ ಸರ್ಕಾರ ರೂ. 187 ಕೋಟಿ ಭರಿಸಲಿದೆ).
- ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಛೇರಿ ಬಹು ಅಂತಸ್ತಿನ ಕಟ್ಟಡವನ್ನು (ವಾಣಿಜ್ಯ ಸಂಕೀರ್ಣಸಹಿತ) ಪಿಪಿಪಿ ಮಾದರಿಯಲ್ಲಿ ರೂ. 26.58 ಕೋಟಿ ವೆಚ್ಚದಲ್ಲಿ ನಿರ್ಮಾಣಕ್ಕೆ ಒಪ್ಪಿಗೆ.
- ಚಾಮರಾಜನಗರದ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಚಾಮರಾಜನಗರ ಮಸ್ಕಾಪುರ ಗ್ರಾಮದ 14.24 ಎಕರೆ ಪ್ರದೇಶದಲ್ಲಿ ಭೂಮಾಲೀಕರು ಹಾಗೂ ಪ್ರಾಧಿಕಾರದ

ಸಹಭಾಗಿತ್ವದಲ್ಲಿ 50:50 ಅನುಪಾತದಡಿ ವಸತಿ ಬಡಾವಣೆ ನಿರ್ಮಾಣಕ್ಕೆ ಒಪ್ಪಿಗೆ. ರೂ. 12.50 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿ ಅಂದಾಜು ಪಟ್ಟಿಗೆ ಅನುಮೋದನೆ.

- ಗದಗ ಜಿಲ್ಲೆಯ ನರಗುಂದ ಪಟ್ಟಣದಲ್ಲಿ ಜಲ ಸಂಪನ್ಮೂಲ ಇಲಾಖೆಯ ಪ್ರವಾಸಿಮಂದಿರ ಸಮೀಪದ ಕರ್ನಾಟಕ ನೀರಾವರಿ ನಿಗಮದ 4.5 ಎಕರೆಯಲ್ಲಿ 2 ಎಕರೆ ಭೂಮಿಯನ್ನು ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಸಮುದಾಯ ಭವನ ನಿರ್ಮಾಣಕ್ಕಾಗಿ ನರಗುಂದ ಲಿಂಗಾಯಿತ ಪಂಚಮಸಾಲಿ ಸಮುದಾಯದ ವಿವಿಧೋದ್ದೇಶಗಳ ಸಂಘಕ್ಕೆ ಮಂಜೂರು ಮಾಡಲು ಒಪ್ಪಿಗೆ.
- ಸಿದ್ದಲಿಂಗೇಶ್ವರ ವಿದ್ಯಾ ಅಭಿವೃದ್ಧಿ ಟ್ರಸ್ಟ್ ಹಿರೇಮಠ ಅವರಿಗೆ ವಿಜಯಪುರ ಜಿಲ್ಲೆಯ ತಿಕೋಟ ತಾಲ್ಲೂಕಿನ ನವರಸಪುರ ಗ್ರಾಮದಲ್ಲಿ ಮಂಜೂರಾಗಿರುವ 5 ಎಕರೆ ಭೂಮಿಗೆ ಮಾರ್ಗಸೂಚಿ ದರದ ಶೇ.25 ರಷ್ಟು ಶುಲ್ಕ ವಿಧಿಸಲು ಒಪ್ಪಿಗೆ.
- ಮಂಗಳೂರಿನ ನಿರ್ಮಲ ಭಾರತ ಚಾರಿಟಬಲ್ ಟ್ರಸ್ಟ್‌ಗೆ ಉಳ್ಳಾಲ ತಾಲ್ಲೂಕಿನ ಕೊಣಾಜಿ ಗ್ರಾಮದಲ್ಲಿ ಮಂಜೂರಾಗಿರುವ 2 ಎಕರೆ ಭೂಮಿಯನ್ನು ಮಾರುಕಟ್ಟೆ ದರ ಇಲ್ಲವೇ ಮಾರ್ಗಸೂಚಿ ದರದ ಶೇ.25 ರಷ್ಟು ಶುಲ್ಕ ವಿಧಿಸಲು ಒಪ್ಪಿಗೆ.

ಆಧಾರ: ಕನ್ನಡ ಪ್ರಭ, ದಿನಾಂಕ:10.02.2023

30. ರಾಜ್ಯ ವಿಧಾನಸಭಾ ಚುನಾವಣೆ ಪೂರ್ವ ತಯಾರಿ ಪರಿಶೀಲನೆ

ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆ ಕುರಿತಂತೆ ಜಿಲ್ಲಾಮಟ್ಟದಲ್ಲಿ ನಡೆಯುತ್ತಿರುವ ಪೂರ್ವ ತಯಾರಿಗಳ ಪರಿಶೀಲನೆಗಾಗಿ ಭಾರತ ಚುನಾವಣಾ ಆಯೋಗದ ಮೂರು ತಂಡಗಳು 5ಕ್ಕೂ ಹೆಚ್ಚು ಜಿಲ್ಲೆಗಳಿಗೆ ನೇರವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಸ್ಥಳೀಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಭಾರತ ಚುನಾವಣಾ ಆಯೋಗದ ಉಪ ಮುಖ್ಯ ಆಯುಕ್ತರಾದ ಅಜಯ್ ಬಾಡು ನೇತೃತ್ವದ ತಂಡ ಯಾದಗಿರಿ ಜಿಲ್ಲೆಗೆ ಭೇಟಿ ನೀಡಿ ಇವಿಎಂ ಮತ್ತು ವಿ.ವಿ/ಪ್ಯಾಟ್‌ಗಳ ಪ್ರಾಥಮಿಕ ಹಂತದ ಪರಿಶೀಲನೆ ನಡೆಸಿತು.

ಮತದಾರರ ಜಾಗೃತಿಗಾಗಿ ಸ್ವೀಪ್ ಮೂಲಕ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳಿಗೆ ಚಾಲನೆ ನೀಡಿ, ಕಲಬುರಗಿ ವಲಯದ ಜಿಲ್ಲಾಧಿಕಾರಿಗಳೊಂದಿಗೆ ಚುನಾವಣಾ ಪೂರ್ವ ತಯಾರಿ ಕುರಿತಂತೆ ಸಭೆ ನಡೆಸಲಾಯಿತು. ಈ ತಂಡದ ಜೊತೆಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಮತ್ತು ಅಪರ ಮುಖ್ಯ ಚುನಾವಣಾಧಿಕಾರಿ ರಾಜೇಂದ್ರ ಚೋಳನ್ ಭಾಗವಹಿಸಿದ್ದರು.

ಇವಿಎಂ, ವಿ.ವಿ.ಪ್ಯಾಟ್ ಪರಿಶೀಲನೆ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶಕರಾದ ಶುಭ್ರ ಸಕ್ಸೇನಾ ಹಾಗೂ ಕಾರ್ಯದರ್ಶಿ ಬಿ.ಸಿ. ಪಾತ್ರ ಅವರ ನೇತೃತ್ವದ ತಂಡ ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಿ ಇವಿಎಂ ಮತ್ತು ವಿ.ವಿ.ಪ್ಯಾಟ್‌ಗಳ ಪ್ರಾಥಮಿಕ ಹಂತದ ಪರಿಶೀಲನೆ ನಡೆಸಿತು. ಮೈಸೂರು ವಲಯದ ಜಿಲ್ಲಾಧಿಕಾರಿಗಳೊಂದಿಗೆ ಚುನಾವಣಾ ಪೂರ್ವ ತಯಾರಿ ಕುರಿತಂತೆ ಸಭೆ ನಡೆಸಿದರು. ಈ ತಂಡದ ಜೊತೆಗೆ ರಾಜ್ಯ ಅಪರ ಮುಖ್ಯ ಚುನಾವಣಾಧಿಕಾರಿ ವೆಂಕಟೇಶ್ ಕುಮಾರ್ ಭಾಗವಹಿಸಿದ್ದರು. ಕೇಂದ್ರ ಚುನಾವಣಾ ಆಯೋಗದ ಸ್ವೀಪ್ ನಿರ್ದೇಶಕ ಸಂತೋಷ್ ಅಜ್ಮೀರ ನೇತೃತ್ವದ ತಂಡ ಮತದಾರರ ಜಾಗೃತಿಯ ರಾಜ್ಯ ಸ್ವೀಪ್ ಕಾರ್ಯಕ್ರಮಗಳ ಪೂರ್ವ ತಯಾರಿ ಕುರಿತಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಉಪಸ್ಥಿತರಿದ್ದರು. ಮೂರನೇ ತಂಡ ಸ್ವೀಪ್ ನಿರ್ದೇಶಕರ ನೇತೃತ್ವದಲ್ಲಿ ಬೆಂಗಳೂರು ವಲಯ ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿತು.

ಪೂರ್ವ ತಯಾರಿ ಖುದ್ದು ವೀಕ್ಷಣೆ: ಮೊದಲ ದಿನ ಮತಗಟ್ಟೆಗಳು ಸೇರಿ ವಿವಿಧ ರೀತಿಯ ಮೊದಲ ಹಂತದ ಪೂರ್ವ ತಯಾರಿ ಕಾರ್ಯಗಳನ್ನು ಖುದ್ದು ವೀಕ್ಷಿಸಿದ ತಂಡಗಳು 2ನೇ ದಿನ ಆಯಾ ವಲಯ ಮಟ್ಟದ ಜಿಲ್ಲೆಧಿಕಾರಿಗಳೊಂದಿಗೆ ಸಭೆ ನಡೆಸಿದರು. ಬೆಂಗಳೂರಿನಲ್ಲಿ ಮೂರು ತಂಡಗಳ ಹಿರಿಯ ಅಧಿಕಾರಿಗಳು ರಾಜ್ಯ ಮುಖ್ಯ ಚುನಾವಣಾಧಿಕಾರಿ ನೇತೃತ್ವದಲ್ಲಿ ಬೆಳಗಾವಿ ವಲಯದ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಸಂವಾದ ನಡೆಸಿದರು.

ನಡೆಸಿದ ಚರ್ಚೆ ಏನು: ಕಡಿಮೆ ನಡೆದಿರುವ ಮತಗಟ್ಟೆಗಳನ್ನು ಗುರುತಿಸುವುದು, ಕಡಿಮೆ ಮತದಾನಕ್ಕೆ ಕಾರಣಗಳನ್ನು ಕಂಡುಹಿಡಿದು ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದು, ಜಾಗೃತಿ ಮೂಲಕ ಮತದಾನದ ಪ್ರಮಾಣ ಹೆಚ್ಚಿಸುವುದು, ಮತಗಟ್ಟೆಗಳನ್ನು ಗುರುತಿಸುವುದು ಮತ್ತು ಅವುಗಳಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು, ಅಗತ್ಯವಿರುವ ಅಧಿಕಾರಿ/ ಸಿಬ್ಬಂದಿಯನ್ನು ನಿಯೋಜಿಸುವುದು, ಹೊಸ ತಂತ್ರಜ್ಞಾನ ಬಳಸಿಕೊಳ್ಳುವ ಮೂಲಕ ಹೆಚ್ಚಿನ ಯುವ ಮತದಾರರನ್ನು ಸೆಳೆಯುವ ಕುರಿತು ಚರ್ಚಿಸಲಾಯಿತು.

ಆಧಾರ: ವಿಜಯವಾಣಿ, ದಿನಾಂಕ:12.02.2023

31. ಏರೋ ಇಂಡಿಯಾದಲ್ಲಿ ನವಭಾರತ ಅನಾವರಣ

ಯಲಹಂಕ ವಾಯುಪಡೆ ಕೇಂದ್ರದಲ್ಲಿ ಆಯೋಜಿಸಲಾಗಿರುವ ಏರೋ ಇಂಡಿಯಾದ 14ನೇ ಆವೃತ್ತಿಯ ವೈಮಾನಿಕ ಪ್ರದರ್ಶನಕ್ಕೆ ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿ 13 ಬೆಳಗ್ಗೆ 9.30ಕ್ಕೆ ಚಾಲನೆ ನೀಡಲಿದ್ದಾರೆ. ಏಷ್ಯಾದಲ್ಲಿಯೇ ಅತಿದೊಡ್ಡದಾದ ಈ ವೈಮಾನಿಕ ಪ್ರದರ್ಶನದಲ್ಲಿ 75 ಸಾವಿರ ಕೋಟಿ ರೂ. ಹೂಡಿಕೆ ನಿರೀಕ್ಷಿಸಲಾಗಿದೆ. ಕರ್ನಾಟಕದ 32 ಒಡಂಬಡಿಕೆ ಸೇರಿ 251 ಕಂಪನಿಗಳು ಒಪ್ಪಂದ ಮಾಡಿಕೊಳ್ಳುವ ನಿರೀಕ್ಷೆ ಇದೆ. ನವಭಾರತದ ಬೆಳವಣಿಗೆ ಮತ್ತು ಉತ್ಪಾದನಾ ಸಾಮರ್ಥ್ಯ ಪ್ರದರ್ಶಿಸಲು 'ರಕ್ಷಣಾ ವಲಯದಲ್ಲಿ ಸ್ವಾವಲಂಬಿ ಭಾರತ' ಗುರಿಯನ್ನು ಸಾಧಿಸಲು ವಿಶ್ವ ದರ್ಜೆಯ ದೇಶೀಯ ರಕ್ಷಣಾ ಉದ್ಯಮ ರೂಪಿಸುವ ಗುರಿ ಹೊಂದಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಭಾನುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಪೂರ್ವಭಾವಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 35 ಸಾವಿರ ಚ.ಮೀ. ವಿಸ್ತೀರ್ಣದಲ್ಲಿ ವಸ್ತುಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಒಟ್ಟು 809 ಕಂಪನಿಗಳು ಭಾಗವಹಿಸುತ್ತಿದ್ದು, 98 ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಫೆಬ್ರವರಿ 14ರಂದು 32 ದೇಶಗಳ ರಕ್ಷಣಾ ಸಚಿವರು, 28 ಎರ್‌ಚೀಫ್‌ಗಳು ಭಾಗವಹಿಸಲಿದ್ದಾರೆ. ಸಂಶೋಧನೆ ಮತ್ತು ಅಭಿವೃದ್ಧಿ (ಆರ್‌ಆ್ಯಂಡ್‌ಡಿ), ಉತ್ಪಾದನೆ, ಬಾಹ್ಯಾಕಾಶ, ಸೈಬರ್ ಸೆಕ್ಯುರಿಟಿ, ಕೃತಕ ಬುದ್ಧಿಮತ್ತೆ, ನಿರ್ವಹಣಾ ಭದ್ರತೆಯಲ್ಲಿ ಜೊತೆಯಾಗಿ ಸಾಗಲು ಚರ್ಚಿಸಲಾಗುತ್ತದೆ. ಫೆ.13ರಿಂದ 17ರ ವರೆಗೆ 5 ದಿನಗಳ ಪ್ರದರ್ಶನದಲ್ಲಿ ಮೊದಲ 3 ದಿನ ವ್ಯಾಪಾರ, ವಹಿವಾಟಿಗೆ ಆದ್ಯತೆ ನೀಡಲಿದ್ದು, ಕೊನೆಯ ಎರಡು ದಿನ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದರು.

ಬೆಂಗಳೂರಿನಲ್ಲಿ ಏರ್‌ಕ್ರಾಫ್ಟ್ ಉತ್ಪಾದನೆ ಗುರಿ: ಬೆಂಗಳೂರು ಏರೋಸ್ಪೇಸ್ ಕೇಂದ್ರವಾಗಿದ್ದು, ವೈಮಾನಿಕ ಪ್ರದರ್ಶನಕ್ಕೆ ಸೂಕ್ತ ಸ್ಥಳವಾಗಿದೆ. ವಾಣಿಜ್ಯ ಮತ್ತು ರಕ್ಷಣಾ ಸಾಮಗ್ರಿಗಳ ಉತ್ಪಾದನೆ ಜೊತೆಗೆ, ಬೆಂಗಳೂರಿನಲ್ಲಿ ಏರ್‌ಕ್ರಾಫ್ಟ್ ತಯಾರಿಸುವ ಗುರಿ ಹೊಂದಲಾಗಿದೆ. ಈ ಕಾರ್ಯಸಾಧನೆಗೆ ಜಾಗತಿಕವಾಗಿ ಕ್ರಮ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಏರೋಸ್ಪೇಸ್‌ಗೆ ಸಂಬಂಧಿಸಿದಂತೆ ಕರ್ನಾಟಕ ಮಹತ್ವದ ಪಾತ್ರ ವಹಿಸಿದೆ. 1940ರಲ್ಲಿ ಎಚ್‌ಎಎಲ್ ಸ್ಥಾಪನೆಯಾಗಿದ್ದು, ಎನ್‌ಎಎಲ್, ಬಿಎಚ್‌ಇಎಲ್, ಡಿಆರ್‌ಡಿಒ ಎಲ್ಲವೂ ಆರ್‌ಆ್ಯಂಡ್‌ಡಿ, ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿವೆ. 1950ರಲ್ಲಿ ಬೆಂಗಳೂರಿನಲ್ಲಿ ಇಸ್ರೋ ಆರಂಭವಾಯಿತು. ಪ್ರತಿ ದಶಕದಲ್ಲಿ ಏರೋಸ್ಪೇಸ್ ವಲಯ ಅಭಿವೃದ್ಧಿಯಾಗಿದೆ. 1960ರ ಆರ್ಯಭಟ ಉಪಗ್ರಹ ಉಡಾವಣೆಯಲ್ಲೂ ಬೆಂಗಳೂರು ಪ್ರಮುಖ ಪಾತ್ರ ವಹಿಸಿತ್ತು. ಸದ್ಯ ದೇಶದ ಶೇ. 67 ಏರೋಸ್ಪೇಸ್ ಉಪಕರಣಗಳು ರಾಜ್ಯದಲ್ಲಿಯೇ ಉತ್ಪಾದನೆಯಾಗುತ್ತಿವೆ ಎಂದು ಸಿಎಂ ಸಂತಸ ವ್ಯಕ್ತಪಡಿಸಿದರು.

ಆಧಾರ: ವಿಜಯವಾಣಿ, ದಿನಾಂಕ: 13.02.2023

32. ಆಂಧ್ರಕ್ಕೆ ಕನ್ನಡಿಗ ರಾಜ್ಯಪಾಲ

ಆರು ವರ್ಷ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿದ್ದು, ಇತ್ತೀಚೆಗೆ ನಿವೃತ್ತಿಯಾದ ಕನ್ನಡಿಗ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಒಟ್ಟಾರೆಯಾಗಿ, ಆರು ರಾಜ್ಯಗಳಿಗೆ ಹೊಸ ರಾಜ್ಯಪಾಲರ ನೇಮಕವಾಗಿದ್ದು, ಏಳು ರಾಜ್ಯಪಾಲರನ್ನು ವರ್ಗಾವಣೆ ಮಾಡಲಾಗಿದೆ. ನ್ಯಾ. ಅಬ್ದುಲ್ ನಜೀರ್ ಕಳೆದ ಜನವರಿ 4ರಂದು ನಿವೃತ್ತಿಯಾಗಿ 36 ದಿನಗಳಲ್ಲಿ ರಾಜ್ಯಪಾಲ ಹುದ್ದೆಗೆ ನೇಮಕಗೊಂಡಿದ್ದಾರೆ. ಅವರು, ನಿವೃತ್ತರಾದ ಬಳಿಕ ರಾಜ್ಯಪಾಲ ಹುದ್ದೆಗೇರುತ್ತಿರುವ ಸುಪ್ರೀಂ ಕೋರ್ಟ್‌ನ ಮೂರನೇ ನ್ಯಾಯಮೂರ್ತಿ ಎನಿಸಲಿದ್ದಾರೆ. 2014ರಲ್ಲಿ ಮುಖ್ಯ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತರಾಗಿದ್ದ ತಮಿಳುನಾಡು ಮೂಲದ ಜಸ್ಟಿಸ್ ಪಿ.ಸದಾಶಿವಂ ಅವರನ್ನು ಕೇರಳ ರಾಜ್ಯಪಾಲರಾಗಿ ಎನ್‌ಡಿಎ ಸರ್ಕಾರ ನೇಮಿಸಿತ್ತು. ಅದಕ್ಕೂ ಮುನ್ನ 1997ರಲ್ಲಿ ಎಚ್.ಡಿ.ದೇವೇಗೌಡರು ಪ್ರಧಾನಿಯಾಗಿದ್ದಾಗ ಸುಪ್ರೀಂಕೋರ್ಟ್ ನಿಂದ ನಿವೃತ್ತಿಯಾಗಿದ್ದ ಫಾತಿಮಾ ಬೀಬಿ ಅವರನ್ನು ತಮಿಳುನಾಡು ರಾಜ್ಯಪಾಲರಾಗಿಸಲಾಗಿತ್ತು. ಫಾತಿಮಾ ಬೀಬಿ 1992ರಲ್ಲಿ ನಿವೃತ್ತಿಯಾಗಿದ್ದರು. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳನ್ನು ಗವರ್ನರ್ ಹುದ್ದೆಗೆ ನೇಮಕ ಮಾಡುವ ಪರಂಪರೆ ಆರಂಭಿಸಿದ್ದು ಅಂದಿನ ದೇವೇಗೌಡರ ಸರ್ಕಾರ, 2014ರಲ್ಲಿ ಮೋದಿ ಸರ್ಕಾರ ಇದನ್ನು ಮುಂದುವರಿಸಿತು. ಕಾನೂನು ಕ್ಷೇತ್ರದಲ್ಲಿ ಪಾಂಡಿತ್ಯ ಹೊಂದಿರುವ ನಿವೃತ್ತ ನ್ಯಾಯಮೂರ್ತಿ ನಜೀರ್ ಅವರ ಅನುಭವ ಬಳಸಿಕೊಳ್ಳಬೇಕು ಎಂದು ಬಿಜೆಪಿಯ ಪ್ರಮುಖ ನಾಯಕರು ಕೇಂದ್ರ

ಸರ್ಕಾರಕ್ಕೆ ಸಲಹೆ ನೀಡಿದ್ದ ಹಿನ್ನೆಲೆಯಲ್ಲಿ ಅವರನ್ನು ಗವರ್ನರ್ ಹುದ್ದೆಗೆ ನೇಮಕ ಮಾಡಲಾಗಿದೆ. ನಜೀರ್ ಅವರೊಂದಿಗೆ ಚರ್ಚಿಸಿ, ಒಪ್ಪಿಗೆ ಪಡೆದುಕೊಂಡು ಕೇಂದ್ರ ತೀರ್ಮಾನ ಪ್ರಕಟಿಸಿದೆ ಎಂದು ಕೇಂದ್ರ ಕಾನೂನು ಇಲಾಖೆ ಉನ್ನತ ಮೂಲಗಳು ವಿಜಯವಾಣಿಗೆ ಖಚಿತಪಡಿಸಿವೆ.

ಪ್ರಮುಖ ತೀರ್ಪುಗಳಲ್ಲಿ ಪಾತ್ರ: 2019ರಲ್ಲಿ ಅಯೋಧ್ಯೆಯ ರಾಮಜನ್ಮಭೂಮಿ ವಿವಾದ ಕುರಿತು ತೀರ್ಪು ನೀಡಿದ್ದ ಸಾಂವಿಧಾನಿಕ ಪೀಠದ ಸದಸ್ಯರಾಗಿದ್ದ ನ್ಯಾಯಮೂರ್ತಿ ನಜೀರ್, ವಿವಾದಿತ ಭೂಮಿ ಹಿಂದೂಗಳಿಗೆ ಸೇರಬೇಕೆಂಬ ಅಭಿಪ್ರಾಯಕ್ಕೆ ಸಮ್ಮತಿ ಸೂಚಿಸಿದ್ದರು. ಮುಸ್ಲಿಂ ಧರ್ಮದಲ್ಲಿ ಚಾಲ್ತಿಯಲ್ಲಿದ್ದ ತ್ರಿವಳಿ ತಲಾಕ್ ನಿಷೇಧ ಹೇರಿದ್ದ ನ್ಯಾಯಪೀಠದ ಸದಸ್ಯರಾಗಿದ್ದ ನ್ಯಾ.ಅಬ್ದುಲ್ ನಜೀರ್, ಕೇಂದ್ರ ಸರ್ಕಾರದ ನೋಟು ರದ್ದತಿ ಕ್ರಮ ಎತ್ತಿಹಿಡಿದ ಮತ್ತು ಖಾಸಗಿತನ ಹಕ್ಕುಗಳ ಪ್ರತಿಪಾದನೆ ಪರ ತೀರ್ಪು ನೀಡಿ ಗಮನ ಸೆಳೆದಿದ್ದರು. ಅಯೋಧ್ಯೆ ಜಮೀನು ವಿವಾದ ತೀರ್ಪು ನೀಡಿದ ಸಾಂವಿಧಾನಿಕ ಪೀಠದ ಮುಖ್ಯಸ್ಥರಾಗಿದ್ದ ಅಂದಿನ ಸಿಜೆಐ ರಂಜನ್ ಗೊಗೋಯ್ ಅವರಿಗೆ ನಿವೃತ್ತಿಯಾದ ಕೆಲವೇ ದಿನಗಳಲ್ಲಿ ರಾಜ್ಯಸಭೆ ಸದಸ್ಯತ್ವ ನೀಡಲಾಗಿತ್ತು.

ಸವಾಲಿನ ಹಾದಿ: ಗವರ್ನರ್ ಆಗಿ ಮುಂದಿನ ಸವಾಲುಗಳನ್ನು ನ್ಯಾಯಮೂರ್ತಿ ನಜೀರ್ ಹೇಗೆ ನಿರ್ವಹಿಸಲಿದ್ದಾರೆ ಎನ್ನುವುದು ಕುತೂಹಲ. ಆಂಧ್ರಪ್ರದೇಶದಲ್ಲಿ ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್ಆರ್ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಕೇಂದ್ರದಲ್ಲಿ ಮೋದಿ ಸರ್ಕಾರಕ್ಕೆ ವೈಎಸ್ಆರ್ ಬೆಂಬಲ ನೀಡಿರುವುದರಿಂದ ಸ್ಥಳೀಯ ಸರ್ಕಾರ ಹಾಗೂ ನೂತನ ರಾಜ್ಯಪಾಲರ ನಡುವೆ ಸಂಘರ್ಷ ಏರ್ಪಡುವ ಸಾಧ್ಯತೆ ಕಡಿಮೆ ಎಂದೂ ವಿಶ್ಲೇಷಿಸಲಾಗಿದೆ.

ಮೂಡುಬಿದಿರೆಯಿಂದ ಸುಪ್ರೀಂ ಕೋರ್ಟ್‌ವರೆಗೆ

ಮೂಡುಬಿದರೆ ಬೆಳುವಾಯಿಕಾನ ನ್ಯಾ.ಅಬ್ದುಲ್ ನಜೀರ್ ಹುಟ್ಟೂರು. ಫಕೀರ್‌ಸಾಬ್ ಹಮೀದಾಬಿ ದಂಪತಿಯ ಮೊದಲ ಮಗನಾಗಿ ಜನಿಸಿದ ಅವರು, ಕಡಲಕೆರೆ ಸಂತ ಇನ್ನೇಶಿಯಸ್ ಶಾಲೆಯಲ್ಲಿ ಎರಡನೇ ತರಗತಿ ಓದಿ, ಪ್ರಾಥಮಿಕ ಶಿಕ್ಷಣವನ್ನು ಅಲಂಗಾರು ಸೇಂಟ್ ಥಾಮಸ್ ಶಾಲೆಯಲ್ಲಿ ಮುಂದುವರಿಸಿದರು. ಮೂಡುಬಿದಿರೆಯಲ್ಲಿಯೇ ಪ್ರೌಢ, ಪಿಯು ಹಾಗೂ – ಬಿ.ಕಾಂ ಪದವಿ ವ್ಯಾಸಂಗ ಮಾಡಿದರು. ಬಳಿಕ ಮಂಗಳೂರಿನ ಎಸ್. ಡಿಎಂ ಕಾನೂನು ಕಾಲೇಜಿನಲ್ಲಿ ಎಲ್ಎಲ್ಬಿ ಪದವಿ ಗಳಿಸಿದರು. ಕಾರ್ಕಳದ ಸಮೀರಾ ಅವರನ್ನು 1984ರಲ್ಲಿ ಮದುವೆಯಾದರು. ದಂಪತಿಯ ಪುತ್ರ ಅಕೀಲ್ ಹಾಗೂ ಪುತ್ರಿ ಇರ್ಫಾನಾ ಇಬ್ಬರೂ ಬೆಂಗಳೂರಿನಲ್ಲಿ ವಕೀಲ ವೃತ್ತಿ ನಡೆಸುತ್ತಿದ್ದಾರೆ. 1983ರಲ್ಲಿ ಕಾರ್ಕಳ ವಕೀಲ ಎಂ.ಕೆ. ವಿಜಯಕುಮಾರ್ ಶಿಷ್ಯರಾಗಿ ವೃತ್ತಿ ಆರಂಭಿಸಿದರು. ಬಳಿಕ ಹೈಕೋರ್ಟ್‌ನಲ್ಲಿ ವಕೀಲಿಕೆ ಮುಂದುವರಿಸಿದರು. 2003ರಲ್ಲಿ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕವಾಗಿ, ನಂತರ

ಪದೋನ್ನತಿ ಹೊಂದಿದರು. 2017ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗುವ ಮೊದಲೇ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದವರಲ್ಲಿ ಇವರು ಮೂರನೆಯವರು.

ಹುಟ್ಟೂರಿನಲ್ಲಿ ನ್ಯಾಯವ್ಯವಸ್ಥೆಯ ಸುಧಾರಣೆ: ಮೂಡು ಬಿದಿರೆಯಲ್ಲಿ ಸುಸಜ್ಜಿತ ನ್ಯಾಯಾಲಯ ಸಂಕೀರ್ಣ ಹಾಗೂ ವಕೀಲರ ಭವನ ನಿರ್ಮಾಣವಾಗುವಲ್ಲಿ ನಜೀರ್ ಪ್ರಮುಖ ಪಾತ್ರವಹಿಸಿದ್ದರು. ಮೂಡುಬಿದಿರೆಯಲ್ಲಿ ಇತ್ತೀಚೆಗಷ್ಟೇ ಹಿರಿಯ ಸಿವಿಲ್ ಜಡ್ಜ್ ಮತ್ತು ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ ಮಂಜೂರಾತಿಗೆ ಸಹಕರಿಸಿದರು. ತಾವು ವೃತ್ತಿಜೀವನವನ್ನು ಪ್ರಾರಂಭಿಸಿದ ಕಾರ್ಕಳದಲ್ಲಿ ಸುಸಜ್ಜಿತ ನ್ಯಾಯಾಲಯ ಸಂಕೀರ್ಣದ ನಿರ್ಮಾಣದಲ್ಲೂ ಅವರ ಕೊಡುಗೆ ಇದೆ.

ನ್ಯಾಯದ ಕಾಳಜಿ, ಕಲಾಭಿರುಚಿ: ವಿವಾದಾತ್ಮಕ ಪ್ರಕರಣಗಳನ್ನು ಸೂಕ್ತ ರೀತಿಯಲ್ಲಿ ವಿಮರ್ಶಿಸಿ ತೀರ್ಪು ನೀಡುವಲ್ಲಿ ಪ್ರಾವೀಣ್ಯ ಹೊಂದಿರುವ ನ್ಯಾಯಮೂರ್ತಿ ನಜೀರ್ ಬಡವರ, ಅಶಕ್ತರ ಬಗ್ಗೆ ಕಾಳಜಿ ಹೊಂದಿದವರು. ಸಮಾಜದ ದುರ್ಬಲರಿಗೆ ಕನಿಷ್ಠ ವೆಚ್ಚದಲ್ಲಿ ಶೀಘ್ರ ನ್ಯಾಯ ಸೇವೆ ಒದಗಿಸುವಂತೆ ವಕೀಲರಿಗೂ ಸಲಹೆ ನೀಡುತ್ತಿದ್ದರು. ಕಲಾಭಿರುಚಿಯ ನಜೀರ್, ವಿದ್ಯಾರ್ಥಿ ದೆಸೆಯಲ್ಲಿ ನಾಟಕಗಳಲ್ಲಿ ಬಣ್ಣ ಹಚ್ಚಿದ್ದರು

ಕಾಂಗ್ರೆಸ್ ಆಕ್ಷೇಪ

ನಿವೃತ್ತ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದಕ್ಕೆ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ. ಇಂಥ ನೇಮಕಾತಿಯು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ದೊಡ್ಡ ಅಪಾಯ ಎಂದು ಬಿಜೆಪಿಯ ಹಿರಿಯ ನಾಯಕ ದಿವಂಗತ ಅರುಣ್ ಜೇಟ್ಲಿ ಹೇಳಿದ್ದರು ಎಂದು ತನ್ನ ಟೀಕೆಯನ್ನು ಸಮರ್ಥಿಸಿಕೊಂಡಿದೆ. 2013ರಲ್ಲಿ ಅರುಣ್ ಜೇಟ್ಲಿ ನೀಡಿದ್ದ ಹೇಳಿಕೆಯ ವಿಡಿಯೋವನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಟ್ವೀಟ್ನಲ್ಲಿ ಹಂಚಿಕೊಂಡಿದ್ದಾರೆ. ಮಾಜಿ ಜಡ್ಜ್‌ಗಳಿಗೆ ಉನ್ನತ ಹುದ್ದೆ ನೀಡುವುದು ನಿವೃತ್ತಪೂರ್ವ ತೀರ್ಪುಗಳ ಮೇಲೆ ಪ್ರಭಾವ ಬೀರುತ್ತದೆ ಎಂದು ಜೇಟ್ಲಿ ಹೇಳಿದ್ದರು ಎಂದು ಕಾಂಗ್ರೆಸ್ನ ಇನ್ನೊಬ್ಬ ಮುಖಂಡ ಅಭಿಷೇಕ್ ಮನು ಸಿಂಘಿ ಹೇಳಿದ್ದಾರೆ.

ಹೊಸ ರಾಜ್ಯಪಾಲರು

ನಿವೃತ್ತ ನ್ಯಾಯಮೂರ್ತಿ ಅಬ್ದುಲ್ ನಜೀರ್ (ಆಂಧ್ರಪ್ರದೇಶ)

ಲಕ್ಷ್ಮಣ ಪ್ರಸಾದ್ ಆಚಾರ್ಯ (ಸಿಕ್ಕಿಂ)

ಸಿ.ಪಿ.ರಾಧಾಕೃಷ್ಣನ್ (ಜಾರ್ಖಂಡ್)

ಶಿವ ಪ್ರತಾಪ್ ಶುಕ್ಲಾ (ಹಿಮಾಚಲ ಪ್ರದೇಶ)

ಗುಲಾಬ್ ಚಂದ್ ಕಟಾರಿಯಾ (ಅಸ್ಸಾಂ)

ನಿವೃತ್ತ ಲೆ.ಜ. ಕೈವಲ್ಯ ತ್ರಿವಿಕ್ರಮ ಪರ್ನಾಯಕ್ (ಅರುಣಾಚಲ ಪ್ರದೇಶ)

ವರ್ಗಾವಣೆಗೊಂಡವರು

ರಮೇಶ್ ಬೈಸ್– ಜಾರ್ಖಂಡ್‌ನಿಂದ ಮಹಾರಾಷ್ಟ್ರಕ್ಕೆ

ವಿಶ್ವಭೂಷಣ ಹರಿಚಂದನ್ ಆಂಧ್ರದಿಂದ ಛತ್ತೀಸ್‌ಗಢಕ್ಕೆ

ನಿವೃತ್ತ ಬ್ರಿಗೇಡಿಯರ್ ಬಿ.ಡಿ.ಮಿಶ್ರಾ ಅರುಣಾಚಲ ಪ್ರದೇಶದಿಂದ ಲಡಾಖ್

ಸುಶ್ರೀ ಅನಸೂಯಾ ಉಯಿಕೇ ಛತ್ತೀಸ್‌ಗಢದಿಂದ ಮಣಿಪುರ

ಲ.ಗಣೇಶನ್ ಮಣಿಪುರದಿಂದ ನಾಗಾಲ್ಯಾಂಡ್

ಫಾಗು ಚೌಹಾಣ್ ಬಿಹಾರದಿಂದ ಮೇಘಾಲಯ

ವಿಶ್ವನಾಥ ಅರ್ಲೇಕರ್ ಹಿಮಾಚಲ ಪ್ರದೇಶದಿಂದ ಬಿಹಾರ

ಬೊಮ್ಮಾಯಿ ಸ್ವಾಗತ

ನ್ಯಾಯಮೂರ್ತಿ ನಜೀರ್ ನೇಮಕವನ್ನು ಸಿಎಂ ಬಸವರಾಜ ಬೊಮ್ಮಾಯಿ ಸ್ವಾಗತಿಸಿದ್ದು, ರಾಜ್ಯಪಾಲ ಹುದ್ದೆಗೆ ಕನ್ನಡಿಗರೊಬ್ಬರನ್ನು ಆಯ್ಕೆ ಮಾಡಿದ್ದು ಹೆಮ್ಮೆಯ ವಿಷಯ ಎಂದಿದ್ದಾರೆ. ಕಾಂಗ್ರೆಸ್ ಸಂವಹನ ವಿಭಾಗದ ಮುಖ್ಯಸ್ಥ ಜೈರಾಮ್ ರಮೇಶ್ ಈ ನೇಮಕಾತಿ ಬಗ್ಗೆ ಆಕ್ಷೇಪ ತೆಗೆದಿದ್ದು, ನ್ಯಾಯಮೂರ್ತಿಗಳಿಗೆ ನಿವೃತ್ತಿ ನಂತರ ಹುದ್ದೆಗಳನ್ನು ನೀಡುವ ಬಗ್ಗೆ ಮಾಜಿ ಕೇಂದ್ರ ಸಚಿವ ದಿವಂಗತ ಅರುಣ್ ಜೇಟ್ಲಿ ಅವರ ಕಿಡಿನುಡಿಗಳನ್ನು ಟ್ವಿಟ್ ಮಾಡಿದ್ದಾರೆ. ಯುಪಿಎ ಸರ್ಕಾರವಿದ್ದಾಗ ರಾಜ್ಯಸಭೆ ವಿಪಕ್ಷ ನಾಯಕರಾಗಿದ್ದ ಜೇಟ್ಲಿ, ನಿವೃತ್ತಿ ನಂತರದ ಹುದ್ದೆಗಳಿಗಾಗಿ ನ್ಯಾಯಾಧೀಶರು ಸರ್ಕಾರಗಳ ಮೇಲೆ ಪ್ರಭಾವ ಬೀರುವ ಬಗ್ಗೆ ಸಂಸತ್ತಿನಲ್ಲೂ ತೀವ್ರ ವಾಗ್ದಾಳಿ ನಡೆಸಿದ್ದರು. ಆದರೆ, ಅವರದ್ದೇ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪಿ. ಸದಾಶಿವಂ ಸಿಜೆಐ ಹುದ್ದೆಯಿಂದ ನಿವೃತ್ತರಾಗುತ್ತಿದ್ದಂತೆಯೇ ರಾಜ್ಯಪಾಲರ ಹುದ್ದೆ ನೀಡಿತ್ತು.

ಆಧಾರ: ವಿಜಯವಾಣಿ, ದಿನಾಂಕ: 13.02.2023

33. ರಾಜ್ಯದಲ್ಲಿ 2 ಹಂತದಲ್ಲಿ ಚುನಾವಣೆ ನಡೆಸಲು ಗುಪ್ತ ವರದಿ

ರಾಜ್ಯ ವಿಧಾನಸಭೆ ಚುನಾವಣೆಯನ್ನು ಒಂದೇ ಹಂತದಲ್ಲಿ ನಡೆಸುವ ಬದಲು ಎರಡು ಅಥವಾ ಮೂರು ಹಂತಗಳಲ್ಲಿ ನಡೆಸುವುದು ಸೂಕ್ತವೆಂದು ಗುಪ್ತದಳ ಭಾರತ ಚುನಾವಣಾ ಆಯೋಗಕ್ಕೆ ಸಲಹೆ ನೀಡಿದೆ.

2013 ಹಾಗೂ 2018ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಗಳೂ ಒಂದೇ ಹಂತದಲ್ಲಿ ನಡೆದಿದ್ದು, ಯಾವುದೇ ಅಹಿತಕರ ಘಟನೆಗಳು ನಡೆದಿರಲಿಲ್ಲ. ಆದರೆ ಈ ಬಾರಿ ಶಾಂತಿಯುತವಾಗಿ ನಡೆಯುವ ಸಾಧ್ಯತೆಗಳಿಲ್ಲ ಎಂಬ ಆತಂಕವನ್ನು ಗುಪ್ತದಳ ವ್ಯಕ್ತಪಡಿಸಿದೆ ಎಂದು ಮೂಲಗಳು ಖಚಿತಪಡಿಸಿವೆ.

ಈ ಬಾರಿಯ ಚುನಾವಣೆ ಒಂದಿಲ್ಲೊಂದು ಕಾರಣಕ್ಕೆ ರಾಜ್ಯದಲ್ಲಿನ ಮೂರು ಪ್ರಮುಖ ರಾಜಕೀಯ ಪಕ್ಷಗಳಿಗೆ 'ಮಾಡು ಇಲ್ಲವೆ ಮಡಿ' ಹೋರಾಟವಾಗಿ ಮಾರ್ಪಟ್ಟಿದೆ. ಸ್ವಂತ ಶಕ್ತಿಯ ಮೇಲೆ ಅಧಿಕಾರದ ಸೂತ್ರವನ್ನಿಡಿಯಬೇಕು ಎಂಬುದು ಮೂರು ಪಕ್ಷಗಳ ಗುರಿಯಾಗಿದೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಜಿದ್ದಾಜಿದ್ದಿ ಹೋರಾಟಕ್ಕೆ ಸಿದ್ಧತೆ ನಡೆಸುತ್ತಿವೆ. ರಾಜಕೀಯ ನಾಯಕರ ನಡುವೆ ಮಾತಿನ ಏಟು–ಎದಿರೇಟು ಕೇಳಿ ಬರುತ್ತಿದೆ. ಚುನಾವಣೆ ದಿನ ಹತ್ತಿರ ಬಂದಂತೆ ಇನ್ನಷ್ಟು ತೀವ್ರವಾಗುವ ಎಲ್ಲಾ ಲಕ್ಷಣಗಳು ಇವೆ. ಈ ಹಂತದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದು ಅತಿಮುಖ್ಯವಾಗಿದೆ. ಆದ್ದರಿಂದಲೇ ಒಂದೇ ಹಂತದಲ್ಲಿ ಚುನಾವಣೆ ಬೇಡ ಎಂದು ಗುಪ್ತದಳ ಆತಂಕ ವ್ಯಕ್ತಪಡಿಸುತ್ತಿದೆ. ನಾಯಕರ ಮಾತಿನ ವರಸೆ ಆಯಾ ಪಕ್ಷಗಳ ಕಾರ್ಯಕರ್ತರಿಗೆ ಜೀವ ತುಂಬುವುದರಿಂದ ಪ್ರಚಾರದ ಕಣ ಯಾವ ಮಟ್ಟಕ್ಕೆ ಬೇಕಾದರೂ ಮುಟ್ಟಬಹುದೆಂದು ಹೇಳಲಾಗುತ್ತಿದೆ.

ಹಿಂಸೆಯ ರೂಪ: ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಹಿಂಸಾತ್ಮಕ ಘಟನೆಗಳು ನಡೆಯುವುದು ಮಾಮೂಲಿ. ಮತಗಟ್ಟೆ ವಶ, ಮತಯಂತ್ರಗಳನ್ನು ಕದ್ದುಕೊಂಡು ಹೋಗುವುದು ನಡೆಯುತ್ತಿರುತ್ತದೆ. ಹಿಂಸೆಗೆ ಜನ ಬಲಿಯಾಗಿರುವ ಉದಾಹರಣೆಗಳು ಇವೆ. ಆದರೆ ರಾಜ್ಯದಲ್ಲಿ ಅಂತಹ ಘಟನೆಗಳು ನಡೆದಿಲ್ಲ. ಕೇವಲ ಮಾತಿನ ಚಕಮಕಿಗಳಷ್ಟೇ ಸೀಮಿತವಾಗಿವೆ. ಆದರೆ ರಾಜ್ಯದಲ್ಲಿ ನಡೆದಿರುವ ಇತ್ತೀಚಿನ ಕೆಲವು ಘಟನೆಗಳು ಶಾಂತಿಯುತ ಚುನಾವಣೆ ಸಾಧ್ಯವಿಲ್ಲವೇನೋ ಎಂಬ ಪರಿಸ್ಥಿತಿಯನ್ನು ನಿರ್ಮಿಸಿವೆ. ಆದ್ದರಿಂದ ಚುನಾವಣೆಯ ಕಣ ಈ ಬಾರಿ ಹಿಂಸೆಯ ರೂಪ ಪಡೆಯುವ ಸಾಧ್ಯತೆಗಳನ್ನು ಗುಪ್ತದಳ ಗುರುತಿಸಿದೆ ಎಂದು ಮೂಲಗಳು ಹೇಳುತ್ತವೆ.

ಎರಡು ಹಂತಕ್ಕೆ ಒಲವು: ಗುಪ್ತದಳ ವರದಿಯ ಹಿನ್ನೆಲೆಯಲ್ಲಿಯೇ ಚುನಾವಣಾ ಆಯೋಗ ಸಹ ಎರಡು ಹಂತದಲ್ಲಿ ಚುನಾವಣೆ ನಡೆಸುವ ಬಗ್ಗೆ ಚರ್ಚೆ ನಡೆಸಿದೆ ಎಂದು ಹೇಳಲಾಗುತ್ತಿದೆ. ರಾಜ್ಯವನ್ನು ಲಂಬವಾಗಿ ವಿಭಜಿಸಿ ಎರಡು ಭಾಗ ಮಾಡಿ ಎರಡು ದಿನ ಚುನಾವಣೆ ನಡೆಸಲಾಗುತ್ತದೆ ಎಂದು ಹೇಳಲಾಗುತ್ತಿದೆ.

ಆದರೆ ಮುಖ್ಯ ಚುನಾವಣಾ ಆಯುಕ್ತರು ರಾಜ್ಯ ಭೇಟಿಯ ನಂತರವೇ ಈ ಬಗ್ಗೆ ಅಂತಿಮವಾಗಲಿದೆ ಎನ್ನಲಾಗಿದೆ. ಈಗಾಗಲೇ ಸಭೆಗಳನ್ನು ನಡೆಸುತ್ತಿರುವ ಚುನಾವಣಾ ಆಯೋಗ ಸದ್ಯದಲ್ಲಿಯೆ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾ ನಿರ್ದೇಶಕರನ್ನು ದೆಹಲಿಗೆ ಕರೆಸಿ ಸಭೆ ನಡೆಸಲಿದೆ. ಆ ನಂತರ ಆಯೋಗ ರಾಜ್ಯಕ್ಕೆ ಭೇಟಿ ನೀಡಿ ರಾಜಕೀಯ ಪಕ್ಷಗಳ ಅಭಿಪ್ರಾಯ ಪಡೆಯಲಿದೆ. ಈ ಎಲ್ಲ ಪ್ರಕ್ರಿಯೆಗಳು ಮುಗಿದ ನಂತರವಷ್ಟೇ ಎಷ್ಟು ಹಂತಗಳಲ್ಲಿ ಚುನಾವಣೆ ನಡೆಯಲಿದೆ ಎಂಬುದು ಅಂತಿಮವಾಗಲಿದೆ ಎಂದು ಮೂಲಗಳು ಹೇಳಿವೆ.

ಯಾವ ವರ್ಷ ಎಷ್ಟು ಹಂತ

- 2004– ಎರಡು ಹಂತ (ಏಪ್ರಿಲ್ 20 ಮತ್ತು 26)

- 2008– ಮೂರು ಹಂತ (ಮೇ 10, 16 ಮತ್ತು 22)
- 2013 ಒಂದೇ ಹಂತ (ಮೇ 05)
- 2018 ಒಂದೇ ಹಂತ (ಮೇ12)

ಒಂದೇ ಹಂತ ಏಕೆ ಬೇಡ

- ಪೊಲೀಸ್ ಸಿಬ್ಬಂದಿ ಸಾಕಾಗುವುದಿಲ್ಲ.
- ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಪೊಲೀಸರ ನಿಯೋಜನೆ ಕಷ್ಟವಾಗುತ್ತದೆ.
- ಕಾನೂನು ಸುವ್ಯವಸ್ಥೆ ಕಾಪಾಡುವುದು ಕಷ್ಟವಾಗುತ್ತದೆ.
- ನಾಯಕರಿಗೂ ಪ್ರಚಾರಕ್ಕೆ ಸಮಯ ಸಾಕಾಗುವುದಿಲ್ಲ.

2 ಹಂತವಾದರೆ ಅನುಕೂಲವೇನು

- ಪೊಲೀಸರನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ನಿಯೋಜಿಸಲು ಅನುಕೂಲ.
- ಹಿಂಸೆ ನಡೆಯದಂತೆ ತಡೆಗಟ್ಟಬಹುದು.
- ರಾಜಕೀಯ ಪಕ್ಷಗಳಿಗೆ ಪ್ರಚಾರಕ್ಕೆ ಅನುಕೂಲ

ಖರ್ಚು ಹೆಚ್ಚು: ಎರಡು ಅಥವಾ ಹೆಚ್ಚಿನ ಹಂತಗಳಲ್ಲಿ ಚುನಾವಣಾ ನಡೆದರೆ ಅಭ್ಯರ್ಥಿಗಳಿಗೆ ಖರ್ಚು ಹೆಚ್ಚಾಗಲಿದೆ ಎಂಬ ಆತಂಕವೂ ಇದೆ. ಆದರೆ ಖರ್ಚಾದಷ್ಟು ತಳಮಟ್ಟದಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತವೆ ಎಂಬ ವಾದವೂ ಇದೆ. ಅಕ್ರಮಗಳು ನಡೆಯದಂತೆ ಎಚ್ಚರಿಕೆ ವಹಿಸುವ ಕೆಲಸ ಈಗ ಆಯೋಗದ ವತಿಯಿಂದ ಆರಂಭವಾಗಿದೆ.

ಆಧಾರ: ವಿಶ್ವವಾಣಿ, ದಿನಾಂಕ:13.02.2023

34. ರಾಜಭವನದಲ್ಲಿ ಶ್ರೀಗಂಧ ಸಸಿ ನೆಟ್ಟ ಪ್ರಧಾನಿ ಮೋದಿ

ರಾಜಭವನದ ಮುಂಭಾಗದ ಹುಲ್ಲುಹಾಸಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಗಂಧದ ಸಸಿಯನ್ನು ನೆಟ್ಟರು. ಈ ವೇಳೆ ರಾಜಭವನದಲ್ಲಿನ ಸಸಿಗಳು, ತಳಿ ಹಾಗೂ ಗುಣಲಕ್ಷಣಗಳ ಕುರಿತು ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್ ವಿವರಿಸಿದರು.

ಆಧಾರ: ವಿಜಯವಾಣಿ, ದಿನಾಂಕ: 14.02.2023

35. PM meets actors, cricketers, startup biggies over dinner

At a dinner hosted at Raj Bhavan a short while after he landed in Bengaluru late evening on Sunday, Prime Minister Narendra Modi met and interacted with film stars, sports personalities, startup bigwigs, and a social media influencer from the state. Modi was in Bengaluru to inaugurate the 14th edition of Aero India.

Modi interacted with cricketers, including veterans Anil Kumble, Javagal Srinath and Venkatesh Prasad besides current Ranji Trophy captain Mayank Agarwal and Manish Pandey.

"It was an honour to meet our Hon. Prime minister, Shri Narendra Modiji yesterday at Raj bhavan, Bengaluru, along with my cricketing colleagues. Will cherish our interaction. Thank you @PMOIndia," Kumble tweeted.

Prasad revealed Modi "discussed a variety of issues, including sports infrastructure, the Olympics, and sporting culture in India". BJP sources said Modi spoke about measures being taken by the Centre to encourage sporting talent, including through the National Education Policy.

Those who called on Modi from the film industry included 'KGF' actor Yash, 'Kantara' actor-director Rishab Shetty, Vijay Kirgandur of Hombale Films which produced 'Kantara', and Ashwini, wife of late actor Puneeth Rajkumar. Social media influencer Shraddha Jain, bettern known as 'Aiyyo' Shraddha was also among the gathering.

Modi told the guests that film industries in the southern states have given a boost to India's culture and identity through their work. He was especially appreciative of the way the industry in the south has encouraged participation of women. Modi also spoke on the need to leverage ITIS to provide courses related to films, especially on the technical side.

"Namashkar, yes, I met the Honorable Prime Minister of our country. His first word to me was 'Aiyyo!'. I am not blinking, that's my 'O My God, he really said that, this is really happening!!!!' look. Thank you @PMOIndia (sic)," Shraddha said in a tweet.

Modi also interacted with businessmen Tarun Mehta, co-founder and CEO of Ather Energy, and Nikhil Kamath, co-founder of Zerodha, among others. Calling his meeting with the PM "amazing", Mehta tweeted, "He had deep insights into battery manufacturing, evolving energy supply chains, & of course, EVs for India. No wonder India is leading the world in the electrification of 2W and 3W."

Assembly polls are due in Karnataka and are likely to be held in April-May.

Courtesy: Times of India, dt: 14.02.2023

36. 1,316 ಶಾಲೆಗಳು ಅನಧಿಕೃತ

ರಾಜ್ಯದಲ್ಲಿ 1,316 ಅನಧಿಕೃತ ಶಾಲೆಗಳಿವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯು ಸರಕಾರಕ್ಕೆ ವರದಿ ನೀಡಿದೆ.

ರಾಜ್ಯದಲ್ಲಿರುವ 34 ಶೈಕ್ಷಣಿಕ ಜಿಲ್ಲೆಗಳಲ್ಲಿ 1,316 ಅನಧಿಕೃತ ಶಾಲೆಗಳಿವೆ. ಅನಧಿಕೃತ ಶಾಲೆಗಳಲ್ಲಿ ಬಹುಪಾಲು ಬೆಂಗಳೂರಿನಲ್ಲಿವೆ. ಬೆಂಗಳೂರು ಉತ್ತರದಲ್ಲಿ 485 ಮತ್ತು ದಕ್ಷಿಣದಲ್ಲಿ 386 ಹಾಗೂ ತುಮಕೂರಿನಲ್ಲಿ 109 ಶಾಲೆಗಳಿವೆ. ಶಿವಮೊಗ್ಗ, ದಾವಣಗೆರೆ, ರಾಮನಗರ ಸೇರಿದಂತೆ 15 ಜಿಲ್ಲೆಗಳಲ್ಲಿ

ಅನಧಿಕೃತ ಶಾಲೆಗಳೇ ಇಲ್ಲವೋ, ಇದ್ದರೂ ಬಿಇಒಗಳು ಸೂಕ್ತ ಸಮಯಕ್ಕೆ ಶಿಕ್ಷಣ ಇಲಾಖೆಗೆ ಮಾಹಿತಿ ನೀಡಲಿಲ್ಲವೋ ತಿಳಿದಿಲ್ಲ. ಏಕೆಂದರೆ, ಈ ಜಿಲ್ಲೆಗಳಲ್ಲಿ ಅನಧಿಕೃತ ಶಾಲೆಗಳ ಸಂಖ್ಯೆ ಶೂನ್ಯವಿದೆ.

ಮಕ್ಕಳ ಶಾಲೆಗಳನ್ನು 9 ಅಂಶಗಳಲ್ಲಿ ವಿಂಗಡಿಸಿ ಪತ್ತೆ ಹಚ್ಚಲಾಗಿದೆ. ಈ ಎಲ್ಲ 9 ಅಂಶಗಳ ಬಗ್ಗೆ ವಿವರವಾದ ಮಾಹಿತಿಯನ್ನು ಶಿಕ್ಷಣ ಇಲಾಖೆಯು ಪ್ರಕಟಿಸಿದೆ. ಇತ್ತೀಚಿನ ದಿನಗಳಲ್ಲಿ ರಾಜ್ಯದ ಪಠ್ಯಕ್ರಮದ ಅನುಮತಿ ಪಡೆದು, ಪಾಲಕರ ಬಳಿ ಕೇಂದ್ರ ಪಠ್ಯಕ್ರಮದ ಅನುಮತಿ ಪಡೆದಿದ್ದೇವೆಂದು ಸುಳ್ಳು ಹೇಳಿ ಶಾಲಾ ಆಡಳಿತ ಮಂಡಳಿಗಳು ಹೆಚ್ಚಿನ ಶುಲ್ಕ ವಸೂಲಿ ಮಾಡಿವೆ. ಈ ಬಗ್ಗೆ ಪೋಷಕರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಅನಧಿಕೃತ ಶಾಲೆಗಳ ಪತ್ತೆಗೆ ಮುಂದಾಗಿತ್ತು.

ಮಾನದಂಡ ಬದಲು ಮಾಡಿ: ಖಾಸಗಿ ಶಾಲೆಗಳು ಸರಕಾರದ ನಿಯಮಗಳ ಪ್ರಕಾರವೇ ನಡೆದುಕೊಂಡು ಬರುತ್ತಿದ್ದು, ಆರ್‌ಟಿಇನಲ್ಲಿ ಕೂಡ ಶೇ.25 ಸೀಟುಗಳನ್ನು ಸರಕಾರಕ್ಕೆ ನೀಡಿವೆ. ಕೆಲವು ಅವೈಜ್ಞಾನಿಕ ಮಾನದಂಡಗಳಿಟ್ಟುಕೊಂಡು ಅನಧಿಕೃತ ಶಾಲೆಗಳೆಂದು ಗುರುತಿಸಿರುವುದನ್ನು ಕೈ ಬಿಡಬೇಕು ಎಂದು ಖಾಸಗಿ ಶಾಲೆಗಳ ಒಕ್ಕೂಟ 'ಕ್ಯಾಮ್ಸ್' ಆಗ್ರಹಿಸಿದೆ. ಆರ್‌ಟಿಇ ಬಂದ ಮೇಲೆ ಶಿಕ್ಷಣ ಇಲಾಖೆಯೇ ಹೆಚ್ಚುವರಿ ವಿಭಾಗಗಳನ್ನು ತೆರೆದಿದೆ. ಇದನ್ನು ಶಿಕ್ಷಣ ಇಲಾಖೆಯು ಹೆಚ್ಚುವರಿ ತರಗತಿ ಎಂದು ಗುರುತಿಸಿ ಅನಧಿಕೃತ ಎಂದು ಹೇಳುವುದು ಒಪ್ಪುವ ವಿಷಯವಲ್ಲ. ರಾಜ್ಯ ಪಠ್ಯಕ್ರಮಕ್ಕೆ ಅನುಮತಿ ಪಡೆದು ಕೇಂದ್ರ ಪಠ್ಯಕ್ರಮದಲ್ಲಿ ನಡೆಯುತ್ತಿರುವ ಶಾಲೆಗಳು ಹಾಗೂ ಒಂದಕ್ಕೆ ಅನುಮತಿ ಪಡೆದು ಹಲವು ಶಾಖೆಗಳನ್ನು ತೆರೆದಿರುವ ಶಾಲೆಗಳ ವಿರುದ್ಧ ಕ್ರಮ ವಹಿಸಬೇಕು ಎಂದು ಕ್ಯಾಮ್ಸ್ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಶಿಕ್ಷಣ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಎಷ್ಟು ಶಾಲೆ? ಹೇಗೆ?

63 ನೋಂದಣಿ, ಅನುಮತಿ ಇಲ್ಲ

14 ನೋಂದಣಿ ಇಲ್ಲದೆ, ಅನಧಿಕೃತ ಉನ್ನತೀಕರಣ

95 ರಾಜ್ಯ ಪಠ್ಯಕ್ರಮದ ಅನುಮತಿ ಪಡೆದು ಬೇರೆ ಪಠ್ಯಕ್ರಮ ಬೋಧನೆ

294 ಅನಧಿಕೃತ ಮಾಧ್ಯಮಗಳಲ್ಲಿ ಕಲಿಕೆ

620 ಅನಧಿಕೃತ ವಿಭಾಗಗಳನ್ನು ಹೊಂದಿವೆ.

14 ಅನುಮತಿ ಇಲ್ಲದೆಯೇ ಸ್ಥಳಾಂತರ

08 ಅನುಮತಿ ಇಲ್ಲದೆಯೇ ಹಸ್ತಾಂತರ

21 ಕೇಂದ್ರ ಪತ್ಯಕ್ರಮಕ್ಕೆ ಸಂಯೋಜನೆ ಪಡೆದು ಆನಂತರ ಅನಧಿಕೃತವಾಗಿ ರಾಜ್ಯ ಪತ್ಯಕ್ರಮ ಕಲಿಕೆ

ಆಧಾರ: ವಿಜಯ ಕರ್ನಾಟಕ, ದಿನಾಂಕ: 15.02.2023

37. ರಕ್ಷಣಾ ವಲಯದಲ್ಲಿ ರಾಜ್ಯಕ್ಕೆ ಸಿಂಹಪಾಲು

ರಕ್ಷಣಾ ವಯಲದಲ್ಲಿ ಬಂಧನ ಎನ್ನುವುದು ರಕ್ಷಣಾ ಇಲಾಖೆ ಮತ್ತು ಸಾರ್ವಜನಿಕ ಸಂಸ್ಥೆಗಳ ಮಧ್ಯೆ ಇರುವ ದೀರ್ಘಕಾಲದ ಸಂಬಂಧ. ರಾಷ್ಟ್ರದ ರಕ್ಷಣಾ ವಲಯ ಬೇಡಿಕೆಯ ಪೂರೈಕೆಯಲ್ಲಿ ರಾಜ್ಯದ ಪಾಲು ಶೇ.65ರಷ್ಟಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಏರೋ ಇಂಡಿಯಾ 2023ರ ಬಂಧನ ಒಪ್ಪಂದಗಳಿಗೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಕ್ಷಣೆ ಮತ್ತು ಏರೋಸ್ಪೇಸ್ ವಲಯವು ಸ್ಥಾಪಿತ ಕ್ಷೇತ್ರವಾಗಿದ್ದು, ಇದರಲ್ಲಿ ಅತ್ಯಂತ ಪರಿಣಿತರು ಮಾತ್ರ ಕೆಲಸವನ್ನು ಸಂಪೂರ್ಣಗೊಳಿಸಬಲ್ಲರು. ಪ್ರಧಾನಿ ನರೇಂದ್ರ ಮೋದಿ ಹಾಗೂ ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ಅವರ ನೇತೃತ್ವದಲ್ಲಿ ರಕ್ಷಣಾ ವಲಯವು ತೆರೆದುಕೊಂಡಿದೆ. ನಮ್ಮ ದೇಶದ ರಕ್ಷಣಾ ವ್ಯವಸ್ಥೆ ಬೇಡಿಕೆಯ ಶೇ.80 ರಷ್ಟನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದ ಕಾಲವೊಂದಿತ್ತು. ಆದರೆ ಈಗ ಮಾನ್ಯ ಪ್ರಧಾನಿಗಳ ಮೇಕ್ ಇನ್ ಇಂಡಿಯಾ ಪರಿಕಲ್ಪನೆ ಅಡಿಯಲ್ಲಿ ದೇಶದಲ್ಲಿಯೇ ತಯಾರಿಕೆ ಮಾಡುತ್ತಿದ್ದೇವೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.

ನಮ್ಮ ಉತ್ಪಾದನೆ ಸಾಮರ್ಥ್ಯ ಅಂದುಕೊಂಡದ್ದಕ್ಕಿಂತ ಹೆಚ್ಚಿದೆ

ನಮ್ಮ ದೇಶದ ರಕ್ಷಣಾ ವಲಯದ ಉತ್ಪಾದನಾ ಸಾಮರ್ಥ್ಯ ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚಿದೆ ಮತ್ತು ನಮ್ಮ ದೇಶದ ಉತ್ಪಾದನಾ ಸಂಸ್ಥೆಗಳು ನಮ್ಮ ಬೇಡಿಕೆಯನ್ನು ಪೂರೈಸುವ ಎಲ್ಲ ಸಾಮರ್ಥ್ಯ ಹೊಂದಿದೆ. ಎಂಎಸ್‌ಎಂಇ ಕೂಡ ಇದನ್ನು ಉತ್ಪಾದನೆ ಮಾಡಬಲ್ಲದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ರಕ್ಷಣಾ ವಸ್ತುಗಳ ಉತ್ಪಾದನಾ ಸಂಸ್ಥೆಗಳು ಅತ್ಯುನ್ನತ ತಂತ್ರಜ್ಞಾನವನ್ನು ಹೊಂದಿದ್ದು, ಅತ್ಯಂತ ದಕ್ಷವಾಗಿ ಕಾರ್ಯನಿರ್ವಹಿಸಬಲ್ಲದಾಗಿದೆ ಎಂದು ಹೇಳಿದರು.

32 ಒಪ್ಪಂದಗಳಿಗೆ ರಾಜ್ಯ ಸಹಿ

ಬೆಂಗಳೂರಿನಲ್ಲಿ ಏರೋಸ್ಪೇಸ್ ಪಾರ್ಕ್ ಸ್ಥಾಪನೆ ಮತ್ತು ಅದರ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಅತ್ಯುತ್ತಮ ಕೊಡುಗೆ ನೀಡಿರುವ ನನ್ನೆಲ್ಲಾ ಅಧಿಕಾರಿಗಳಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ರಾಷ್ಟ್ರದ ಒಟ್ಟು ರಕ್ಷಣಾ ಉತ್ಪಾದನೆಯಲ್ಲಿ ರಾಜ್ಯದ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಖಾಸಗಿ ಸಂಸ್ಥೆಗಳು ಶೇ.65 ಪಾಲನ್ನು ಪೂರೈಸುತ್ತಿದೆ. 2900 ಕೋಟಿಗೂ ಹೆಚ್ಚು ಮೌಲ್ಯದ

ಹೂಡಿಕೆಯ 32 ಒಪ್ಪಂದಗಳಿಗೆ ರಾಜ್ಯದ ಸಾರ್ವಜನಿಕ ವಲಯದ ಉದ್ಯಮಗಳು ಸಹಿ ಹಾಕಿದೆ. ಈ ಏರೋ ಇಂಡಿಯಾ ಪ್ರದರ್ಶನ ಟಾಕ್ ಆಫ್ ದಿ ಟೌನ್ ಆಗಿದೆ ಎಂದು ಹೇಳಿದರು.

ಉತ್ಪಾದನಾ ವಲಯದಲ್ಲಿ ಡೊಮೇನ್ ಬದಲಾವಣೆಯಿಂದ ವಿಪುಲ ಅವಕಾಶಗಳು ಸೃಷ್ಟಿಯಾಗಿದೆ. ಆದ್ದರಿಂದ ನಾವು ಮಹತ್ವಾಕಾಂಕ್ಷೆಯಿಂದ ವೈಜ್ಞಾನಿಕವಾಗಿ ಯೋಚನೆ ಮಾಡಬೇಕಿದೆ. ಈ ಎಲ್ಲ ವಿಷಯಗಳನ್ನು ಬಂಧನ ಹೆಸರಲ್ಲಿ ನಾವು ಒಟ್ಟಿಗೆ ತಂದಿದ್ದೀವಿ. ಇಂದು ಸಹಿ ಆಗಿರುವ ಎಲ್ಲ ಒಪ್ಪಂದಗಳು ಭವಿಷ್ಯದ ಅಗತ್ಯ, ಬೆಳವಣಿಗೆ ಮತ್ತು ಸಾಮರ್ಥ್ಯ ವೃದ್ಧಿಗೆ ಸಾಕ್ಷಿಯಾಗಲಿದೆ ಎಂದು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಹೇಳಿದರು.

ಆಧಾರ: ವಿಶ್ವವಾಣಿ, ದಿನಾಂಕ: 16.02.2023

38. ಸುಸ್ಥಿರ ವಿತ್ತನೀತಿ ಸವಾಲು

ಬರಲಿರುವ ಚುನಾವಣೆಗೆ 'ಪೂರ್ವಭಾವಿಯಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ವಸ್ಪರ್ಶಿ ಮುಂಗಡಪತ್ರವನ್ನೇನೋ ಮಂಡಿಸಿದ್ದಾರೆ. ಆದರೆ ಸರ್ಕಾರದ ಆರ್ಥಿಕ ಸ್ಥಿತಿಯನ್ನು ನಿಭಾಯಿಸುವ ಸವಾಲನ್ನು ಈಗ ಮತ್ತು ಮುಂದೆ ಹೇಗೆ ಎದುರಿಸಲಾಗುತ್ತದೆ ಎಂಬುದು ಕುತೂಹಲಕರ. ರಾಜ್ಯ ಸರ್ಕಾರವೇ ಮಂಡಿಸಿರುವ ಮಧ್ಯಮಾವಧಿ ವಿತ್ತೀಯ ಯೋಜನೆ, ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿ ಹಾಗೂ ಆರ್ಥಿಕ ಸಮೀಕ್ಷೆಯಲ್ಲಿನ ಕೆಲ ಸಂಗತಿ ಗಮನಿಸಿದಾಗ ಹಲವು ಸಲಹೆ ಪಾಲನೆಯಾಗಿಲ್ಲ ಎಂಬುದು ಕಂಡು ಬರುತ್ತದೆ.

ಒಟ್ಟಾರೆ ವೇತನ, ಪಿಂಚಣಿ, ಬಡ್ಡಿ ಪಾವತಿ, ಸಾಲದ ಪ್ರಮಾಣ ತಗ್ಗಿಸುವ ಮೂಲಕ ಆರ್ಥಿಕ ಶಿಸ್ತು ಕಾಪಾಡುವ ಹೊಣೆಯ ಬಗ್ಗೆ ಹೇಳಲಾಗಿದೆ. ಮುಂದಿನ ಮೂರು ತಿಂಗಳಲ್ಲಿ ಅಧಿಕಾರಕ್ಕೆ ಬರುವ ಸರ್ಕಾರದ ಮೇಲೆ ದೊಡ್ಡ ಹೊಣೆಯಂತೂ ಇದೆ. ಯೋಜನೇತರ ವೆಚ್ಚಗಳನ್ನು ಕಡಿಮೆ ಮಾಡುವ ಪ್ರಯತ್ನಗಳು ಕಂಡುಬಂದಿಲ್ಲ. ರಾಜ್ಯದ ಸಾಲ ಜಿಎಸ್‌ಡಿಪಿಯ ಶೇ.25 ಮೀರುವಂತಿಲ್ಲ. ಕೋವಿಡ್ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದಾಗ ಮಾತ್ರ ಶೇ.26.71ಕ್ಕೆ ಹೋಗಿದ್ದು ಈ ಹಣಕಾಸು ವರ್ಷದಲ್ಲಿ ಶೇ.23.76ಕ್ಕೆ ಇಳಿದಿದೆ. ಆದರೆ, 2023–24ರ ಹಣಕಾಸು ವರ್ಷಕ್ಕೆ ಮತ್ತೆ ಶೇ.24.028 ಏರಿಕೆಯಾಗಿದೆ. ಹದಿನೈದನೇ ಹಣಕಾಸು ಆಯೋಗದಿಂದ ಉಂಟಾಗಿರುವ ಸಮಸ್ಯೆ, ಹೆಚ್ಚುತ್ತಿರುವ ಸಾಲ ಮತ್ತು ಬಡ್ಡಿ ಪಾವತಿ ತಗ್ಗಿಸುವ ಸಲಹೆ ಜಾರಿ ಪ್ರಯತ್ನ ನಡೆದಿಲ್ಲ. ತೆರಿಗೆ ಹೆಚ್ಚಳ ಎಂದರೆ ತೆರಿಗೆಯ ವ್ಯಾಪ್ತಿಯ ಹೆಚ್ಚಳವಾಗಬೇಕು, ಆದರೆ, ಆ ಪ್ರಯತ್ನ ಕಾಣುತ್ತಿಲ್ಲ. ಏಕೆಂದರೆ ಅಬಕಾರಿ, ಮೋಟಾರ್ ವಾಹನ ಹಾಗೂ ನೋಂದಣಿಯಲ್ಲಿ ತೆರಿಗೆ ಪ್ರಮಾಣ ಏರುಗತಿಯಲ್ಲಿದ್ದರೆ, ವಾಣಿಜ್ಯ ತೆರಿಗೆ ಇಳಿಕೆಯ

ಹಾದಿಯಲ್ಲಿದೆ. ತೆರಿಗೆ ಸಂಗ್ರಹ ಶೇ.4.61 ರಿಂದ ಶೇ.4.16ಕ್ಕೆ ಕಡಿಮೆಯಾಗಿದೆ. ರಾಜಸ್ವ ಉಳಿತಾಯ ಸಾಧಿಸಿರುವುದಾಗಿ ಸರ್ಕಾರ ಹೇಳುತ್ತಿದೆ. ವಿವಿಧ ಕಾರಣಗಳಿಂದ ತೆರಿಗೆ ಸಂಗ್ರಹ ಹೆಚ್ಚಾಗಿರುವುದರಿಂದ ಉಳಿತಾಯ ಸಾಧ್ಯವಾಗಿದೆ. ಆದರೆ, ರಾಜಸ್ವ ವೆಚ್ಚ 2022–23 ರಲ್ಲಿ 2,18,356 ಕೋಟಿ ರೂ.ಗಳಿದ್ದದ್ದು, 2023–24ಕ್ಕೆ 2,25,507 ಕೋಟಿ ರೂ.ಗಳಿಗೆ ಏರಿಕೆಯಾಗಲಿದೆ. ಈ ವೆಚ್ಚ ಕಡಿಮೆ ಯಾಗಬೇಕೆಂಬುದು ಎಲ್ಲ ಸಲಹೆಗಳ ಒಟ್ಟಾರೆ ಆಶಯ. ಮುಕ್ತ ಮಾರುಕಟ್ಟೆಯ ಸಾಲವನ್ನು ಕಡಿಮೆ ಮಾಡಿಕೊಳ್ಳುವ ಮೂಲಕ ಆರ್‌ಬಿಐನ ತಾತ್ಕಾಲಿಕ ನಗದು ವ್ಯವಸ್ಥೆಯ ಮೇಲೆ ಹೆಚ್ಚಿನ ಅವಲಂಬನೆಗೆ ಸೂಚನೆಗಳಿವೆ. ಆದರೆ, ಸರ್ಕಾರ ಬಹಿರಂಗ ಮಾರುಕಟ್ಟೆಯ ಸಾಲವನ್ನೇ ಹೆಚ್ಚಿನ ಪ್ರಮಾಣದಲ್ಲಿ ನೆಚ್ಚಿಕೊಂಡಿದೆ. ಪ್ರಮುಖವಾಗಿ ಸ್ವಂತ ಸಂಪನ್ಮೂಲ ಸಂಗ್ರಹ ಹೆಚ್ಚಾಗಬೇಕು, ಆದರೆ, ಜನರ ಮೇಲೆ ತೆರಿಗೆ ಹೊರೆ ಬೀಳಬಾರದು. ಅಂದರೆ ತೆರಿಗೆಯ ವ್ಯಾಪ್ತಿಗೆ ಇನ್ನಷ್ಟು ಉದ್ಯಮಿಗಳು ಸೇರ್ಪಡೆಯಾಗಬೇಕಾಗಿದೆ.

ವಿದ್ಯುತ್ ಕಂಪನಿಗಳ ಸುಧಾರಣೆ: ವಿದ್ಯುತ್ ಕಂಪನಿಗಳ ಸುಧಾರಣೆ ಬಗ್ಗೆ ಪರಿಶೀಲನಾ ಸಮಿತಿ ನೀಡಿರುವ ಸಲಹೆಯನ್ನು ಗಮನಿಸಿರುವುದು ಬಜೆಟ್‌ನಲ್ಲಿ ಪ್ರಸ್ತಾಪವಾಗಿದೆ. ಅದನ್ನು ಎಷ್ಟರಮಟ್ಟಿಗೆ ಜಾರಿಗೊಳಿಸಲಾಗುತ್ತದೆ ಎಂಬುದು ಮುಂದಿನ ಸರ್ಕಾರದ ಮೇಲೆ ಅವಲಂಬಿತವಾಗಿದೆ.

ಐದು ವರ್ಷ ಸವಾಲು: ಹದಿನೈದನೇ ಹಣಕಾಸು ಆಯೋಗದ ವರದಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ಪಾಲಿನ ವರ್ಗಾವಣೆ ಕಡಿಮೆಯಾಗಿರುವುದರಿಂದ ಮುಂದಿನ ಐದು ವರ್ಷ ರಾಜ್ಯಕ್ಕೆ ಸವಾಲಿನ ದಿನಗಳೆಂದು ಆರ್ಥಿಕ ಸಮೀಕ್ಷೆ ಎಚ್ಚರಿಕೆ ನೀಡಿದೆ. 14ನೇ ಹಣಕಾಸು ಆಯೋಗದಲ್ಲಿ ಶೇ.4.7 ರಷ್ಟು ಇದ್ದ ತೆರಿಗೆ ವರ್ಗಾವಣೆ, 15ನೇ ಹಣಕಾಸು ಆಯೋಗದಲ್ಲಿ ಶೇ.3.7ಕ್ಕೆ ಇಳಿದಿದೆ.

ಸಬ್ಸಿಡಿ ಇಳಿಕೆ: ರಾಜ್ಯ ಸರ್ಕಾರ ನೀಡುವ ಸಬ್ಸಿಡಿಗಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಶೇ.2.4 ಇದ್ದ ಸಬ್ಸಿಡಿ ಪ್ರಮಾಣ ಈಗ ಶೇ.1.2ಕ್ಕೆ ಇಳಿದಿದೆ.

ಸಾಲವೇ ಬಂಡವಾಳ: ಬಂಡವಾಳ ವೆಚ್ಚಕ್ಕೆ ಸಾಲವೇ ಬಂಡವಾಳ ಎಂಬ ಸ್ಥಿತಿ ಎದುರಾಗಿರುವುದು ಆತಂಕದ ವಿಚಾರವೆಂದು ಎಂಟಿಎಫ್‌ಪಿ ಗುರುತಿಸಿದೆ. ಸಾಲವನ್ನು ಬಂಡವಾಳ ವೆಚ್ಚಕ್ಕೆ ಖರ್ಚು ಮಾಡಿರುವ ಪ್ರಮಾಣ 2022–23 ರಲ್ಲಿ ಶೇ.90.5 ಇದ್ದದ್ದು 2023–24ಕ್ಕೆ ಶೇ.101ಕ್ಕೆ ಏರಿಕೆಯಾಗುತ್ತಿದೆ. ಅಂದರೆ, ರಾಜಸ್ವ ವೆಚ್ಚಕ್ಕೆ ಕಡಿವಾಣ ಹಾಕಿಲ್ಲ ಎಂಬುದು ಕಂಡುಬರುತ್ತದೆ.

ಕುಸಿಯಲಿರುವ ಬೆಳವಣಿಗೆ ದರ: ರಾಜ್ಯದ ಒಟ್ಟಾರೆ ಬೆಳವಣಿಗೆ ದರ ಶೇ.7.9 ಇದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ವಾಸ್ತವವಾಗಿ ಕಡಿಮೆಯಾಗುವ ಸಾಧ್ಯತೆಯನ್ನು ಅರ್ಥಶಾಸ್ತ್ರಜ್ಞರು ಗುರುತಿಸಿದ್ದಾರೆ. 2023–24ಕ್ಕೆ ಶೇ. 7 ಆಗಬಹುದೆಂದು ಸಮೀಕ್ಷೆ ಹೇಳಿದೆ.

ವಿತ್ತೀಯ ಸಮಿತಿ ಸಲಹೆಗಳು

- ಸ್ವಂತ ತೆರಿಗೆ ಹೆಚ್ಚಿಸಬೇಕು.
- ವೆಚ್ಚ ಸಂರ್ಪಕ ನಿರ್ವಹಣೆ
- ಸಾಲ ಕಡಿಮೆ ಮಾಡಿ ಸುಸ್ಥಿರ ವಿತ್ತೀಯ ಮಾರ್ಗ ಅನುಸರಣೆ
- ಮುಕ್ತ ಮಾರುಕಟ್ಟೆ ಸಾಲ ಕಡಿಮೆ ಮಾಡಿ ಆರ್‌ಬಿಐನ ತಾತ್ಕಾಲಿಕ ನಗದು ವ್ಯವಸ್ಥೆ ಕಡೆ ಗಮನ
- ಅನುದಾನಗಳನ್ನು ಸೂಕ್ತ ಸಮಯದಲ್ಲಿ ಮಾತ್ರ ಬಿಡುಗಡೆ ಮಾಡಬೇಕು
- ಸಹಾಯಾನುಧಾನ ಸಂಸ್ಥೆಗಳು ಅನುದಾನವನ್ನು ಬ್ಯಾಂಕ್‌ಗಳಲ್ಲಿ ಠೇವಣಿಯನ್ನಿಡುವ ಪ್ರವೃತ್ತಿಗೆ ಕಡಿವಾಣ
- ತೆರಿಗೆಯೇತರ ರಾಜಸ್ವ ಎಲ್ಲೆಲ್ಲಿ ಹೆಚ್ಚಳವೋ ಅಲ್ಲಿ ಹೆಚ್ಚಿಸಬೇಕು
- ವಿದ್ಯುತ್ ಕಂಪನಿಗಳ ಸುಧಾರಣೆ ಅತ್ಯಗತ್ಯ
- ಸಹಾಯಧನ ಫಲಾನುಭವಿ ಕೇಂದ್ರಿತವಾಗಬೇಕು.

ಸಾಲದ ವಾಸ್ತವ ಸ್ಥಿತಿ

ರಾಜ್ಯ ಸರ್ಕಾರದ ಸಾಲ 2024ರ ಮಾರ್ಚ್ ಅಂತ್ಯಕ್ಕೆ ರೂ.5.64 ಲಕ್ಷ ಕೋಟಿ ಗಳಾಗುತ್ತದೆ ಎಂದು ಸಿಎಂ ಬೊಮ್ಮಾಯಿ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಕೇಂದ್ರದ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ 2023ರ ಫೆಬ್ರವರಿ 7 ರಂದು ರಾಜ್ಯಸಭೆಯಲ್ಲಿ ನೀಡಿರುವ ಉತ್ತರದಲ್ಲಿ 2022ರ ಮಾರ್ಚ್ ಅಂತ್ಯಕ್ಕೆ ರಾಜ್ಯದ ಸಾಲದ ಪ್ರಮಾಣ 4,73,437.9 ಕೋಟಿ ರೂ.ಗಳಾಗಿದೆ. 2022–23ರ ಆರ್ಥಿಕ ವರ್ಷದಲ್ಲಿ 68 ಸಾವಿರ ಕೋಟಿ ರೂ.ಗಳ ಸಾಲ ಮಾಡಲಾಗಿದೆ. ಅದರ ಜೊತೆಗೆ 2023–24ರ ಬಜೆಟ್‌ನಲ್ಲಿ 77 ಸಾವಿರ ಕೋಟಿ ರೂ.ಗಳ ಸಾಲ ಮಾಡುವುದಾಗಿ ಹೇಳಿದ್ದಾರೆ. ಅಂದರೆ ರಾಜ್ಯದ ಸಾಲ 6.18 ಲಕ್ಷ ಕೋಟಿ ರೂ.ಗಳಿಗೆ ತಲುಪಲಿದೆ ಎಂದು ಹೇಳಲಾಗುತ್ತಿದೆ.

ಎಂಟಿಎಫ್‌ಪಿ ಆದ್ಯತೆಗಳು

- ರಾಜಸ್ವ ಸಂಗ್ರಹ ಹೆಚ್ಚಳ
- ಕೃಷಿ, ಆರೋಗ್ಯ, ಶಿಕ್ಷಣ, ಕೌಶಲ, ಕುಡಿಯುವ ನೀರು, ನೀರಾವರಿ, ಗ್ರಾಮೀಣಾಭಿವೃದ್ಧಿ, ಲಾಜಿಸ್ಟಿಕ್ಸ್, ಆರ್ ಅಂಡ್ ಡಿಗೆ ಪ್ರಧಾನ ಅಭಿವೃದ್ಧಿ ವೆಚ್ಚ

- ಹೆಚ್ಚಿನ ಬಂಡವಾಳ ವೆಚ್ಚದ ಮೂಲಕ ಆರ್ಥಿಕ ಅಭಿವೃದ್ಧಿಯಾಗಿ ಉದ್ಯೋಗ ಸೃಷ್ಟಿ
- ಸಾರ್ವಜನಿಕ ವೆಚ್ಚದ ಗುಣಮಟ್ಟ ಹೆಚ್ಚಳ
- ಅವಧಿಪೂರ್ವ ಪಾವತಿ ಮೂಲಕ ಸಾಲ ತಗ್ಗಿಸಬೇಕು

ಎಂಟಿಎಫ್‌ಪಿ ಸೂಚನೆ

- ಸಂಬಳ, ಪಿಂಚಣಿ, ಬಡ್ಡಿ, ಸಹಾಯಧನ ಕಡಿಮೆ ಮಾಡಬೇಕು
- ಸಿಬ್ಬಂದಿ ಗಾತ್ರ ತಗ್ಗಿಸಬೇಕು.

2023–24ನೇ ಸಾಲಿನ ಯೋಜನಾ ಆಧಾರಿತ ಬದ್ಧವೆಚ್ಚಗಳು (ಕೋಟಿ ರೂ.ಗಳಲ್ಲಿ)

ಸಹಾಯಧನ	31,367
ಸಾಮಾಜಿಕ ಭದ್ರತೆ	10,401
ಆರ್ಥಿಕ ನೆರವು	5,972
ವೇತನಾನುದಾನ	2,910
ಸ್ಥಳೀಯ ಸಂಸ್ಥೆಗಳಿಗೆ	20,920.

ಯೋಜನೇತರ ಬದ್ಧವೆಚ್ಚಗಳು (ಕೋಟಿ ರೂ.ಗಳಲ್ಲಿ)

ವೇತನ	68,491
ಪಿಂಚಣಿ	26,980
ಬಡ್ಡಿ ಪಾವತಿ	34,023
ಆಡಳಿತ ವೆಚ್ಚ	5,383

ತೆರಿಗೆ ಸಂಗ್ರಹ ಕುಸಿತ

2019–20	ಶೇ. 7.25
2023–24	ಶೇ. 7.05

ಆಧಾರ: ವಿಜಯವಾಣಿ, ದಿನಾಂಕ: 19.02.2023

39. ನೇಕಾರರಿಗೆ ಆರ್ಥಿಕ ನೆರವಿಗೆ ಒಪ್ಪಿಗೆ

ನೇಕಾರರ ಪ್ಯಾಕೇಜ್ ಯೋಜನೆಯಡಿ ಜವಳಿ ವಲಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಹಣಕಾಸಿನ ನೆರವು ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ವಿಧಾನಸೌಧದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ವಿದ್ಯುತ್ ಮಗ್ಗ ನೇಕಾರರಿಗೆ ಹಣಕಾಸಿನ ನೆರವು, ವಿದ್ಯುತ್ ಮಗ್ಗ ನೇಕಾರರಿಗೆ ಮತ್ತು ಮಗ್ಗ ಪೂರ್ವ ಘಟಕಗಳ ಕಾರ್ಮಿಕರಿಗೆ ವಾರ್ಷಿಕ ರೂ. 5 ಸಾವಿರದಂತೆ ಧನಸಹಾಯ ನೀಡಲು ಹಾಗೂ ನೇಯ್ಗೆ ಉದ್ದೇಶಗಳಿಗಾಗಿ ಇರುವ ಸಹಕಾರಿ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳ ಮೂಲಕ ರೂ.2 ಲಕ್ಷ ವರೆಗೆ ಶೂನ್ಯ ಬಡ್ಡಿಯ ಸಾಲ ಸೌಲಭ್ಯ ಒದಗಿಸಲು ಹೊರಡಿಸಲಾಗಿರುವ ಆದೇಶಕ್ಕೂ ಸಂಪುಟ ಅನುಮೋದನೆ ನೀಡಿದೆ.

ಸಂಪುಟದ ಇತರ ನಿರ್ಧಾರಗಳು

- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಹಂತ 3ರಲ್ಲಿ 230 ಕಿ.ಮೀ. ಹಾಗೂ 585.83 ಮೀ ಉದ್ದದ ಸೇತುವೆಗಳು ಸೇರಿದಂತೆ ಒಟ್ಟಾರೆ 230.81 ಕಿ.ಮೀ. ಗಳ ರಸ್ತೆ ಅಭಿವೃದ್ಧಿಗೆ ರೂ.222 ಕೋಟಿ ಬಿಡುಗಡೆಗೆ ಆಡಳಿತಾತ್ಮಕ ಅನುಮೋದನೆ.
- ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 20 ಎಲೆಕ್ಟ್ರಿಕ್ ಮಿನಿ ಬಸ್ ಖರೀದಿಗೆ 19.13 ಕೋಟಿ.
- ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 10 ಕ್ರಿಮಿನಲ್ ಮೊಕದ್ದಮೆಗಳು ವಾಪಸ್.
- 17 ವೈದ್ಯಕೀಯ ಕಾಲೇಜುಗಳಿಗೆ ತಲಾ 3 ಸಿಟಿ ಸ್ಕ್ಯಾನ್ ಮತ್ತು ತಲಾ 3 ಎಂಆರ್‌ಐ, ಇತರೆ ಉಪಕರಣ ಖರೀದಿಗೆ ರೂ.96.84 ಕೋಟಿ.
- ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ 2022–23, 2023–24ನೇ ಸಾಲುಗಳಲ್ಲಿ ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ 138 ಕಾಮಗಾರಿಗಳಿಗೆ (ಬ್ರಿಡ್ಜ್ ಕಂ ಬ್ಯಾರೇಜ್, ಅಣೆಕಟ್ಟು ನಿರ್ಮಾಣ) ರೂ.443.46 ಕೋಟಿ.
- ಬೆಂಗಳೂರು ಗಾಲ್ಫ್ ಸಂಸ್ಥೆಗೆ ಸ್ಯಾಂಕಿ ರಸ್ತೆಯಲ್ಲಿ ಲೋಕೋಪಯೋಗಿ ಇಲಾಖೆಯ 59,18 ಎಕರೆ ಜಾಗದ ಲೀಸ್ ಅವಧಿ ಮುಂದುವರಿಕೆ.

- ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ 500 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಹೊಸದಾಗಿ 3 ಹಂತದಲ್ಲಿ ಮಾಡ್ಯುಲರ್ ವಿಧಾನದಲ್ಲಿ ನಿರ್ಮಿಸಲು ರೂ.297 ಕೋಟಿ.
- ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2022ಕ್ಕೆ ಅನುಮೋದನೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ 2023ನ್ನು ಶಾಸನ ಸಭೆಯಲ್ಲಿ ಮಂಡಿಸಲು ಒಪ್ಪಿಗೆ ನೀಡಲಾಗಿದೆ.
- ಕರ್ನಾಟಕ ಸಹಕಾರ ಸೇವೆ (ವೃಂದ ಮತ್ತು ನೇಮಕಾತಿ ನಿಯಮಗಳು 2023)ಕ್ಕೆ ಅನುಮೋದನೆ.
- ಮೈಸೂರು ಯೋಜನಾ ಪ್ರದೇಶದ 92 ಬಹು ಗ್ರಾಮಗಳಿಗೆ ನೀರು ಒದಗಿಸಲು 595 ಕೋಟಿ ರೂ.

ಆಧಾರ: ವಿಜಯವಾಣಿ, ದಿನಾಂಕ: 21.02.2023

40. ಜನಪ್ರತಿನಿಧಿಗಳ ನಡೆ ವಿರುದ್ಧ ಜನಾಂದೋಲನ

ಪ್ರಜಾಪ್ರಭುತ್ವದ ದೇಗುಲಗಳಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಜನಪ್ರತಿನಿಧಿಗಳ ಈ ವರ್ತನೆ ವಿರುದ್ಧ ಜನಾಂದೋಲನದ ಅವಶ್ಯಕತೆ ಇದೆ ಎಂದು ಕರೆ ನೀಡಿದರು.

ನಗರದಲ್ಲಿ ಗೋಕುಲ ಶಿಕ್ಷಣ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಎಸ್. ರಾಮಯ್ಯ ಅವರ ಜನ್ಮ ಶತಮಾನೋತ್ಸವದಲ್ಲಿ ಅವರು ಮಾತನಾಡಿದರು.

ದೇಶದ ಉಜ್ವಲ ಭವಿಷ್ಯಕ್ಕೆ ಪೂರಕ ನೀತಿ–ನಿರೂಪಣೆ ರೂಪಿಸುವ ಹೊಣೆ ಜನಪ್ರತಿನಿಧಿಗಳ ಮೇಲಿದೆ. ಲೋಕಸಭೆ, ರಾಜ್ಯಸಭೆಯ ಒಂದೊಂದು ನಿಮಿಷಕ್ಕೂ ಕೋಟ್ಯಂತರ ರೂ. ಖರ್ಚಾಗುತ್ತದೆ. ಅದು ದೇಶದ ಜನರ ದುಡ್ಡು. ಆದರೆ, ಅಲ್ಲಿ ಇತ್ತೀಚಿನ ದಿನಗಳಲ್ಲಿ ಬರೀ ಗಲಾಟೆ, ಫಲಕಗಳನ್ನು ಹಿಡಿದು ಘೋಷಣೆ ಕೂಗುವುದು, ಬಾವಿಗಿಳಿದು ಪ್ರತಿಭಟನೆಗಳು ನಡೆಯುತ್ತಿದ್ದು, ಇದು ಬೇಸರದ ಸಂಗತಿ. ಇದೆಲ್ಲವನ್ನು ನೋಡಿಯೂ ಜನ ಮೌನಕ್ಕೆ ಶರಣಾಗಿರುವುದು ಇನ್ನೂ ಆತಂಕಕಾರಿ ಅಂಶವಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳೇ ನಡೆಯದಿದ್ದರೆ ಏನಾಗುತ್ತದೆ ಯೋಚಿಸಲಿಕ್ಕೂ ಆಗದು. ಹಾಗಾಗಿ,

ಜನಪ್ರತಿನಿಧಿಗಳ ಈ ರೀತಿಯ ವರ್ತನೆಗಳ ವಿರುದ್ಧ ಜನಾಂದೋಲನ ಆಗಬೇಕು ಎಂದು ವಿಶೇಷವಾಗಿ ಯುವಕರಿಗೆ ಕರೆ ನೀಡಿದರು.

ಸ್ವಾತಂತ್ರ್ಯ ನಂತರ ಸಂವಿಧಾನ ರಚನೆ ಸಮಿತಿಯು ಸುದೀರ್ಘ 3 ವರ್ಷ ಸಭೆ ನಡೆಸಿತು. ಆ ಸಮಿತಿ ಮುಂದೆ ಸಂವಿಧಾನ ರಚನೆ ಸೇರಿದಂತೆ ಅನೇಕ ಸವಾಲುಗಳಿದ್ದವು. ಆದರೂ ಒಂದೇ ಒಂದು ಪ್ರತಿಭಟನೆ, ಬಾವಿಗಿಳಿದು ಘೋಷಣೆ ಕೂಗಲಿಲ್ಲ; ಗದ್ದಲಗಳನ್ನು ಮಾಡಲಿಲ್ಲ, ಚರ್ಚೆ, ಸಂವಾದಗಳು ಯಾವುದೇ ಅಡತಡೆಗಳಿಲ್ಲದೆ ನಡೆದವು. ಆ ಹಾದಿಯನ್ನು ಅನುಸರಿಸಲು ನಮ್ಮ ಸಂಸದರು, ರಾಜ್ಯಸಭೆ ಸದಸ್ಯರು ಸೇರಿದಂತೆ ಜನಪ್ರತಿನಿಧಿಗಳಿಗೆ ಏನು ಸಮಸ್ಯೆ ಎಂದು ಅವರು ಕೇಳಿದರು.

ಅಮೃತ ಕಾಲದಲ್ಲಿರುವ ಭಾರತವು 2047ರ ವೇಳೆಗೆ ಶತಮಾನೋತ್ಸವಕ್ಕೆ ಕಾಲಿಡಲಿದೆ, ಅಷ್ಟೊತ್ತಿಗೆ ಭಾರತ ಹೇಗಿರಬೇಕು? ನಮ್ಮ ಗುರಿ ಏನಾಗಿರಬೇಕು ಎನ್ನುವುದು ಈಗಿರುವ ದೊಡ್ಡ ಸವಾಲು. ಯುವಕರು ಇದನ್ನು ನಿರ್ಧರಿಸಬೇಕು ಎಂದ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಸಂಶೋಧನೆ, ಉದ್ಯಮಶೀಲತೆಯಂತಹ ಗುಣಗಳು ಭಾರತದ ಡಿಎನ್ಎಎನಲ್ಲೇ ಇವೆ. ಇದರ ಲಾಭವನ್ನು ವಿಶ್ವದ ಹಲವು ದೇಶಗಳು ಪಡೆಯುತ್ತಿವೆ. ಭಾರತವೂ ಅದರ ಸದುಪಯೋಗ ಪಡೆಯಲು ಸಾಧ್ಯವಾದರೆ, ಸ್ವಾತಂತ್ರ್ಯದ ಶತಮಾನೋತ್ಸವ ಗುರಿ ನಿಚ್ಚಳವಾಗಲಿದೆ ಎಂದು ಹೇಳಿದರು.

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಮಾತನಾಡಿ, ಜೀವನದ ಯಶಸ್ಸಿಗೆ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ. ಶಿಕ್ಷಣದಿಂದ ಕೌಶಲ್ಯ, ಕೌಶಲ್ಯದಿಂದ ಯಶಸ್ಸು ದೊರೆಯುತ್ತದೆ. ಇದನ್ನು ಎಂ.ಎಸ್.ರಾಮಯ್ಯ ಅವರು ಸ್ಥಾಪಿಸಿದ ಗೋಕುಲ ಶಿಕ್ಷಣ ಪ್ರತಿಷ್ಠಾನವು ತೋರಿಸಿಕೊಟ್ಟಿದೆ. ಇಂತಹ ಹಲವಾರು ಸಂಸ್ಥೆಗಳು ದೇಶದ ವಿಕಾಸ ಮಹತ್ವದ ಕೊಡುಗೆ ನೀಡಿವೆ ಎಂದು ಸ್ಮರಿಸಿದರು.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಆರ್. ಜಯರಾಂ, ಪ್ರತಿಷ್ಠಾನವು ಬೆಳೆದುಬಂದ ದಾರಿಯ ಬಗ್ಗೆ ವಿವರಿಸಿದರು. ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಪತ್ನಿ ಸುದೇಶ ಧನಕರ್ ಇದ್ದರು. ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಆರ್.ಸೀತಾರಾಂ ವಂದಿಸಿದರು. ಇದೇ ವೇಳೆ ಎಂ.ಎಸ್. ರಾಮಯ್ಯ ಮತ್ತು ಗೋಕುಲ ಶಿಕ್ಷಣ ಪ್ರತಿಷ್ಠಾನ ಕುರಿತ ಕಾಫಿ ಟೇಬಲ್ ಬುಕ್, 'ಅಪೂರ್ವ ಸಾಧಕ ಎಂ.ಎಸ್. ರಾಮಯ್ಯ' ಕೃತಿ, 'ಧೀಮಂತ ಸಾಹುಕಾರ ರಾಮಯ್ಯ ಅವರ ಯಶೋಗಾಥೆ' ಕೃತಿ ಲೋಕಾರ್ಪಣೆಗೊಂಡಿತು.

ದಶಕಗಳ ಹಿಂದೆಯೇ ಶಿಕ್ಷಣಕ್ಕೆ ಒತ್ತು ನೀಡಿದ್ದ ರಾಮಯ್ಯ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ, ಮಾಧುಸ್ವಾಮಿ ಮಾತನಾಡಿ, ಬೆಂಗಳೂರು 'ಎಜುಕೇಷನ್ ಹಬ್' ಆಗುವಲ್ಲಿ ಅತಿ ಹೆಚ್ಚು ವಿದ್ಯಾಸಂಸ್ಥೆಗಳ ಮೂಲಕ ದಶಕಗಳಿಂದ ಶಿಕ್ಷಣ ಒದಗಿಸುತ್ತಿರುವ ಗೋಕುಲ ಶಿಕ್ಷಣ ಪ್ರತಿಷ್ಠಾನದ ಪಾತ್ರವೂ ದೊಡ್ಡದಿದೆ. ಎಂಜಿನಿಯರಿಂಗ್ನಿಂದ ಆರಂಭವಾಗಿ ಇಂದು ವಿವಿಧ ವಲಯಗಳ ಶಿಕ್ಷಣ ಪೂರೈಸುತ್ತಿದೆ. ಎಂ.ಎಸ್.ರಾಮಯ್ಯ ಅವರು ದಶಕಗಳ ಹಿಂದೆಯೇ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದು, ಅದರಿಂದ ನಾಡಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿದ್ದು ನಾಡಿನ ಸೌಭಾಗ್ಯ ಎಂದು ಬಣ್ಣಿಸಿದರು.

ಹಳೆಯ ವಿದ್ಯಾರ್ಥಿಗಳ ಒಕ್ಕೂಟಗಳಾಗಲಿ ಥಿಂಕ್ ಟ್ಯಾಂಕ್

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಭವಿಷ್ಯದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಕಾರಣವಾಗಲಿದೆ. ಇಂದು ಶಿಕ್ಷಣಕ್ಕೆ ಸಾಕಷ್ಟು ಒತ್ತು ನೀಡಲಾಗುತ್ತಿದ್ದು, ನಿತ್ಯ 2 ಕಾಲೇಜುಗಳು ತಲೆಯೆತ್ತುತ್ತಿವೆ. ವಾರಕ್ಕೊಂದು ವಿಶ್ವವಿದ್ಯಾಲಯ ಸ್ಥಾಪನೆ ಆಗುತ್ತಿದೆ. ಈ ಶಿಕ್ಷಣ ಸಂಸ್ಥೆಗಳು ಪ್ರತಿ ವರ್ಷ ಸಾವಿರಾರು ಪ್ರತಿಭೆಗಳನ್ನು ಕೊಡುಗೆ ನೀಡುತ್ತಿವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿ ಶಿಕ್ಷಣ ಸಂಸ್ಥೆಯಲ್ಲಿ ಒಂದು ಹಳೆಯ ವಿದ್ಯಾರ್ಥಿಗಳ ಒಕ್ಕೂಟ ರಚನೆಯಾಗಬೇಕು. ಆ ಒಕ್ಕೂಟವು ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕುಚೆಲ್ಲುವ 'ಥಿಂಕ್ ಟ್ಯಾಂಕ್' (ವಿಚಾರ ವೇದಿಕೆ) ಆಗಿ ಕಾರ್ಯನಿರ್ವಹಿಸಬೇಕು ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಸಲಹೆ ನೀಡಿದರು.

ಆಧಾರ: ಉದಯವಾಣಿ, ದಿನಾಂಕ: 02.03.2023

41. ಹೊಸ, ಹಳೇ ಯೋಜನೆಗಳ ಸಮ್ಮಿಲನದ ಬಜೆಟ್

ವಿಧಾನಸಭೆ, ಬಿಬಿಎಂಪಿ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು, ರಾಜ್ಯ, ಕೇಂದ್ರ ಸರ್ಕಾರಗಳ ಅನುದಾನವನ್ನು ನೆಚ್ಚಿಕೊಂಡು 11,157.83 ಕೋಟಿ ರೂ. ಗಾತ್ರದ 2023–24ನೇ ಸಾಲಿನ ಬಿಬಿಎಂಪಿ ಬಜೆಟ್ನ್ನು ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಮಂಡಿಸಿದರು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅಧ್ಯಕ್ಷತೆಯಲ್ಲಿ ಪುರಭವನದಲ್ಲಿ ಬಜೆಟ್ ಮಂಡಿಸಲಾಯಿತು. ಇಂದಿರಾ ಕ್ಯಾಂಟೀನ್, ತ್ಯಾಜ್ಯ ನಿರ್ವಹಣೆ, ಕೆರೆ ಸಂರಕ್ಷಣೆ, ಉದ್ಯಾನಗಳ ನಿರ್ವಹಣೆ, ನಿರ್ಮಾಣ, ಶಿಕ್ಷಣ, ಆರೋಗ್ಯ, ಆಡಳಿತ, ಮೂಲಸೌಕರ್ಯ ಒದಗಿಸುವ ಕಾರ್ಯಗಳು ಬಿಬಿಎಂಪಿ ಬಜೆಟ್ನಲ್ಲಿ ಉಲ್ಲೇಖಿಸಲಾಗಿದೆ. ಅದರ ಜೊತೆಗೆ ಮೇಲೇತುವೆಗಳ ನಿರ್ಮಾಣಕ್ಕೆ ರೂ.770 ಕೋಟಿ ಸಾಲ ಪಡೆಯುವುದರ ಬಗ್ಗೆಯೂ ಬಜೆಟ್ನಲ್ಲಿ ತಿಳಿಸಲಾಗಿದೆ. ಒಂದೆಡೆ ಉಳಿತಾಯ ಬಜೆಟ್ ಎಂದು

ತೋರಿಸಲಾಗಿದ್ದರೂ, ಸಾಲ ಮಾಡುವ ಮೂಲಕ ಕೊರತೆ ಬಜೆಟ್ ಎಂಬುದನ್ನು ಪರೋಕ್ಷವಾಗಿ ಸ್ಪಷ್ಟಪಡಿಸಲಾಗಿದೆ.

ಆತ್ಮನಿರ್ಭರ ಬಜೆಟ್: ಈ ಆಯವ್ಯಯವನ್ನು ಆತ್ಮನಿರ್ಭರ ಬಜೆಟ್ ಎಂದು ತಿಳಿಸಿರುವ ಜಯರಾಂ ರಾಯಪುರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನಕ್ಕಿಂತ ಬಿಬಿಎಂಪಿ ಆದಾಯ ಹೆಚ್ಚಾಗಿ ಸಂಗ್ರಹಿಸಿ ಬಜೆಟ್ ಅನುಷ್ಠಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೂ. 4,093.86 ಕೋಟಿ ಅನುದಾನ ಹಾಗೂ ಬಿಬಿಎಂಪಿಯ 7,070,11 ಕೋಟಿ ರೂ. ಆದಾಯ ಸೇರಿ ರೂ.11,163.97 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಅದರಲ್ಲಿ 4,780 ಕೋಟಿ ರೂ. ಗಳನ್ನು ಆಸ್ತಿ ತೆರಿಗೆ ಮೂಲಕವೇ ಸಂಗ್ರಹಿಸಲಾಗುತ್ತದೆ ಎಂದು ತಿಳಿಸಲಾಗಿದೆ. ಬಿಬಿಎಂಪಿಗೆ ಬರುವ ಆದಾಯದಲ್ಲಿ ರೂ. 11,157.83 ಕೋಟಿಗಳನ್ನು ವಿವಿಧ ಯೋಜನೆಗಳಿಗೆ ವ್ಯಯಿಸಲಾಗುತ್ತಿದ್ದು, ರೂ. 6.14 ಕೋಟಿ ಉಳಿತಾಯದ ಆಯವ್ಯಯ ಮಂಡಿಸಲಾಗಿದೆ.

ಮರುಕಳಿಸಿದ ಹಲವು ಯೋಜನೆಗಳು: ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾದ ಹಲವು ಬಜೆಟ್‌ಗಳನ್ನು ಬಿಬಿಎಂಪಿ ಬಜೆಟ್‌ನಲ್ಲೂ ಪುನರಾವರ್ತಿಸಲಾಗಿದೆ. ಅದರಲ್ಲೂ ಎಂಜಿನಿಯರಿಂಗ್ ವಿಭಾಗದ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ಬಹುತೇಕ ಯೋಜನೆಗಳು ರಾಜ್ಯ ಬಜೆಟ್‌ನಲ್ಲಿ ಘೋಷಿಸಿದ್ದಾಗಿದೆ. ರೂ.273 ಕೋಟಿ ವೆಚ್ಚದಲ್ಲಿ ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳ ಅಭಿವೃದ್ಧಿ, 195 ಕಿ.ಮೀ. ಉದ್ದದ ರಾಜಕಾಲುವೆ ತಡೆಗೋಡೆ ನಿರ್ಮಾಣ, 152 ಕಡೆಗಳಲ್ಲಿ ರಾಜಕಾಲುವೆ ಒತ್ತುವರಿ ತೆರವು ಹೀಗೆ ಹಲವು ಯೋಜನೆಗಳನ್ನು ಮರುಕಳಿಸಲಾಗಿದೆ.

ಎ ಖಾತಾ ಬೇಡಿಕೆ ಈಡೇರಿಕೆಗೆ ಕ್ರಮ: ಬೆಂಗಳೂರಿನ 6 ಲಕ್ಷಕ್ಕೂ ಹೆಚ್ಚಿನ ಆಸ್ತಿ ಮಾಲೀಕರ ಹಲವು ದಿನಗಳ ಬೇಡಿಕೆಯಾದ ಬಿ ಖಾತಾ ನಿವೇಶನಗಳಿಗೆ ಎ ಖಾತಾ ನೀಡುವುದಕ್ಕೆ 2023–24ರಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ. ಅದಕ್ಕಾಗಿ ಭೂ ಕಂದಾಯ ಕಾಯ್ದೆ ಹಾಗೂ ಟೌನ್ ಆ್ಯಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆಗೆ ತಿದ್ದುಪಡಿ ತರುವುದಕ್ಕೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು. ಈ ಕಾರ್ಯದಿಂದ 2023–24ನೇ ಸಾಲಿನಲ್ಲಿ ರೂ.800 ಕೋಟಿ ಆದಾಯದ ನಿರೀಕ್ಷೆ ಹೊಂದಲಾಗಿದೆ.

ಜೊತೆಗೆ ಇ–ಆಸ್ತಿ ತಂತ್ರಾಶದ ಸೇವೆಯನ್ನು ವಿಸ್ತರಿಸುವ ಗುರಿಯನ್ನು ಹೊಂದಲಾಗಿದೆ. ಈವರೆಗೆ ಪೂರ್ವ ವಲಯ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಇ–ಆಸ್ತಿ ಪ್ರಮಾಣಪತ್ರ ನೀಡಲಾಗುತ್ತಿತ್ತು. ಆದರೆ, ಅದನ್ನು ಪಶ್ಚಿಮ, ದಕ್ಷಿಣ ವಲಯಗಳಿಗೂ ವಿಸ್ತರಿಸಿದ್ದು, ಅದಕ್ಕಾಗಿ ಇ–ಆಸ್ತಿ 2 ತಂತ್ರಾಂಶ ಅಭಿವೃದ್ಧಿಪಡಿಸುವುದಾಗಿ ಘೋಷಿಸಲಾಗಿದೆ.

ವಲಯಕ್ಕೊಂದರಂತೆ 8 ವೃದ್ಧಾಶ್ರಮಗಳ ನಿರ್ಮಾಣ

ಹಳೇ ಯೋಜನೆಗಳ ಜೊತೆಗೆ ಹಲವು ಹೊಸ ಯೋಜನೆಗಳನ್ನೂ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಬಿಬಿಎಂಪಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಪ್ರೋತ್ಸಾಹಿಸಲು ನಾಡಪ್ರಭು ಕೆಂಪೇಗೌಡ ಆವಿಷ್ಕಾರ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಜೊತೆಗೆ ಜಲಮಂಡಲಿಯಲ್ಲಿರುವಂತೆ ಬಿಬಿಎಂಪಿಯ ಪೌರಕಾರ್ಮಿಕರು ಮತ್ತು ಸಿಬ್ಬಂದಿ ನಿವೃತ್ತಿ ನಂತರ ಆರೋಗ್ಯ ಸೇವೆ ಪಡೆಯುವ ಸಲುವಾಗಿ ಬಿಬಿಎಂಪಿ ಪಿಂಚಣಿದಾರರ ಆರೋಗ್ಯ ಕಲ್ಯಾಣ ನಿಧಿಯನ್ನು ಜಾರಿಗೊಳಿಸಿ, ಅದರ ಜಾರಿಗೆ ರೂ.10 ಕೋಟಿ ಕಾರ್ಪಸ್ ಫಂಡ್ ಮೀಸಲಿಡಲಾಗುತ್ತದೆ. ಬಿಬಿಎಂಪಿಯ ವಲಯಕ್ಕೊಂದರಂತೆ 8 ವೃದ್ಧಾಶ್ರಮಗಳ ನಿರ್ಮಾಣ, ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಸಾವಿತ್ರಿ ವಸತಿ ನಿಲಯಗಳ ನಿರ್ಮಾಣ, 11,710 ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂಗೊಳಿಸುವುದು, ಸಂಚಾರ ದಟ್ಟಣೆ ನಿವಾರಣೆಗಾಗಿ ರೂ.965 ಕೋಟಿ ವೆಚ್ಚದಲ್ಲಿ 9 ಮೇಲ್ಸೇತುವೆಗಳ ನಿರ್ಮಾಣ ಹೀಗೆ ಹಲವು ಯೋಜನೆಗಳನ್ನು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಆಧಾರ: ಉದಯವಾಣಿ, ದಿನಾಂಕ: 03.03.2023

42. ಆನ್‌ಲೈನ್‌ನಲ್ಲಿ ಶಾಲೆಗಳ ಮಾನ್ಯತೆ, ಎನ್‌ಒಸಿಗೆ ಕ್ರಮ

ರಾಜ್ಯದಲ್ಲಿ ಖಾಸಗಿ ಶಾಲೆಗಳ ಅನುಮತಿ, ನೋಂದಣಿ, ಮಾನ್ಯತೆ, ನವೀಕರಣ, ಕೇಂದ್ರ ಪಠ್ಯಕ್ರಮ ಸಂಯೋಜನೆಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಸೇರಿದಂತೆ ಹಲವು ಸೇವೆಗಳನ್ನು ಸರಳೀಕರಣಗೊಳಿಸಿ ಆನ್‌ಲೈನ್‌ಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಒದಗಿಸಲಿದೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಖಾಸಗಿ ಹೋಟೆಲ್‌ನಲ್ಲಿ ಅವರು ಖಾಸಗಿ ಶಾಲೆಗಳಿಗೆ ವಿವಿಧ ಆನ್‌ಲೈನ್ ಸೇವೆಗಳಿಗೆ ಚಾಲನೆ ನೀಡಿ ಮಾತನಾಡಿದರು, ಖಾಸಗಿ ಶಾಲೆಗಳ ಆರಂಭ, ನವೀಕರಣ, ಮಾನ್ಯತೆ ಸೇರಿದಂತೆ ಹಲವು ಸೇವೆ ಪಡೆಯಲು ವಿಳಂಬವಾಗುತ್ತಿತ್ತು. ಅಲ್ಲದೆ ಹಲವು ಕಚೇರಿಗಳಿಗೆ ಅಲೆಯಬೇಕಿತ್ತು. ಇದನ್ನು ತಪ್ಪಿಸಿ ಆನ್ ಲೈನ್‌ನಲ್ಲೇ ಅರ್ಜಿ ಸಲ್ಲಿಸಬಹುದಾಗಿದೆ. ನಂತರ ಅರ್ಜಿಯ ಸ್ಥಿತಿ ಸೇರಿದಂತೆ ಎಲ್ಲ ಹಂತಗಳನ್ನು ಮನೆಯಲ್ಲೇ ಕುಳಿತು ನೋಡಬಹುದಾಗಿದೆ. ಹೀಗಾಗಿ ಕಚೇರಿಗೆ ಅಲೆಯುವ ಅಗತ್ಯ ಇಲ್ಲ ಎಂದು ಹೇಳಿದರು.

ಇಲಾಖೆ ಸೇವೆಗಳನ್ನು ಸರಳೀಕರಿಸಿ ಆನ್‌ಲೈನ್‌ಲ್ಲಿ ದೊರೆಯುವಂತೆ ಮಾಡಿದೆ. ಇದಕ್ಕಾಗಿ ಸುತ್ತೋಲೆ ಕೂಡ ಹೊರಡಿಸಿದೆ. ಈ ಸೇವೆಯ ಲಿಂಕ್ ಇಲಾಖೆಯ ವೆಬ್‌ಸೈಟ್‌ನಲ್ಲಿ ದೊರೆಯಲಿದೆ.

ಇನ್ನು ಮುಂದೆ ಅರ್ಜಿಗಳನ್ನು ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ನೇರವಾಗಿ ಸಲ್ಲಿಸಬೇಕು. ಉಪನಿರ್ದೇಶಕರೇ ಅರ್ಜಿ ಪರಿಶೀಲಿಸಿ ಮಂಜೂರಾತಿ ನೀಡುತ್ತಾರೆ. ಇದರಿಂದ ಸಮಯ ಉಳಿತಾಯವಾಗಲಿದೆ ಎಂದರು.

ಹಿಂದೆ ಅರ್ಜಿ ಸಲ್ಲಿಕೆಗೆ 8 ಹಂತಗಳಿದ್ದವು. ಈಗ ಅದನ್ನು 4ಕ್ಕೆ ಇಳಿಸಲಾಗಿದೆ. ಅರ್ಜಿ ಸಲ್ಲಿಸಿದ 27 ದಿನಗಳ ನಂತರ ಕೆಲಸ ಆಗುತ್ತಿತ್ತು. ಈಗ ಅದನ್ನು 17 ದಿನಕ್ಕೆ ಇಳಿಸಲಾಗಿದೆ. ಮೊದಲು ಅರ್ಜಿ ಸಲ್ಲಿಸಿದ ಎಲ್ಲ ಸಂಸ್ಥೆಗಳಿಗೆ ಸದಸ್ಯರು ಭೇಟಿ ನೀಡಿ ಪರಿಶೀಲಿಸುತ್ತಿದ್ದರು. ಈಗ ಕೇವಲ ಶೇ.5ರಷ್ಟು ಶಾಲೆಗಳಿಗೆ ಮಾತ್ರ ಸದಸ್ಯರು ತೆರಳಿ ಪರಿಶೀಲಿಸುತ್ತಾರೆ. ಹಿಂದೆ ದತ್ತಾಂಶ ಆಧಾರಿತ ಸೇವೆ ನೀಡಲಾಗುತ್ತಿತ್ತು. ಅದನ್ನು ಜಿಯೋ ಟ್ಯಾಗ್‌ನಲ್ಲಿ ನಿರ್ವಹಿಸಲಾಗುವುದು ಎಂದು ಮಾಹಿತಿ ನೀಡಿದರು.

ಇದೇ ರೀತಿ ಹೊಸ ಶಾಲೆಗಳ ನೋಂದಣಿ, ಮಾನ್ಯತೆ ನವೀಕರಣ, ಎನ್‌ಪಿಸಿ ಹಾಗೂ ಶಾಲೆಗಳ ಮಾಹಿತಿ ದತ್ತಾಂಶ ಸಂಗ್ರಹಣೆ ವಿಧಾನವನ್ನು ಸರಳೀಕರಣಗೊಳಿಸಲಾಗಿದೆ ಎಂದು ಸಚಿವರು ಹೇಳಿದರು.

ಅನಧಿಕೃತ ಶಾಲೆಗಳ ಮೇಲೆ ಕ್ರಮ

ಸದ್ಯ ಪರೀಕ್ಷೆಗಳು ಆರಂಭವಾಗಿರುವುದರಿಂದ ರಾಜ್ಯದಲ್ಲಿರುವ ಅನಧಿಕೃತ ಶಾಲೆಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಪರೀಕ್ಷೆ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ನೀಡುವುದಿಲ್ಲ. ಪರೀಕ್ಷೆ ಮುಗಿದ ನಂತರ ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಇರುವ ಅನಧಿಕೃತ ಶಾಲೆಗಳನ್ನು ಪಟ್ಟಿ ಮಾಡಿ ನೋಟಿಸ್ ನೀಡಲಾಗಿದೆ ಎಂದು ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಶಿಕ್ಷಣ ಇಲಾಖೆಯ ರಾಜ್ಯ ಯೋಜನಾ ನಿರ್ದೇಶಕಿ ಬಿ.ಬಿ.ಕಾವೇರಿ ಹಾಗೂ ಇತರರು ಇದ್ದರು.

ಉಪ ನಿದೇರ್ಶಕರಿಗೆ ನೇರ ಅರ್ಜಿ

ಹಿಂದೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕಿತ್ತು. ಅವರು ಅದನ್ನು ಪರಿಶೀಲಿಸಿ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಕಳುಹಿಸುತ್ತಿದ್ದರು. ಇದರಿಂದ ಸಮಯ ವ್ಯರ್ಥವಾಗುತ್ತಿತ್ತು, ಈಗ ನೇರವಾಗಿ ಉಪ ನಿರ್ದೇಶಕರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಉಪ ನಿರ್ದೇಶಕರು ಪರಿಶೀಲಿಸಿ ಮಂಜೂರಾತಿ ನೀಡುತ್ತಾರೆ. ಹಿಂದೆ ಅರ್ಜಿ ಸಲ್ಲಿಸಿದ ಎಲ್ಲ ಶಾಲೆಗಳಿಗೆ ಸಮಿತಿ ಸದಸ್ಯರು ಭೇಟಿ ನೀಡುತ್ತಿದ್ದರು. ಈಗ ಇದನ್ನು ಕಡಿಮೆಗೊಳಿಸಲಾಗಿದೆ, ಶೇ.5 ಪ್ರಮಾಣದಲ್ಲಿ ಮಾತ್ರ ಪರಿಶೀಲನೆ ಮಾಡಲಾಗುವುದು. ಕಚೇರಿಯ ಎಸ್‌ಎಟಿಎಸ್‌ನ ರ್‍ಯಾಂಡಮ್ ಸೆಲೆಕ್ಷನ್‌ಲ್ಲಿ ಆಯ್ಕೆಗೊಂಡ ಶಾಲೆಗಳಿಗೆ ಮಾತ್ರ ತೆರಳಿ ಪರಿಶೀಲಿಸಲಾಗುವುದು. ಅರ್ಜಿ ಸಲ್ಲಿಸುವವರು ಫೋಟೋಗಳನ್ನು ಜಿಯೋ ಟ್ಯಾಗ್‌ಗೆ ಅಪ್‌ಲೋಡ್

ಮಾಡಬೇಕು. ಇದಕ್ಕಾಗಿ ವಿಶೇಷ ಆ್ಯಪ್ ತಯಾರಿಸಲಾಗಿದೆ. ಪ್ರತಿ ಹಂತದಲ್ಲೂ ಅರ್ಜಿದಾರರಿಗೆ ಇಲಾಖೆಯಿಂದ ಎಸ್‌ಎಂಎಸ್ ರವಾನೆಯಾಗಲಿದೆ ಎಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 04.03.2023

43. ಎಚ್3ಎನ್2 ಆತಂಕ ಬೇಡ

ಎಚ್3 ಎನ್2 ವೈರಸ್‌ಗೆ ಸಂಬಂಧಿಸಿ ರಾಜ್ಯದಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾಗಿಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ. ಈ ಮೂಲಕ ಹೊಸ ಸೋಂಕಿನ ಭೀತಿಗೆ ಒಳಗಾಗಿದ್ದ ಜನರು ನಿಟ್ಟುಸಿರು ಬಿಡುವಂತಾಗಿದೆ.

ಹೊಸ ವೈರಸ್ ಹಿನ್ನೆಲೆಯಲ್ಲಿ ತಾಂತ್ರಿಕ ಸಮಿತಿ ಹಾಗೂ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಮಾತನಾಡಿದ ಅವರು, ಎಚ್3ಎನ್2 ಬಗ್ಗೆ ಆತಂಕ ಪಡಬೇಕಿಲ್ಲ, ಆದರೆ ಎಚ್ಚರಿಕೆಯಿಂದ ಇರುವುದು ಮುಖ್ಯ ಎಂದರು. ರಾಜ್ಯದ ಎಲ್ಲಾ ಆಸ್ಪತ್ರೆಗಳ ಆರೋಗ್ಯ ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂದು ಸೂಚನೆ ನೀಡಲಾಗಿದೆ. ಜೊತೆಗೆ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಲು ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಪ್ರತಿ ವಾರ 25 ಪರೀಕ್ಷೆ ಮಾಡಬೇಕೆಂದು ಕೇಂದ್ರ ಸರ್ಕಾರ ಗುರಿ ನೀಡಿದೆ. ಬೆಂಗಳೂರಿನ ವಿಕ್ಟೋರಿಯಾ, ವಾಣಿ ವಿಲಾಸ ಆಸ್ಪತ್ರೆಗಳಲ್ಲಿ ಸಾರಿ ಹಾಗೂ ಐಎಲ್‌ಐ ಪ್ರಕರಣಗಳ ಪೈಕಿ 25 ಮಂದಿಗೆ ಈ ಪರೀಕ್ಷೆ ಮಾಡಿ ಯಾವ ಪ್ರಭೇದದ ವೈರಾಣು ಎಂದು ಪತ್ತೆ ಮಾಡಲಾಗುವುದು ಎಂದು ತಿಳಿಸಿದರು.

ಈ ಸೋಂಕು ಬಂದರೆ 2–5 ದಿನದೊಳಗೆ ನಿವಾರಣೆಯಾಗುತ್ತದೆ. ಕೋವಿಡ್‌ಗೊಳಗಾದವರಿಗೆ ಸೋಂಕು ಬಂದರೆ ಹೆಚ್ಚು ಕೆಮ್ಮು ಇರುತ್ತದೆ. ಬೆಂಗಳೂರಿನಲ್ಲಿ ಈ ಸೋಂಕಿನ ಎರಡು ಪ್ರಕರಣಗಳು ಕಂಡುಬಂದಿವೆ ಎಂದು ಸಚಿವರು ಮಾಹಿತಿ ನೀಡಿದರು.

15 ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳಲ್ಲಿ 65 ವರ್ಷ ಮೇಲ್ಪಟ್ಟ ವೃದ್ಧರಲ್ಲಿ ಈ ಸೋಂಕು ಕಂಡುಬರಬಹುದು. ಗರ್ಭಿಣಿಯರಿಗೂ ಸೋಂಕು ಬರುವ ಸಾಧ್ಯತೆ ಹೆಚ್ಚಿದೆ. ಶುಚಿತ್ವ ಗುಂಪುಗೂಡುವುದನ್ನು ತಡೆಯುವುದು, ಕೈಗಳ ಸ್ವಚ್ಛತೆ ಮೊದಲಾದ ಕ್ರಮಗಳ ಮೂಲಕ ಸೋಂಕು ಹರಡುವುದನ್ನು ತಡೆಯಬಹುದು ಎಂದರು.

ಮಾಸ್ಕ್ ಕಡ್ಡಾಯ ಮಾರ್ಗಸೂಚಿ

ವಿಧಾನಸೌಧದಲ್ಲಿ ಆರೋಗ್ಯ ಸಚಿವರು ಸಭೆ ನಡೆಸಿದ ಬೆನ್ನಲ್ಲೇ ಸಂಜೆ ಮಾರ್ಗಸೂಚಿ ಹೊರಡಿಸಲಾಗಿದ್ದು, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ಕಾರ್ಯಕರ್ತರು, ವೈದ್ಯರು,

ನರ್ಸ್ ಸೇರಿದಂತೆ ಎಲ್ಲ ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸಲು ತಿಳಿಸಲಾಗಿದೆ. ಐಸಿಯು ಹಾಗೂ ಐಸೊಲೇಷನ್ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುವವರು ಪ್ಲೂ ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯ ಮಾಡಲಾಗಿದೆ.

ಹೊಸ ಸೋಂಕು ಪರೀಕ್ಷೆಯ ದರ ನಿಯಂತ್ರಣಕ್ಕೆ ಕಡಿವಾಣ ಹಾಕಲು ಸಮಿತಿ ರಚಿಸಲು ಸೂಚಿಸಲಾಗಿದೆ. ಕಡಿಮೆ ದರದಲ್ಲಿ ಪರೀಕ್ಷೆಗೆ ಕ್ರಮ ವಹಿಸಲಾಗುವುದು. ವರದಿ ಬಂದ ಬಳಿಕ ಪರೀಕ್ಷೆಗೆ ದರ ನಿಗದಿ ಮಾಡಲಾಗುವುದು ಎಂದು ಡಾ.ಕೆ.ಸುಧಾಕರ್, ಆರೋಗ್ಯ ಸಚಿವರು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ: 07.03.2023

44. ಬಳಕೆಯಲ್ಲಿ ಇಲ್ಲದ 65 ಕಾನೂನು ರದ್ದು

ಕೇಂದ್ರ ಸರ್ಕಾರವು ಇದೇ 13ರಿಂದ ಆರಂಭವಾಗಲಿರುವ ಸಂಸತ್ ಅಧಿವೇಶನದಲ್ಲಿ ಬಳಕೆಯಲ್ಲಿ ಇಲ್ಲದ 65 ಕಾನೂನುಗಳು ಹಾಗೂ ಇತರೆ ನಿಬಂಧನೆಗಳನ್ನು ರದ್ದುಗೊಳಿಸುವ ಮಸೂದೆಯೊಂದನ್ನು ಮಂಡಿಸಲಿದ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹೇಳಿದರು.

ಇಲ್ಲಿ ಹಮ್ಮಿಕೊಳ್ಳಲಾಗಿದ್ದ 23ನೇ ಕಾಮನ್‌ವೆಲ್ತ್ ಕಾನೂನು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ವಿವಿಧ ನ್ಯಾಯಾಲಯಗಳಲ್ಲಿ 4.98 ಕೋಟಿಗೂ ಅಧಿಕ ಪ್ರಕರಣಗಳು ಬಾಕಿ ಇವೆ. ತಂತ್ರಜ್ಞಾನದ ಬಳಕೆ ಮೂಲಕ ಇವುಗಳನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುವುದು. 'ಕಾಗದ ರಹಿತ ನ್ಯಾಯಾಂಗ' ವ್ಯವಸ್ಥೆ ಜಾರಿಗೊಳಿಸುವುದು ಕೇಂದ್ರ ಸರ್ಕಾರದ ಪ್ರಮುಖ ಗುರಿಯಾಗಿದೆ' ಎಂದರು.

ಕೇಂದ್ರ ಸರ್ಕಾರವು ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದೆ. ದೇಶದ ಎಲ್ಲಾ ನಾಗರಿಕರು ಇದರ ಫಲಾನುಭವಿಗಳಾಗಿದ್ದಾರೆ. ಕಲ್ಯಾಣ ರಾಜ್ಯದ ಪರಿಕಲ್ಪನೆಯಲ್ಲಿ ಪ್ರತಿಯೊಬ್ಬ ನಾಗರಿಕರ ಅಹವಾಲು ಆಲಿಸುವುದು ತುಂಬಾ ಅಗತ್ಯ ಎಂದು ಹೇಳಿದರು. ಸಾಮಾನ್ಯ ಜನರ ಜೀವನವನ್ನು ಸುಲಭಗೊಳಿಸುವುದಕ್ಕೆ ಅಗತ್ಯವಿರುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ನಮ್ಮ ಸರ್ಕಾರ ಮುಂಚೂಣಿಯಲ್ಲಿದೆ. ಈ ಸಂಬಂಧ ಸರ್ಕಾರ ರೂಪಿಸಿರುವ ನೀತಿಗಳು ಯಶಸ್ವಿಯಾಗಿವೆ. ಕಾನೂನುಗಳು ಇರುವುದೇ ಜನರಿಗಾಗಿ ಎಂಬುದನ್ನು ನಾವು ನಂಬುತ್ತೇವೆ. ಅಂತಹ ಕಾನೂನುಗಳೇ ಅಡೆತಡೆಯಾಗಿ ಮಾರ್ಪಟ್ಟರೆ, ಅವುಗಳ ಅನುಸರಣೆಯು ಜನರ ಜೀವನದ ಮೇಲೆ ಹೊರೆಯಾಗಿ ಪರಿಣಮಿಸುತ್ತವೆ. ಹೀಗಾಗಿ ಅಂತಹ ನಿಬಂಧನೆಗಳನ್ನು ತೆಗೆದು ಹಾಕುವುದೇ ಸೂಕ್ತ ಎಂದು ಸಚಿವರು ಅಭಿಪ್ರಾಯ– ಪಟ್ಟರು.

ಕಳೆದ ಎಂಟೂವರೆ ವರ್ಷಗಳಲ್ಲಿ ನಾವು ಬಳಕೆಯಲ್ಲಿ ಇಲ್ಲದ ಹಾಗೂ ಅನಗತ್ಯವಾಗಿರುವ 1,486 ಕಾನೂನುಗಳನ್ನು ರದ್ದುಪಡಿಸಿದ್ದೇವೆ. ಇಂತಹ ಇನ್ನೂ 65 ಕಾನೂನುಗಳನ್ನು ರದ್ದುಪಡಿಸುವ ಮಸೂದೆಯನ್ನು ಮುಂಬರುವ ಬಜೆಟ್ ಅಧಿವೇಶನದಲ್ಲಿ ಮಂಡಿಸಲಿದ್ದೇನೆ ಎಂದರು.

ದೇಶದ ವಿವಿಧ ಸ್ತರಗಳಲ್ಲಿನ ನ್ಯಾಯಾಲಯಗಳಲ್ಲಿ 4.98 ಕೋಟಿಗೂ ಅಧಿಕ ಪ್ರಕರಣಗಳು ಬಾಕಿ ಉಳಿದಿವೆ. ಹೊಸ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಇತ್ಯರ್ಥವು ಅತಿ ಸುಲಭದ್ದಲ್ಲ. ಹೀಗಿದ್ದರೂ ದೇಶ ನ್ಯಾಯಾಧೀಶರು ಈ ದಿಸೆಯ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಸಮಸ್ಯೆಯು ಇನ್ನಷ್ಟು ಸವಾಲು ಪರಿಣಮಿಸಿದೆ. ಸಾಮಾನ್ಯ ಸಂದರ್ಭಗಳಲ್ಲಿ ನ್ಯಾಯಾಧೀಶರೊಬ್ಬ ದಿನದಲ್ಲಿ ಸರಾಸರಿ 50 ರಿಂದ 60 ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಾರೆ. ಕೆಲ ನ್ಯಾಯಾಧೀಶರು ದಿನದಲ್ಲಿ 2 ಪ್ರಕರಣಗಳನ್ನು ಇತ್ಯರ್ಥಗೊಳಿಸಿದು ಇದೆ. ಹೀಗಿದ್ದರೂ ಬಾಕಿ ಪ್ರಕರಣಗಳ ಸಂಖ್ಯೆಯು ಏರುತ್ತಲೇ ಇದೆ. ಈ ಸ್ಥಿತಿಯನ್ನು ನಿಭಾಯಿಸಲು ಸರ್ಕಾರ ತಂತ್ರಜ್ಞಾನದ ಮೊರೆ ಹೋಗಿದೆ ಎಂದು ವಿವರಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ: 07.03.2023

45. 80 ವರ್ಷ ಮೇಲ್ಪಟ್ಟವರಿಗೆ ಅಂಚೆ ಮತದಾನ ಅವಕಾಶ

ದೇಶದಲ್ಲೇ ಪ್ರಪ್ರಥಮ ಬಾರಿಗೆ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ಅಂಗವಿಕಲರಿಗೆ ಅಂಚೆ ಮತದಾನ' ಸೌಲಭ್ಯ ಕಲ್ಪಿಸಲು ಚುನಾವಣೆ ಆಯೋಗ ಮುಂದಾಗಿದೆ.

ಹೌದು. ಚುನಾವಣೆಯಲ್ಲಿ ಮತದಾನದಿಂದ ಯಾರೂ ವಂಚಿತರಾಗಬಾರದು ಎಂಬ ಉದ್ದೇಶದಿಂದ ಮತದಾನ ಕೇಂದ್ರಕ್ಕೆ ನಡೆದುಕೊಂಡು ಬರಲು ಸಾಧ್ಯವಾಗದಿರುವ 80 ವರ್ಷ ಮೇಲ್ಪಟ್ಟ ಹಿರಿಯ ನಾಗಕರಿಕರು, ಅಂಗವಿಕಲರಿಗೆ ಅಂಚೆ ಮತದಾನ ಸೌಲಭ್ಯ ಕಲ್ಪಿಸಲು ವಿನೂತನ ಯೋಜನೆ ಅನುಷ್ಠಾನಕ್ಕೆ ನಿರ್ಧರಿಸಿದೆ. ಈ ಮೊದಲು ಅಂಚೆ ಮತದಾನ ಸೌಲಭ್ಯವನ್ನು ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡ ನೌಕರರು, ಭದ್ರತಾ ಪಡೆಗಳು, ಸೈನಿಕ (ಸೇವಾ ಮತದಾರರು) ಮತದಾರರಿಗೆ ಕಲ್ಪಿಸಲಾಗಿತ್ತು. ಇದೀಗ ಅದನ್ನು ಹಿರಿಯ ನಾಗರಿಕರು, ಅಂಗವಿಕಲರಿಗೆ ವಿಸ್ತರಣೆ ಮಾಡುತ್ತಿರುವುದು ವಿಶೇಷ ಎನ್ನಲಾಗುತ್ತಿದೆ.

ರಾಜ್ಯದಲ್ಲಿ ಸುಮಾರು 18 ಲಕ್ಷಕ್ಕೂ ಅಧಿಕ 80 ವರ್ಷ ಮೇಲ್ಪಟ್ಟವರು ಹಿರಿಯ ನಾಗರಿಕರು, 7 ಲಕ್ಷಕ್ಕೂ ಅಧಿಕ ಅಂಗವಿಕಲರು ಇದ್ದಾರೆ. ಇವರಲ್ಲಿ ಶೇ.40 ಜನರಿಗೆ ನಡೆದುಕೊಂಡು ಬಂದು ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ. 2019 ಚುನಾವಣೆಯಲ್ಲಿ ಮತಗಟ್ಟೆಗೆ ಬರಲು ಸಾಧ್ಯವಾಗದಿರುವ 80ವರ್ಷ ಮೇಲ್ಪಟ್ಟ ಮತದಾರರು, ಅಂಗವಿಕಲರು ವಾಸಿಸುವ ಸ್ಥಳದಲ್ಲಿಯೇ ಹೋಗಿ ಮತದಾನ ಮಾಡಿಸಲಾಗಿತ್ತು. ಆದರೆ, ನಿರೀಕ್ಷಿತ ಪ್ರಮಾಣದಲ್ಲಿ ಅದು ಸಾಧ್ಯವಾಗಿರಲಿಲ್ಲ. ಹಾಗಾಗಿ ಈ ಬಾರಿ ಚುನಾವಣೆಯಲ್ಲಿ ಮತದಾನದಿಂದ ಯಾರೂ ವಂಚಿತರಾಗಬಾದೆಂಬ ಉದ್ದೇಶದಿಂದ ಸೇವಾ ಮತದಾರರನ್ನು ಹೊರತುಪಡಿಸಿ ಇತರರಿಗೆ ಅಂಚೆ ಮತದಾನ ಸೌಲಭ್ಯ ಕಲ್ಪಿಸಲು ಆಯೋಗ ಕ್ರಮ ವಹಿಸಿದೆ. ಈಗಾಗಲೆ

ಅಂಚೆ ಮತದಾನ ಸೌಲಭ್ಯ ಕಲ್ಪಿಸಲು ಯೋಜನೆ ರೂಪಿಸಿದ್ದು, ಆಯಾ ಜಿಲ್ಲಾ ಚುನಾವಣಾಧಿಕಾರಿಗಳಿಂದ ಮಾಹಿತಿ ಜೊತೆಗೆ ಸಲಹೆಗಳನ್ನೂ ಪಡೆದು ಕೊಳ್ಳುತ್ತಿದೆ. ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ನಗರ ಮತ್ತು ಗ್ರಾಮೀಣ ಶೇ.100 ಮತದಾನವಾಗಿಲ್ಲ. ಅಲ್ಲದೆ, ಮತಗಟ್ಟೆಗೆ ಬರಲು ಸಾಧ್ಯವಾಗದೆ ಮತದಾನ ಮಾಡದಿರುವ ಅಂಗವಿಕಲರು, ಹಿರಿಯ ನಾಗರಿಕರನ್ನು ಗುರುತಿಸಿ ಅವರಿಗೆ ಮತದಾನ ಸೌಲಭ್ಯ ಕಲ್ಪಿಸಲು ಆಯೋಗ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ರಾಜ್ಯದಲ್ಲಿ ಮತದಾನ ಜಾಗೃತಿ ಅಭಿಯಾನ, ಸಿಬ್ಬಂದಿ ತರಬೇತಿ ಕೆಲಸಗಳು ಪ್ರಗತಿ ಹಂತದಲ್ಲಿವೆ. ಶೇ.10 ಮತ ಯಂತ್ರಗಳನ್ನು ಬಳಸಿ ಸಾರ್ವಜನಿಕರಿಗೆ ಅಣಕು ಮತದಾನದ ಬಳಿಕ ಮತ ಎಣಿಕೆ ಮಾಡಿ ಪ್ರಾತ್ಯಕ್ಷಿಕೆ ತೋರಿಸುವ ಅಭಿಯಾನ ಆರಂಭಿಸಲಾಗಿದೆ. ಲಕ್ಷಾಂತರ ಹೊಸ ಎಪಿಕ್ ಕಾರ್ಡ್‌ಗಳನ್ನು ಮುದ್ರಣಕ್ಕೆ ಕಳುಹಿಸಿ ಕೊಡಲಾಗಿದ್ದು, ಅಂಚೆ ಮೂಲಕ ಮನೆಗಳಿಗೆ ತಲುಪಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿರುವ ಮತದಾರರ ಅಂದಾಜು ವಿವರ	
ಮತದಾರರು	**ಅಂಕಿ ಸಂಖ್ಯೆ**
ಅಂಗವಿಕಲರು	5.09 ಲಕ್ಷ
ಹಿರಿಯ ನಾಗರಿಕರು (80ವರ್ಷ ಮೇಲ್ಪಟ್ಟ)	18.20 ಲಕ್ಷ
ಯುವ ಮತದಾರರು	7.01 ಲಕ್ಷ
ತೃತೀಯ ಲಿಂಗಿಗಳು	41,312 ಲಕ್ಷ

ಈ ಬಾರಿ ಮತದಾನದಿಂದ ಯಾರೂ ವಂಚಿತರಾಗಬಾರದು ಎಂಬ ಆಯೋಗ ಉದ್ದೇಶ. ಈ ಹಿನ್ನೆಲೆಯಲ್ಲಿ ಮತಗಟ್ಟೆಗೆ ಬರಲು ಸಾಧ್ಯವಾಗದಿರುವ ಹಿರಿಯ ನಾಗರಿಕರು, ಅಂಗವಿಕಲರಿಗೆ ಅಂಚೆ ಮತದಾನ ಸೌಲಭ್ಯ ಕಲ್ಪಿಸುವ ಕುರಿತು ಆಯೋಗವು ಪರಿಶೀಲನೆ ನಡೆಸುತ್ತಿದೆ. ಅಣಕು ಮತದಾನದ ಬಳಿಕ ಮತ ಎಣಿಕೆ ಮಾಡಿ ಪ್ರಾತ್ಯಕ್ಷಿಕೆಯನ್ನೂ ತೋರಿಸುವ ಅಭಿಯಾನ ಆರಂಭಗೊಂಡಿದೆ ಎಂದು ನಿತೇಶ ಪಾಟೀಲ ಜಿಲ್ಲಾಧಿಕಾರಿ ಬೆಳಗಾವಿ ತಿಳಿಸಿದರು.

ಆಧಾರ: ವಿಜಯವಾಣಿ, ದಿನಾಂಕ: 07.03.2023

46. ನಾಳೆ ರಾಜ್ಯಕ್ಕೆ ಚುನಾವಣಾ ಆಯೋಗ ಭೇಟಿ

ರಾಜ್ಯ ವಿಧಾನಸಭೆ ಚುನಾವಣೆಗೆ ದಿನಗಣನೆ ಆರಂಭವಾಗಿರುವಂತೆಯೇ, ಕೇಂದ್ರ ಚುನಾವಣಾ ಆಯೋಗ ಚುನಾವಣಾ ಸಿದ್ಧತೆಗಳನ್ನು ಅಂತಿಮಗೊಳಿಸಿಕೊಳ್ಳುತ್ತಿದೆ. ಇದರ ಭಾಗವಾಗಿ ಮುಖ್ಯ ಚುನಾವಣಾ ಆಯುಕ್ತರ ನೇತೃತ್ವದಲ್ಲಿ ಪೂರ್ಣ ಪ್ರಮಾಣದ ಚುನಾವಣಾ ಆಯೋಗವು ಮಾರ್ಚ್ 9 ರಿಂದ ಮೂರು ದಿನಗಳ ಕಾಲ ರಾಜ್ಯಕ್ಕೆ ಭೇಟಿ ಕೊಡಲಿದೆ.

ಸಾಮಾನ್ಯವಾಗಿ ಸಾರ್ವತ್ರಿಕ ವಿಧಾನಸಭೆ ಚುನಾವಣೆಗಳು ನಡೆಯುವ ರಾಜ್ಯಗಳಿಗೆ 'ಪೂರ್ಣ ಆಯೋಗ' (ಫುಲ್ ಕಮಿಷನ್) ಆಗಮಿಸಿ ಸಿದ್ಧತೆಗಳನ್ನು ಪರಿಶೀಲಿಸಿದ ಬಳಿಕವಷ್ಟೇ ಚುನಾವಣೆಗೆ ದಿನಾಂಕ ಘೋಷಣೆಗೆ ಒಂದು ದಿಶೆ ಸಿಗುತ್ತದೆ. ಆ ಹಿನ್ನೆಲೆಯಲ್ಲಿ ಆಯೋಗದ ಈ ಭೇಟಿ ಮಹತ್ವ ಪಡೆದುಕೊಂಡಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅಧ್ಯಕ್ಷತೆಯಲ್ಲಿ ಆಯೋಗದ ಹಿರಿಯ ಅಧಿಕಾರಿಗಳ ತಂಡ 9, 10 ಮತ್ತು 11ರಂದು ರಾಜ್ಯದಲ್ಲಿರಲಿದ್ದು, ಬೆಂಗಳೂರಿನಲ್ಲಿ ಚುನಾವಣಾ ಸಿದ್ಧತೆಗಳ ಪರಿಶೀಲನೆ, ಸರಣಿ ಸಭೆಗಳು, ವಿಚಾರ ಸಂಕೀರ್ಣ, ಮತದಾರರ ಜಾಗೃತಿ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಲಿದೆ. ಈ ತಂಡದಲ್ಲಿ ಚುನಾವಣಾ ಆಯುಕ್ತರಾದ ಅನೂಪ್ ಚಂದ್ರಪಾಂಡೆ, ಅರುಣ್ ಗೋಯಲ್ ಹಾಗೂ ಉಪ ಆಯುಕ್ತರು ಸೇರಿ ಆಯೋಗದ ಹಿರಿಯ ಅಧಿಕಾರಿಗಳು ಆಗಮಿಸಲಿದ್ದಾರೆ.

ಮಾರ್ಚ್ 9ರಂದು ಅಪರಾಹ್ನ ಬೆಂಗಳೂರಿಗೆ ಆಗಮಿಸುವ ನಿಯೋಗವು ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದು, 11ರಂದು ಪತ್ರಿಕಾಗೋಷ್ಠಿ ನಡೆಸಿ ದೆಹಲಿಗೆ ವಾಪಸ್ಸಾಗಲಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ಆಧಾರ: ಉದಯವಾಣಿ, ದಿನಾಂಕ: 08.03.2023

47. ಗಣಿ ಪರಿಸರ ಕಾಯಕಲ್ಪಕ್ಕೆ 24 ಸಾವಿರ ಕೋಟಿ ವೆಚ್ಚ

ರಾಜ್ಯದ ಗಣಿ ಬಾಧಿತ ಜಿಲ್ಲೆಗಳಲ್ಲಿ ಗಣಿ–ಪರಿಸರ ಪುನಶ್ಚೇತನ ಕಾರ್ಯಕ್ಕೆ ಸಂಗ್ರಹವಾದ ಸುಮಾರು ರೂ.24 ಸಾವಿರ ಕೋಟಿ ಹಣವನ್ನು ಒಡಿಶಾ ಮಾದರಿಯಲ್ಲಿ ವೆಚ್ಚ ಮಾಡಲು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಅದರಂತೆ, ಇನ್ನು ಮುಂದೆ ಕಾರ್ಯಾನುಷ್ಠಾನಕ್ಕೆ ಸಂಪುಟದ ಒಪ್ಪಿಗೆಗೆ ಕಾಯದೇ ನೇರವಾಗಿ ಇಲಾಖೆ ಅಥವಾ ಸಮಿತಿಯ ಒಪ್ಪಿಗೆಯೊಂದಿಗೆ ಕಾಮಗಾರಿ ನಡೆಸಬಹುದಾಗಿದೆ.

ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದು ಕೊಳ್ಳಲಾಗಿದ್ದು, ಬಳ್ಳಾರಿ, ಚಿತ್ರದುರ್ಗ, ರಾಯಚೂರು ಹಾಗೂ ತುಮಕೂರು ಜಿಲ್ಲೆಯಲ್ಲಿ ಸಮಗ್ರ ಗಣಿ–ಪರಿಸರ ಪುನಶ್ಚತನ ಯೋಜನೆಯಡಿ ಈ ಹಣವನ್ನು ಆರೋಗ್ಯ, ಶಿಕ್ಷಣ, ಮೂಲಸೌಕರ್ಯದಂಥ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತದೆ.

ಸಂಪುಟ ಸಭೆ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ.ಮಾಧುಸ್ವಾಮಿ ಈ ವಿಚಾರ ತಿಳಿಸಿದ್ದು, ಸುಪ್ರೀಂಕೋರ್ಟ್‌ನಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಜಯ ಲಭಿಸಿದ್ದು, ಒಡಿಶಾ ಮಾದರಿಯಲ್ಲಿ ಅನುಷ್ಠಾನ ಮಾಡಲಾಗುತ್ತದೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಎಂಬವರು ಈ ಸಮಿತಿಗೆ ಕೋರ್ಟ್ ನಿಯೋಜಿತ ಪ್ರತಿನಿಧಿಯಾಗಿರುತ್ತಾರೆ. ಅವರ ಮಾರ್ಗದರ್ಶನದಲ್ಲಿ ಈ 4 ಜಿಲ್ಲೆಗಳಲ್ಲಿ ಪುನಶ್ಚೇತನ ಕಾರ್ಯ ನಡೆಸಲಾಗುತ್ತದೆ. ಇಲಾಖೆಗಳಿಂದ ನೇರವಾಗಿ ಆಡಳಿತಾತ್ಮಕ ಅನುಮೋದನೆ ಪಡೆದು ಗಣಿ ಪರಿಸರ ಪುನಶ್ಚೇತನ ನಿಗಮದ ಅನುಮತಿ ಪಡೆದು ಅನುಷ್ಠಾನ ಕಾರ್ಯ ನಡೆಸಬಹುದು. ಇದಕ್ಕಾಗಿ ಇನ್ನು ಮುಂದೆ ಸಚಿವ ಸಂಪುಟ ಸಭೆಯ ಅನುಮೋದನೆಗೆ ಕಾಯಬೇಕಿಲ್ಲ. ಬಳ್ಳಾರಿ ಜಿಲ್ಲೆಗೆ ಇದರಿಂದ ರೂ. 17,000 ಕೋಟಿ ಅನುದಾನ ಲಭಿಸಲಿದೆ ಎಂದು ವಿವರಿಸಿದರು.

ವೇತನ ಹೆಚ್ಚಳಕ್ಕೆ ಒಪ್ಪಿಗೆ

ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸಿನ ಅನ್ವಯ ಶೇ.17ರಷ್ಟು ವೇತನ ಹಾಗೂ ಪಿಂಚಣಿ ಹೆಚ್ಚಳಕ್ಕೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಸರ್ಕಾರಿ ನೌಕರರಿಗೆ ಈ ಹಿಂದೆ ನೀಡಿದ್ದ ಭರವಸೆ ಅನ್ವಯ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ರೂ. 7246.85 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ.

ಸಚಿವರಿಬ್ಬರೂ ಹಾಜರ್

ಪಕ್ಷಾಂತರಕ್ಕೆ ನಿರ್ಧರಿಸಿದ್ದಾರೆ ಎನ್ನಲಾಗಿದ್ದ ಕ್ರೀಡಾ ಸಚಿವ ಎಂ.ಸಿ.ನಾರಾಯಣಗೌಡ, ಪಕ್ಷದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮುನಿಸಿಕೊಂಡಿದ್ದ ವಸತಿ ಸಚಿವ, ನಡೆದ ಸಚಿವ ಸಂಪುಟ ಸಭೆಗೆ ವಿ.ಸೋಮಣ್ಣ ಹಾಜರಾಗಿದ್ದರು. ಸದ್ಯಕ್ಕೆ ಇಬ್ಬರೂ ವದಂತಿಗಳಿಗೆ ತೆರೆ ಎಳೆಯುವ ಪ್ರಯತ್ನ ನಡೆಸಿದ್ದಾರೆ. ಈ ಮಧ್ಯೆ ಸೋಮಣ್ಣ ಅವರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗುವ ಸಾಧ್ಯತೆಗಳಿವೆ.

ಹಂಪಿ ಶುಗರ್ಸ್ ಸ್ಥಾಪನೆ, ಉಪ ಖನಿಜ ನೀತಿಗೆ ಒಪ್ಪಿಗೆ

- ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ಜಿಎಂ ಸಿದ್ದೇಶ್ವರ ಅವರ ಒಡೆತನದಲ್ಲಿ ಹಂಪಿ ಶುಗರ್ಸ್ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಒಪ್ಪಿಗೆ. ಸರ್ಕಾರದಿಂದ ಮಾರುಕಟ್ಟೆ ದರದಲ್ಲಿ 86 ಎಕರೆ ಜಮೀನು. ವಾರ್ಷಿಕ 8 ಲಕ್ಷ ಟನ್ ಕಬ್ಬನ್ನು ವಿಜಯನಗರದಲ್ಲೇ ಅರೆಯುವುದಕ್ಕೆ ಇದರಿಂದ ಅನುಕೂಲ.
- ತುಂಗಾ ಮೇಲ್ದಂಡೆ ಯೋಜನೆಯ ಹೆಚ್ಚುವರಿ ಅನುದಾನ ಬಿಡುಗಡೆಗೆ ಒಪ್ಪಿಗೆ. ರೂ. 3395 ಕೋಟಿಯಲ್ಲಿ ಅಂಗೀಕಾರಗೊಂಡ ಈ ಯೋಜನೆಗೆ ಹೆಚ್ಚುವರಿಯಾಗಿ ಮತ್ತೆ ರೂ. 770 ಕೋಟಿ ನೀಡಲು ಒಪ್ಪಿಗೆ.
- ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಕುಳಾಯಿಯಲ್ಲಿರುವ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಮೀನು ಸಂಸ್ಕರಣಾ ಸ್ಥಾವರವನ್ನು ರೂ. 25 ಕೋಟಿಗಳ ವೆಚ್ಚದಲ್ಲಿ (ಕೇಂದ್ರದ ಪಾಲು 10.92 ಕೋಟಿ) ಸಾಗರೋತ್ಪನ್ನಗಳ ರಫ್ತು ಘಟಕವಾಗಿ ಉನ್ನತೀಕರಿಸಲು ಆಡಳಿತಾತ್ಮಕ ಅನುಮೋದನೆ.
- ಗಿಣಿಗೇರಾ–ರಾಯಚೂರು, ತುಮಕೂರು–ರಾಯದುರ್ಗ, ಬಾಗಲಕೋಟೆ–ಕುಡಚಿ, ಚಿಕ್ಕಮಗಳೂರು–ಬೇಲೂರು ನೂತನ ರೈಲು ಮಾರ್ಗಗಳ ಯೋಜನೆಗಳ ಪರಿಷ್ಕೃತ ಅಂದಾಜುಗಳಿಂದ ಹೆಚ್ಚಾಗಿರುವ ರಾಜ್ಯದ ಪಾಲಿನ ರೂ. 964.41 ಕೋಟಿ ಬಿಡುಗಡೆಗೆ ಅನುಮೋದನೆ.
- ಕರ್ನಾಟಕ ಉಪ ಖನಿಜ ನೀತಿಗೆ ಸಂಪುಟದ ಒಪ್ಪಿಗೆಗೆ – ಈ ಮೂಲಕ ಎಂ–ಸ್ಯಾಂಡ್, ಕ್ವಾರಿ, ಕ್ರಶರ್‌ಗಳಿಗೆ ನಿಯಂತ್ರಣ ಹಾಗೂ ಉಪ ಖನಿಜ ರಾಯಧನ ಸಂಗ್ರಹ ನಿಯಮ ಬದಲಾವಣೆ ಪ್ರಸ್ತಾಪ. ಲೀಸ್ ಹಾಗೂ ಗುತ್ತಿಗೆ ಅವಧಿ ನವೀಕರಣ.
- ಹಾವೇರಿ ಜಿಲ್ಲೆ ದೇವಗಿರಿಯಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿಗೆ 10 ಎಕರೆ ಜಮೀನು ನೀಡಲು ಒಪ್ಪಿಗೆ.

ಆಧಾರ: ಉದಯವಾಣಿ, ದಿನಾಂಕ: 09.03.2023

48. ಮಹಿಳಾ ಸಬಲೀಕರಣಕ್ಕೆ ರೂ. 500 ಕೋಟಿ ನೆರವು

ಮಹಿಳಾ ಸಬಲೀಕರಣಕ್ಕೆ ಸರ್ಕಾರ ರೂ. 500 ಕೋಟಿ ನೆರವು ನೀಡಿದ್ದು, 50 ಸಾವಿರ ಸ್ವಸಹಾಯ ಗುಂಪುಗಳ ಬಲವರ್ಧನೆಗೆ ಹಲವು ಯೋಜನೆಗಳನ್ನು ರೂಪಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ ಹಮ್ಮಿಕೊಂಡಿದ್ದ 'ಸ್ತ್ರೀ ಸಾಮರ್ಥ್ಯ ನಮೋ ಸ್ತ್ರೀ ಯೋಜನೆ'ಗೆ ಚಾಲನೆ ನೀಡಿ ಅವರು ಮಾತನಾಡಿದರು.

2022–23ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದಂತೆ ರೂ.500 ಕೋಟಿ ವಿಶೇಷ ಸಮುದಾಯ ಬಂಡವಾಳ ನಿಧಿಯ ಮೊದಲ ಕಂತು ರೂ.100 ಕೋಟಿ ಅನ್ನು ಫಲಾನುವಿಗಳ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಪ್ರತಿವಾರ ಕಂತುಗಳಲ್ಲಿ ಬಿಡುಗಡೆಗೊಳಿಸಿ, ಏಪ್ರಿಲ್ ತಿಂಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಕಾರ್ಯ ಚಟುವಟಿಕೆಗಳಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಕೌಶಲಾಭಿವೃದ್ಧಿ ಹಾಗೂ ಜೀವನೋಪಾಯ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ರಾಜ್ಯ ಸರ್ಕಾರ 2023–24ನೇ ಸಾಲಿನ ಆಯವ್ಯಯದಲ್ಲಿ ಮಹಿಳೆಯರ ಸಬಲೀಕರಣ ಹಾಗೂ ಕ್ಷೇಮಾಭಿವೃದ್ಧಿಗೆ ರೂ. 46,278 ಕೋಟಿ ಅನುದಾನ ಒದಗಿಸಿದೆ. ಮಹಿಳಾ ಸ್ವಸಹಾಯ ಗುಂಪುಗಳಿಗೆ ರೂ. 1,800 ಕೋಟಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಗುರಿ ಇದೆ ಎಂದು ಹೇಳಿದರು.

ಮೌಲ್ಯವರ್ಧನೆ, ಬ್ರಾಂಡಿಂಗ್, ಪ್ಯಾಕಿಂಗ್ ಮತ್ತು ಮಾರುಕಟ್ಟೆ, ಕೇರಳದ ಕುಟುಂಬ ಸೇರಿದಂತೆ ಎಂಟು ಸಂಸ್ಥೆಗಳೊಂದಿಗೆ ತಾಂತ್ರಿಕ ಬೆಂಬಲ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಉತ್ಪನ್ನಗಳ ಪ್ರದರ್ಶನ, ಮಾರಾಟಕ್ಕೂ ವ್ಯವಸ್ಥೆ ಮಾಡಲಾಗಿತ್ತು.

ಜೀವನೋಪಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್.ಸೆಲ್ವಕುಮಾರ್, ಅಭಿಯಾನದ ನಿರ್ದೇಶಕಿ ರಾಗಪ್ರಿಯಾ, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಅವರು ಈ ವೇಳೆ ಉಪಸ್ಥಿತರಿದ್ದರು.

ಆಧಾರ: ಪ್ರಜಾವಾಣಿ, ದಿನಾಂಕ: 09.03.2023

49. ಎಲೆಕ್ಷನ್ ತಯಾರಿ ಪರಿಶೀಲನೆ

ಮುಂಬರುವ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಇದುವರೆಗೆ ಕೈಗೊಳ್ಳಲಾಗಿರುವ ಪೂರ್ವ ತಯಾರಿ ಹಾಗೂ ಅಗತ್ಯ ಸಿದ್ಧತೆ ಪರಿಶೀಲನೆಯನ್ನು ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನೇತೃತ್ವದ ಹಿರಿಯ ಅಧಿಕಾರಿಗಳ ತಂಡ ಪರಿಶೀಲಿಸಿತು. ಚುನಾವಣಾ ಆಯುಕ್ತರಾದ ಅನೂಪ್ ಚಂದ್ರಪಾಂಡೆ, ಅರುಣ್ ಗೋಯಲ್ ಹಾಗೂ ಉಪ ಆಯುಕ್ತರು, ಆಯೋಗದ ಹಿರಿಯ ಅಧಿಕಾರಿಗಳು ಪರಿವೀಕ್ಷಣೆ ನಡೆಸಿದರು. ಭಾರತ ಚುನಾವಣಾ

ಆಯೋಗದ ಮುಖ್ಯ ಆಯುಕ್ತರ ನೇತೃತ್ವದ ತಂಡವು ಮೊದಲಿಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಸಲಹೆ ಮತ್ತು ಅಭಿಪ್ರಾಯ ಪಡೆದುಕೊಂಡಿತು.

ಬಳಿಕ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ ಮೀನಾ, ಅಪರ ಮುಖ್ಯ ಚುನಾವಣಾಧಿಕಾರಿಗಳಾದ ಎಂ.ವೆಂಕಟೇಶ್ ಕುಮಾರ್, ರಾಜೇಂದ್ರ ಚೋಳನ್ ಸೇರಿ ಹಿರಿಯ ಅಧಿಕಾರಿಗಳು ಮತ್ತು ಪೊಲೀಸ್ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ರಾಜ್ಯಮಟ್ಟದಲ್ಲಿ ಚುನಾವಣಾ ಪೂರ್ವ ತಯಾರಿ ಕುರಿತು ಅಗತ್ಯ ಮಾಹಿತಿ ಪಡೆದುಕೊಂಡಿತು. ಇದೇ ಸಂದರ್ಭದಲ್ಲಿ ಅನೇಕ ಸಲಹೆ–ಸೂಚನೆಯನ್ನು ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ನೀಡಿದರು.

ನಂತರ ಸಂಜೆ ಖಾಸಗಿ ಹೋಟೆಲ್‌ನಲ್ಲಿ ಪ್ರಜಾಪ್ರಭುತ್ವದ ಒಳಗೊಳ್ಳುವಿಕೆ ಮತ್ತು ಸಮಗ್ರತೆ ವಿಷಯದ ಕುರಿತ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕೀರಣ ನಡೆಯಿತು. ವಿವಿಧ ಪ್ರಜಾಪ್ರಭುತ್ವ ದೇಶಗಳ ಚುನಾವಣಾ ಆಯುಕ್ತರು ವಿಡಿಯೋ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡಿದ್ದರು.

ಇನ್ನೂ ಎರಡು ದಿನ ಸಭೆ: ಭಾರತ ಚುನಾವಣಾ ಆಯೋಗದ ಮುಖ್ಯ ಆಯುಕ್ತರ ತಂಡ ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ಚುನಾವಣೆಯ ಪೂರ್ವಭಾವಿ ತಯಾರಿ ಕುರಿತು ಸಭೆ ನಡೆಸಲಿದೆ. ಸಂಜೆ ಐಐಎಸ್‌ಸಿ ಆವರಣದಲ್ಲಿರುವ ಟಾಟಾ ಸಭಾಂಗಣದಲ್ಲಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹಮ್ಮಿಕೊಳ್ಳಲಾಗಿರುವ ಮತದಾರರ ಜಾಗೃತಿ ಕುರಿತ ವಿಶೇಷ ವಸ್ತುಪ್ರದರ್ಶನ ಉದ್ಘಾಟಿಸಿದ ನಂತರ ಮತದಾರರ ಜಾಗೃತಿ ಮೂಡಿಸುವ ಎಲ್‌ಇಡಿ ವಾಹನಗಳಿಗೆ ಚಾಲನೆ ನೀಡಲಿದ್ದಾರೆ. ತದನಂತರ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕಾಂಗ್ರೆಸ್‌ನ ಪ್ರಮುಖ ಬೇಡಿಕೆಗಳು

- ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಅವ್ಯವಹಾರ ಮತ್ತು ಅಕ್ರಮಗಳು ಮತ್ತು ಚಿಲುಮೆ ಎಂಬ ಸಂಸ್ಥೆಯು ಮಾಡಿದ ವಂಚನೆಗೆ ಸಂಬಂಧಿಸಿದಂತೆ ಚುನಾವಣಾ ನೋಂದಣಿ ಅಧಿಕಾರಿಗಳು ಸಂಬಂಧಿಸಿದ ವರದಿಗಳನ್ನು ಬಹಿರಂಗಪಡಿಸಿ ಮತ್ತು ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.
- ಮತದಾರರ ಹೆಸರುಗಳ ಅಕ್ರಮ ಸೇರ್ಪಡೆಗಳನ್ನು ಅಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು.

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಚೋದನೆ ತಡೆಗಟ್ಟಲು ನೀತಿ ಸಂಹಿತೆಯನ್ನು ತಕ್ಷಣವೇ ಪ್ರಕಟಿಸಬೇಕು.
- ಗುಜರಾತ್, ಉತ್ತರ ಪ್ರದೇಶ ಮತ್ತು ಇತರ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬಳಸಿದ ಇವಿಎಂಗಳನ್ನು ಬಿಟ್ಟು ಬೇರೆ ಇವಿಎಂ ಬಳಸಬೇಕು.
- ಪಿಎಂ, ಸಿಎಂ, ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇತರ ಸಚಿವರು ಮತ್ತು ಇತರ ಅಧಿಕಾರಿಗಳು ಅಧಿಕಾರ ದುರುಪಯೋಗವನ್ನು ತಪ್ಪಿಸಲು ಒಂದೇ ಹಂತದಲ್ಲಿ ಚುನಾವಣೆ ನಡೆಸಬೇಕು.
- ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಿ ಪ್ಯಾರಾ ಮಿಲಿಟರಿ ಹೆಚ್ಚು ಸೇವೆ ಸಲ್ಲಿಸಿದ ಅಧಿಕಾರಿಗಳನ್ನು ಒಂದೇ ಸ್ಥಳದಲ್ಲಿ ಮತ್ತು ಸ್ಥಳೀಯ ಜಿಲ್ಲೆಗಳಲ್ಲಿ ಇರುವ ಅಧಿಕಾರಿಗಳನ್ನು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ಇತರ ಸ್ಥಳಗಳಿಗೆ ಸ್ಥಳಾಂತರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು.
- ಪ್ರಸ್ತುತ ಡಿ.ಜಿ.ಪಿ.ಯನ್ನು ಸ್ಥಳಾಂತರಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು.
- ಆಡಳಿತ ಪಕ್ಷದಿಂದ ಸಾಮಾಜಿಕ ಮಾಧ್ಯಮಗಳ ದುರುಪಯೋಗ ತಡೆಗಟ್ಟಲು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅದನ್ನು ಮೇಲ್ವಿಚಾರಣೆ ಮಾಡಲು ಪಾರದರ್ಶಕ ಸಮಿತಿ ನೇಮಿಸಿ ಮತ್ತು ಅಭ್ಯರ್ಥಿಯ ವೆಚ್ಚಕ್ಕೆ ಸಾಮಾಜಿಕ ಮಾಧ್ಯಮದ ವೆಚ್ಚವನ್ನು ತೆಗೆದುಕೊಳ್ಳಬೇಕು.
- ರಾಜ್ಯ ಸರ್ಕಾರದ ವಿವಿಧ ಕಾಮಗಾರಿಗಳ ಟೆಂಡರ್‌ಗಳು, ಬಿಡ್‌ಗಳನ್ನು ನಿಲ್ಲಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.
- ಗಡಿ ಪ್ರದೇಶಗಳು ಮತ್ತು ಚೆಕ್ ಪೋಸ್ಟ್ ಸೇರಿ ಪ್ಯಾರಾ ಮಿಲಿಟರಿ ಪಡೆಗಳನ್ನು ನಿಯೋಜಿಸಬೇಕು.
- ಮತದಾರರಿಗೆ ಕುಕ್ಕರ್‌ಗಳು, ಟಿವಿ, ಸೀರೆ, ಚಿನ್ನ, ನಗದು ಮತ್ತು ಇತರ ವಸ್ತುಗಳನ್ನು ಅಕ್ರಮವಾಗಿ ವಿತರಣೆ ಮಾಡುವವರ ವಿರೋದ್ದ ಕ್ರಮ ಜರುಗಿಸಬೇಕು.

ಮುಕ್ತ, ನ್ಯಾಯಸಮ್ಮತ ಚುನಾವಣೆಗೆ ಮನವಿ

ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಯುವಂತೆ ಮುಖ್ಯ ಚುನಾವಣಾ ಆಯುಕ್ತರಿಗೆ ಕೆಪಿಸಿಸಿ ಮನವಿ ಸಲ್ಲಿಸಿದೆ. ಆಯೋಗ ಮತದಾರರ ಪಟ್ಟಿಗಳ ಪರಿಷ್ಕರಣೆ ಮತ್ತು ಇತರ ಚಟುವಟಿಕೆಗಳನ್ನು

ಪರಿಣಾಮಕಾರಿಯಾಗಿ ನಡೆಸಬೇಕು. ಅಳಿಸಲಾದ 33 ಲಕ್ಷ ಮತದಾರರನ್ನು ಮರುಸ್ಥಾಪಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳುಳ್ಳ ಮನವಿಯನ್ನು ಆಯೋಗಕ್ಕೆ ಸಲ್ಲಿಸಲಾಗಿದೆ. ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಹಾಗೂ ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ಮನವಿ ಸಲ್ಲಿಸಿದ್ದಾರೆ.

ಮನೋಜ್ ಕುಮಾರ್ ಮೀನಾ ಸ್ವಾಗತ

ಸಾರ್ವತ್ರಿಕ ಕರ್ನಾಟಕ ವಿಧಾನಸಭಾ ಚುನಾವಣೆ–2023 ಚುನಾವಣಾ ಪೂರ್ವತಯಾರಿ ಪರಿವೀಕ್ಷಣೆಗೆ ಆಗಮಿಸಿದ ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನೇತೃತ್ವದ ತಂಡವನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಸ್ವಾಗತಿಸಿದರು.

ಆಧಾರ: ವಿಜಯವಾಣಿ, ದಿನಾಂಕ: 10.03.2023

50. ಡಬಲ್ ಇಂಜಿನ್ ಸರ್ಕಾರದಿಂದ ಅಭಿವೃದ್ಧಿ

ಬಿಜೆಪಿಯ ಡಬಲ್ ಎಂಜಿನ್ ಸರ್ಕಾರದಿಂದ ಕರ್ನಾಟಕ ಅಭಿವೃದ್ಧಿ ಶಕೆಗೆ ಸಾಕ್ಷಿಯಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಹೇಳಿದರು.

ರಾಜ್ಯದ ಮೊದಲ ಐಐಟಿ ಕ್ಯಾಂಪಸ್‌ಅನ್ನು ಧಾರವಾಡದ ಮುಮ್ಮಿಗಟ್ಟಿಯಲ್ಲಿ (ಬೇಲೂರು), ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು. ಇದೇ ವೇಳೆ ಹಲವು ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆಯನ್ನೂ ಪ್ರಧಾನಿ ಮಾಡಿದರು. ಮೂಲಸೌಕರ್ಯ ಹಾಗೂ ಐಐಟಿಯಂತಹ ಶಿಕ್ಷಣ ಸಂಸ್ಥೆಗಳನ್ನು ಈ ಹಿಂದೆ ಕಡೆಗಣಿಸಲಾಗಿತ್ತು. ತಮ್ಮ ರಾಜಕೀಯ ಲಾಭವನ್ನು ಮಾತ್ರ ನೋಡಲಾಗುತ್ತಿತ್ತು ಎಂದು ಕಾಂಗ್ರೆಸ್ ವಿರುದ್ಧ ಪರೋಕ್ಷ ಟೀಕಾ ಪ್ರಹಾರ ಮಾಡಿದರು. ಬಿಜೆಪಿ ಸರ್ಕಾರ ದೇಶ– ರಾಜ್ಯದಲ್ಲಿ ಅಭಿವೃದ್ಧಿ ಮಾಡುತ್ತಿದೆ. ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಮೂಲಸೌಕರ್ಯಗಳನ್ನು ಗಂಭೀರವಾಗಿ ಪರಿಗಣಿಸಿದೆ ಎಂದರು.

ಸ್ಮಾರ್ಟ್ ಸಿಟಿಯಂತಹ ಆಧುನಿಕ ಮೂಲ ಸವಲತ್ತುಗಳು ಕೇವಲ ಕಣ್ಣಿಗೆ ಚಂದ ಕಾಣುವುದಕ್ಕೆ ಇರುವಂಥವುಗಳಲ್ಲ. ಜೀವನವನ್ನು ಸರಳವಾಗಿಸುವುದು ಇವುಗಳ ಮೂಲ ಉದ್ದೇಶ ಎಂದು ಹೇಳಿದರು. ನೈಋತ್ಯ ರೈಲ್ವೆಯಲ್ಲಿ ನಿರ್ಮಿತವಾಗಿರುವ ಅತೀ ಉದ್ದನೆಯ ಪ್ಲಾಟ್‌ಫಾರ್ (ಹುಬ್ಬಳ್ಳಿ ಸ್ಟೇಷನ್), ತುಪ್ಪರಿಹಳ್ಳ ಪ್ರವಾಹ ತಡೆ ಯೋಜನೆ, ಸ್ಮಾರ್ಟ್ ಸಿಟಿ ಕಾಮಗಾರಿಗಳು, ರೇಣುಕಾಸಾಗರ (ಸವದತ್ತಿ) ಜಲಾಶಯದಿಂದ ಏಳು ಜಿಲ್ಲೆಗಳ ಮನೆಗಳಿಗೆ ನೀರು ನೀಡುವ ಜಲಜೀವನ ಮಿಷನ್ ಜಯದೇವ ಹೃದ್ರೋಗ ಕೇಂದ್ರ ಇತ್ಯಾದಿಗಳು ಉತ್ತರ ಕರ್ನಾಟಕ ಭಾಗದ ಪ್ರಗತಿಯ ವೇಗವನ್ನು ಸೂಚಿಸುತ್ತವೆ ಎಂದರು.

ಗರೀಬಿ ಹಟಾವೋ ಎಂದವರೇ ನೋಡಿ:– ಕೇಂದ್ರ ಸಂಸದೀಯ ವ್ಯವಹಾರ ಸಚಿವ ಪ್ರಲ್ಲಾದ ಜೋಶಿ, 'ಗರೀಬಿ ಹಟಾವೋ ಎಂಬ ಘೋಷಣೆ ಮಾಡಿದವರೇ ಮೋದಿ ಸರ್ಕಾರವನ್ನು ನೋಡಿ' ಎಂದು ಕಾಂಗ್ರೆಸ್ ವಿರುದ್ಧ ಲೇವಡಿ ಮಾಡಿದರು.

ಘೋಷಣೆಯಲ್ಲಷ್ಟೇ ಗರೀಬಿ ಹಠಾವೋ ಉಳಿದಿತ್ತು. ಮೋದಿ ಸರ್ಕಾರ ಬಂದ ಮೇಲೆ ಇದು ನಿಜ ರೂಪದಲ್ಲಿ ಸಾಕಾರವಾಗುತ್ತಿದೆ ಎಂದರು.

2014ರವರೆಗೆ ಕೇವಲ ಅಡಿಗಲ್ಲನ್ನು ಹಾಕುವುದು ಹಾಗೂ ಮರೆತುಬಿಡುವುದು ನಡೆಯುತ್ತಿತ್ತು. ನಮ್ಮ ಸರ್ಕಾರದಲ್ಲಿ ಈ ಮಾತಿಗೆ ಅವಕಾಶ ಇಲ್ಲ. ನಾವು ಶಿಲಾನ್ಯಾಸ ಮಾಡಿದ ಕಾಮಗಾರಿಗಳು ಮತ್ತು ಯೋಜನೆಗಳನ್ನು ಪೂರ್ಣಗೊಳಿಸಿ ಉದ್ಘಾಟಿಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ, ಹೇಳಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 13.03.2023

51. ಮಂಡ್ಯ ಮಂದಿ ಮನಗೆದ್ದ ಮೋದಿ

ಚುನಾವಣೆ ಸಮೀಪಿಸುತ್ತಿದ್ದಂತೆ ಕರ್ನಾಟಕವನ್ನೇ ಕೇಂದ್ರೀಕರಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದ ದಕ್ಷಿಣ ಹಾಗೂ ಉತ್ತರ ಭಾಗದಲ್ಲಿ ವಿವಿಧ ಕಾಮಗಾರಿಗಳ ಉದ್ಘಾಟನೆ ನೆಪದಲ್ಲಿ ಭರ್ಜರಿ ಪ್ರಚಾರ ಕೈಗೊಂಡರು.

ಮಂಡ್ಯ ಜಿಲ್ಲೆಯ ಗೆಜ್ಜಲಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಗೆ ಚಾಲನೆ ನೀಡಿ, ಬೃಹತ್ ಸಮಾವೇಶದಲ್ಲಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರೆ, ಧಾರವಾಡದಲ್ಲಿ ಐಐಟಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಡಬಲ್ ಎಂಜಿನ್ ಸರಕಾರದ ಸಾಧನೆಗಳ ಸಮಗ್ರ ಚಿತ್ರಣವನ್ನು ನೀಡುವ ಜೊತೆಜತೆಗೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಮಂಡ್ಯಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರು ಭರ್ಜರಿ ರೋಡ್ ಶೋ ನಡೆಸಿದರು. ಪಕ್ಷ ಸಂಘಟನೆಯಷ್ಟೇ ಅಲ್ಲದೇ, ಈಗಷ್ಟೆ ನೆಲೆ ಕಂಡು ಕೊಳ್ಳುತ್ತಿರುವ ಮಂಡ್ಯ ಭಾಗದಲ್ಲಿ ಈ ರೋಡ್ ಶೋ ಮೂಲಕ 'ಕಿಕ್ ಸ್ಟಾರ್ಟ್' ನೀಡುವ ಪ್ರಯತ್ನಕ್ಕೆ ಕೈಹಾಕಿದರು. ರಸ್ತೆಯುದ್ದಕ್ಕೂ ಮೋದಿಯತ್ತ ಸಾರ್ವಜನಿಕರು ಹೂವು ಹಾಕಿದರೆ, ಕೆಲವೆಡೆ ತಮ್ಮ ಕಾರಿನ ಮೇಲಿದ್ದ ಹೂವನ್ನು ಜನರತ್ತ ಮೋದಿ ಎಸೆದರು. ಈ ಎಲ್ಲ ಸಮಯದಲ್ಲಿ 'ಮೋದಿ' ಜಪ ಜೋರಾಗಿಯೇ ನಡೆದಿತ್ತು.

ಇದಾದ ಬಳಿಕ ಸುಮಾರು ಎರಡು ಲಕ್ಷ ಜನ ಸೇರಿದ ಸಮಾವೇಶದಲ್ಲಿ ಭಾಗವಹಿಸಿ, ಡಬಲ್ ಎಂಜಿನ್ ಸರಕಾರ ಕೊಡುಗೆ, ಇಷ್ಟು ದಿನ ಕಾಂಗ್ರೆಸ್ ಮಾಡಿರುವ ವಂಚನೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು. ಸುಮಾರು 40 ನಿಮಿಷಗಳ ಈ ಭಾಷಣದ ನಡುವೆ, ಜನರು ಮೋದಿ ಜಪ, ಶಿಳ್ಳೆ, ಚಪ್ಪಾಳೆ, ಸಾಮಾನ್ಯವಾಗಿತ್ತು. ಇದಾದ ಬಳಿಕ ಮಂಡ್ಯದಿಂದ ಹುಬ್ಬಳ್ಳಿಗೆ ತೆರಳಿ, ಅಲ್ಲಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಧಾರವಾಡಕ್ಕೆ ತೆರಳಿದ ಮೋದಿ ಅವರು, ಅಲ್ಲಿಯೂ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು. ಬಳಿಕ ಧಾರವಾಡದಲ್ಲಿ ಮಾತನಾಡಿ, ಬಸವಣ್ಣನವರ ಸ್ಮರಣೆ, ಐಐಟಿ ಸ್ಥಾಪನೆ, ಏಮ್ಸ್‌ಗಳ ಸಂಖ್ಯೆ ಏರಿಕೆ ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿದರು.

ಪರೋಕ್ಷವಾಗಿ ರಾಹುಲ್ ವಿರುದ್ಧ ವಾಗ್ದಾಳಿ: ಧಾರವಾಡದ ಐಐಟಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಮೋದಿ ಅವರು, ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು. ಕೆಲ ವರ್ಷಗಳ ಹಿಂದೆ ಲಂಡನ್ನಲ್ಲಿ ಬಸವೇಶ್ವರರ ಪ್ರತಿಮೆ ಲೋಕಾರ್ಪಣೆ ಮಾಡುವ ಸೌಭಾಗ್ಯ ಸಿಕ್ಕಿತ್ತು. ಆ ಮೂಲಕ ಅನುಭವ ಮಂಟಪದ ಮಹತ್ವ ಸಾರಲಾಯಿತು. ಆದರೆ ಈಗ ಲಂಡನ್‌ನಲ್ಲಿ ಭಾರತದ ಪ್ರಜಾಪ್ರಭುತ್ವವನ್ನು ಪ್ರಶ್ನಿಸಲಾಗುತ್ತಿದೆ. ಭಾರತದ ಪ್ರಜಾಪ್ರಭುತ್ವ ಪರಂಪರೆಯನ್ನು ವಿಶ್ವದ ಯಾವ ಶಕ್ತಿಯೂ ಏನನ್ನೂ ಮಾಡಲು ಸಾಧ್ಯವಿಲ್ಲ. ದೇಶದ ಪ್ರಜಾಪ್ರಭುತ್ವ ಪ್ರಶ್ನಿಸುವ ಮೂಲಕ ಬಸವೇಶ್ವರರಿಗೆ ಅವಮಾನ ಮಾಡಲಾಗಿದೆ. ಕನ್ನಡಿಗರು ಮತ್ತು 140 ಕೋಟಿ ಭಾರತೀಯರಿಗೆ ಅವಮಾನಿಸಲಾಗಿದೆ. ಇಂತಹ ವ್ಯಕ್ತಿಗಳನ್ನು ದೂರವಿಡಿ ಎಂದು ಪರೋಕ್ಷವಾಗಿ ಟೀಕಿಸಿದರು.

ವಿವಾದಕ್ಕೆ ಕಾರಣವಾದ ಉರಿಗೌಡ ಮಹಾದ್ವಾರ

ಮೋದಿ ಅವರು ಮಂಡ್ಯಕ್ಕೆ ಆಗಮಿಸುವ ಮಾರ್ಗದಲ್ಲಿ ನಿರ್ಮಿಸಲಾಗಿದ್ದ ಮಹಾದ್ವಾರಕ್ಕೆ ಉರಿಗೌಡ ಹಾಗೂ ದೊಡ್ಡ ನಂಜೇಗೌಡರ ಹೆಸರಿಟ್ಟಿದ್ದು, ಭಾರಿ ವಿವಾದಕ್ಕೆ ಕಾರಣವಾಗಿ ರಾತ್ರೋರಾತ್ರಿ ತೆರವುಗೊಳಿಸಿರುವ ಘಟನೆ ನಡೆದಿದೆ. ಇದಾದ ಬಳಿಕ ಇದೇ ದ್ವಾರಕ್ಕೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಹೆಸರನ್ನು ಇಡಲಾಗಿತ್ತು. ಉರಿಗೌಡ, ನಂಜೇಗೌಡ ಹೆಸರಿನ ಮಹಾದ್ವಾರಕ್ಕೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರು ವಿರೋಧ ವ್ಯಕ್ತಪಡಿಸಿದ್ದರು.

ಕಾಂಗ್ರೆಸ್ ಪಕ್ಷಕ್ಕೆ ಸೇಪರ್ಡೆಯಾಗುವ ಬಗ್ಗೆ ಸದ್ದು ಮಾಡುತ್ತಿರುವ ಸಚಿವ ಕೆ.ಆರ್.ಪೇಟೆಯ ಕೆ.ಸಿ.ನಾರಾಯಣಗೌಡ ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆಗೆ ಬಳಿ ಹಮ್ಮಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರ ಬೃಹತ್ ವೇದಿಕೆಯಲ್ಲಿ ಅಬಕಾರಿ ಸಚಿವರು ಜೊತೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ಅಚ್ಚರಿ ಮೂಡಿಸಿದರು. ನಾರಾಯಣಗೌಡ ಅವರು ಶೀಘ್ರವಾಗಿ ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದು, ಮೋದಿಯವರ ಕಾರ್ಯಕ್ರಮ ಬಿಜೆಪಿಯ ಕೊನೆಯ ಕಾರ್ಯಕ್ರಮ ಎನ್ನಲಾಗಿದೆ.

ಭಾಷಣ ಅನುವಾದಿಸಿದ ಸಂಸದ ಪ್ರತಾಪ್ ಸಿಂಹ

ಸಾಮಾನ್ಯವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣದ ಭಾಷಾಂತರಕ್ಕೆ ಅವಕಾಶವಿರುವುದಿಲ್ಲ. ಆದರೆ ಮಂಡ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋದಿ ಅವರ ಭಾಷಣವನ್ನು ಅನುವಾದಿಸಲಾಯಿತು. ಮೈಸೂರು ಸಂಸದ ಪ್ರತಾಪ್ ಸಿಂಹ ಅವರು, ಮೋದಿ ಅವರ ಭಾಷಣವನ್ನು ಅನುವಾದಿಸುವ ಮೂಲಕ, ಹಿಂದಿ ಅರ್ಥೈಸಿಕೊಳ್ಳಲು ಸಾಧ್ಯವಾಗದ ಅನೇಕರಿಗೆ ಕನ್ನಡದಲ್ಲಿ ಮೋದಿ ಅವರ ಭಾಷಣವನ್ನು ತಲುಪಿಸುವ ಕೆಲಸವನ್ನು ಮಾಡಿದರು.

ಗೆಜ್ಜನಗೆರೆಯಲ್ಲಿ ಮೋದಿ ಮಾತು

- ಕಾಂಗ್ರೆಸ್ ಬಡವರ ಹಣ ಲೂಟಿ ಮಾಡುವಲ್ಲಿ ಕಾಲ ಕಳೆಯಿತೇ ಹೊರತು, ಅಭಿವೃದ್ಧಿಯಲ್ಲಿ ಅಲ್ಲ.
- ಡಬಲ್ ಎಂಜಿನ್ ಸರಕಾರಗಳ ಅಭಿವೃದ್ಧಿ ಯೋಜನೆಗಳಿಂದ ಕಾಂಗ್ರೆಸ್ ಹತಾಶವಾಗಿದೆ.
- ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ ದೇಶದ ಮೂಲಸೌಲಭ್ಯಗಳ ದಿಕ್ಕನ್ನೆ ಬದಲಾಯಿಸಿದರು. ಅವರು ಇದೇ ನಾಡಿನವರು ಎಂಬುದು ಪೂರ್ವಜನ್ಮದ ಸುಕೃತ.
- ಹೆದ್ದಾರಿಗಳು ಅವಕಾಶವನ್ನು ಸೃಷ್ಟಿಸುವುದಷ್ಟೇ ಅಲ್ಲದೇ, ಆರ್ಥಿಕ ಅಭಿವೃದ್ಧಿ ಪೂರಕವಾಗಿವೆ.
- ಕಾಂಗ್ರೆಸ್ ಮೋದಿ ಸಮಾಧಿ ಮಾಡುವ ಕನಸು ಕಾಣುತ್ತಿದೆ. ಆದರೆ ದೇಶದ ಜನರ ಆಶೀರ್ವಾದವೇ ನನಗೆ ದೊಡ್ಡ ರಕ್ಷಾಕವಚ.

ಧಾರವಾಡದಲ್ಲಿ ಹೇಳಿದ್ದೇನು

- ಭಾರತದ ಪ್ರಜಾಪ್ರಭುತ್ವದ ಬಗ್ಗೆ ಪ್ರಶ್ನಿಸಿರುವುದು ಇಡೀ ದೇಶಕ್ಕೆ ಮಾಡಿದ ಅಪಮಾನ.
- ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಷ್ಟೇ ಅಲ್ಲದೇ, ಪ್ರಜಾಪ್ರಭುತ್ವದ ತವರು ಭಾರತ.
- ಡಬಲ್ ಎಂಜಿನ್ ಸರಕಾರ ಕರ್ನಾಟಕದ ಪ್ರತಿ ಜಿಲ್ಲೆ ಪ್ರತಿ ಗ್ರಾಮದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ.
- ಧಾರವಾಡ ಕರ್ನಾಟಕ ಹಾಗೂ ಭಾರತದ ಜೀವಂತಿಕೆಯ ಪ್ರತಿರೂಪ.
- ಜನರ ಋಣ ತೀರಿಸಲು ಆದಷ್ಟೂ ನಿಮ್ಮ ಸೇವೆ ಮಾಡುತ್ತೇನೆ.

ಆಧಾರ: ವಿಶ್ವವಾಣಿ, ದಿನಾಂಕ: 13.03.2023

52. ಹುಟ್ಟು ಅನಾಥರಿಗೆ ಮೀಸಲು

ಜಾತಿ ಗೊತ್ತಿಲ್ಲದೇ ಇರುವ, ಹುಟ್ಟು ಅನಾಥರಾದ ಮಕ್ಕಳಿಗೆ ಪ್ರವರ್ಗ 1ರಲ್ಲಿ ಮೀಸಲು ನೀಡಲು ಹಿಂದುಳಿದ ವರ್ಗಗಳ ಆಯೋಗ ಶಿಫಾರಸ್ಸು ಮಾಡಿದೆ.

ಇಂಥ ಅನಾಥ ಮಕ್ಕಳಿಗೆ ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲು ಕಲ್ಪಿಸಿ ಕೊಡುವಂತೆ ರಾಜ್ಯ ಸರಕಾರಕ್ಕೆ ಶಿಫಾರಸ್ಸು ಮಾಡಿರುವ ಆಯೋಗ, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳ ಮಾದರಿಯಲ್ಲಿ ರಾಜ್ಯದಲ್ಲಿಯೂ ಮೀಸಲು ನೀಡಬೇಕು ಎಂದು ಹೇಳಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಹುಟ್ಟಿ ಕೆಲ ವರ್ಷಗಳಲ್ಲಿ ತಂದೆ–ತಾಯಿ ಕಳೆದು ಕೊಳ್ಳುವವರಿಗೆ ಜಾತಿ ಗೊತ್ತಿರುತ್ತದೆ. ಅಂಥವರಿಗೆ ಆ ಜಾತಿ ಆಧಾರಿತ ಮೀಸಲು ಕೊಡುವ ಶಿಫಾರಸ್ಸು ಮಾಡಿದ್ದೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಹಲವು ಜಾತಿ, ಸಮುದಾಯಗಳಿಂದ, ಹಿಂದುಳಿದ ವರ್ಗಗಳ ಮೀಸಲು ಪಟ್ಟಿಗೆ ಸೇರಿಸಬೇಕು ಎನ್ನುವ ಮನವಿಗಳು ಬಂದಿದ್ದವು. ಇದುವರೆಗೆ ಸುಮಾರು 133 ಮನವಿಗಳು ಸಲ್ಲಿಕೆಯಾಗಿವೆ. ಆದ್ಯತೆ ಮೇರೆಗೆ ಒಟ್ಟು 34 ವರದಿಗಳನ್ನು ತಯಾರಿಸಲಾಗಿದೆ. ಇನ್ನುಳಿದ 42 ಮನವಿಗಳ ವರದಿ ಬಾಕಿ ಇದ್ದು, ಅವುಗಳ ಸ್ಥಿತಿಗತಿ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸುಮಾರು 57 ಮನವಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಹಿಂದಿನ ಆಯೋಗಗಳು ಸರಕಾರಕ್ಕೆ ವರದಿ ಸಲ್ಲಿಸಿದ್ದು, ಅಂತಹ ಮನವಿಗಳಿಗೆ ಹಿಂಬರಹವನ್ನು ನೀಡಲಾಗಿದೆ ಎಂದು ಹೇಳಿದರು

ಆತುರದಲ್ಲಿ ವರದಿ ಅಸಾಧ್ಯ: ಪಂಚಮ ಸಾಲಿ ಸಮುದಾಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಧ್ಯಂತರ ವರದಿ ಸಲ್ಲಿಸಲಾಗಿದ್ದು, ಪೂರ್ಣ ವರದಿ ಇನ್ನೂ ನೀಡಲಾಗಿಲ್ಲ. ಆಯೋಗದ ನಿಯಮಾನುಸಾರ ಭೇಟಿ ನೀಡಿ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಅಧ್ಯಯನ, ಪ್ರವಾಸ ಕೈಗೊಂಡು ಸಂಗ್ರಹಿಸಿ, ಪರಿಶೀಲನೆ ನಂತರ ವರದಿ ಸಲ್ಲಿಸಬೇಕಾಗುತ್ತದೆ. ಗಡಿಬಿಡಿಯಲ್ಲಿ ಇದು ಸಾಧ್ಯವಿಲ್ಲ ಎಂದು ಜಯಪ್ರಕಾಶ ಹೆಗ್ಡೆ ಸ್ಪಷ್ಟಪಡಿಸಿದ್ದಾರೆ. ಪಂಚಮಸಾಲಿ ಸಮುದಾಯ ವೀರಶೈವ ಹಾಗೂ ಲಿಂಗಾಯತರ ಮೀಸಲು ಪ್ರವರ್ಗ 3ರ ಪಟ್ಟಿಯಲ್ಲಿ ಬರಲಿದ್ದು, ಜೊತೆಗೆ ಬಿಟ್ಟು ಹೋಗಿದ್ದ 18 ಉಪ ಜಾತಿಗಳನ್ನು ಮರು ಸೇರ್ಪಡೆಗೊಳಿಸಿ ಶೀಘ್ರದಲ್ಲೇ ವರದಿ ಸಲ್ಲಿಸಲಾಗುವುದು. ಪ್ರವರ್ಗ 3ರ ಎ ವಿಭಾಗದಲ್ಲಿ ವೀರಶೈವ ಲಿಂಗಾಯುತರು ಇದ್ದರೆ, ಬಿಯಲ್ಲಿ ಉಪ ಜಾತಿಯಾಗಿ ಪಂಚಮಸಾಲಿಗಳು ಮಾತ್ರ ಇದ್ದರು. ಈಗ ಲಿಂಗಾಯತ ಕೂಡು ಒಕ್ಕಲಿಗ, ಆದಿ ಬಣಜಿಗ, ನೊಳಂಬ, ಮಲ್ಲವ, ಮಲೇಗೌಡ, ಲಿಂಗಾಯತ ರೆಡ್ಡಿ, ಗೌಡ ಲಿಂಗಾಯತ, ಶಿವಸಿಂಪಿ, ಬಣಗಾರ, ಶಿವಾಚಾರ ನಗರ್ತ, 24 ಮನೆ ತೆಲುಗುಶೆಟ್ಟಿ, ಆರೇರ, ಕನ್ನಡ ವೈಶ್ಯ, ಗಾಣಿಗ

ಸೇರಿದಂತೆ 18 ಉಪ ಜಾತಿಗಳನ್ನೂ ಸೇರ್ಪಡೆ ಮಾಡಿರುವ ಬಗ್ಗೆ ವರದಿ ತಯಾರಿಸಿ ಶೀಘ್ರವೇ ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು. ಪಂಚಮಸಾಲಿ ಸಂಘಟನೆಗಳ ಮನವಿ ಜೊತೆ ಇತರೆ ಒಬಿಸಿಗಳ ಸ್ಥಿತಿಗತಿ ಕುರಿತು ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿ ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ನಡೆಸಿ ಮಾಹಿತಿ ಸಂಗ್ರಹಿಸಲಾಗಿದ್ದು, ವರದಿ ತಯಾರಿಕೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಪೋಷಕರ ಆದಾಯ ಮಾತ್ರ ಗಣನೆ: ಉದ್ಯೋಗ ಮೀಸಲಿಗೆ ಆದಾಯ ಪರಿಗಣಿಸುವಾಗ ಪೋಷಕರ ಆದಾಯವನ್ನು ಮಾತ್ರ ಪರಿಗಣಿಸುವ ಮಾದರಿಯನ್ನು ಕರ್ನಾಟಕ ಸರಕಾರವು ಅಳವಡಿಸಿಕೊಂಡು ಜಾರಿಗೆ ತರಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶಿಫಾಸರು ಮಾಡಲಾಗಿದೆ. ಹಿಂದುಳಿದ ವರ್ಗಗಳಿಗೆ ಜಾತಿ, ಆದಾಯ ಪ್ರಮಾಣ ಪತ್ರ ನೀಡುವಾಗ ಪ್ರಸ್ತುತ ಕರ್ನಾಟಕ ರಾಜ್ಯದ ಕೆನೆಪದರ ನೀತಿ ಅನ್ವಯ ಅಭ್ಯರ್ಥಿ ಮತ್ತು ತಂದೆ/ತಾಯಿ/ಗಂಡ/ ಹೆಂಡತಿ ಇವರ ಒಟ್ಟು ಆದಾಯವನ್ನು ಪರಿಗಣಿಸಲಾಗುತ್ತಿದ್ದು, ಇದರಿಂದ ಔದ್ಯೋಗಿಕ ಮೀಸಲಿಗೆ ಆದಾಯ ಪರಿಗಣಿಸುವಾಗ ಗೊಂದಲ ಉಂಟಾಗಿ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಪಡೆಯಲು ತೊಂದರೆಯಾಗುತ್ತಿದೆ. ಈ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಮತ್ತು ನ್ಯಾಯಾಲಯದ ಆದೇಶದ ಅನುಸಾರ ಉದ್ಯೋಗ ಮೀಸಲಿಗಾಗಿ ಆದಾಯ ಪರಿಗಣಿಸುವಾಗ ಕೇವಲ ಪೋಷಕರ ಆದಾಯವನ್ನು ಮಾತ್ರ ಪರಿಗಣಿಸುವ ಮಾದರಿ ಅಳವಡಿಸಿಕೊಂಡು ಜಾರಿಗೆ ತರಲು ಸೂಕ್ತ ಕ್ರಮಕೈಗೊಳ್ಳಬೇಕಾಗಿದೆ ಎಂದು ಜಯಪ್ರಕಾಶ ಹೆಗ್ಡೆ ತಿಳಿಸಿದರು.

ಪ್ರಮುಖ ಶಿಫಾರಸು

- ಒಬಿಸಿ ಪಟ್ಟಿಯಲ್ಲಿರುವ 46 ಅಲೆಮಾರಿ/ಅರೆಅಲೆಮಾರಿ ಜಾತಿಗಳಿಗೆ ಜಾತಿ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ, ಆಯಾ ಜಾತಿಯ ಮುಂದೆ ಅಲೆಮಾರಿ/ಅರೆ ಅಲೆಮಾರಿ ಎಂದು ನಮೂದಿಸಿ ಜಾತಿ ಪ್ರಮಾಣ ಪತ್ರ ನೀಡಬೇಕು.
- ಪರಿಷ್ಕೃತ ಒಬಿಸಿ ಮೀಸಲು ಪಟ್ಟಿ ಮುದ್ರಿಸಿ ಆಯೋಗದಿಂದಲೇ ರಾಜ್ಯದ ಎಲ್ಲ ಗ್ರಾಪಂಚಾಯಿತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವಿತರಿಸಲು ತೀರ್ಮಾನ.
- ಕೆಲವು ಜಾತಿಗಳ ಹೆಸರು ಎಸ್ಸಿ, ಎಸ್ಟಿ, ಒಬಿಸಿ ಪಟ್ಟಿಯಲ್ಲಿರುವುದರಿಂದ ಅಧಿಕಾರಿಗಳು ಗೊಂದಲವಾಗುತ್ತಿದೆ. ಇಂತಹ ಜಾತಿಗಳನ್ನು ಪಟ್ಟಿಯಿಂದ ತೆಗೆದುಹಾಕಿ ಹಾಗೂ ಅಗತ್ಯ ಕಾಗುಣಿತ ತಿದ್ದುಪಡಿ ಮಾಡಿ ಪರಿಷ್ಕೃತ ಪಟ್ಟಿ ಸಿದ್ದಪಡಿಸಲು ತೀರ್ಮಾನ.

ಹಿಂದುಳಿದ ವರ್ಗಗಳ ನಾನಾ ಜಾತಿ ಮತ್ತು ಉಪಜಾತಿಗಳಿಗೆ ಸೇರಿದ ಸರಕಾರಿ ನೌಕರರು ಹಾಗೂ ವಿದ್ಯಾರ್ಥಿಗಳ ಮಾಹಿತಿ ಒದಗಿಸುವಂತೆ 8 ತಿಂಗಳ ಹಿಂದೆಯೇ ಕೇಳಿಕೊಳ್ಳಲಾಗಿದ್ದು, ಇದುವರೆಗೆ ಶೇ.50ರಷ್ಟು ಮಾಹಿತಿ ಮಾತ್ರ ಬಂದಿದೆ. ಇನ್ನುಳಿದ ಮಾಹಿತಿ ಬಂದಲ್ಲಿ ಯಾವ ಜಾತಿ, ಯಾವ ಪ್ರಮಾಣದಲ್ಲಿ ಸರಕಾರಿ ಸೌಲಭ್ಯ ಪಡೆದುಕೊಂಡಿದ್ದಾರೆ ಮತ್ತು ಶಿಕ್ಷಣ ಪಡೆದಿದ್ದಾರೆ ಎಂಬುದು ಗೊತ್ತಾಗಲಿದೆ ಎಂದು ಜಯಪ್ರಕಾಶ್ ಹೆಗ್ಡೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ತಿಳಿಸಿದರು.

ಆಧಾರ: ವಿಶ್ವವಾಣಿ, ದಿನಾಂಕ: 14.03.2023

53. ಖರ್ಗೆಗೆ ಜೀವಮಾನ ಸಾಧನೆ ಗೌರವ

ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರಿಗೆ ಅತ್ಯುತ್ತಮ ಸೇವೆ ಸಲ್ಲಿಸಿರುವ ಸಂಸದರಿಗೆ ನೀಡಲಾಗುವ ಲೋಕಮತ್ ಸಂಸದೀಯ ಪ್ರಶಸ್ತಿ – 2022 ಸಂದಿದೆ.

ರಾಜ್ಯಸಭೆ ವಿಪಕ್ಷ ನಾಯಕರಾಗಿರುವ ಕರ್ನಾಟಕದ ಹಿರಿಯ ರಾಜಕಾರಣಿ ಹಾಗೂ ಎಐಸಿಸಿ ಅಧ್ಯಕ್ಷರೂ ಆದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅತ್ಯುತ್ತಮ ಸಂಸದರಾಗಿ ಜೀವಮಾನ ಶ್ರೇಷ್ಠ ಸಾಧನೆ ಪ್ರಶಸ್ತಿ ನೀಡಲಾಗಿದೆ. 17ನೇ ಲೋಕಸಭೆಯ 2ನೇ ಅತಿ ಕಿರಿಯ ಸಂಸದರಾಗಿರುವ ತೇಜಸ್ವಿ ಸೂರ್ಯ ಅವರಿಗೆ ಅತ್ಯುತ್ತಮ ಉದಯೋನ್ಮುಖ ಸಂಸದ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಸಂಸದ ಶರದ್ ಪವಾರ್ ಅಧ್ಯಕ್ಷತೆಯ ಆಯ್ಕೆ ಸಮಿತಿ 2017ರಿಂದಲೂ ಪ್ರತಿವರ್ಷ ಅತ್ಯುತ್ತಮ ಸಂಸದೀಯ ಪಟುಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡುತ್ತಿದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 15.03.2023

54. ಮಾತೃಭಾಷೆಯಲ್ಲಿರಲಿ ಗುಣಮಟ್ಟದ ಶಿಕ್ಷಣ

ಮಾತೃ ಭಾಷೆಯಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸಲು ಹಾಗೂ ಸ್ಥಳೀಯ ಭಾಷೆಯಲ್ಲಿ ಲಭ್ಯವಿಲ್ಲದ ವಿಷಯಗಳ ಪಠ್ಯ ಪುಸ್ತಕ ಸಿದ್ಧಪಡಿಸಲು ಕ್ರಮ ಕೈಗೊಳ್ಳುವುದು ಅವಶ್ಯಕ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆದ ರಾಜ್ಯ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ–2021ರ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉನ್ನತ ಶಿಕ್ಷಣದಲ್ಲಿ ವಿಶೇಷವಾಗಿ ವಿಜ್ಞಾನ, ವಾಣಿಜ್ಯ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಅನೇಕ ಕೋರ್ಸ್‌ಗಳನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಕಲಿಸಲಾಗುತ್ತದೆ.

ಕೋರ್ಸ್‌ಗಳ ಪಠ್ಯ ಪುಸ್ತಕಗಳು ಮತ್ತು ಅಧ್ಯಯನ ಸಾಮಗ್ರಿಗಳು ಸ್ಥಳೀಯ ಭಾಷೆಗಳಲ್ಲಿ ಲಭ್ಯ ಇರುವುದಿಲ್ಲ. ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯ ಪಠ್ಯ ಪುಸ್ತಕಗಳಿಂದ ವಂಚಿತರಾಗಬಾರದು. ಮಾತೃ ಭಾಷೆಯಲ್ಲಿ ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಮುಂದಿನ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ರಾಜ್ಯದಲ್ಲಿ ಈ ಕಾರ್ಯವನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಉನ್ನತ ಶಿಕ್ಷಣ ಇಲಾಖೆ ಮತ್ತು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ತಿನ ಅಧಿಕಾರಿಗಳು ಮತ್ತು ವಿಶ್ವವಿದ್ಯಾಲಯಗಳ ಎಲ್ಲಾ ಉಪಕುಲಪತಿಗಳು ಉನ್ನತ ಶಿಕ್ಷಣಕ್ಕಾಗಿ ಪಠ್ಯಪುಸ್ತಕಗಳನ್ನು ಬರೆಯಲು ಹಾಗೂ ಭಾಷಾಂತರಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಲು ತಿಳಿಸಲಾಗಿದೆ ಎಂದರು.

ಆಂಗ್ಲಭಾಷೆ ಕಲಿಯದೆ ಭವಿಷ್ಯವಿಲ್ಲ ಎಂಬ ಪರಿಸ್ಥಿತಿ ಉದ್ಭವವಾಗದಂತೆ ಎಚ್ಚರವಹಿಸುವುದು ಅವಶ್ಯಕ. ಜರ್ಮನಿ, ಜಪಾನ್, ಫ್ರಾನ್ಸ್, ಚೀನಾ ಸೇರಿದಂತೆ ಕೆಲವು ದೇಶಗಳು ತಮ್ಮ ಮಾತೃಭಾಷೆಯಲ್ಲಿ ಕಾರ್ಯನಿವರ್ಹಿಸುತ್ತಿದ್ದು, ತಂತ್ರಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿಯನ್ನು ಕಂಡಿದೆ. ಇದೇ ರೀತಿ ನಮ್ಮ ದೇಶವು ಮಾತೃ ಭಾಷೆಯಲ್ಲಿ ಪ್ರಗತಿಯನ್ನು ಸಾಧಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ವಿಶ್ವವಿದ್ಯಾನಿಲಯಗಳು ಮತ್ತು ಅವರ ಸಾಧನೆಗಳ ಕುರಿತು, ರಾಷ್ಟ್ರೀಯ ಶಿಕ್ಷಣ, ನೀತಿ ಅನುಷ್ಠಾನ, ಅನುಷ್ಠಾನದ ಸಮಯದಲ್ಲಿ ವಿಶ್ವಸಮ್ಮಸವಿದ್ಯಾಲಯಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಸವಾಲುಗಳನ್ನು ಜಯಿಸಲು ವಿಶ್ವವಿದ್ಯಾಲಯಗಳ ಪ್ರಯತ್ನ ಮತ್ತು ಎನ್‌ಇಪಿ–2020ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಮಾತೃಭಾಷೆಯಲ್ಲಿ ಪಠ್ಯಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲಹೆಗಳನ್ನು ನೀಡಲಾಯಿತು. ರಾಜ್ಯ ಉನ್ನತ ಶಿಕ್ಷಣ ಪರಿಷತ್ ಹೊರತರಲಾಗಿರುವ ಕನ್ನಡ ಆವೃತ್ತಿಯ "ಆರ್ಥಿಕ ಸಾಕ್ಷರತೆ ಮತ್ತು ಜಾಗೃತ ಹೂಡಿಕೆ" ಕೈಪಿಡಿಯನ್ನು ರಾಜ್ಯಪಾಲರು ಬಿಡುಗಡೆ ಮಾಡಿದರು.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲಕೃಷ್ಣ ಜೋಶಿ, ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಹಾಗೂ ಇತರರು ಇದ್ದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 15.03.2023

55. ಎಸ್‌ಎಂಕೆ, ಸುಧಾಮೂರ್ತಿ, ಭೈರಪ್ಪ ಸೇರಿ 8 ಮಂದಿಗೆ ಪದ್ಮ ಪ್ರಶಸ್ತಿ ಪ್ರದಾನ

ಮಾಜಿ ಸಿಎಂ ಎಸ್.ಎಂ. ಕೃಷ್ಣ, ಇನ್ಫೋಸಿಸ್‌ನ ಸುಧಾಮೂರ್ತಿ ಹಾಗೂ ಸಾಹಿತಿ ಎಸ್.ಎಲ್.ಭೈರಪ್ಪ ಸೇರಿದಂತೆ ಕರ್ನಾಟಕದ 8 ಜನ ಹಾಗೂ ದೇಶದ ಒಟ್ಟು 106 ಮಂದಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ.

ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ 2023ನೇ ಸಾಲಿನಲ್ಲಿ ಪದ್ಮ ಪ್ರಶಸ್ತಿಗೆ ಭಾಜನರಾದ ಸಾಧಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಸ್ತಿ ಪ್ರಧಾನ ಮಾಡಿದ್ದಾರೆ. ಈ ಬಾರಿ 6 ಪದ್ಮವಿಭೂಷಣ. 9 ಪದ್ಮಭೂಷಣ ಮತ್ತು 91 ಪದ್ಮ ಶ್ರೀ ಪ್ರಶಸ್ತಿಗಳನ್ನು ಘೋಷಿಸಲಾಗಿತ್ತು.

91 ವರ್ಷದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಪದ್ಮವಿಭೂಷಣ, ಸಾಹಿತಿ ಎಸ್‌ಎಲ್ ಭೈರಪ್ಪ, ಇನ್ಫೋಸಿಸ್‌ನ ಸುಧಾಮೂರ್ತಿ ಅವರಿಗೆ ಪದ್ಮಭೂಷಣ, ಉಳಿದಂತೆ ವಿಜ್ಞಾನಿ ಖಾದರ್‌ನಲ್ಲಿ ದುಡೇಕುಲ, ಉಮ್ಮತ್ತಾಟ್ ನೃತ್ಯ ಕಲಾವಿದೆ ರಾಣಿ ಮಾಚಯ್ಯ, ತಮಟೆ ವಾದಕ ಮುನಿವೆಂಕಟಪ್ಪ, ರಶೀದ್ ಅಹಮದ್ ಖಾದ್ರಿ, ಎಸ್.ಸುಬ್ಬರಾಮನ್ ಅವರಿಗೂ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಇವರಲ್ಲದೇ ಖ್ಯಾತ ಗಾಯಕಿ ವಾಣಿ ಜಯರಾಂ ಹಾಗೂ ಆಸ್ಕರ್ ಪ್ರಶಸ್ತಿ ಗೆದ್ದ ಸಂಗೀತ ನಿರ್ದೇಶಕ ಎಂ.ಎಂ.ಕೀರವಾಣಿ ಅವರು ಸಹ ಪದ್ಮ ಶ್ರೀ ಪ್ರಶಸ್ತಿ ಸ್ವೀಕರಿಸಿದ್ದಾರೆ.

ವಾಸ್ತುಶಿಲ್ಪ ಸಾಧನೆಯಲ್ಲಿ ಗುಜರಾತ್‌ನ ಬಾಲಕೃಷ್ಣ ದೋಶಿ (ಮರಣೋತ್ತರ), ಕಲಾ ಸಾಧನೆಗೈದ ಮಹಾರಾಷ್ಟ್ರದ ಝಾಕೀರ್ ಹುಸ್ಸೇನ್, ಸಾರ್ವಜನಿಕ ವ್ಯವಹಾರ ಕ್ಷೇತ್ರದಲ್ಲಿ ಕರ್ನಾಟಕ ಮಾಜಿ ಸಿಎಂ ಎಂ.ಎಸ್ ಕೃಷ್ಣ, ಮೆಡಿಸಿನ್ ಕ್ಷೇತ್ರದಲ್ಲಿನ ಸಾಧನೆಗೆ ಪಶ್ಚಿಮ ಬಂಗಾಳದ ದಿಲೀಪ್ ಮಹಾಲಾನಬಿಸ್ (ಮರಣೋತ್ತರ), ವಿಜ್ಞಾನ ಹಾಗೂ ಎಂಜಿನೀಯರ್, ಅಮೆರಿಕದ ಶ್ರೀನಿವಾಸ್ ವರ್ಧನ್, ಸಾರ್ವಜನಿಕ ವ್ಯವಹಾರ, ಕ್ಷೇತ್ರದಲ್ಲಿ ಮುಲಾಯಂ ಯಾದವ್ (ಮರಣೋತ್ತರ) ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಪ್ರಧಾನ ಮಾಡಲಾಗಿದೆ. ಅಂತೆಯೇ ಛತ್ತೀಸ್ಗಡದ ಜಾನಪದ ಕಲಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಪಾಂಡವಾನಿ ಗಾಯಕಿ ಉಷಾ ಬಾರ್ಲೆ ಅವರು ಪದ್ಮ ಶ್ರೀ ಪ್ರಶಸ್ತಿ ಸ್ವೀಕರಿಸಿದರು. ಇನ್ನೂ ಸುಕಮ ಆಚಾರ್ಯ, ಜೋಧಯ್ಯಬಾಯಿ ಬೈಗಾ, ಪ್ರೇಮಿತ್ ಬರಿಯಾ, ಮುನೀಶ್ವರ ಚಂದಾವರ, ಹೇಮಂತ್ ಚೌಹಾಣ್ ಭಾನುಭಾಯಿ ಚಿತಾರಾ, ಹೆಮೊಪ್ರೊವಾ ಚುಟಿಯಾ, ನರೇಂದ್ರ ಚಂದ್ರ ದೆಬ್ಬರ್ಮ (ಮರಣೋತ್ತರ), ಸುಭದ್ರಾ ದೇವಿ ಪದ್ಮ ಶ್ರೀ ಪ್ರಶಸ್ತಿ ಸ್ವೀಕರಿಸಿದರು. ಅಲ್ಲದೇ ಖಾದರ್ ವಲ್ಲಿ ದೂದೇಕುಲ, ಹೇವಾಚಂದ್ರ ಗೋಸ್ವಾಮಿ, ಪ್ರಿತಿಕಾನಾ ಗೋಸ್ವಾಮಿ, ರಾಧಾ ಚರಣ್ ಗುಪ್ತಾ, ಮೊಡಡುಗು ವಿಜಯ್ ಗುಪ್ತಾ, ಅಹ್ಮದ್ ಹುಸೇನ್ ಮತ್ತು ಮೊಹಮ್ಮದ್ ಹುಸೇನ್ (ಜೋಡಿ), ದಿಲ್ಯಾದ್ ಹುಸೇನ್,

ಭಿಕು ರಾಮ್‌ಜಿ ಇದತೇ, ಸಿ ಐ ಇಸಾಕ್, ರನ್ ಸಿಂಗ್ ಜಗ್ಗಿ, ಬಿಕ್ರಮ್ ಬಹದ್ದೂರ್ ಜಮಾತಿಯಾ ಅವರಿಗೂ ಸಹ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಕೇಶ್ ಜುಂಜನ್ವಾವಾಂ ಮರಣೋತ್ತರ ಪದಶ್ರೀ

ಅಂತೆಯೇ ಷೇರು ಮಾರುಕಟ್ಟೆಯಲ್ಲಿ ಅಪ್ರತಿಮ ಸಾಧನೆ ಮೂಲಕ ದೇಶದ ಹೂಡಿಕೆ ಕ್ಷೇತ್ರದಲ್ಲಿ ಹೊಸ ಸಂಚಲನ ಸೃಷ್ಟಿಸಿದ ರಾಕೇಶ್ ಜುಂಜುನವಾಲ ಇತ್ತೀಚೆಗಷ್ಟೇ ನಿಧನರಾಗಿದ್ದಾರೆ. ರಾಕೇಶ್ ಜುಂಜುನುವಾಲ ಅವರಿಗೆ ಮರಣೋತರವಾಗಿ ಪದ್ಮಶ್ರೀ ಪ್ರಶಸ್ತಿ ಪ್ರಧಾನ ಮಾಡಲಾಗಿದೆ. ರಾಕೇಶ್ ಜುಂಜುನವಾಲ್ ಪರವಾಗಿ ಅವರ ಪತ್ನಿ ರೇಖಾ ಜುಂಜುನವಾಲ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಜುಂಜುನವಾಲ ಕುಟುಂಬಸ್ಥರು ಉಪಸ್ಥಿತರಿದ್ದರು. ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 24.03.2023

56. ನಗರ ಅನಿಲ ವಿತರಣಾ ಜಾಲ ಅಭಿವೃದ್ಧಿ

ಗೃಹ ಬಳಕೆ, ವಾಣಿಜ್ಯ, ಕೈಗಾರಿಕಾ ಗ್ರಾಹಕರಿಗೆ ಕೊಳವೆ ಮೂಲಕ ನೈಸರ್ಗಿಕ ಅನಿಲ ಸರಬರಾಜು ಮತ್ತು ವಾಹನಗಳಿಗೆ ಕಂಪ್ರೆಸ್ಡ್ ನೈಸರ್ಗಿಕ ಅನಿಲ ಒದಗಿಸುವ ನಗರ ಅನಿಲ ವಿತರಣಾ ಜಾಲದ ಅಭಿವೃದ್ಧಿ ರಾಜ್ಯ ನೀತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಬಂಪರ್ ಕೊಡುಗೆ: ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು ಬಾಳ್ತಿಲ ಗ್ರಾಮಕ್ಕೆ ನೇತ್ರಾವತಿ ನದಿಯಿಂದ ಏತ ನೀರಾವರಿ ನಿರ್ಮಾಣ ಕಾಮಗಾರಿಯನ್ನು 125 ಕೋಟಿ ರೂ.ಗಳ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ. ಬಂಟ್ವಾಳ ತಾಲ್ಲೂಕು ಬಿಳಿಯೂರು ಗ್ರಾಮದ ಬೆಳಿಯೂರು ಎಂಬಲ್ಲಿ ಕಿಂಡಿ ಅಣೆಕಟ್ಟೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ 77.32 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ. ಬಂಟ್ವಾಳ ತಾಲ್ಲೂಕಿನ ಅಳಿಕೆ ಹಾಗೂ ಇತರೆ 123 ಜನವಸತಿಗಳು (ವಿಟ್ಲ ಪಟ್ಟಣ ಪಂಚಾಯಿತಿ ಒಳಗೊಂಡಂತೆ) ತಾಲ್ಲೂಕಿನ 319 ಜನವಸತಿಗಳು, ಕಡಬ ತಾಲ್ಲೂಕಿನ 51 ಜನವಸತಿಗಳು ಹಾಗೂ ಸುಳ್ಯ ತಾಲ್ಲೂಕಿನ 243 ಜನವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ರೂ. 780 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅಡಳಿತಾತ್ಮಕ ಅನುಮೋದನೆ. ಅಲಂಕಾರು ಹಾಗೂ ಇತರ 299 ಜನವಸತಿಗಳಿಗೆ (ಕಡಬ ತಾಲ್ಲೂಕಿನ 203 ಜನವಸತಿಗಳು, ಪುತ್ತೂರು ತಾಲ್ಲೂಕಿನ 53 ಜನವಸತಿಗಳು ಹಾಗೂ ಬೆಳ್ತಂಗಡಿ ತಾಲ್ಲೂಕಿನ 44

ಜನವಸತಿಗಳು) ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ರೂ. 230 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕಚ್ಚಾ ಆಹಾರ ಸಾಮಗ್ರಿ ವಿತರಣೆ: ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿನ ಗರ್ಭಿಣಿ ಹಾಗೂ ಬಾಣಂತಿಯರಿಗೆ ಮಾತೃಪೂರ್ಣ ಯೋಜನೆ ಅಡಿಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ ಫಲಾನುಭವಿಗಳಿಗೆ ಕಚ್ಚಾ ಆಹಾರ ಸಾಮಗ್ರಿಗಳನ್ನು ರೂ. 21 ಕೋಟಿ ಘಟಕ ವೆಚ್ಚದಲ್ಲಿ, 15 ದಿನಗಳಿಗೊಮ್ಮೆ ಅವರುಗಳ ಮನೆಯಲ್ಲೇ ವಿತರಿಸಲು ಅನುಮೋದನೆ ನೀಡಲಾಗಿದೆ.

ವರ್ಲ್ಡ್ ಡಿಸೈನ್ ಕ್ಯಾಪಿಟಲ್ ಬಿಬಿಎಂಪಿಗೆ ಅನುಮತಿ

ವರ್ಲ್ಡ್ ಡಿಸೈನ್ ಕ್ಯಾಪಿಟಲ್–2022 ಕಾರ್ಯಕ್ರಮದ ಬಿಡ್‌ನಲ್ಲಿ ಬೆಂಗಳೂರಿನ ಪ್ರತಿನಿಧಿಗಳು ಭಾಗವಹಿಸಲು ಬಿಬಿಎಂಪಿಗೆ ಅನುಮತಿ ನೀಡಿದ್ದು, ರಾಜ್ಯ ಸರ್ಕಾರದಿಂದ ರೂ. 200 ಕೋಟಿ ಅನುದಾನ ಬಿಡುಗಡೆ ಮಾಡಲು ಹಾಗೂ ಎಂಒಎ (ಮೆಮೊರೆಂಡಂ ಆಫ್ ಅಗ್ರಿಮೆಂಟ್) ಮತ್ತು ಎಚ್‌ಪಿಎಗಳನ್ನು (ಪೋಸ್ಟ್ ಪ್ರೋಗ್ರಾಂ ಅಗ್ರೀಮೆಂಟ್) ಮಾಡಿಕೊಳ್ಳಲು ಸಂಪುಟ ಅನುನೋದನೆ ನೀಡಿದೆ.

ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಕೋರಮಂಗಲದಲ್ಲಿ ಲೋಕೋಪಯೋಗಿ ಇಲಾಖೆಯ ಖಾಲಿ ಜಾಗದಲ್ಲಿ ನಿರ್ಮಿಸುತ್ತಿರುವ 'ಸಿ' ಮಾದರಿಯ ವಸತಿಗೃಹಗಳ (ಹಂತ 1) ಪಕ್ಕದಲ್ಲಿ ಹೆಚ್ಚುವರಿ ವಸತಿಗೃಹ ನಿರ್ಮಿಸುವ (ಹಂತ–2) ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ರೂ. 12.10 ಕೋಟಿಗಳಿಗೆ ಒಪ್ಪಿಗೆ ನೀಡಲಾಗಿದೆ.

ಬೆಂಗಳೂರಿನ ಆಯ್ದ 16 ಶಾಲೆಗಳನ್ನು ಪಬ್ಲಿಕ್ ಶಾಲೆಗಳನ್ನಾಗಿ ಅಭಿವೃದ್ಧಿಪಡಿಸುವ ರೂ. 69.52 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಸಹಮತಿ ದೊರೆತಿದೆ. ನಗರದ ಸುತ್ತಮುತ್ತಲಿನ ಒಟ್ಟು 155 ಕಿ.ಮೀ. ಉದ್ದದ ರಸ್ತೆ ಕಾಮಗಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಕೈಗೊಳ್ಳಲು 2022–23ನೇ ಸಾಲಿಗೆ ಐಇಬಿಆರ್ ಅಡಿ ನಿಯಮಿತಕ್ಕೆ ಅವಧಿ ಸಾಲಗಳ ಮೂಲಕ ರೂ.347 ಕೋಟಿ ಸಂಗ್ರಹಿಸಲು ಸರ್ಕಾರಿ ಖಾತರಿ ನೀಡಲು ಸಂಪುಟ ಒಪ್ಪಿಗೆ ನೀಡಿದೆ.

ಪಾಲಿಕೆಗೆ ಕಾಮಗಾರಿ ಹೊಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 12 ಹೈಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೆಆರ್‌ಡಿಸಿಎಲ್‌ಗೆ ವಹಿಸಿರುವ ಆದೇಶವನ್ನು ರದ್ದುಪಡಿಸಿ,

ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಹಿಸಿ 2022ರ ಡಿ.17ರಂದು ಹೊರಡಿಸಿರುವ ಸರಕಾರಿ ಆದೇಶಕ್ಕೆ ಸಚಿವ ಸಂಪುಟದ ಘಟನೋತ್ತರ ಅನುಮೋದನೆ ನೀಡಲಾಗಿದೆ. ಜ್ಞಾನಭಾರತಿ ಆವರಣದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಪುರುಷರ ವಸತಿ ಗೃಹಗಳನ್ನು ರೂ. 14.75 ಕೋಟಿ ಗಳ ಮೊತ್ತದಲ್ಲಿ ನಿರ್ಮಿಸಲು ಪ್ರಾದೇಶಿಕ ಆಂಗ್ಲ ಭಾಷಾ ಸಂಸ್ಥೆಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಪ್ರಮುಖ ನಿರ್ಣಯಗಳು

- ಉತ್ತರ ಕರ್ನಾಟಕ ಸಂಘ–ಸಂಸ್ಥೆಗಳ ಮಹಾಸಂಸ್ಥೆಗೆ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ, ಕಮ್ಮಸಂದ್ರ ಗ್ರಾಮದ ಸರ್ವೇ ನಂ. 8ರಲ್ಲಿ ಮಂಜೂರು ಮಾಡಿರುವ 3.24 ಎಕರೆ ಜಮೀನಿಗೆ ವಿಧಿಸಿರುವ ಮೊತ್ತ ಪರಿಷ್ಕರಣೆ.
- ರಾಮನಗರ ಜಿಲ್ಲೆ ಚನ್ನಪಟ್ಟಣ ನಗರಕ್ಕೆ ಸಮಗ್ರ ಒಳಚರಂಡಿ ವ್ಯವಸ್ಥೆ ಕಲ್ಪಿಸುವ 2ನೇ ಹಂತದ ಕಾಮಗಾರಿ ರೂ.94.37 ಕೋಟಿಗಳ ಅಂದಾಜು ಪಟ್ಟಿಗೆ ಸಹಮತಿ ನೀಡಲಾಗಿದೆ.
- ನೂತನ ದತ್ತಾಂಶ ಕೇಂದ್ರ ಸ್ಥಾಪನೆಗೆ 592.86 ಕೋಟಿ ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ.
- ಈ ರಾಜ್ಯದ ಏಳು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳನ್ನಾಗಿ ಉನ್ನತೀಕರಿಸುವ ಬಗ್ಗೆ ಹಾಗೂ ಬೆಂಗಳೂರು ಸರಕಾರಿ ಎಸ್‌ಕೆಎಸ್ ಜೆಐಟಿ ಸಂಸ್ಥೆಯ ಸಿವಿಲ್ ಕಾಮಗಾರಿಗಳನ್ನು ರೂ.32.50 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.
- ರಾಜ್ಯದ ಶೈಕ್ಷಣಿಕ ಹಿಂದುಳಿದ ಜಿಲ್ಲೆಗಳಲ್ಲಿನ 10 ಮಾದರಿ ಪ.ಜಾತಿ, ಪ.ವರ್ಗದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣ ಕಾಮಗಾರಿ ಅಂದಾಜು ರೂ. 237.50 ಕೋಟಿ ಇದ್ದು, ಪರಿಷ್ಕೃತ ಅಂದಾಜು ರೂ. 347.35 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.
- ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 11 ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ನಿರ್ಧಾರ.
- ಹುಬ್ಬಳ್ಳಿ–ಚಿಕ್ಕಜಾಜೂರು ರೈಲ್ವೆ ವಿಭಾಗದಲ್ಲಿನ ರಾಣಿಬೆನ್ನೂರು–ದೇವರಗುಡ್ಡ ರೈಲ್ವೆ ನಿಲ್ದಾಣಗಳ ರೈಲ್ವೆ ಕ್ರಾಸಿಂಗ್ ಗೇಟ್ ಸಂಖ್ಯೆ 219ರ ಬದಲಿಗೆ ರಸ್ತೆ ಮೇಲ್ಪೆತುವೆ ನಿರ್ಮಾಣಕ್ಕೆ ರೂ.38.08 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.

- ಆ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ರೂ. 187.90 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.
- ಈ ಜಲಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆ 85 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ರೂ.54.05 ಕೋಟಿಗಳ ಮೊತ್ತದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.
- ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳ ಕನ್ನಡ ಮಾಧ್ಯಮದ 1 ರಿಂದ 3ನೇ ತರಗತಿ ಮತ್ತು ಉರ್ದು ಮಾಧ್ಯಮದ 1 ಮತ್ತು 2ನೇ ತರಗತಿವರೆಗಿನ ನಲಿ ಕಲಿ ಘಟಕಗಳಿಗೆ ಕಲಿಕಾ ಸಾಮಗ್ರಿಗಳನ್ನು ರೂ.39.79 ಕೋಟಿಗಳ ಅಂದಾಜು ವೆಚ್ಚದಲ್ಲಿ ಸರಬರಾಜು ನಿರ್ಧಾರ.
- 2022–23ನೇ ಸಾಲಿನಲ್ಲಿ ಐಇಬಿಆರ್ ಅಡಿಯಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಅವಧಿ ಸಾಲಗಳ (ಟರ್ಮ್‌ಲೋನ್) ಮೂಲಕ ರೂ.50 ಕೋಟಿ ಸಂಗ್ರಹಿಸಲು ಸರ್ಕಾರಿ ಖಾತರಿ, ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಐಇಬಿಆರ್ ಅಡಿ ಅವಧಿ ಸಾಲಗಳ ಮೂಲಕ ಹೆಚ್ಚುವರಿಯಾಗಿ ರೂ.650 ಕೋಟಿ ಹಣ ಸಂಗ್ರಹಿಸಲು ಸರ್ಕಾರಿ ಖಾತರಿ ನೀಡಿ ಮಾರ್ಚ್ 14ರಂದು ಹೊರಡಿಸಿರುವ ಆದೇಶಕ್ಕೆ ಘಟನೋತ್ತರ ಅನುಮೋದನೆ.

ಆಧಾರ: ವಿಜಯವಾಣಿ, ದಿನಾಂಕ: 25.03.2023

57. ಶಕ್ತಿಸೌಧದೆದುರು ಬಸವಣ್ಣ, ಕೆಂಪೇಗೌಡ ಪ್ರತಿಮೆ

ಬಸವಣ್ಣನವರು ಸಾರಿದ ಸಾಮಾಜಿಕ ನ್ಯಾಯ ಹಾಗೂ ಸರ್ವರೂ ಸಮಾನರೆಂಬ ತತ್ವಾದರ್ಶಗಳು ಮತ್ತು ಆ ತತ್ವಗಳಡಿ ನಾಡಪ್ರಭು ಕೆಂಪೇಗೌಡರು ನಡೆಸಿದ ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ಮಂತ್ರ ಭವಿಷ್ಯದಲ್ಲಿ ಕರ್ನಾಟಕ ವಿಧಾನಸಭೆಗೆ ಚುನಾಯಿತರಾಗಿ ಬರುವ ಎಲ್ಲಾ ಜನಪ್ರತಿನಿಧಿಗಳಿಗೆ ಆದರ್ಶವಾಗಬೇಕು. ಕರ್ನಾಟಕದ ಮೂಲಕ ಇಡೀ ದೇಶ ಹಾಗೂ ಜಗತ್ತಿಗೇ ಈ ಮಹಾಪುರುಷರ ತತ್ವ, ಆದರ್ಶ ಹಾಗೂ ಆಡಳಿತಗಳ ಸಂದೇಶ ಸಾರುವಂತಾಗಬೇಕು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಿರುವ ಜಗಜ್ಯೋತಿ ಬಸವೇಶ್ವರ ಹಾಗೂ ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳ ಅನಾವರಣ ಹಾಗೂ ನಮ್ಮ ಬೆಂಗಳೂರು ಹಬ್ಬದ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಬಸವೇಶ್ವರರು ಅನುಭವ ಮಂಟಪದಲ್ಲಿ ಸಮಾಜದ ಕಟ್ಟಕಡೆಯ

ವ್ಯಕ್ತಿಯಿಂದ ಉನ್ನತ ಸ್ತರದ ವ್ಯಕ್ತಿಗಳೆಲ್ಲರನ್ನೂ ಒಂದೆಡೆ ಸೇರಿಸಿದ್ದರು. ಚರ್ಚೆಗೆ ಅವಕಾಶ ನೀಡಿ ಸಮಾನತೆ, ಸಾಮಾಜಿಕ ನ್ಯಾಯದ ಮೂಲಕ ಸಮಾಜದ ಸಶಕ್ತೀಕರಣ ಸಾಧ್ಯ ಎಂದು ತೋರಿಸಿಕೊಟ್ಟವರು. ಕೆಂಪೇಗೌಡರು ಇದೇ ಸಮಾನತೆ, ಸಾಮಾಜಿಕ ನ್ಯಾಯದ ತಳಹದಿ ಮೇಲೆ ಬೆಂಗಳೂರು ನಗರ ನಿರ್ಮಾಣ ಮಾಡಿ ಉತ್ತಮ ಆಡಳಿತ ಮತ್ತು ಅಭಿವೃದ್ಧಿ ಮಾಡಿ ತೋರಿಸಿದವರು. ಹಾಗಾಗಿ ಈ ಮಹಾ ಪುರುಷರ ಪ್ರತಿಮೆಗಳನ್ನು ತನ್ನದೇ ಇತಿಹಾಸವಿರುವ ಕರ್ನಾಟಕದ ಶಕ್ತಿಕೇಂದ್ರ ವಿಧಾನಸೌಧದ ಮುಂದೆ ಸ್ಥಾಪಿಸಲಾಗಿದೆ. ಈ ಇಬ್ಬರೂ ಮಹಾ ಪುರುಷರ ತತ್ವ ಆದರ್ಶಗಳು, ಆಡಳಿತ ಮತ್ತು ಅಭಿವೃದ್ಧಿಯ ಮಂತ್ರಗಳು ಮುಂದೆ ವಿಧಾನಸಭೆಗೆ ಆರಿಸಿ ಬರುವ ಎಲ್ಲರಿಗೂ ಆದರ್ಶಪ್ರಾಯವಾಗಬೇಕು. ಕರ್ನಾಟಕದ ಮೂಲಕ ಇಡೀ ದೇಶಕ್ಕೆ ಅವರ ತತ್ವ ಆದರ್ಶ ಸಾರಬೇಕು ಎಂದರು. ಭಾರತ ಲೋಕತಂತ್ರದ ಜನನಿ, ಅದು 12ನೇ ಶತಮಾನದ ವಚನಕಾರರ ಅನುಭವಮಂಟಪದ ಮೂಲಕ ಆರಂಭವಾಗುತ್ತದೆ. ಅಲ್ಲಿ ಸಾಮಾಜಿಕ ನ್ಯಾಯದ ಜೊತೆಗೆ ಮಹಿಳೆಯರಿಗೂ ಸಮಾನ ಸ್ಥಾನ ನೀಡಲಾಗುತ್ತದೆ. ವಚನಕಾರರ ವಚನಗಳು ನಮ್ಮ ಜೀವನಕ್ಕೆ ಆದರ್ಶವಾಗಬೇಕು. ಕೆಂಪೇಗೌಡರ ತಾಕತ್ತು ಅವರ ಆಡಳಿತ ಧ್ವನಿಯಲ್ಲಿರಲಿಲ್ಲ, ಬದಲಿಗೆ ವೈಖರಿ, ಆಚಾರ ವಿಚಾರಗಳಲ್ಲಿತ್ತು. ನದಿ, ಸರೋವರದಂತಹ ಯಾವುದೇ ನೀರಿನ ಮೂಲ ಇಲ್ಲದ ಕಡೆ ನಗರವನ್ನು ನಿರ್ಮಿಸಿ ಅಲ್ಲಿ ನೂರಾರು ಕೆರೆಗಳು, ಉದ್ಯಾನಗಳನ್ನು ಕಟ್ಟಿ ನೀರು ಹಾಗೂ ಪರಿಸರದ ಮಹತ್ವವನ್ನು ಇಡೀ ಜಗತ್ತಿಗೆ ಸಾರಿದವರು. ಅವರು ಸ್ಥಾಪಿಸಿದ ನಗರ ಇಂದು ವಿಶ್ವಮಾನ್ಯವಾಗಿ ಬೆಳೆದಿರುವುದೇ ಇದಕ್ಕೆ ಸಾಕ್ಷಿ. ಇಂದು ಬೆಂಗಳೂರು ವಿದೇಶಿ ಬಂಡವಾಳ ಹೂಡಿಕೆ, ರಕ್ಷಣಾ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಡಾ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸ್ಪೀಕರ್ ಕಾಗೇರಿ, ಸಭಾಪತಿ ಹೊರಟ್ಟಿ, ಪೇಜಾವರ ಶ್ರೀ, ಸಿದ್ದಗಂಗಾ ಶ್ರೀ, ಹರಿಹರ ಶ್ರೀ, ಮಾದಾರ ಚನ್ನಯ್ಯ ಸ್ವಾಮೀಜಿ, ಸಚಿವರಾದ ಆರ್.ಅಶೋಕ್, ನಿರಾಣಿ, ಡಾ. ಅಶ್ವತ್ಥನಾರಾಯಣ, ಡಾ.ಕೆ.ಸುಧಾಕರ್ ಇದ್ದರು.

ಬಸವೇಶ್ವರ ಕಂಚಿನ ಪ್ರತಿಮೆ ವಿಶೇಷತೆ		
ಅಂದಾಜು ಮೊತ್ತ ರೂ.3 ಕೋಟಿ	ಪ್ರತಿಮೆ ಎತ್ತರ 4 ಮೀಟರ್	ಪೀಠದ ಉದ್ದಳತೆ 1.8 ಮೀ x 5.20 ಮೀ x 3 ಮೀ
	ಪ್ರತಿಮೆ ತೂಕ 6 ಟನ್	ವೇದಿಕೆ ಉದ್ದಳತೆ 12.05 ಮೀ x 13.45 ಮೀ

ಕೆಂಪೇಗೌಡರ ಕಂಚಿನ ಪ್ರತಿಮೆ ವಿಶೇಷತೆ		
ಅಂದಾಜು ಮೊತ್ತ ರೂ.3.5 ಕೋಟಿ	ಪ್ರತಿಮೆ ಎತ್ತರ 4 ಮೀಟರ್	ಪೀಠದ ಉದ್ದಳತೆ 1.80 ಮೀ x 5.50 ಮೀ x 3 ಮೀ
	ಪ್ರತಿಮೆ ತೂಕ 6 ಟನ್	ವೇದಿಕೆ ಉದ್ದಳತೆ 12.05 ಮೀ x 13.45 ಮೀ

ಆಧಾರ: ಕನ್ನಡ ಪ್ರಭ, ದಿನಾಂಕ: 27.03.2023

58. ಮೇ 10ಕ್ಕೆ ವೋಟು, 13ಕ್ಕೆ ರಿಸಲ್ಟ್

ಬಹು ನಿರೀಕ್ಷಿತ ರಾಜ್ಯ ವಿಧಾನಸಭಾ ಚುನಾವಣೆಗೆ ಮುಹೂರ್ತ ನಿಗದಿಯಾಗಿದ್ದು, ಮೇ 10ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಮೇ 13ರಂದು ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ.

ಚುನಾವಣೆಗೆ ಏಪ್ರಿಲ್ 13ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ಏಪ್ರಿಲ್ 20ಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. ಏಪ್ರಿಲ್ 21ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಏಪ್ರಿಲ್ 24ರಂದು ಕಡೆಯ ದಿನವಾಗಿದೆ.

ಚುನಾವಣಾ ವೇಳಾಪಟ್ಟಿ ಘೋಷಣೆಯಾದ ಬೆನ್ನಲ್ಲೇ ರಾಜ್ಯದಲ್ಲಿ ನೀತಿ ಸಂಹಿತೆ ಕೂಡ ಜಾರಿಗೆ ಬಂದಿದ್ದು, ಮುಖ್ಯಮಂತ್ರಿಗಳೂ ಸೇರಿದಂತೆ ಯಾವುದೇ ಸಚಿವರು ಅಥವಾ ನಿಗಮ ಮಂಡಳಿಗಳ ಅಧ್ಯಕ್ಷರು ಯಾವುದೇ ಹೊಸ ಆದೇಶಗಳನ್ನು ಹೊರಡಿಸುವಂತಿಲ್ಲ. ರಾಜ್ಯ ಸರ್ಕಾರ ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳುವಂತಿಲ್ಲ.

ದೆಹಲಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ ಕೆಲಹೊತ್ತಿನ ಬಳಿಕ ಬೆಂಗಳೂರಿನಲ್ಲಿ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಈ ಕುರಿತು ಮಾಹಿತಿ ನೀಡಿದರು.

ರಾಜ್ಯದಲ್ಲಿ 5.2 ಕೋಟಿ ಮತದಾರರು: ಮುಖ್ಯ ಚುನಾವಣಾಧಿಕಾರಿ ಕಚೇರಿ ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ಚುನಾವಣೆ ನಡೆಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದಲ್ಲಿ 5.24 ಕೋಟಿ ಮತದಾರರಿದ್ದು, 2.63 ಕೋಟಿ ಪುರುಷರು ಮತ್ತು 2.60 ಕೋಟಿ ಮಹಿಳಾ ಮತದಾರರಿದ್ದಾರೆ.

18–19 ವರ್ಷದೊಳಗಿನ ಯುವ ಮತದಾರರು 9.58 ಲಕ್ಷದಷ್ಟು ನೋಂದಣಿಯಾಗಿದ್ದು, 80 ವರ್ಷಕ್ಕಿಂತ ಮೇಲ್ಪಟ್ಟವರು 12.15 ಲಕ್ಷ, 100 ವರ್ಷ ದಾಟಿರುವ 16,976 ಮತದಾರರಿದ್ದಾರೆ. 5.60 ಲಕ್ಷ ಅಂಗವಿಕಲ ಮತದಾರರಿದ್ದು, 1 ಲಕ್ಷಕ್ಕೂ ಅಧಿಕ ಲೈಂಗಿಕ ಕಾರ್ಯಕರ್ತ ಮತದಾರರಿದ್ದಾರೆ, 41,312 ತೃತೀಯ ಲಿಂಗಿಗಳಿದ್ದು, ಈ ಪೈಕಿ ತಾವು ತೃತೀಯ ಲಿಂಗಿಗಳು ಎಂದು ಗುರುತಿಸಿಕೊಂಡವರು 4751 ಮಂದಿ ಇದ್ದಾರೆ ಎಂದು ಮೀನಾ ಮಾಹಿತಿ ನೀಡಿದರು.

ಎಸ್‌ಸಿ 36, ಎಸ್‌ಟಿ 15 ಕ್ಷೇತ್ರಗಳು: ರಾಜ್ಯದಲ್ಲಿ 224 ವಿಧಾನಸಭಾ ಕ್ಷೇತ್ರಗಳಿದ್ದು, ಎಸ್‌ಸಿಗೆ 36 ಮತ್ತು ಎಸ್‌ಟಿಗೆ 15 ವಿಧಾನಸಭಾ ಕ್ಷೇತ್ರಗಳನ್ನು ಮೀಸಲಿಡಲಾಗಿದೆ. ಪ್ರತಿ ಮತಗಟ್ಟೆಗೆ ಸರಾಸರಿ 883 ಮತದಾರರಂತೆ ಒಟ್ಟು 8,282 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ನಗರ ಪ್ರದೇಶಗಳಲ್ಲಿ 24,063 ಮತ್ತು ಗ್ರಾಮೀಣ ಪ್ರದೇಶದಲ್ಲಿ 34,219 ಮತಗಟ್ಟೆಗಳು ಇರಲಿವೆ. ವಿಶೇಷವಾಗಿ 1320 ಮಹಿಳಾ ಮತಗಟ್ಟೆಗಳು, 224 ಯುವ ಅಧಿಕಾರಿಗಳ ನಿರ್ವಹಣೆಯ 224 ಅಂಗವಿಕಲರ ಮತ್ತು 240 ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಸುಮಾರು 1200 ಮತಗಟ್ಟೆಗಳು ಸೂಕ್ಷ್ಮ ಮತಗಟ್ಟೆಗಳಾಗಿದ್ದು, ಇವುಗಳ ನಿರ್ವಹಣೆಗೆ ಅಗತ್ಯ ಹೆಚ್ಚಿನ ಭದ್ರತೆಯ ಸೌಲಭ್ಯಗಳನ್ನು ಒದಗಿಸಲಾಗುವುದು. ರಾಜ್ಯದ ಶೇ.50ರಷ್ಟು ಮತಗಟ್ಟೆಗಳು ವೆಬ್‌ಕಾಸ್ಟಿಂಗ್ ಸೌಲಭ್ಯವನ್ನು ಹೊಂದಿವೆ ಎಂದು ವಿವರಿಸಿದರು.

ಇದೇ ವೇಳೆ ರಾಜ್ಯದ ದುರ್ಬಲ ಬುಡಕಟ್ಟು ಜನಾಂಗವಾದ ಜೇನು ಕುರುಬ ಮತ್ತು ಕೊರಗ ಬುಡಕಟ್ಟು ಜನಾಂಗದವರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ವಿಶೇಷ ಒತ್ತು ನೀಡಲಾಗಿದೆ. ಇವರಲ್ಲಿ ಅರ್ಹರಿರುವವರಿಗೆ ಶೇ.100ರಷ್ಟು ಜನರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಗೊಳಿಸಲಾಗಿದೆ. ಒಟ್ಟು 41,312 ಮತದಾರರಿದ್ದಾರೆ. ರಾಜ್ಯದ ಬುಡಕಟ್ಟು ಪ್ರದೇಶದಲ್ಲಿ 40 ಸಾಂಪ್ರದಾಯಿಕ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದರು.

ಬೆಂಗಳೂರು ಅತಿ ಹೆಚ್ಚು, ಶೃಂಗೇರಿ ಕಡಿಮೆ ಮತದಾರರು: 224 ವಿಧಾನಸಭಾ ಕ್ಷೇತ್ರಗಳ ಪೈಕಿ ಅತಿ ಹೆಚ್ಚು ಮತದಾರರನ್ನು ಹೊಂದಿರುವ ಕ್ಷೇತ್ರ ಬೆಂಗಳೂರು ದಕ್ಷಿಣ ಆಗಿದೆ. ಇಲ್ಲಿ 6.77 ಲಕ್ಷ ಮತದಾರರಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಅತಿ ಕಡಿಮೆ ಮತದಾರರನ್ನು ಹೊಂದಿರುವ ಕ್ಷೇತ್ರವಾಗಿದೆ. ಇಲ್ಲಿ 1.68 ಲಕ್ಷ ಮತದಾರರಿದ್ದಾರೆ. ಇನ್ನು 58,282 ಮತಗಟ್ಟೆಗಳ ಪೈಕಿ ಬೆಳಗಾವಿ ಜಿಲ್ಲೆಯಲ್ಲಿ 4434 ಮತಗಟ್ಟೆಗಳಿದ್ದು, ಅದು ಅತಿ ಹೆಚ್ಚು ಮತಗಟ್ಟೆಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಕೊಡಗು ಜಿಲ್ಲೆಯಲ್ಲಿ 542 ಮತಗಟ್ಟೆಗಳಿದ್ದು, ಅತಿ ಕಡಿಮೆ ಮತಗಟ್ಟೆ ಹೊಂದಿರುವ ಜಿಲ್ಲೆ ಎಂದರು.

173 ಅಂತಾರಾಜ್ಯ ಗಡಿ ಚೆಕ್‌ಪೋಸ್ಟ್: ಚುನಾವಣೆ ಅಕ್ರಮ ತಡೆಯಲು ಆಯೋಗವು ಸಕಲ ಸಿದ್ಧತೆಗಳನ್ನು ಕೈಗೊಂಡಿದ್ದು, ರಾಜ್ಯದಲ್ಲಿ ಒಟ್ಟು 943 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಈ ಪೈಕಿ 171 ಚೆಕ್‌ಪೋಸ್ಟ್

ಗಳು ಅಂತರರಾಜ್ಯ ಗಡಿ ಚೆಕ್ ಪೋಸ್ಟ್‌ಗಳಾಗಿವೆ. ವಿಧಾನಸಭೆ ಚುನಾವಣೆಗೆ 2,040 ಫ್ಲೈಯಿಂಗ್ ಸ್ಕ್ವಾಡ್ ತಂಡಗಳು, 2,605 ಸ್ಥಿರ ಕಣ್ಣಾವಲು, 266 ವಿಡಿಯೋ ವೀಕ್ಷಣೆ ತಂಡ, 631 ವಿಡಿಯೋ ಕಣ್ಗಾವಲು ತಂಡ ಮತ್ತು 225 ಲೆಕ್ಕಪರಿಶೋಧಕ ತಂಡಗಳನ್ನು ನಿಯೋಜಸಲಾಗಿದೆ.

3.51 ಲಕ್ಷ ಸಿಬ್ಬಂದಿ ನಿಯೋಜನೆ: ಚುನಾವಣಾ ಕಾರ್ಯಕ್ಕಾಗಿ ರಾಜ್ಯದೆಲ್ಲೆಡೆ 3.51 ಲಕ್ಷ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಇದನ್ನು ಹೊರತುಪಡಿಸಿ 17,276 ಮಂದಿ ಸೂಕ್ಷ್ಮ ವೀಕ್ಷಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಚುನಾವಣಾ ಸಿಬ್ಬಂದಿ ಪೈಕಿ ಈಗಾಗಲೇ ಹಲವರಿಗೆ ತರಬೇತಿ ನೀಡಲಾಗಿದ್ದು, ಉಳಿದವರಿಗೆ ಶೀಘ್ರ ತರಬೇತಿ ನೀಡಲಾಗುತ್ತದೆ. 224 ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗಳಿಗೆ ತರಬೇತಿ ಪೂರ್ಣ ಆಗಿದೆ.

ಶಾಶ್ವತ ಮೂಲ ಸೌಕರ್ಯ: ರಾಜ್ಯದ 58,282 ಮತಗಟ್ಟೆಗಳಲ್ಲಿ ಎಲ್ಲ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಮತಗಟ್ಟೆಗಳಲ್ಲಿ ಶಾಶ್ವತವಾಗಿ ಮೂಲಸೌಕರ್ಯ ಕಲ್ಪಿಸಿರುವ ರಾಜ್ಯಗಳ ಪೈಕಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿವೆ. ಚುನಾವಣೆ ಸಮಯದಲ್ಲಿ ಮಾತ್ರ ಮೂಲಸೌಕರ್ಯ ಕಲ್ಪಿಸಲಾಗುತ್ತದೆ. ಆದರೆ, ಇದೇ ಮೊದಲ ಬಾರಿಗೆ ಮತಗಟ್ಟೆಗಳಲ್ಲಿ ಶಾಶ್ವತ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಕ್ಯಾಂಪ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್, ಶೌಚಾಲಯ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಬುಡಕಟ್ಟು ಜನರಿಗೆ 40 ಮತಗಟ್ಟೆ: ಈ ಬಾರಿ ಯಾರೂ ಮತದಾನದಿಂದ ವಂಚಿತರಾಗಬಾರದು ಎಂದು ಬುಡಕಟ್ಟು ಸಮುದಾಯಗಳನ್ನು ಮತದಾನಕ್ಕೆ ಶೇ.100ರಷ್ಟು ನೋಂದಣಿ ಮಾಡಿಸಲು ಚುನಾವಣಾ ಆಯೋಗ ಕ್ರಮ ಕೈಗೊಂಡಿದೆ. ಅವರಿಗಾಗಿಯೇ 40 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸುವುದಾಗಿ ಚುನಾವಣಾ ಆಯೋಗ ಪ್ರಕಟಿಸಿದೆ.

ನಗರದಲ್ಲಿ ವಿಶೇಷ ಜಾಗೃತಿ: ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲೇ ಕಡಿಮೆ ಮತದಾನವಾಗುತ್ತದೆ. 2019ರ ಲೋಕಸಭೆ ಚುನಾವಣೆಯಲ್ಲಿ ಅತಿ ಕಡಿಮೆ ಮತದಾನವಾದ 20 ಕ್ಷೇತ್ರಗಳಲ್ಲಿ 9 ಕ್ಷೇತ್ರಗಳು ನಗರ ಪ್ರದೇಶಗಳಲ್ಲಿದ್ದವು. ಇತ್ತೀಚಿನ ಗುಜರಾತ್ ಚುನಾವಣೆಯಲ್ಲೂ ಇದೇ ಟ್ರೆಂಡ್ ಕಂಡಿದೆ. ಹೀಗಾಗಿ ನಗರ ಪ್ರದೇಶಗಳಲ್ಲಿ ಈ ಬಾರಿ ವಿವಿಧ ಸಂಘ ಸಂಸ್ಥೆಗಳು, ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳನ್ನು ಬಳಸಿಕೊಂಡು ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಶಾಲಾ, ಕಾಲೇಜುಗಳಲ್ಲೂ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ವೇಳಾಪಟ್ಟಿ	
ಏಪ್ರಿಲ್ 13	ಅಧಿಸೂಚನೆ
ಏಪ್ರಿಲ್ 20	ನಾಮಪತ್ರ ಸಲ್ಲಿಕೆಗೆ ಕೊನೆ ದಿನ
ಏಪ್ರಿಲ್ 21	ನಾಮಪತ್ರಗಳ ಪರಿಶೀಲನೆ
ಏಪ್ರಿಲ್ 24	ವಾಪಸಿಗೆ ಕಡೆ ದಿನ
ಮೇ 10	ಮತದಾನ
ಮೇ 13	ಫಲಿತಾಂಶ

ವಿಧಾನಸಭೆ ಹಾಲಿ ಬಲ	
ಒಟ್ಟು	**225**
ಬಿಜೆಪಿ	117
ಕಾಂಗ್ರೆಸ್	69
ಜೆಡಿಎಸ್	32
ಬಿಎಸ್‌ಪಿ	01
ಪಕ್ಷೇತರ	02
ಸ್ಪೀಕರ್	01
ನಾಮನಿರ್ದೇಶನ	01
ತೆರವಾಗಿರುವ ಸ್ಥಾನ	02

ಬುಧವಾರದಂದು ಮತ: ಪ್ರಮಾಣ ಹೆಚ್ಚಿಸುವ ಗುರಿ

ವಾರದ ಆರಂಭ ಅಥವಾ ವಾರಾಂತ್ಯದಲ್ಲಿ ಮತದಾನ ದಿನ ನಿಗದಿ ಮಾಡಿ, ಸಾರ್ವತ್ರಿಕ ರಜೆ ಘೋಷಣೆ ಮಾಡಿದರೆ ಹೆಚ್ಚಿನ ಮತದಾರರು ಪ್ರವಾಸಕ್ಕೆ ಹೋಗಿಬಿಡುತ್ತಾರೆ. ಇದರಿಂದ ಮತದಾನ ಪ್ರಮಾಣ ಕುಂಠಿತವಾಗುತ್ತದೆ ಎಂಬ ಕಾರಣಕ್ಕೆ ಈ ಬಾರಿ ಆಯೋಗ ವಾರದ ಮಧ್ಯ ಭಾಗವಾದ ಬುಧವಾರದಂದು ಮತದಾನ ನಿಗದಿಪಡಿಸಿದೆ.

ರೂ. 80 ಕೋಟಿ ಮೌಲ್ಯದ ನಗದು, ಗಿಫ್ಟ್‌ಗಳು ವಶ

ನೀತಿ ಸಂಹಿತೆ ಜಾರಿಗೆ ಬರುವ ಮೊದಲೇ ಕರ್ನಾಟಕದಲ್ಲಿ ರೂ.80 ಕೋಟಿ ನಗದು ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. 2018ರ ಚುನಾವಣೆ ಅವಧಿಯಲ್ಲಿ ವಶಪಡಿಸಿಕೊಂಡಿದ್ದಕ್ಕಿಂತ ಅಧಿಕ ಮೊತ್ತ ರಾಜ್ಯದಲ್ಲಿ ಚುನಾವಣೆ ಘೋಷಣೆಗೂ ಮೊದಲೇ ವಶವಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದ್ದಾರೆ. ಈ ನಡುವೆ, ನೀತಿ ಸಂಹಿತೆ ಜಾರಿಯಾದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆ ತೀವ್ರಗೊಳಿಸಲಾಗಿದೆ.

ಪಕ್ಷಗಳ ಪೋಸ್ಟರ್ ತೆರವು

ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾದ ಅಧಿಕಾರಿಗಳು ರಾಜಕೀಯ ಪಕ್ಷಗಳು, ರಾಜಕಾರಣಿಗಳಿಗೆ ಸಂಬಂಧಿಸಿದ ಪೋಸ್ಟರ್, ಬ್ಯಾನರ್, ಜಾಹೀರಾತು ಫಲಕಗಳು, ಕಟೌಟ್, ಗೋಡೆಬರಹಗಳನ್ನು ತೆರವುಗೊಳಿಸುವ ಕೆಲಸ ಆರಂಭಿಸಿದ್ದಾರೆ.

ಸರ್ಕಾರಿ ಕಾರು ವಾಪಸ್

ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಸಚಿವರು ತಮ್ಮ ಕಾರುಗಳನ್ನು ಅಧಿಕಾರಿಗಳಿಗೆ ಮರಳಿಸಿ, ಖಾಸಗಿ ಕಾರಿನಲ್ಲಿ ಸಂಚಾರ ಆರಂಭಿಸಿದರು. ಸಚಿವ ಕೆ.ಸಿ.ನಾರಾಯಣಗೌಡ ಅವರು ತೆಂಗಿನಕಾಯಿ ಒಡೆದು, ಪೂಜೆ ಸಲ್ಲಿಸಿ ಸರ್ಕಾರಿ ಕಾರಿಗೆ 'ಬೀಳ್ಕೊಡುಗೆ' ನೀಡಿದರು.

ಹೆಚ್ಚು ಇವಿಎಂ

ರಾಜ್ಯದಲ್ಲಿನ 58,282 ಮತಗಟ್ಟೆಗಳಿಗೆ ಅಗತ್ಯಕ್ಕಿಂತ ಹೆಚ್ಚು ಇವಿಎಂ ಯಂತ್ರಗಳು ಲಭ್ಯ ಇವೆ. 1,15,709 ಬ್ಯಾಲೆಟ್ ಯೂನಿಟ್ ಇದ್ದು, 82,543 ಕಂಟ್ರೋಲ್ ಯೂನಿಟ್ ಮತ್ತು 89,379 ವಿವಿಪ್ಯಾಟ್‌ಗಳನ್ನು ಬಳಕೆ ಮಾಡಲಾಗುತ್ತಿದೆ. ಹೈದರಾಬಾದ್‌ನಿಂದ ಕೆಲವು ಇವಿಎಂ ಗಳನ್ನು ತರಿಸಲಾಗಿದ್ದು, ರಾಜ್ಯದ ಚುನಾವಣೆಯಲ್ಲಿ ಅವುಗಳನ್ನು ಬಳಕೆ ಮಾಡಲಾಗುತ್ತಿದೆ.

40 ಲಕ್ಷ ರು. ವೆಚ್ಚದ ಮಿತಿ

ಅಭ್ಯರ್ಥಿಗಳಿಗೆ ಆಯೋಗವು ವೆಚ್ಚದ ಮಿತಿ ನಿಗದಿಗೊಳಿಸಿದ್ದು, ಪ್ರತಿ ಅಭ್ಯರ್ಥಿಗಳು 740ಲಕ್ಷ ವರೆಗೆ ಚುನಾವಣಾ ವೆಚ್ಚವನ್ನು ಮಾಡಬಹುದಾಗಿದೆ. ಅಭ್ಯರ್ಥಿಗಳು ವೆಚ್ಚ ಮಾಡುವ ಮೊತ್ತದ ಮೇಲೆ ನಿಗಾವಹಿಸಲು 234 ಸಹಾಯಕ ವೆಚ್ಚ ವೀಕ್ಷಕರನ್ನು ನೇಮಕ ಮಾಡಲಾಗಿದೆ.

ತೃತೀಯ ಲಿಂಗಿಗಳು ಬಯಸಿದ ಲಿಂಗದಡಿ ನೋಂದಣ

'ತೃತೀಯ ಲಿಂಗಿಗಳು ಮತದಾನ ಪ್ರಕ್ರಿಯೆಯಲ್ಲಿ ಹೆಚ್ಚೆಚ್ಚು ಪಾಲ್ಗೊಳ್ಳುವಂತೆ ಪ್ರೋತ್ಸಾಹ ನೀಡಲು ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಕೆಲವು ತೃತೀಯ ಲಿಂಗಿಗಳು 'ತೃತೀಯ ಲಿಂಗಿ' ಎಂದು ನೋಂದಣಿ ಮಾಡಿಕೊಳ್ಳಲು ಬಯಸುವುದಿಲ್ಲ. ಅಂತಹವರಿಗೆ ಈ ಬಾರಿ ಅವರು ಇಚ್ಛಿಸಿದ ಲಿಂಗದ ಅಡಿ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತದೆ' ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದ್ದಾರೆ. ಅದರೆ ತೃತೀಯ ಲಿಂಗಿಗಳು ಕೂಡ 'ಗಂಡು' ಅಥವಾ 'ಹೆಣ್ಣು' ಕಾಲಂನಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು.

ಆಧಾರ: ಕನ್ನಡ ಪ್ರಭ, ದಿನಾಂಕ: 30.03.2023

59. ಹಣದ ಬಲ ತಡೆಯುವುದು ಸವಾಲು: ಆಯೋಗ

ವಿಧಾನಸಭೆ ಚುನಾವಣೆಯ ಸಮಯದಲ್ಲಿ ಹಣದ ಬಲ ತಡೆಯುವುದು ದೊಡ್ಡ ಸವಾಲು ಎಂದು ಕೇಂದ್ರ ಚುನಾವಣಾ ಆಯೋಗ ಹೇಳಿದೆ. ರಾಜ್ಯದಲ್ಲಿ ಮತದಾರರ ಮೇಲೆ ಪ್ರಭಾವ ಬೀರುವ ಚಟುವಟಿಕೆಗಳ ಮೇಲೆ ನಿಗಾ ಇಟ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದಿದೆ.

ರಾಜ್ಯದ ಚುನಾವಣಾ ಸಿದ್ಧತೆ ಕುರಿತು ಪರಿಶೀಲಿಸಲು ಕೇಂದ್ರ ಚುನಾವಣಾ ಆಯೋಗವು ಕರ್ನಾಟಕಕ್ಕೆ ಇತ್ತೀಚೆಗೆ ಭೇಟಿ ನೀಡಿತ್ತು. ಹಣ ಬಲದ ಬಳಕೆ ಬಗ್ಗೆ ಕೆಲವು ರಾಜಕೀಯ ಪಕ್ಷಗಳು ದೂರು ನೀಡಿದ್ದವು. ಚುನಾವಣಾ ಸಂದರ್ಭದಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಅಪಾರ ಪ್ರಮಾಣದ ಹಣ ಬಳಸುತ್ತಿರುವುದು ಆಯೋಗದ ಗಮನಕ್ಕೂ ಬಂದಿದೆ ಎಂದು ಮುಖ್ಯ ಚುನಾವಣಾ ಅಯುಕ್ತ ರಾಜೀವ್ ಕುಮಾರ್ ತಿಳಿಸಿದರು.

ರಾಜ್ಯದಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಾಗಿರುವುದು ಬುಧವಾರದಿಂದ. ಆದರೆ, ಅಧಿಕಾರಿಗಳು ಕಟ್ಟೆಚ್ಚರವಹಿಸಿ ಅನೇಕ ಅಕ್ರಮಗಳಿಗೆ ತಡೆ ಒಡ್ಡಿದ್ದಾರೆ. ಕೆಲವು ದಿನಗಳಲ್ಲೇ 758 ಕೋಟಿ ಮೊತ್ತದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಹೇಳಿದರು.

'ಮತದಾರರಿಗೆ ಹಣ ಮತ್ತಿತರ ಆಮಿಷ ನೀಡುವುದನ್ನು ತಡೆಗಟ್ಟಲು ಆಯೋಗ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇಂತಹ ಕೃತ್ಯಗಳ ಮೇಲೆ ನಿಗಾ ಇಡಲು 2,400 ವಿಚಕ್ಷಣಾ ತಂಡಗಳನ್ನು ರಚಿಸಲಾಗುತ್ತದೆ. ರಾಜ್ಯದ 19 ಜಿಲ್ಲೆಗಳಲ್ಲಿ ಅಂತರ್‌ರಾಜ್ಯದ ಗಡಿಗಳು ಇಲ್ಲಿ 171 ಅಂತರರಾಜ್ಯದ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗುತ್ತದೆ. ವಾಣಿಜ್ಯ ತೆರಿಗೆ, ಅರಣ್ಯ, ಅಬಕಾರಿ ಸೇರಿದಂತೆ ಹಲವು ಇಲಾಖೆಗಳ ಶಾಶ್ವತ ಚೆಕ್‌ಪೋಸ್ಟ್‌ಗಳು ನಿಗಾ ಇಡಲಿವೆ' ಎಂದು ಅವರು ಮಾಹಿತಿ ನೀಡಿದರು.

ಗುಜರಾತ್, ಹಿಮಾಚಲ ಪ್ರದೇಶ ಹಾಗೂ ಈಶಾನ್ಯ ರಾಜ್ಯಗಳ ವಿಧಾನಸಭಾ ಚುನಾವಣೆ ಮೇಲೆ ಹೆಚ್ಚಿನ ನಿಗಾ ವಹಿಸಿದ್ದರಿಂದ ರೂ. 1,028 ಕೋಟಿ ಮೊತ್ತದ ಹಣ ಹಾಗೂ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ಇದು ಕಳೆದ ಚುನಾವಣೆಗೆ ಹೋಲಿಸಿದರೆ 23 ಪಟ್ಟು ಹೆಚ್ಚು ಎಂದು ಪ್ರತಿಪಾದಿಸಿದರು.

ರ್‍ಯಾಲಿಯಲ್ಲಿ ಹಣ ಎಸೆದ ಪ್ರಕರಣ ಕ್ರಮದ ಭರವಸೆ: ಚುನಾವಣೆ ವೇಳೆ ಮತದಾರರ ಸೆಳೆಯಲು ಹಣ ಎಸೆಯುವಂತಹ ಘಟನೆಗಳು ಕಂಡು ಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯೋಗ ಎಚ್ಚರಿಸಿದೆ.

ರ್‍ಯಾಲಿಯೊಂದರಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮತದಾರರ ಮೇಲೆ ಹಣ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಈ ಪ್ರತಿಕ್ರಿಯೆ ನೀಡಿದರು.

ಅಭ್ಯರ್ಥಿಗಳು, ಮುಖಂಡರು, ಏಜೆಂಟರ ವಾಹನಗಳು ಅಥವಾ ಮನೆಗಳಲ್ಲಿ ನಗದು, ಉಚಿತ ಕೊಡುಗೆಗಳು ಕಂಡುಬಂದರೆ, ಆ ವ್ಯಕ್ತಿ ಯಾರೇ ಆಗಿದ್ದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಅಧಿಕಾರಿಗಳಿಂದ ಮತಗಟ್ಟೆ ನಿರ್ವಹಣೆ

- ಎಲ್ಲ ಮತಗಟ್ಟೆಗಳು ನೆಲಮಹಡಿಯಲ್ಲಿ ಇರಲಿವೆ. ಅಂಗವಿಕಲರ ಅನುಕೂಲಕ್ಕಾಗಿ ಗಾಲಿ ಕುರ್ಚಿಯೊಂದಿಗೆ ಗಟ್ಟಿಮುಟ್ಟಾದ ರ್‍ಯಾಂಪ್ ನಿರ್ಮಿಸಲಾಗುತ್ತದೆ. ಎಲ್ಲ ಮತಗಟ್ಟೆಗಳಲ್ಲಿ ಶೌಚಾಲಯ, ರ್‍ಯಾಂಪ್, ವಿದ್ಯುತ್, ಕುಡಿಯುವ ನೀರು ಸೇರಿದಂತೆ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.
- ಮಹಿಳಾ ಅಧಿಕಾರಿಗಳು ಹಾಗೂ ಅಂಗವಿಕಲರು ಪ್ರತ್ಯೇಕ ಮತಗಟ್ಟೆಗಳ ನಿರ್ವಹಣೆ ಮಾಡಲಿದ್ದಾರೆ. ಮಹಿಳಾ ಮತಗಟ್ಟೆಯಲ್ಲಿ ಪೊಲೀಸ್, ಭದ್ರತಾ ಸಿಬ್ಬಂದಿ ಸೇರಿದಂತೆ ಎಲ್ಲ

ಸಿಬ್ಬಂದಿ ಮಹಿಳೆಯರೇ ಇರಲಿದ್ದಾರೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ ಒಂದು ಮಾದರಿ ಮತಗಟ್ಟೆಯನ್ನು ಸ್ಥಳೀಯ ವಸ್ತುಗಳನ್ನು, ವಿವಿಧ ಕಲಾಪ್ರಕಾರಗಳನ್ನು ಬಳಸಿ ಅಲಂಕಾರ ಮಾಡಲಾಗುತ್ತದೆ.

- ಜಿಲ್ಲೆಗೆ ಒಂದು ಮತಗಟ್ಟೆಯನ್ನು ಲಭ್ಯವಿರುವ ಅತ್ಯಂತ ಕಿರಿಯ ಉದ್ಯೋಗಿಗಳ ತಂಡ ನಿರ್ವಹಿಸಲಿದೆ. ಇದು ಚುನಾವಣಾ ಆಯೋಗದ ಹೊಸ ಯೋಜನೆ.
- ಚುನಾವಣಾ ವೇಳಾಪಟ್ಟಿ ಘೋಷಣೆಯಾದ ದಿನದಿಂದ ಫಲಿತಾಂಶ ಘೋಷಣೆಯಾಗುವ ದಿನಾಂಕದ ವರೆಗೆ ರಾತ್ರಿ 10ರಿಂದ ಬೆಳಗ್ಗಿನ ಜಾವ 6ರ ವರೆಗೆ ಎಲ್ಲ ರೀತಿಯ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಲಾಗಿದೆ ಎಂದೂ ಅವರು ಹೇಳಿದರು.

80 ವರ್ಷ ದಾಟಿದವರಿಗೆ ಮನೆಯಿಂದಲೇ ಮತ

ಅಂಗವಿಕಲರು, 80 ವರ್ಷ ದಾಟಿದವರು, ಅಗತ್ಯ ಸೇವೆಯ ಉದ್ಯೋಗಸ್ಥರು ಹಾಗೂ ಕೋವಿಡ್ ಬಾಧಿತರು ಅಂಚೆ ಮತದಾನ (ಮನೆಯಿಂದಲೇ ಮತ ಚಲಾಯಿಸಲು ಅವಕಾಶ) ಮಾಡಬಹುದು. ಇದಕ್ಕಾಗಿ ಆಯೋಗದ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲಾಗಿದೆ. ಇವರನ್ನು 'ಗೈರುಹಾಜರಿ ಮತದಾರರು' ಎಂದು ಗುರುತಿಸಲಾಗುತ್ತದೆ. ಈ ಮತದಾರರು ಅಂಚೆ ಮತ ಪತ್ರದ ಮೂಲಕ ಮತ ಚಲಾಯಿಸಲು ಅರ್ಹರು.

ಅಂಚೆ ಮತಪತ್ರದ ಮೂಲಕ ಹಕ್ಕು ಚಲಾಯಿಸಲು ಬಯಸುವವರು ನಮೂನೆ 12ಡಿ ಯಲ್ಲಿ ಅಗತ್ಯವಿರುವ ಎಲ್ಲ ವಿವರಗಳನ್ನು ನೀಡಬೇಕು. ಮತದಾನದ ದಿನಾಂಕಕ್ಕಿಂತ 5 ದಿನಗಳ ಮೊದಲು ಚುನಾವಣಾ ಅಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಅಂಗವಿಕಲರು ನಮೂನೆ 12ಡಿ ಜೊತೆಗೆ ಅಸಾಮರ್ಥ್ಯದ ಪ್ರಮಾಣಪತ್ರ ಸಲ್ಲಿಸಬೇಕು. ಒಂದು ಮತಗಟ್ಟೆ ತಂಡವು ಇಬ್ಬರು ಅಧಿಕಾರಿಗಳನ್ನು ಒಳಗೊಂಡಿದ್ದು, ವಿಡಿಯೋಗ್ರಾಫರ್ ಹಾಗೂ ಭದ್ರತಾ ಸಿಬ್ಬಂದಿಯ ಜೊತೆಗೆ ಮತದಾರನ ಮನೆಗೆ ತೆರಳಿ ಅಂಚೆ ಮತದಾನ ಮಾಡಲು ವ್ಯವಸ್ಥೆ ಕಲ್ಪಿಸುತ್ತದೆ.

ಕರ್ನಾಟಕದಲ್ಲಿ ಮೊದಲ ಬಾರಿಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ: 30.03.2023

ಭಾಗ – 5

ರಾಜ್ಯ ನೆಲ, ಜಲ, ಭಾಷೆ

1. Union Minister Shripad Naik threatens to resign over Mahadayi issue

Union Minister of State for Tourism and North Goa BJP MP Shripad Naik hinted at resigning over the Central Water Commission's (CWC) decision to approver Karnataka's detailed project report(DPR) related to the Kalasa-Banduri project across the Mahadayi river, slamming the central government over the decision.

"Politics is secondary (when it comes to) welfare of people . If needed I will think of resigning, there is absolutely no problem, I give first priority to people 's welfare," Naik told reporters, while speaking about the contentious issue. Naik also said that the decision to approve the DPR was one-sided adding that the Goa government's view whould have been taken on record by the CWC before deciding on the matter.

" The decision of giving approval to Karnataka by CWC, when the matter is pending before the Supreme Court is wrong. This should not have happened.. Mahadayi is the lifeline of Goa. Along with people , wildlife, flora and fauna are also dependent on Mahadayi. There are cases in this regard in the Supreme Court. Despite that CWC gave approval causing injustice to Goa. If this water is deiverted, it will affect us heavily, " he said.

Naik is the tallest BJP leader in the coastal state and has contested the North Goa Parliamentary seat without losing for nearly three decades.

" This is a one sided decision, to which we are opposing .Even the Goa government should take steps to oppose it. We will meet Prime Minister Narendra Modi and Home Minister Amit shah to convince them to withdraw the approval," Naik said, adding that the Goa government would even go to the Supreme Court if need be.

"The Opposition MLAs should come together and support this decision is very wrong. It is a very serious issue. CWC's has not taken Goa into confidence. All Goans should support (to raise voice) to with draw this decision," Naik said, adding that the CWC's error should be corrected.

The Oppostition has already demanded the Chief Minister's resignation on the Mahadayi issue, with the Congress legislature party, leader Yuri Alemao even urging all legislators to resign to foment a constitutional crisis to force the central government into reversing the CWC decision.

Courtesy: Deccan Herald, Dated:01.01.2023.

2. ಕಳಸಾ ತಿರುವು: ಅರಣ್ಯ ಇಲಾಖೆ ಒಪ್ಪಿಗೆ

ಮಹದಾಯಿ ಯೋಜನೆಯ ಕಳಸಾ ನಾಲಾ ತಿರುವು ಯೋಜನೆಗೆ 33.05 ಹೆಕ್ಟೇರ್ ಮೀಸಲು ಅರಣ್ಯವನ್ನು ಬಳಸಿಕೊಳ್ಳಲು ಕರ್ನಾಟಕ ಅರಣ್ಯ ಇಲಾಖೆ ಒಪ್ಪಿಗೆ ನೀಡಿದೆ.

ಮಹದಾಯಿ ನದಿ ನೀರು ವಿವಾದ ನ್ಯಾಯಾಧೀಕರಣವು 2018ರ ಆಗಸ್ಟ್ 14 ರಂದು ಕಳಸಾ–ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿದೆ. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 2.18 ಟಿಎಂಸಿ ಅಡಿ ಮೀಸಲಿಡಲಾಗಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡುವಂತೆ ಕರ್ನಾಟಕ ನೀರಾವರಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದರು.

ಬೆಳಗಾವಿ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಅವರು ಅಕ್ಟೋಬರ್ 19, ಡಿಸೆಂಬರ್ 15 ಹಾಗೂ 20ರಂದು ಸ್ಥಳ ಪರಿಶೀಲನೆ ನಡೆಸಿ ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಅವರಿಗೆ ಹಲವು ಶಿಫಾರಸ್ಸುಗಳು ಹಾಗೂ ಷರತ್ತುಗಳನ್ನು ಒಳಗೊಂಡ ವರದಿ ಸಲ್ಲಿಸಿದ್ದರು. ಬಳಿಕ ಸಿಸಿಎಫ್ ಅವರು ಅರಣ್ಯ ಪಡೆಯ ಮುಖ್ಯಸ್ಥ ರಾಜ್ ಕಿಶೋರ್ ಸಿಂಗ್ ಅವರಿಗೆ ವರದಿ ನೀಡಿದ್ದರು. ಈ ವರದಿಯ ಆಧಾರದಲ್ಲಿ ರಾಜ್ ಕಿಶೋರ್ ಸಿಂಗ್ ಅವರು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಜಾವೇದ್ ಅಖ್ತರ್ ಅವರಿಗೆ ವರದಿ ಸಲ್ಲಿಸಿದ್ದಾರೆ.

ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್ 2 ಅಡಿಯಲ್ಲಿ ಈ ಅರಣ್ಯ ಬಳಕೆಗೆ ಒಪ್ಪಿಗೆ ನೀಡುವಂತೆ ಪರಿಸರ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯ ಉಪ ಮಹಾನಿರ್ದೇಶಕರಿಗೆ (ಕೇಂದ್ರ) ಪ್ರಸ್ತಾವನೆ ಸಲ್ಲಿಸಿದ್ದಾರೆ.

40 ಹೆಕ್ಟೇರ್‌ಗಿಂತ ಕಡಿಮೆ ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಪರಿಸರ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯಿಂದ ಅನುಮತಿ ಪಡೆದರೆ ಸಾಕು. ಹೀಗಾಗಿ, ಕಳಸಾ ಹಾಗೂ ಬಂಡೂರಿ ಯೋಜನೆಗೆ ಪ್ರತ್ಯೇಕವಾಗಿ ಪ್ರಸ್ತಾವನೆಗಳನ್ನು ಪ್ರಾದೇಶಿಕ ಕಚೇರಿಗೆ ಸಲ್ಲಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ಬಂಡೂರಿ ಯೋಜನೆಯ ಪ್ರಸ್ತಾವವನ್ನು ಪ್ರಾದೇಶಿಕ ಕಚೇರಿಗೆ ಸಲ್ಲಿಸಲಾಗುವುದು. ಪ್ರಾದೇಶಿಕ ಕಚೇರಿಯಿಂದ ತಿಂಗಳೊಳಗೆ ಒಪ್ಪಿಗೆ ಸಿಗುವ ವಿಶ್ವಾಸ ಇದೆ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.

33 ಹೆಕ್ಟೇರ್ ನಲ್ಲಿ 11,240 ಮರಗಳು:

ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಿರುವ ಮೀಸಲು ಅರಣ್ಯದಲ್ಲಿ ವಿವಿಧ ಜಾತಿಯ 11,240 ಮರಗಳಿವೆ ಎಂದು ಡಿಸಿಎಫ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

- ಅರಣ್ಯದ ಸುತ್ತಮುತ್ತ ಹುಲಿ, ಚಿರತೆ, ಕರಡಿ, ಜಿಂಕೆ ಸೇರಿದಂತೆ ಹಲವು ಪ್ರಾಣಿಗಳಿವೆ. ಇಲ್ಲಿ ಅಪರೂಪದ ಹಾಗೂ ಅಳಿವಿನಂಚಿನಲ್ಲಿರುವ ಮರ ಗಿಡಗಳು ಇವೆ.
- ಅರಣ್ಯವು ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಧಾಮ, ಹುಲಿ ಸಂರಕ್ಷಿತ ಪ್ರದೇಶ, ಆನೆ ಕಾರಿಡಾರ್, ವನ್ಯಜೀವಿ ವಲಸೆ ಕಾರಿಡಾರ್‌ನ ಭಾಗ ಅಲ್ಲ.
- ಈ ಯೋಜನೆಯು ಭೀಮಘಡ ವನ್ಯಜೀವಿ ಧಾಮದಿಂದ 5–6 ಕಿ.ಮೀ ದೂರದಲ್ಲಿದೆ.
- ಅರಣ್ಯ ಸಂರಕ್ಷಣಾ ಕಾಯ್ದೆ 1980 ಅಡಿಯಲ್ಲಿ ಯಾವುದೇ ಉಲ್ಲಂಘನೆ ಆಗಿಲ್ಲ.

- ಇಲ್ಲಿ ರಕ್ಷಣಾ ಭೂಮಿ, ಪುರಾತತ್ವ ಹಾಗೂ ಪಾರಂಪರಿಕ ತಾಣ ಇಲ್ಲ.
- ಈ ಯೋಜನೆಗಾಗಿ ಬೇಕಿರುವ ಅರಣ್ಯ ಭೂಮಿ ಕನಿಷ್ಠ ಪ್ರಮಾಣದ್ದು.

ಆಧಾರ: ಪ್ರಜಾವಾಣಿ, ದಿನಾಂಕ:02.01.2023.

3. ತಿಂಗಳಲ್ಲಿ ಮಹದಾಯಿಗೆ ಚಾಲನೆ

ರಾಜ್ಯದ ಪಾಲಿಗೆ ಶಾಸನ ಬದ್ಧವಾಗಿ ಸಿಕ್ಕಿರುವ ನೀರನ್ನು ಬಳಸಿಕೊಳ್ಳಲು ಯಾವ ದೊಣ್ಣೆ ನಾಯಕ ಅಪ್ಪಣೆಯೂ ಬೇಕಾಗಿಲ್ಲ. ಒಂದು ತಿಂಗಳೊಳಗೆ ಕಳಸಾ–ಬಂಡೂರಿ ನಾಲಾ ತಿರುವು ಯೋಜನೆ ಕಾಮಗಾರಿ ಆರಂಭಿಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಪ್ರಕಟಿಸಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹದಾಯಿ ನದಿಯಿಂದ ಕುಡಿಯುವ ನೀರಿಗಾಗಿ ನ್ಯಾಯಧೀಕರಣ ರಾಜ್ಯಕ್ಕೆ ಹಂಚಿಕೆ ಮಾಡಿರುವ ಪಾಲನ್ನು ಬಳಸಿಕೊಳ್ಳಲು ಯಾರೋಬ್ಬರ ಅಪ್ಪಣೆಯೂ ಬೇಕಿಲ್ಲ ಎಂದರು.

ನ್ಯಾಯಾಧೀಕರಣ ರಾಜ್ಯದ ಪಾಲನ್ನು ನಿರ್ಧರಿಸಿದ ಬಳಿಕವೂ, ಕುಡಿಯುವ ನೀರಿನ ಯೋಜನೆಗೆ ಗೋವಾ ತಕರಾರು ಎಷ್ಟು ಸರಿ" ಎಂದು ಪ್ರಶ್ನಿಸಿದರು.

ಒಂದು ವರ್ಷದೊಳಗೆ ಕಾಮಗಾರಿ ಪೂರ್ಣ ಗೊಳಿಸಿ, ಆ ಭಾಗದ ಜನರ ದಶಕಗಳ ಕನಸನ್ನು ಸಾಕಾರ ಮಾಡಲಾಗವುದು. ಈ ವಿಚಾರದಲ್ಲಿ ಸರ್ಕಾರ ಬದ್ಧತೆಯಿಂದ ನಡೆದು ಕೊಳ್ಳಲಿದೆ ಎಂದು ಸ್ಪಷ್ಟ ಪಡಿಸಿದರು.

ಕಾಂಗ್ರೆಸ್ ತಿರುಗೇಟು: ಮಹದಾಯಿ ಯೋಜನೆಗಾಗಿ ಕಾಂಗ್ರೆಸ್‌ನವರು ಹುಬ್ಬಳ್ಳಿ ಭಾಗದಲ್ಲಿ ಹೊರಾಟ ಆರಂಭಿಸಿದ್ದಾರೆ. ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹುಬ್ಬಳ್ಳಿ–ಧಾರವಾಡ ಭಾಗದ ಜನರು 1080 ದಿನ ಹೋರಾಟ ಮಾಡಿದ್ದರು. ಹೋರಾಟಗಾರರ ಮೇಲೆ ಪೊಲೀಸ್ ದೌರ್ಜನ್ಯ ನಡೆಸಿ ಜೈಲಿಗೆ ಕಳಿಸುವ ಕೆಲಸವನ್ನು ಹಿಂದಿನ ಕಾಂಗ್ರೆಸ್ ಸರ್ಕಾರ ಮಾಡಿತ್ತು. ಜೊತೆಗೆ ಈ ಹಿಂದೆ ಗೋವಾ ಚುನಾವಣೆ ಸಂದರ್ಭದಲ್ಲಿ ಸೋನಿಯಾ ಗಾಂಧಿ ಅವರು ಮಹದಾಯಿ ನದಿ ನೀರನ್ನು ಕರ್ನಾಟಕಕ್ಕೆ ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದರು. ಆ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ನಾಯಕರು ತುಟಿ ಬಿಚ್ಚಿರಲಿಲ್ಲ. ಈಗ ಯೋಜನೆ ಜಾರಿಯಾಗುತ್ತಿರುವ ಹಂತದಲ್ಲಿ ಕಾಂಗ್ರೆಸ್ ಹೋರಾಟ ಆರಂಭಿಸಿರುವುದು ಹಾಸ್ಯಾಸ್ಪದವಾಗಿದೆ," ಎಂದರು.

"ಜಲ ಆಯೋಗದ ಸಮೀಕ್ಷೆಯಂತೆ ಮಹದಾಯಿ ನದಿಯಲ್ಲಿ ಸುಮಾರು 188 ಟಿಎಂಸಿ ಅಡಿ ನೀರು ಲಭ್ಯವಿದೆ. ಈ ಪೈಕಿ ಕಳಸಾ–ಬಂಡೂರಿ ನಾಲಾ ತಿರುವು ಯೋಜನೆ ಮೂಲಕ ಕುಡಿಯುವ ನೀರಿಗೆ 3.90ಟಿಎಂಸಿ ಅಡಿ ನೀರು ಹಂಚಿಕೆಯಾಗಿದೆ. ಈ ಯೋಜನೆಗಾಗಿ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು 2020 ಮೇ 22 ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿತ್ತು. ಕಳೆದ ನವೆಂಬರ್ 25 ರಂದು ರೂ.764 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿತ್ತು. ಡಿಸೆಂಬರ್ 29 ರಂದು ಡಿಪಿಆರ್‌ಗೆ ಅನುಮೋದನೆ ದೊರಕಿದ್ದು, ಯೋಜನೆ ಅನುಷ್ಠಾನಕ್ಕೆ ಯಾವ ತೊಂದರೆಯೂ ಇಲ್ಲ" ಎಂದು ಸ್ಪಷ್ಟಪಡಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:03.01.2023.

4. ಭದ್ರಾ ಮೇಲ್ದಂಡೆಗೆ ರೂ. 5,300 ಕೋಟಿ

ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ರೂ. 5,300 ಕೋಟಿ ಅನುದಾನ ಪ್ರಕಟಿಸಲಾಗಿದೆ.

"ಈ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳಿಗೆ ಸೂಕ್ಷ್ಮ ನೀರಾವರಿ ಮೂಲಕ ಸೌಲಭ್ಯ ಕಲ್ಪಿಸಲಾಗುತ್ತದೆ.

ತುಂಗಾ ನದಿಯಿಂದ 17.40 ಟಿಎಂಸಿ ಅಡಿ ನೀರನ್ನು ಎರಡು ಹಂತಗಳಲ್ಲಿ ಲಿಫ್ಟ್ ಮಾಡಿ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆ. ಅಲ್ಲಿಂದ 29.90 ಟಿಎಂಸಿ ಅಡಿ ನೀರನ್ನು ಎರಡು ಹಂತಗಳಲ್ಲಿ ಲಿಫ್ಟ್ ಮಾಡಿ ಅಜ್ಜಂಪುರ ಸುರಂಗದವರೆಗೆ ಕೊಂಡೊಯ್ಯಲಾಗುತ್ತದೆ. ಬಳಿಕ ಚಿತ್ರದುರ್ಗ ಶಾಖಾ ಕಾಲುವೆ ಮತ್ತು ತುಮಕೂರು ಶಾಖಾ ಕಾಲುವೆಗಳಿಗೆ ನೀರು ಹರಿಸಲಾಗುತ್ತದೆ. ಈ ಯೋಜನೆಗಾಗಿ ನಾಲ್ಕು ಸ್ಥಳಗಳಲ್ಲಿ ನೀರು ಲಿಫ್ಟ್ ಮಾಡಲಾಗುತ್ತದೆ. ಈ ಯೋಜನೆಗೆ ಒಟ್ಟಾರೆ 7,720 ಎಕರೆಯ ಭೂಸ್ವಾಧೀನ ಮಾಡಬೇಕಿದ್ದು, ಇಲ್ಲಿವರೆಗೆ 3,922 ಎಕರೆಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚ ರೂ. 21,473 ಕೋಟಿ. ಕೇಂದ್ರ ಸರ್ಕಾರದಿಂದ ರೂ.9,675. ಕೋಟಿ ನೀಡಲು ಜಲಶಕ್ತಿ ಸಚಿವಾಲಯದ ಉನ್ನತಾಧಿಕಾರ ಸಮಿತಿ ಈಗಾಗಲೇ ಒಪ್ಪಿಗೆ ನೀಡಿದೆ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. ಈ ಯೋಜನೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ಸಿಗಲು ಕೇಂದ್ರ ಸರ್ಕಾರದ ಸಚಿವ ಸಂಪುಟದ ಅನುಮೋದನೆ ಬಾಕಿ ಇದೆ.

ಈ ಯೋಜನೆಯ ರೂ. 13,507 ಕೋಟಿ ಮೊತ್ತದ ಕಾಮಗಾರಿಗಳನ್ನು ಗುತ್ತಿಗೆ ನೀಡಲಾಗಿದೆ. ಡಿಸೆಂಬರ್ ಅಂತ್ಯದ ವರೆಗೆ 6,717 ಕೋಟಿಯ ಅರ್ಥಿಕ ಪ್ರಗತಿ ಸಾಧಿಸಲಾಗಿದೆ.

ಯೋಜನೆಯ ಪ್ರಮುಖ ಅಂಶಗಳು	
ಫಲಾನುಭವಿ ಜಿಲ್ಲೆಗಳು: ಚಿಕ್ಕಮಗಳೂರು (ತರೀಕೆರೆ, ಕಡೂರು), ಚಿತ್ರದುರ್ಗ (ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲುರು), ದಾವಣಗೆರೆ (ಜಗಳೂರು) ತುಮಕೂರು (ಚಿಕ್ಕನಾಯನಹಳ್ಳಿ, ಪಾವಗಡ, ಶಿರಾ)	
ನದಿ	**ತುಂಗಾ ಮತ್ತು ಭದ್ರಾ/ಕೃಷ್ಣಾ ಕಣವೆ**
ಫಲಾನುಭವಿ ಗ್ರಾಮಗಳು	787
ಪ್ರಯೋಜನ ಪಡೆಯುವ ಜನಸಂಖ್ಯೆ	74.26 ಲಕ್ಷ
ಹನಿ ನೀರಾವರಿಗೆ	21.90 ಟಿಎಂಸಿ ಅಡಿ
ಕೆರೆಗಳನ್ನು ತುಂಬಿಸಲು	6 ಟಿಎಂಸಿ ಅಡಿ
ವಾಣಿವಿಲಾಸ ಸಾಗರ ಜಲಾಶಯಕ್ಕೆ	2 ಟಿಎಂಸಿ ಅಡಿ
ನೀರಾವರಿಗೆ ಒಳಪಡುವ ಪ್ರದೇಶ	2,25,515 ಹೆಕ್ಟೇರ್
ನೀರನ್ನು ತುಂಬಿಸುವ ಕೆರೆಗಳ ಸಂಖ್ಯೆ	367

ಆಧಾರ: ಪ್ರಜಾವಾಣಿ, ದಿನಾಂಕ: 02.02.2023

5. Mahadayi: Supreme Court refuses to stay Karnataka's Project

The Supreme Court refused to restrain Karnataka from the implementation of the Mahadayi diversion project based on the Central Water Commission's latest approval.

A bench of Justices Sanjiv Khanna and M M Sundresh disposed of a plea by Goa to issue orders to Karnataka from going ahead with the project.

The court, however, asked Karnataka to take all statutory clearance before going ahead with the project.

The Goa government challenged the Central Water Commission's (CWC) latest nod given to the Karnataka government's revised detailed project report (DPR) for the Mahadayi diversion scheme.

Goa said that if Karnataka goes ahead with the project, it would lead to the large- scale destruction of forests in the ecologically-rich Western Ghats.

The Karnataka government last year submitted a revised proposal about the Mahadayi project which involved the diversion of Mahadayi river water through Kalasa and Banduri Nala. The project received approval from the Central Water Commission recently.

However, the Goa government's pleas to challenge the Mahadayi Water Dispute Tribunal’s final award are still pending, the Supreme Court is expected to hear the petition soon.

The Mahadayi project proposes to supply drinking water to parched areas of Belagavi, Hubballi-Dharwad districts and surrounding areas.

However, Goa has been opposing the project saying that the diversion of river water would dry up the Mahadayi (also called Mandovi) river, the lifeline of the state.

Goa Chief Minister Pramod Sawant welcomed the Supreme Court's order.

According to the apex court, Karnataka still cannot carry out diversion of the river water until all requisite permissions required to build the infrastructure for the project are obtained, he said.

Courtesy: Deccan Herald, dt: 14.02.2023

6. Polls nearing, Centre okays Kalasa-Banduri project

Chief Minister Basavaraj Bommai announced in the Assembly that the Union government has approved Karnataka's detailed project report (DPR) on the Kalasa-Banduri (Mahadayi) project, which was opposed by Goa.

"This is Prime Minister Narendra Modi's gift to North Karnataka. And this sweet news has come during the legislature session happening in Belagavi," Bommai said in the Assembly. "This is a long-pending project in North Karnataka for which agitations were on for the last 3-4 decades," he added.

The Central Water Commission's nod comes four months ahead of Assembly polls. The project was a key promise the BJP had made during 2018 elections. Karnataka wants to use Mahadayi river water from its tributaries Kalasa and Banduri to the drought-hit districts of North Karnataka. The government will use 3.9 tmc water-2.18 tmc from Banduri and 1.72 tmc from Kalasa river canals for drinking water purposes.

"After Goa interjected, it became an inter-state dispute. A tribunal was formed in 2010 and its verdict came out in 2018. While we didn't get the full quantum of water, the tribunal gave us permission to divert the waters," Bommai said. "We submitted a pre-feasibility report and then the DPR. After several queries and clarifications, the Modi administration has accepted our DPR. Now, our dream is going to be realised," Bommai said.

"More importantly, the Union government has said that our DPR is acceptable from hydrology and inter-state aspects," he underlined. With the DPR approved, Bommai told the Assembly that the government would start the next process.

"We will take up tender and other processes so that work on the project can start soon. We will lay the foundation stone for the pump house to give confidence to the people of North Karnataka," he said.

'Finally woken up'

The Congress had scheduled a rally on the Mahadayi project on January 2 in Hubballi. This has "finally woken up" the Modi administration, AICC general secretary Randeep Singh Surjewala said, adding that it was "too little, too late. Surjewala promised that the Congress would ensure 3.9 tmc water from Mahadayi to 59 lakh people in Belagavi and Hubballi-Dharwad.

"The Congress government will allocate Rs. 500 crore in the first Cabinet meeting, allocate Rs. 3000 crore and execute Mahadayi river diversion projects in record time," he said.

Courtesy: Deccan Herald, dt: 30.02.2023

7. ಜಲಶಕ್ತಿ ಅಭಿಯಾನದಲ್ಲಿ ರಾಜ್ಯಕ್ಕೆ 2ನೇ ಸ್ಥಾನ

ಕೇಂದ್ರ ಸರ್ಕಾರದ 'ಜಲಶಕ್ತಿ ಅಭಿಯಾನದಲ್ಲಿ ಕ್ಯಾಚ್ ದ ರೈನ್– 2022'ರಲ್ಲಿ ರಾಜ್ಯ ಎರಡನೇ ಸ್ಥಾನ ಗಳಿಸಿದೆ. ಮಾರ್ಚ್ 14ಕ್ಕೆ ಅಭಿಯಾನ ಅಂತ್ಯವಾಗಿದ್ದು, ಉತ್ತರ ಪ್ರದೇಶ ಪ್ರಥಮ ಸ್ಥಾನದಲ್ಲಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 'ಎಲ್ಲಿ, ಯಾವಾಗ ಮಳೆಯಾಗುತ್ತದೋ, ಅಲ್ಲಿ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವುದು' ಎಂಬ ಘೋಷವಾಕ್ಯದೊಂದಿಗೆ 2022ರ ಮಾರ್ಚ್ 29ರಂದು 'ಜಲಶಕ್ತಿ ಅಭಿಯಾನ' ಆರಂಭವಾಗಿತ್ತು. ಪೂರ್ವ ಮುಂಗಾರು ಹಾಗೂ ಮುಂಗಾರು ಅವಧಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿತ್ತು.

ನೀರಿನ ಸಂರಕ್ಷಣೆ, ಮಳೆ ನೀರು ಸಂಗ್ರಹ, ಛಾವಣಿ ನೀರು ಸಂಗ್ರಹಕ್ಕೆ ಕಟ್ಟಡಗಳಲ್ಲಿ ಸೌಲಭ್ಯ ಕಲ್ಪಿಸುವುದು, ನೀರು ಸಂಗ್ರಹದ ಹೊಂಡಗಳು, ಹೊಸ ಚೆಕ್ ಡ್ಯಾಂ ನಿರ್ಮಾಣ, ಸಾಂಪ್ರದಾಯಿಕ ನೀರು ಸಂಗ್ರಹದ ವ್ಯವಸ್ಥೆಗಳಾದ ಬಾವಿ, ಕೆರೆಗಳ ಪುನರುಜ್ಜೀವನ, ಜಲಾನಯನ, ಕೊಳವೆಬಾವಿಗಳು ಮರುಬಳಕೆ–ಮರುಪೂರಣ, ನದಿಗಳ ಪುನಶ್ಚೇತನ, ಪ್ರವಾಹ ದಂಡೆಗಳ ಬಲವರ್ಧನೆಯಲ್ಲಿ 4 ಲಕ್ಷಕ್ಕೂ ಅಧಿಕ ಕಾಮಗಾರಿಗಳನ್ನು ರಾಜ್ಯದಲ್ಲಿ ನಡೆಸಲಾಗಿದೆ.

ಜಲಮೂಲಗಳ ಜಿಯೊ–ಟ್ಯಾಗಿಂಗ್ ಕೂಡ ಮಾಡಲಾಗಿದ್ದು, ಜಿಲ್ಲಾ ಕೇಂದ್ರಗಳಲ್ಲಿ ನೀರಿಗೆ ಸಂಬಂಧಿಸಿದ ಎಲ್ಲ ಮಾಹಿತಿ ನೀಡುವ 'ಜಲಶಕ್ತಿ ಕೇಂದ್ರ'ಗಳನ್ನೂ ಸ್ಥಾಪಿಸಲಾಗಿದೆ. ಈ ಅಭಿಯಾನಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ 'ಅನುಷ್ಠಾನ ಇಲಾಖೆ'ಯಾಗಿ ಕಾರ್ಯನಿರ್ವಹಿಸಿತ್ತು.

'ಜಲಶಕ್ತಿ ಅಭಿಯಾನದ', ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯದ ಜಿಲ್ಲೆಗಳ ಪೈಕಿ, ಕಲಬುರಗಿ ಮೊದಲ ಸ್ಥಾನದಲ್ಲಿದೆ. ಒಟ್ಟು ಕಾಮಗಾರಿಗಳಲ್ಲಿ 20 ಸಾವಿರಕ್ಕೂ ಹೆಚ್ಚು ಜಲಾನಯನ

ಅಭಿವೃದ್ಧಿ ಕೆಲಸಗಳನ್ನು ಜಿಲ್ಲೆಯಲ್ಲಿ ನಿರ್ವಹಿಸಲಾಗಿದೆ. ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿರುವ ರಾಮನಗರ ಮತ್ತು ಬೆಳಗಾವಿಯಲ್ಲಿ ನೀರಿನ ಮರುಬಳಕೆಯಲ್ಲಿ ತಲಾ 17 ಸಾವಿರ ಕಾಮಗಾರಿ ನಡೆಸಲಾಗಿದೆ.

ಉಡುಪಿ, ಬೆಂಗಳೂರು ನಗರ, ಗ್ರಾಮಾಂತರ, ದಕ್ಷಿಣ ಕನ್ನಡ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ನಾಲ್ಕು ಸಾವಿರಕ್ಕೂ ಕಡಿಮೆ ಕಾಮಗಾರಿಗಳು ನಡೆದಿದ್ದು, ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿವೆ.

18 ಸಾವಿರ ಚೆಕ್ ಡ್ಯಾಂ: ರಾಜ್ಯದಲ್ಲಿ 18 ಸಾವಿರ ಚೆಕ್‌ಡ್ಯಾಂ, 55 ಸಾವಿರ ಹೊಂಡ, ಕೊಳ, ಕಲ್ಯಾಣಿ, ಗಕಟ್ಟೆಗಳನ್ನು ಪುನರುಜ್ಜೀವನ ಗೊಳಿಸಲಾಗಿದೆ. 15 ಸಾವಿರ ಕೆರೆಗಳನ್ನು ಹೂಳು ತೆಗೆದು ಮರು ಅಭಿವೃದ್ಧಿ ಮಾಡಲಾಗಿದೆ. ನರ್ಸರಿಯಲ್ಲಿ ಸಸಿಗಳನ್ನು ಬೆಳೆಸುವುದು ಹಾಗೂ ಅರಣ್ಯದಲ್ಲಿ ಗಿಡ ನೆಡುವುದು ಸೇರಿದಂತೆ ಅರಣೀಕರಣದಲ್ಲಿ 3 ಕೋಟಿಗೂ ಹೆಚ್ಚು ಸಸಿಗಳನ್ನು ಪೋಷಿಸಲಾಗಿದೆ. ನೀರಿನ ಬಳಕೆ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಲು 26 ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಸತತ ಉತ್ತಮ ಕಾರ್ಯ: ಅತೀಕ್

ಜಲಮೂಲಗಳ ಅಭಿವೃದ್ಧಿ ಹಾಗೂ ಜಲ ಸಂರಕ್ಷಣೆ ಕಾಮಗಾರಿಗಳಲ್ಲಿ ರಾಜ್ಯ ಸತತವಾಗಿ ಉತ್ತಮ ಕಾರ್ಯ ಮಾಡಿದೆ. ಪ್ರಸ್ತುತ, 'ಜಲಶಕ್ತಿ ಅಭಿಯಾನ'ದ ಅನುಷ್ಠಾನದಲ್ಲಿ ದೇಶಕ್ಕೇ 2ನೇ ಸ್ಥಾನ ಪಡೆದಿದ್ದೇವೆ. ಈ ಅಭಿಯಾನದಲ್ಲಿ 4 ಲಕ್ಷಕ್ಕೂ ಹೆಚ್ಚು ಕಾಮಗಾರಿಗಳನ್ನು ನಾವು ಎಂ–ನರೇಗಾ ಹಾಗೂ ಇತರೆ ಯೋಜನೆಗಳಲ್ಲಿ ಪೂರ್ಣಗೊಳಿಸಿದ್ದೇವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಹೇಳಿದರು.

ರಾಜ್ಯದ ಅಗ್ರ 5 ಜಿಲ್ಲೆಗಳು		
ಸಂಖ್ಯೆ	**ಜಿಲ್ಲೆ**	**ಕಾಮಗಾರಿ**
1	ಕಲಬುರಗಿ	37,771
2	ರಾಮನಗರ	37,411
3	ಬೆಳಗಾವಿ	31,403
4	ಚಿತ್ರದುರ್ಗ	22,394
5	ಯಾದಗಿರಿ	21,894

ಆಧಾರ: ಪ್ರಜಾವಾಣಿ, ದಿನಾಂಕ: 15.03.2023

ಭಾಗ – 6

ನ್ಯಾಯಾಲಯ ಸುದ್ದಿಗಳು

1. ನೋಟು ಅಮಾನ್ಯ ತಪ್ಪಲ್ಲ: ಸುಪ್ರೀಂ ಮಹತ್ವದ ತೀರ್ಪು

ರೂ.500 ಹಾಗೂ 1000 ಮುಖಬೆಲೆಯ ನೋಟುಗಳನ್ನು ಹಠಾತ್ ನಿಷೇಧಿಸಿ ಕೇಂದ್ರ ಸರ್ಕಾರ ಆರು ವರ್ಷಗಳ ಹಿಂದೆ ಕೈಗೊಂಡಿದ್ದ ಅಪನಗಧೀಕರಣದ ನಿರ್ಧಾರವನ್ನು ಸುಪ್ರೀಂಕೋರ್ಟ್ ಪಂಚಸದಸ್ಯ ಸಾಂವಿಧಾನಿಕ ಪೀಠ ಎತ್ತಿಹಿಡಿದಿದೆ. 'ಈ ನಿರ್ಧಾರ ಸರ್ಕಾರದ ಕಡೆಯಿಂದ ಹೊರಬಿದ್ದಿದೆ ಎಂದ ಮಾತ್ರಕ್ಕೆ ಅದನ್ನು ದೋಷಪೂರಿತ ಎಂದು ಕರೆಯಲಾಗದು. ಈ ಕ್ರಮ ಅವಸರದ್ದೂ ಅಲ್ಲ, ತಪ್ಪೊತಪ್ಪ ಅಲ್ಲ' ಎಂದು ಸರ್ವೋಚ್ಚ ನ್ಯಾಯಾಲಯ 4–1 ಬಹುಮತದ ತೀರ್ಪು ನೀಡಿದೆ.

ಆದರೆ, ಪಂಚಸದಸ್ಯ ಪೀಠದಲ್ಲೇ ಕಿರಿಯ ನ್ಯಾಯಮೂರ್ತಿಯಾಗಿರುವ ಬಿ.ವಿ.ನಾಗರತ್ನ ಕನ್ನಡತಿ ಅವರು, 'ಸರ್ಕಾರದ ತೀರ್ಮಾನ ಕಾನೂನುಬಾಹಿರ' ಎಂದು ತೀರ್ಪು ಕೊಟ್ಟಿದ್ದಾರೆ. ಆದಾಗ್ಯೂ, 4 ನ್ಯಾಯಮೂರ್ತಿಗಳು ಸರ್ಕಾರದ ನಿರ್ಧಾರ ಸರಿ ಎಂದಿರುವುದರಿಂದ ಅದೇ ತೀರ್ಪು ಊರ್ಜಿತವಾಗಲಿದೆ.

ಸರ್ಕಾರದ ನಿರ್ಧಾರ ಸರಿ– 4 ಜಡ್ಜ್‌ಗಳು: ಗರಿಷ್ಠ ಮುಖಬೆಲೆಯ ನೋಟುಗಳನ್ನು ನಿಷೇಧಿಸುವ ಕುರಿತು ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಡುವೆ 6 ತಿಂಗಳ ಕಾಲ ಸಮಾಲೋಚನೆ ಪ್ರಕ್ರಿಯೆ ನಡೆದಿತ್ತು. ಸರ್ಕಾರದ ನಿರ್ಧಾರ ಕಾನೂನು ಅಥವಾ ಸಾಂವಿಧಾನಿಕವಾಗಿ ಯಾವುದೇ ದೋಷದಿಂದ ಕೂಡಿಲ್ಲ. ಕಾರ್ಯಾಂಗದ ಆರ್ಥಿಕ ನೀತಿಗಳನ್ನು ತಿರುಗುಮುರುಗು ಮಾಡಲಾಗದು, ಆರ್ಥಿಕ ನೀತಿಗಳ ವಿಚಾರದಲ್ಲಿ ಮಹಾನ್ ಸಹಿಷ್ಣುತೆಯನ್ನು ವಹಿಸಬೇಕಾಗುತ್ತದೆ. ಕಾರ್ಯಾಂಗದ ವಿವೇಕದ ನಿರ್ಧಾರವನ್ನು ನ್ಯಾಯಾಂಗದ ನಿಷ್ಕರ್ಷೆ ಮೂಲಕ ದಮನ ಮಾಡಲಾಗದು' ಎಂದು ನ್ಯಾಯಮೂರ್ತಿಗಳಾದ ಎಸ್.ಎ. ನಜೀರ್, ಬಿ.ಆರ್. ಗವಾಯಿ, ಎ.ಎಸ್.ಬೋಪಣ್ಣ ಹಾಗೂ ವಿ.ರಾಮಸುಬ್ರಮಣಿಯನ್ ಅವರು ತೀರ್ಪು ನೀಡಿದ್ದಾರೆ.

2016ರ ನ.8 ರಂದು ಸರ್ಕಾರ ಮಾಡಿದ ಅಪನಗಧೀಕರಣ ಅಸಮರ್ಥನೀಯವಲ್ಲ ಎಂದು ಹೇಳಿ ಅದನ್ನು ರದ್ದುಗೊಳಿಸಲಾಗದು. ಕಪ್ಪು ಹಣ, ಭಯೋತ್ಪಾದನೆಗೆ ನೆರವು ಹರಿಯುವುದಕ್ಕೆ ಕಡಿವಾಣ ಹಾಕುವುದು ಸೇರಿದಂತೆ ಹಲವು ಉದ್ದೇಶಗಳೊಂದಿಗೆ ಈ ಕ್ರಮ ಹೊಂದಾಣಿಕೆಯಿಂದ ಕೂಡಿದೆ. ಆ ಉದ್ದೇಶಗಳು ಸಾಕಾರವಾಗಿವೆಯೇ ಇಲ್ಲವೇ ಎಂಬುದು ಅಪ್ರಸ್ತುತ ಎಂದು ಹೇಳಿದ್ದಾರೆ.

52 ದಿನಗಳ ಕಾಲಾವಕಾಶವೂ ತಪ್ಪಲ್ಲ: ರದ್ದಾದ ನೋಟುಗಳನ್ನು ಬದಲಿಸಿಕೊಳ್ಳಲು 52 ದಿನಗಳ ಕಾಲಾವಕಾಶ ನೀಡಲಾಗಿತ್ತು. ಅದನ್ನು ಅಸಮರ್ಥನೀಯ ಅಲ್ಲ ಎನ್ನಲಾಗದು. ಹಾಗೆಯೇ ಆ ಅವಧಿಯನ್ನು ಈಗ ವಿಸ್ತರಿಸಲೂ ಆಗದು ಎಂದು 4 ನ್ಯಾಯಾಧೀಶರು ಹೇಳಿದ್ದಾರೆ.

2016ರ ನ.8 ರಂದು ಸರ್ಕಾರ ಮಾಡಿದ ಅಪನಗದೀಕರಣ 'ಹಿಂದಿನ ಎರಡು ಬಾರಿ ಸಂಸತ್ ಅಧಿವೇಶನದಲ್ಲಿ ಅಪನಗದೀಕರಣ ನಿರ್ಧಾರ ಕೈಗೊಳ್ಳಲಾಗಿತ್ತು ಎಂಬ ಕಾರಣಕ್ಕೆ ಈಗಿನ ನಿರ್ಧಾರಕ್ಕೆ ಸರ್ಕಾರ ಅಧಿಕಾರ ಹೊಂದಿಲ್ಲ ಎಂದು ಹೇಳಲಾಗದು. ಅಪನಗಧೀಕರಣ ಅಧಿಸೂಚನೆಯಲ್ಲಿ ನೀತಿನಿರೂಪಣೆಗೆ ಸಂಬಂಧಿಸಿದ ದೋಷಗಳು ಇಲ್ಲ' ಎಂದು ಬಹುಮತದ ತೀರ್ಪನ್ನು ಓದಿದ ನ್ಯಾ। ಗವಾಯಿ ಹೇಳಿದರು.

ಒಬ್ಬ ಜಡ್ಜ್ ಭಿನ್ನ ತೀರ್ಪು: ಆದರೆ 4 ಸದಸ್ಯರ ಅಭಿಪ್ರಾಯಕ್ಕೆ ತದ್ವಿರುದ್ಧವಾದ ತೀರ್ಪನ್ನು ನ್ಯಾಯಮೂರ್ತಿ ನಾಗರತ್ನ ಅವರು ಪ್ರಕಟಿಸಿದರು. 'ನೋಟು ನಿಷೇಧ ವಿಚಾರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ವಯಂ ವಿವೇಚನೆಯಿಂದ ನಡೆದುಕೊಂಡಿಲ್ಲ. ಇಡೀ ಪ್ರಕ್ರಿಯೆಯನ್ನು 24 ತಾಸುಗಳಲ್ಲಿ ಮಾಡಿ

ಮುಗಿಸಲಾಗಿದೆ. ಕೇಂದ್ರ ಸರ್ಕಾರಕ್ಕೆ ಅಗಾಧ ಅಧಿಕಾರ ಇದೆ. ಆದರೆ ಅದನ್ನು ಅಧಿವೇಶನದ ಮೂಲಕ ಪ್ರಯೋಗಿಸಬೇಕೆ ಹೊರತು ಒಂದು ಅಧಿಸೂಚನೆಯ ಮೂಲಕವಲ್ಲ, ಸಂಸತ್ತಿನಲ್ಲಿ ದೇಶದ ಜನರ ಪ್ರತಿನಿಧಿಗಳು ಇರುತ್ತಾರೆ. ಹೀಗಾಗಿ ಸಂಸತ್ತಿನಲ್ಲಿ ಈ ವಿಷಯ ಚರ್ಚಿಸಿ ಅನುಮತಿ ಪಡೆಯಬೇಕಿತ್ತು. ಹೀಗಾಗಿ ಅಪನಗದೀಕರಣ ಕಾನೂನುಬಾಹಿರ' ಎಂದು. ಹೇಳಿದರು.

ಸರಿ **ಎಂದ 4 ಜಡ್ಜ್‌ಗಳು**

- ಈ ನಿರ್ಧಾರ ಸರ್ಕಾರದಿಂದ ಹೊರಬಿದ್ದಿದೆ ಎಂಬ ಮಾತ್ರಕ್ಕೆ ದೋಷಪೂರಿತ ಎನ್ನಲಾಗದು.
- ಈ ಹಿಂದೆ ಸಂಸತ್ತು ನಿರ್ಧರಿಸಿತ್ತು ಎಂಬ ಕಾರಣಕ್ಕೆ ಈಗ ಸರ್ಕಾರಕ್ಕೆ ಅಧಿಕಾರವಿಲ್ಲ ಎಂದೇನಿಲ್ಲ.
- ನೋಟು ರದ್ದು ಬಗ್ಗೆ ಕೇಂದ್ರ ಹಾಗೂ ಆರ್‌ಬಿಐ 6 ತಿಂಗಳ ಕಾಲ ಸಮಾಲೋಚನೆ ನಡೆಸಿದ್ದವು.
- ಸರ್ಕಾರದ ನಿರ್ಧಾರ ಕಾನೂನು ಅಥವಾ ಸಾಂವಿಧಾನಿಕವಾಗಿ ಯಾವುದೇ ದೋಷದಿಂದ ಕೂಡಿಲ್ಲ.
- ಕಪ್ಪು ಹಣ, ಉಗ್ರವಾದದ ನೆರವಿಗೆ ಕಡಿವಾಣ ಹಾಕುವುದು ನೋಟ್ ಬ್ಯಾನ್ನ ಉದ್ದೇಶವಾಗಿತ್ತು.
- **ತಪ್ಪು ಎಂದ ನ್ಯಾಯಮೂರ್ತಿ ನಾಗರತ್ನ**
- **500, 1000 ರೂ. ನೋಟು ನಿಷೇಧದ ಬಗ್ಗೆ ಆರ್‌ಬಿಐ ಸ್ವಯಂ ವಿವೇಚನೆಯಿಂದ ನಡೆದುಕೊಂಡಿಲ್ಲ.**
- **ಇಡೀ ಪ್ರಕ್ರಿಯೆ 24 ತಾಸಲ್ಲಿ ಮುಗಿಸಲಾಗಿದೆ, 1 ಆದೇಶದ ಮೂಲಕ ನೋಟು ನಿಷೇಧಿಸಲಾಗಿದೆ.**
- **ಸಂಸತ್ತಿನಲ್ಲಿ ಚರ್ಚಿಸಿ ಅನುಮತಿ ಪಡೆದು ಅಪನಗದೀಕರಣದ ಆದೇಶ ಹೊರಡಿಸಬೇಕಿತ್ತು.**

ಏನಿದು ಅಪನಗಧೀಕರಣ

2016ರ ನ.8 ರಂದು ರಾತ್ರಿ 8ಕ್ಕೆ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ರೂ.500 ಹಾಗೂ 1000 ಮುಖಬೆಲೆಯ ನೋಟುಗಳನ್ನು ತಕ್ಷಣದಿಂದ ರದ್ದುಗೊಳಿಸಿರುವುದಾಗಿ ತಿಳಿಸಿದ್ದರು. ನಂತರ ಸೀಮಿತ ಅವಧಿಯಲ್ಲಿ ಜನರು ನೋಟು ಬದಲಿಸಿಕೊಳ್ಳಲು ಬಾರಿ ಹರ ಸಾಹಸ ಪಟ್ಟಿದ್ದರು. ಕೆಲ ಕಾಲ ಜನಜೀವನ ಅಸ್ತವ್ಯಸ್ತವಾಗಿತ್ತು. ಸರ್ಕಾರದ ಈ ಕ್ರಮ ಪ್ರಶ್ನಿಸಿ 58 ಅರ್ಜಿಗಳು ಸುಪ್ರೀಂಕೋರ್ಟಿಗೆ ಸಲ್ಲಿಕೆಯಾಗಿದ್ದವು.

ಆಧಾರ: ಕನ್ನಡ ಪ್ರಭ, ದಿನಾಂಕ: 03.01.2023

2. Right to free speech cannot be curtailed further, says SC

The Supreme Court ruled that no further curbs could be imposed on the fundamental right to freedom of speech and expression, holding that the existing eight "reasonable" restrictions under Article 19(2) of the Constitution are "exhaustive".

A bench of Justices S Abdul Nazeer, BR Gavai, AS Bopanna, V.Ramasubramanian and BV Nagarathna were unanimous on the issue-an important determination that comes in the backdrop of concerns ranging from proliferation of social media and its alleged misuse and

violation of citizen's privacy and increasingly emotive rhetoric deployed by politicians in times of intense polarisation.

The reference of "curbing free speech of public functionaries" to a Constitution bench was prompted by the statement of Samajwadi Party leader Azam Khan who, as minister in UP government, termed the 2016 gang-rape incident on Noida-Saharanpur highway as an "opposition conspiracy" and a bid to defame the government because the "elections were near".

State Must Protect Right to Life

- Five-judge bench of unanimous view that state duty-bound to protect right to life whenever there is threat from any quarter, including private persons.
- Majority verdict says fundamental right to free speech and life can be enforced against private persons other than state or its instrumentalities.
- In dissenting verdict, Justice Nagarathna says except for habeas corpus (produce the person), right to free speech and life cannot be enforced against persons other than state.
- Majority verdict says mere statement of a minister may not lead to violation of constitutional rights and hence not actionable for award of compensation.

Role of courts is to protect fundamental rights: SC bench:- The bench, however, voted in favour of freedom of speech, and said the role of the courts is to protect the fundamental rights and not to insert more restrictions to constrict the valued freedoms guaranteed by the Constitution. The role envisaged in the constitutional scheme for the court, is to be a gatekeeper (and a conscience keeper) to check strictly the entry of restrictions into the temple of fundamental rights. The role of the court is to protect fundamental rights limited by lawful restrictions and not to protect restrictions and make the rights residual privileges.

While the Justice Ramasubramanian-authored verdict was signed by Justices Nazeer, Gavai and Bopanna, Justice Nagarathna wrote a separate judgment, agreeing on certain conclusions of the majority verdict and differing on others. While agreeing to reject fresh curbs on free speech, she said, "Article 19(1) (a) (right to free speech) serves as a vehicle through which dissent, can be expressed. The right to dissent, disagree and adopt varying and individualistic points of view inheres in every citizen of this country."

"In fact, the right to dissent is the essence of a vibrant democracy, for it is only when there is dissent that emerge which may be of help or assist the government to improve or innovate upon its policies so that its governance would have a positive effect on the people of the country which would ultimately lead to stability, peace and development which are concomitants of good governance," she said.

The Justice Ramasubramanian authored judgment comprehensively dealt with the Article 19(2) restrictions in the original Constitution adopted on November 26, 1949, and the additions made through the first constitutional amendment in 1951. It said, The restrictions

under Article 19(2) are comprehensive enough to cover all possible attacks on the individual, groups/classes of people, the society, the court, the country, and the State. This is why this Court repeatedly held that any restriction which does not fall within the four corners of Article 19(2) will be unconstitutional.

The Constitution allows for "reasonable restrictions" on free speech on grounds of sovereignty and integrity of India, national security, friendly ties with foreign countries, public order, decency, morality, contempt of court, defamation and inctitement to a criminal offence. After examining the restrictions on free speech in the US, UK, Australia and European Union countries, Justice Ramasubramanian said, That the eight heads of restrictions contained in Article 19(2) are exhaustive, can be established from another perspective also. The nature of the restrictions on free speech imposed by law/judicial pronouncements even in countries where a higher threshold is maintained, are almost similar.

Courtesy: Times of India, dt: 04.01.2023

3. ಶಾಸಕ, ಸಂಸದರ ಮಾತಿಗೆ ಹೆಚ್ಚುವರಿ ನಿರ್ಬಂಧ ಅಸಾಧ್ಯ

ಸಚಿವ, ಶಾಸಕ ಹಾಗೂ ಸಂಸದರು ಕೂಡಾ ದೇಶದ ಎಲ್ಲ ನಾಗರಿಕರಿಗೆ ನೀಡಲಾಗಿರುವಷ್ಟೇ ವಾಕ್ ಸ್ವಾತಂತ್ರ್ಯವನ್ನು ಹೊಂದಿದ್ದಾರೆ ಎಂದು ಸ್ಪಷ್ಟಪಡಿಸಿರುವ ಸುಪ್ರೀಂಕೋರ್ಟ್, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರ ಮಾತಿನ ಮೇಲೆ ಯಾವುದೇ ಹೆಚ್ಚುವರಿ ನಿರ್ಬಂಧಗಳನ್ನು ಹೇರಲಾಗದು ಎಂದು ಹೇಳಿದೆ. ಸ್ವಾತಂತ್ರ್ಯವನ್ನು ನಿರ್ಬಂಧಿಸಲು ಸಂವಿಧಾನದ ವಿವಿಧ ವಿಧಿಯಡಿ ಈಗಾಗಲೇ ಸಾಕಷ್ಟು ಕ್ರಮಗಳಿವೆ ಎಂದು ಅವರೊಳಗೊಂಡ 5 ಸದಸ್ಯರ ಸಂವಿಧಾನಿಕ ಪೀಠ 4–1ರ ಬಹುಮತದ ತೀರ್ಪು ನೀಡಿದೆ. ಆದರೆ ಸಚಿವ, ಶಾಸಕ ಹಾಗೂ ಸಂಸದರು ನೀಡುವ ಹೇಳಿಕೆಯನ್ನು ಸರ್ಕಾರದ ಹೇಳಿಕೆ ಎಂದು ಎಂದು ಪರಿಗಣಿಸಬೇಕು ಎಂಬ ವಿಷಯದಲ್ಲಿ ಪಂಚಸದಸ್ಯರ ಪೀಠದಲ್ಲಿ ಭಿನ್ನ ಅಭಿಪ್ರಾಯ ವ್ಯಕ್ತವಾಗಿದೆ. ನಾಲ್ವರು ನ್ಯಾಯಾಧೀಶರು, ಇಂಥ ಹೇಳಿಕೆಯನ್ನು ಸರ್ಕಾರದ್ದು ಎಂದು ಪರಿಗಣಿಸಲಾಗದು ಎಂದು ಹೇಳಿದರೆ, ನ್ಯಾ.ನಾಗರತ್ನ ಅವರು ಇಂಥ ಹೇಳಿಕೆಗಳನ್ನೂ ಸರ್ಕಾರದ ಹೇಳಿಕೆ ಎಂದು ಪರಿಗಣಿಸಬೇಕು ಎಂದು ಹೇಳಿದ್ದಾರೆ.

ಅರ್ಜಿದಾರರ ಕೋರಿಕೆ ಏನಿತ್ತು: ಸರ್ಕಾರವನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು ಸಾರ್ವಜನಿಕ ವೇದಿಕೆಗಳಲ್ಲಿ ಮನಬಂದಂತೆ ಮಾತನಾಡುವುದಕ್ಕೆ ನಿರ್ಬಂಧ ವಿಧಿಸಬೇಕು. ಸರ್ಕಾರದ ನೀತಿ ನಿಯಮಗಳಿಗೆ ಅನುಗುಣವಾಗಿ ಮಾತ್ರ ಮಾತನಾಡುವಂತೆ ಸೂಚಿಸಬೇಕು ಎಂದು ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು, ಈ ಬಗ್ಗೆ ನ್ಯಾಯಮೂರ್ತಿಗಳಾದ ಎಸ್.ಎ. ನಜೀರ್, ಬಿ.ಆರ್.ಗವಾಯಿ, ಎ.ಎಸ್.ಬೋಪಣ್ಣ, ವಿ.ರಾಮಸುಬ್ರಮಣಿಯಂ ಹಾಗೂ ಬಿ.ವಿ.ನಾಗರತ್ನ ಅವರಿದ್ದ ಪಂಚ ಸದಸ್ಯ ಸಾಂವಿಧಾನಿಕ ಪೀಠ ತೀರ್ಪು ಪ್ರಕಟಿಸಿತು.

ಕೋರ್ಟ್ ಹೇಳಿದ್ದೇನು: ಸಂವಿಧಾನದ ಪರಿಚ್ಛೇದ 19(2)ರಡಿ ಇರುವಂತಹದ್ದನ್ನು ಹೊರತುಪಡಿಸಿ ಸಾರ್ವಜನಿಕ ಸೇವಕರ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಯಾವುದೇ ಹೆಚ್ಚುವರಿ ನಿರ್ಬಂಧಗಳನ್ನು ವಿಧಿಸಲಾಗದು. ಸಚಿವರೊಬ್ಬರು ನೀಡಿದ ಹೇಳಿಕೆ ಸರ್ಕಾರದ ಯಾವುದೇ ವ್ಯವಹಾರಗಳ ಜೊತೆ ನಂಟು ಹೊಂದಿದ್ದರೂ ಅಥವಾ ಸರ್ಕಾರವನ್ನು ರಕ್ಷಿಸುವುದೇ ಆಗಿದ್ದರೂ ಸಾಮೂಹಿಕ ಹೊಣೆಗಾರಿಕೆ ತತ್ವದ ಸಂದರ್ಭದಲ್ಲೂ ಅದನ್ನು ಸರ್ಕಾರದ ಹೇಳಿಕೆ ಎಂದು ಪರಿಗಣಿಸಲು ಆಗದು ಎಂದು ನಾಲ್ವರು ನ್ಯಾಯಮೂರ್ತಿಗಳು ಹೇಳಿದರು.

ಆದರೆ ನ್ಯಾ| ಬಿ.ವಿ.ನಾಗರತ್ನ ಅವರು ಭಿನ್ನ ತೀರ್ಪು ನೀಡಿ, ವಾಕ್ ಸ್ವಾತಂತ್ರ್ಯದ ಮೇಲೆ ಹೆಚ್ಚು ನಿರ್ಬಂಧಗಳನ್ನು ಹೇರಲಾಗದು ಎಂಬ ಬಗ್ಗೆ ಸಹಮತವಿದೆ. ಆದರೆ, ಸಚಿವರು ನೀಡುವ ಹೇಳಿಕೆಯನ್ನು ಸರ್ಕಾರದ್ದೇ ಎಂದು ಹೊರಿಸಬೇಕು. ದ್ವೇಷಪೂರಿತ ಭಾಷಣಗಳು ಮೂಲಭೂತ ಮೌಲ್ಯಗಳ ಮೇಲೆಯೇ ದಾಳಿ ಮಾಡುತ್ತವೆ. ಸಮಾಜದಲ್ಲಿ ಅಸಮಾನತೆ ಸೃಷ್ಟಿಸುತ್ತವೆ. ಭಾರತದಂತಹ ದೇಶದಲ್ಲಿ ವೈವಿಧ್ಯತೆಯ ಹಿನ್ನೆಲೆ ಹೊಂದಿರುವ ಜನರನ್ನು ಗುರಿಯಾಗಿಸುತ್ತವೆ ಎಂದು ಹೇಳಿದರು.

ಏನಿದು ಪ್ರಕರಣ: 2016ರ ಜುಲೈನಲ್ಲಿ ಮಹಿಳೆ ಹಾಗೂ ಆಕೆಯ ಪುತ್ರಿಯ ಮೇಲೆ ಉತ್ತರಪ್ರದೇಶದ ಬುಲಂದ್ ಶಹರ್ ಬಳಿ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಆ ಸಂದರ್ಭದಲ್ಲಿ ಉತ್ತರಪ್ರದೇಶದ ಸಚಿವರಾಗಿದ್ದ ಆಜಂ ಖಾನ್ ಅವರು ಸಾಮೂಹಿಕ ಅತ್ಯಾಚಾರ ರಾಜಕೀಯ ಸಂಚು ಎಂದು ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ದೆಹಲಿಗೆ ವರ್ಗಾಯಿಸಬೇಕು, ಸಚಿವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಕಾನೂನು ಸಮರ ಆರಂಭಿಸಿದರು. ರಾಜಕಾರಣಿಗಳು ಮನಸ್ಸಿಗೆ ಬಂದಂತೆ ಹೇಳಿಕೆ ನೀಡುವುದನ್ನೂ ತಡೆಯಬೇಕು ಎಂದು ಮನವಿ ಮಾಡಿದ್ದರು.

4 ಜಡ್ಜ್ ಹೇಳಿದ್ದೇನು?

- ಸಚಿವರು, ಸಂಸದರು, ಶಾಸಕರು ದೇಶದ ಎಲ್ಲ ನಾಗರಿಕರಿಗೆ ಸಮನಾಗಿ ಸಂವಿಧಾನದ 19(1)(ಎ) ಅಡಿ ನೀಡಲಾಗಿರುವ ವಾಕ್ ಸ್ವಾತಂತ್ರ್ಯದ ಹಕ್ಕು ಹೊಂದಿದ್ದಾರೆ.
- ಸಂವಿಧಾನದ ಪರಿಚ್ಛೇದ 19(2)ರಡಿ ಇರುವಂತಹದ್ದನ್ನು ಹೊರತುಪಡಿಸಿ ಅವರ ವಾಕ್, ಅಭಿವ್ಯಕ್ತಿ ಸ್ವಾತಂತ್ರದ ಮೇಲೆ ಯಾವುದೇ ಹೆಚ್ಚುವರಿ ನಿರ್ಬಂಧ ವಿಧಿಸಲಾಗದು.
- ಸದನದ ಹೊರಗೆ ಜನಪ್ರತಿನಿಧಿಗಳು ನೀಡಿದ ಹೇಳಿಕೆಯನ್ನು ಸರ್ಕಾರದ ಹೇಳಿಕೆಯೆಂದು ಪರಿಗಣಿಸಲಾಗದು.

ನ್ಯಾ.ನಾಗರತ್ನ ಹೇಳಿದ್ದು

- ಸಚಿವರು ನೀಡುವ ಹೇಳಿಕೆಯನ್ನು ಸರ್ಕಾರದ್ದೆಂದು ಪರಿಗಣಿಸಬೇಕು.
- ರಾಜಕಾರಣಿಗಳ ದ್ವೇಷಪೂರಿತ ಭಾಷಣಗಳು ಮೂಲಭೂತ ಮೌಲ್ಯಗಳ ಮೇಲೆಯೇ ದಾಳಿ ಮಾಡುತ್ತವೆ, ಸಮಾಜದಲ್ಲಿ ಅಸಮಾನತೆ ಸೃಷ್ಟಿಸುತ್ತವೆ.

ಆಧಾರ: ಕನ್ನಡ ಪ್ರಭ, ದಿನಾಂಕ: 04.01.2023

4. Ex-MLC moves HC against spending on e-Vidhana system from State exchequer

The High Court of Karnataka ordered issue of notice to the State government on a PIL petition questioning the implementation of e-Vidhan paperless legislature system at a spiralling cost of Rs. 253.75 crore.

A Division Bench comprising Chief Justice Prasanna B. Varale and Justice Ashok S. Kinagi passed the order on the petition filed by Ramesh Babu, a former MLC and a member of the Congress.

It has been pointed out in the petition that the State Budget in 2017-18 had proposed to implement e-Vidhan project at an estimated cost of around 60 crore by making budgetary allocation of 20 crore.

However, as the Union government in 2018 announced the National e-Vidhan Application (Ne-VA) and offered a 60:40 cost-sharing formula with the States, the State government, through the then Chief Secretary, in August 2018 had written to the Centre, expressing its willingness to be part of NeVA, it has been pointed out in the petition.

Later, the State government again chose to implement the e-Vidhan system on its own not only without any monetary assistance from the Centre but at revised and exorbitant cost of ₹254 crore, the petitioner has pointed out while complaining that the State government's decision is causing loss to the State's exchequer.

"The functioning of the NeVA scheme is fundamentally strong with all necessary safeguard with regard to implementation and functioning and storage of data and will be fully in control and operation of Central agencies with added benefit of cost savings and technical expertise for implementation of the said scheme as a whole as opposed to the envisaged scheme of the State government, which seeks to implement scheme at the hands of a private entity, to be identified by KEONICS, a State- run agency," the petitioner has said.

The decision of the State government to fore- go the Central subsidy of 60% would not only cast a burden on the State exchequer but lacks bonafides and transparency, the petitioner has contended.

Courtesy: The Hindu, dt: 04.01.2023

5. V-P says court can’t dilute Parliament’s sovereignty

Amid a debate on the process of appointment of judges, Vice-President Jagdeep Dhankhar made strong comments on "public posturing" or "one-upmanship" by the judiciary.

Lok Sabha Speaker Om Birla also spoke in a similar vein.

Inaugurating the 83rd All India Presiding Officers conference, Mr.Dhankhar, who is the Chairman of the Rajya Sabha, said that as presiding officers of legislatures, "We cannot have an ostrich-like stance on judiciary-legislature relations."

"Parliamentary sovereignty cannot be permitted to be diluted or compromised by the executive or the judiciary, and public posturing or 'one-upmanship' that is being frequently witnessed in this matter is not 'wholesome'," he added.

NJAC Act

Mr. Dhankhar again brought up the striking down of the National Judicial Appointments Commission Act as a case of judicial overreach. He noted that it was in 1973, in the Kesavananda Bharati case, that the Supreme Court evolved for the first time the right of the courts to strike down Constitution amendments that violated what it called the Basic Structure, or the fundamental architecture, of the Constitution.

"I do not subscribe to this, with due respect to the judiciary," he said.

Hitherto unheard of

In similar remarks on the NJAC Act during his inaugural address in the Rajya Sabha on December 7, Mr. Dhankhar had said that "there was no parallel to such a development in democratic history where a duly legitimised constitutional prescription has been judicially undone".

At the conference, he said there was complete unanimity in the Lok Sabha while passing the Constitution (Amendment) Bill. There was not a single dissenting voice. In the Rajya Sabha, there was unanimity apart from one abstention "But on October 16, 2015, the highest court of the land held both the 99th Constitution Amendment Act, 2014 and the National Judicial Appointments Commission Act, 2014 unconstitutional on the premise of being in violation of the Basic Structure," Mr. Dhankhar said.

Not a challenge

"This is not a challenge to the judiciary, but this has not happened anywhere else in the world. How can Parliament's sovereignty be compromised," he asked.

"In a democratic society, ‘the basic’ of any ‘Basic Structure' has to be the supremacy of mandate of people. Thus, the primacy and sovereignty of Parliament and legislature is inviolable," he added.

"Can the power of the Parliament to amend the constitution be dependent on any other institution? Can any organisation or institution say that this needs our stamp," he questioned.

On a Bench of the Supreme Court asking the Attorney-General to pass on the message to constitutional authorities to use restraint while making statements, Mr. Dhankhar said: "I declined to entertain the Attorney-General on this point. I cannot be party to emasculate power of legislature."

"Third and superior chamber'

Quoting B.R. Ambedkar, he said it must be remembered that the Constitution never envisaged a "third and superior chamber" for Parliament to grant approval to the legislation passed by the two Houses.

The Speaker said: "Legislatures in our country have always respected the powers of the judiciary. The judiciary is also expected to follow the principle of separation and balance of powers conferred by the Constitution."

Courtesy: The Hindu, dt: 12.01.2023

6. Judiciary, legislature should respect boundaries set by the Constitution

Virtually endorsing Vice- President Jagdeep Dhankhar's remarks on judicial overreach, the presiding officers of the Legislative Assemblies and Councils recognised the separate powers of the judiciary and the legislature, and said they should "respect" the boundaries provided by the Constitution.

A resolution passed at the conclusion of the 83rd All India Presiding Officers' Conference said that it reaffirmed its complete faith in the primacy of the people of India in law-making through the legislative bodies of the nation.

"Legislature is supreme. It has the right to make laws and because it has the right to make laws, it is expected that all institutions remain within their boundaries," Lok Sabha Speaker Om Birla said.

Code of conduct

The resolution passed by the conference sought a code of conduct to rule the behaviour of legislators in Assemblies, Councils and Parliament.

It resolved that Rules of Procedure and Conduct of Business of legislative bodies must be reviewed comprehensively, and model uniform Rules be formulated incorporating best practices in order to secure greater participation of members and more productive functioning of the Houses of legislature.

The resolution also asked parties to build a consensus against any disruption in the Houses of legislature, particularly during Question Hour.

Courtesy: The Hindu, dt: 13.01.2023

7. ಸುಪ್ರೀಂ ಗುರಾಣ

ಪ್ರತಿಪಕ್ಷಗಳು ಮೇಲಿಂದ ಮೇಲೆ ನೆಗೆಟಿವ್ ಕ್ಯಾಂಪೇನ್‌ಗಳನ್ನು ಹೊತ್ತು ತರುತ್ತಲೇ ಇದ್ದಾರೆ. ಅವು ಮತ್ತೆ ಮತ್ತೆ ಸುಪ್ರೀಂ ಅಂಗಳದಲ್ಲಿ ಅಂತ್ಯ ಕಾಣುತ್ತಲೇ ಇವೆ. ಪ್ರತಿ ಸಲವೂ ಕೋರ್ಟ್ ತೀರ್ಪುಗಳು ಪ್ರತಿಪಕ್ಷಗಳ ನೆಗೆಟಿವ್ ಕ್ಯಾಂಪೇನ್‌ಗಳ ವಿರುದ್ಧವೇ ಇರುತ್ತವೆ. ಎದುರಾಳಿಗಳು ಹೀನಾಯ ಸೋಲನ್ನು ಕಾಣುತ್ತಲೇ ಇದ್ದಾರೆ.

– ನಿರ್ಮಲಾ ಸೀತಾರಾಮನ್ ವಿತ್ತ ಸಚಿವೆ

ಇತ್ತೀಚೆಗೆ ಹೊಸದಿಲ್ಲಿಯಲ್ಲಿ ಮುಕ್ತಾಯವಾದ ಬಿಜೆಪಿ ಕಾರ್ಯಕಾರಿಣಿಯಲ್ಲಿ ವಿತ್ತ ಸಚಿವರು ಹೇಳಿದ ಮಾತು ಇದು. "ಪೆಗಾಸಸ್, ರಫೇಲ್, ಇಡಿ, ಸೆಂಟ್ರಲ್ ವಿಸ್ಟಾ, ಮೀಸಲಾತಿ ಮತ್ತು ನೋಟು ಅಮಾನೀಕರಣ... ಈ ವಿಚಾರಗಳ ಬಗ್ಗೆ ಮಾಡಿದ ಆಧಾರರಹಿತ ಆರೋಪಗಳೆಲ್ಲವನ್ನೂ ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ," ಎಂದೂ ಸಚಿವೆ ಹೇಳಿದ್ದಾರೆ. ಅತ್ಯಂತ ಪ್ರಮುಖ ಹಾಗೂ ವಿವಾದಿತ ಸಂಗತಿಗಳನ್ನೂ ಸುಪ್ರೀಂ ಕೋರ್ಟ್ ತನ್ನ ನ್ಯಾಯಪೀಠದಿಂದ ಬಗೆಹರಿಸಿ, ಕೇಂದ್ರ ಸರಕಾರವನ್ನು ನಿಟ್ಟುಸಿರು ಬಿಡುವಂತೆ ಮಾಡಿದ ಸಂದರ್ಭಗಳು ಹಲವಾರು.

1. ನೋಟು ಅಮಾನ್ಯೀಕರಣ

- **ಪ್ರಕರಣ:** 2016, ನವೆಂಬರ್ 8ರಂದು ಪ್ರಧಾನಿ ನರೇಂದ್ರ ಮೋದಿಯವರು ನೋಟು ಅಮಾನ್ಯೀಕರಣ ಘೋಷಿಸಿದರು. ಪರಿಣಾಮ, 500 ಮತ್ತು 1000 ರೂಪಾಯಿಯ ಹಳೇ ನೋಟುಗಳ ಚಲಾವಣೆ ನಿಂತಿತು.
- **ಪ್ರತಿಪಕ್ಷಗಳ ಆರೋಪ:** ನೋಟು ರದ್ದತಿ ಐತಿಹಾಸಿಕ ತಪ್ಪು ಹೆಜ್ಜೆ ಇದರಿಂದ ದೇಶದ ಆರ್ಥಿಕತೆಯೇ ಬುಡಮೇಲಾಗಿದೆ. ಕೇಂದ್ರ ಸರಕಾರವು ಆರ್‌ಬಿಐ ಸಲಹೆ ಪಡೆಯದೆ ಏಕಾಏಕಿ 500, 1000 ರೂ.ಗಳ ನೋಟುಗಳನ್ನು ನಿಲ್ಲಿಸಿದೆ ಎಂದು ಆರೋಪಿಸಿದ್ದವು.
- **ಸುಪ್ರೀಂ ಹೇಳಿದ್ದೇನು?:** ಸುಪ್ರೀಂನ ಪಂಚ ನ್ಯಾಯಾಧೀಶರ ಪೀಠವು 4:1 ಅಭಿಮತದ ಮೂಲಕ ನೋಟು ಅಮಾನೀಕರಣವನ್ನು ಎತ್ತಿ ಹಿಡಿದಿದೆ. ದೇಶದ ಹಿತದ ದೃಷ್ಟಿಯಿಂದ ತೆಗೆದುಕೊಂಡ ನೋಟು ಅಮಾನ್ಯೀಕರಣ ನೀತಿಯು ಕಾನೂನುಬಾಹಿರವಲ್ಲ, ಈ ನಿಲುವು ತೆಗೆದುಕೊಳ್ಳುವಾಗ ಕೇಂದ್ರ ಸರಕಾರ ಮತ್ತು ಆರ್‌ಬಿಐ ನಡುವೆ 6 ತಿಂಗಳ ಮಾತುಕತೆಯೂ ನಡೆದಿದೆ ಎಂದು ಕೋರ್ಟ್ ದಾಖಲೆಗಳನ್ನು ಮುಂದಿಟ್ಟಿತ್ತು.

2. ಬಡವರಿಗೆ ಮೀಸಲಾತಿ

- **ಪ್ರಕರಣ:** 2019ರ ಲೋಕಸಭೆ ಚುನಾವಣೆಯ ಮೊದಲು, ಮೋದಿ ಸರಕಾರವು ಸಂವಿಧಾನದ 103ನೇ ತಿದ್ದುಪಡಿ ಮಾಡಿ, ಮೀಸಲು ಸೌಲಭ್ಯ ಪಡೆಯದ ಜಾತಿಗಳ ಬಡವರಿಗೂ ಉದ್ಯೋಗ, ಶಿಕ್ಷಣ ಸಂಸ್ಥೆಗಳಲ್ಲಿ ಶೇ.10 ಮೀಸಲಾತಿ ಕಲ್ಪಿಸಿತು.
- **ಪ್ರತಿಪಕ್ಷಗಳ ಆರೋಪ:** ಇದು 'ಚುನಾವಣಾ ಬಾಜಿ' ಅಂತಲೇ ಪ್ರತಿಪಕ್ಷಗಳು ಜರಿದವು. ಆದರೆ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಬೆಂಬಲ ಸೂಚಿಸಿದ್ದವು.
- **ಸುಪ್ರೀಂ ಹೇಳಿದ್ದೇನು?:** ಆರ್ಥಿಕವಾಗಿ ದುರ್ಬಲವಾಗಿರುವ ಸಾಮಾನ್ಯ ವರ್ಗದ ಜನರಿಗೆ ಶೇ.10 ಮೀಸಲಾತಿ ನೀಡುವ ಕೇಂದ್ರ ಸರಕಾರದ ನಿರ್ಧಾರವನ್ನು ಸುಪ್ರೀಂನ ಪಂಚ ನ್ಯಾಯಮೂರ್ತಿಗಳ ಪೀಠ 3:2 ಅಭಿಮತದೊಂದಿಗೆ ಅಂಗೀಕರಿಸಿತು. "ಇಫಖ ಕೋಟಾ ಸಾಂವಿಧಾನಿಕವಾಗಿ ಸರಿಯಾಗಿದೆ. ಆರ್ಥಿಕ ಮತ್ತು ಸಾಮಾಜಿಕ ವರ್ಗದಿಂದ ಹಿಂದುಳಿದವರನ್ನು ಮಾತ್ರವಲ್ಲದೆ ಸಮಾಜದಲ್ಲಿ ವಂಚಿತ ವರ್ಗದವರನ್ನು ಸೇರಿಸುವಲ್ಲಿ ಮೀಸಲಾತಿ ಪ್ರಮುಖ ಪಾತ್ರ ವಹಿಸುತ್ತದೆ," ಎಂದು ಕೋರ್ಟ್ ಹೇಳಿತು.

3. ಪೆಗಾಸಸ್

- **ಪ್ರಕರಣ:** ಅಮೆರಿಕದ 'ನ್ಯೂಯಾರ್ಕ್ ಟೈಮ್ಸ್'ನ ವರದಿ '2017ರಲ್ಲಿ ಭಾರತವು ಇಸ್ರೇಲ್‌ನಿಂದ 'ಪೆಗಾಸಸ್' ಎಂಬ ಸ್ಪೈ ಸಾಫ್ಟ್‌ವೇರನ್ನು ಖರೀದಿಸಿದೆ' ಎಂದು ಹೇಳಿತ್ತು. ಪೆಗಾಸಸ್ ಬಳಸಿಕೊಂಡು ಕೇಂದ್ರ ಸರಕಾರ ರಾಹುಲ್ ಗಾಂಧಿ, ಪ್ರಶಾಂತ್ ಕಿಶೋರ್ ಸೇರಿದಂತೆ 300 ಗಣ್ಯರ ಮೇಲೆ ಬೇಹುಗಾರಿಕೆ ನಡೆಸಿದೆ ಎಂದು ವರದಿ ಉಲ್ಲೇಖಿಸಿತ್ತು.
- **ಪ್ರತಿಪಕ್ಷಗಳ ಆರೋಪ:** ರಾಹುಲ್ ಗಾಂಧಿ ಮೇಲೆ ಪೆಗಾಸಸ್ ಗೂಢಚಾರಿಕೆ ನಡೆಸಲಾಗಿದೆ ಎಂಬ ಸಂಗತಿ ಕೇಳಿ ಕಾಂಗ್ರೆಸ್ ಕೆರಳಿತು. "ಇದು ದೇಶದ್ರೋಹವಷ್ಟೇ ಅಲ್ಲ, ರಾಷ್ಟ್ರೀಯ ಭದ್ರತೆಯೊಂದಿಗಿನ ಚೆಲ್ಲಾಟ, ಎಂದು ಆರೋಪಿಸಿತು. ಈ ಬಗ್ಗೆ ಉನ್ನತ ತನಿಖೆಗೂ ಒತ್ತಾಯಿಸಿತು.
- **ಸುಪ್ರೀಂ ಹೇಳಿದ್ದೇನು?:** ಈ ವಿಷಯ ಸುಪ್ರೀಂನ ಮೆಟ್ಟಿಲೇರಿದಾಗ ತ್ರಿಸದಸ್ಯರ ಸಮಿತಿ ರಚಿಸಲಾಯಿತು. ಸಮಿತಿ ಕಳೆದ ವರ್ಷ ಆಗಸ್ಟ್‌ನಲ್ಲಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿತ್ತು. ಈ ವರದಿಯಲ್ಲಿ 29 ಫೋನ್‌ಗಳನ್ನು ತನಿಖೆಗಾಗಿ ಸಮಿತಿಗೆ ನೀಡಲಾಗಿದೆ. ಈ ಪೈಕಿ ಐವರ ಫೋನ್ ಗಳಲ್ಲಿ ಮಾಲ್ವೇರ್‌ಗಳಿವೆ ಎಂದು ಹೇಳಲಾಗಿದೆ. ಆದರೆ, ಬೇಹುಗಾರಿಕೆ ನಡೆಸಲಾಗಿದೆ ಎಂಬ ಆರೋಪ ನಿಲ್ಲಲಿಲ್ಲ.

4. ರಫೇಲ್

- **ಪ್ರಕರಣ:** 2016ರ ಸೆಪ್ಟೆಂಬರ್, ಭಾರತ ಮತ್ತು ಫ್ರಾನ್ಸ್ ನಡುವೆ 36 'ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸಲು ಒಪ್ಪಂದಕ್ಕೆ ಸಹಿ ಹಾಕಲಾಯಿತು. 58 ಸಾವಿರ ಕೋಟಿ ರೂ. ಒಪ್ಪಂದವಿದು.
- **ಪ್ರತಿಪಕ್ಷಗಳ ಆರೋಪ:** ರಫೇಲ್ ಡೀಲ್ ವಿಚಾರದಲ್ಲಿ ಮೋದಿ ಸರಕಾರದ ಮೇಲೆ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿತ್ತು. ಇದು ಅತಿದೊಡ್ಡ ರಕ್ಷಣಾ ಹಗರಣವಾಗಿದ್ದು, ಈ ಬಗ್ಗೆ ಸ್ವತಂತ್ರ ತನಿಖೆಯಾಗಬೇಕು ಎಂದೂ ಒತ್ತಾಯಿಸಿತು. ಯುಪಿಎ ಸರಕಾರ ನಡೆಸಿದ್ದ ರಫೇಲ್ ಒಪ್ಪಂದ ರೂ.600 ಕೋಟಿಗೆ ಇತ್ತು. ಆದರೆ, ಮೋದಿ ಸರಕಾರ ರೂ.1600 ಕೋಟಿಗೆ ರಫೇಲ್ ಖರೀದಿಸಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.
- **ಸುಪ್ರೀಂ ಹೇಳಿದ್ದೇನು?:** 2018ರ ಡಿಸೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಈ ಬಗ್ಗೆ ತನ್ನ ತೀರ್ಪು ನೀಡಿ, ಒಪ್ಪಂದದಲ್ಲಿ ಅಕ್ರಮ ನಡೆದಿದೆ ಎಂಬ ಪ್ರತಿಪಕ್ಷಗಳ ಆರೋಪವನ್ನು ತಿರಸ್ಕರಿಸಿತು. ಆರೋಪ ಸಾಬೀತಿಗೆ ಯಾವುದೇ ಪುರಾವೆಗಳಿಲ್ಲ ಎಂದಿತ್ತು. ಈ ಕುರಿತು ಸಿಬಿಐ ತನಿಖೆ ನಡೆಸಬೇಕೆಂಬ ಬೇಡಿಕೆಗೂ ಪುಷ್ಟಿ ಸಿಗಲಿಲ್ಲ.

5. ED ದುರ್ಬಳಕೆ

- **ಪ್ರಕರಣ:** ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಪ್ರತಿಪಕ್ಷಗಳ ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ತನಿಖೆ ನಡೆಸಲಾಗುತ್ತಿದೆ.
- **ಪ್ರತಿಪಕ್ಷಗಳ ಆರೋಪ:** ಇಡಿಯನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದು ಕಾಂಗ್ರೆಸ್ ಸೇರಿದಂತೆ ಎಲ್ಲ ಪ್ರತಿಪಕ್ಷಗಳು ಆರೋಪಿಸುತ್ತಲೇ ಇವೆ. ಸರಕಾರ ತನ್ನ ಲಾಭಕ್ಕಾಗಿ ಇ.ಡಿ.ಯನ್ನು ಬಳಸಿಕೊಂಡು, ನಿರ್ದಿಷ್ಟ ರಾಜಕಾರಣಿಗಳನ್ನು ಬಲವಂತವಾಗಿ ಬಂಧಿಸುತ್ತಿದೆ. ಅಲ್ಲದೆ, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದೆ ಎಂದು ಆರೋಪಿಸಿವೆ.
- **ಸುಪ್ರೀಂ ಹೇಳಿದ್ದೇನು?:** ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆಯ (ಪಿಎಂಎಲ್‌ಎ) ಸಾಂವಿಧಾನಿಕತೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಕಳೆದವರ್ಷ ಜುಲೈನಲ್ಲಿ ಇಡಿ ಹಕ್ಕುಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇಡಿ ವ್ಯಕ್ತಿಯನ್ನು ಬಂಧಿಸುವುದು, ಆತನ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಲಗತ್ತಿಸುವುದು, ದಾಳಿ ನಡೆಸುವುದು ಕಾನೂನುಬದ್ಧ ಕ್ರಮ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತು.

6. ಸೆಂಟ್ರಲ್ ವಿಸ್ತಾ

- **ಪ್ರಕರಣ:** ಇಂಡಿಯಾ ಗೇಟ್‌ನಿಂದ ರಾಷ್ಟ್ರಪತಿ ಭವನದವರೆಗಿನ ರಾಜಪಥ್‌ನ ಎರಡೂ ಬದಿಯಲ್ಲಿರುವ ಪ್ರದೇಶವನ್ನು 'ಸೆಂಟ್ರಲ್ ವಿಸ್ತಾ' ಎಂದು ಕರೆಯಲಾಗುತ್ತದೆ. ಮೋದಿ ಸರಕಾರ ಇದಕ್ಕೆ ನವರೂಪ ನೀಡುತ್ತಿದೆ. ರೂ.970 ಕೋಟಿ ವೆಚ್ಚದಲ್ಲಿ ಇಲ್ಲಿ ಹೊಸ ಸಂಸತ್ತು ಕೂಡ ನಿರ್ಮಾಣವಾಗುತ್ತಿದೆ.
- **ಪ್ರತಿಪಕ್ಷಗಳ ಆರೋಪ:** ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಈ ಯೋಜನೆಯನ್ನು 'ಕ್ರಿಮಿನಲ್ ವೇಸ್ಟ್' ಎಂದು ಟೀಕಿಸಿದ್ದರು. "ಕೋವಿಡ್‌ನ 2ನೇ ಅಲೆಯ ಸಮಯದಲ್ಲಿ ವಿಧಿಸಲಾದ ಲಾಕ್ ಡೌನ್ ವೇಳೆ ಇಂಥ ಯೋಜನೆ ಅವಶ್ಯವಿತ್ತೇ? ಈ ಹಣದಿಂದ ಸಾವಿರಾರು ಜೀವಗಳನ್ನು ಉಳಿಸಬಹುದಿತ್ತು,' ಎಂದು ರಾಹುಲ್ ಗಾಂಧಿ ಹೇಳಿದ್ದರು.
- **ಸುಪ್ರೀಂ ಹೇಳಿದ್ದೇನು?:** 2021ರ ಜನವರಿಯಲ್ಲಿ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು 2:1ರ ಅಭಿಮತ ಮುಂದಿಟ್ಟಿತು. ಸೆಂಟ್ರಲ್ ವಿಸ್ತಾ ಯೋಜನೆಗೆ ಹಸಿರು ನಿಶಾನೆ ತೋರಿಸಿದ್ದಲ್ಲದೆ, ಯೋಜನೆಗೆ ಅಗತ್ಯವಿದ್ದ ಭೂ ಬಳಕೆಯಲ್ಲಿನ ಕಾನೂನು ತೊಡಕುಗಳನ್ನೂ ನಿವಾರಿಸಿತು.

7. ಇವಿಎಂ ಮತ್ತು ವಿವಿಪ್ಯಾಟ್

- **ಪ್ರಕರಣ:** 2014ರ ಲೋಕಸಭಾ ಚುನಾವಣೆಯಲ್ಲಿ ಇವಿಎಂ ಯಂತ್ರಗಳನ್ನು ಮತ ಹಕ್ಕು ಚಲಾಯಿಸಲು ಬಳಸಲಾಯಿತು. ಬಿಜೆಪಿ ಅಭೂತಪೂರ್ವ ಗೆಲುವು ದಾಖಲಿಸಿತು.
- **ಪ್ರತಿಪಕ್ಷಗಳ ಆರೋಪ:** ಬಿಜೆಪಿ ಸರಕಾರ ಇವಿಎಂ ಯಂತ್ರಗಳ ಟ್ಯಾಂಪರಿಂಗ್ ಮಾಡುತ್ತಿದೆ ಎಂದು ಪ್ರತಿಪಕ್ಷಗಳು ಆರೋಪಿಸುತ್ತಲೇ ಬಂದಿವೆ. 2019ರ ಲೋಕಸಭೆ ಚುನಾವಣೆಗೂ ಮುನ್ನ ಪ್ರತಿ ವಿಧಾನಸಭಾ ಕ್ಷೇತ್ರದ ಶೇ.50ರಷ್ಟು ಮತಗಳನ್ನು ವಿವಿಪ್ಯಾಟ್‌ನೊಂದಿಗೆ ಸೇರಿಸಬೇಕು ಎಂದು 21 ಪ್ರತಿಪಕ್ಷಗಳು ಸುಪ್ರೀಂನಲ್ಲಿ ಅರ್ಜಿ ಸಲ್ಲಿಸಿದ್ದವು.
- **ಸುಪ್ರೀಂ ಹೇಳಿದ್ದೇನು?:** 2019ರ ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ, ಇವಿಎಂ ಮತದಾನ ವ್ಯವಸ್ಥೆ ಅತ್ಯಾಧುನಿಕ ಹಾಗೂ ನ್ಯಾಯಯುತವಾಗಿದೆ ಎಂದಿತ್ತು. 21 ಪ್ರತಿಪಕ್ಷಗಳ ಮರುಪರಿಶೀಲನಾ ಅರ್ಜಿಗೆ ಮನ್ನಣೆ ಸಿಗಲಿಲ್ಲ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 20.01.2023

8. ತೀರ್ಪುಗಳ ತರ್ಜುಮೆ ಸಿಜೆಗೆ ಮೋದಿ ಶ್ಲಾಘನೆ

ಉನ್ನತ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳ ನೇಮಕಾತಿ ವಿಚಾರದಲ್ಲಿ ಕೇಂದ್ರ ಸರ್ಕಾರ ಮತ್ತು ಸುಪ್ರೀಂಕೋರ್ಟ್ ನಡುವೆ ಜಟಾಪಟಿ ನಡೆಯುತ್ತಿರುವ ನಡುವೆಯೇ, ಪ್ರಧಾನಿ ನರೇಂದ್ರ ಮೋದಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಶ್ಲಾಘಿಸಿದ್ದಾರೆ.

ನ್ಯಾಯಾಲಯದ ತೀರ್ಪುಗಳನ್ನು ಕೃತಕ ಬುದ್ಧಿಮತ್ತೆ (ಎಐ) ನೆರವಿನಿಂದ ಪ್ರಾದೇಶಿಕ ಭಾಷೆಗಳಿಗೆ ತರ್ಜುಮೆ ಮಾಡುವ ಸಲಹೆಯನ್ನು ಸಿಜೆಐ ಚಂದ್ರಚೂಡ್ ಮಂಡಿಸಿದ್ದರು. ಎರಡು ದಿನ ಹಿಂದೆ ನಡೆದ ಕಾರ್ಯಕ್ರಮವೊಂದರಲ್ಲಿ ಸಿಜೆಐ ಚಂದ್ರಚೂಡ್ ಅವರು ಈ ಸಲಹೆ ಮಂಡಿಸಿರುವುದನ್ನು ಟ್ವಿಟ್‌ನಲ್ಲಿ ಪ್ರಸ್ತಾಪಿಸಿರುವ ಪ್ರಧಾನಿ, ಈ ಚಿಂತನೆಯಿಂದ ವಿಶೇಷವಾಗಿ ಯುವಜನತೆಗೆ ನೆರವಾಗುತ್ತದೆ ಎಂದಿದ್ದಾರೆ. ಸಿಜೆಐ ಭಾಷಣದ ವಿಡಿಯೋ ತುಣುಕನ್ನು ಕೂಡ ಪ್ರಧಾನಿ ಟ್ವೀಟ್ ಜೊತೆ ಹಂಚಿಕೊಂಡಿದ್ದಾರೆ. ಮಹಾರಾಷ್ಟ್ರ ಮತ್ತು ಗೋವಾ ಬಾರ್ ಕೌನ್ಸಿಲ್ ಮುಂಬೈಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಚಂದ್ರಚೂಡ್ ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯಗೊಳಿಸುವ ಮಹತ್ವವನ್ನು ಪ್ರತಿಪಾದಿಸಿದ್ದರು.

ಪ್ರಧಾನಿ ಹೇಳಿದ್ದೇನು?: ಭಾರತ ವೈವಿಧ್ಯಮಯ ಸಂಸ್ಕೃತಿ ಭಾಷೆಗಳನ್ನು ಹೊಂದಿದೆ. ಪ್ರಾದೇಶಿಕ ಭಾಷೆಗಳ ಉತ್ತೇಜನಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಅನೇಕ ಕ್ರಮ ಕೈಗೊಂಡಿದೆ. ಇಂಜಿನಿಯರಿಂಗ್, ಮೆಡಿಕಲ್ ಶಿಕ್ಷಣದ ಪಠ್ಯಕ್ರಮಗಳನ್ನು ಪ್ರಾದೇಶಿಕ ಭಾಷೆಯಲ್ಲಿ ನೀಡಲಾಗುತ್ತದೆ. ಸ್ಥಳೀಯ ಕೋರ್ಟ್‌ಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಬಳಸುವಂತೆ ಈ ಹಿಂದೆ ಹಲವು ಬಾರಿ ಪ್ರತಿಪಾದಿಸಿದ್ದೆ. ಸ್ಥಳೀಯ ಭಾಷೆಗಳಲ್ಲಿ ತೀರ್ಪು ಲಭ್ಯವಾದರೆ ಸಾಮಾನ್ಯ ಜನರಿಗೆ ನ್ಯಾಯಾಂಗದ ಕಾರ್ಯ ಸರಳವಾಗುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ.

ಕನ್ನಡದಲ್ಲಿ ಕಾನೂನು ನಿಘಂಟಿಗೆ ಸಮಿತಿ

ನ್ಯಾಯಾಂಗದಲ್ಲಿ ಕನ್ನಡ ಕಷ್ಟಸಾಧ್ಯವಾದರೂ ಪೂರಕ ಕ್ರಮಕೈಗೊಂಡರೆ ಹಂತ ಹಂತವಾಗಿ ಜಾರಿ ಸಾಧ್ಯವಿದೆ. ಮೊದಲಿಗೆ ಕಾನೂನು ನಿಘಂಟು ರಚಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ವಿಧಾನಸೌಧ ಬ್ಯಾಂಕ್ವೆಟ್ ಹಾಲ್ನಲ್ಲಿ ಏರ್ಪಡಿಸಿದ್ದ ನ್ಯಾಯಾಂಗದಲ್ಲಿ ಕನ್ನಡ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಾನೂನು, ತೀರ್ಪುಗಳಿಗೆ ಸಮಾನಾಂತರ ಶಬ್ದಗಳು ಸ್ಥಾಪಿತವಾದರೆ ಅನುಕೂಲವಾಗುತ್ತದೆ. ಈ ಸಂಬಂಧ ತಜ್ಞರ ಸಮಿತಿಯೊಂದನ್ನು ರಚಿಸಿ ಕಾನೂನು ನಿಘಂಟು ಹೊರತರಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿದರು. ಇದರಿಂದ ನ್ಯಾಯಾಧೀಶರಿಗೆ ಕನ್ನಡ ಬಳಕೆ ಸುಲಭವಾಗಲಿದೆ. ಮಹತ್ವದ ತೀರ್ಪುಗಳನ್ನು ಕನ್ನಡಕ್ಕೆ

ಅನುವಾದಿಸಿದರೆ ನ್ಯಾಯಾಧೀಶರು, ವಕೀಲರು, ಅಭಿಯೋಜಕರು ಹಾಗೂ ಕಕ್ಷಿದಾರರಿಗೆ ಸಹಾಯವಾಗಲಿದೆ ಎಂದರು. ಪ್ರಮುಖ ತೀರ್ಪುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ ನಂತರ ಎಲ್ಲ ನ್ಯಾಯಾಲಯಗಳು ಹಾಗೂ ಗ್ರಂಥಾಲಯಗಳಿಗೆ ವಿತರಿಸಿದರೆ ಹೆಚ್ಚು ಪ್ರಯೋಜನವಾಗಲಿದೆ. ಅಧಿಕಾರಿಗಳಿಗೂ ಪ್ರಾಥಮಿಕ ಮಾಹಿತಿ ಅಗತ್ಯವೆಂದು ಸಿಎಂ ಬೊಮ್ಮಾಯಿ ಸಲಹೆ ನೀಡಿದರು.

ಆಧಾರ: ವಿಜಯವಾಣಿ, ದಿನಾಂಕ: 23.01.2023

9. 21 Andaman islands named after Param Vir Chakra awardees

Prime Minister Narendra Modi named the 21 largest unnamed islands in the Andaman & Nicobar archipelago after 21 Param Vir Chakra awardees.

Mr. Modi participated in the ceremony through video conference and un- veiled a model of the national memorial dedicated to Netaji Subhas Chandra Bose that's to be built on Netaji Subhas Chandra Bose Dweep.

Home Minister Amit Shah was present in Port Blair at the culmination of a seven-day event organised by the Ministry of Home Affairs in honour of Netaji. He said the 126th birth anniversary of Netaji is being celebrated nation- wide as 'Parakram Divas'.

Stating that the identity of the Andaman was associated with the symbols of slavery instead of the memories of the freedom struggle, Mr.Modi said, "Even the names of our islands had the imprint of slavery."

Mr. Modi said that many messages are contained in the naming of the 21 islands. "The message is the message of Ek Bharat, Shrestha Bharat'; this message is the message of the bravery of our Armed Forces," he said. "Just like an ocean islands, similarly, the feeling of Ek Bharat, Shreshtha Batat ignites the spirit of 'Bharat Mata' and India First'," Mr. Modi added.

"From Major Somnath Sharma, Piru Singh, Major Shaitan Singh to Captain Manoj Pandey, Subedar Joginder Singh and Lance Naik Albert Ekka, from Veer Abdul Hameed and Major Ramaswamy Parameswaran to all 21 Paramveers, everyone had only one resolve - Nation First! India First! This resolution has now become immortal forever in the name of these islands. A hill in Andaman is al- so being dedicated in the name of Captain Vikram Batra from the Kargil war," Mr.Modi said.

A pole star in India's history' Mr. Shah said the memories of the heroes could never be erased nor were they dependent on anyone's mercy to live on.

He added that Netaji would shine like the pole star in India's history. He said Netaji was a great example of courage as he "travelled from Kolkata to Berlin by car through a terrain with a temperature of -45 degrees Celsius to liberate the nation". "But unfortunately, many attempts were made to erase his memories," Mr. Shah said. "After Narendra Modi became Prime Minister he had a statue of Subhas Chandra Bose installed in Kartavya Path [in Delhi], he

decided to celebrate Netaji's birth anniversary as Parakram Divas. And he chose the same day to announce the Netaji Subhas Chandra Bose Island as his memorial to ensure that it's developed in a manner that evokes deep respect for the great hero in the hearts of the people who set foot here for generations. I thank the Prime Minister from the bottom of my heart.

He said in 2018, when Ross Island was named after Netaji, Neil Island renamed Shaheed Island and Havelock Island named Swaraj Island it created a discourse around the Andaman & Nicobar Islands.

"Some places are blessed to play a historic role. And the A&N islands were blessed to play a significant role in India's Independence," Mr.Shah said.

Courtesy: The Hindu, dt: 24.01.2023

10. Former SC judge among 6 new Governors appointed

Former Supreme Court judge Justice S.Abdul Nazeer (retd) is among the six new faces appointed Governors by President Droupadi Murmu.

The President also accepted the resignations of Maharastra Governor Bhagat Singh Koshyari and Ladakh Lieutenant Governor R.K.Lathur in the latest gubernatorial reshufile.

Justice Nazeer (retd), who was part of the five judge Bench that delivered the November 2019 Ayodhya verdict, has been appointed Governor of Andhra Pradesh, while the incumbent, Biswa Bhushan Harichandan has been moved to the Chattisgarh Raj Bhavan.

The former judge, who also headed the five-judge Constitution Bench that upheld the Union government’s November 2016 decision to demonetise Rs.500 and Rs. 1000 currency notes, retired in January.

Four leaders of the Bharatiya Janata Party (BJP), including Gulab Chand Karatis, who was serving as the Leader of the Opposition in Rajasthan, have been appointed Governors.

Mr. Kataria will be the new Governor of Assam. The other BJP leaders who were nominated for governorship are Lakshman Prasad Acharya for Sikkim, C.P.Radhakrishna for Jharkhand and Shiv Pratap Shukla for Himachal Pradesh. In Maharastra, Mr.Koshyari has been replaced by Jharkhand Governor Ramesh Bais, while the Governor of Arunachal Pradesh Brig, B.D.Mishra (retd) will replace Mr.Mathur in Ladakh, Lt.Gen.K.T.Pradesh Governor.

The reshuffle also saw Chhattisgarh, Governor Anusuiya Uikye moving to Manipur, while the incumbent in Manipur, La Ganesan, was appointed as the Governor of Nagaland. Bihar Governor Phagu Chauhan has been moved to Meghalaya while incumbent Himachal Pradesh Governor Rajendra Vishwanath Arlekar will replace him in Bihar.

Following an uproar in Maharastra over his controversial remarks on Chhatrapati Shivaji and the calls for his removal by the Opposition parties, Mr.Koshyari had issued a statement in January saying that he had already expressed his desire to step down to Prime Minister Narendra Modi, Officials told *The Hindu* that in Ladakh as well the Union Home Ministry removed Mr.Mathur from the L.G.position amid an agitation by civil society groups. The protesting groups sought safeguards for the Union Territory, such as inclusion under the Sixth Schedule of the Constitution that provides protection to tribal-dominated areas.

Courtesy: The Hindu, Dated: 13.02.2023

11. Presiding officer can conduct only the mayor's poll:SC

The SC ruled that nominated members cannot vote in the election for mayor and ordered the LG's office to notify a schedule for the election for the election within 24 hours. This fourth attempt to hold the mayoral elections will hopefully bring down the curtains on an ugly chapter in the corporation's history that virtually grounded elected councillors for over two months and stalled munciple governance after an election that itself was delayed by many months. The SC has also ruled that the presiding officer can conduct only the mayor's poll and not that of the deputy mayor and the standing committee members.

A bench of Chief Justice D.Y.Chandrachud and Justices P.S.Narsimha and J.B.Pradiwala had discarded the arguments of MCD and the L.G. advocating voting rights for nominated members in the mayoral elections.

"As recommended by the chief minister GNCTD, I approve the proposal to convene the adjourned first meeting of MCD on Wednesday (February 22) at Civic Centre for election of mayor, deputy mayor and six members to the standing comittee," said the notice issued by the L.G.

The LG's nod came hours after CM Arvind Kejriwal recommended that the mayroal election be held on February 22. Reacting to the development. AAP MLA Durgesh Pathak said that the party abides by the Constitution and will do whatever is required to be done on the first day of the sitting under the Delhi Muncipal Corporation Act. "We welcome the Supreme Court's decision and will complete the election of all posts, including that of standing committee members. We are confident of winning all the posts," he said.

Though the SC decision had been a set back for the party. Delhi BJP spoksperson Praveen Shankar Kapoor said while the decision was welcome he hoped that AAP would allow the three polls to take place.

"We have some information that AAP will disrupt the proceedings of the house after the major's election. Fearing defeat they do not want to allow the standing committee to be former," Kapoor alleged.

"The newly elected mayor will preside over the election of six standing committee members and then announce the constitution of 12 zonal committees. The chief minister should commit to aldermen being allowed to vote in the zonal committees like in MCD's 2017-22 term".

Courtesy: Times of India, Dated: 19.02.2023

12. How to deal with fallout of speakers' decision:SC

Faced with ever so often petitions accusing speakers of partisan activities the Supreme Court wondered as to how the courts would deal with situations arising from actions and inactions of speakers in deciding or keeping pending petitions for disqualification of MLAs to allow political events overtake the outcome of adjudication leading to toppling of governments.

Hearing arguments for the fourth day on issues linked to the upheaval in Shiv Sena resulting in toppling of the MVA government in Maharastra, the SC flagged the courts concerns expressed repatedly in earlier judgents about the speakers alleged unconstitutional actions in deciding petitions for disqualification of MLAs under the 10th Schedule of the Constitution.

A bench of Chief Justice D.Y.Chandrachud M.R.Shah, Krishna Murari, Hima Kohli, and P.S.Narasimha said. "How should the SC deal with such situations which arise from time to time? The disqualification petitions are kept pending on one pretext or the other. The Speakers do not decide. Ultimately the events overtake the decision on the disqualification petitions and government get toppled."

In the 2019 Srimant B.Patil judgment the Justice N.V.Ramana-led three judge bench had expressed grave concern about the partisan role played by Speakers. It had said "There is a growing trend of Speakers acting against the constitutional duty of being neutral. Additionally political parties are indulging in horse trading and corrupt parties, due to which the citizens are denied stable governments. In these circumstances, Parliament is required to re-consider strengthening certain aspects of the Tenth Schedule so that such undemocratic parties are discourges."

Appearing for the Shinde faction, senior advocate N.K.Kaul said the Uddhav Thackeray faction having lost power in the game of politics and subsequent loss of party name and election symbol has rather ruilingly pleaded with the SC to usurp exclusive domains of separate constitutional authorities in the Speaker and the Election Commission and decide as the forum of first instance the proceedings against MLA under the anti-defection law and also determine which faction was the real Shiv Sena.

Kaul said even if the 38 rebel Sena MLAs were disqualified prior to the trust vote, it would have made no difference to the fate of the Thackeray-led MVA government, which

had lost majority in the House on June 21. “Thackeray was aware of the strength of his support in the House. Hence he resigned without facing the trust vote,” he said.

Looking at the composition of the 288 member Maharastra assembly and emerging equations with or without disqualification of rebel MLAs as submitted in chart from by Kaul, the CJI-led bench said, “Even if the SC had not indirectly stopped the Deputy Speaker from disqualifying the rebel MLAs by giving the legislators tome till July 12 last year to respond to the notices instead of the earlier two-day time period, and even if there was no pending removal motion against the Speaker restraining him from deciding the petitions, it is clear that even then the MVA government would have fallen.”

On the issue of whether the governor was right in asking Thackeray to face the floor test, Kaul said the governor had the option but to ensure that the government enjoyed majority support in the House. “He is neither concerned with disqualification proceedings pending with the Speaker nor about the dispute relating to which faction is the real Shiv Sena party,” he said adding though it has been settled by the EC in its recent order.

Kaul quoted the Shivraj Singh Chouhan judgment of the SC in 2020 authoted by Justice Chandrachud, which had ruled, “It is important to note that in directing a trust vote the governor does not favour a particulat political party. It is inevitable that the specific timing of a trust vote may tilt the balance towards the party possessing a majority at the time the trust vote is directed. All political parties are equally at risk of losing the support of their elected legislators, just as the legislators are at risk of losing the vote of the electorate. This is how the system of parliamentary governance operates.” The 2020 judgement had also said “The holding of a trust vote operators in district field from the issue as to whether one or more individual members of the legislative assembly have embarked upon a voluntary act of resignation or have incurred the wrath of the Tenth Sehcdule. Holding a trust vote is necessary to ascertain whether the council of minister headed by the chief minister has the confidence of the House.”

Courtesy: Times of India, Dated: 01.03.2023

13. Legislator facing disqualification can’t attend floor test:SC

Allowing an MP or an MLA who is facing disqualification under the anti-defection law to participate in the floor test caused by his own doings will defeat the very purpose of the Tenth Schedule, Chief Justice of India. D.Y.Chandrachud, heading a Constitution Bench, said.

Permitting a legislator, whose actions caused a split in the party and who is liable to be disqualified for defection to attend a trust vote would amount to “legitimising” a “constitutinal sin”, Chief Minister Eknath Shinde’s side, led by senior advocate Neeraj Kishan Kaul.

"On the other hand, you say somebody who defects causes a split within the party, is liable to be disqualified. At the same time, you say that even if that person is liable to be disqualified, in the meantime he can participate in the trust vote in the House" Chief Justice Chandrachud told Mr.Kaul.

The court asked whether a legislator who is the very reason for unsettling the ruling government can benefit from a subsequent floor test, which is the product of his actions.

"If the antecedent reasons for a floor test is based on the violation of the prescriptions in the Tenth Schedule, then holding the floor test will defeat the very basis and purpose of the Tenth Schedule. You are legitimising a defection which is otherwise not permissible under the Tenth Schedule" Chief Justice Chandrachud noted.

The legislator attending a trust vote would amount to "legitimising" a "constitutional sin" the court said: The court is hearing the dispute between Mr.Shinde and former Maharastra Chief Minister Uddhav Thackeray. Disqualification proceedings against Mr.Shinde and his faction under the Tenth Schedule are still pending before the Maharastra Assembly Speaker.

Courtesy: The Hindu, Dated: 01.03.2023

14. ಚುನಾವಣಾ ಆಯುಕ್ತರ ನೇಮಕಕ್ಕೆ ಹೊಸ ವ್ಯವಸ್ಥೆ

ಮಹತ್ವದ ಬೆಳವಣಿಗೆಯೊಂದರಲ್ಲಿ ದೇಶದ ಮುಖ್ಯ ಚುನಾವಣಾ ಆಯುಕ್ತರು ಹಾಗೂ ಚುನಾವಣಾ ಆಯುಕ್ತರ ನೇಮಕದ ಪದ್ಧತಿಯನ್ನು ಬದಲಿಸಿ ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠ ತೀರ್ಪು ನೀಡಿದೆ. ಪ್ರಧಾನಿ, ಲೋಕಸಭೆಯ ವಿಪಕ್ಷ ನಾಯಕ ಹಾಗೂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳನೊಳಗೊಂಡ ಸಮಿತಿಯ ಶಿಫಾರಸ್ಸಿನ ಮೇಲೆ ರಾಷ್ಟ್ರಪತಿಗಳು ಮುಖ್ಯ ಚುನಾವಣಾ ಆಯುಕ್ತರು ಹಾಗೂ ಚುನಾವಣಾ ಆಯುಕ್ತರನ್ನು ನೇಮಕ ಮಾಡಬೇಕೆಂದು ಸರ್ವೋಚ್ಚ ನ್ಯಾಯಾಲಯ ಆದೇಶಿಸಿದೆ.

ಈವರೆಗೆ ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇಲೆ ರಾಷ್ಟ್ರಪತಿಗಳು ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರನ್ನು ನೇಮಿಸುತ್ತಿದ್ದರು. ಅದನ್ನು ಬದಲಿಸಿ ಇನ್ನು ಮುಂದೆ ಸಮಿತಿಯ ಶಿಫಾರಸಿನಂತೆ ರಾಷ್ಟ್ರಪತಿಗಳು ನೇಮಕ ಮಾಡಲಿದ್ದಾರೆ. ಈ ಕುರಿತು ಹೊಸ ನಿರ್ದೇಶನವೇ ಜಾರಿಯಲ್ಲಿರಲಿದೆ ಎಂದು ತೀರ್ಪಿನಲ್ಲಿ ಪಂಚಸದಸ್ಯ ನ್ಯಾಯಪೀಠ ಹೇಳಿದೆ. ಈ ತೀರ್ಪನ್ನು ಕಾಂಗ್ರೆಸ್ ಮುಂತಾದ ವಿಪಕ್ಷಗಳು ಮುಕ್ತ ಕಂಠದಿಂದ ಸ್ವಾಗತಿಸಿವೆ.

ಚುನಾವಣಾ ವ್ಯವಸ್ಥೆ ಹದಗೆಟ್ಟಿದೆ: ಪ್ರಜಾಪ್ರಭುತ್ವದಲ್ಲಿ ಚುನಾವಣಾ ವ್ಯವಸ್ಥೆ ಶುದ್ಧವಾಗಿರಬೇಕು. ಇಲ್ಲದಿದ್ದರೆ ಅದು ದುರಂತಕ್ಕೆ ದಾರಿಮಾಡಿಕೊಡುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಚುನಾವಣಾ ವ್ಯವಸ್ಥೆಯನ್ನು ಅವ್ಯಾಹತವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಸಮಾಧಿ ತೋಡಿದಂತೆ. ಹೀಗಾಗಿ ಚುನಾವಣಾ ವ್ಯವಸ್ಥೆಯಲ್ಲಿ ಶುದ್ಧತೆ ಕಾಪಾಡಿಕೊಳ್ಳಲು ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರ ನೇಮಕ ಪದ್ಧತಿಯನ್ನು ಬದಲಿಸುತ್ತಿದ್ದೇವೆ ಎಂದು ತೀರ್ಪಿನಲ್ಲಿ ಸುಪ್ರೀಂಕೋರ್ಟ್ ಹೇಳಿದೆ.

ಲೋಕಸಭೆಯಲ್ಲಿ ಅಧಿಕೃತ ವಿಪಕ್ಷ ನಾಯಕರು ಇಲ್ಲದಿದ್ದರೆ ಎರಡನೇ ಅತಿದೊಡ್ಡ ಪಕ್ಷದ ನಾಯಕರನ್ನೇ ಸಮಿತಿಗೆ ನೇಮಿಸಬೇಕು ಎಂದು ನ್ಯಾಯಪೀಠ ತಿಳಿಸಿದೆ. ದೇಶದ ಚುನಾವಣಾ ಆಯುಕ್ತರ

ನೇಮಕಕ್ಕೂ ನ್ಯಾಯಾಧೀಶರನ್ನು ನೇಮಕ ಮಾಡಲು ಇರುವ ಕೊಲಿಜಿಯಂ ಮಾದರಿಯ ವ್ಯವಸ್ಥೆ ತರಬೇಕು ಎಂದು ಕೆಲ ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳ ವಿಚಾರಣೆ ನಡೆಸಿದ ಸಾಂವಿಧಾನಿಕ ಪೀಠ ಈ ತೀರ್ಪು ನೀಡಿದೆ.

ಕಾಂಗ್ರೆಸ್, ಟಿಎಂಸಿ, ಆಪ್, ಶಿವಸೇನೆ ಸ್ವಾಗತ: 'ಸುಪ್ರೀಂಕೋರ್ಟ್‌ನ ಐತಿಹಾಸಿಕ ತೀರ್ಪಿನಿಂದಾಗಿ ಚುನಾವಣಾ ಆಯೋಗ ಕೇಂದ್ರ ಸರ್ಕಾರದ ಪ್ರಭಾವ ಹಾಗೂ ಅವಲಂಬನೆಯಿಂದ ಮುಕ್ತಗೊಳ್ಳಲಿದೆ. ಅದರಿಂದಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ಪ್ರಾಮಾಣಿಕತೆ ಬರಲಿದೆ' ಎಂದು ಕಾಂಗ್ರೆಸ್ ನಾಯಕ ಆನಂದ ಶರ್ಮಾ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಈ ತೀರ್ಪು ಪ್ರಜಾಪ್ರಭುತ್ವದ ಜಯ' ಎಂದು ಹೇಳಿದ್ದಾರೆ. ಆಪ್ ನಾಯಕ ಸಂಜಯ್ ಸಿಂಗ್ ಕೂಡ ಇದು ಪ್ರಜಾಪ್ರಭುತ್ವವನ್ನು ಶಕ್ತಿಯುತಗೊಳಿಸುವ ತೀರ್ಪು ಎಂಬು ಬಣ್ಣಿಸಿದ್ದಾರೆ. ಶಿವಸೇನೆ ನಾಯಕಿ ಪ್ರಿಯಾಂಕಾ ಚತುರ್ವೇದಿ ಇದೊಂದು ಮಹತ್ವದ ಮೈಲುಗಲ್ಲು ಸ್ಥಾಪಿಸಲಿರುವ ತೀರ್ಪು ಎಂದಿದ್ದಾರೆ.

ಆಧಾರ: ಕನ್ನಡ ಪ್ರಭ, ದಿನಾಂಕ:03.03.2023

15. ಕಡ್ಡಾಯ ಮತದಾನದ ಹಕ್ಕು: ಪಿಐಎಲ್ ವಜಾಗೊಳಿಸಿದ ದೆಹಲಿ ಹೈಕೋರ್ಟ್

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಮತದಾನವನ್ನು ಕಡ್ಡಾಯಗೊಳಿಸುವಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ದೆಹಲಿ ಹೈಕೋರ್ಟ್ ತಳ್ಳಿಹಾಕಿದ್ದು 'ವ್ಯಕ್ತಿಯೊಬ್ಬನಿಗೆ ಮತದಾನ ಮಾಡುವಂತೆ ಒತ್ತಾಯಿಸಲು ಸಾಧ್ಯವಿಲ್ಲ' ಎಂದು ಹೇಳಿದೆ.

ನಾವು ಕಾನೂನು ರೂಪಿಸುವವರಲ್ಲ. ನಾವು ಅಂಥ ನಿರ್ದೇಶನವನ್ನು ನೀಡಲು ಸಾಧ್ಯವಿಲ್ಲ. ಸಂವಿಧಾನದಲ್ಲಿ ಮತದಾನವನ್ನು ಕಡ್ಡಾಯಗೊಳಿಸುವ ಯಾವುದೇ ಅವಕಾಶವಿದೆಯೇ? ಮುಖ್ಯ ನ್ಯಾಯಮೂರ್ತಿ ಸುಬ್ರಮಣ್ಯಂ ಪ್ರಸಾದ್ ಅವರನ್ನೊಳಗೊಂಡ ನ್ಯಾಯಪೀಠವು ಹೇಳಿದೆ.

ಅರ್ಜಿದಾರರಾದ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರಿಗೆ ಅರ್ಜಿಯನ್ನು ದಂಡದೊಂದಿಗೆ ವಜಾಗೊಳಿಸುವುದಾಗಿ ನ್ಯಾಯಪೀಠವು ಎಚ್ಚರಿಕೆ ನೀಡಿದ ಬಳಿಕ ಅರ್ಜಿದಾರರು ಅರ್ಜಿಯನ್ನು ಹಿಂಪಡೆದರು.

'ಕಡ್ಡಾಯ ಮತದಾನವು ಪ್ರತಿಯೊಬ್ಬ ನಾಗರಿಕನ ಧ್ವನಿಯನ್ನು ಖಚಿತಪಡಿಸುತ್ತದೆ. ಪ್ರಜಾಪ್ರಭುತ್ವದ ಗುಣಮಟ್ಟವನ್ನು ಸುಧಾರಿಸಿ ಮತದಾನದ ಹಕ್ಕನ್ನು ಭದ್ರಪಡಿಸುತ್ತದೆ' ಎಂದು ಪ್ರತಿಪಾದಿಸಿ ಅಶ್ವಿನಿ ಕುಮಾರ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ವೇಳೆ ಅರ್ಜಿದಾರರು ವಾಹನ ಚಾಲಕರ ಉದಾಹರಣೆ ನೀಡಿ 'ವಾಹನ ಚಾಲಕರಲ್ಲಿ ಅನೇಕರು ಇತರ ನಗರಗಳಲ್ಲಿ ಕೆಲಸ ಮಾಡುತಿರುತ್ತಾರೆ. ಹೀಗಾಗಿ ಅವರಿಗೆ ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು 'ಅದು ಅವರ ಹಕ್ಕು ಮತ್ತು ಆಯ್ಕೆಯಾಗಿದೆ' ಎಂದು ಹೇಳಿತ್ತು.

'ಚೆನ್ನೈನಲ್ಲಿ ಕೆಲಸದ ನಿಮಿತ್ತ ಇರುವ ವ್ಯಕ್ತಿಯೊಬ್ಬರಿಗೆ ನಾವು ಅವರ ಸ್ವಂತ ಊರಾದ ಶ್ರೀನಗರಕ್ಕೆ ಬಂದು ಕಡ್ಡಾಯವಾಗಿ ಮತದಾನ ಮಾಡಿ ಎಂದು ಒತ್ತಾಯಿಸಲು ಸಾಧ್ಯವಿಲ್ಲ. ನಿಮ್ಮ ವಾದ ಹೇಗಿದೆಯೆಂದರೆ ಆ ವ್ಯಕ್ತಿಯನ್ನು ಪೊಲೀಸರು ಹೇಗಾದರೂ ಹುಡುಕಿ ಆತನನ್ನು ಶ್ರೀನಗರಕ್ಕೆ ಕಳುಹಿಸಬೇಕು ಎಂಬಂತಿದೆ' ಎಂದು ಹೇಳಿದ ನ್ಯಾಯಪೀಠವು 'ಈ ವಿಚಾರದಲ್ಲಿ ನ್ಯಾಯಾಲಯವು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದು ಹೇಳಿತು.

ಆಧಾರ: ಪ್ರಜಾವಾಣಿ, ದಿನಾಂಕ:18.03.2023

ಭಾಗ – 7

ಹೊರ ರಾಜ್ಯಗಳ ಸುದ್ದಿಗಳು

1. ತಮಿಳ್ನಾಡಲ್ಲಿ ಸರ್ಕಾರ V/s ಗೌರ್ನರ್

ರಾಜಧಾನಿ ದೆಹಲಿ, ಪಶ್ಚಿಮ ಬಂಗಾಳ ಬಳಿಕ ಈಗ ತಮಿಳುನಾಡಿನಲ್ಲಿ ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರದ ನಡುವಣ ಸಂಘರ್ಷ ವಿಕೋಪಕ್ಕೆ ಹೋಗಿದೆ. ವರ್ಷದ ಮೊದಲ ವಿಧಾನಸಭೆ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದ ರಾಜ್ಯಪಾಲ ಆರ್.ಎನ್. ರವಿ, ಸರ್ಕಾರ ಬರೆದುಕೊಟ್ಟಿದ್ದ ಭಾಷಣದ ಕೆಲವೊಂದು ಅಂಶಗಳನ್ನು ಬೇಕಂತಲೇ ಕೈಬಿಟ್ಟಿರುವುದು ವಿವಾದಕ್ಕೆ ಕಾರಣವಾಗಿದೆ.

ಸರ್ಕಾರ ಬರೆದುಕೊಟ್ಟ ಭಾಷಣವನ್ನು ವರ್ಷದ ಮೊದಲ ಕಲಾಪದಲ್ಲಿ ಬದಲಾವಣೆ ಇಲ್ಲದೆ ಓದಬೇಕಾಗಿರುವ ರಾಜ್ಯಪಾಲರು ಆ ಸಂಪ್ರದಾಯವನ್ನು ಉಲ್ಲಂಘಿಸಿದ್ದರಿಂದ ರಾಜ್ಯ ಸರ್ಕಾರ ಸಿಟ್ಟಾಗಿದೆ.

ಸರ್ಕಾರ ಬರೆದುಕೊಟ್ಟಿದ್ದ ಭಾಷಣ ಮಾತ್ರ ಕಡತಕ್ಕೆ ಹೋಗಬೇಕು ಎಂಬ ನಿರ್ಣಯ ಮಂಡಿಸಿದೆ. ಈ ನಿರ್ಣಯವನ್ನು ಸ್ಪೀಕರ್ ಅಂಗೀಕರಿಸುತ್ತಿದ್ದಂತೆ ಅಸಮಾಧಾನಗೊಂಡ ರಾಜ್ಯಪಾಲ ರವಿ ಅವರು ರಾಷ್ಟ್ರಗೀತೆ ಹಾಡುವುದಕ್ಕೂ ಕಾಯದೆ ಕಲಾಪದಿಂದ ಹೊರ ನಡೆದಿದ್ದಾರೆ. ತಮಿಳುನಾಡಿನ ಇತಿಹಾಸದಲ್ಲಿ ರಾಜ್ಯಪಾಲರು ಈ ರೀತಿ ಸಭಾತ್ಯಾಗ ಮಾಡಿರುವುದು ಇದೇ ಮೊದಲು ಎಂದು ಹೇಳಲಾಗಿದೆ.

ಘಟನೆಯನ್ನು ಡಿಎಂಕೆ ನಾಯಕರು, ಬೆಂಬಲಿಗರು ತೀವ್ರವಾಗಿ ಖಂಡಿಸಿದ್ದು, ಟೀಟರ್‌ನಲ್ಲಿ 'ಗೆಟೌಟ್ ರವಿ' ಹೆಸರಲ್ಲಿ ಅಭಿಯಾನ ಆರಂಭಿಸಿದ್ದಾರೆ. ಇನ್ನೊಂದೆಡೆ ರಾಜ್ಯಪಾಲರ ನಡೆಯನ್ನು ಬಿಜೆಪಿ ಸಮರ್ಥಿಸಿಕೊಂಡಿದೆ. ಅಲ್ಲದೆ ರಾಜ್ಯಪಾಲ ವಿರುದ್ಧ ನಿರ್ಣಯ ಅಂಗೀಕಾರವು ಹುದ್ದೆಗೆ ತೋರಿದ ಅಗೌರವ ಎಂದು ಟೀಕಿಸಿದೆ. ವಿಪಕ್ಷ ಎಐಡಿಎಂಕೆ ಕೂಡಾ ರಾಜ್ಯಪಾಲರು ತಮ್ಮ ಸ್ಥಾನದಲ್ಲಿ ಕುಳಿತಿದ್ದ ವೇಳೆ ಮುಖ್ಯ ಮಂತ್ರಿ ಎದ್ದು ನಿಂತು ಮಾತನಾಡಿದ್ದು ಅನುಚಿತ ವರ್ತನೆ ಎಂದು ಕಿಡಿಕಾರಿದೆ.

ಭಾಷಣದಲ್ಲಿ ಯಾವುದಕ್ಕೆ ಕೊಕ್: ತಮಿಳುನಾಡು ರಾಜ್ಯಪಾಲರು ಭಾಷಣ ಆರಂಭಿಸುತ್ತಿದ್ದಂತೆ ಡಿಎಂಕೆ ಮಿತ್ರ ಪಕ್ಷಗಳು ಘೋಷಣೆ ಕೂಗಿದವು. ಆದರೂ ರಾಜ್ಯಪಾಲರು ಭಾಷಣ ಮುಂದುವರಿಸಿದರು. ರಾಜ್ಯ ಸರ್ಕಾರ ಸಿದ್ಧಪಡಿಸಿದ್ದ ಭಾಷಣದಲ್ಲಿ ಜಾತ್ಯತೀತತೆ ಕುರಿತು ಉಲ್ಲೇಖ ಇತ್ತು. ತಮಿಳುನಾಡು ಶಾಂತಿಯ ನೆಲೆವೀಡು ಎಂದು ಬಣ್ಣಿಸಲಾಗಿತ್ತು. ಪೆರಿಯಾರ್, ಅಂಬೇಡ್ಕರ್, ಕಾಮರಾಜ್, ಅಣ್ಣಾದುರೈ ಹಾಗೂ ಕರುಣಾನಿಧಿ ಅವರ ಪ್ರಸ್ತಾಪವಿತ್ತು. ಆ ಎಲ್ಲ ಅಂಶಗಳನ್ನೂ ಗೌರ್ನರ್ ಬೇಕಂತಲೇ ಓದಲಿಲ್ಲ. ಡಿಎಂಕೆ ಉತ್ತೇಜಿಸುತ್ತಿರುವ ದ್ರಾವಿಡ ಮಾದರಿ ಕುರಿತೂ ಓದಲಿಲ್ಲ, ಈ ಹಿನ್ನೆಲೆಯಲ್ಲಿ ತಮಿಳುನಾಡು ವಿಧಾನಸಭೆಯ ನಿರ್ಣಯಕ್ಕೆ ವಿರುದ್ಧವಾಗಿ ರಾಜ್ಯಪಾಲರು ವರ್ತಿಸಿದ್ದಾರೆ ಎಂದು ಸ್ಟಾಲಿನ್ ಅವರು

ನಿರ್ಣಯ ಮಂಡಿಸಿ, ಸರ್ಕಾರ ನೀಡಿರುವ ಭಾಷಣ ಮಾತ್ರ ಕಡತಕ್ಕೆ ಹೋಗಬೇಕು ಎಂದು ಪ್ರತಿಪಾದಿಸಿದರು. ಸ್ಪೀಕರ್ ನಿರ್ಣಯ ಅಂಗೀಕರಿಸಿದರು.

ರವಿ ಅವರು ನೇಮಕವಾದಾಗಿನಿಂದಲೂ ಸರ್ಕಾರ ಹಾಗೂ ರಾಜ್ಯಪಾಲರ ನಡುವೆ ಸಂಘರ್ಷ ನಡೆಯುತ್ತಿದೆ. ಅವರು ಬಿಜೆಪಿ ನಾಯಕರ ರೀತಿ ವರ್ತಿಸುತ್ತಿದ್ದಾರೆ ಎಂಬುದು ಸರ್ಕಾರದ ಆರೋಪ. ಮತ್ತೊಂದೆಡೆ, ಸರ್ಕಾರ ಕಳಿಸಿರುವ 21ಕ್ಕೂ ಹೆಚ್ಚು ಮಸೂದೆಗಳಿಗೆ ರಾಜ್ಯಪಾಲರು ಹಾಕದಿರುವುದು ಸರ್ಕಾರದ ಆಕ್ರೋಶವನ್ನು ಹೆಚ್ಚಿಸಿದೆ.

ರಾಮಾ ಜೋಯಿಸ್ ಕೂಡ ಮಾಡಿದ್ದರು

2004ರಲ್ಲಿ ಬಿಹಾರದ ರಾಜ್ಯಪಾಲರಾಗಿದ್ದ ಕನ್ನಡಿಗ ದಿವಂಗತ ರಾಮಾ ಜೋಯಿಸ್ ಅವರು ಗಣರಾಜ್ಯೋತ್ಸವಕ್ಕಾಗಿ ಆರ್‌ಜೆಡಿ ಸರ್ಕಾರ ಸಿದ್ಧಪಡಿಸಿಕೊಟ್ಟಿದ್ದ ಭಾಷಣವನ್ನು ಓದಲು ನಿರಾಕರಿಸಿದ್ದರು. ಸರ್ಕಾರವನ್ನು ಹೊಗಳಿ ಸಿದ್ಧಪಡಿಸಿದ್ದ ಭಾಷಣದ ಬದಲಿಗೆ ಬಿಹಾರದಲ್ಲಿ ಕಾನೂನು ಸುವ್ಯವಸ್ಥೆ ಕುಸಿದು ಬಿದ್ದಿದೆ ಎಂದು ತಾವೇ ಭಾಷಣ ಮಾಡಿದ್ದರು. ಅದು ತೀವ್ರ ವಿವಾದಕ್ಕೆ ಕಾರಣವಾಗಿತ್ತು.

ಏನಿದು ವಿವಾದ:

- ಸೋಮವಾರ ತಮಿಳುನಾಡು ವಿಧಾನ ಸಭೆಯಲ್ಲಿ ವರ್ಷದ ಮೊದಲ ಅಧಿವೇಶನ.
- ಸರ್ಕಾರ ಬರೆದುಕೊಟ್ಟ ಭಾಷಣ ಯಥಾವತ್ ಓದಬೇಕಿದ್ದ ರಾಜ್ಯಪಾಲ ಆರ್.ಎನ್.ರವಿ.
- ಭಾಷಣದಲ್ಲಿನ ಕೆಲ ಅಂಶಗಳನ್ನು ಓದದ ರಾಜ್ಯಪಾಲ: ಸರ್ಕಾರದಿಂದ ತೀವ್ರ ಆಕ್ಷೇಪ.
- ಸರ್ಕಾರದ ಭಾಷಣವನ್ನೇ ಅಂಗೀಕರಿಸಬೇಕೆಂದು ಸಿಎಂ ಸ್ಟಾಲಿನ್ ನಿರ್ಣಯ ಮಂಡನೆ.
- ಅಸಮಾಧಾನಿತ ರಾಜ್ಯಪಾಲರಿಂದ ಸಭಾತ್ಯಾಗ: ಇಂತಹ ಘಟನೆ ಇದೇ ಮೊದಲು.

ಆಧಾರ: ಕನ್ನಡ ಪ್ರಭ, ದಿನಾಂಕ: 10.01.2023

2. ರಾಜ್ಯಪಾಲ ರವಿ ವಿರುದ್ಧ ದೂರು

ತಮಿಳುನಾಡಿನಲ್ಲಿ ಅಡಳಿತಾರೂಡ ಡಿಎಂಕೆ ಪಕ್ಷ ಹಾಗೂ ರಾಜ್ಯಪಾಲ ಆರ್.ಎನ್.ರವಿ ನಡುವಣ ತಿಕ್ಕಾಟ ಮತ್ತೊಂದು ಮಗ್ಗುಲಿಗೆ ಹೊರಳಿದೆ.

ಸಂಸದರಾದ ಟಿ.ಆರ್.ಬಾಲು, ಎ.ರಾಜಾ, ಪಿ.ವಿಲ್ಸನ್ ಹಾಗೂ ತಮಿಳುನಾಡಿನ ಕಾನೂನು ಸಚಿವ ಎಸ್.ರಘುಪತಿ ಅವರನ್ನೊಳಗೊಂಡ ನಿಯೋಗವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ರಾಜ್ಯಪಾಲರ ವಿರುದ್ಧ ದೂರು ಸಲ್ಲಿಸಿದೆ. ರವಿ ಅವರು ಇದೇ 9ರಂದು ಸದನವನ್ನು ಉದ್ದೇಶಿಸಿ

ಮಾತನಾಡುವಾಗ ಸಂವಿಧಾನದ ನಡಾವಳಿಗಳು ಹಾಗೂ ಸದನದ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಾರೆ ಎಂದು ನಿಯೋಗವು ರಾಷ್ಟ್ರಪತಿಯವರಿಗೆ ತಿಳಿಸಿದೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ರಾಷ್ಟ್ರಪತಿಯವರಿಗೆ ಬರೆದಿದ್ದ ಪತ್ರವನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿದೆ. ಆ ಪತ್ರದಲ್ಲಿ ಏನಿದೆ ಎಂಬುದು ಮುಖ್ಯಮಂತ್ರಿಯವರಿಗಷ್ಟೇ ಗೊತ್ತು ಎಂದು ಟಿ.ಆರ್.ಬಾಲು ತಿಳಿಸಿದ್ದಾರೆ.

ಸ್ಟಾಲಿನ್ ಅವರು ಹೇಳಿದ್ದನ್ನೆಲ್ಲಾ ರಾಷ್ಟ್ರಪತಿಯವರಿಗೆ ವಿವರಿಸಿದ್ದೇವೆ. ಪತ್ರದಲ್ಲಿ ಉಲ್ಲೇಖಿಸಿರುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳುವಂತೆ ಮನವಿಯನ್ನೂ ಮಾಡಿದ್ದೇವೆ. ಈ ಕುರಿತು ಪರಿಶೀಲನೆ ನಡೆಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದು ಹೇಳಿದ್ದಾರೆ.

ರವಿ ಅವರು ಜನವರಿ 13 ನವದೆಹಲಿಗೆ ಭೇಟಿ ನೀಡಲಿದ್ದು, ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗುವ ಸಾಧ್ಯತೆ ಇದೆ.

ಆಧಾರ: ಪ್ರಜಾವಾಣಿ, ದಿನಾಂಕ: 13.01.2023

3. Goa assembly passes unanimous resolution against Kalasa-Banduri

After days of soaking criticism from the opposition over the central nod to Karnataka's detailed project report (DPR) related to the Kalasa-Banduri project along the Mahadayi river the state assembly after a several hour-long discussion which ended late, unanimously resolved to object to "any attempt of out-of-basin diversion of water from the Mahadayi river-basin."

The resolution was passed late night after a six-hour discussion on the subject which also led to the expulsion of one opposition legislator, Viresh Borkar and The Revolutionary Goans party during the discussion, in which nearly every member of the state assembly spoke on the contentious issue.

The leader of the Congress legislature party Yuri Alemao accused the Bharatiya Janata Party of trying to play politics over the interstate river water sharing issue.

"The Union government has weaponised the Mahadayi issue and is now using it as a political weapon," Alemao said, while also slamming former Chief Minister late Manohar Parrikar of damaging Goa's position in the dispute in 2018, ahead of the Karnataka state polls, when he wrote to BS Yediyurappa, who was then a senior BJP leader, that he would not object to Karnataka's demand for drinking water from the Mahadayi river.

Sawant, however, dismissed Alemao's claim, adding that his government was doing all it can to lobby with the Centre for fair implementation of the Tribunal's award.

"We have demanded that the Union government immediately constitute the Mahadayi Water Management Authority, which-as directed by the Tribunal in its award - will be tasked

with monitoring the implementation of the award. We have also sought that the Authority be headquartered in Goa," the Chief Minister said.

"We will oppose the diversion of water from Mahadayi basin, we are firm on it. We will urge the central government for an immediate constitution of the Mahadayi Water Management Authority as given in the award and also urged for the withdrawal of the DPR sanctioned by the Central Water Commission," the unanmously passed resolution said.

"They (Karnataka) may be watching us to check whether we are fighting. Instead of making allegations are counter allegations, we should make a strategy to fight the battle, politically, technical and even legally... Perhaps it may be an election agent for Karnataka. But for us it’s not a political battle. For us is a battle of existence. If water stops coming to Goa then it will affect the state and co identity. Definitely it will affect. Hence we need to unite on the issue and should not make a political battle," Sawant to the state assembly.

Courtesy: Deccan Herald, dt: 21.01.2023

4. Odisha Minister shot dead by former security officer

Odisha Health and Family Welfare Minister Naba Kisore Das was shot dead by an assistant sub-inspector of police in Brajarajnagar town in the State.

The accused, Gopal Das, who was posted at the Gandhi Chowk police out-post of the town. He had earlier been the personal security officer of the Minister.

On Sunday afternoon, Mr. Gopal Das reportedly fired from his service revolver at Gandhi Chowk when the Minister was stepping out of his vehicle. Mr. Naba Kisore Das had arrived in the town to inaugurate an office.

"As per preliminary information, the Minister was going to attend a function within the Brajarajnagar police station limits. Around 10 minutes past noon, when he came out of the vehicle, one person opened fire at him from a very close range," Deepak Kumar, Inspector-General of Police, Northern Range, said.

"The inspector in charge of the Brajarajnagar police station and a constable immediately overpowered the assailant. After two rounds of fire, the two police personnel managed to change the direction of his revolver-holding hand towards the sky. In this process, the inspector in charge sustained injuries and another person was hit by a bullet," Mr. Kumar explained.

Hit by two rounds of bullets, the Minister collapsed, first in his car and then in a pool of blood on the ground. The police and supporters took him to the Jharsuguda district head-quarters hospital, after which he was flown to Bhubaneswar for treatment at Apollo Hospital.

Despite the doctors' efforts, the Minister was declared dead around 8 p.m. According to Apollo Hospital, a bullet entered and exited the body, injuring his heart and left lung, causing internal bleeding.

Family members of the accused said he had mental depression. A Berhampur-based psychiatrist said Mr. Gopal Das was under his treatment for manic depressive disorder. Chief Minister Naveen Patnaik condemned the attack on the Health Minister. "I am shocked and distressed over the very unfortunate demise of Minister Das," he said. "He was an asset for both the government and the party. He has successfully carried out many initiatives in the Health Department to the benefit of the people. As a leader, he was instrumental in strengthening the Biju Janata Dal (BJD)."

The Crime Branch of the State police has been ordered to investigate the fatal attack. Additional Director-General of Police Arun Bothra, along with a seven-member Crime Branch team, rushed to the spot. The Odisha police did not issue any statement regarding the motivation of the shooter, his mental condition, or whether the murder was pre-planned.

"The person had recovered from the disease due to regular medication. However, there was every chance of a relapse if prescribed medicines are not taken regularly. Since he was posted away in Jharsuguda district, I have no idea if he was taking medicines as per advice," said Chandrasekhar Tripathy, the psychiatrist treating Mr. Gopal Das.

Courtesy: The Hindu, dt: 30.01.2023

5. ರಾಜ್ಯಪಾಲರಿಗೆ ಅಧಿವೇಶನ ವಿಳಂಬ ಮಾಡುವ ಅಧಿಕಾರವಿಲ್ಲ: ಸುಪ್ರೀಂ

ಪಂಜಾಬ್ ವಿಧಾನಸಭಾ ಅಧಿವೇಶನ ಕರೆಯುವ ವಿಷಯದಲ್ಲಿ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಮತ್ತು ಮುಖ್ಯಮಂತ್ರಿ ಭಗವಂತ್ ಸಿಂಗ್ ಮಾನ್ ನಡುವಿನ ಸಮರದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ವಿಧಾನಸಭೆ ಅಧಿವೇಶನ ಕರೆಯುವುದನ್ನು ವಿಳಂಬ ಮಾಡುವ ಯಾವುದೇ ವಿವೇಚನಾಧಿಕಾರ ರಾಜ್ಯಪಾಲರಿಗೆ ಇಲ್ಲ ಎಂದು ಸ್ಪಷ್ಟಪಡಿಸಿದೆ. ಇದರ ಜೊತೆಗೆ, ರಾಜ್ಯಪಾಲರು ಕೇಳಿದ ಮಾಹಿತಿ ಒದಗಿಸುವುದು ಮುಖ್ಯಮಂತ್ರಿಯ ಸಾಂವಿಧಾನಿಕ ಹೊಣೆಗಾರಿಕೆ ಎಂದು ಸಿಎಂ ಮಾನ್‌ಗೆ ಬುದ್ಧಿ ಹೇಳಿದೆ.

ಜೊತೆಗೆ, ಒಬ್ಬರು ತಮ್ಮ ಸಾಂವಿಧಾನಿಕ ಕರ್ತವ್ಯ ನಿರ್ವಹಿಸಿಲ್ಲ ಎಂಬುದು ಇನ್ನೊಬ್ಬರಿಗೆ ಕರ್ತವ್ಯ ನಿರ್ವಹಣೆ ವೈಫಲ್ಯಕ್ಕೆ ಕಾರಣವಾಗಬಾರದು ಎಂದು ತಿಳಿಹೇಳಿದೆ. ಜೊತೆಗೆ ಶಿಷ್ಟಾಚಾರ ಮತ್ತು ಮುತ್ಸದ್ಧಿ ಪ್ರೌಢತೆ ಬಗ್ಗೆ ಎರಡೂ ತಂಡಗಳಿಗೆ ಸಾಂವಿಧಾನಿಕ ನೀತಿ ಪಾಠದ ಅಗತ್ಯವಿದೆ ಎಂದು ಕಠಿಣ ಶಬ್ದಗಳಲ್ಲಿ ಹೇಳಿದೆ.

ವಿವಾದ ಏಕೆ: ಇತ್ತೀಚೆಗೆ ಪಂಜಾಬ್ ಸರ್ಕಾರ ಸರ್ಕಾರಿ ಶಾಲೆಗಳ 36 ಪ್ರಾಂಶುಪಾಲರನ್ನು ತರಬೇತಿ ಹೆಸರಲ್ಲಿ ಸಿಂಗಾಪುರಕ್ಕೆ ಕಳುಹಿಸಿತ್ತು. ಇವರನ್ನು ಯಾವ ಮಾನದಂಡದಲ್ಲಿ ಆಯ್ಕೆ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡಿ ಎಂದು ರಾಜ್ಯಪಾಲ ಪುರೋಹಿತ್ ಸರ್ಕಾರವನ್ನು ಪ್ರಶ್ನಿಸಿದ್ದರು. ಇದಕ್ಕೆ

ಮುಖ್ಯಮಂತ್ರಿ ಮಾನ್ ಸೂಕ್ತ ಉತ್ತರ ನೀಡುವ ಬದಲು, ನಾನು 3 ಕೋಟಿ ಪಂಜಾಬಿ ಜನರಿಗೆ ಉತ್ತರದಾಯಿತ್ವ ಹೊಂದಿದ್ದೇನೆಯೇ ಹೊರತೂ ಕೇಂದ್ರದಿಂದ ನೇಮಕಗೊಂಡ ನಿಮಗಲ್ಲ. ರಾಜ್ಯಪಾಲರನ್ನು ಆಯ್ಕೆ ಮಾಡಲು ಕೇಂದ್ರ ಸರ್ಕಾರ ಅನುಸರಿಸುವ ಮಾನದಂಡ ಏನು ಎಂದು ರಾಜ್ಯಪಾಲರಿಗ ತಿರುಗೇಟು ನೀಡಿದ್ದರು.

ಕೋರ್ಟ್ ಚಾಟಿ: ರಾಜ್ಯಪಾಲರ ನಿರ್ಧಾರ ಪ್ರಶ್ನಿಸಿ ಪಂಜಾಬ್ ಸರ್ಕಾರ ಸಲ್ಲಿಸಿದ್ದ ಅರ್ಜಿ ಕುರಿತು ವಿಚಾರಣೆ ನಡೆಸಿದ ನ್ಯಾಯಪೀಠ, 'ರಾಜ್ಯಪಾಲರು ಕೇಳಿದ ಮಾಹಿತಿಯನ್ನು ಕಾಲಮಿತಿಯಲ್ಲಿ ನೀಡುವುದು ಪಂಜಾಬ್ ಸರ್ಕಾರದ ಕರ್ತವ್ಯ. ಅದೇ ರೀತಿ ವಿಧಾನಸಭೆ ಅಧಿವೇಶನ ಕರೆಯುವಂತೆ ಸಂಪುಟ ಮಾಡಿದ ಶಿಫಾರಸ್ಸನ್ನು ಕಾಲಮಿತಿಯಲ್ಲಿ ಅಂಗೀಕರಿಸುವುದು ರಾಜ್ಯಪಾಲರ ಹೊಣೆ. ಈ ವಿಷಯದಲ್ಲಿ ರಾಜ್ಯಪಾಲರು ಕಾನೂನು ಸಲಹೆ ಪಡೆಯಬೇಕಾದ ಅವಶ್ಯಕತೆ ಇಲ್ಲ, ಕಾರಣ, ಅವರು ಸಚಿವರ ಸಲಹೆ ಮತ್ತು ಶಿಫಾರಸ್ಸಿನ ಅನ್ವಯ ಕಾರ್ಯನಿರ್ವಹಿಸಬೇಕು ಎಂದು ಹೇಳಿತು.

ಏನಿದು ಪ್ರಕರಣ:

ಮಾರ್ಚ್ 3 ರಂದು ವಿಧಾನಸಭೆ ಅಧಿವೇಶನ ಕರೆಯುವಂತೆ ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದ ಸರ್ಕಾರ ರಾಜ್ಯ ಪಾಲರಿಗೆ ಶಿಫಾರಸ್ಸು ಮಾಡಿತ್ತು. ಆದರೆ ಅಧಿವೇಶನ ಕರೆಯುವ ಆತುರದಲ್ಲಿ ನಾನು ಇಲ್ಲ, ಅದಕ್ಕೂ ಮೊದಲು ನಾವು ಬಯಸಿದ ಮಾಹಿತಿಗೆ ನೀವು ನೀಡಿರುವ ಉತ್ತರ ಮತ್ತು ಉತ್ತರ ನೀಡಿದ ಧಾಟಿಯ ಬಗ್ಗೆ ನಾನೂ ಕಾನೂನು ಸಲಹೆ ಪಡೆಯುತ್ತಿದ್ದೇನೆ ಎಂದು ರಾಜ್ಯಪಾಲರು ಸಿಎಂಗೆ ಮಾಹಿತಿ ರವಾನಿಸಿದ್ದರು. ಹೀಗಾಗಿ ರಾಜ್ಯಪಾಲರು ಅಧಿವೇಶನ ಕರೆಯಲು ವಿಳಂಬ ಮಾಡುತ್ತಿದ್ದಾರೆ. ಈ ಮೂಲಕ ಸಂವಿಧಾನವನ್ನೇ ಹೈಜಾಕ್ ಮಾಡುತ್ತಿದ್ದಾರೆ ಎಂದು ಪಂಜಾಬ್ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಿತ್ತು.

ಆಧಾರ: ಕನ್ನಡ ಪ್ರಭ, ದಿನಾಂಕ: 01.03.2023

6. Telangana govt. moves SC as Governor delays nod to Bills

The Telangana government has taken legal recourse for resolving its grievance against the delays in clearance of important Bills, passed by two Houses of the State Legislature, by the institution of the Governor.

The government has filed a petition in the Supreme Court claiming that the Telangana government is constrained to move before the court under its extraordinary jurisdiction conferred under Article 32 of the Constitution of India in view of "a very prequent constitutional impasse created on account of the refusal of the Governor to act on several Bills passed by the State Legislature. These Bills are pending since September 14, 2022 till date for the assent of the

Governor", the government said in its petition for which the Governor Tamilisai Soundararajan has been made a respondent. The government in its petition attached copies of the Bills and the list of dates on which the Bills were passed by the Legislature.

The government has quoted Article 200 of the Constitution which mandates that the Governor could assent or could with- hold assent in which case the Bill should be returned together with the message requesting that the Houses reconsider the Bill for any specified provision and would consider the desirability of introducing any such amendments as it might recommend in the message. By virtue of Article 163, the Governor was required to exercise his functions or any of them in his discretion only on the aid and advice of the Council of Ministers with the Chief Minister as its head.

"The Governor is not expected to act independently and this position has been made amply clear by the Constitution Bench of the Supreme Court in Shamsher Singh Vs State of Punjab (1974)", the government said.

Courtesy: The Hindu, dt: 03.03.2023

7. ಲೆಫ್ಟಿನೆಂಟ್ ಗವರ್ನರ್ ಭಾಷಣಕ್ಕೆ ಅಡ್ಡಿ

ದೆಹಲಿ ವಿಧಾನಸಭೆಯ ಬಜೆಟ್ ಅಧಿವೇಶನದ ಮೊದಲ ದಿನದ ಕಲಾಪವು ಬಿಜೆಪಿ ಶಾಸಕರ ಗದ್ದಲ, ಹಾಗೂ ಅವರ ವಿರುದ್ಧ ನಿರ್ಣಯ ಅಂಗೀಕರಿಸುವುದಕ್ಕೆ ಸಾಕ್ಷಿಯಾಯಿತು.

ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಕೇನಾ ಅವರ ಭಾಷಣಕ್ಕೆ ಅಡ್ಡಿಪಡಿಸುವ ಮೂಲಕ ಬಿಜೆಪಿ ಶಾಸಕರು ಸದನದ ಸಂಪ್ರದಾಯವನ್ನು ಉಲ್ಲಂಘಿಸಿದ್ದಾರೆ. ಅಲ್ಲದೇ, ಬಿಜೆಪಿ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವ ಸಂಬಂಧ ಈ ವಿಷಯವನ್ನು ಸದನದ ನೀತಿಸಂಹಿತೆ ಸಮಿತಿಗೆ ಒಪ್ಪಿಸಬೇಕು ನಿರ್ಣಯವನ್ನು ಅಂಗೀಕರಿಸಲಾಯಿತು.

ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ ಲೆಫ್ಟಿನೆಂಟ್ ಗವರ್ನರ್ ಸಕ್ಸೇನಾ ಅವರು ಸದನವನ್ನು ಉದ್ದೇಶಿಸಿ ಭಾಷಣ ಆರಂಭಿಸಿದರು. ಆಗ, ರದ್ದುಗೊಳಿಸಿರುವ ದೆಹಲಿ ಅಬಕಾರಿ ನೀತಿಯನ್ನು ಪ್ರಸ್ತಾಪಿಸಿದ ಬಿಜೆಪಿ ಶಾಸಕರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಆರಂಭಿಸಿದರು.

ದೆಹಲಿ ಅಬಕಾರಿ ನೀತಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವ ಆರೋಪಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರೀವಾಲ್ ಅವರು ಕೂಡಲೇ ರಾಜೀನಾಮೆ ನೀಡಬೇಕು ಎಂದೂ ಆಗ್ರಹಿಸಿದರು.

ಗದ್ದಲ ಜೋರಾದ ಹಿನ್ನೆಲೆಯಲ್ಲಿ ದೆಹಲಿ ವಿಧಾನಸಭೆಯ ಬಜೆಟ್ ಅಧಿವೇಶ ವಿ.ಕೆ.ಸಸ್ಸೇನಾ ಅವರು ಸ್ಪೀಕರ್ ರಾಮ್ ನಿವಾಸ್ ಗೋಯೆಲ್ ಅವರ ಸೂಚನೆಯಂತೆ ಮೂವರು ಬಿಜೆಪಿ ಶಾಸಕರನ್ನು

ಮಾರ್ಷಲ್‌ಗಳು ಸದನದಿಂದ ಹೊರಹಾಕಿದರೆ, ಉಳಿದ ಶಾಸಕರು ಸಭಾತ್ಯಾಗ ಮಾಡಿದರು. ನಂತರ, ಲೆಫ್ಟಿನೆಂಟ್ ಗವರ್ನರ್ ತಮ್ಮ ಭಾಷಣ ಮುಂದುವರಿಸಿದರು.

ನಂತರ ಮಾತನಾಡಿದ ಆರೋಗ್ಯ. ಸಚಿವ ಸೌರಭ್ ಭಾರದ್ವಾಜ್, ಬಿಜೆಪಿ ಶಾಸಕರು ಲೆಫ್ಟಿನೆಂಟ್ ಗವರ್ನರ್ ಅವರ ಭಾಷಣಕ್ಕೆ ಅಡ್ಡಿಪಡಿಸಿದ ವಿಷಯವನ್ನು ನೀತಿಸಂಹಿತೆ ಸಮಿತಿಗೆ ವಹಿಸಲಾಗುವುದು ಎಂಬ ನಿರ್ಣಯವನ್ನು ಮಂಡಿಸಿದರು.

ಸಾಧನೆಗಳ ಪಟ್ಟಿ: ಬಜೆಟ್ ಅಧಿವೇಶವನ್ನು ಉದ್ದೇಶಿಸಿ ಮಾತನಾಡಿದ ಲೆಫ್ಟಿನೆಂಟ್ ಗವರ್ನರ ವಿ.ಕೆ.ಸಕ್ಸೇನಾ ಅವರು, ದೆಹಲಿ ಸರ್ಕಾರದ ಸಾಧನೆಗಳನ್ನು ಸದನದ ಮುಂದಿಟ್ಟರು. ಬರುವ ದಿನಗಳಲ್ಲಿ ದೆಹಲಿಯು ಅಭಿವೃದ್ಧಿ ಹೊಂದಿದ ಜಾಗತಿಕ ನಗರವಾಗಿ ಹೊರಹೊಮ್ಮಲಿದೆ ಎಂದು ವಿಶ್ವಾಸವ್ಯಕ್ತಪಡಿಸಿದರು.

ಶಾಲೆಗಳು ಹಾಗೂ ಶಿಕ್ಷಣ ಪದ್ಧತಿಯಲ್ಲಿ ತಂದ ಸುಧಾರಣೆಗಳ ಫಲವಾಗಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ವಿಶ್ವದರ್ಜೆಯ ಗುಣಮಟ್ಟದ ಹೊಂದಿದ ಶಾಲೆಗಳನ್ನು ಸ್ಥಾಪಿಸಲಾಗಿದ್ದು, ಮಿಷನ್ ಬುವಿಯಾದ್ ಕಾರ್ಯಕ್ರಮದಿಂದಾಗಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಸುಧಾರಿಸಿದೆ ಎಂದು ಹೇಳಿದರು.

ಹೊಸದಾಗಿ 20,000 ಕೊಠಡಿಗಳನ್ನು ನಿರ್ಮಾಣವೂ ಸೇರಿದಂತೆ ಶೈಕ್ಷಣಿಕ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಹೇಳಿದರು.

ಆರೋಗ್ಯ ಕ್ಷೇತ್ರದ ಯೋಜನೆಗಳನ್ನು ಪ್ರಸ್ತಾಪಿಸಿದ ಅವರು, ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಬರುವ ದಿನಗಳಲ್ಲಿ 16 ಸಾವಿರಕ್ಕೂ ಹೆಚ್ಚು ಹಾಸಿಗೆಗಳನ್ನು ಒದಗಿಸಲಾಗುವುದು ಎಂದು ಹೇಳಿದರು.

ಸಾರಿಗೆ, ಪರಿಸರ ಸಂರಕ್ಷಣೆ, ಪ್ರವಾಸೋದ್ಯಮ ಹಾಗೂ ಇತರ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಅವರು ಸದನದ ಮುಂದಿಟ್ಟರು.

ಇತ್ತೀಚಿನ ದಿನಗಳಲ್ಲಿ ಮಾತಿನಲ್ಲಿ ಹಿಡಿತ ತಪ್ಪುತ್ತಿದ್ದು, ಘನತೆ ಕುಂದುತ್ತಿದೆ ಎಂದು ಹೇಳುವ ಮೂಲಕ ಲೆಫ್ಟಿನೆಂಟ್ ಗವರ್ನರ್ ಸಕ್ಕೇನಾ ಅವರು ಸದನದಿಂದ ನಿರ್ಗಮಿಸಿದರು.

ದೆಹಲಿ ಶಾಲೆಗಳ ಶಿಕ್ಷಕರನ್ನು ತರಬೇತಿಗಾಗಿ ವಿದೇಶಗಳಿಗೆ ಕಳುಹಿಸುವುದು ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿ ಲೆಫ್ಟಿನೆಂಟ್ ಗವರ್ನರ್ ಹಾಗೂ ಸರ್ಕಾರದ ನಡುವೆ ಇತ್ತೀಚೆಗೆ ವಾಕ್ಸಮರ ನಡೆದಿತ್ತು. ಈ ಹಿನ್ನೆಲೆಯಲ್ಲಿ ಸಕ್ಸೇನಾ ಅವರಿಂದ ಈ ಮಾತುಗಳನ್ನಾಡಿದರು ಎಂದು ಮೂಲಗಳು ಹೇಳಿವೆ.

ಆಧಾರ: ಪ್ರಜಾವಾಣಿ, ದಿನಾಂಕ: 18.03.2023

ಭಾಗ – 8

ಶ್ರದ್ಧಾಂಜಲಿ

1. ಸಿದ್ದೇಶ್ವರ ಶ್ರೀ, ಜ್ಞಾನಯೋಗಿ

ಪ್ರವಚನದ ಮೂಲಕ ವಿಶ್ವಕ್ಕೆ ಜ್ಞಾನ ಪ್ರಸಾರ ಮಾಡಿ 'ಶತಮಾನದ ಸಂತ' ಎನಿಸಿಕೊಂಡ ಸರಳತೆಯ ಸಾಕಾರಮೂರ್ತಿ, ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಮಹಾಸ್ವಾಮೀಜಿ ಯವರು ನಿಧನ ಹೊಂದಿರುತ್ತಾರೆ. ಅವರಿಗೆ 82 ವರ್ಷ ವಯಸ್ಸಾಗಿತ್ತು.

ಆಧಾರ: ವಿಜಯ ಕರ್ನಾಟಕ, ದಿನಾಂಕ:01.01.2023.

2. ತ್ರಿಪಾಠಿ ಕೇಸರಿನಾಥ, ಮಾಜಿ ರಾಜ್ಯಪಾಲ

ಬಿಜೆಪಿಯ ಹಿರಿಯ ನಾಯಕ, ಪಶ್ಚಿಮ ಬಂಗಾಳ, ಬಿಹಾರ ಸೇರಿದಂತೆ ಒಟ್ಟು 4 ರಾಜ್ಯಗಳ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದ ಕೇಸರಿನಾಥ್ ತ್ರಿಪಾಠಿಯವರು ನಿಧನ ಹೊಂದಿರುತ್ತಾರೆ.

1934ರ ನವೆಂಬರ್ 10 ರಂದು ಅಲಹಾಬಾದ್‌ನಲ್ಲಿ ಜನಿಸಿದ್ದರು. 6 ಬಾರಿ ಉತ್ತರ ಪ್ರದೇಶದ ಶಾಸಕರಾಗಿದ್ದರು. ಪಶ್ಚಿಮ ಬಂಗಾಳ, ಬಿಹಾರ, ಮೇಘಾಲಯ, ಮಿಜೋರಾಂ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು. 6 ಬಾರಿ ಉತ್ತರ ಪ್ರದೇಶದ ಶಾಸಕರಾಗಿದ್ದರು.

ಆಧಾರ: ಉದಯವಾಣಿ, ದಿನಾಂಕ:09.01.2023.

3. ಡಾ.ಎಚ್.ಚಂದ್ರಶೇಖರ ಸಾಹಿತಿ, ಹಿರಿಯ ಸಂಶೋಧಕ

ಭೂವಿಜ್ಞಾನಿ, ಸಾಹಿತಿ ಹಾಗೂ ಸಂಶೋಧಕ ಡಾ.ಎಚ್.ಚಂದ್ರಶೇಖರ ರವರು ಅನಾರೋಗ್ಯದ ಕಾರಣ ನಿಧನ ಹೊಂದಿರುತ್ತಾರೆ.

ಭೂ ವಿಜ್ಞಾನ ಇಲಾಖೆಯಲ್ಲಿ ಉನ್ನತ ಜವಾಬ್ದಾರಿ ನಿರ್ವಹಿಸಿದ್ದ ಅವರು ಕನ್ನಡ ಸಾಹಿತ್ಯ ಮತ್ತು ಸಂಶೋಧನೆ ಕ್ಷೇತ್ರಗಳಲ್ಲಿ ಗಮನಾರ್ಹ ಕೆಲಸ ಮಾಡಿದರು. ಮುಖ್ಯವಾಗಿ ವಚನ ಸಾಹಿತ್ಯದ ಅಧ್ಯಯನಕ್ಕೆ ಉತ್ತಮ ಕೊಡುಗೆ ನೀಡಿದ್ದರು. 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಗೌರವಗಳು ಸಂದಿವೆ.

ಆಧಾರ: ಉದಯವಾಣಿ, ದಿನಾಂಕ:11.01.2023.

4. ನಾಡೋಜ ಸಾರಾ ಅಬೂಬಕ್ಕರ್, ಖ್ಯಾತ ಲೇಖಕಿ

ಕನ್ನಡದ ಖ್ಯಾತ ಲೇಖಕಿ ನಾಡೋಜ ಸರಾ ಅಬೂಬ್ಕರ್ ನಿಧನರಾಗಿದ್ದಾರೆ. ಮಹಿಳೆಯರ ಗಟ್ಟಿ ಧ್ವನಿಯಾಗಿದ್ದ ಸಾರಾ, ತಮ್ಮ ಬದುಕೆಲ್ಲ ಮಹಿಳೆಯ ಸವಾಲುಗಳ ಪ್ರತಿನಿಧಿಯಾಗಿದ್ದರು. ಇವರು 'ನಿನ್ನೆಯಷ್ಟೆ ಅಕ್ಕರದವ್ವ ಫಾತಿಮಾ ಶೇಖ್ ಅವರ ಜನ್ಮ ದಿನವಿತ್ತು. ಈ ದಿನ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಬರೆಹದ ಮೂಲಕ ಸಾಹಿತ್ಯಲೋಕ ಪ್ರವೇಶಿಸಿದ್ದರು.

'ಚಂದ್ರಗಿರಿಯ ತೀರದಲ್ಲಿ' ಎಂಬ ಕಾದಂಬರಿಯ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಖ್ಯಾತರಾಗಿದ್ದರು. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ಇವರ ಕಾದಂಬರಿಗಳು ಹಿಂದಿ, ತಮಿಳು, ತೆಲುಗು, ಮರಾಠಿ ಮತ್ತು ಒರಿಯಾಕ್ಕೆ ಅನುವಾದಗೊಂಡಿತ್ತು ಹಾಗೂ 5 ಕಥಾಸಂಕಲನ, ನಾಟಕ, ಪ್ರವಾಸ ಕೃತಿಗಳು, ಪ್ರಬಂಧ ಸಂಕಲಗಳನ್ನು ಹೊರತಂದಿದ್ದಾರೆ. ಹಲವು ಕೃತಿಗಳ್ನನು ಮಲಯಾಳದಿಂದ ಕನ್ನಡೀಕರಿಸಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ:11.01.2023.

5. ಶರದ್ ಯಾದವ್, ಮಾಜಿ ಕೇಂದ್ರ ಸಚಿವರು

ಬಿಹಾರದ ಹಿರಿಯ ರಾಜಕೀಯ ಮುತ್ಸದ್ದಿ, ಮಾಜಿ ಕೇಂದ್ರ ಸಚಿವ, ಶರದ್ ಯಾದವ್ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು.

ಜಿಡಿ(ಯು)ನಿಂದ ಲೋಕಸಭೆಗೆ 7 ಬಾರಿ ಮತ್ತು ರಾಜ್ಯ ಸಭೆಗೆ ಮೂರು ಬಾರಿ ಆಯ್ಕೆಯಾಗಿದ್ದರು. ಯಾದವ್ 2003ರಲ್ಲಿ ಸಂಯುಕ್ತ ಜನತಾದಳ ರಚನೆಯದಾಗಿನಿಂದ 2016 ರವರೆಗೆ ಅದರ ಮೊದಲ ರಾಷ್ಟ್ರಿಯ ಅಧ್ಯಕ್ಷರಾಗಿದ್ದರು.

ಶರದ್ ಯಾದವ್ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ನಾಯಕ ಗೌರವ ಭಾಟಿಯ, ಕಾಂಗ್ರೆಸ್ ನಾಯಕ ಪವನ್ ಖೇರ ಸೇರಿ ಹಲವಾರು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

1947 ಜನವರಿ 1 ರಂದು ಈಗಿನ ಮಧ್ಯಪ್ರದೇಶದ ಹೋಶಂಗಾಬಾದ್ ಬಳಿಯ ಸಣ್ಣ ಗ್ರಾಮದಲ್ಲಿ ರೈತ ಕುಟುಂಬದಲ್ಲಿ ಜನಿಸಿದ್ದ ಶರದ್ ಯಾದವ್, ಜಬಲ್ಪುರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದರು. ವಿದ್ಯಾರ್ಥಿ ದೆಸೆಯಲ್ಲೇ ಸಮಾಜವಾದಿ ನಾಯಕ ರಾಮ್ ಮನೋಹರ್ ಲೋಹಿಯಾ ಅವರಿಂದ ಪ್ರಭಾವಿತರಾಗಿದ್ದರು. 27ನೇ ವಯಸ್ಸಿನಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಸೂಚನೆ ಮೇರೆಗೆ 1974ರಲ್ಲಿ ಜಬಲ್ಪುರ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಸಿದ್ದರು.

ಯಾದವ್ ಅವರು ಅಟಲ್ ಬಿಹರಿ ವಾಜಪೇಯಿ ಸರ್ಕಾರದಲ್ಲಿ 1999 ಮತ್ತು 2004ರ ನಡುವೆ ವಿವಿಧ ಖಾತೆಗಳನ್ನು ನಿರ್ವಹಿಸಿದ್ದರು.

ಇತ್ತಿಚೆಗೆ ಜೆಡಿಯು ಜೊತೆ ಮೈತ್ರಿ ಕಡಿದುಕೊಂಡು 2018 ಮೇನಲ್ಲಿ ಲೋಕತಾಂತ್ರಿಕ ಜನತಾದಳ (ಎಲ್‌ಜೆಡಿ) ಸ್ಥಾಪಿಸಿದ್ದರು.

ಆಧಾರ:ವಿಜಯವಾಣಿ, ದಿನಾಂಕ:13.01.2023.

6. ಎಚ್.ಡಿ.ಲಮಾಣಿ, ಮಾಜಿ ಸಚಿವ

ಮಾಜಿ ಸಚಿವ ಡಾ. ಹೆಗ್ಗಪ್ಪ ದೇಶಪ್ಪ ಲಮಾಣಿಯವರು ನಿಧನರಾದರು. ಇವರಿಗೆ 84 ವರ್ಷ ವಯಸ್ಸಾಗಿತ್ತು.

ಇವರು ವಿಜಯಪುರ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ಧಾರವಾಡದ ಕೆಸಿಡಿಯಲ್ಲಿ ಹಿಂದಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಿಂದಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಬಳಿಕ ಕಾಂಗ್ರೆಸ್ ಪಕ್ಷ ಸೇರಿ 1983 ಹಾಗೂ 1989ರಲ್ಲಿ ಬ್ಯಾಡಗಿ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದ ಅವರು ಬಂಗಾರಪ್ಪ ಸರ್ಕಾರದಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿ, ವೀರಪ್ಪಮೋಯ್ಲಿ ಸರ್ಕಾರದಲ್ಲಿ ಸಕ್ಕರೆ ಮತ್ತು ಶಿಕ್ಷಣ ಖಾತೆ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಆಧಾರ:ಕನ್ನಡ ಪ್ರಭ, ದಿನಾಂಕ:17.01.2023.

7. ತಿಮ್ಮಪ್ಪ ಹೆಗಡೆ, ಮಾಜಿ ಶಾಸಕ

ಸಾಗರ ಪ್ರಾಂತ್ಯ ಅಡಕೆ ಬೆಳೆಗಾರರ ಸಂಘ ಸ್ಥಾಪನೆ ಸೇರಿದಂತೆ ಅಂತಾರಾಜ್ಯ ಸಂಸ್ಥೆ ಕ್ಯಾಂಪ್ಕೋ, ಸಾಗರದ ಆಪ್ಸ್‌ಕೋಸ್‌ನಂತಹ ಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸಿದ್ದ ಮಾಜಿ ಶಾಸಕ, ಸಹಕಾರಿ ಧುರೀಣ. ಎಲ್.ಟಿ.ತಿಮ್ಮಪ್ಪ ಹೆಗಡೆಯವರು ನಿಧನ ಹೊಂದಿರುತ್ತಾರೆ.

1978, 83ರಲ್ಲಿ ಸಾಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿ ಕಾರ್ಯನಿರ್ವಹಿಸಿದ್ದರು. ಸಾಗರದ ಆಪ್ಸ್ ಕೋಸ್, ತೋಟಗಾರ್ಸ್ ಅಡಕೆ ಬೆಳೆಗಾರರ ಸಂಘಗಳ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಕ್ಯಾಂಪ್ಕೋ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಆಧಾರ:ಉದಯವಾಣಿ, ದಿನಾಂಕ:18.01.2023.

8. ಜಮುನಾ, ಬಹುಭಾಷಾ ನಟಿ

ಬಹುಭಾಷಾ ನಟಿ ಜಮುನಾ ರವರು ನಿಧನ ಹೊಂದಿರುತ್ತಾರೆ. ಬಾಲ್ಯದಿಂದಲೇ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಅವರು ಕನ್ನಡ, ತೆಲುಗು, ತಮಿಳು ಹಿಂದಿ ಸೇರಿ ಸುಮಾರು 134 ಚಿತ್ರಗಳಲ್ಲಿ ನಟಿಸಿದ್ದರು. ಹಿಂದಿ ಚಲನಚಿತ್ರ ಮಿಲನ್‌ನ ಅಭಿನಯಕ್ಕಾಗಿ ಫಿಲ್ಮ್‌ಫೇರ್ ಪ್ರಶಸ್ತಿ, ತಮಿಳುನಾಡು ಸರ್ಕಾರದ ಎಂಜಿಆರ್ ಗೌರವ ಪ್ರಶಸ್ತಿ, ಎನ್‌ಟಿಆರ್ ರಾಷ್ಟ್ರ ಪ್ರಶಸ್ತಿ, ಡಾ.ಬಿ.ಸರೋಜಾದೇವಿ ರಾಷ್ಟ್ರಿಯ ಪ್ರಶಸ್ತಿ, ಜೀವಮಾನದ ಶ್ರೇಷ್ಠ ಸಾಧನೆಗಾಗಿ ಸಂತೋಷಂ ಚಲನಚಿತ್ರ ಪ್ರಶಸ್ತಿ ಅವರಿಗೆ ಸಂದಿವೆ.

1989ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಂಧ್ರ ಪ್ರದೇಶದ ರಾಜಮಂಡ್ರಿಯಿಂದ ಜಮುನಾ ಅವರು ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾಗಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:28.01.2023.

9. ಕೆ.ವಿ.ತಿರುಮಲ್ಲೇಶ್, ಕವಿ

ಕವಿ ಹಾಗೂ ವಿಮರ್ಶಕ ಕೆ.ವಿ.ತಿರುಮಲ್ಲೇಶ್ ಅವರು ನಿಧನ ಹೊಂದಿರುತ್ತಾರೆ. ಇವರಿಗೆ 82 ವರ್ಷ ವಯಸ್ಸಾಗಿತ್ತು.

ಹೈದರಾಬಾದ್‌ನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಆ್ಯಂಡ್ ಫಾರಿನ್ ಲ್ಯಾಂಗ್ವೇಜಸ್‌ನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಅವರು ಪಾತ್ರರಾಗಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:31.01.2023.

10. ಕೆ.ವಿಶ್ವನಾಥ, ಕಲಾ ತಪಸ್ವಿ ನಿರ್ದೇಶಕ

ಟಾಲಿವುಡ್‌ನ ಜನಪ್ರಿಯ ನಿರ್ದೇಶಕ, ಕಲಾ ತಪಸ್ವಿ ಶಂಕರಾಭರಣಂ ಖ್ಯಾತಿಯ ಕೆ.ವಿಶ್ವನಾಥ್ ರವರು ನಿಧನರಾಗಿರುತ್ತಾರೆ. ಇವರಿಗೆ 92 ವರ್ಷ ವಯಸ್ಸಾಗಿತ್ತು.

ವಿಶ್ವನಾಥ್ ಅವರು ಅಕ್ಕಿನೇನಿಯವರ 'ಆತ್ಮ ಗೌರವಂ' ಚಿತ್ರದ ಮೂಲಕ ನಿರ್ದೇಶಕರಾದರು. ಶಂಕರಾಭರಣಂ ಅವರ ಸುಪ್ರಸಿದ್ದ ಚಿತ್ರವಾಗಿದೆ. ಅದಕ್ಕೆ ರಾಷ್ಟ್ರ ಪ್ರಶಸ್ತಿ ಕೂಡ ಲಭಿಸಿತ್ತು. ಸಾಗರ ಸಂಗಮಂ, ಶ್ರುತಿಲಯಲು, ಸಿರಿವೆನ್ನಲ, ಸ್ವರ್ಣಕಮಲಂ ಮತ್ತು ಸ್ವಾತಿ ಕಿರಣಂ ಇವು ಭಾರತೀಯ ಕಲೆಯ ಕುರಿತಾದ ಅವರ ಚಿತ್ರಗಳಾಗಿವೆ.

ಸಿನಿಮಾ ಕ್ಷೇತ್ರದಲ್ಲಿ ಅವರ ಕೊಡುಗೆಗಾಗಿ 2016ರಲ್ಲಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. 1992ರಲ್ಲಿ ಪದ್ಮಶ್ರೀ ಗೌರವ ಪ್ರಾಪ್ತವಾಯಿತು ಇದರ ಜೊತೆಗೆ ಏಳು ಬಾರಿ ನಂದಿ ಅವಾರ್ಡ್ ಮತ್ತು ದಕ್ಷಿಣ ಭಾರತಕ್ಕಾಗಿ ಇರುವ ಫಿಲ್ಮ ಫೇರ್ ಪ್ರಶಸ್ತಿಯನ್ನು ಏಳು ಬಾರಿ ತಮ್ಮದಾಗಿಸಿಕೊಂಡಿದ್ದರು.

ಆಧಾರ:ಉದಯವಾಣಿ, ದಿನಾಂಕ:03.02.2023.

11. ಟಿ. ಜಾನ್, ಮಾಜಿ ಸಚಿವ

ಮಾಜಿ ಸಚಿವ ಹಾಗೂ ಮಡಿಕೇರಿಯಲ್ಲಿ ಅಬಕಾರಿ ಉದ್ಯಮಿಯಾಗಿದ್ದ ಟಿ. ಜಾನ್ ರವರು ನಿಧನ ಹೊಂದಿರುತ್ತಾರೆ. ಇವರಿಗೆ 91 ವರ್ಷ ವಯಸ್ಸಾಗಿತ್ತು.

ಇವರು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ನಾಗರಿಕ ವಿಮಾನಯಾನ ಸಚಿವರಾಗಿದ್ದರು. ಬೆಂಗಳೂರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನೂ ಪ್ರಾರಂಭಿಸಿ ಅದರಲ್ಲಿ ತಮ್ಮ ಮಕ್ಕಳನ್ನು ಸಕ್ರಿಯರಾಗಿಸಿದ್ದರು. ಮಡಿಕೇರಿ ಬಳಿಯ ಮೇಕೇರಿ ಗ್ರಾಮದಲ್ಲಿ 4 ವರ್ಷಗಳ ಹಿಂದೆ ಕೂರ್ಗ್ ವೈಲ್ಡರ್ ನೆಸ್ ರೆಸಾರ್ಟ್ ಕೂಡ ಪ್ರಾರಂಭಿಸಿ ಪಂಚತಾರಾ ಸೌಲಭ್ಯದ ಹೋಟೆಲ್ ಅತಿಥ್ಯ ರಂಗದಲ್ಲಿಯೂ ಯಶಸ್ಸು ತಮ್ಮದಾಗಿಸಿಕೊಂಡರು.

ಆಧಾರ:ವಿಶ್ವವಾಣಿ, ದಿನಾಂಕ:11.02.2023.

12. ಶಿವಾನಂದ ಅಂಬಡಗಟ್ಟಿ, ಮಾಜಿ ಶಾಸಕ

ವೀರಶೈವ ಸಮಾಜದ ಹಿರಿಯ ಮುಖಂಡ, ಧಾರವಾಡ ಗ್ರಾಮೀಣ ಕ್ಷೇತ್ರದ ಮಾಜಿ ಶಾಸಕ ಶಿವಾನಂದ ರುದ್ರಪ್ಪ ಅಂಬಡಗಟ್ಟಿಯವರು ನಿಧನ ಹೊಂದಿರುತ್ತಾರೆ. ಇವರಿಗೆ 73 ವರ್ಷ ವಯಸ್ಸಾಗಿತ್ತು.

ಇವರು ಅಳ್ನಾವರ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರಿಯ ಘಟಕದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅಂಬಡಗಟ್ಟಿ ಮನೆತನದ ಮೂವರು ಸಹೋದರರು ಧಾರವಾಡ ಗ್ರಾಮೀಣ ಭಾಗದ ಶಾಸಕ ಅಂಬಡಗಟ್ಟಿ ಕಾಂಗ್ರೆಸ್‌ನಿಂದ ಚುನಾಯಿತರಾಗಿದ್ದರು.

ಆಧಾರ:ಉದಯವಾಣಿ, ದಿನಾಂಕ:10.02.2023.

13. ಧ್ರುವನಾರಾಯಣ, ಕೆಪಿಸಿಸಿ ಕಾರ್ಯಾಧ್ಯಕ್ಷ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ರವರು ನಿಧನ ಹೊಂದಿರುತ್ತಾರೆ. ಇವರಿಗೆ 61 ವರ್ಷ ವಯಸ್ಸಾಗಿತ್ತು.

ಇವರು ಎರಡು ಬಾರಿ ಶಾಸಕ, ಎರಡು ಬಾರಿ ಸಂಸದರಾಗಿದ್ದ ಅವರು ಈ ಬಾರಿ ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಬಯಕೆ ವ್ಯಕ್ತಪಡಿಸಿದ್ದರು. ಜಾತಿ, ಪಕ್ಷ, ಜಿಲ್ಲೆಯ ಚೌಕಟ್ಟಿನಿಂದ ಹೊರಬಂದು ಸಜ್ಜನಿಕೆಯಿಂದಲೇ ಛಾಪು ಮೂಡಿಸಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:12.02.2023.

14. ಶಂಕರಪ್ಪ, ಬಯಲಾಟ ಕಲಾವಿದ

ಕೊಪ್ಪಳ ತಾಲ್ಲೂಕಿನ ಬೆಟಗೇರಿ ಸಮೀಪದ ಮೋರನಾಳ ಗ್ರಾಮದ ಬಯಲಾಟ ಕಲಾವಿದ ಶಂಕರಪ್ಪ ಹೊರಪೇಟೆಯವರು ನಿಧನ ಹೊಂದಿರುತ್ತಾರೆ. ಇವರಿಗೆ 63 ವರ್ಷ ವಯಸ್ಸಾಗಿತ್ತು.

180 ಬಯಲಾಟ ಪ್ರದರ್ಶನಗಳಿಗೆ ಸಂಗೀತ ಸಂಯೋಜನೆ ಮಾಡಿದ ಇವರಿಗೆ 2018ರಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ದೊರೆತಿದೆ. 2022ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿತ್ತು.

ಆಧಾರ:ಪ್ರಜಾವಾಣಿ, ದಿನಾಂಕ:12.02.2023.

15. ಎಚ್.ಹೊನ್ನಪ್ಪ, ಮಾಜಿ ಎಂಎಲ್‌ಸಿ

ಜಿಲ್ಲೆಯ ಹಿರಿಯ ರಾಜಕಾರಣಿ, ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಹೊನ್ನಪ್ಪರವರು ನಿಧನ ಹೊಂದಿರುತ್ತಾರೆ. ಇವರಿಗೆ 75 ವರ್ಷ ವಯಸ್ಸಾಗಿತ್ತು.

ಯುವ ಕಾಂಗ್ರೆಸ್ ಅಧ್ಯಕ್ಷರಾಗಿ, ಜನತಾದಳ ಅಧ್ಯಕ್ಷರಾಗಿ, ಸಂಯುಕ್ತ ಜನತಾದಳ ಪಕ್ಷದ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವರು ಮೈಸೂರು ಸಕ್ಕರೆ ಕಾರ್ಖಾನೆ (ಮೈಶುಗರ್) ಅಧ್ಯಕ್ಷರಾಗಿ ಹಾಗೂ ಎಂಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಇವರು ಮಂಡ್ಯದ ಪ್ರತಿಷ್ಠಿತ ಜನತಾ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಯಾಗಿ ಸುಧೀರ್ಘ ಕಾಲ ಸೇವೆ ಸಲ್ಲಿಸಿದ್ದರು. 1997 ರಿಂದ 2004 ರವರೆಗೆ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯರಾಗಿ ಜನತಾದಳದಿಂದ ಆಯ್ಕೆಯಾಗಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:16.02.2023.

16. ಅಂಬಾತನಯ ಮುದ್ರಾಡಿ, ಹಿರಿಯ ಸಾಹಿತಿ

ಹಿರಿಯ ಸಾಹಿತಿ, ಯಕ್ಷಗಾನ ಅರ್ಥಧಾರಿ ಅಂಬತನಯ ಮುದ್ರಾಡಿ (ಕೇಶವ ಶೆಟ್ಟಿಗಾರ್) ರವರು ನಿಧನ ಹೊಂದಿರುತ್ತಾರೆ. ಇವರಿಗೆ 85 ವರ್ಷ ವಯಸ್ಸಾಗಿತ್ತು.

ಪಠ್ಯ ಪುಸ್ತಕ ರಚನ ಸಮಿತಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 28 ಕೃತಿಗಳನ್ನು ಪ್ರಕಟಿಸಿರುವ ಅವರು 12 ನಾಟಕ ಕೃತಿ, 12 ಪೌರಣಿಕ, ಜಾನಪದ ಮತ್ತು ಚಾರಿತ್ರಿಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. 40 ವರ್ಷಗಳ ಕಾಲ ಹರಿದಾಸರಾಗಿದ್ದರು. ಇವರಿಗೆ 2008ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಕೃಷ್ಣಾನುಗೃಹ ಪ್ರಶಸ್ತಿ, 2019ರಲ್ಲಿ ಯಕ್ಷಗಾನ ಬಯಲಾಟ ಅಕಾಡೆಮಿಯ ಪಾರ್ತಿಸುಬ್ಬ ಪ್ರಶಸ್ತಿ ಸಹಿತ ನೂರಾರು ಗೌರವಗಳಿಗೆ ಭಾಜನರಾಗಿದ್ದರು. ಅವರ ಸಾಹಿತ್ಯ ಕೃಷಿ ಅಪಾರ ಜನಮನ್ನಣೆಗಳಿಸಿತ್ತು.

ಆಧಾರ:ವಿಜಯವಾಣಿ, ದಿನಾಂಕ:22.02.2023.

17. ರತ್ನಮ್ಮ ಕುಸನೂರು, ಮಾಜಿ ಎಂಎಲ್‌ಸಿ

ಮಾಜಿ ಎಂಎಲ್‌ಸಿ ರತ್ನಮ್ಮ ವೀರ ಶೆಟ್ಟಿ ಕುಸನೂರು ರವರು ನಿಧನ ಹೊಂದಿರುತ್ತಾರೆ. ಇವರಿಗೆ 83 ವರ್ಷ ವಯಸ್ಸಾಗಿತ್ತು.

2002ರಲ್ಲಿ ಅಂದಿನ ಸಿಎಂ ಎಸ್.ಎಂ.ಕೃಷ್ಣ ಅಧಿಕಾರಾವಧಿಯಲ್ಲಿ ರತ್ನಮ್ಮ ಎಂಎಲ್‌ಸಿಯಾಗಿ ನೇಮಕಗೊಂಡಿದ್ದರು. ಇವರ ಪತಿ ವೀರಶೆಟ್ಟಿ ಕುಸನೂರು ಅವರು ದೇವರಾಜ ಅರಸು ಸಂಪುಟದಲ್ಲಿ ಸಹಕಾರ ಸಚಿವರಾಗಿ ಕೆಲಸ ಮಾಡಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:10.03.2023.

18. ಮಲೆಯೂರು ಗುರುಸ್ವಾಮಿ, ಹಿರಿಯ ಸಾಹಿತಿ

ಹಿರಿಯ ಸಾಹಿತಿ, ವಾಗ್ಮಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಮಲೆಯೂರು ನಿಧನ ಹೊಂದಿರುತ್ತಾರೆ. ಇವರಿಗೆ 76 ವರ್ಷ ವಯಸ್ಸಾಗಿರುತ್ತದೆ.

ಮಲೆಯೂರರ ಶಿಷ್ಯರು ಮಹಾಮನೆ ಎಂಬ ಅಭಿನಂದನಾ ಗ್ರಂಥದ ಮೂಲಕ 2006ರಲ್ಲಿ ಗುರುಸ್ವಾಮಿ ಅವರನ್ನು ಪುರಸ್ಕರಿಸಿದ್ದರು. 2010ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು. ಇದಲ್ಲದೇ ಚಾಮರಾಜನಗರ ಜಿಲ್ಲಾ ರಾಜ್ಯೋತ್ಸವ ಪ್ರಸಸ್ತಿ, ಮಹಾಕವಿ ಷಡಕ್ಷರದೇವ ಸ್ಮಾರಕ ಪ್ರಶಸ್ತಿಗೂ ಪಾತ್ರರಾಗಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:10.03.2023.

19. ಅಂಜನಮೂರ್ತಿ, ಮಾಜಿ ಸಚಿವ

ಸ್ಥಳೀಯ ವಿಧಾನಸಭಾ ಕ್ಷೇತ್ರದಲ್ಲಿ ಅಜಾತ ಶತ್ರುವಾಗಿದ್ದ ಮಾಜಿ ಸಚಿವ ಅಂಜನಮೂರ್ತಿಯವರು ನಿಧನ ಹೊಂದಿರುತ್ತಾರೆ. ಇವರಿಗೆ 82 ವರ್ಷ ವಯಸ್ಸಾಗಿತ್ತು.

ಇವರು ಮೂರು ಬಾರಿ ಶಾಸಕರು, ಉಪಸಭಾಪತಿ ಆಗಿದ್ದ ಅವರು ವಸತಿ ಸಚಿವರಾಗಿ ಸಹ ಸೇವೆ ಸಲ್ಲಿಸಿದ್ದರು. ಮೈಸೂರು ಮಹಾರಾಜರಿಂದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿ ಶ್ರಮಿಸಿ ಲೋಕಸೇವಾನಿರತ ಎಂಬ ಬಿರುದಿಗೆ ಪಾತ್ರರಾಗಿದ್ದ ಲೇ.ಎಂ. ಹನುಮಂತಯ್ಯ ಬೈಲಮ್ಮ ದಂಪತಿಗಳಿಗೆ ಜನಿಸಿದ್ದ ಐವರು ಪುತ್ರಿಯರು ಹಾಗೂ ಮೂವರು ಪುತ್ರರ ಪೈಕಿ ಅಂಜನಮೂರ್ತಿ ಕಿರಿಯ ಮಗ. ಮೂರು ಬಾರಿ ಶಾಸಕರು, ಉಪಸಭಾಪತಿ ಆಗಿದ್ದ ಅವರು ವಸತಿ ಸಚಿವರಾಗಿ ಸಹ ಸೇವೆ ಸಲ್ಲಿಸಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:24.03.2023.

ಭಾಗ – 9

ಪ್ರಮುಖ ಲೇಖನಗಳು

1. ಮಾತೃಭಾಷಾ ಮಾಧ್ಯಮ: ಸಾಂವಿಧಾನಿಕ ರಕ್ಷಣೆಯೇ ಸೂಕ್ತ

ಹಾವೇರಿಯ ಎಂಬತ್ತಾರನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಲವು ದೃಷ್ಟಿಗಳಲ್ಲಿ ಅರ್ಥಪೂರ್ಣವಾಗಿತ್ತು. ಈ ಸಮ್ಮೇಳನದ ಆಶಯಗಳು ಸಾಹಿತ್ಯಕವಾಗಿ ಪ್ರಾಧಾನ್ಯತೆ ಹೊಂದಿರುವುದು ಸಹಜವೇ. ಇದಕ್ಕಿಂತ ಮುಖ್ಯವಾಗಿ ಕನ್ನಡದ ಬಿಕ್ಕಟ್ಟಿನ ಶಮನಕ್ಕೇ ಸಂವಿಧಾನ ನೆರವಿಗೆ ಬರಬೇಕು ಎನ್ನುವ ಮಾತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಂದಲೇ ಬಂದಿರುವ ಕಾರಣದಿಂದಾಗಿ ಇದು ಗಮನದಲ್ಲಿ ಉಳಿಯಲಿರುವ ಸಮ್ಮೇಳನವಾಗಲಿದೆ.

ಸಾರಸತ್ವ ಲೋಕದ ಸಮಸ್ತರ ಎದಿರು, ತನ್ಮೂಲಕ ಕನ್ನಡಿಗರ ಮುಂದೆ ಸರ್ಕಾರ ವ್ಯಕ್ತಪಡಿಸಿರುವ ಅನಿಸಿಕೆಗಳು ನಿಜಕ್ಕೂ ಗಂಭೀರವಾದಂಥವು ಕನ್ನಡ ಕಡ್ಡಾಯಕ್ಕಾಗಿ ಕಾಯಿದೆ ಜಾರಿಗೊಳ್ಳುವ ಹಂತದಲ್ಲಿದೆ. ಕಾಯ್ದೆಯಾಗುವ ಮೊದಲೇ ಶಾಸನವನ್ನು ಸುಗ್ರೀವಾಜ್ಞೆ ಮೂಲಕ ಅನುಷ್ಠಾನಕ್ಕೆ ತರಬೇಕೆನ್ನುವ ಒತ್ತಾಯ ವ್ಯಾಪಕವಾಗಿದೆ. ಸಮ್ಮೇಳನದಲ್ಲೂ ಇದು ಬಲವಾಗಿ ಧ್ವನಿಸಿತ್ತು. ಸರ್ಕಾರ ಕೂಡ ನಾಡಿನ ಈ ಭಾವನೆಯನ್ನು ಮತ್ತು ಸಮ್ಮೇಳನಾಧ್ಯಕ್ಷ ಪ್ರೋ.ದೊಡ್ಡರಂಗೇಗೌಡರು ಸೇರಿದಂತೆ ಸಾಹಿತಿ–ಚಿಂತಕರ ಮಾತುಗಳನ್ನು ತಾತ್ವಿಕವಾಗಿ ಒಪ್ಪಿದೆ ನಿಜ. ಆದರೆ ಮಾತೃ ಭಾಷಾ ಮಾಧ್ಯಮ ಶಿಕ್ಷಣ ಕಡ್ಡಾಯಗೊಳಿಸುವುದು ಕೂಡಲೇ ಆಗದ ಕೆಲಸ ಇದು ತತ್‌ಕ್ಷಣ ಕಾರ್ಯರೂಪಕ್ಕೆ ಬರುವುದು ಕಷ್ಟ ಒಕ್ಕೂಟದ ಸಾಂವಿಧಾನಿಕ ಕಟ್ಟಳೆಗಳು ಅಡ್ಡಬರುತ್ತವೆಂಬ ಸತ್ಯವನ್ನೂ ಬಿಚ್ಚಿಟ್ಟಿದೆ.

ಪ್ರಸಕ್ತ ಸಂದರ್ಭದಲ್ಲಿ ಪ್ರತಿಯೊಬ್ಬ ದೇಶವಾಸಿಯೂ ಆಲೋಚಿಸುವಂತಹ ಮಾತುಗಳನ್ನು ಕರ್ನಾಟಕದ ಮುಖ್ಯಮಂತ್ರಿಗಳು ಹೇಳಿರುವುದು ಕಡೆಗಣಿಸಲಾಗದ್ದು ಕನ್ನಡವಷ್ಟೇ ಏಕೆ? ಭಾರತದ ಪ್ರತಿಯೊಂದು ರಾಜ್ಯ ಪ್ರಾದೇಶಿಕ ಭಾಷೆಗಳಿಗೂ ಇದೇ ಸ್ಥಿತಿ ಇದೆ. ನವ ಶತಮಾನದಲ್ಲಿ ಉದಾರೀಕರಣ ಬದುಕಿನ ಸರ್ವ ಅಂಗಗಳನ್ನೂ ಆವರಿಸಿರುವಾಗ ಕನ್ನಡ ಸೇರಿ, ಯಾವುದೇ ಪ್ರಾದೇಶಿಕ ಭಾಷೆಯನ್ನು ಕಡ್ಡಾಯಗೊಳಿಸುವುದು ಏಕಾಏಕಿ ಆಗುವ ಕೆಲಸವಲ್ಲ.

ಹೀಗೊಮ್ಮೆ ಮಾಡಿದರೂ, ಕಾನೂನಿನ ಕಟಕಟೆಯಲ್ಲಿ ಅದು ಸಿಂಧೂವಾಗುತ್ತದೆಂಬುದು ಖಾತರಿ ಇಲ್ಲ. ರಾಜ್ಯಗಳ ಸ್ಥಳೀಯ ಭಾಷೆ ಕಡ್ಡಾಯಗೊಳಿಸುವುದನ್ನು ಪ್ರಶ್ನಿಸಿದ ಅನೇಕ ಅರ್ಜಿಗಳು ಈಗಾಗಲೇ ಸುಪ್ರೀಂ ಕೋರ್ಟಿನಲ್ಲಿವೆ. ವಿಚಾರಣೆ ವಿವಿಧ ಹಂತಗಳಲ್ಲಿದೆ. ತ್ರಿಭಾಷಾ ಸೂತ್ರವನ್ನೂ ದೇಶದಲ್ಲಿ ಮೊದಲಿನಿಂದಲೂ ಪಾಲಿಸಿಕೊಂಡು ಬರಲಾಗುತ್ತಿರುವಾಗ, ಕಡ್ಡಾಯವೇಕೆ ಎನ್ನುವುದೇ ಈ ಎಲ್ಲ ಅರ್ಜಿಗಳ ಸಾಮಾನ್ಯ ತಿರುಳು.

ಆದ್ದರಿಂದ ಸಾಂವಿಧಾನಿಕವಾದ ರಕ್ಷಣೆ ದೊರೆಯದೇ ಅಥವಾ ಪ್ರಾದೇಶಿಕ ಭಾಷೆಗಳನ್ನು ಸಂವಿಧಾನಬದ್ಧವಾಗಿ ಕಡ್ಡಾಯಗೊಳಿಸುವ ತಿದ್ದುಪಡಿಯಾಗದೇ ವಿಧಿಯಿಲ್ಲ. ರಾಜ್ಯ ಸರ್ಕಾರ ಕನ್ನಡ ಕಡ್ಡಾಯ ಕಾಯ್ದೆಯನ್ನು ಶಾಸನ ಮಾಡಲು ತುಸು ವಿಳಂಬ ಮಾಡಿರುವ ಮೂಲ ಕಾರಣವೂ ಇದುವೇ ಆಗಿದೆ. ಸುಗ್ರೀವಾಜ್ಞೆ ಜಾರಿಗೊಳಿಸಿದರೆ ಕಾಲಮಿತಿಯಲ್ಲಿ ಶಾಸನ ಪ್ರಕ್ರಿಯೆ ಪೂರ್ಣಗೊಳ್ಳಬೇಕಾಗುತ್ತದೆ. ಉದ್ದೇಶಿತ ಕಾಯ್ದೆಯ ಕರಡು ಅಂಶಗಳನ್ನು ಪ್ರಾತಿನಿಧಿಕ ಸಂಸ್ಥೆಗಳ ಚರ್ಚೆಗೆ ಸರ್ಕಾರ ಬಿಟ್ಟಿರುವುದು ಸರಿಯಾದ ನಡೆ. ಇದೇ ಶಾಶ್ವತ ಪರಿಹಾರ ಕಾಣುವ ನಡೆ.

ಜಾಗತೀಕರಣದಿಂದಾಗಿ ಚಿಕ್ಕ ವಿಶ್ವದ ದೊಡ್ಡ ಕೋಣೆಯೊಂದರಲ್ಲಿರುವಂತೆ ಬಾಳು ಸಾಗಿರುವುದರಿಂದ ದೇಶ ಭಾಷೆಗಳ ವಿಷಯದಲ್ಲಿ ಕೇಂದ್ರ ಮಟ್ಟದಲ್ಲಿಯೇ ಚಿಂತನೆ ನಡೆಯಬೇಕಾದುದು ಇಂದಿನ ತುರ್ತು.

ಇದನ್ನು ಸಂವಿಧಾನ ತಜ್ಞರ ಮಟ್ಟದಲ್ಲಿ ಸಂವಹನ ನಡೆಸಿ ಈ ಅನಿವಾರ್ಯತೆಯನ್ನು ಮನದಟ್ಟು ಮಾಡಿಸಬೇಕಾಗಿದೆ ಎನ್ನುವ ಅವರ ಮಾತು ಆದಷ್ಟು ಶೀಘ್ರ ಕಾರ್ಯರೂಪಕ್ಕೆ ಬರಬೇಕಾಗಿದೆ. ಇಂತಹ ಕೆಲಸಕ್ಕೆ ಸರ್ಕಾರವೇ ಮಧ್ಯವರ್ತಿಯಾಗಿ ಅಥವಾ ಕನ್ನಡಿಗರ ಹಿತದ ಕೊಂಡಿಯಾಗಿ ಕಾರ್ಯನಿರ್ವಹಿಸಿದರೆ ಇನ್ನಷ್ಟು ಸೂಕ್ತ. ತಡಮಾಡದೇ ಇಂತಹ ಒಂದು ಹೆಜ್ಜೆಯನ್ನು ಬೊಮ್ಮಾಯಿ ಸರ್ಕಾರ ಇಡಬೇಕಾಗಿದೆ.

ಇದೇ ರೀತಿ ಶಾಸ್ತ್ರೀಯ ಭಾಷಾ ಸ್ಥಾನಮಾನ ಪಡೆದಿರುವ ಕನ್ನಡಕ್ಕೆ ಕೇಂದ್ರದಿಂದ ಇದುವರಗೆ ಬಂದಿರುವ ಕೇವಲ 13.30 ಕೋಟಿ ರೂಪಾಯಿ ಮಾತ್ರ ಇದು ಸಾಲದು. ಹಣ ಇಲ್ಲದ ಕಾರಣಕ್ಕಾಗಿಯೇ ಮನ್ನಣೆಗೆ ಪಾತ್ರವಾದ ಮೇಲೆಯೂ ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಕುರಿತು ದೊಡ್ಡ ಮಟ್ಟದ ಸಂಶೋಧನಗಳಿಗೆ ಯಾರು ಮುಂದಾಗಿಲ್ಲ. ಕೇಂದ್ರದಿಂದ ಹೆಚ್ಚು ಅನುದಾನ ಪಡೆದುಕೊಳ್ಳುವ ಮತ್ತು ಭೌತಿಕವಾಗಿ ಸಂಶೋಧನಗೆ ಪೂರಕ ಸವಲತ್ತುಗಳನ್ನು ಒದಗಿಸಿಕೊಡುವ ಕೆಲಸವನ್ನು ಸರ್ಕಾರ ಕ್ಷಿಪ್ರವಾಗಿ ಮಾಡಬೇಕು. ಇದಕ್ಕಾಗಿ ಸುಸಜ್ಜಿತ ಕನ್ನಡ ಸಂಶೋಧನಾ ಕೇಂದ್ರ ಆರಂಭಿಸುವ ಜೊತೆಗೆ, ಸಾಹಿತ್ಯ–ಭಾಷಾ ತಜ್ಞರ ಸಮಿತಿ ರಚಿಸಿ ಸಲಹೆ ನೀಡಲು ಸಿಎಂ ಕೋರಿದ್ದಾರೆ. ಇದು ಸ್ವಾಗತಾರ್ಹವೇ. ಆದರೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರೆತರೂ ಅದರ ಅಭಿವೃದ್ಧಿಗೆ ಇದುರವರೆಗೆ ಮಹತ್ವವನ್ನು ನೀಡಲಾಗಿಲ್ಲ ಎಂಬುದು ವಿಷಾದನೀಯ.

ಗಡಿ ಶಾಲೆಗಳ ಅಭಿವೃದ್ಧಿಗೆ ನೂರು ಕೋಟಿ ರೂಪಾಯಿ ಒದಗಿಸುವ ಘೋಷಣೆ ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಂತ ಸಮರ್ಪಕವಾದುದು. ಗಡಿಯಲ್ಲಿ ಕನ್ನಡ ಭಾಷೆಯನ್ನು ಗಟ್ಟಿಗೊಳಿಸಿ ಪ್ರಾದೇಶಿಕವಾಗಿ ನಾಡ ಅಸ್ಮಿತೆಯನ್ನು ಸದಾ ಕಾಪಾಡಿಕೊಳ್ಳುವಲ್ಲಿ ಶಾಲೆಗಳ ಪಾತ್ರ ಮುಖ್ಯ. ಕೇವಲ ಶಾಲಾ ಕಟ್ಟಡಗಳನ್ನು ಭದ್ರ ಮಾಡಿಕೊಳ್ಳುವ ದಿಸೆಯಲ್ಲಿ ಮಾತ್ರ ಸರ್ಕಾರ ಚಿಂತನೆ ಮಾಡದೇ, ಶಿಕ್ಷಕರನ್ನು ಒದಗಿಸುವುದೂ ಸೇರಿದಂತೆ ಪೂರಕ ಕ್ರಮಗಳ ಕುರಿತು ಜೊತೆಜೊತೆಗೇ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಸಮಯವಿದೆ.

ಸಾಹಿತ್ಯ–ತಾತ್ವಿಕ ಭಿನ್ನಾಭಿಪ್ರಾಯಗಳಿಂದಾಗಿ ಇಂತಹ ಸಮ್ಮೇಳನಗಳು ಈ ಹಿಂದೆಯೂ ನಡೆದಿವೆ. ಆದರೆ ಮೊದಲ ಬಾರಿಗೆ ಜಾತಿ–ಧರ್ಮಗಳ ಮಾತು ಇವೆರಡೂ ಸಮ್ಮೇಳನಗಳ ವೇಳೆ ಕೇಳಿ ಬಂದುದು ಹಾಗೂ ಇದನ್ನು ಆಧರಿಸಿ ವಿಂಗಡಣೆಯಾದುದು ನೋವಿನ ಸಂಗತಿ.

ಅದೇನೇ ಇರಲಿ, ಕನ್ನಡ ಅಸ್ಥಿತ್ವ–ಉಳಿವಿಗೆ ಪರ್ಯಾಯ ಸಮ್ಮೇಳನ ನೀಡಿರುವ ಸಲಹೆಗಳನ್ನೂ ಸರ್ಕಾರ ತೆರೆದ ಮನಸ್ಸಿನಿಂದ ಸ್ವೀಕರಿಸಲಿ. ಏಕೆಂದರೆ ನೈಜ ಸಾಹಿತ್ಯ ನಾಡಿನ–ಜನರ ಅಭ್ಯುದಯಕ್ಕಾಗಿ ಇರುತ್ತದೆ ಮತ್ತು ತುಡಿಯುತ್ತದೆ. ಸಾಹಿತಿಗಳು ರಾಜಕೀಯ ಮಾಡಬಾರದು. ಅಂತೆಯೇ ರಾಜಕಾರಣಿಗಳು ಸಾಹಿತ್ಯ ವಲಯದ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳವ ಹುನ್ನಾರಕ್ಕೆ ಕೈ ಹಾಕಬಾರದು. ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಮತ್ತು ಪರ್ಯಾಯ ಸಮ್ಮೇಳನ ಮುಗಿದಿರುವ ಈ ಹಂತದಲ್ಲಿ ಗಂಭೀರವಾಗಿ ಆಲೋಚಿಸಬೇಕಾದ ಅಂಶವಿದು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:10.01.2023.

2. ತಾಳ್ಮೆತೋರಬೇಕು ಶಾಸಕಾಂಗ

ಸರ್ಕಾರ ಮಾಡುವ ಶಾಸನಗಳ ಸಿಂಧುತ್ವವನ್ನು ನ್ಯಾಯಂಗ ಪ್ರಶ್ನಿಸಿದರೆ, ಅದನ್ನು ತಾಳಿಕೊಳ್ಳುವಷ್ಟು ತಾಳ್ಮೆ ವಿವೇಕವು ಸರ್ಕಾರವನ್ನು ನಡೆಸುವವರಲ್ಲಿ ಇರಬೇಕು.

ನ್ಯಾಯಾಂಗವು ಈಚಿನ ದಿನಗಳಲ್ಲಿ ನಾನಾ ಕಾರಣಗಳಿಗಾಗಿ ಚರ್ಚೆಯ ಕೇಂದ್ರದಲ್ಲಿದೆ. ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂರು ಮುಖ್ಯ ಸ್ತಂಭಗಳು. ಶಾಸಕಾಂಗ ಮತ್ತು ಕಾರ್ಯಂಗ ಹಳಿ ತಪ್ಪಿದಾಗ ಅವನ್ನು ಮತ್ತೆ ಹಳಿಯ ಮೇಲೆ

ತರುವುದೇ ನ್ಯಾಯಾಂಗ. ಸರ್ಕಾರದ ವಿಷಯಕ್ಕೆ ಸಂಬಂಧಿಸಿದ ಈ ಮಾತು ನಾಗರಿಕರ ಹಕ್ಕುಗಳು, ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆಯೂ ನಿಜ.

ಶಾಸಕಾಂಗ, ಕಾರ್ಯಾಂಗದಿಂದ ತಮಗೆ ಅನ್ಯಾಯವಾಗುತ್ತಿದೆಯೆಂದು ಅನಿಸಿದ ಸಂದರ್ಭದಲ್ಲಿ ಜನ ಮತ್ತು ಸಂಸ್ಥೆಗಳ ಅಂತಿಮ ಆಸರೆ ನ್ಯಾಯಾಂಗವೊಂದೇ. ನ್ಯಾಯಾಲಯಗಳು ತೀರ್ಪು ನೀಡಲು ಅತಿ ದೀರ್ಘ ಸಮಯ ತೆಗೆದುಕೊಳ್ಳುವುದರಿಂದ, 'ತಡವಾಗಿ ನೀಡಿದ ನ್ಯಾಯವೆಂದರೆ ನ್ಯಾಯವನ್ನು ನಿರಾಕರಿಸಿದಂತೆಯೇ' ಎಂಬ ಮಾತು ಹುಟ್ಟಿಕೊಂಡಿರುವುದು ನಿಜವಾದರೂ ಈಗಲೂ ಜನ ಅತಿ ಹೆಚ್ಚಿನ ಭರವಸೆ ಇಟ್ಟಿರುವುದು ನ್ಯಾಯಾಂಗದ ಮೇಲೆಯೇ. ಸರ್ಕಾರಗಳು ಕೂಡ ಬಹಳಷ್ಟು ಬಾರಿ ನ್ಯಾಯಾಂಗದ ತೀರ್ಪಿಗಾಗಿ ಜಾತಕ ಪಕ್ಷಿಗಳಂತೆ ಕಾಯುವ ಸಂದರ್ಭಗಳು ಈಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ.

ರಾಜಕೀಯವಾಗಿಯೇ ಇತ್ಯರ್ಥವಾಗಬೇಕಾದ ಅನೇಕ ಸಮಸ್ಯೆಗಳು ಸರ್ಕಾರದ ಮುತ್ಸದ್ದಿತನದ ಕೊರತೆ ಇಲ್ಲವೇ ಅಸಾಮರ್ಥ್ಯದಿಂದ ಇತ್ಯರ್ಥ ಕಾಣದೆ ಹೋದಾಗ, ಅಂತಿಮ ಆಸರೆಯಾಗಿ ನ್ಯಾಯಾಂಗ ಒದಗಿಬಂದು ಜನರ ಪಾಲಿಗಷ್ಟೇ ಅಲ್ಲ, ಸರ್ಕಾರಗಳ ಪಾಲಿಗೂ ರಕ್ಷಕದೇವತೆಗಾಗಿ ಕಂಡುಬಂದಿರುವ ಸಂದರ್ಭಗಳಿಗೇನೂ ಕೊರತೆಯಿಲ್ಲ. ಎರಡು ಕೋಮುಗಳ ನಡುವೆ ಬಗೆಹರಿಯದ ಕಗ್ಗಂಟಾಗಿದ್ದ ಅಯೋಧ್ಯೆಯ ಸಮಸ್ಯೆ ನ್ಯಾಯಾಂಗದ ಮಧ್ಯಪ್ರವೇಶದಿಂದ ಬಗೆಹರಿದು ಸರ್ಕಾರ ನಿಟ್ಟುಸಿರು ಬಿಡುವಂತಾದ್ದು ಕಣ್ಣೇದುರೇ ಇದೆ. ನಮ್ಮ ಜನ ಅವರು ಯಾರೇ ಆಗಿರಲಿ, ಯಾವ ಕೋಮಿಗೆ ಸೇರಿರಲಿ, ಯಾವ ರಾಜಕೀಯ ಪಕ್ಷಕ್ಕೆ ಸೇರಿರಲಿ, ಯಾವ ರಾಜ್ಯದವರೇ ಆಗಿರಲಿ ಅಂತಿಮವಾಗಿ ನ್ಯಾಯಾಂಗಕ್ಕೆ, ಅದರ ತೀರ್ಪಿಗೆ ತಲೆಬಾಗುತ್ತಾರೆ. ಅದು ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಸೌಂದರ್ಯದ ಅಂಶ.

ತಮಗೆ ಸಮಾಧಾನ ಕೊಡುವಂಥ ತೀರ್ಪು ಆಗಿಲ್ಲದಿದ್ದಾಗಲೂ ಒಳಗೊಳಗೆ ಬಯ್ದುಕೊಂಡರೂ ಬಹಿರಂಗವಾಗಿ ತುಟಿಬಿಚ್ಚದೆ ಸುಮ್ಮನಿರುತ್ತಾರೆ. ಅದು ಎರಡು ರಾಜ್ಯಗಳಿಗೆ ಸಂಬಂಧಿಸಿದ ನದಿ ನೀರಿನ ವಿವಾದವಾಗಿರಬಹುದು, ಗಡಿ ಸಮಸ್ಯೆಯಾಗಿರಬಹುದು, ಎರಡು ಕೋಮುಗಳ ನಡುವಿನ ಸಮಸ್ಯೆಯಾಗಿರಬಹುದು, ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದಂಥ ಸರ್ಕಾರದ ಕ್ರಮವಾಗಿರಬಹುದು ಎಲ್ಲಕ್ಕೂ ಈಚೆಗೆ ನ್ಯಾಯಾಲಯ ನೀಡುವ ತೀರ್ಪೇ ಅಂತಿಮ ಎಂಬಂತಾಗಿ, ರಾಜಕೀಯ ಪರಿಹಾರ ಕಂಡುಕೊಳ್ಳುವ ಸರ್ಕಾರಗಳ ಸಾಮರ್ಥ್ಯವೇ ಪ್ರಶ್ನಿಸಲ್ಪಡುವಂತಾಗಿರುವುದು ಸರ್ಕಾರಗಳಿಗೆ ಕೀರ್ತಿ ತುರವಂಥದ್ದೇನಲ್ಲ. ಪಂಚಮಸಾಲಿ ಸಮುದಾಯದ ಮೀಸಲಾತಿಗೆ ಸಂಬಂಧಿಸಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನ್ಯಾಯಾಲಯ ಈಚೆಗೆ ನೀಡಿದ ತೀರ್ಪಿನಿಂದ ಸರ್ಕಾರ ತಾತ್ಕಾಲಿಕವಾಗಿಯಾದರೂ ನೆಮ್ಮದಿಯ ನಿಟ್ಟುಸಿರು ಬಿಡುವಂತಾದದ್ದು ತಿಳಿದೇ ಇದೆ.

ನ್ಯಾಯಾಲಯದ ಮೇಲಿನ ಅವಲಂಬನೆ ಇಷ್ಟರ ಮಟ್ಟಿಗೆ ಇದ್ದರೂ ಸರ್ಕಾರಕ್ಕೂ ನ್ಯಾಯಾಂಗಕ್ಕು ಘರ್ಷಣೆ ಕೂಡ ಅಷ್ಟೇ ಜೋರಾಗಿದೆ. ನ್ಯಾಯಾಂಗ ಕೆಲವೊಮ್ಮೆ ಅತಿಯಾದ ಕ್ರಿಯಾಶೀಲತೆಯಿಂದ ಶಾಸಕಾಂಗದ ಅಧಿಕಾರ ವ್ಯಾಪ್ತಿಗೂ ಕೈಚಾಚುತ್ತಿದೆ ಎಂಬ ಟೀಕೆಗಳು ಆಗಿಂದಾಗ್ಗೆ ಕೇಳಿಬರುತ್ತಲೇ ಇವೆ. ನ್ಯಾಯಾಂಗ ನೇಮಕಾತಿ ಆಯೋಗ ರಚಿಸಲು ಸಂಸತ್ತು ರೂಪಿಸಿದ ಕಾಯ್ದೆಯನ್ನು ಸುಪ್ರೀಂಕೋರ್ಟ್ ಅಸಿಂಧುಗೊಳಿಸಿದ್ದರ ಬಗ್ಗೆ ಉಪರಾಷ್ಟ್ರಪತಿ ಅಸಮಾಧಾನ ವ್ಯಕ್ತಪಡಿಸಿದ್ದರ ಬೆನ್ನಿಗೆ ಕೇಶಾವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲ ಸ್ವರೂಪಕ್ಕೆ ಸಂಬಂಧಸಿದ ತಾತ್ವಿಕತೆಯನ್ನು ಪ್ರಶ್ನಿಸಿದ್ದು ನಡೆದಿದೆ. ಜೊತೆಗೆ ಕೇಂದ್ರ ಕಾನೂನು ಸಚಿವರು ಮತ್ತು ನ್ಯಾಯಾಲಯದ ನಡುವಿನ ವಾಗ್ಯುದ್ಧಗಳು ದಿನಬೆಳಗಾದರೆ ಪತ್ರಿಕೆಗಳಲ್ಲಿ ಬರುತ್ತಲೇ ಇವೆ.

ಈಚೆಗೆ ಉಪರಾಷ್ಟ್ರಪತಿಯವರು ಸಭಾಪತಿಯಾಗಿ ಮಾಡಿದ ಮೊದಲ ಭಾಷಣದಲ್ಲಿ ನ್ಯಾಯಾಂಗದ ಕುರಿತು ಟೀಕಿಸಿದ್ದರು. ಶಾಸಕಾಂಗದ ಪಾವಿತ್ರ್ಯವನ್ನು ನ್ಯಾಯಾಂಗ ಗೌರವಿಸಬೇಕು ಎಂಬ ಮಾತು ಅವರಿಂದ ಕೇಳಿಬಂದಿದೆ. ಆದರೆ ಈಚಿನ ಹಲವು ವರ್ಷಗಳಲ್ಲಿ ಶಾಸಕಾಂಗದ ಅಧಿಕಾರ

ವ್ಯಾಪ್ತಿಯೊಳಕ್ಕೆ ನ್ಯಾಯಾಂಗ ಅನಗತ್ಯವಾಗಿ ಪ್ರವೇಶಿ ಬಿಟ್ಟಿತೇನೋ ಎಂದು ಅನೇಕರಿಗೆ ಅನಿಸಿದ ಸಂದರ್ಭಗಳಲ್ಲೂ ಅದು ಸುಮ್ಮನೆ ಪ್ರವೇಶಿಸಿದ್ದಲ್ಲ. ಎಲ್ಲೋ ಒಂದು ಕಡೆ ಶಾಸಕಾಂಗ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಎಡವಿದಂತಾಗಿದ್ದೇ ಇದಕ್ಕೆ ಕಾರಣ ಎಂಬ ಸಮಾಧಾನವೂ ಸಮತೋಲನದಿಂದ ಚಿಂತಿಸುವವರಿಗೆ ಇದೆ.

ಸರ್ಕಾರ ತನಗೆ ಸಮಸ್ಯೆ ಉಂಟಾದಾಗ ನ್ಯಾಯಾಲಯದ ಕಡೆ ನೋಡುವುದು, ತಾನು ಮಾಡಿದ ಶಾಸನದ ಸಿಂಧುತ್ವವನ್ನು ನ್ಯಾಯಾಲಯ ಪ್ರಶ್ನಿಸಿದಾಗ ಕಣ್ಣು ಕೆಂಪು ಮಾಡಿಕೊಳ್ಳುವುದು, ನ್ಯಾಯಾಂಗದ ನಡೆಯನ್ನೇ ಸಂಶಯಿಸುವುದು ಯಾವ ನ್ಯಾಯ? ಒಂಟೆ ಬೇಕೆಂದಾದರೆ ಅದರ ಡುಬ್ಬವನ್ನು ಸಹಸಬೇಕಾಗುವಂತೆ, ನ್ಯಾಯಾಂಗವು ಸರ್ಕಾರಕ್ಕೆ, ದೇಶಕ್ಕೆ ಅಗತ್ಯವಾಗಿರುವಾಗ, ಶಾಸನಗಳ ಸಿಂಧುತ್ವವನ್ನು ನ್ಯಾಯಾಂಗ ಪ್ರಶ್ನಿಸಿದರೆ ಅದನ್ನು ತಾಳಿ ಕೊಳ್ಳುವಷ್ಟು ತಾಳ್ಮೆ, ವಿವೇಕವು ಸರ್ಕರವನ್ನು ನಡಸುವವರಲ್ಲಿ ಇರಬೇಕು. ಇಲ್ಲದಿದ್ದರೆ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಸಂಪರ್ಕವಾಗಿ ಕೆಲಸ ಮಾಡಲು, ಅದು ಜನಹಿತ ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಶಾಸಕಾಂಗ ಅರ್ಥಮಾಡಿಕೊಳ್ಳಬೇಕು.

ಲೇಖಕರು: ಡಾ.ಆರ್.ಲಕ್ಷ್ಮೀನಾರಾಯಣ,

ಆಧಾರ: ಪ್ರಜಾವಾಣಿ, ದಿನಾಂಕ:19.01.2023.

3. ವೋಟೆಂಬ ಪರಮ ಅಹಿಂಸಾ ಅಸ್ತ್ರ

ಪ್ರಜಾಸತ್ತೆಯಲ್ಲಿ ಮತದಾನವು ಒಂದು ದಿವ್ಯಶಕ್ತಿ. ಈ ಅನನ್ಯ ಅವಕಾಶವನ್ನು ಪ್ರಜೆಗಳು ಯಾವುದೇ ಕಾರಣಕ್ಕೂ ಕಳೆದುಕೊಳ್ಳಬಾರದು.

ಜನವರಿ 25, 'ಮತದಾರರ ದಿನ'. ಈ ದಿನವನ್ನು ಭಾರತದ ಚುನಾವಣಾ ಅಯೋಗವು ಮತದಾರರಿಗೆ ಸಮರ್ಪಿಸಿದೆ. ದೇಶದಾದ್ಯಂತ ಮತದಾರಲ್ಲಿ ಜಾಗೃತಿ ಮೂಡಿಸಿ, ಚುನಾವಣೆಯಲ್ಲಿ ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸಲು ಪ್ರೇರೇಪಿಸುವುದೇ ಆಯೋಗದ ಧ್ಯೇಯ. 'ಚುನಾವಣೆ ಜನರಿಗೆ ಸೇರಿದ್ದು', 'ಒಳ್ಳೆಯ ಮಂದಿ ವೋಟು ಚಲಾಯಿಸದಿರುವ ಮೂಲಕ ಕೆಟ್ಟ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ' ಎಂಬಂತೆ ಘೋಷಣೆಗಳು ನಮ್ಮನ್ನು ಎಚ್ಚರಿಸುತ್ತವೆ.

2011ರ ಜನವರಿ 25ರಿಂದ ಇದರ ಆಚರಣೆ ಶುರುವಾಗಿದೆ. ಮತದಾನವು ಪ್ರಜಾಪ್ರಭುತ್ವದ ಮೂಲ ಸ್ತಂಭ. ಮತದಾನದ ಹಕ್ಕಿನ ಅರಿವು ಜನರಿಗೆ ಸಮರ್ಥ ಪ್ರಭುತ್ವವನ್ನು ಅರಿಸಿಕೊಳ್ಳಲು ಕೀಲಿ ಕೈ ವಯಸ್ಸು ಹದಿನೆಂಟು ವರ್ಷಗಳು ತುಂಬಿ ಮತದಾನಕ್ಕೆ ಅರ್ಹತೆಗಳಿಸಿದ ಹೊಸ ಮತದಾರರಲ್ಲಿ ಹುರಪಿನಷ್ಟೆ ಹೊಣೆಗಾರಿಕೆಯೂ ಪುಟಿಯಬೇಕಿದೆ.

ನಾಗರಿಕರು ತಮ್ಮ ಸ್ಥಾಪಿತ ಆಯ್ಕೆಯ ಹಕ್ಕನ್ನು ನಿರ್ಲಕ್ಷಿಸಿದರೆ ಪ್ರಜೆತನವನ್ನು ಅಪಮಾನಿಸಿದಂತೆ. ಒಂದೊಂದು ಮತವೂ ಅಮೂಲ್ಯ ಸ್ವತ್ತು. ಆಡಳಿತ ಕ್ರಮ ಸದ್ಯ ಇರಬಹುದಾದ ಒರೆಕೋರೆಗಳನ್ನು ದಾಟಿ ಸುಧಾರಣೆಗಳತ್ತ ಹೊರಳಬಹುದೆಂಬ ಕನಸುಗಳು ಅದರಲ್ಲಿ ಸಾಂದ್ರಗೊಂಡಿರುತ್ತವೆ. ಯಾವುದೇ ದೇಶದಲ್ಲಿ ನಾಗರಿಕ ಅಶಾಂತಿಯಿರಬಹುದು, ಕೊರೊನಾದಂಥ ಖಂಡಾಂತರ ವ್ಯಾಧಿ ಭಾದಿಸಿರಬಹುದು, ನೈಸರ್ಗಿಕ ವಿಕೋಪಗಳು ಎಡೆಬಿಡದೆ ಕಾಡಿರಬಹುದು ಅಥವಾ ಅತಿವೃಷ್ಟಿ, ಅನಾವೃಷ್ಟಿಯಿಂದ ಕ್ಷಾಮ ತಲೆದೋರಿರಬಹುದು. ಆದರೆ ಚುನಾವಣಾ ಪ್ರಕ್ರಿಯೆ ಸಾಗಲೇಬೇಕು. ಹಾಗೆ ನೋಡಿದರೆ ಅಂತಹ ಸಂದಿಗ್ಧಗಳೇ ಜರೂರಾಗಿ ದಕ್ಷ ನಾಯಕತ್ವ ಬಯಸುತ್ತವೆ. ಜನಧ್ವನಿಯು ಅಭಿವೃದ್ಧಿ, ವಿಕಾಸ ತರಬಲ್ಲದು. ಮತದಾನದಲ್ಲಿ ಭಾಗಿಯಾಗುವುದೆಂದರೆ ನಮ್ಮ ಅಭಿಪ್ರಾಯವನ್ನೂ ದಾಖಲಿಸುವುದು. ಆಡಳಿತವನ್ನು ನಿಕಷಕ್ಕೆ ಒಡ್ಡುವ ಕೆಲಸವನ್ನು ಚುನಾವಣೆಗಳು ಮಾಡುತ್ತವೆ. ಮತ ಹಾಕದೆ ಸುಧಾರಣೆಯನ್ನು ಬಯಸುವುದು ಹೇಗೆ?

ಯಾರೇ ಬಂದರೂ ರಾಗಿ ಬೀಸುವುದು ತಪ್ಪುವುದಿಲ್ಲ ಎಂದೋ, ಬರೋರೆ ಬರೋದು ಎಂದೋ ವೋಟು ಹಾಕದೆ ನಿರ್ಲಿಪ್ತರಾದರೆ ಬಹುಜನರ ಆಶೋತ್ತರಗಳಿಗೂ ಭಂಗವಾಗುತ್ತದೆ. ಈ ನ್ಯೂನತೆಯ ಬಿಸಿ ಗ್ರಾಮ ಪಂಚಾಯಿತಿ ಮಟ್ಟದಿಂದ ಅಂತರಾಷ್ಟ್ರಿಯ ಮಟ್ಟದವರೆಗೂ ತಟ್ಟುತ್ತದೆ. ಜಾತಿ, ಧರ್ಮ, ಬಡತನ, ಸಿರಿತನ, ಪಂಗಡ, ಹೆಣ್ಣು ಗಂಡೆಂಬ ಬೇದವೆಣಿಸದೆ ನಮ್ಮ ಸಂವಿಧಾನವು ಮತದಾನದ ಹಕ್ಕು ನೀಡಿದೆ. ಈ ಅನನ್ಯ ಅವಕಾಶವನ್ನು ಪ್ರಜೆಗಳು ಕಳೆದುಕೊಳ್ಳಬಾರದು.

ನಮ್ಮ ಆಯ್ಕೆಗಳು ಸರ್ವರಿಗೂ ನ್ಯಾಯ ಮತ್ತು ಸಮಾನತೆಯನ್ನು ತರುತ್ತವೆ ಎಂಬ ವಿಶ್ವಾಸದಿಂದ ಮತ ಚಲಾಯಿಸಬೇಕು. ಪ್ರಜಾಸತ್ತೆಯಲ್ಲಿ ಮತದಾನವು ಒಂದು ದಿವ್ಯಶಕ್ತಿ. ಅಮೆರಿಕದ ರಾಜನೀತಿಜ್ಞ ಥಾಮಸ್ ಜಫರಸನ್ ಅವರು ಹೇಳುವಂತೆ, ಸರ್ಕಾರ ರಚನೆಯಾಗುವುದು ಜನರ ಬಹುಮತದಿಂದಲ್ಲ, ಭಾಗಿಯಾಗುವವರ ಬಹುಮತದಿಂದ. ಸಾಮಾನ್ಯ ಜನರಲ್ಲಿ ಅಸಾಮಾನ್ಯ ಸಾಧ್ಯತೆಗಳಿವೆ ಎಂಬ ಧೃಢ ನಿಶ್ಚಯವೇ ಪ್ರಜಾಪ್ರಭುತ್ವ ಪ್ರಕ್ರಿಯೆಯ ಅಸ್ತಿಭಾರ. ತಮ್ಮ ಗ್ರಾಮಕ್ಕೆ ರಸ್ತೆ ಆಗಿಲ್ಲ, ಸೇತುವೆ ಕಟ್ಟಿಲ್ಲ ಅಥವಾ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬ ಕಾರಣಕ್ಕೆ ಚುನಾವಣೆಯನ್ನು ವಿರೋಧಿಸಿದರೆ ಅದು ಬಹಿಷ್ಕಾರವಲ್ಲ. ನಿಶ್ಚಿತವಾಗಿ ಅದು ನಾವೇ ಹೇರಿಕೊಂಡ ಶರಣಾಗತಿ.

ಚುನಾವಣೆಯು ನಾಗರಿಕರಿಗೆ ಒಂದು ನಿರ್ದಿಷ್ಟ ಅವಧಿಗೆ ತಮ್ಮ ಪ್ರತಿನಿಧಿಯನ್ನು ಆರಿಸುವ ಹಕ್ಕನ್ನು ನೀಡುತ್ತದೆ. ವೋಟಿಗಿಂತ ಉಚಿತ ಹಾಗೂ ಶಕ್ತಿಯುತ ಪರಮ ಅಹಿಂಸಾ ಅಸ್ತ್ರ ಇನ್ನೊಂದಿಲ್ಲ. ಮತದಾನ ನಮ್ಮ ಅಸ್ತಿತ್ವಕ್ಕಾಗಿ, ನಮ್ಮ ಪ್ರಗತಿಗಾಗಿ ಸ್ಪರ್ಧಿಸುವವರ ಪೈಕಿ ಯಾರು ಅರ್ಹರಲ್ಲ ಎನ್ನಿಸಿದರೆ ಅದನ್ನು ವೋಟಿನ ಮೂಲಕವೇ ಧ್ವನಿಯುತಗೊಳಿಸಬಹುದಲ್ಲ. ಇದಂತೂ ಒಂದು ವಿಶಿಷ್ಟವಾದ ಜನ ಇಂಗಿತ. ಉಮೇದು ವಾರರಲ್ಲಿ ಆತ್ಮಾವಲೋಕನಕ್ಕೂ ದಾರಿಯಗುವ ಕಡೆಗಣಿಸಬಾರದ ವಿಶಿಷ್ಟ ಜನಾದೇಶವಿದು.

ಚುನಾವಣೆಗಳು ಮುಕ್ತವಾಗಿ, ನೀತಿಯುತವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲೂ ಇದೆ. ಏಕೆಂದರೆ ಮತ ಚಾಲಾಯಿಸದ ಒಂದೂಂದು ಪ್ರಸಂಗವೂ ಇಂದು ಕ್ರಮಬದ್ಧ ವೋಟನ್ನು ನಿಷ್ಕ್ರೀಯಗೊಳಿಸುತ್ತದೆ. ಆ ವೋಟು ನಮ್ಮದೇ ಆಗಿದ್ದರೆ ನಮಗೆ ಏನನ್ನಿಸುತ್ತದೆ? ಒಂದು ವೋಟಿನಿಂದ ಯಾವ ಒಳಿತು ತಾನೆ ಆದೀತು ಅಂತ ಮೊಗೆಳೆಯುವವರು ಕನಿಷ್ಟ ತಮ್ಮ ಅದರಿಂದ ಹಾನಿಯೇನಿಲ್ಲವಲ್ಲ ಎಂದಾದರೂ ಮತಗಟ್ಟೆ ಅಧಿಕಾರಿಗಳು ಹಾಗೂ ಮತ ಏಣಿಕೆ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತದೆ. ಸಭೆಗಳ ಮೇಲೆ ಸಭೆಗಳಾಗುತ್ತವೆ. ಆದರೆ ತಿರಸ್ಕೃತವಾಗದಂತೆ ಹೇಗೆ ಮತ ಚಲಾಯಿಸಬೇಕು ಎನ್ನುವುದರ ಸಾಂಕೇತಿಕ ಪ್ರಾತ್ಯಕ್ಷಿಕೆ ಕೂಡ ಏರ್ಪಡುವುದಿಲ್ಲ. ಸಮೂಹ ಮಾಧ್ಯಮಗಳಿಗೂ ಈ ದಿಸೆಯಲ್ಲಿ ಅಷ್ಟಾಗಿ ಅಸ್ಥೆಯಿಲ್ಲ. ಹಾಗಾಗಿಯೇ ಈ ವಿದ್ಯುನ್ಮಾನ ಯುಗದಲ್ಲೂ ಚುನಾವಣೆಗಳಿಗೆ ಅಸಿಂಧೂಗೊಳ್ಳುವ ಮತಗಳಿಂದ ಮುಕ್ತಿಯಿಲ್ಲ.

ವಿಪರ್ಯಾಸವೆಂದರೆ, ನಮ್ಮಿಂದ ಆಯ್ಕೆಗೊಂಡ ಜನಪ್ರತಿನಿಧಿಗಳೂ ವೋಟು ಚಲಾಯಿಸುವಲ್ಲಿ ಲೋಪವೆಸಗುವುದು. ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನವಣೆಗಳಲ್ಲಿ ಹಾಗೂ ರಾಜ್ಯ ಸಭೆ, ವಿಧಾನ ಪರಿಷತ್‌ಗೆ ಸದಸ್ಯರನ್ನು ಆಯ್ಕೆ ಮಾಡುವಲ್ಲಿ ತಿರಸ್ಕೃತ ಮತಗಳು. ಶಾಸನಸಭೆಗೆ ಸ್ಪರ್ಧಿಸುವ ಉಮೇದುವಾರರು ಪ್ರಚಾರಕ್ಕೆ ಬರುತ್ತಾರೆ ಅನ್ನಿ. ನೀವು ನಾಳೆ ಆಯ್ಕೆಗೊಂಡರೆ ನಿಮ್ಮ ಮತ ತಿರಸ್ಕೃತವಾಗದೆಂದು ಭರವಸೆ ನೀಡುವಿರಾ ಎನ್ನೋಣವೇ?

ಲೇಖಕರು: ಬಿ.ಎಸ್. ಭಗವಾನ್,

ಆಧಾರ: ಕನ್ನಡ ಪ್ರಭ, ದಿನಾಂಕ:25.01.2023.

4. ಮತದಾನದ ಘನತೆ ಕಾಯುವುದು ಎಲ್ಲರ ಹೊಣೆಯಾಗಬೇಕಿದೆ

ಮತದಾನದ ಎಂಬುದು ಪ್ರಜಾಸಮೂಹದ ಗಟ್ಟಿದನಿ. ಪ್ರಜಾತಂತ್ರ ದೇಶದಲ್ಲಿನ ಜನರ ಪ್ರಮುಖ ಹಕ್ಕು ಇದು. ತಮ್ಮನ್ನು ಆಳುವ ಪ್ರತಿನಿಧಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುವ ಹಕ್ಕು.

ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಭಾರತದಲ್ಲಿ ಪ್ರತೀ ವರ್ಷ ಜನವರಿ 25ರಂದು ಆಚರಿಸಲಾಗುತ್ತದೆ. ಭಾರತದ ಚುನಾವಣಾ ಆಯೋಗ ಸ್ಥಾಪನೆಯಾಗಿದ್ದು 1950ರ ಜನವರಿ 25 ರಂದು ಈ ದಿನದ ನೆನಪಿಗಾಗಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ.

ಭಾರತದ ಚುನವಣಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಭಾರತದಲ್ಲಿ ಶಾಸಕಾಂಗದ ಎಲ್ಲಾ ಹಂತಗಳಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದೆ. 2011ರಲ್ಲಿ ಮೊದಲ ಬಾರಿಗೆ ದೇಶಾದ್ಯಂತ ರಾಷ್ಟ್ರಪತಿ ಪ್ರತಿಭಾ ದೇವಿ ಪಾಟೀಲ್ ಅವರು ಭಾರತದ ಚುನಾವಣಾ ಆಯೋಗದ 61ನೇ ಸಂಸ್ಥಾಪನಾ ದಿನದಂದು ಈ ರಾಷ್ಟ್ರೀಯ ಮತದಾರರ ದಿನಕ್ಕೆ ಚಾಲನೆ ಒದಗಿಸಿದರು.

ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಲ್ಲಿ ಕಡಿಮೆ ಪ್ರಮಾಣದ ಮತದಾನವಾಗುತ್ತಿದೆ. ವಿದ್ಯಾವಂತರು ಹೆಚ್ಚಿರುವ ನಗರ ಪ್ರದೇಶದಲ್ಲಿ ಮತದಾನವನ್ನು ನಿರ್ಲಕ್ಷಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಮತದಾನ ಜವಾಬ್ದಾರಿಯ ಅರಿವಿದ್ದೂ ದೂರ ಉಳಿಯುವ ವಿದ್ಯಾವಂತರಿಗೆ ಮತದಾನದ ಬಗ್ಗೆ ಅರಿವು ಮೂಡಿಸುವುದು, 18 ವರ್ಷ ಮೇಲ್ಪಟ್ಟ ಎಲ್ಲ ಪ್ರಜೆಗಳೂ ಚುನಾವಣಾ ಸಂದರ್ಭದಲ್ಲಿ ಕಡ್ಡಾಯವಾಗಿ ಮತದಾನ ಮಾಡಬೇಕೆಂಬ ಸಂದೇಶ ಸಾರುವುದಕ್ಕಾಗಿ ಹಾಗೂ ಅವರಲ್ಲಿ ಮತದಾನದ ಹಕ್ಕು ಪಡೆಯುವಂತೆ ಸ್ಫೂರ್ತಿ ನೀಡುವುದು, ಆ ಹಕ್ಕಿನ ಕುರಿತು ಜಾಗೃತಿ ಮೂಡಿಸುವುದು ರಾಷ್ಟ್ರೀಯ ಮತದಾರರ ದಿನದ ಉದ್ದೇಶವಾಗಿದೆ.

ಹೊಸ ಮತದಾರರನ್ನು ಪ್ರೋತ್ಸಾಹಿಸುವುದು ಕೂಡ ಈ ದಿನದ ಆಚರಣೆಯ ಮತ್ತೊಂದು ಉದ್ದೇಶ. ಪ್ರಜಾಪ್ರಭುತ್ವದ ಕೇಂದ್ರ ಸ್ತಂಭವೇ ಮತದಾನವಾಗಿದೆ. ಭಾರತವು 1951ರಲ್ಲಿ ತನ್ನ ಮೊದಲ ಸಾರ್ವತ್ರಿಕ ಚುನಾವಣೆಯ ನಂತರ ಮತದಾನಕ್ಕೆ ನಿಗದಿತ ವಯೋಮಾನದ ತತ್ವವನ್ನು ಅಳವಡಿಸಿಕೊಂಡಿದೆ.

ರಾಷ್ಟ್ರಿಯ, ರಾಜ್ಯ ಮತ್ತು ಸ್ಥಳೀಯ ಶಾಸಕಾಂಗ ಸಂಸ್ಥೆಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ನಾಗರಿಕರು ಪ್ರತೀ ಐದು ವರ್ಷಗಳಿಗೊಮ್ಮೆ ಮತ ಚಲಾಯಿಸುತ್ತಾರೆ. ಒಂದೊಂದು ಮತಕ್ಕೂ ಅದರದ್ದೇ ಆದ ಪ್ರಾಮುಖ್ಯತೆ ಇದೆ. ಜನರು ತಮ್ಮ ಭವಿಷ್ಯದಲ್ಲಿ ತಮ್ಮನ್ನು ಆಳುವ ಆಡಳಿತವನ್ನು ಈ ಮತದ ಮೂಲಕ ಆಯ್ಕೆ ಮಾಡುತ್ತಾರೆ. ಮತದಾನವು ಒಂದು ದೇಶದ ಸರ್ಕಾರವನ್ನು ರಚಿಸಲು ಸಹಾಯ ಮಾಡುವ ಮೂಲಭೂತ ಪ್ರಕ್ರಿಯೆಯಾಗಿದೆ. ಮತದಾನದ ಹಕ್ಕು ಸಮಸ್ಯೆಗಳ ಬಗ್ಗೆ ಸರ್ಕಾರವನ್ನು ಪ್ರಶ್ನಿಸುವ ಜನರ ಹಕ್ಕುಗಳಿಗೆ ಇನ್ನಷ್ಟು ಬಲತುಂಬುತ್ತೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮತದಾನವು ಪ್ರಮುಖವಾಗಿದೆ.

"ಬುಲೆಟ್‌ಗಿಂತ ಮತಪತ್ರ ಬಲಿಷ್ಠವಾಗಿದೆ" ಎಂದು ಅಬ್ರಹಾಂ ಲಿಂಕನ್ ಹೇಳುತ್ತಾರೆ. "ಬದಲಾವಣೆಯನ್ನು ಬಯಸುವುದು ಮಾತ್ರವಲ್ಲ, ನೀವು ಹೋಗಿ ಮತ ಚಲಾಯಿಸುವುದು ಮಾತ್ರವಲ್ಲ, ನೀವು ಹೋಗಿ ಮತ ಚಲಾಯಿಸುವ ಮೂಲಕ ಬದಲಾವಣೆಯನ್ನು ಮಾಡಬೇಕು" ಎಂದು ಟೇಲರ್ ಸ್ವಿಫ್ಟ್ ಹೇಳಿದ್ದಾರೆ. "ನಿಮ್ಮ ಮತದಾನದ ಹಕ್ಕಿಗಾಗಿ ಯಾರೋ ಹೋರಾಟ ನಡೆಸಿದ್ದಾರೆ. ಅದನ್ನು ಬಳಸಿ" ಎಂದು ಸುಸಾನ್ ಬಿ.ಆಂಥೋನಿ ತಿಳಿಸಿದ್ದಾರೆ. "ಮುಖ್ಯವಲ್ಲದ ಮತ ಎಂಬುದೇ ಇಲ್ಲ. ಎಲ್ಲಾ ಮತವು ಪ್ರಮುಖವೇ ಆಗಿದೆ" ಎಂದು ಬರಾಕ್ ಒಬಾಮಾ ಹೇಳಿದ್ದಾರೆ.

ಭಾರತದಲ್ಲಿ ಸಂವಿಧಾನವು ಜನರಿಗೆ ಕೊಟ್ಟಿರುವ ಅತ್ಯಂತ ಶಕ್ತಿಶಾಲಿ ಹಕ್ಕು ಮತದಾನ. ರಾಜರ ಕಾಲದಲ್ಲಿ, ಬ್ರಿಟಿಷರ ಕಾಲದಲ್ಲಿ ಇದ್ದಿರದ ಅವಕಾಶವೊಂದು ಸ್ವತಂತ್ರ್ಯ ಭಾರತದಲ್ಲಿ ಜನರ ಪಾಲಿಗೆ ಒದಗಿಬಂತು. ಜನತಂತ್ರ ವ್ಯವಸ್ಥೆಯಿಂದಾಗಿ ಪ್ರತಿಯೊಬ್ಬ ಪ್ರಜೆಗೂ ಬೆಲೆ ಬಂತು.

ಮತದಾನದ ಹಕ್ಕು ಕೂಡ ದುರುಪಯೋಗಕ್ಕೆ ಒಳಗಾಗುವುದು ಎಲ್ಲವೂ ಭ್ರಷ್ಟವಾಗಿರುವ ಇವತ್ತಿನ ವ್ಯವಸ್ಥೆಯಲ್ಲಿ ಸಾಮಾನ್ಯವಾಗತೊಡಗಿದೆ. ಇದು ಅತಿ ವಿಷಾದದ ಸಂಗತಿ. ಚುನಾವಣೆಯ ಹೊತ್ತಿನಲ್ಲಿ ಹಣ, ಹೆಂಡದಂಥ ಆಮಿಷಗಳು ಮತದಾರರನ್ನು ಭ್ರಷ್ಟಗೊಳಿಸುತ್ತಿವೆ. ಮತದಾನವು ಹೀಗೆ ಯಾರದೋ ಸ್ವಾರ್ಥದ ಪ್ರಭಾವಕ್ಕೊಳಗಾಗುವುದು ತಂದಿಡುತ್ತಿರುವ ಪರಿಣಾಮಗಳೂ ಆಘಾತಕಾರಿ. ಹೇಗಾದರೂ ಗೆಲ್ಲಬೇಕೆಂಬ ರಾಜಕೀಯ ಪಕ್ಷಗಳ ಹುನ್ನಾರ ಕೂಡ ಮತದಾನವೆಂಬ ಅತಿ ಅಮೂಲ್ಯ ಪರಿಕಲ್ಪನೆಯನ್ನು ವ್ಯಾಪಾರದ ಮಟ್ಟಕ್ಕೆ ತಂದು ನಿಲ್ಲಿಸಿರುವ ದಿನಗಳನ್ನು ಕಾಣುತ್ತಿದ್ದೇವೆ. ನೀವು ನಮಗೆ ಮತ ಹಾಕಿಲ್ಲ. ಹಾಗಾಗಿ ನಿಮಗೆ ಸೌಲಭ್ಯಗಳನ್ನು ಒದಗಿಸಲಾರೆವು ಯಾರಿಗೆ ಮತ ಹಾಕಿದ್ದೀರೋ ಅವರ ಬಳಿ ಹೋಗಿ ಕೇಳಿಕೊಳ್ಳಿ ಎಂದು ಜನರನ್ನು ರಾಜಕೀಯ ಪಕ್ಷಗಳು ತಿವಿಯುವಂತೆ ಮಾತನಾಡುತ್ತಿರುವ ಸಂದರ್ಭಗಳೂ ನಮ್ಮೆದುರಿಗಿವೆ. ಕೋವಿಡ್ ಸಾಂಕ್ರಾಮಿಕದಂಥ ಹೊತ್ತಿನ ಅಗತ್ಯ ಜವಾಬ್ದಾರಿಗಳನ್ನು ಸರ್ಕಾರ ತನ್ನ ಲಾಭಕ್ಕೆ ಬಳಸಿಕೊಳ್ಳಲು ಯತ್ನಿಸಿದ್ದನ್ನು ಕೂಡ ನೋಡಬೇಕಾಗಿ ಬಂದಿತೆಂಬುದು ವಿಷಾದನಿಯ.

ಮತದಾನವೆಂಬುದು ಇಂಥ ಎಲ್ಲ ಕ್ಷುಲ್ಲಕಗಳನ್ನು ಮೀರಿದ್ದಾಗಿದೆ. ಅದರ ಘನತೆಯನ್ನು ಪ್ರತಿಯೊಬ್ಬ ಪ್ರಜೆಯೂ ಕಾಪಾಡಿಕೊಳ್ಳಬೇಕಾಗಿದೆ. ಮಾತ್ರವಲ್ಲ, ಅದನ್ನು ಗೌರವಿಸುವುದು ಯಾವುದೇ ರಾಜಕೀಯ ಪಕ್ಷಗಳ ಜವಾಬ್ದಾರಿಯೂ ಆಗಿದೆ.

ಲೇಖಕ:– ಪ್ರಕಾಶ್.ಕೆ,

ಆಧಾರ: ವಾರ್ತಾ ಭಾರತಿ, ದಿನಾಂಕ:25.01.2023.

5. ರಾಷ್ಟ್ರೀಯ ಮತದಾರರ ದಿನ –2023

ಎಲ್ಲಾ ಮತದಾರರಿಗೆ ನಮಸ್ಕಾರ,

ಇಂದು, ಅಂದರೆ 25ನೇ ಜನವರಿ ಭಾರತ ಚುನವಣಾ ಆಯೋಗದ ಸಂಸ್ಥಾಪನಾ ದಿನ. ಈ ದಿನವನ್ನು 2011ರಿಂದ ರಾಷ್ಟ್ರೀಯ ಮತದಾರರ ದಿನವನ್ನಾಗಿ (ಎನ್‌ವಿಡಿ) ಕೂಡ ಆಚರಿಸಲಾಗುತ್ತಿದೆ. ಭಾರತೀಯ ನಾಗರೀಕರಿಗೆ ಅವರು ಮತದಾರರಾಗಿ ಹಿಂದಿರುವ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು ಈ ದಿನಾಚರಣೆಯ ಉದ್ದೇಶವಾಗಿರುವುದು. ಪ್ರಥಮ ಗಣರಜ್ಯೋತ್ಸವ ದಿನಚರಣೆಯ ಸಂದರ್ಭದಲ್ಲಿ 25ನೇ ಜನವರಿ 1950 ರಂದು ಚುನಾವಣಾ ಆಯೋಗ (ಇಸಿಐ) ಸ್ಥಾಪನೆಯಾಗಿದೆ. ಆಯೋಗವು ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸಲು ಮತ್ತು ತೀರ್ಮಾನ ಕೈಗೊಳ್ಳಲು ಸಾಧ್ಯವಾಗುವಂತೆ ಪರಿಚ್ಛೇದ 324ರ ಅಡಿಯಲ್ಲಿ ಸಂವಿಧಾನ ಸಭೆಯು ಚುನಾವಣಾ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ ನೀಡಿದೆ. ಸಾಕ್ಷರತೆ ಪ್ರಮಾಣ ಕಡಿಮೆಯಿದ್ದ ಹಾಗೂ ಮತದಾರರ ಪಟ್ಟಿ ಇಲ್ಲದಿದ್ದ ಕಾಲಮಾನದಲ್ಲಿ ವಯಸ್ಕ ಮತದಾರರ ಆಧಾರದ ಮೇಲೆ ಚುನಾವಣೆ ನಡೆಸಲು ಶಾಶ್ವತವಾದ, ಕೇಂದ್ರಿತ ಮತ್ತು ಸ್ವಾಯತ್ತ ಆಯೋಗ ಒಂದನ್ನು ಸ್ಥಾಪಿಸಿರುವುದಕ್ಕಾಗಿ ಸಂವಿಧಾನ ಸಭೆಯ ದೂರದೃಷ್ಟಿಯ ನಿಲುವಿಗೆ ಗೌರವಪೂರ್ವಕ ನಮನ ಸಲ್ಲಿಸಬಹುದಾಗಿದೆ.

ಆಯೋಗದ ಸಾಮರ್ಥ್ಯ, ಪಕ್ಷಾತೀತತೆ ಮತ್ತು ವಿಶ್ವಾಸಾರ್ಹತೆಯನ್ನು 17 ಲೋಕಸಭಾ ಚುನವಣೆಗಳೂ, ರಾಷ್ಟ್ರಪತಿಗಳು ಹಾಗೂ ಉಪರಾಷ್ಟ್ರಪತಿಗಳ ಆಯ್ಕೆಗಾಗಿ ನಡೆದ 16 ಚುನಾವಣೆಗಳು, ಇಂದಿನ ದಿನದವರೆಗೆ ನಡೆದಿರುವ 399 ವಿಧಾನಸಭಾ ಚುನಾವಣೆಗಳು ಎತ್ತಿ ಹಿಡಿದಿವೆ. 400ನೇ ವಿಧಾನಸಭಾ ಚುನವಣೆಗಳು ಈಗ ಶುರುವಾಗಿವೆ. ಅಂತರರಾಷ್ಟ್ರೀಯವಾಗಿ ಅಪರೂಪವಾಗಿ ಅನುಭವಕ್ಕೆ ಬಂದಿರುವ ಸಂದರ್ಭಗಳು ಏನೇ ಇದ್ದರು, ಭಾರತದ ಚುನಾವಣಾ ಫಲಿತಾಂಶಗಳು ಎಂದು ವಿವಾದದ

ಸುಳಿಯಲ್ಲಿ ಸಿಲುಕಿರುವುದಿಲ್ಲ. ಬಹುಶಃ ವೈಯುಕ್ತಿಕ ಚುನಾವಣಾ ಅರ್ಜಿಗಳನ್ನು ಸಂಬಂಧಪಟ್ಟ ನ್ಯಾಯಾಲಗಳು ಪರಿಹರಿಸುವ ಸಂದರ್ಭಗಳನ್ನು ಹೊರತುಪಡಿಸಿದರೆ, ಒಟ್ಟಾರೆ ಚುನಾವಣಾ ಫಲಿತಾಂಶಗಳು ಯಾವುತ್ತೂ ವಿವಾದಕ್ಕೆ ಒಳಾಗಿರುವುದಿಲ್ಲ. ಆಯೋಗವು ತನ್ನ ದಕ್ಷ ಮತ್ತು ನಿಸ್ಪಕ್ಷಪಾತ ಕಾರ್ಯಕ್ಕಾಗಿ ರಾಜಕೀಯ ಪಕ್ಷಗಳ ಹಾಗೂ ಭಾರತದ ಪ್ರಜೆಗಳ ವಿಶ್ವಾಸಗಳಿಸಿದೆ. ಇದು ಆಯೋಗವು ತನ್ನ ಕಾರ್ಯದಲ್ಲಿ ಇನ್ನು ಹೆಚ್ಚಿನ ಬದ್ಧತೆ ವಹಿಸಲು ಹಾಗೂ ತನ್ನ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ.

ಶಕ್ತಿಶಾಲಿ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಮತದಾರರ ಬಲಯುತ ಹಾಗೂ ಪರಿಪೂರ್ಣ ಪಾಲ್ಗೊಳ್ಳುವಿಕೆಯು ಅತ್ಯಂತ ನಿರ್ಣಾಯಕ ಸಂಗತಿಯಾಗಿದೆ. ಉಜ್ವಲ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಅತ್ಯಂತ ಮುಕ್ತವಾಗಿ, ನ್ಯಾಯೋಚಿತವಾಗಿ, ನಿಯಮಿತವಾಗಿ ಹಾಗೂ ವಿಶ್ವಾಸರ್ಹವಾಗಿರಬೇಕು. ಆಯೋಗವು ತನ್ನ ಆಡಳಿತದ ಬಗ್ಗೆ ಪರಿಪೂರ್ಣ ಗೌರವ ಪಡೆಯಬೇಕಾದರೆ ಅದು ಹೆಚ್ಚು ಹೆಚ್ಚು ನಿಷ್ಠೆ ಹಾಗೂ ಸಾಮರ್ಥ್ಯದಲ್ಲಿ ಜನಪ್ರಿಯವಾಗಬೇಕು ಹಾಗೂ ಜವಾಬ್ದಾರಿಯುತವಾಗಿರಬೇಕು. ಮತವನ್ನು ಚಲಾಯಿಸಿದಾಗ ಮಾತ್ರ ಮತದಾನದ ಹಕ್ಕಿಗೆ ಬಲ ಬರುತ್ತದೆ. "ನಾವು ನಮ್ಮ ಕರ್ತವ್ಯವನ್ನು ಸಕಾಲದಲ್ಲಿ ಸಮರ್ಪಕವಾಗಿ ಮಾಡಿ ಮುಗಿಸದೆ ಅರ್ಧದಲ್ಲಿ ಬಿಟ್ಟು ಹಕ್ಕುಗಳನ್ನು ಪಡೆಯಲು ಅವುಗಳ ಬೆನ್ನಟ್ಟಿದರೆ ಆ ಅಧಿಕಾರ ನಿಮಗೆ ಕೈಗೆಟುಕದೆ ಮುಂದೆ ಹೋಗುತ್ತದೆ, ನೀವು ಹಿಂದೆ ಬೀಳಬೇಕಾಗುತ್ತದೆ" ಎಂದು ಮಹಾತ್ಮ ಗಾಂಧೀಜಿಯವರ ಉಕ್ತಿಯನ್ನು ನಾವಿಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ.

ಭಾರತ ದೇಶವು ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಭಾರತದಲ್ಲಿ 94 ಕೋಟಿಗಳಿಗೂ ಮಿಗಿಲಾದ ನೋಂದಾಯಿತ ಮತದಾರರಿದ್ದಾರೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ (2019) ವಾಸ್ತವಿಕ ಮತದಾನದ ಶೇಕಡವಾರು ಪ್ರಮಾಣ 67.4 ಆಗಿರುವುದು ಅತ್ಯಂತ ಅಪೇಕ್ಷಣೀಯವಾದುದಾಗಿದೆ. ಮತದಾನ ಮಾಡದೆ ಉಳಿದುಕೊಂಡಿರುವ 30 ಕೋಟಿ ಮತದಾರರನ್ನು ಮತದಾನ ಕೇಂದ್ರಗಳಿಗೆ ಕರೆತರುವುದೇ ಒಂದು ಸವಾಲಿನ ಕಾರ್ಯವಾಗಿದೆ. ಮತದಾನ ಮಾಡದೆ ಉದಾಸೀನ ಮಾಡಿರುವ ಮತದಾರರಲ್ಲಿ ನಗರ ಪ್ರದೇಶದಲ್ಲಿನ ಉಪೇಕ್ಷೆ, ಯುವಕರ ಅನಾದಾರಣೆ, ವಲಸೆ ಇನ್ನಿತರೆ ಆಯಾಮಗಳಿವೆ. ಮತಪಟ್ಟಿಯಲ್ಲಿ ಹೆಸರು ಸೇರ್ಪಡೆ ಮತ್ತು ಸ್ವಯಂ ಪ್ರೇರಿತ ಮತದಾನದ ಪ್ರವೃತ್ತಿಯಿರುವ ಉದಾರೀಕೃತ ಪ್ರಜಾಪ್ರಭುತ್ವದಲ್ಲಿ ಮನವರಿಕೆ ಮಾಡುವ ಮತ್ತು ಸೌಲಭ್ಯ ಕಲ್ಪಿಸುವ ವಿಧಾನ ಶ್ರೇಷ್ಠವಾಗಿರುತ್ತದೆ. ಕಡಿಮೆ ಮತದಾನ ನಡೆಯುವ ಕ್ಷೇತ್ರಗಳ ಬಗ್ಗೆ ಮತ್ತು ಮತದಾರರ ಪಾಲ್ಗೊಳ್ಳುವಿಕೆ ಕಡಿಮೆಯಿರುವ ಭಾಗಗಳ ಬಗ್ಗೆ ಗಮನ ಕೇಂದ್ರೀಕರಿಸಲು ಇದು ಸಾಧ್ಯವಾಗಿರುತ್ತದೆ.

ಎಂಬತ್ತು ವರ್ಷ ಮತ್ತು ಇದಕ್ಕೂ ಮೇಲ್ಪಟ್ಟ ವಯಸ್ಸಿನ ಎರಡು ಕೋಟಿಗಳಿಗೂ ಹೆಚ್ಚಿನ ಮತದಾರರಿಗೆ, ಎಂಬತ್ತ ಐದು ಲಕ್ಷ ವಿಕಲಚೇತನ ಮತದಾರರಿಗೆ, ಚುನಾವಣಾ ಆಯೋಗ ಈಗಾಗಲೇ ಸಾಂಸ್ಥಿಕ ಸ್ವರೂಪದ ಪದ್ಧತಿಯಲ್ಲಿ ಸೌಲಭ್ಯ ಒದಗಿಸಿದೆ. 47,500ಕ್ಕೂ ಹೆಚ್ಚಿನ ತೃತೀಯ ಲಿಂಗಿಗಳನ್ನು ಮತದಾರರನ್ನಾಗಿ ಸೇರ್ಪಡೆ ಮಾಡಲಾಗಿದೆ.

ಪ್ರಜಾಪ್ರಭುತ್ವದ ಬಗ್ಗೆ ತಮ್ಮ ಬದ್ಧತೆ ತೋರಿ ಮತದಾನದಲ್ಲಿ ಭಾಗವಹಿಸಿದ್ದ ಎರಡು ಲಕ್ಷಕ್ಕೂ ಮಿಗಿಲಾದ ಶಾತಾಯುಷಿ ಮತದಾರರುಗಳಿಗೆ ವೈಯುಕ್ತಿಕ ಪತ್ರ ಬರೆಯುವ ಮೂಲಕ ನಾನು ಇತ್ತೀಚಿಗೆ ಧನ್ಯವಾದ ಸಲ್ಲಿಸಿದ್ದೇನೆ. 1951 ರಲ್ಲಿ ನಡೆದ ಭಾರತದ ಪ್ರಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಥಮ ಮತದಾರರಾಗಿ ಮತ ಚಲಾಯಿಸಿದ್ದ ಜ್ಞಾಪಕಾರ್ಥವಾಗಿ 5ನೇ ನವೆಂಬರ, 2022 ರಂದು ಹಿಮಾಚಲ ಪ್ರದೇಶದಲ್ಲಿನ ಕಲ್ಪಾದಲ್ಲಿ ದಿವಂಗತ ಶ್ಯಾಮ ಶರಣ್ ನೇಗಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದೇನೆ. ಶ್ರಿಯುತರು ಅವರ ಇಳಿವಯಸ್ಸು 106ನೇ ವರ್ಷದಲ್ಲಿ ಅವರು ವಿಧಿವಶರಾಗುವವರೆಗೂ ಮತದಾನ ಮಾಡುವುದನ್ನು ತಪ್ಪಿಸಿಕೊಂಡಿದ್ದಿಲ್ಲ. ಈ ಮಹಾನ್ ಮತದಾರ ದಿವಂಗತ ಶ್ಯಾಮ್ ಶರಣ್ ನೇಗಿಯವರು ನಮ್ಮ ಮತವನ್ನು ಅರ್ಥಪೂರ್ಣವಾಗಿ ಚಲಾಯಿಸಲು ನಮಗೆ ಸ್ಫೂರ್ತಿದಾಯಕವಾಗಿ ಪ್ರೋತ್ಸಾಹಿಸಿದ್ದಾರೆ.

ಯುವ ಮತದಾರರು ಭಾರತದ ಪ್ರಜಾಪ್ರಭುತ್ವದ ಭವ್ಯ ಭವಿಷ್ಯದ ರೂವಾರಿಗಳು. ಮುಂದಿನ ಪೀಳಿಗೆ ಅಂದರೆ 2000 ಆಸುಪಾಸಿನಲ್ಲಿ ಮತ್ತು ನಂತರ ಹುಟ್ಟಿರುವ ಪ್ರಜೆಗಳು ನಮ್ಮ ಮತದಾರರ ಪಟ್ಟಿಗೆ ಸೇರಲು ಪ್ರಾರಂಭವಾಗಿದ್ದಾರೆ. ಇವರು ಮತದಾರರಾಗಿ ಪಾಲ್ಗೊಳ್ಳುವುದರಿಂದ ದೇಶದಾದ್ಯಂತ ಪ್ರಜಾಪ್ರಭುತ್ವದ ಭವಿಷ್ಯವನ್ನು ರೂಪಿಸವರು. ಆದ್ದರಿಂದಾಗಿ ವಿದ್ಯಾರ್ಥಿಗಳು ಮತ ಚಲಾಯಿಸುವ ವಯಸ್ಸನ್ನು ತಲುಪುವ ಮುನ್ನವೇ ಶಾಲಾ ಮಟ್ಟಗಳಲ್ಲಿ ಪ್ರಜಾಪ್ರಭುತ್ವದ ಬೇರುಗಳನ್ನು ಬಿತ್ತಬೇಕಾದ್ದು ಅವಶ್ಯ. ಯುವಕರನ್ನು ಮತದಾನದ ಕೇಂದ್ರಗಳಿಗೆ ಕರೆತರುವ ಪ್ರಯತ್ನವಾಗಿ ವಿವಿಧ ಮಾಧ್ಯಮಗಳ ಮೂಲಕ ಅವರನ್ನು ಪ್ರೇರೇಪಣೆ ಮಾಡಲಾಗುತ್ತಿದೆ. ಮತದಾನದ ಬಗ್ಗೆ ಉದಾಸೀನತೆ ವಹಿಸಿರುವ ನಗರ ಪ್ರದೇಶದ ಮತದಾರರನ್ನು ಕೂಡ ಮತ ಚಲಾವಣೆ ಮಾಡುವಂತೆ ಮನವರಿಕೆ ಮಾಡುವ ಕಾರ್ಯವನ್ನು ನಡೆಸಲಾಗುತ್ತಿದೆ.

ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಾದ ಶೌಚಾಲಯಗಳು, ವಿದ್ಯುಚ್ಛಕ್ತಿ, ಕುಡಿಯುವ ನೀರು, ರ್‍ಯಾಂಪ್‌ನಂತಹ ಕನಿಷ್ಠ ಸೌಲಭ್ಯಗಳನ್ನು(ಎಎಂಎಫ್) ಚುನಾವಣಾ ಆಯೋಗ ಅಭಿವೃದ್ಧಿಪಡಿಸುವುದರಲ್ಲಿ ಮುಂಚುಣಿಯ ಸ್ಥಾನದಲ್ಲಿದೆ. ಶಾಲೆಗಳಲ್ಲಿ ಅಭಿವೃದ್ಧಿ ಪಡಿಸುವ ಸೌಲಭ್ಯಗಳು ಶಾಶ್ವತ ಸ್ವರೂಪದ್ದಾಗಿರಬೇಕು ಮತ್ತು ಹಣಕಾಸಿನ ವಿಚಾರದಲ್ಲೂ ಯುಕ್ತವಾದ ನಿರ್ಧಾರದಿಂದ ಕೂಡಿರಬೇಕು ಎಂಬ ಅಂಶಗಳ ಬಗ್ಗೆ ಆಯೋಗ ಗಮನ ಕೇಂದ್ರೀಕರಿಸಿದೆ.

ಪ್ರಜಾಪ್ರಭುತ್ವದಲ್ಲಿ ಮತದಾರರು ತಾವು ಮತ ಹಾಕಲಿರುವ ಅಭ್ಯರ್ಥಿಯ ಹಿನ್ನಲೆ ಬಗ್ಗೆ ಮಾಹಿತಿ ಪಡೆಯುವ ಹಕ್ಕನ್ನು ಮತದಾರರು ಹೊಂದಿರುವರು. ಮತದಾರರಿಗೆ ಆಯ್ಕೆಗಳ ಬಗ್ಗೆ ಮಾಹಿತಿ ಒದಗಿಸುವುದು ಅತ್ಯಂತ ಮಹತ್ವದ್ದಾಗಿರುವುದು. ಆದ ಕಾರಣ ಯಾವುದೇ ಅಭ್ಯರ್ಥಿ ಬಗ್ಗೆ ಕ್ರಿಮಿನಲ್ ಪ್ರಕರಣಗಳು ಇತ್ಯರ್ಥವಾಗದೆ ಉಳಿದಿದ್ದರೆ ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಈ ಪ್ರಜಾಪ್ರಭುತ್ವ ವಿರೋಧಿ ಕೃತ್ಯವನ್ನು ಸದೆ ಬಡಿಯಲು ಕಾನೂನು ಜಾರಿ ಸಂಸ್ಥೆಗಳಿಂದ ತೀವ್ರ ಸ್ವರೂಪದ ಜಾಗ್ರತೆ ವಹಿಸಲಾಗಿದೆ. ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಹಣ, ವಸ್ತು ಮುಂತಾದವುಗಳನ್ನು ದಾಖಲೆಯ ಪ್ರಮಾಣದಲ್ಲಿ ಜಪ್ತಿ ಮಾಡಿರುವುದು ಇದಕ್ಕೆ ನಿದರ್ಶನವಾಗಿದೆ. ಪ್ರಾಮಾಣಿಕ ಮತ್ತು ಜಾಗೃತ ಮತದಾರರಿಗೆ ಪ್ರಜಾಪ್ರಭುತ್ವದಲ್ಲಿ ಇದಕ್ಕಿಂತ ಒಳ್ಳೆಯ ಪರ್ಯಾಯ ಕ್ರಮ ಬೇರೊಂದಿಲ್ಲ. ನೀತಿ ಸಂಹಿತೆ ಉಲ್ಲಂಘನೆ ಘಟನೆಗಳ ಬಗ್ಗೆ ವರದಿ ಮಾಡಲು ಸಾಮಾನ್ಯ ಪ್ರಜೆಗಳಿಗೆ ಸಿ–ಮಿಜಿಲ್ ನಂತಹ ಮೊಬೈಲ್ ಆ್ಯಪ್ ನೆರವಾಗುವುದು. ಇದರಿಂದ ತಪ್ಪಿತಸ್ಥರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲು ಚುನಾವಣಾ ವೀಕ್ಷಕರಿಗೆ ಸಹಾಯವಾಗುವುದು.

ರುಜುವಾತಾದ ಚುನಾವಣಾ ಫಲಿತಾಂಶಗಳ ಮೂಲಕ ಪ್ರಜಾಪ್ರಭುತ್ವ ಸ್ಥಾನ ಸದೃಢಗೊಳ್ಳುವುದಲ್ಲದೆ ವಿಶ್ವಾದಾದ್ಯಂತದಿಂದ ಶ್ಲಾಘನೆಗೆ ಪಾತ್ರವಾಗಿದೆ. ಚುನಾವಣೆಗಳಿಗೆ ಸಂಬಂಧಿಸಿದ ವಿಚಾರಗಳು ಮತ್ತು ನಿಯಮಗಳು/ತಪ್ಪು ಹಾಗೂ ಪ್ರತಿಯೊಂದು ರಾಜಕೀಯ ಪಕ್ಷವು ತನ್ನ ಹಕ್ಕಿನ ಪರಧಿ ಒಳಗೆ ಅದರ ಚುನಾವಣಾ ಆಶ್ವಾಸನೆಯಲ್ಲಿ ಕ್ಷೇಮಾಭಿವೃದ್ಧಿ ಕ್ರಮಗಳ ಬಗ್ಗೆ ಭರವಸೆ ನೀಡುವಂತೆ, ಅವುಗಳಿಂದ ಸಾರ್ವಜನಿಕ ಖಜಾನೆಗೆ ಉಂಟಾಗುವ ಹಣಕಾಸಿನ ಪರಿಣಾಮಗಳ ಬಗ್ಗೆ ತಿಳಿಯುವ ಹಕ್ಕನ್ನು ಮತದಾರರೂ ಹೊಂದಿರುವರು.

ಚುನಾವಣೆಯಲ್ಲಿ ನಡೆಯುವ ತೋಳ್ಬಲಗಳನ್ನು ಈಗಾಗಲೇ ನಾಮವಶೇಷಗೊಳಿಸಿದೆ. ಆದರೂ ಕೆಲವೇ ರಾಜ್ಯಗಳಲ್ಲಿ ಚುನಾವಣೆಯ ಸಂಬಂಧಿತ ಹಿಂಸಾಚಾರಗಳು ಮತದಾರರ ಮುಕ್ತ ಆಯ್ಕೆಯ ಮೇಲೆ ಅಡಚಣೆ ಉಂಟು ಮಾಡುವುದು ಮುಂದುವರಿದಿದೆ. ವಾಸ್ತವವಾಗಿ ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಆಸ್ಪದವಿಲ್ಲ. ಹಣದ ಶಕ್ತಿಯನ್ನು ತೊಡೆದು ಹಾಕುವುದು ಚುನಾವಣೆಗಳಲ್ಲಿ ಅತಿ ದೊಡ್ಡ ಸವಾಲಾಗಿದೆ. ಮತದಾರರಿಗೆ ಆಮಿಷ ತೋರಿ ಅವರನ್ನು ಸೆಳೆಯುವ ಪ್ರಮಾಣ ಮತ್ತು ಗಾತ್ರ ಕೆಲವೇ ಕೆಲವು ರಾಜ್ಯಗಳಲ್ಲಿ ಹೆಚ್ಚಿದೆ. ಏನೇ ಆದರೂ ಸುದ್ದಿಗಳನ್ನು ಬಿತ್ತರಿಸುವ ಸಾಮಾಜಿಕ ಮಾಧ್ಯಮಗಳ ಪ್ರಮಾಣ ಮತ್ತು ಗತಿಯು ಚುನಾವಣಾ ನಿರ್ವಹಣೆಗಳಲ್ಲಿ ಬಳಸುವ ತಂತ್ರಜ್ಞಾನದ ಇತರೆ ಸೌಲಭ್ಯಗಳನ್ನು

ಉಸಿರುಗಟ್ಟಿಸುವಂತೆ ಮಾಡುತ್ತಿವೆ. ಚುನಾವಣಾ ಆಯೋಗದ ಪತ್ರ ಮತ್ತು ಚೌಕಟ್ಟು ಆಗಿರುವ ಅನಿರ್ಬಂಧಿತ, ಬಲತ್ಕಾರ ರಹಿತ, ನೈತಿಕ ಮತ್ತು ಕಾನೂನು ಮಾನದಂಡಗಳಿದ್ದರೂ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳು ತಂತ್ರಜ್ಞಾನವನ್ನು ಅದರ ವ್ಯವಹಾರದ ಪರಿಣಾಮಕಾರಿ ಆಯುಧವನ್ನಾಗಿ ಬಳಸುತ್ತಿವೆ.

ಪ್ರತಿಯೊಂದು ಚುನಾವಣೆ ನಡೆಯುವ ಮುನ್ನ ಕೆಲವೊಂದು ಮಾಧ್ಯಮಗಳಲ್ಲಿ ನೂರಾರು ಅಸಲಿಯಲ್ಲದೆ ವಿಡಿಯೋಗಳು/ವಿಚಾರಗಳನ್ನು ತುಂಬಿ ಬಿತ್ತರಿಸಲಾಗುತ್ತದೆ. ಸ್ವಶಕ್ತಿಯಿಲ್ಲದೆ ಇವು ಚುನಾವಣೆ ಮುಗಿದ ನಂತರವೂ ಎಡತಾಕುತ್ತಾ ಮುಂದುವರಿಯುವವು. ಇವು ವಿಶೇಷವಾಗಿ ಪ್ರಮುಖ/ಪ್ರಧಾನ ಚುನಾವಣಾ ಭಾಗಗಳ ಮೇಲೆ ದಾಳಿ ನಡೆಸುವವು. ಇಂತಹ ತಪ್ಪು ಮಾಹಿತಿ ನೀಡುವುದನ್ನು ಅಪಾಯದ ಕೆಂಪು ಬಣ್ಣದಿಂದ ಪ್ರಕಟಿಸುವ ಕಾರ್ಯವನ್ನು ಸಾಮಾಜಿಕ ಮಾಧ್ಯಮಗಳು ತಮ್ಮ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು ಎಂಬ ನಿರೀಕ್ಷೆ ವಿಶ್ವಾದಾದ್ಯಂತ ಬೆಳೆಯುತ್ತಿದೆ. ಮುಕ್ತ ಸಂಭಾಷಣೆ ಸೇರಿದಂತೆ ಮುಕ್ತ ಅವಕಾಶಗಳ ರಕ್ಷಣೆ ಜವಾಬ್ದಾರಿ ಎಲ್ಲರಿಗೂ ಸೇರಿರುವ ವಿಚಾರ. ಶುದ್ಧಾಂಗ ತಪ್ಪು ಸುದ್ದಿಗಳು ಚುನಾವಣೆ ನಿರ್ವಹಣೆ ಸಂಸ್ಥೆಗಳ ಕಾರ್ಯವನ್ನು ಹೆಚ್ಚು ಕಷ್ಟಕರವಾಗಿಸುವುದು ಎಂದು ಮನವರಿಕೆ ಮಾಡಿಕೊಂಡು, ಅದನ್ನು ತ್ಯಜಿಸಿ ಸ್ವಯಂ ಮಾರ್ಪಾಡು ಆಗಬೇಕಾಗಿದೆ.

ಚುನಾವಣೆಯನ್ನು ಸಮಗ್ರವೂ, ಸರ್ವರ ಪಾಲ್ಗೊಳ್ಳುವಿಕೆಯೂ, ಮತದಾರರ ಸ್ನೇಹಿಯೂ ಮತ್ತು ನೈತಿಕ ರೂಪದ್ದಾಗಿಯೂ ಇರುವಂತೆ ಮಾಡಲು ಇದಕ್ಕೆ ಅಡ್ಡಿಪಡಿಸುವ ಎಲ್ಲಾ ಅಡಚಣೆಗಳನ್ನು ತೊಡೆದು ಹಾಕಲು ಭಾರತ ಚುನಾವಣಾ ಆಯೋಗ ಸಂಕಲ್ಪಿಸಿರುವದನ್ನು ರಾಷ್ಟ್ರೀಯ ಮತದಾರರ ದಿನಚರಣೆಯ ಪುನರುಚ್ಚರಿಸುವುದು. 13ನೇ ರಾಷ್ಟ್ರೀಯ ಮತದಾರರ ದಿನಾಚರಣೆಯ (2023) ವಿಷಯ ವಸ್ತು "ಮತದಾನದಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ" ಎಂಬುದಾಗಿದೆ. ಇದಕ್ಕೆ ಮತದಾರರನ್ನು ಸೆಳೆಯುವ ಶಕ್ತಿ ಇದೆ.

ನಾಗರಿಕರು ಅವರ ನಾಗರಿಕ ಕರ್ತವ್ಯದ ಭಾಗವಾಗಿ ತಾವು ಮತದಾರರಾಗಿರುವ ಬಗ್ಗೆ ಹೆಮ್ಮೆ ಪಡುವುದರಿಂದಲೇ ಆಡಳಿತದ ನಿರೀಕ್ಷಿತ ಮಟ್ಟದ ಮೇಲೆ ಉತ್ತಮ ಪರಿಣಾಮ ಉಂಟು ಮಾಡುತ್ತದೆ. ಮತದಾರರ ದಿನದ ಹಾರ್ದಿಕ ಶುಭಾಶಯಗಳು.

ಲೇಖಕರು:– ರಾಜೀವ್ ಕುಮಾರ್

ಮುಖ್ಯ ಚುನಾವಣಾ ಆಯುಕ್ತರು, ಭಾರತ ಚುನಾವಣಾ ಆಯೋಗ,

ಆಧಾರ:– ವಿಜಯ ಕರ್ನಾಟಕ, ದಿನಾಂಕ:25.01.2023.

6. ಸಂವಿಧಾನ ರಚನೆಗೆ ಕನ್ನಡಿಗರ ಕಾಣ್ಕೆ

ಹನಿ ಹನಿಗೂಡಿದರೆ ಹಳ್ಳ ಎಂಬಂತೆ ಭಾರತದ ಸಂವಿಧಾನವೆಂಬ ಮಹಾ ಸಾಗರಕ್ಕೆ ದೇಶದಾದ್ಯಂತದಿಂದ ಮುತ್ಸದ್ದಿಗಳು ಹಾಗೂ ತಜ್ಞರುಗಳೆಂಬ ನದಿ ತೊರೆಗಳಿಂದ ಅನುಭವ ಹಾಗೂ ಮಾಹಿತಿಯ ಮಹಾಪೂರವೇ ಹರಿದುಬಂದಿದೆ. ಭಾಷೆ, ಪ್ರಾಂತಿಯ ವಿಚಾರಧಾರೆ, ಧಾರ್ಮಿಕ ಆಚರಣೆ ಮುಂತಾದ ವಿಷಯಗಳಲ್ಲಿ ನಮ್ಮ ದೇಶದಲ್ಲಿರುವ ವೈವಿಧ್ಯತೆ ಬೇರಲ್ಲಿಯೂ ಕಾಣಸಿಗುವುದಿಲ್ಲ. ಇಂಥ ವೈವಿಧ್ಯತೆ ಗಮನಿಸಿ ಎಲ್ಲಾ ವರ್ಗದವರಿಗೂ ಪ್ರಾತಿನಿಧ್ಯ ಕಲ್ಪಿಸಿ ನಿರ್ಮಿಸಲಾಗಿದ್ದ ಸಂವಿಧಾನ ಸಭೆಯಲ್ಲಿ ಕನ್ನಡಿಗರ ಪಾತ್ರ ಮಹತ್ವದ್ದಾಗಿತ್ತು. ಸ್ವಾರಸ್ಯವೇನೆಂದರೆ, ಆ ಸಮಯದಲ್ಲಿ ಕನ್ನಡನಾಡೆಂದು ಗುರುತಿಸಿಕೊಳ್ಳುತ್ತಿದ್ದಿದ್ದು ಒಡೆಯರು ಆಡಳಿತದಲ್ಲಿದ್ದ ಮೈಸೂರು ಪ್ರಾಂತ್ಯವೊಂದೇ ಆದರೂ ತದನಂತರ ನಿರ್ಮಾಣಗೊಂಡ ಏಕೀಕೃತ ಮೈಸೂರು ಹಾಗೂ ಕರ್ನಾಟಕ ರಾಜ್ಯಗಳಲ್ಲಿ ವಿಲೀನಗೊಂಡ ಪ್ರಾಂತ್ಯಗಳಿಂದಲೂ ಕನ್ನಡಿಗರೇ ಆಗಿದ್ದಂಥ ಸಜ್ಜನರು ಸಂವಿಧಾನ ರಚನೆಯಲ್ಲಿ ಭಾಗಿಯಾಗಿದ್ದಾರೆ.

'ಕಾಯಕವೇ ಕೈಲಾಸ' ಎಂಬ ವಚನವೇ ಮೂರ್ತಿವೆತ್ತಂತೆ ಬಾಳಿ ಬದುಕಿದವರು ಸಂವಿಧಾನ ರಚನಾ ಸಭೆಯ ಸಲಹೆಗಾರರಾಗಿದ್ದ ಬೆನೆಗಲ್ ನರಸಿಂಗರಾಯರು. ಅಂದು ಮದ್ರಾಸ್ ಪ್ರೆಸಿಡೆನ್ಸಿಗೆ

ಸೇರಿದ್ದ ದಕ್ಷಿಣ ಕನ್ನಡದಲ್ಲಿ ಹುಟ್ಟಿ ಬೆಳೆದವರು ನರಸಿಂಗರಾಯರು. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ನೇತೃತ್ವದಲ್ಲಿ ರೂಪುಗೊಂಡ ನಮ್ಮ ಸಂವಿಧಾನವೆಂಬ ಮಹಾಶಿಲ್ಪಕ್ಕೆ ಶಿಲೆ ಒದಗಿಸಿದವರು ನರಸಿಂಗರಾಯರು. ಬಾಬಾ ಸಾಹೇಬರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಕರಡು ರಚನ ಸಮಿತಿಯ ನಡವಳಿಕೆಯಲ್ಲಿ ದಾಖಲಿಸಿರುವಂತೆ ಸಂವಿಧಾನಿಕ ಸಲಹೆಗಾರರು ಸಿದ್ಧಪಡಿಸಿದ್ದ ಸಂವಿಧಾನದ ಕರಡನ್ನು ಅವಲೋಕಿಸಿ ಅವಶ್ಯಕತೆಯಿದ್ದ ಅಂಶಗಳನ್ನು ಪೂರೈಸಿ ಆ ಸಮಿತಿ ಪರಿಷ್ಕರಿಸಿದ ಸಂವಿಧಾನದ ಕರಡನ್ನು ಸಭೆಯ ಮುಂದೆ ಪ್ರಸ್ತುತ ಪಡಿಸುವ ಜವಬ್ದಾರಿ ಆ ಸಮಿತಿಯದ್ದಾಗಿತ್ತು. ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಲಾದ ಸಂವಿಧಾನಕ್ಕೆ ಅಂಕಿತ ಹಾಕುವ ಮುನ್ನ ಸಭಾಧ್ಯಕ್ಷರಾಗಿದ್ದ ರಾಜೇಂದ್ರ ಪ್ರಸಾದ್‌ರವರು ನರಸಿಂಗರಾಯರಿಗೆ ಕೃತಜ್ಞತೆ ಸಲ್ಲಿಸಿ ಗುಣಗಾನ ಮಾಡಿದ್ದರು.

ಮೈಸೂರು ರಾಜ್ಯದಲ್ಲಿ ಪ್ರಜಪ್ರಭುತ್ವದ ಸ್ಥಾಪನೆಯಾದ ನಂತರ ಮೊದಲ ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸಿದವರು ಕೆ.ಸಿ.ರೆಡ್ಡಿಯವರು. ಸಂವಿಧಾನ ರಚನಾ ಸಭೆಯಲ್ಲಿ ಭಾರತದ ಏಕೀಕರಣ ಹಾಗೂ ಅಖಂಡತೆಯ ಬಗ್ಗೆ ಪ್ರಖರವಾಗಿ ಮಾತನಾಡಿ ಸರ್ದಾರ್ ಪಟೇಲರಿಗೆ ಸಹಮತ ವ್ಯಕ್ತಪಡಿಸಿದವರು. ನಾಮನಿರ್ದೇಶಕ ಸದಸ್ಯರಿಗಿಂತ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಸದಸ್ಯರಿಗೆ ಹೆಚ್ಚು ಪ್ರಾತಿನಿಧ್ಯ ದೊರೆಯಬೇಕೆಂದು ವಾದಿಸಿದ್ದರು. ಮೈಸೂರು ರಾಜ್ಯದ ಎರಡನೇ ಮುಖ್ಯಮಂತ್ರಿಗಳಾಗಿ ಇಂದಿನ ವಿಧಾನಸೌಧದ ನಿರ್ಮಾಣಕರ್ತರಾದ ಕೆಂಗಲ ಹನುಮಂತಯ್ಯನವರು ಸಂವಿಧಾನ ಸಭೆಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿದವರು. ಕೇಂದ್ರ ಸರ್ಕಾರ ಶಿಫಾರಸ್ಸು ಮಾಡಿ ರಾಷ್ಟ್ರಪತಿಗಳಿಂದ ರಾಜ್ಯ ಸರ್ಕಾರವನ್ನು ಅಮಾನತ್ತುಗೊಳಿಸುವಂಥ ಅಧಿಕಾರವನ್ನು ತೀಕ್ಷ್ಣವಾಗಿ ವಿರೋಧಿಸಿದ್ದರು.

ಎಸ್.ನಿಜಲಿಂಗಪ್ಪನವರು ಮುಂಬಯಿ ಪ್ರಾಂತ್ಯದ ಪ್ರತಿನಿಧಿಗಳಾಗಿ ಸಂವಿಧಾನ ಸಭೆಯಲ್ಲಿ ಭಾಗವಹಿಸಿದ್ದರು. ಇಂದಿರಾಗಾಂಧಿಯವರನ್ನು ಎದರು ಹಾಕಿಕೊಂಡು ಭಾರತದ ರಾಜಕೀಯ ಇತಿಹಾಸದಲ್ಲಿ ಸಂಚಲನ ಮೂಡಿಸಿದ್ದ ಇವರು ಸಂವಿಧಾನ ಸಭೆಯಲ್ಲಿ ಅಮೂಲ್ಯ ಕೊಡುಗೆಯಿತ್ತಿದ್ದಾರೆ. ಹಿಂದಿ ರಾಷ್ಟ್ರಿಯ ಭಾಷೆಯಾಗಬೇಕು. ದೇವನಾಗರಿ ಲಿಪಿ ರಾಷ್ಟ್ರೀಯ ಲಿಪಿಯಾಗಬೇಕು ಎಂದು ಪ್ರಸ್ತುತ ಪಡಿಸಿದ್ದ ಸೂತ್ರವನ್ನು ನಿಜಲಿಂಗಪ್ಪನವರು ಒಪ್ಪಿ ಸಮರ್ಥಿಸಿದ್ದರು.

ದಿವಾನ್ ಬಹದ್ದೂರ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್ ಅವರು ಮೈಸೂರು ಒಡೆಯರ ರಾಜ್ಯಾಡಳಿತದಲ್ಲಿದ್ದಾಗ ದಿವಾನರಾಗಿದ್ದರು. ಕಾನೂನು ತಜ್ಞರಾಗಿದ್ದ ಅವರು ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸಕೀಯ ಹಾಗೂ ಆಡಳಿತಾತ್ಮಕ ಅಧಿಕಾರವನ್ನು ಸಂವಿಧಾನದಡಿ ನ್ಯಾಯುತವಾಗಿ ಹಂಚುವ ಬಗ್ಗೆ ವಿಷದವಾಗಿ ಮಾತನಾಡಿದ್ದರು

ಸಂವಿಧಾನ ಸಭೆಯಲ್ಲಿ ಚನ್ನಯ್ಯನವರು ಕನ್ನಡದಲ್ಲಿ ಭಾಷಣ ಮಾಡಿ ಗಮನ ಸೆಳೆದಿದ್ರು ಸನ್ಮಾನ್ಯರಾದ ಟಿ.ಸಿದ್ದಲಿಂಗಯ್ಯ, ಎಚ್.ಆರ್.ಗುರುವಾ ರೆಡ್ಡಿ ಹಾಗೂ ಎಚ್.ಸಿದ್ದವೀರಪ್ಪನವರು ಕೂಡ ಸಂವಿಧಾನ ಸಭೆಯಲ್ಲಿ ಮೈಸೂರ ಪ್ರಾಂತ್ಯದ ಪ್ರಾತಿನಿಧಿಗಳಾಗಿ ಭಾಗವಹಿಸಿದ್ದರು. ಮೈಸೂರು ಪ್ರಾಂತ್ಯದ ಪ್ರತಿನಿಧಿಯಾಗಿ ವಿಧಾನಸಭೆಯಲ್ಲಿ ಭಾಗವಹಿಸಿದ ಮಹಮ್ಮದ್ ಶರೀಫ್, ಉರ್ದು ಭಾಷೆಯಲ್ಲಿ ಭಾಷಣ ಮಾಡಿದ್ದರು.

ಎಸ್.ವಿ.ಕೃಷ್ಣಮೂರ್ತಿರಾಯರು, ಬಿ.ಎನ್.ಮುನವಳ್ಳಿಯವರು ಸೇರಿದಂತೆ ಹಲವು ಕನ್ನಡಿಗರು ಸಂವಿಧಾನದ ನಿರ್ಮಾಣ ಕಾರ್ಯದಲ್ಲಿ ಕೈಜೋಡಿಸಿದ್ದರು. ಇವರೆಲ್ಲರನ್ನೂ ಇಂದು ಸ್ಮರಿಸೋಣ.

ಲೇಖಕರು:ರಾಘವೇಂದ್ರ, ಎಸ್.ಶ್ರೀವತ್ಸ

ಅಡ್ವೋಕೇಟ್–ಆನ್–ರೆಕಾರ್ಡ್, ಸುಪ್ರೀಂಕೋರ್ಟ್

ಆಧಾರ: ವಿಜಯ ಕರ್ನಾಟಕ, ದಿನಾಂಕ:26.01.2023.

7. ಘನತೆಯತ್ತ ಸಾಗುತ್ತಿದೆ ಭಾರತದ ಗಣತಂತ್ರ

ಭಾರತ ಇಂದು ಜಗತ್ತಿನ 5ನೇ ಪ್ರಬಲ ಆರ್ಥಿಕ ಶಕ್ತಿಯಾಗಿದೆ. ಹಾಲು, ಸಕ್ಕರೆ, ಧಾನ್ಯ, ಹಣ್ಣು, ತರಕಾರಿ ಉತ್ಪಾದನೆಯಲ್ಲಿ ಹಲವಾರು ಪ್ರಥಮಗಳನ್ನು ಸಾಧಿಸಿದೆ. ನೆರೆಯ ದೇಶಗಳಲ್ಲಿ ಆಹಾರಕ್ಕಾಗಿ ಹಾಹಾಕಾರ ಎದ್ದಿದೆ. ಆದರೆ ಭಾರತ ತನ್ನ ಶೇ.80ರಷ್ಟು ಜನರಿಗೆ ಉಚಿತ ಆಹಾರಧಾನ್ಯ ಹಂಚುವಷ್ಟು ಸಮೃದ್ಧವಾಗಿದೆ. ವ್ಯಾಪಾರ, ವ್ಯವಹಾರ, ವೈದ್ಯಕೀಯ ಮತ್ತು ರಾಜತಾಂತ್ರಿಕತೆ ಸೇರಿದಂತೆ ಯಾವುದೇ ಅಂತರಾಷ್ಟ್ರೀಯ ವಿಷಯದಲ್ಲೂ ಭಾರತವನ್ನು ಕಡೆಗಣಿಸಲಾಗದ ಸ್ಥಿತಿ ಜಾಗತಿಕ ವಲಯದಲ್ಲಿ ನಿರ್ಮಾಣವಾಗಿದೆ ಭಯೋತ್ಪದನೆ, ದೇಶದ್ರೋಹ, ನಕ್ಸಲ್‌ವಾದಗಳ ಮಗ್ಗಲು ಮುರಿದಿದೆ. ಪ್ರಬಲ ರಕ್ಷಣಾ ವ್ಯವಸ್ಥೆಯ ವ್ಯೂಹ ದೇಶವನ್ನು ಆಂತರಿಕ ಮತ್ತು ಬಾಹ್ಯ ವೈರಿಗಳಿಂದ ಸುರಕ್ಷಿತವಾಗಿಸಿದೆ. ಇಡೀ ಜಗತ್ತಿಗೆ ಆರ್ಥಿಕ ಕುಸಿತ ಉಂಟಾದರೂ ಭಾರತ ನಲುಗದಂತೆ ನಿಂತಿದೆ. ಕೊರೋನಾದಂತಹ ಹೆಮ್ಮಾರಿಯನ್ನು ಕಟ್ಟಿಹಾಕುವ ಔಷಧಿ ಕಂಡುಹಿಡಿದಿದೆ. ಅಭಿವೃದ್ಧಿಯ ಹೊಸ ಪರ್ವವೇ ಆರಂಭವಾಗಿದೆ. ಹೀಗಾಗಿ ಜಗತ್ತು ಇಂದು ಭಾರತದತ್ತ ಬೆರಗುಗಣ್ಣಿನಿಂದ ನೋಡುತ್ತಿದೆ.

ಮುಂಬರುವ ದಿನಗಳಲ್ಲಿ ಭಾರತ ಜಗತ್ತಿನ ಪ್ರಬಲ ರಾಷ್ಟ್ರವಾಗಲಿದೆ. ಅದಕ್ಕೆಲ್ಲ ಕಾರಣ ನಮ್ಮ ಸಂವಿಧಾನ, ಪ್ರಜಾಪ್ರಭುತ್ವ, ವಿದೇಶಾಂಗ ನೀತಿ, ಅಭಿವೃದ್ಧಿ ಯೋಜನೆಗಳು ಮತ್ತು ಸರ್ವೋತ್ತಮ ನಾಯಕತ್ವ ಸಂವಿಧಾನ ನಿರ್ಮಾಪಕರ ಉದ್ದೇಶ ಈ ದೇಶ ಸಹಕಾರಿ ತತ್ವದ ಮೇಲೆ ರಚನೆಯಾದ ಸಶಕ್ತ ಒಕ್ಕೂಟ ವ್ಯವಸ್ಥೆಯಾಗಬೇಕು. ಪಕ್ಷರಾಜಕಾರಣದ ಭಿನ್ನ ಹಿತಸಕ್ತಿಯ ಕಾರಣಕ್ಕೆ ರಾಜ್ಯ ಸರ್ಕಾರಗಳು ಪ್ರತ್ಯೇಕ ಡೋಮಿನಿಯನ್ ರೀತಿಯಲ್ಲಿ ವರ್ತಿಸಬಾರದು ಎಂಬುದಾಗಿತ್ತು. ಅಭಿವ್ಯಕ್ತಿ ಹೆಸರಿನಲ್ಲಿ ಸ್ಯೂಡೋ ಸೆಕ್ಯೂಲರ್‌ಗಳು, ಭಯೋತ್ಪಾದಕರು ಹಾಗೂ ಅಭಿವೃದ್ಧಿ ವಿರೋಧಿ ಮನಸ್ಥಿತಿಯ ಕೆಲ ಮಾಧ್ಯಮಗಳೂ ದೇಶದ ಅಖಂಡತೆ ಮತ್ತು ಸರ್ವಭೌಮತೆಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಲೇ ಇದ್ದರೂ ಕಠಿಣ ಕಾನೂನು ವ್ಯವಸ್ಥೆ ಮತ್ತು ಸಶಕ್ತ ಸರ್ಕಾರ ಒಕ್ಕೂಟ ವ್ಯವಸ್ಥೆಯನ್ನು ಮತ್ತಷ್ಟು ಬಲಿಷ್ಠಗೊಳಿಸುತ್ತಿವೆ.

ಸಂವಿಧಾನ ಬದಲಾಗಲೇಬಾರದೆ:

ಸಂವಿಧಾನ ಎಂಬುದು ಗುರಿಯನ್ನು ತಲುಪುವ ಒಂದು ವಿಧಾನ ಮಾತ್ರ. ಆದರೆ ಸಂವಿಧಾನವೇ ಗುರಿಯಲ್ಲ ಎಂದು ಸಂವಿಧಾನ ಕಾರ್ಯವಿಧಾನ ಪುನರವಲೋಕನ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಎಮ್.ಎನ್.ವೆಂಕಟಾಚಲಯ್ಯ ಅವರು ಹೇಳಿದ ಮಾತು ಸಂವಿಧಾನ ಏತಕ್ಕಾಗಿ ರಚನೆಗೊಂಡಿದೆ ಮತ್ತು ಅದನ್ನು ಹೇಗೆ ಅನುಸರಿಸಬೇಕು ಎಂಬ ಆಲೋಚನೆಯನ್ನು ಹುಟ್ಟುಹಾಕುತ್ತದೆ. ಸಂವಿಧಾನ ಉಲ್ಲಂಘನೆಯಾಗುತ್ತಿದೆ, ಸಂವಿಧಾನವನ್ನು ರಕ್ಷಿಸಬೇಕು ಎಂಬ ಹುಯಿಲನ್ನು ಕೆಲವರು ಎಬ್ಬಿಸುತ್ತಿದ್ದಾರೆ. ಆದರೆ, ಸಂವಿಧಾನ ಯಾವ ರೀತಿ ಉಲ್ಲಂಘನೆಯಾಗುತ್ತಿದೆ ಎಂಬ ಪ್ರಶ್ನೆಗೆ ಅವರ ಬಳಿ ಉತ್ತರವಿಲ್ಲ.

ಪ್ರಜಪ್ರಭುತ್ವದಲ್ಲಿ ಸಂಸತ್ತೇ ಪರಮ್ಯವಾದದ್ದು. ಪ್ರಜಾಹಿತಕ್ಕಾಗಿ ಅನುಕೂಲಕರ ಕಾನೂನು ರಚನೆ, ಸಂವಿಧಾನ ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗೆ ಇದೆ. ಕಾಲಕ್ಕೆ ತಕ್ಕಂತೆ ಹೊಂದಿಕೆಯಾಗದ ಜಗತ್ತಿನ ಹಲವಾರು ಕಾನೂನು, ಸಂವಿಧಾನಗಳು ಬದಲಾವಣೆಯಾಗಿವೆ. ಶಿಕಾಗೋ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನದ ಪ್ರಕಾರ 1789 ರಿಂದ 2006ರಲ್ಲಿ ರಚನೆಯಾದ 792 ಸಂವಿಧಾನಗಳಲ್ಲಿ 518 ಸಂವಿಧಾನಗಳು ತೆಗೆದುಹಾಕಲ್ಪಟ್ಟಿವೆ. ಕೇವಲ 17 ವರ್ಷಗಳಲ್ಲಿ ಈ ಸಂವಿಧಾನಗಳು ಬದಲಾಗಿವೆ. ತಿದ್ದುಪಡಿಗೆ ಒಗ್ಗಿಕೊಂಡ 192 ಸಂವಿಧಾನಗಳು ಅಸ್ತಿತ್ವದಲ್ಲಿ ಉಳಿದುಕೊಂಡಿವೆ. ಈ ಅಧ್ಯಯನ ಸಾಬೀತುಪಡಿಸಿದ್ದೇನೆಂದರೆ; ಸಂವಿಧಾನಗಳು ಪ್ರಜಾಹಿತದ ಪಠ್ಯ ಪುಸ್ತಕಗಳು. ಪಠ್ಯ ಮತ್ತು ಪಾಠ ಕಾಲಕ್ಕೆ ತಕ್ಕಂತೆ ಬದಲಾಗುತ್ತವೆ ಎಂಬುದು.

ಅಲ್ಪಸಂಖ್ಯಾತ ವ್ಯಾಖ್ಯಾನ ಪರಿಷ್ಕರಣೆ:

ಭಾರತ ಸಂವಿಧಾನದ ಒಟ್ಟು 395 ಕಲಮುಗಳಲ್ಲಿ 250 ಕಲಮುಗಳು ಬಾಲ್ಡವಿನ್ ಕ್ಯಾಬಿನೆಟ್ ಪಾಸುಮಾಡಿದ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ 1935ರಿಂದ ಪಡೆದುಕೊಂಡವುಗಳು. ಇಂತಹ ಎರವಲು ನಿಯಮಗಳು ಕಾಲಕ್ಕೆ ತಕ್ಕಂತೆ ತಿದ್ದುಪಡಿಯನ್ನು ಬಯಸಿದರೆ ಅದನ್ನು ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ. ಅಲ್ಪಸಂಖ್ಯಾತ ಎಂಬ ವ್ಯಾಖ್ಯಾನ ಪರಾಮರ್ಶೆಯಾಗಬೇಕಾಗಿದೆ. ಏಕೆಂದರೆ ಲಕ್ಷದ್ವೀಪ, ಕಾಶ್ಮೀರ ಮುಂತಾದ ರಾಜ್ಯಗಳಲ್ಲಿ ಮುಸ್ಲಿಮರು ಬಹುಸಂಖ್ಯಾತರಾಗಿದ್ದಾರೆ. ಮಿಜೋರಾಮ್, ಮೇಘಾಲಯ, ನಾಗಾಲ್ಯಾಂಡ್ ರಾಜ್ಯಗಳಲ್ಲಿ ಕ್ರಿಶ್ಚಿಯನ್ನರು ಬಹುಸಂಖ್ಯಾತರಾಗಿದ್ದಾರೆ. ಆದರೂ ಅವರು ಅಲ್ಪಸಂಖ್ಯಾತ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದು ಸಾಮಾಜಿಕ ನ್ಯಾಯ, ಸಮಾನತೆಗೆ ವಿರುದ್ಧ ಅಲ್ಲವೇ? ನ್ಯಾಯಮೂರ್ತಿ ರಂಜನ್ ಗೊಗೋಯ್ ನೇತೃತ್ವದ ಪೀಠ ಜನಸಂಖ್ಯಾವಾರು ಮತ್ತು ರಾಜ್ಯಾವಾರು ಅಲ್ಪಸಂಖ್ಯಾತ ಸ್ಥಾನಮಾನವನ್ನು ತೀರ್ಮಾನಿಸಬೇಕೆಂದು ಅಲ್ಪಸಂಖ್ಯಾತರ ಆಯೋಗಕ್ಕೆ ಸೂಚಿಸಿದೆ.

ಸಂವಿಧಾನದ ಆಶಯ ಏನು:

ಇತ್ತೀಚೆಗೆ ಸಂಸತ್ತು ಪಾಸು ಮಾಡಿದ ಪೌರತ್ವ ತಿದ್ದುಪಡಿ ಕಾಯ್ದೆ ಸಂವಿಧಾನ ವಿರೋಧಿಯಾಗಿದೆ ಎಂದು ಅಪಸ್ವರ ಎತ್ತಲಾಗುತ್ತಿದೆ. ಈ ತಿದ್ದುಪಡಿ ಧರ್ಮದ ಆಧಾರದ ಮೇಲೆ ಪೌರತ್ವವನ್ನು ನೀಡುತ್ತದೆ. ಮುಸ್ಲಿಂ ವಲಸಿಗರನ್ನು ಪೌರತ್ವದಿಂದ ಹೊರಗಿಡುತ್ತದೆ. ಇದು ಸಮಾನತೆ ಎಂಬ ಮೂಲಭೂತ ಹಕ್ಕಿನ ತತ್ವಕ್ಕೆ ವಿರುದ್ಧ ಮತ್ತು ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿದ ಜಾತ್ಯತೀತತೆ ತತ್ವಕ್ಕೆ ವಿರುದ್ಧ ಎಂದು ವಾದಿಸಲಾಗುತ್ತಿದೆ. ಆದರೆ ಸಂವಿಧಾನದ ಪ್ರಸ್ತಾವನೆ ಭಾರತದ ಜನಗಳಾದ ನಾವು ಭಾರತವನ್ನು ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ.. ಎಂದು ಆರಂಭವಾಗುತ್ತದೆ. ಇಲ್ಲಿ ಭಾರತದ ಜನಗಳಾದ ನಾವು.. ಅದರ ಸಂಸತ ನಾಗರಿಕರಿಗೆ.. ಎಂಬ ಪದಗಳ ಅರ್ಥವನ್ನು ಗ್ರಹಿಸಬೇಕು. ಈ ಸಂವಿಧಾನ ಭಾರತೀಯ ನಾಗರಿಕರಿಗೆ ಮಾತ್ರ ಎಂಬುದು ಅದರ ಉದ್ದೇಶ. ಭಾರತಿಯರಿಗೆ ಅನ್ವಯಿಸಬಹುದಾದ ಹಕ್ಕುಗಳನ್ನು ಅಕ್ರಮ ನುಸುಳುಕೋರರಿಗೂ ಅನ್ವಯಿಸಲು ಸಾಧ್ಯವೇ? ದೇಶವನ್ನು ಒಡೆಯುವವರು, ಮತ್ತಷ್ಟು ಭಯೋತ್ಪಾದಕರು ಒಳ ನುಸುಳಬೇಕು, ಅವರಿಗೆ ಆಜಾದಿ ಲಭಿಸಬೇಕು, ಬಾಂಬ್‌ಗಳು ಸಿಡಿಯಬೇಕು, ರಕ್ತಪಾತವಾಗಬೇಕು, ಅದರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಬೇಕು ಎಂದು ಕೆಲ ಮತ ಬ್ಯಾಂಕ್ ರಾಜಕೀಯ ಪಕ್ಷಗಳು ಬಯಸುತ್ತವೆ ಅದು ದೇಶದ ಸಮಗ್ರತೆಗೆ ಅಪಾಯಕಾರಿ.

ಸಂಕುಚಿತ ಮನಸ್ಥಿತಿ ತೋರೆಯೋಣ:

ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಎಷ್ಟು ಶ್ರೇಷ್ಠವಾಗಿದ್ದರೇನು ಅದನ್ನು ಅನುಷ್ಠಾನಗೊಳಿಸುವವರ ಆಲೋಚನೆ ಕನಿಷ್ಠವಾಗಿದ್ದರೆ ಸಂವಿಧಾನದ ಉದ್ದೇಶ ವಿಫಲವಾಗುತ್ತದೆ ಎಂದು ಹೇಳಿದ್ದರು. ಸಂವಿಧಾನವು ನಾವು ಯಾವ ದಿಸೆಯಲ್ಲಿ ಸಾಗಬೇಕು ಎಂಬುದನ್ನು ಮಾತ್ರ ಹೇಳುತ್ತದೆ. ಸಾಮಾಜಿಕ ಸಂರಚನೆಗಳು ಆ ಅಂಶಗಳನ್ನು ಯಾವ ಗತಿಯಲ್ಲಿ ತೆಗೆದುಕೊಂಡು ಹೋಗಬೇಕು ಎಂಬುದನ್ನು ನಿರ್ಧರಿಸಬೇಕು ಎಂದು ರಾಜ್ಯಶಾಸ್ತ್ರಜ್ಞ ಆ್ಯಂಡರೆ ಬೆಟ್ಟೀ ಹೇಳುವ ಮಾತು ಗಮನರ್ಹ. ಭಾರತದ ಸಂವಿಧಾನದಲ್ಲಿ ಸೇರಿಸಲಾಗದ ಹಲವಾರು ಅಂಶಗಳನ್ನು ಬ್ರಿಟನ್ ಮಾದರಿಯಂತೆ ಸಂಪ್ರದಾಯದ ಮೂಲಕ ಆಚರಣೆಗೆ ತರಬೇಕು. ಅಂತಹ ವಾತಾವರಣ ಮತ್ತು ಮನೋಭಾವವನ್ನು ಸಮಾಜದಲ್ಲಿಯೂ ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದು ಬಾಬು ರಾಜೇಂದ್ರ ಪ್ರಸಾದ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಗೋಹತ್ಯೆ ನಿಷೇಧ. ಏಕರೂಪ ನಾಗರೀಕ ಸಂಹಿತೆ ಜಾರಿಗೆ ತರುವಂತೆ ಸಂವಿಧಾನ ಹೇಳಿದ ತತ್ವಗಳ ಜಾರಿಗೆ ನಾವು ಅಣಿಯಾಗಬೇಕು.

ಆದರೆ, ಇವತ್ತಿನ ರಾಜಕಾರಣ ತನ್ನ ಮತ ಬ್ಯಾಂಕ್‌ನ್ನು ಕ್ರೋಢಿಕರಣಗೊಳಿಸಲು, ಅಧಿಕಾರ ಗಿಟ್ಟಿಸಲು ತಂತ್ರಗಳನ್ನು ಹೆಣೆಯುತ್ತಿದೆ. ಟ್ರಿಪಲ್ ತಲಾಖ್, ರಾಮಜನ್ಮ ಭೂಮಿ ಹಕ್ಕು, ಕಲಂ 370 ರದ್ಧತಿ ಮುಂತಾದವುಗಳನ್ನು ಅಲ್ಪಸಂಖ್ಯಾತರ ಹಕ್ಕುಗಳ ಉಲ್ಲಂಘನೆ ಎಂಬ ಭ್ರಮೆಯನ್ನು ಬಿತ್ತಲಾಗುತ್ತಿದೆ. ಇದೇ ಕಾರಣಗಳಿಗೆ ಹುದುಗಿದ್ದ ಬೆಗುದಿ ಪೌರತ್ವ ಕಾಯ್ದೆಯ ಮೂಲಕ ಅಸಹನೆಯ ಉರಿಯಾಗಿ ಹೊಮ್ಮುವಂತೆ ಮಾಡಲಾಗುತ್ತಿದೆ. ಈ ಉರಿಯಲ್ಲಿ ರಾಜಕೀಯ ಲೆಕ್ಕಾಚಾರಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ. ಜಾತಿ, ಮತ, ಭಾಷೆ, ಪ್ರದೇಶಕ್ಕಿಂತ ದೇಶ ದೊಡ್ಡದು ಎಂಬ ಸತ್ಯ ನಮಗೆ ಅರಿವಾಗಬೇಕು. ನಿಮ್ಮ ಜಾತಿ–ಮತ ನಿಮಗೆ ಅನ್ನ ಆಶ್ರಯ ನೀಡಲಾರದು. ಆದರೆ ಈ ಭಾರತ ಮಾತೆ ನೀಡುತ್ತಾಳೆ. ಬನ್ನಿ ಕಷ್ಟಪಟ್ಟುಗಳಿಸಿದ ಈ ಗಣರಾಜ್ಯವನ್ನು ಘನತೆಯಿಂದ ಕಟ್ಟೋಣ. ಜಾತಿಮತಗಳ ಎಲ್ಲೆ ಮೀರೋಣ.

ಲೇಖಕರು:– ಡಾ.ಮಲ್ಲಿಕಾರ್ಜುನ ಗುಮ್ಮಗೋಳ, ಧಾರವಾಡ.

ಆಧಾರ: ಕನ್ನಡ ಪ್ರಭ, ದಿನಾಂಕ:26.01.2023.

8. ರಾಜಕರಣಿಗಳ ಮೌಲ್ಯ ಮಾಪನದತ್ತ ಒಂದು ದಿಟ್ಟ ಹೆಜ್ಜೆ

ಕರ್ನಾಟಕ ವಿಧಾನಸಭೆ ಇತ್ತೀಚೆಗೆ ಕೆಲವು ಪ್ರಶಂಸನೀಯ ಸಂಪ್ರದಾಯಗಳನ್ನು ಜಾರಿಗೆ ತಂದಿದೆ. ಅವುಗಳಲ್ಲಿ ಒಂದು 'ಶ್ರೇಷ್ಠ ಶಾಸಕ ಪ್ರಶಸ್ತಿ' ಯ ಸ್ಥಾಪನೆ. ಕಳೆದ ವರ್ಷ ಈ ಗೌರವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಸಂದಿದೆ. ಈ ವರ್ಷ ಬೆಳಗಾವಿ ಅಧಿವೇಶನದ ಅವಧಿಯಲ್ಲಿ ಶ್ರೇಷ್ಠ ಶಾಸಕ ಎಂದು ಆರ್.ವಿ.ದೇಶಪಾಂಡೆಯವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯ ಹಿಂದಿರುವ ಚಿಂತನೆ ಮಹತ್ವದ್ದು. ರಾಜಕೀಯ ಕ್ಷೇತ್ರದಲ್ಲಿ ಶ್ರೇಷ್ಠತೆಯ ಪರಿಕಲ್ಪನೆಯನ್ನು ಮೂಡಿಸುವ ಪ್ರಯತ್ನವನ್ನು ಅದು ಮಾಡಿದೆ. ಹಿನ್ನೆಲೆಯಲ್ಲಿ ಪ್ರಶಸ್ತಿ ಕೆಲವು ಪ್ರಶ್ನೆಗಳನ್ನು ಕೇಳುತ್ತದೆ: ಶ್ರೇಷ್ಠ ಶಾಸಕ ಎಂದರೇನು? ಶಾಸಕರು ಹೇಗೆ, ಯಾವ ರೀತಿಯಲ್ಲಿ ಕೆಲಸ ಮಾಡಬೇಕು? ಇತ್ಯಾದಿ. ಮೇಲಿನ ಮಹನೀಯರನ್ನು ಗುರುತಿಸುವ ಮೂಲಕ ಅದು ಪ್ರೆಶ್ನೆಗಳಿಗೆ ಉತ್ತರಗಳನ್ನೂ ಉದಾಹರಣೆಗಳ ಮೂಲಕ ಹೇಳಿದೆ. ರಾಜಕೀಯ ಸೇವೆಯ ಗುಣಮಟ್ಟವನ್ನು ದಾಖಲಿಸಬಲ್ಲ, ಅಳೆಯಬಲ್ಲ ಮೌಲ್ಯಮಾಪನ ಮಾಡಬಲ್ಲ ಅಳತೆ ಗೋಲುಗಳನ್ನು ಸೃಷ್ಟಿಸುವ ಪ್ರಯತ್ನಗಳನ್ನು ಅದು ಮಾಡಿದೆ. ಸ್ಟಾಂಡರ್ಡ್‌ಗಳನ್ನು ಬೆಳಸುವತ್ತ ಹೆಜ್ಜೆಯಿಟ್ಟಿದೆ. ರಾಜಕಾರಣಗಳ ಮೌಲ್ಯಮಾಪನಕ್ಕಾಗಿ ಅಸೆಸ್‌ಮೆಂಟ್ ಮತ್ತು ಅಕ್ರೆಡಿಟೇಶನ್ ವ್ಯವಸ್ಥೆಯನ್ನು ಜಾರಿಗೆ ತರುವ ಕಲ್ಪನೆಗೆ ನೀರೆರೆದಿದೆ. ಮೌಲ್ಯಮಾಪನ ಮಾಡಿ ಫಲಿತಾಂಶವನ್ನು ಸಮಾಜಕ್ಕೆ ತಲುಪಿಸುವ ಆಲೋಚನೆ ಮಾಡಲು ಕೂಡ ಈ ಪ್ರಶಸ್ತಿ ನೆನಪಿಸುತ್ತದೆ.

ಇಂತಹದ್ದೊಂದು ಉತ್ತಮ ಸಂಪ್ರದಾಯವನ್ನು ನಿರ್ಮಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿನಂದನಾರ್ಹರು. ಯಡಿಯೂರಪ್ಪ ಮತ್ತು ಆರ್.ವಿ.ದೇಶಪಾಂಡೆಯವರ ರೂಪಕಗಳನ್ನು ರಚಿಸಿ ಶ್ರೇಷ್ಠ ಶಾಸಕ ಎಂದರೇನು ಎನ್ನುವುದನ್ನು ಅರ್ಥ ಮಾಡಿಕೊಳ್ಳುವ ಮೊದಲು ಶಾಸಕ ಎಂದರೇನು ಮತ್ತು ಅವರಿಗೆ ಸಂವಿಧಾನ ಏನು ಕೆಲಸ ನೀಡಿದೆ ಎನ್ನುವುದನ್ನು ಗಮನಿಸಬೇಕು ನಮ್ಮ ಸಂವಿಧಾನ ಪ್ರಜಾ ಪ್ರಭುತ್ವ ವ್ಯವಸ್ಥೆಯ ನಿರ್ವಹಣೆಗಾಗಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ. ಹೀಗೆ ಮೂರು ಸ್ವತಂತ್ರವಾದ, ಸಮಾನ ಅಧಿಕಾರವುಳ್ಳ ಅಂಗಗಳನ್ನು ಸೃಷ್ಟಿಸಿದೆ. ಶಾಸಕಾಂಗ ಜನರಿಂದ ನೇರವಾಗಿ ಆಯ್ಕೆಯಾದ ಪ್ರತಿನಿಧಿಗಳ ಅಂದರೆ ಶಾಸಕಾಂಗ ಭಾಗ. ಇದು ಪ್ರಜಪ್ರಭುತ್ವದ ಜೀವಾಳ. ಇದರ ಕೆಲಸ ಕಾನೂನು ರಚನೆ. ಸರ್ವರಿಗೂ ನ್ಯಾಯ, ಸಮಾನತೆ, ಪ್ರೋತ್ಸಾಹ ಸಿಗುವಂತಹ ಶಾಸನಗಳನ್ನು ರಚಿಸುವುದು. ಇದಕ್ಕೆ ಮುನ್ನುಡಿಯಾಗಿ ಶಾಸಕರು ಮಾಡಬೇಕಿರುವುದು ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಮಸ್ಯೆಗಳನ್ನು ಜನ ಸಂಪರ್ಕದ ಮೂಲಕ ಅರಿಯುವುದು. ಅದಕ್ಕೆ ಸ್ಪಷ್ಟ ರೂಪ ನೀಡಿ ವಿಧಾನಸಭೆಗೆ ತಂದು ಘನತೆಯಿಂದ ಚರ್ಚಿಸುವುದು. ವಿಷಯಗಳಿಗೆ ಸೂಕ್ತ ರೀತಿಯ ಕಾನೂನಾತ್ಮಕ, ಶಾಸನ ಬದ್ಧತೆಯ ಚೌಕಟ್ಟು ನೀಡುವುದು. ಸಂವಿಧಾನ ಗುರುತಿಸುವಂತೆ ಶಾಸಕರ ಕೆಲಸ ಇದು. ಅದು ಶಾಸಕರನ್ನು ಕಲ್ಪಿಸಿ ಕೊಂಡಿರುವುದು ಚಿಂತನಶೀಲ, ಅಧ್ಯಯನಶೀಲ,

ಸಂವೇದನಾ ಶೀಲಾ ವ್ಯಕ್ತಿಗಳನ್ನಾಗಿ. ಶಾಸಕರ ನಿಧಿಯನ್ನು ಸೂಕ್ತವಾಗಿ ಬಳಸಿಕೊಳ್ಳುವುದೂ ಅವರ ಜವಾಬ್ದಾರಿ.

ಎರಡನೇಯ ಹಂತದಲ್ಲಿ ಶಾಸಕರ ಜವಾಬ್ದಾರಿ ಒಮ್ಮೆ ಬಹುಮತದ ಶಾಸಕಾಂಗ ಪಕ್ಷದ ನಾಯಕನ್ನಾಗಿ ಆಯ್ಕೆ ಮಾಡಿದಲ್ಲಿ ಮುಖ್ಯಮಂತ್ರಿಯಾಗಿ ಅಥವಾ ಮುಖ್ಯಮಂತ್ರಿ ಬಯಸಿದಲ್ಲಿ ಸಚಿವನಾಗಿ ಸೇವೆ ಸಲ್ಲಿಸುವುದು. ಆಗ ನೀತಿ ನಿರೂಪಣೆಯ ಹೆಚ್ಚಿನ ಜವಾಬ್ದಾರಿ ಒದಗಿಬರುತ್ತದೆ. ವಿಧಾನಸಭೆಯಲ್ಲಿ ನಿರ್ಧರಿತವಾದ ರೀತಿಯಲ್ಲಿ ಕಾನೂನುಗಳನ್ನು, ಅಭಿವೃದ್ಧಿಯ ವಿಷಯಗಳನ್ನು ಪಾರದರ್ಶಕವಾಗಿ ಜಾರಿಗೆ ತರುವ, ತಮ್ಮ ಹೊಣೆಗಾರಿಕತ್ವದ ಕುರಿತು ವಿಧಾನ ಸಭೆಗೆ ಉತ್ತರ ನೀಡಬೇಕಿರುವ ಹೊಣೆಗಾರಿಕೆಯೂ ಇರುತ್ತದೆ. ಮುಖ್ಯಮಂತ್ರಿಯಾದರೆ ಇಡೀ ಸರ್ಕಾರಕ್ಕೆ ದಿಗ್ದರ್ಶನ ಮಾಡಬೇಕಾಗುತ್ತದೆ. ಸರ್ಕಾರದ ನೀತಿಗಳನ್ನು ರೂಪಿಸುವ ಜವಾಬ್ದಾರಿ ಇರುತ್ತದೆ.

ಉದಾಹರಣೆಗೆ ದೇವರಾಜ ಅರಸು ಸರ್ಕಾರಕ್ಕೆ ಸಮಾಜವಾದಿ ಸ್ವರೂಪ ನೀಡಿದರು. ರಾಮಕೃಷ್ಣ ಹೆಗಡೆ ಸರ್ಕಾರವನ್ನು ಜನಪರವಾಗಿಸಿದರು. ದೇವೇಗೌಡರು ಭಾರೀ ಪ್ರಮಾಣದಲ್ಲಿ ಜಲಾನಯನ ಅಭಿವೃದ್ಧಿಗೆ ಮಹತ್ವ ನೀಡಿದರು. ಎಸ್.ಎಂ.ಕೃಷ್ಣ ಕೈಗಾರಿಕಾಭಿವೃದ್ಧಿಗೆ ವಿಶೇಷ ಒತ್ತುಕೊಟ್ಟರು. ಯಡಿಯೂರಪ್ಪ ಕೃಷಿ ಕ್ಷೇತ್ರಕ್ಕೆ ಅಗಾಧ ಒತ್ತು ನೀಡಿದರು. ಸಿದ್ದರಾಮಯ್ಯ ಬಡಜನರ, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದರು. ಹೀಗೆ ಸಚಿವರಾಗಿ ಕೆಲಸ ಮಾಡಿದರೂ ಮಹತ್ವದ ಕೆಲಸ ಮಾಡಿದ ಹಲವರು ಇದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರನ್ನು ನೂರಕ್ಕೆ ನೂರರಷ್ಟು ಆದರ್ಶ ವ್ಯಕ್ತಿಗಳು ಎಂದು ಹೇಳಿದರೆ ಅತಿಶಯೋಕ್ತಿ ಎಂದು ಜನ ಭಾವಿಸುವ ಸಾಧ್ಯತೆ ಇದೆ ಮೊದಲಿಗೆ, ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ತೀಕ್ಷ್ಣವಾಗಿರುತ್ತವೆ. ಒಟ್ಟಾಭಿಪ್ರಾಯ ರೂಪಿಸುವುದು ಕಷ್ಟಸಾಧ್ಯ. ಹಾಗಾಗಿ ರಾಜಕಾರಣಿಗಳ ಸೇವೆ ಹಗುರವೆನಿಸಿ ಹೋಗುತ್ತದೆ.

ಇತ್ತೀಚಿನ ವರ್ಷಗಳ ಕರ್ನಾಟಕದ ಭಾರಿ ದೊಡ್ಡ ಮಾಸ್ ಲೀಡರ್ ಯಡಿಯೂರಪ್ಪ ಎಂಟು ಬಾರಿ ವಿಧಾನ ಸಭೆಗೆ ಆಯ್ಕೆಯಾದವರು. ನಾಲ್ಕು ಬಾರಿ ಮುಖ್ಯಮಂತ್ರಿಯಾದವರು. ಕರ್ನಾಟಕಕ್ಕೆ ಅವರ ದೊಡ್ಡ ಕೊಡುಗೆ ಸಂದಿದೆ. ಮೊಟ್ಟ ಮೊದಲ ಬಾರಿಗೆ ದೇಶದಲ್ಲಿ ರಾಜ್ಯವೊಂದಕ್ಕೆ ವಿಶನ್ 2020 ಡಾಕ್ಯುಮೆಂಟ್‌ನ್ನು ಸೃಷ್ಟಿಸಿದವರು ಅವರು. ಜ್ಞಾನ ಆಯೋಗ ರಚಿಸಿದವರು, ಸಾವಯವ ಕೃಷಿ ಮಿಶನ್, ಔದ್ಯಮಿಕ ನೀತಿ, ಸೆಮಿಕಂಡಕ್ಟರ್ ನೀತಿ, ಮರು ಬಳಸಬಲ್ಲ ಇಂಧನ ನೀತಿ, ಹೊಸ ಎಸ್‌ಇಝೆಡ್ ನೀತಿಗಳನ್ನು ಜಾರಿಗೆ ತಂದರು. ಕರೋನಾ ಮತ್ತು ಭಾರೀ ಪ್ರವಾಹ ಪರಿಸ್ಥಿತಿಯ ಸಂಧರ್ಭದಲ್ಲಿ ರಾಜ್ಯವನ್ನು ಮುನ್ನಡೆಸಿದವರು. ಅವರು ಮಂಡಿಸಿದ ಪ್ರತ್ಯೇಕ ರೈತರ ಬಜೆಟ್ ದೇಶದಲ್ಲಿ ಮೊಟ್ಟ ಮೊದಲ ಪ್ರಯೋಗ. ಹಾಗೆಯೇ ರೈತರಿಗೆ ಶೇ.1 ರ ಬಡ್ಡಿ ದರದಲ್ಲಿ ಸಾಲ ನೀಡಿದವರು ಅವರು. ಶಿಕ್ಷಣ ಕ್ಷೇತ್ರಕ್ಕೂ ಅವರ ದೊಡ್ಡ ಕೊಡುಗೆ ಸಂದಿದೆ. ಸಂಗೀತ, ಸಂಸ್ಕೃತ, ಕೃಷಿ, ತೋಟಗಾರಿಕೆ, ರಾಣಿಚನ್ನಮ್ಮ, ಶ್ರೀಕೃಷ್ಣದೇವರಾಯ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಿದವರು. ರೈತರಿಗೆ ನಿರಂತರ ವಿದ್ಯುತ್ ಪೂರೈಸಿದವರು.

ದೇಶಪಾಂಡೆ ಕೂಡ ಎಂಟು ಬಾರಿ ಶಾಸಕರಾಗಿ ಆಯ್ಕೆಯಾಗಿರುವವರು. ಸುದೀರ್ಘ ಕಾಲ ಸಚಿವರಾಗಿ ಆರೇಳು ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡಿದವರು. ರಾಜ್ಯ ಸರ್ಕಾರದಲ್ಲಿನ ನಗರಾಭಿವೃದ್ಧಿ, ಸಣ್ಣ ಕೈಗಾರಿಕೆ, ಕೃಷಿ, ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು, ಮಾಹಿತಿ ತಂತ್ರಜ್ಞಾನ, ಮೂಲಭೂತ ಸೌಲಭ್ಯ ಅಭಿವೃದ್ಧಿ, ಕಂದಾಯ, ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಖಾತೆಗಳನ್ನು ಹೊಂದಿ ಕೆಲಸ ಮಾಡಿದವರು. ಸುಮಾರು ಹದಿನೈದು ವರ್ಷ ಕೈಗಾರಿಕಾ ಅಭಿವೃದ್ಧಿಯ ಕ್ಷೇತ್ರಕ್ಕೆ ಸಂದಿದೆ. ದೇಶದ ಮೊದಲ ಮಾಹಿತಿ ತಂತ್ರಜ್ಞಾನ ನೀತಿಯನ್ನು ನಿರೂಪಿಸಿದವರು ಅವರು. ಹಾಗೆಯೇ ರಾಜ್ಯಕ್ಕೆ ಮೊದಲ ಸ್ಟಾರ್ಟ್ ಅಪ್ ಪಾಲಿಸಿ, ಟೂರಿಸಂ ಪಾಲಿಸಿ, ಮೂಲಭೂತ ಸೌಲಭ್ಯ

ಪಾಲಿಸಿಗಳನ್ನು ಯೋಚಿಸಿದವರು ಅವರು. ಮೊಟ್ಟಮೊದಲ ಬಾರಿಗೆ ವಿಶ್ವ ಹೂಡಿಕೆದಾರರ ಸಮ್ಮೇಳನ ಸಂಘಟಿಸಿದ್ದು ದೇಶಪಾಂಡೆ.

ಇಬ್ಬರಿಗೂ ಸಮಾನವಾದ ಕೆಲವು ಅಂಶಗಳಿವೆ. ಇಬ್ಬರೂ ವೈಯುಕ್ತಿಕ ಟೀಕೆ, ಟಿಪ್ಪಣಿ, ತೇಜೋವಧೆ, ಇತ್ಯಾದಿ ರಾಜಕೀಯದಿಂದ ದೂರ. ತೂಕವಿಲ್ಲದೇ ಮಾತು ಆಡುವವರಲ್ಲ. ತಪ್ಪನ್ನು ತಪ್ಪು ಎಂದು ತಮ್ಮದೇ ಪಕ್ಷದವರಿಗೆ ಸಂಬಂಧಿಸಿದ್ದರೂ ಸಾರ್ವಜನಿಕವಾಗಿ ಹೇಳಬಲ್ಲ ಸಾಮರ್ಥ್ಯವುಳ್ಳವರು. ಜನರಿಗೂ ನೇರವಾಗಿ ಹೇಳಿಬಿಡಬಲ್ಲವರು. ಮುಲಾಜಿಲ್ಲದೆ ಪಕ್ಷತೀತವಾಗಿ ಜನಪರವಾಗಿ ಮಾತನಾಡಬಲ್ಲವರು, ಜನರ ಜೊತೆ ನಿರಂತರ ಸಂಪರ್ಕದಲ್ಲಿರುವ ಅವರು ಹಳ್ಳಿ ಹಳ್ಳಿಗಳ ಮೂಲೆ ಮೂಲೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು. ವೈಯುಕ್ತಿಕ ಘನತೆ ಕಾದುಕೊಂಡೇ ಬಂದವರು.

ಈ ಇಬ್ಬರನ್ನು ವಿಧಾನಸಭೆ ಶ್ರೇಷ್ಠ ಶಾಸಕ ಎಂದು ಗುರುತಿಸಿ ಸನ್ಮಾನಿಸಿರುವುದು ಸಂತೋಷದ ವಿಷಯ ಮತ್ತೊಂದು ಸಂಗತಿ. ನಾವು ರಾಜಕೀಯವನ್ನು ಒಂದು ಗಂಭೀರ ಅಧ್ಯಯನದ ಕ್ಷೇತ್ರ ಎಂದು ಪರಿಗಣಿಸಿಯೇ ಇಲ್ಲ. ನ್ಯೂನತೆಗಳನ್ನು, ಶ್ರೇಷ್ಠತೆಗಳನ್ನು ವ್ಯವಸ್ಥಿತವಾದ ತರಬೇತಿ, ಕಾನೂನುಗಳನ್ನು ಹೇಗೆ ಸಿದ್ಧಪಡಿಸಿಬೇಕು? ಸಾರ್ವಜನಿಕ ಬದುಕು ಹೇಗಿರಬೇಕು ಎನ್ನುವ ಕುರಿತಾದ ಮಾರ್ಗದರ್ಶಿ ಸೂತ್ರಗಳು ಇದ್ದಂತಿಲ್ಲ. ಹೇಗಿರಬಾರದು ಎನ್ನುವ ಕುರಿತ ಕೋಡ್ ಆಫ್ ಕಂಡಕ್ಟಗಳು, ಸ್ಪಷ್ಟ ಕಾನೂನಿನ ಚೌಕಟ್ಟುಗಳೂ ಇದ್ದಂತಿಲ್ಲ.

ಈಗ ನಾವು ಮಾಡಬೇಕಿರುವುದು ರಾಜಕೀಯ ಶ್ರೇಷ್ಠತೆಯ ಅಂಶಗಳನ್ನು ದಾಖಲಿಸುವುದು ಮತ್ತು ಸಾರ್ವಜನಿಕರಿಗೆ ಒದಗಿಸುವುದು. ನಮ್ಮ ಅಧ್ಯಯನ ಸಂಸ್ಥೆಗಳು ಶ್ರೇಷ್ಠ ರಾಜಕಾರಣಿಗಳಾದ ದೇವರಾಜ ಅರಸು, ದೇವೇಗೌಡ, ರಾಮಕೃಷ್ಣ ಹೆಗಡೆ, ಎಸ್.ಆರ್.ಬೊಮ್ಮಾಯಿ, ಜೆ.ಹೆಚ್.ಪಟೇಲ್, ಎಸ್.ಎಂ.ಕೃಷ್ಣ, ವೀರೇಂದ್ರ ಪಾಟೀಲ, ಸಿದ್ದರಾಮಯ್ಯ ಅಂತವರ ಸೇರಿ ಅನೇಕರ ಸೇವೆಗಳನ್ನು ದಾಖಲಿಸುವ ಮತ್ತು ಗೌರವಿಸುವ ಕೆಲಸ ಮಾಡಬೇಕು. ಹಾಗೆಯೇ ಎಲ್ಲ ಶಾಸಕರ ಪರ್‌ಫಾರ್ಮೆನ್ಸ್ ರಿಪೋರ್ಟ್‌ಗಳನ್ನು ಸಾರ್ವಜನಿಕರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ರಾಜಕೀಯ ಕ್ಷೇತ್ರದಲ್ಲಿನ ಶ್ರೇಷ್ಠತೆಗಳನ್ನು ದಾಖಲೆ ಮಾಡಿ ಮಾದರಿಗಳನ್ನು ಒದಗಿಸಬೇಕು. ಶ್ರೇಷ್ಠ ಶಾಸಕ ಪ್ರಶಸ್ತಿ ರಾಜಕೀಯದ ಗುಣಮಟ್ಟವನ್ನು ದಾಖಲಿಸುವತ್ತ ಒಂದು ಮಹತ್ವದ ಹೆಜ್ಜೆ.

ಲೇಖಕರು: ಪ್ರೋ.ಆರ್.ಜಿ. ಹೆಗಡೆ

ಆಧಾರ: ವಿಶ್ವ ವಾಣಿ, ದಿನಾಂಕ:08.02.2023

9. ಕರ್ನಾಟಕ ಕಣ, ಜಾತಿ ಲೆಕ್ಕ ಪ್ರಾಂಗಣ

ಕರ್ನಾಟಕದ ಏಕೀಕರಣ ಸಂದರ್ಭದಲ್ಲೇ ಪ್ರಾದೇಶಿಕತೆಯ ಮೇಲರಿಮೆಯನ್ನು ಕೆಲವು ಪ್ರದರ್ಶಿಸಿದ್ದರು. ಜೊತೆಗೆ ಪ್ರಬಲ ಸಮುದಾಯಗಳ ನಡುವಿನ ರಾಜಕೀಯ ಸಂಘರ್ಷಕ್ಕೂ ಆಗಲೇ ಅಡಿಗಲ್ಲು ಬಿದ್ದಿತ್ತು. ಕನ್ನಡ ಮಾತನಾಡುವ ಪ್ರದೇಶಗಳು ಒಂದಾಗಿ ಕರ್ನಾಟಕ ಉದಯವಾಗಬೇಕು ಎಂಬ ಸದಾಶಯಕ್ಕೆ ರಾಜಕೀಯ ನೇತೃತ್ವ ಕೊಟ್ಟಿದ್ದವರು ಪ್ರಭಾವಿ ನಾಯಕ ಎಸ್.ನಿಜಲಿಂಗಪ್ಪನವರು. ಅವರಿಗೆ ಒತ್ತಾಸೆಯಾಗಿ ನಿಂತಿದ್ದವರು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು. ವಾಸ್ತವಿಕವಾಗಿ ಹಳೆ ಮೈಸೂರು ಪ್ರಾಂತ್ಯದ ಪ್ರಮುಖ ರಾಜಕೀಯ ಮುಂದಾಳುಗಳು ಈ ಪ್ರಸ್ತಾಪಕ್ಕೆ ವಿರುದ್ಧವಿದ್ದರು. ಅದಾಗಲೇ ಅಭಿವೃದ್ಧಿಯಲ್ಲಿ ಮುಂದಿದ್ದ ದಕ್ಷಿಣ ಕರ್ನಾಟಕವು ಉತ್ತರ ಪ್ರಾಂತ್ಯದೊಂದಿಗೆ ತನ್ನ ಸಂಪನ್ಮೂಲ ಹಂಚಿಕೊಳ್ಳಬೇಕಾಗುತ್ತದೆ. ಇದಕ್ಕೆ ತಮ್ಮ ಒಪ್ಪಿಗೆಯಿಲ್ಲವೆಂದು ಕೆಲವು ನಾಯಕರು ಆಕ್ಷೇಪಿಸಿದ್ದರು. ಕೆಂಗಲ್ ಹನುಮಂತಯ್ಯನವರು ಅಖಂಡ ಕರ್ನಾಟಕ ರಚನೆ ತಮ್ಮ ಜೀವಮಾನದ ಧ್ಯೇಯ ಎಂದು ನಂಬಿದ್ದರು. ಮುಂಬಯಿ ಪ್ರಾಂತ್ಯ, ಹೈದರಾಬಾದ್ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಕನ್ನಡ ಭಾಷಿಕ ಪ್ರದೇಶವನ್ನು ಒಂದು ಛತ್ರದಡಿ ತರಬೇಕೆಂದು ಕೆಂಗಲ್ಲರು ಬಲವಾಗಿ ಪ್ರತಿಪಾದಿಸಿದ್ದರು. ಜೊತೆಗೆ ತಮ್ಮ ಮಾತಿನಂತೆಯೇ ನಡೆದುಕೊಂಡರು. ಆದರೆ, ಏಕೀಕರಣವಾಗುವ ಹೊತ್ತಿನಲ್ಲಿ ಕೆಂಗಲ್

ಹನುಮಂತಯ್ಯನವರು ಅಧಿಕಾರಿ ಕಳೆದುಕೊಂಡಿದ್ದರು. ಏಕೀಕರಣದ ಪರ ತಾವು ನಿಂತರೆ ರಾಜಕೀಯವಾಗಿ ತಮಗೆ ಹಿನ್ನೆಡೆಯಾಗುತ್ತದೆ ಎನ್ನುವುದು ಕೆಂಗಲ್ ಅವರಿಗೆ ಅರಿವಿತ್ತು. ಈ ನಡುವೆಯೂ ಅವರು ಕನ್ನಡ ಮನಸ್ಸುಗಳನ್ನು ಬೆಸೆಯುವ ಕಾರ್ಯದಲ್ಲಿ ಪ್ರಧಾನ ಭೂಮಿಕೆ ನಿಭಾಯಿಸಿದರು. ಕೆಂಗಲ್ ಅವರಿಗೆ ಪ್ರಾದೇಶಿಕತೆಯ ಹೆಚ್ಚುಗಾರಿಕೆ, ಜಾತಿ ರಾಜಕಾರಣದ ಅಸ್ತ್ರ ಹಿಡಿದು ವೈಯಕ್ತಿಕವಾಗಿ ಅಧಿಕಾರ ಯಾತ್ರೆ ಮುಂದುವರಿಸುವುದು ಮುಖ್ಯವಾಗಿರಲಿಲ್ಲ. ಬದಲಾಗಿ ಕನ್ನಡಿಗರ ಶ್ರೇಯೋಭಿವೃದ್ಧಿಯೇ ಅವರ ಆದ್ಯತೆಯಾಗಿತ್ತು. ಹಾಗಾಗಿ ಕೆಂಗಲ್‌ರಂತಹ ಮುತ್ಸದ್ದಿಗಳು ಪ್ರಾತಃಸ್ಮರಣೀಯರ ಸಾಲಿನಲ್ಲಿ ನಿಲ್ಲುತ್ತಾರೆ.

ವಿಶಾಲ ದೃಷ್ಟಿ: ಜಾತಿ ರಾಜಕಾರಣದ ದೃಷ್ಟಿಯಿಂದ ನೋಡಿದರೆ ಏಕೀಕರಣದ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದ ಕೆಲವರು ಊಹಿಸಿದ್ದ ರೀತಿಯಲ್ಲೇ ರಾಜ್ಯ ರಾಜಕಾರಣ ನಂತರದ ದಿನಗಳಲ್ಲಿ ನಡೆದುಕೊಂಡು ಹೋಯಿತು. ಏಕೀಕರಣ ಬಳಿಕ ಬಹುಕಾಲದವರೆಗೆ ಒಕ್ಕಲಿಗ ಸಮುದಾಯದ ನಾಯಕರಿಗೆ ಮುಖ್ಯಮಂತ್ರಿ ಸ್ಥಾನ ಒಲಿದು ಬರಲಿಲ್ಲ. ಕೆಂಗಲ್ ಹನುಮಂತಯ್ಯನವರು ಏಕೀಕರಣದ ಯಜ್ಞವೇದಿಕೆಯೇರುವಾಗ ವಿಶೇಷವಾಗಿ ಮೈಸೂರು ಪ್ರಾಂತ್ಯದ ಹೆಚ್.ಕೆ.ವೀರಣ್ಣಗೌಡರಂಥವರು ಇದೇ ಆತಂಕ ವ್ಯಕ್ತಪಡಿಸಿದ್ದರು. ಆದರೆ, ಕೆಂಗಲ್ ಅವರು ತಮ್ಮ ಪಕ್ಷದ ಇತರರಿಗಿಂತ ವಿಶಾಲ ದೃಷ್ಟಿಯಿಂದ ಯೋಚಿಸುತ್ತಿದ್ದರು. ಆದ್ದರಿಂದಲೇ ವಿಧಾನಸೌಧದಂತಹ ಪ್ರಜಾಪ್ರಭುತ್ವದ ಭವ್ಯ ಮಂದಿರ ನಿರ್ಮಿಸಲು ಕೆಂಗಲ್ ಹನುಮಂತಯ್ಯ ಅವರಿಗೆ ಸಾಧ್ಯವಾಯಿತೆಂದು ನಿಸ್ಸಂಶಯವಾಗಿ ಹೇಳಬಹುದು. ವಿಶೇಷವೆಂದರೆ, ಆಗಿನ ಪ್ರಧಾನಿ ನೆಹರೂ ಉಪಸ್ಥಿತಿಯಲ್ಲಿ ಹೈದರಾಬಾದ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲೇ ಅಖಂಡ ಕರ್ನಾಟಕದ ಬಗ್ಗೆ ಕೆಂಗಲ್ ಅವರು ಬಲವಾಗಿ ಪ್ರತಿಪಾದಿಸಿದ್ದರು. ದುರದೃಷ್ಟವಶಾತ್ ತಾವೇ ಮುಂದೆ ನಿಂತು ರೂಪರೇಖಾತ್ಮಕವಾಗಿ ಕಡೆದು ನಿಲ್ಲಿಸಿದ ವಿಧಾನಸೌಧದಲ್ಲಿ ಕೆಲಸ ಮಾಡಲು ಕೆಂಗಲ್ ಅವರಿಗೆ ಸಾಧ್ಯವಾಗಲಿಲ್ಲ. ತಮ್ಮ ಪ್ರಯತ್ನದ ಫಲವಾಗಿ ಕನ್ನಡ ಮಾತನಾಡುವ ಪ್ರಾಂತ್ಯಗಳು ಒಗ್ಗೂಡಿದ್ದರಿಂದ ಕೆಂಗಲ್ ಅವರು ಸಮಾಧಾನ ಪಟ್ಟರಂತೆ, ಅದರ ಹೊರತಾಗಿ ರಾಜಕೀಯ ಅಧಿಕಾರ ಬೇರೆಯ ಪಾಲಾಯಿತೆಂದು ಅವರು ವ್ಯಥೆಗೊಂಡಿದ್ದಕ್ಕೆ ಇತಿಹಾಸದ ಪುಟಗಳಲ್ಲಿ ಸಣ್ಣ ನಿದರ್ಶನವೂ ಇಲ್ಲ. ಕೆಂಗಲ್ ಅವರಂತಹ ಮೇಧಾವಿಗಳ ಬಗ್ಗೆ ಹಾಗೆ ಯೋಚಿಸುವುದೂ ತಪ್ಪಾಗುತ್ತದೆ. ಆದರೆ, ಏಕೀಕೃತ ಕರ್ನಾಟಕದಲ್ಲಿ ಜಾತಿ ರಾಜಕಾರಣವು ದಶಕದಿಂದ ದಶಕಕ್ಕೆ ವಿರಾಟ್ ರೂಪ ಪಡೆದುಕೊಳ್ಳುತ್ತ ಹೋದದ್ದಂತೂ ಸತ್ಯ. ಅಧಿಕಾರ ಗ್ರಹಣಕ್ಕಾಗಿ ನಡೆದ ಸಂಘರ್ಷ ಮತ್ತು ರಾಜ್ಯ ರಾಜಕಾರಣದ ದಿಕ್ಕನ್ನೆ ಬದಲಿಸಿದ ಘಟನಾವಳಿಗಳು ಇದಕ್ಕೆ ಕಾರಣ. ವರ್ತಮಾನದಲ್ಲೂ ಜಾತಿ ರಾಜಕಾರಣವೇ ರಾಜ್ಯವನ್ನು ಆವರಿಸಿಕೊಂಡಿದ್ದು, ಅದರ ಆಧಾರದಲ್ಲೆ ಚುನಾವಣೆ ಎದುರಿಸಲು ರಾಜಕೀಯ ಪಕ್ಷಗಳು ನಾನಾ ಸಮೀಕರಣದ ಮೊರೆ ಹೋಗುತ್ತಿವೆ.

ಆಡಳಿತವೆ ಮುಖ್ಯ: ನಿಜಲಿಂಗಪ್ಪ ಅವರಿಂದ ಆರಂಭವಾಗಿ ವೀರೇಂದ್ರ ಪಾಟೀಲರ (ಇವರ ಮೊದಲ ಅವಧಿ) ವರೆಗೆ ಲಿಂಗಾಯಿತರೇ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಏಕೀಕರಣವಾಗಿ ಲಿಂಗಾಯಿತ ಸಮಾಜದ ಪ್ರಾಬಲ್ಯ ಕಂಡುಬಂದ್ದರಿಂದ ಈ ಸಮಾಜದವರೇ ಅಧಿಕಾರಿ ಹಿಡಿದರು. ಒಂದು ಕ್ಷಣ ಜಾತಿ ರಾಜಕಾರಣವನ್ನು ಪಕ್ಕಕ್ಕಿಟ್ಟು ನೋಡಿದರೆ ನಿಜಲಿಂಗಪ್ಪ, ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ವೀರೇಂದ್ರ ಪಾಟೀಲ್ ಉತ್ತಮ ಆಡಳಿತಗಾರರಾಗಿದ್ದರು. ಈ ನಾಲ್ವರಲ್ಲಿ ನಿಜಲಿಂಗಪ್ಪ ಅವರಿಗಾಗಿ ಭರತನ ಪಾತ್ರ ವಹಿಸಿ ಕೆಲವೇ ತಿಂಗಳು ಕಾಲ ಮುಖ್ಯಮಂತ್ರಿಯಾಗದ್ದ ಎಸ್.ಆರ್.ಕಂಠಿಯವರೂ ಆಡಳಿತ ಯಂತ್ರವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗಿದ್ದರು. ಅಂದರೆ ಇವರೆಲ್ಲರೂ ತಮ್ಮ ಸಾಮರ್ಥ್ಯಾನುಸಾರ ಉನ್ನತ ಸ್ಥಾನಕ್ಕೇರಿದ್ದರು. ಅದರಲ್ಲಿ ಜಾತಿಯೇ ಮುಖ್ಯ ಸಾಧನವಾಗಿರಲಿಲ್ಲ.

ಬದಲಾವಣೆ ಘಟ್ಟ: ದೇವರಾಜ ಅರಸು ಅವಧಿ ಕರ್ನಾಟಕದ ರಾಜಕಾರಣದಲ್ಲಿ ಹೊಸ ಸಮೀಕರಣದ ಕಾಲ. ಸ್ವತಃ ಅರಸರೇ ಅತ್ಯಂತ ಮೈನಾರಿಟಿ ಸಮಾಜದಿಂದ ಬಂದವರಾಗಿದ್ದರು. ಅನೇಕ ತಳ ಸಮುದಾಯಗಳನ್ನು ಮುನ್ನೆಲೆಗೆ ತರುವ ಯತ್ನ ಮಾಡಿದ ಅವರು, ರಾಜ್ಯ ರಾಜಕಾರಣದ

ಸೋಷಿಯಲ್ ಎಂಜಿನಿಯರಿಂಗ್‌ಗೆ ಹೊಸದೊಂದು ಆಯಾಮವನ್ನೇ ಕೊಟ್ಟಿದ್ದರು. ಅರಸರ ಕಾಲಖಂಡದಲ್ಲಿ ಒಕ್ಕಲಿಗರ ಜೊತೆಗೆ ಲಿಂಗಾಯಿತರ ಪ್ರಾಬಲ್ಯವೂ ತಗ್ಗಿತ್ತು. ರಾಮಕೃಷ್ಣ ಹೆಗಡೆ ಅವರ ನೇತೃತ್ವದ ಜನತಾ ಸರ್ಕಾರದ ಕಾಲಘಟ್ಟವು ಲಿಂಗಾಯಿತ ಮತ್ತು ಒಕ್ಕಲಿಗ ನೆಲೆಯನ್ನು ಮತ್ತೆ ಮುನ್ನೆಲೆಗೆ ತಂದದ್ದಾಗಿತ್ತು. ರಾಮಕೃಷ್ಣ ಹೆಗಡೆ ಬ್ರಾಹ್ಮಣರಾದರೂ ಲಿಂಗಾಯಿತರ ನಾಯಕರೆಂದು ಅವರನ್ನು ಗುರುತಿಸಲಾಗುತ್ತಿತ್ತು. ಆವತ್ತಿನ ಜನತಾ ಪರಿವಾರ ಪ್ರಬಲ ಜಾತಿಯೊಂದರ ಆಸೆಗಾಗಿ ಲಿಂಗಾಯತ ಸಮಾಜವನ್ನೇ ನೆಚ್ಚಿಕೊಂಡಿತ್ತು. ಹೆಗಡೆ ತಮ್ಮ ವರ್ಚಸ್ಸಿನ ಮೂಲಕ ಈ ಸಮುದಾಯದ ವಿಶ್ವಾಸಗಳಿಸಿದ್ದರು. ಮತ್ತೊಂದು ಕಡೆ ಹೆಚ್.ಡಿ.ದೇವೇಗೌಡರಿದ್ದರು ಹಾಗಾಗಿ ಜಾತಿ ಸಮೀಕರಣದ ತಳಹದಿಯಿಂದಲೇ ಜನತಾ ಪರಿವಾರ ಆವತ್ತು ಯಶಸ್ಸು ಕಂಡಿತ್ತು.

ಸಂವಿಧಾನ ನೀಡುವ ಅವಕಾಶ: 1989ರಲ್ಲಿ ವೀರೇಂದ್ರ ಪಾಟೀಲರು ಎರಡನೇ ಬಾರಿಗೆ ಮುಖ್ಯಮಂತ್ರಿಯಾದಾಗ ಅವರನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ದಯವಾಗಿ ನಡೆಸಿಕೊಂಡಿತಲ್ಲ. ಅಲ್ಲಿಂದ ರಾಜ್ಯದ ಜಾತಿ ರಾಜಕಾರಣ ಮತ್ತೊಂದು ಮಜಲಿಗೆ ತಿರುಗಿತು. ಇದಲ್ಲದೆ ಜನತಾ ಪರಿವಾರ ಇಬ್ಭಾಗವಾದದ್ದು ಕೂಡ ಜಾತಿ ರಾಜಕಾರಣದ ಬೇರು ಆಳಕ್ಕಿಳಿಯುವಂತೆ ಮಾಡಿದೆ. ಇದರ ನಡುವೆ ಹಿಂದುಳಿದ ವರ್ಗದ ಅತಿ ಸಣ್ಣ ಸಮುದಾಯದಿಂದ ಬಂದ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದು ನಮ್ಮ ಪ್ರಜಾಪ್ರಭುತ್ವದ ಸೊಬಗು. ಮೂಲತಃ ಕನ್ನಡಿಗರೇ ಅಲ್ಲದ ಧರ್ಮಸಿಂಗ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿದದ್ದು ಕೂಡ ನಮ್ಮ ಸಂವಿಧಾನ ಕಲ್ಪಿಸಿದ ಅವಕಾಶದಿಂದ. ಜೀವನವಿಡೀ ಹೋರಾಟ. ಸಂಘರ್ಷದ ಹಾದಿಯನ್ನೇ ಸವೆಸಿದ ಎಸ್.ಬಂಗಾರಪ್ಪನವರಿಗೆ ಹೆಚ್ಚುದಿನ ರಾಜ್ಯವಾಳುವ ಅದೃಷ್ಟವಿರಲಿಲ್ಲ. ದೇವೇಗೌಡರು ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿದ್ದರೆ ಪ್ರಾಯಶಃ ಜನತಾ ಪರಿವಾರ ಸುವರ್ಣಯುಗ ಕಾಣುತ್ತಿತ್ತು. ಬಿ.ಎಸ್.ಯಡಿಯೂರಪ್ಪನವರು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ರೂ ನೆಮ್ಮದಿಯಿರಲಿಲ್ಲ. ಸ್ವಪಕ್ಷೀಯರೇ ಅವರ ನಿದ್ದೆಯನ್ನು ಕಸಿದುಕೊಂಡಿದ್ದರು. ಜೆಡಿಎಸ್‌ನಲ್ಲಿ ಉನ್ನತ ಸ್ಥಾನಕ್ಕೆ ಹಂಬಲಿಸಿ ನಿರಾಶರಾದ ಸಿದ್ದರಾಮಯ್ಯ ಅವರು ಕಾಂಗ್ರೆಸ್‌ನಲ್ಲಿ ಸಿಎಂ ಆದದ್ದಲ್ಲದೆ ಪೂರ್ಣಾವಧಿ ಆಡಳಿತ ನೀಡಿದರು. ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದ ಬಹುತೇಕರು ಅರ್ಹತೆ, ಸಾಮರ್ಥ್ಯದ ಆಧಾರದಲ್ಲಿ ಈ ಹುದ್ದೆಗೇರಿದ್ದಾರೆ. ಮುಂದೆಯೂ ಅಂಥವರು ಬಂದರೆ ಜನಕಲ್ಯಾಣ ಸಾಕಾರದ ಭರವಸೆ ತಾಳಬಹುದು. ಅದನ್ನು ಬಿಟ್ಟು ಚುನಾವಣೆ ಸಮೀಪಿಸಿದೆಯೆಂದು ಜಾತಿ, ಬಣ್ಣ ಪ್ರಾದೇಶಿಕ ಹಿನ್ನೆಲೆಯ ಬಗ್ಗೆ ಎಳೆದಾಡುತ್ತ ಕಿಡಿ ಹೊತ್ತಿಸುವುದರಲ್ಲಿ ಯಾವ ಪುರುಷಾರ್ಥವಿದೆ? ಜಾತಿ ಸಮೀಕರಣದ ಸೂತ್ರ ಇಂದಿನ ರಾಜಕಾರಣದ ಅನಿವಾರ್ಯತೆ. ಆದರೆ, ಜಾತಿ ಜಾತಿಗಳ ನಡುವೆ ಅಪನಂಬಿಕೆ ಹುಟ್ಟಿಸುವ ಮತ್ತು ಸಮುದಾಯಗಳ ಭಾವನೆಗೆ ನೋವುಂಟು ಮಾಡುವ ಪ್ರವೃತ್ತಿಯಿಂದ ಸಮಾಜದ ಸ್ವಾಸ್ಥ್ಯಕ್ಕೆ ದೊಡ್ಡ ಅಪಾಯ.

ಲೇಖಕರು:– ಶಶಿಧರ ಹೆಗಡೆ,

ಆಧಾರ: ವಿಜಯಕರ್ನಾಟಕ, ದಿನಾಂಕ:12.02.2023

10. ಅವಳ, ನನ್ನ ಕತೆ, ಲಿಂಗ ಸಮಾನತೆಯ ದಿಕ್ಕು–ದೆಸೆ

ಕಳೆದ ವರ್ಷ ಸಂವಿಧಾನ ದಿನದಂದು, ಸುಪ್ರೀಂ ಕೋರ್ಟ್ ಅಯೋಜಿಸಿದ್ದ, ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡುತ್ತಿದ್ದೆ, ನ್ಯಾಯದ ಬಗ್ಗೆ ಮಾತನಾಡುವಾಗ, ವಿಚಾರಣಾಧೀನ ಕೈದಿಗಳ ಬಗ್ಗೆ ಯೋಚಿಸಿದೆ ಮತ್ತು ನಂತರ ಅವರ ದುಃಸ್ಥಿತಿಯ ಬಗ್ಗೆ ವಿಸ್ತೃತವಾಗಿ ಮಾತನಾಡುವುದನ್ನು ತಡೆದುಕೊಳ್ಳಲು ಆಗಲಿಲ್ಲ. ನಾನು ಹೃದಯದಿಂದ ಮಾತನಾಡಿದೆ. ಅದು ಪರಿಣಾಮ ಬೀರಿತು. ಇಂದು ಅಂತರರಾಷ್ಟ್ರೀಯ ಮಹಿಳಾ ದಿನ. ನಾನು ನಿಮ್ಮೊಂದಿಗೆ ಅದೇ ಉತ್ಸಾಹದಿಂದ ಕೆಲವು ಆಲೋಚನೆಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ. ಇದು ಕೂಡ ಹೃದಯವಾಣಿ.

ಬಾಲ್ಯದ ದಿನಗಳಿಂದಲೂ ನಾನು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ಗೊಂದಲಕ್ಕೊಳಗಾಗಿದ್ದೇನೆ. ಒಂದೆಡೆ, ಹೆಣ್ಣು ಮಗು ಎಲ್ಲರಿಂದಲೂ ತುಂಬಾ ಪ್ರೀತಿ ಪಡೆಯುತ್ತದೆ ಮತ್ತು ಶುಭ ದಿನಗಳಲ್ಲಿ ಪೂಜಿಸಲ್ಪಡುತ್ತಾಳೆ. ಮತ್ತೊಂದೆಡೆ, ಜೀವನದಲ್ಲಿ ತನ್ನ ಮುಂದೆ ತೆರೆದಿರುವ ಸಾಧ್ಯತೆಗಳು, ತನ್ನ ವಯಸ್ಸಿನ ಹುಡುಗರಿಗೆ ಲಭ್ಯವಿರುವ ಸಾಧ್ಯತೆಗಳಿಗಿಂತ ಕಡಿಮೆ ಎಂದು ಅವಳು ಶೀಘ್ರದಲ್ಲೇ ಗ್ರಹಿಸುತ್ತಾಳೆ. ಒಂದೆಡೆ, ಮಹಿಳೆಯನ್ನು ಅವರ ಸಹಜ ಬುದ್ಧಿವಂತಿಕೆಗಾಗಿ ಗೌರವಿಸಲಾಗುತ್ತದೆ. ಎಲ್ಲರನ್ನೂ ನೋಡಿಕೊಳ್ಳುವ ಕುಟುಂಬದ ಕೇಂದ್ರ ಎಂದು ಪ್ರಶಂಶಿಸಲಾಗುತ್ತದೆ. ಮತ್ತೊಂದೆಡೆ, ಕುಟುಂಬದ ಬಗ್ಗೆ ಅಥವಾ ತನ್ನ ಬಗ್ಗೆ ಬಹುತೇಕ ಎಲ್ಲಾ ಮಹತ್ವದ ನಿರ್ಧಾರಗಳಲ್ಲಿ ಅವಳ ಪಾತ್ರ ತುಂಬಾ ಸೀಮಿತ.

ಅರಿವಿನಿ ನನ್ನ ಹಾದಿ: ವಿದ್ಯಾರ್ಥಿಯಾಗಿ, ನಂತರ ಶಿಕ್ಷಕಿಯಾಗಿ ಮತ್ತು ಆ ನಂತರ ಸಮಾಜ ಸೇವೆಯಲ್ಲಿ ಮನೆಯಿಂದ ಹೊರಬಂದಾಗ, ಅಂಥ ವಿರೋಧಾಭಾಸ ವರ್ತನೆ ಬಗ್ಗೆ ನನಗೆ ಅಚ್ಚರಿಪಡದೇ ಇರಲು ಸಾಧ್ಯವಾಗಲಿಲ್ಲ. ಕೆಲವೊಮ್ಮೆ ನಮ್ಮಲ್ಲಿ ಹೆಚ್ಚಿನವರು ಪುರುಷರು ಮತ್ತು ಮಹಿಳೆಯರನ್ನು ಸಮಾನವಾಗಿ ಗುರುತಿಸುತ್ತಾರೆ ಎಂದು ನಾನು ಭಾವಿಸಿದೆ. ಆದಾಗ್ಯೂ, ಸಾಮೂಹಿಕ ಮಟ್ಟದಲ್ಲಿ, ಅದೇ ಜನರು ನಮ್ಮಲ್ಲಿ ಅರ್ಧದಷ್ಟು ಮಹಿಳೆಯರ ಮೇಲೆ ಮಿತಿಗಳನ್ನು ವಿಧಿಸುತ್ತಾರೆ. ನನ್ನ ಜೀವಿತಾವಧಿಯಲ್ಲಿಯೇ, ಹೆಚ್ಚಿನ ವ್ಯಕ್ತಿಗಳು ಸಮಾನತೆಯ ಕಲ್ಪನೆಯತ್ತ ಮುನ್ನಡೆಯುತ್ತಿರುವುದನ್ನು ನಾನು ನೋಡಿದ್ದೇನೆ. ಆದಾಗ್ಯೂ, ಸಾಮಾಜಿಕ ಮಟ್ಟದಲ್ಲಿ, ಹಳೆಯ ಪದ್ಧತಿಗಳು ಮತ್ತು ಸಂಪ್ರದಾಯಗಳು ಯಥಾಸ್ಥಿತಿಯಲ್ಲಿ ಉಳಿದುಕೊಂಡಿವೆ.

ಎಲ್ಲವೂ ಮುಂದೆ, ನಾರಿಯರು ಮಾತ್ರ ಹಿಂದೆ: ಇದು ಪ್ರಪಂಚಾದಾದ್ಯಂತದ ಎಲ್ಲಾ ಮಹಿಳೆಯರ ಕಥೆ. ಭೂಮಿಯ ಮೇಲಿನ ಪ್ರತಿ ಮನುಷ್ಯನೂ ಒಂದು ರೀತಿಯ ಅಡೆತಡೆಯೊಂದಿಗೆ ಜೀವನ ಪ್ರಾರಂಭಿಸುತ್ತಾನೆ. 21ನೇ ಶತಮಾನದಲ್ಲಿ ನಾವು ಊಹಿಸಲಾಗದ ಸರ್ವತೋಮುಖ ಪ್ರಗತಿ ಸಾಧಿಸಿದ್ದೇವೆ. ಆದರೆ ಅನೇಕ ರಾಷ್ಟ್ರಗಳು ಇನ್ನೂ ಮಹಿಳೆಯನ್ನು ಆಡಳಿತ ಮುಖ್ಯಸ್ಥೆಯನ್ನಾಗಿದಿಕೊಂಡಿಲ್ಲ. ಇಂದಿಗೂ ಮಹಿಳೆಯರನ್ನು ಅಲ್ಪ ಮಾನವ ಜೀವಿಗಳು ಎಂದು ಪರಿಗಣಿಸುವ ಸ್ಥಳಗಳಿವೆ. ಅಲ್ಲಿ ಶಾಲೆಗೆ ಹೋಗುವುದು ಕೂಡ ಹುಡುಗಿಯರಿಗೆ ಸಾವು ಬದುಕಿನ ಪ್ರಶ್ನೆಯಾಗಿರಬಹುದು.

ಮುಂದೆ ಇದ್ದೇವೆ, ತಿಳಿಯಿರಿ: ಯಾವಾಗಲೂ ಇಂಥದ್ದೇ ಸನ್ನಿವೇಶನವೂ ಇರಲಿಲ್ಲ. ಭಾರತದಲ್ಲಿ, ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಕಾಲವಿತ್ತು. ನಮ್ಮ ಧರ್ಮ ಗ್ರಂಥಗಳು ಮತ್ತು ಇತಿಹಾಸವು ಮಹಿಳೆಯರ ಶೌರ್ಯ, ಪಾಂಡಿತ್ಯ ಅಥವಾ ಆಡಳಿತಾತ್ಮಕ ಕೌಶಲ್ಯಗಳನ್ನು ಬಣ್ಣಿಸಿದೆ. ಇಂದು ಮತ್ತೆ, ಅಸಂಖ್ಯಾತ ಮಹಿಳೆಯರು ತಾವು ಆಯ್ಕೆ ಮಾಡಿದ ಕ್ಷೇತ್ರಗಳಲ್ಲಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುತ್ತಿದ್ದಾರೆ. ಅವರು ಕಾರ್ಪೊರೇಟ್ ಸಂಸ್ಥೆಗಳ ಮುಖ್ಯಸ್ಥರಾಗಿದ್ದಾರೆ ಮತ್ತು ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಒಂದೇ ವ್ಯತ್ಯಾಸವೆಂದರೆ, ಅವರು ತಮ್ಮ ಮೌಲ್ಯವನ್ನು ಎರಡೂ ಕ್ಷೇತ್ರಗಳಲ್ಲಿ ಸಾಬೀತುಪಡಿಸಬೇಕು– ವೃತ್ತಿಜೀವನದಲ್ಲಿ ಮತ್ತು ಮನೆಗಳಲ್ಲಿ ನಿರ್ಣಾಯಕ ಪಾತ್ರವನ್ನೇ ನಿರ್ವಹಿಸಬೇಕಿದೆ.

ಶಿಕ್ಷಣವೊಂದೇ ಎಲ್ಲವೂ ಅಲ್ಲ: ತಳಮಟ್ಟದಲ್ಲಿ ಮಹಿಳೆಯರ ಆರೋಗ್ಯಕರ ಪ್ರಾತಿನಿಧ್ಯವನ್ನು ನಾವು ಹೊಂದಿದ್ದೇವೆ. ಆದರೆ ಶ್ರೇಣೀಕರಣದಲ್ಲಿ ಮೇಲಕ್ಕೇರುತ್ತಿದ್ದಂತೆ, ಕಡಿಮೆ ಮಹಿಳೆಯರನ್ನು ನೋಡುತ್ತೇವೆ. ಇದು ಅಧಿಕಾರಶಾಹಿ, ನ್ಯಾಯಾಂಗ ಮತ್ತು ಕಾರ್ಪೊರೇಟ್ ಪ್ರಪಂಚದಂತೆಯೇ ರಾಜಕೀಯ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಗಮನಾರ್ಹ ಸಂಗತಿಯೆಂದರೆ ಹೆಚ್ಚಿನ ಸಾಕ್ಷರತಾ ಪ್ರಮಾಣವನ್ನು ಹೊಂದಿರುವ ರಾಜ್ಯಗಳೂ ಇದೇ ಪ್ರವೃತ್ತಿ ಇದೆ. ಶಿಕ್ಷಣವೊಂದೇ ಮಹಿಳೆಯರಿಗೆ ಆರ್ಥಿಕ ಮತ್ತು ರಾಜಕೀಯ ಸ್ವಾಯತ್ತತೆ ಖಾತರಿಪಡಿಸುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಈ ಕಾರಣದಿಂದ ಸಾಮಾಜಿಕ ಮನಃಸ್ಥಿತಿಯನ್ನು ಬದಲಾಯಿಸುವ ಅಗತ್ಯವಿದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಶಾಂತಿಯುತ ಮತ್ತು ಸಮೃದ್ಧ ಸಮಾಜವನ್ನು ನಿರ್ಮಿಸಲು ಆಳವಾಗಿ ಬೇರೂರಿರುವ ಲಿಂಗ ಪೂರ್ವಗ್ರಹಗಳನ್ನು ಗುರುತಿಸಬೇಕು ಮತ್ತು ಶುದ್ಧೀಕರಿಸಬೇಕು. ಸಾಮಾಜಿಕ ನ್ಯಾಯ ಮತ್ತು ಸಮಾನತೆ

ಉತ್ತೇಜಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಲಾಗಿದೆ. ಆದರೆ, ಲಿಂಗ ಪ್ರಾತಿನಿಧ್ಯ ಖಚಿತಪಡಿಸಿಕೊಳ್ಳಲು ಈ ಕ್ರಮಗಳು ಸಾಕಾಗುವುದಿಲ್ಲ.

ಲಿಂಗ ಸಮಾನತೆ ಬೆಳಗು: ಮನಕುಲದ ಅರ್ಧದಷ್ಟು ಜನರು ಉಳಿದ ಅರ್ಧವನ್ನು ಹಿಮ್ಮುಖಗೊಳಿಸಿದ್ದಾರೆ. ಈ ಅನಸಮತೋಲನವು ಇಡೀ ಮಾನವಕುಲವನ್ನು ನೋಯಿಸುತ್ತಿದೆ. ಏಕೆಂದರೆ ಗಾಡಿಯ ಎರಡು ಚಕ್ರಗಳು ಸಮಾನವಾಗಿವೆ. ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಸ್ಥಾನದಲ್ಲಿದ್ದರೆ ಆರ್ಥಿಕ ಪ್ರಗತಿಯಾಗುತ್ತದೆ ಎಂಬುದು ನನಗೆ ಖಾತ್ರಿ ಇದೆ.

ಭವಿಷ್ಯವು ಉಜ್ವಲವಾಗಿದೆ ಎಂದು ನಾನು ನಿಜವಾಗಿಯೂ ಆಶಿಸುತ್ತೇನೆ. ಜನರು ಬದಲಾಗುತ್ತಾರೆ. ವರ್ತನೆಗಳು ಬದಲಾಗುತ್ತವೆ ಎಂದು ನಾನು ನನ್ನ ಜೀವನದಲ್ಲಿ ನೋಡಿದ್ದೇನೆ. ಇದು ನಿಜವಾಗಿಯೂ ನಮ್ಮ ಜನಾಂಗದ ಕಥೆ: ಇಲ್ಲದಿದ್ದರೆ ನಾವು ಇನ್ನೂ ಗುಹೆಗಳಲ್ಲಿ ವಾಸಿಸುತ್ತಿದ್ದೆವು.

ಬೇಟಿ ಬಜಾವೊ ಬೇಟಿ ಪಡಾವೊ: ಒಂದು ರಾಷ್ಟ್ರವಾಗಿ ನಾವು ಲಿಂಗ ನ್ಯಾಯದ ಬಲವಾದ ಅಡಿಪಾಯದೊಂದಿಗೆ ಪ್ರಾರಂಭಿಸಿದ್ದೇವೆ ಎಂಬ ಅಂಶವು ನನಗೆ ಭರವಸೆಯನ್ನು ನೀಡುತ್ತದೆ. ಒಂದು ಶತಮಾನದ ಹಿಂದೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮಹಾತ್ಮ ಗಾಂಧಿಯವರ ಅಭಿಯಾನಗಳು ಮಹಿಳೆಯರನ್ನು ಹೊಸ್ತಿಲು ದಾಟಲು ಮತ್ತು ಜಗತ್ತಿಗೆ ಕಾಲಿಡಲು ಪ್ರೋತ್ಸಾಹಿಸಿದವು. ಅಂದಿನಿಂದ, ನಮ್ಮ ಇಡೀ ಸಮಾಜ ಮತ್ತು ವಿಶೇಷವಾಗಿ ಮಹಿಳೆಯರು ಉತ್ತಮ ಭವಿಷ್ಯವನ್ನು ನಿರ್ಮಿಸಲು ಆಶಿಸಿದ್ದಾರೆ. ಇಂದು ಸಂಸತ್ತು ಹೆಚ್ಚಿನ ಸಂಖ್ಯೆಯ ಮಹಿಳಾ ಪ್ರಾತಿನಿಧ್ಯ ಹೊಂದಿರುವುದರಿಂದ ಇದು ಸಕಾರಾತ್ಮಕ ಪರಿಣಾಮ ಬೀರಿದೆ ಎಂದು ತೋರುತ್ತದೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ನನ್ನನ್ನು ರಾಷ್ಟ್ರಪತಿಯಾಗಿ ಆಯ್ಕೆ ಮಾಡಿರುವುದು ಮಹಿಳಾ ಸಬಲೀಕರಣದ ಕಥೆಯ ಒಂದು ಭಾಗವಾಗಿದೆ ಎಂದು ಹೇಳಬೇಕಾಗಿಲ್ಲ. ಮಹಿಳೆಯರನ್ನು ನೇರವಾಗಿ ಸಬಲೀಕರಣಗೊಳಿಸುವ 'ಬೇಟಿ ಬಚಾವೊ ಬೇಟಿ ಪಡಾವೊ' ದಂಥ ಸರ್ಕಾರದ ಕಾರ್ಯಕ್ರಮಗಳು ಸರಿಯಾದ ದಿಕ್ಕಿನಲ್ಲಿ ಹೆಜ್ಜೆಗಳಾಗಿವೆ.

ನಾನು ನಿಮ್ಮಲ್ಲಿ ವಿನಂತಿಸುವುದೇನೆಂದರೆ, ಹುಡುಗಿಯ ಮುಖದಲ್ಲಿ ನಗು ತರುವ ಹಾಗೂ ಜೀವನದ ಸುಧಾರಣೆಗೆ ಕಾರಣವಾಗುವ ಯಾವುದೇ ಬದಲಾವಣೆಗಳು ಮೊದಲು ಹೃದಯಯಿಂದಲೇ ಬರಲಿ.

ಲೇಖಕರು:– ದ್ರೌಪದಿ ಮುರ್ಮು,
ಸನ್ಮಾನ್ಯ ರಾಷ್ಟ್ರಪತಿ
ಆಧಾರ: ವಿಜಯ ಕರ್ನಾಟಕ, ದಿನಾಂಕ:08.03.2023

* * * * *